ಬಿ.ಟಿ.ಜಾಹ್ನವಿ

ಸಪ್ಪುಬೆಳ್ಳಿ

ಕಥಾಸಂಕಲನ



ಬಿ.ಟಿ.ಜಾಹ್ನವಿ

ದಾವಣಗೆರೆಯ ಖ್ಯಾತ ಕಣ್ಣಿನ ತಜ್ಞರು,
ಚಿತ್ರದುರ್ಗ ಜಿಲ್ಲೆಯ ಭರಮಸಾಗರ ಕ್ಷೇತ್ರದ
ಮಾಜಿ ಶಾಸಕರು, ಕರ್ನಾಟಕ ಲೋಕಸೇವಾ
ಆಯೋಗದ ಸದಸ್ಯರೂ ಆಗಿದ್ದಂತ
ಡಾ. ಬಿ.ಎಂ. ತಿಪ್ಪೇಸ್ವಾಮಿ ಹಾಗೂ ಯಲ್ಲಮ್ಮ
ಇವರ ಹಿರಿಮಗಳು.
ಬೆಂಗಳೂರಿನಲ್ಲಿ ಜನನ 1963ರಲ್ಲಿ.
ವಿದ್ಯಾಭ್ಯಾಸ ದಾವಣಗೆರೆಯ ಸೇಂಟ್ ಪಾಲ್ಸ್
ಶಾಲೆಯಲ್ಲಿ ಹಾಗೂ ಎ.ವಿ.ಕಮಲಮ್ಮ
ಕಾಲೇಜಿನಲ್ಲಿ. ಸ್ನಾತಕೋತ್ತರ ಪದವಿ ಪಡೆದು
ಬರವಣಿಗೆಯಲ್ಲಿ ತೊಡಗಿಸಿಕೊಂಡದ್ದು
1987ರಲ್ಲಿ. ಸುದ್ದಿ ಸಂಗಾತಿ ವಾರಪತ್ರಿಕೆಯಲ್ಲಿ
ಮೊದಲ ಕಥೆ ಪ್ರಕಟಣೆ. ಆದರೆ
ಲಂಕೇಶ್ ಪತ್ರಿಕೆ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ
ಪರಿಚಿತಗೊಂಡದ್ದು. ಇದುವರೆಗೂ
ಪ್ರಕಟಗೊಡಿರುವ ಎರಡು ಕಥಾಸಂಕಲನಗಳು
‘ಕಳೆದುಕೊಂಡವಳು ಹಾಗೂ ಇತರ
ಕಥೆಗಳು’ ಮತ್ತು ‘ಹುಡುಕಾಟ.’
ಅಪ್ಪಾಜಿ ಕುರಿತ ಸಂಪಾದಿತ ಕೃತಿ
‘ಮುಟ್ಟಿಸಿಕೊಂಡವರು’ ಇದಲ್ಲದೆ ಕೆಲವು
ಮಾಂಟೋ ಕಥೆಗಳ ಅನುವಾದ,
ವಾರ್ತಾಭಾರತಿ ಹಾಗೂ ಜನತಾವಾಣಿ
ದಿನಪತ್ರಿಕೆಯಲ್ಲಿ ಅಂಕಣ ಬರಹ
ಮಾಡಿದ್ದಾರೆ. ಮೊದಲ ಕಥಾಸಂಕಲನಕ್ಕೆ
ಸರ್.ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ ಹಾಗೂ
ಎರಡನೆಯ ಕಥಾಸಂಕಲನ ಹುಡುಕಾಟಕ್ಕೆ
ಸಾವಿತ್ರಮ್ಮ ದತ್ತಿ ಪ್ರಶಸ್ತಿ ಲಭಿಸಿದೆ.
ಬರವಣಿಗೆ ಹೊರತುಪಡಿಸಿ ಇವರ
ಇತರ ಆಸಕ್ತ ಕ್ಷೇತ್ರಗಳು ನಾಟಕ ಮತ್ತು
ಸಂಗೀತ. ಮಗ ಮತ್ತು ಗಂಡನೊಟ್ಟಿಗೆ
ದಾವಣಗೆರೆಯಲ್ಲಿ ವಾಸವಾಗಿರುವ
ಇವರು ಸದ್ಯ ಕರ್ನಾಟಕ ಸಾಹಿತ್ಯ
ಅಕಾಡೆಮಿ ಸದಸ್ಯರು.

ಕಳ್ಳುಬಳ್ಳಿ

ಕಥಾಸಂಕಲನ

ಬಿ.ಟಿ. ಜಾಹ್ನವಿ

ಸುಯೋಧನ ಪ್ರಕಾಶನ
ಹಗರಿಬೊಮ್ಮನಹಳ್ಳಿ-೫೮೩ ೨೧೨
ಬಳ್ಳಾರಿ (ಜಿಲ್ಲೆ)

KALLUBALLI

collection of 25 short stories

by

B.T.Jahnavi

#3895/8 , Ramakrishna Nilaya

1st flore, 13th cross, Opposite Anjaneya temple

(Taralabalu Badavane)

Vidyanagar, Davanagere 577005

btjahnavi@gmail.com

Published by

Suyodhana Prakashana

Hagaribommanahalli-583212

Bellary (dist), Phone: 08397-238628, 9480510512

suyodhana@gmail.com

ಕಲ್ಲುಬಳ್ಳಿ

ಇಪ್ಪತ್ತೈದು ಕಥೆಗಳು

ಬಿ.ಟಿ ಜಾಹ್ನವಿ

ಸುಯೋಧನ ಪ್ರಕಾಶನ

ಹಗರಿಬೊಮ್ಮನಹಳ್ಳಿ–583212. ಬಳ್ಳಾರಿ ಜಿಲ್ಲೆ

9480510512

First Impression : 2014

Pages : xviii + 218 = 236

Price : ₹ 275/-

Paper used : 70 gsm book printing

Cover page : G. Arunkumar

Inner Photographs : Shivashankar Banagar

ಪುಟಗಳು : xviii + 218 = 236

ಮೊದಲ ಮುದ್ರಣ : 2014

ಬಳಸಿದ ಕಾಗದ : 70 ಜಿಎಸ್‌ಎಂ ಬುಕ್‌ಪ್ರಿಂಟಿಂಗ್

ಬೆಲೆ : ₹ 275/–

ಮುಖಪುಟ : ಜಿ. ಅರುಣ್‌ಕುಮಾರ್

ಒಳಪುಟ ಛಾಯಾಚಿತ್ರಗಳು : ಶಿವಶಂಕರ ಬಣಗಾರ್

ಮುದ್ರಣ


ಇಳಾ ಮುದ್ರಣ

ಬೆಂಗಳೂರು–560 026

ದೂರವಾಣಿ : 26757159

ಅರ್ಪಣೆ

ನನ್ನೆಲ್ಲ ನೆನಪು, ಅನುಭವಗಳಿಗೆ
ಅವಮಾನ, ಸನ್ಮಾನಗಳಿಗೆ
ತಿರಸ್ಕಾರ, ಪುರಸ್ಕಾರಗಳಿಗೆ
ಎಲ್ಲ ಸ್ನೇಹ, ಸಂಬಂಧಗಳಿಗೆ
ನನ್ನ ಕಳ್ಳುಬಳ್ಳಿಗೆ



ಮುನ್ನುಡಿ

'ಈ ಕತೆಗಳನ್ನು ಓದಿರಿ' ಎಂಬ ಅಹವಾಲು

ಲಂಕೇಶ್ ಪತ್ರಿಕೆಯಿಂದ ಸಾಹಿತ್ಯಾಸಕ್ತರಿಗೆ ಪರಿಚಿತರಾದ ಬಿ.ಟಿ. ಜಾಹ್ನವಿ ಮತ್ತು ರೇಖಾರಾಣಿ, ಇವರಿಬ್ಬರೂ ನನಗೆ ಬಹಳ ಇಷ್ಟವಾದ ಲೇಖಕರು, ನಾನು ಹೀಗೆಂದುಕೊಂಡು ಸುಮಾರು ಇಪ್ಪತ್ತು ವರ್ಷಗಳೇ ಕಳೆದಿವೆ. ಆದರೆ ಇವತ್ತು ಸಾಹಿತ್ಯಕವಾಗಿ ತಮ್ಮನ್ನು ಪ್ರೊಮೋಟ್ ಮಾಡಿಕೊಳ್ಳುವುದರಲ್ಲಿ ಎಷ್ಟೊಂದು ಅನಾಸಕ್ತರೆಂದರೆ ನಾನು ಮತ್ತು ನನ್ನಂತಹ ಹಲವರು ಇವರನ್ನು ನೋಡಿಯೂ ಇಲ್ಲ. ಆದರೆ, ಇವರ ಬರವಣಿಗೆಯನ್ನು ಹತ್ತಾರು ಜನರಿಗೆ ರೆಕಮೆಂಡ್ ಮಾಡಿದ್ದೇನೆ. 'ಓದಲೇ ಬೇಕಾದ ಬರಹಗಾರರು' ಎಂದು ಹೇಳಿದ್ದೇನೆ. ಹತ್ತು ವರ್ಷಗಳಷ್ಟು ಹಿಂದೆಯೇ ರೇಖಾರಾಣಿಯವರ ಕಥಾಸಂಕಲನದ ಬಗ್ಗೆ ಬರೆದಿದ್ದೆ. ಈಗ ಜಾಹ್ನವಿಯವರ ಒಟ್ಟು ಕಥೆಗಳ ಬಗ್ಗೆ ಬರೆಯುವ ಅವಕಾಶ ಸಿಕ್ಕಿದೆ. ಇದು ನನಗೆ ಹೆಮ್ಮೆಯ ಮತ್ತು ಸಂತೋಷದ ಸಂಗತಿ.

ಇವರಿಬ್ಬರೂ ಕೂಡ ನಿಜವಾದ, ಆ ಪದದ ಸರಿಯಾದ ಅರ್ಥದಲ್ಲಿ ಆಧುನಿಕರು. ಇಪ್ಪತ್ತೊಂದನೆಯ ಶತಮಾನದ ನಿಜವಾದ ತಲ್ಲಣಗಳನ್ನು ಅವು ಬರುವುದಕ್ಕಿಂತ ಮೊದಲೇ ಊಹಿಸುವುದು ಇವರಿಗೆ ಸಾಧ್ಯವಾಗಿತ್ತು. ಇವರು, ಇಂದು ನನಗೆ ಸಮಕಾಲೀನರೋ ಅಥವಾ ನನ್ನ ನಂತರದ ಪೀಳಿಗೆಯವರೋ ಆಗಿರುವ ಅರ್ಥದಲ್ಲಿ ಆಧುನಿಕರಲ್ಲ. ಅವರು–ನಾವು, ಬೇಡವೆಂದುಕೊಂಡರೂ ಗತಕಾಲದ, 'ಸೋ ಕಾಲ್ಡ್' ಸಂಸ್ಕೃತಿಯ ಹಿಡಿತದಲ್ಲಿ ಉಳಿಯುವವರು, ಅದಕ್ಕಾಗಿ ತಹತಹಿಸುವವರು. ಅದನ್ನು ದೇಶಿಯೆನ್ನಿ, ಗ್ರಾಮೀಣ ಮುಗ್ಧತೆಯೆನ್ನಿ, ಪರಂಪರೆಯ ಬಗೆಗಿನ ಪ್ರೀತಿಯೆನ್ನಿ ಪರಿಣಾಮ ಮಾತ್ರ ಒಂದೇ. ಇವರು ದಿನದಿನವೂ

ಬದಲಾಗುತ್ತಲೇ ಕಳೆದುಕೊಂಡ ಯಾವುದೋ 'ಮಾಧುರ್ಯ'ಕ್ಕಾಗಿ ಹಳಹಳಿಸುವವರು. ನಿಜವಾದ ಆಧುನಿಕತೆ ಇರುವುದು ಜೀವನಕ್ರಮದ ಪಲ್ಲಟದಲ್ಲಿ ಅಲ್ಲ, ಬದಲಾಗಿ ಜೀವನಮೌಲ್ಯಗಳ ಪಲ್ಲಟದಲ್ಲಿ. ಇಂತಹ ಪಲ್ಲಟ ನಡೆಯದಿದ್ದರೆ, ಹೊಸ ಉಡುಪುಗಳ ಪಂಜರದಲ್ಲಿರುವ ಹಳೆಯ ಹುಡುಗ ಹುಡುಗಿಯರೇ ಸಿಗುತ್ತಾರೆ. ಇಂಥ ನಿಜವಾದ ಪಲ್ಲಟವು ಏನನ್ನೂ ಕಳೆದುಕೊಳ್ಳುವ ಅಗತ್ಯವಿಲ್ಲದಿದ್ದ ಹೆಣ್ಣುಮಕ್ಕಳಲ್ಲಿ ಕಾಣಿಸಿಕೊಳ್ಳುವುದು ಕೇವಲ ಸಹಜ. ಅವರಿಗೆ ದೊರೆತ ಬಿಡುಗಡೆಯು, 'ಬಿಡುಗಡೆಯ ಬೇಡಿ' ಆಗುವುದು ಸಾಧ್ಯವಿರಲಿಲ್ಲ. ಇಲ್ಲಿ ನಾನು ಡಿಗ್ರಿ ಪಡೆದು, ಕೆಲಸ ಪಡೆದು, ಸಂಬಳವನ್ನು ಗಂಡನೊಂದಿಗೆ ಹಂಚಿಕೊಂಡು, ಮನೆ-ಕಾರುಗಳ ಕನಸು ಕಾಣುವ ಹೆಣ್ಣುಮಕ್ಕಳ ಬಗ್ಗೆ ಹೇಳುತ್ತಿಲ್ಲ. ಅವರು ವಿದ್ಯಾವಂತರೇ ಹೊರತು ಆಧುನಿಕರಲ್ಲ. ಅವರ ತಲ್ಲಣಗಳು ಸುಳ್ಳು ಎಂದಲ್ಲ, ಆದರೆ, ನಿಜವಾದ ಆಧುನಿಕತೆಯು ಸಂಬಂಧಗಳನ್ನು ಕಂಡುಕೊಳ್ಳುವ, ಕಟ್ಟಿಕೊಳ್ಳುವ, ಪ್ರಶ್ನಿಸುವ, ಹೊರೆಯೂ ಆಗದ ಸೆರೆಯೂ ಆಗದ ಬಾಳನ್ನು ಹುಡುಕುವುದರಲ್ಲಿದೆ. ಮಧ್ಯಮವರ್ಗದ ಲೇಖಕ-ಲೇಖಕಿಯರ ಮಹಾಪೂರದಲ್ಲಿ ಇಂತಹ ಆಧುನಿಕತೆಯು ಹಿನ್ನೆಲೆಗೆ ಸರಿಯುತ್ತದೆ. ಏಕೆಂದರೆ, ಅಂತಹ 'ಡೇರಿಂಗ್' ಮತ್ತು 'ರಿಸ್ಕ್ ಟೇಕಿಂಗ್' ಅಲ್ಲಿ ಸಾಧ್ಯವಾಗಿರುವುದಿಲ್ಲ. ಜಾಹ್ನವಿಯವರು ತಮ್ಮ ಕತೆಗಳಲ್ಲಿ ಒಂದರ ನಿರೂಪಕಿಯಿಂದ ಹೀಗೆ ಹೇಳಿಸುತ್ತಾರೆ: "ಹೆಣ್ಣು ಜನ್ಮ ತಾಳಿದ ಕ್ಷಣದಿಂದ ಅದಕ್ಕೇ ತಕ್ಕನಾದ ನಡೆನುಡಿ, ಓದುಬರೆಹ, ಸಂಸ್ಕಾರದಿಂದ ಆಕೆನ ಕಡೆದು ಕೆತ್ತುವ ಒಪ್ಪಿತ ರೂಢಿವ್ಯವಸ್ಥೆಗೆ ಎದುರಾಗಿ ನಿಂತಿದ್ದಳಾಕೆ" (ಪುಟ 176) ಇಲ್ಲಿ ಹೆಸರಿಸಿರುವ ಹುಡುಗಿ ಹದಿನೆಂಟರ ಅನಿತಾ. ಅವಳು ತನ್ನ ತಂದೆ-ತಾಯಿ, ತಂಗಿ-ತಮ್ಮಂದಿರನ್ನು ಸಾಕಲೆಂದು, ಕೀಳರಿಮೆ-ಅಪರಾಧೀ ಭಾವಗಳ ಲವಲೇಶವೂ ಇಲ್ಲದೆ ವಿವಾಹಪೂರ್ವದ ಲೈಂಗಿಕ ಸಂಬಂಧವನ್ನು ಇಟ್ಟುಕೊಂಡಿರುತ್ತಾಳೆ. ಅವಳ ಬಗ್ಗೆ ಮತ್ತೆ ಹೇಳುತ್ತೇನೆ. ಆದರೆ, ಆಧುನಿಕತೆ ಹುಟ್ಟುವುದು ಬದುಕಿನ ಅಗ್ನಿಕುಂಡದಲ್ಲಿಯೇ. ಗಂಡಸರಿಗಾದರೂ ಹಾಗೆಯೇ. ಬಹಳ ಪ್ರಸಿದ್ಧವಾದ ಆನಂದರ 'ನಾನು ಕೊಂದ ಹುಡುಗಿ' ಕತೆಯೊಂದಿಗೆ ಇದನ್ನು ಹೋಲಿಸಿದಾಗ, ನಮ್ಮ ಸಮಾಜ ಮತ್ತು ಕತೆಗಳು ಇಟ್ಟಿರುವ/ಇಡಬೇಕಾದ ಪಾಸಿಟಿವ್ ಹೆಜ್ಜೆಗಳು ಗೊತ್ತಾಗುತ್ತವೆ.

ಸಾಹಿತ್ಯದ ಆಕರವಾಗಿ ಜೀವನವನ್ನು ನೋಡಬಾರದು, ಬದಲಾಗಿ ಜೀವನವನ್ನು ಕಂಡುಕೊಳ್ಳುವ ಒಂದು ಬಗೆಯಾಗಿ ಸಾಹಿತ್ಯವನ್ನು ಕಾಣಬೇಕು ಎಂಬ ತಿಳುವಳಿಕೆ ಜಾಹ್ನವಿಯವರಿಗಿದೆ. ಆದ್ದರಿಂದಲೇ ಇವರು ಸಾಹಿತ್ಯೋಪಜೀವಿಗಳಲ್ಲ. ಹೀಗಿರುವುದು ಆರೋಗ್ಯದ ಕುರುಹು. ಈಕೆ ಕವಿತೆಯಂತಹ ಅಮೂರ್ತ ಐಂದ್ರಿಕತೆಯ ಮಾಧ್ಯಮವನ್ನು ಆರಿಸಿಕೊಳ್ಳದೆ ಅನುಭವಲೋಕದೊಂದಿಗೆ ನೇರವಾದ ಮುಖಾಮುಖಿಯನ್ನು ಬಯಸುವ ಕಥೆ-ಕಾದಂಬರಿಗಳನ್ನು ಆರಿಸಿಕೊಂಡಿದ್ದರಲ್ಲೂ ಈ ಬಗೆಯ ಧೈರ್ಯವಿದೆ. ಆದರೆ, ಇಂತಹ ಅನ್ಯ ಅಸಕ್ತಿಗಳು ಇವರ ಬರವಣಿಗೆಯ ಪ್ರಮಾಣವನ್ನು ಕಡಿಮೆ ಮಾಡಿದೆಯೆಂದು ಕಾಣುತ್ತದೆ. ಇದನ್ನು ನಾನು ಇವರ ಗೆಳತಿಯಾದ ದು. ಸರಸ್ವತಿ ಯವರೂ ಸೇರಿದಂತೆ ಹಲವರಲ್ಲಿ ಗಮನಿಸಿದ್ದೇನೆ. ಬರವಣಿಗೆಯ ಕಲೆಗಾರಿಕೆಯು ಬರೆಯುವುದರಿಂದಲೇ ಬರುತ್ತದೆ. ಇಂಗ್ಲಿಷ್ ಮಾತನ್ನು ಬಳಸುವುದಾದರೆ, "ಸಾಹಿತ್ಯವು

ಬಹಳ ಹೊಟ್ಟೆಕಿಚ್ಚಿನ ಹೆಂಡತಿ.” ಅದನ್ನು ಸತತವಾಗಿ ಓಲೈಸಬೇಕು. ತಮ್ಮ ಹತ್ತೆಂಟು ಹಳವಂಡಗಳ ನಡುವೆಯೂ ಬರವಣಿಗೆಯ ಖದರನ್ನು ಉಳಿಸಿಕೊಂಡ ಲಂಕೇಶ್ ಅವರನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

ಜಾಹ್ನವಿಯವರ ಕಥೆಗಳ ಬಗ್ಗೆ ಬರೆಯುವುದು, ನಮ್ಮ ಕಾಲದ ಸಾಹಿತ್ಯಕ ಸಂದರ್ಭದಲ್ಲಿ ಒಂದು ಬಗೆಯ ಬಿಡುಗಡೆಯ ಭಾವನೆಯನ್ನು ನೀಡುತ್ತದೆ. ಅವರದು ಯಾವುದೇ ಬಗೆಯ ರಿಯಾಯಿತಿಯನ್ನು ಬಯಸದ ದಿಟದ ಕಥೆಗಳು, ತಾಜಾ ಆದ ಕಲಾಕೃತಿಗಳು. ಮಹಿಳೆಯರು, ದಲಿತರು ಮುಂತಾದ ಮಾನದಂಡಗಳನ್ನು ಬಳಸಿ ಅವರ ಬಗ್ಗೆ ಬರೆಯಹೋದರೆ ಅವರೇ ಕೋಪದಿಂದ ಕಿಡಿಕಿಡಿಯಾದಾರು! ಕಲೆಯ ಸ್ವರೂಪವು ಬದಲಾಗುತ್ತದೆ ಎಂಬ ಸಂಗತಿಯನ್ನು ಒಪ್ಪಿಕೊಂಡೂ ಪ್ರತಿಭೆ ಹಾಗೂ ಕಸುಬುದಾರಿಕೆಯ ವಿಷಯದಲ್ಲಿ ಯಾವುದೇ ಸವಲತ್ತುಗಳನ್ನು ಕೊಡದ ಲಂಕೇಶ್ ವಿಶ್ವವಿದ್ಯಾಲಯವು ಇವರನ್ನು ಬೆಳೆಸಿದೆ. ಅದಕ್ಕಿಂತ ಮೊದಲು ಅವರ ತಂದೆಯವರಿಂದ ಕೊಡಲ್ಪಟ್ಟ ಮತ್ತು ಪರಿಸರಕ್ಕೆ ಆರೋಗ್ಯಕರವಾದ ಅರ್ಥ ನೀಡಿದ ಜೀವನ ಮೌಲ್ಯಗಳು ಇವರನ್ನು ರೂಪಿಸಿದ್ದವು. ಕೊನೆಗೂ ಕಥೆಯ ಹಂದರವನ್ನು ರೂಪಿಸುವ ಅನುಭವಲೋಕ ಎಲ್ಲಿಂದ ಬರುತ್ತದೆ ಎನ್ನುವುದು ಬಹಳ ಗೌಣ. ಮನಸ್ಸಿನಲ್ಲಿಯೇ ಕಲ್ಪಕತೆಯಿಂದಲೇ ಕಟ್ಟಿದ ಎಲ್ಲೂ ಇಲ್ಲದ ಲೋಕದಲ್ಲಿ, ತನ್ನ ಕಾಲ–ದೇಶ–ಸಂದರ್ಭಗಳ ಎಲ್ಲ ತಲ್ಲಣಗಳನ್ನೂ ಹಿಡಿದಿಟ್ಟ ಕಾಫ್ಕಾಗಿಂತ ಬೇರೆ ಉದಾಹರಣೆ ಬೇಡ. ಕೊನೆಗೂ ಸೃಜನಶೀಲ ಬರವಣಿಗೆಯ ಸೋಲು ಗೆಲುವುಗಳನ್ನು ತೀರ್ಮಾನಿಸುವುದು ಬರೆಯುವವರ ಕಲ್ಪಕತೆ ಮತ್ತು ಭಾಷಿಕ ತಿಳುವಳಿಕೆಗಳೇ. ಅಂತೆಯೇ ಜೀವನವನ್ನು ತೀವ್ರವಾಗಿ ಅನುಭವಿಸುವ ಮತ್ತು ಅಷ್ಟೇ ತೀವ್ರವಾಗಿ ಅದನ್ನು ಅರ್ಥಮಾಡಿಕೊಳ್ಳುವ ಶಕ್ತಿ ಇರಬೇಕು. ನಮ್ಮ ಕಣ್ಣುಗಳಿಗೆ ಕಾಣುವ, ಇಂದ್ರಿಯಗಳಿಗೆ ನಿಲುಕುವ ಲೋಕ ಕೂಡ ‘ಕಣ್ಕಟ್ಟು’ ಇರಬಹುದು ಎಂಬ ಅನುಮಾನವೇ ಕತೆಗಾರರನ್ನು ಕಾಪಾಡುತ್ತದೆ ಮತ್ತು ಬೆಳೆಸುತ್ತದೆ. ಅಂತಹ ಎಚ್ಚರ ಇದ್ದರೆ, ನರಸಿಂಹಸ್ವಾಮಿಯವರು ಹೇಳಿದ ಹಾಗೆ, “ಇಹದ ತಳಹದಿಯಿಂದ ದಿಟದ ದರ್ಶನ ಅರಳಿ ಹಂಬಲಿಸಿ ಹಾಡು” ಆಗುತ್ತದೆ. ಈ ಕತೆಗಳಲ್ಲಿ ಅಂತಹ ತಿಳುವಳಿಕೆಯು ಒಡಮೂಡಿದೆಯೆಂದು ನಾನು ತಿಳಿದಿದ್ದೇನೆ.

ಹಾಗೆಯೇ, ಸ್ವತಃ ನನ್ನದೇ ಬಾಲ್ಯದ ಪರಿಸರವೂ ಆಗಿರುವ, ಚಿತ್ರದುರ್ಗ–ದಾವಣಗೆರೆಗಳ ಆಸುಪಾಸಿನ ಹಳ್ಳಿ ಪಟ್ಟಣಗಳ ಬದುಕಿನ ಮೂಲಕ, ಎಲ್ಲ ಕಾಲದ ಮನುಷ್ಯರ ಸಮಸ್ಯೆಗಳನ್ನು ಕಾಣುವ ಪ್ರಯತ್ನವು ಈ ಕಥೆಗಳಲ್ಲಿದೆ. ಇವುಗಳ ಕೆಲವು ಲಕ್ಷಣಗಳು ಮತ್ತು ಗುಣಗಳನ್ನು ಇಲ್ಲಿ ಹೇಳಬೇಕು ಎಂಬ ಆಸೆ ನನಗೆ ಇದೆ. ಕೆಲವು ತಿಂಗಳ ಹಿಂದೆ ಮಿತ್ರರಾದ ಎನ್.ಎಸ್. ಶಂಕರ್ ಅವರ ಕಥೆಗಳಿಗೆ ಬರೆದ ಮುನ್ನುಡಿಯು ಕೆಲವು ವಿಷಯಗಳಲ್ಲಿ ಇದಕ್ಕೆ ಪೂರಕವಾಗಿದೆ.

ಮುಗ್ಧತೆಯ ನಾಶ ಮತ್ತು ಅರಿವಿನ ಸ್ಫೋಟಗಳನ್ನು, ಇಲ್ಲಿನ ಹಲವು ಕತೆಗಳಲ್ಲಿ ಗುರುತಿಸಬಹುದು. ಇಲ್ಲಿ ಮುಗ್ಧತೆ ಎಂದರೆ ಶಿಶುಸಹಜವಾದ ಇನ್ನೊಸೆನ್ಸ್ ಅಲ್ಲ. ಪರಂಪರೆಯಿಂದ ದತ್ತವಾದ ನಂಬಿಕೆಗಳನ್ನು ಅವು ಇರುವ ಹಾಗೆಯೇ ಒಪ್ಪಿಕೊಳ್ಳುವುದು

ಕೂಡ ಇಂಥ 'ಮುಗ್ಧತೆ'ಯ ಪರಿಣಾಮವೇ. ಅನೇಕ ಸಲ ಪ್ರೀತಿ ಅಥವಾ ಅದರ ಭ್ರಮೆಯೇ ಬಹುದೊಡ್ಡ ಕಣ್ಕಟ್ಟು ಆಗಿರುತ್ತದೆ, ಸಂಕಲೆ ಆಗಿರುತ್ತದೆ. ನಿಜವಾದ ಅರಿವು ವಿದ್ಯೆಯಿಂದ ಅಲ್ಲ, ವಿವೇಕದಿಂದ ಬರುತ್ತದೆ, ಮನುಷ್ಯತ್ವದಿಂದ ಬರುತ್ತದೆ. ಇಲ್ಲಿನ ಕತೆಗಳಲ್ಲಿ ಅಂತಹ ಅರಿವು ಮತ್ತು ಅದರ ಫಲವಾದ ಕ್ರಿಯೆಗಳು ಮನಾಮನಿಯಾಗಿ ಕಾಣಿಸಿಕೊಂಡಿವೆ. ಇಂತಹ ತಿಳುವಳಿಕೆಯು, 'ಮ್ಯಾನಿಪುಲೇಟೆಡ್' ಆಗಿ ಬದುಕುತ್ತಿರುವವರಿಗೆ, ಆ ಸೆರೆಮನೆಯಿಂದ ಹೊರಬರುವ ಕೆಚ್ಚನ್ನು ಕೊಡುತ್ತದೆ. ಜಾಹ್ನವಿಯವರ ಇಂತಹ ಕತೆಗಳ ಕೇಂದ್ರದಲ್ಲಿ ಹೆಣ್ಣು ಪಾತ್ರಗಳಿರುವುದು ಆಶ್ಚರ್ಯವೂ ಅಲ್ಲ, ಅಪರಾಧವೂ ಅಲ್ಲ. ಬದಲಾಗಿ ಅದು ಅನುಭವದ ಅಧಿಕೃತತೆಯ ಪ್ರಶ್ನೆ. ಈ ಕಥೆಗಳಿಂದ ಸ್ವತಃ ಪುರುಷ ಲೇಖಕರೂ ಕೆಲವು ಪಾಠಗಳನ್ನು ಕಲಿತುಕೊಂಡು ತಮ್ಮ ಅನುಭವಗಳನ್ನು ಶೋಧಿಸಬಹುದು. ಹಾಗೆ ನೋಡಿದರೆ, ಜಾಹ್ನವಿಯವರು ಲಂಕೇಶರ ಕತೆಗಳ ಕಟ್ಟುವಿಕೆ ಮತ್ತು ಹೇಳುವಿಕೆಗಳಿಂದ ಸಾಕಷ್ಟು ಕಲಿತರೂ ಅವರಿಗಿಂತ ಭಿನ್ನವಾದ ಅನನ್ಯವಾದ ಪಾತ್ರಗಳನ್ನು ಸನ್ನಿವೇಶಗಳನ್ನು ಒಡಮೂಡಿಸಿದ್ದಾರೆ. ಕನ್ನಡಕ್ಕೆ ಬಹಳ ವಿಶಿಷ್ಟವಾದ ಲಂಕೇಶರ ಸ್ತ್ರೀಪಾತ್ರಗಳು ಪ್ರತಿಭಾವಂತನೊಬ್ಬ ಕಟ್ಟಿಕೊಟ್ಟ 'ಪ್ರಾಕ್ಸಿ'ಗಳಾದರೆ, ಜಾಹ್ನವಿಯವರ ಸ್ತ್ರೀಪಾತ್ರಗಳು ಅವುಗಳಿಗಿಂತ ದಿಟಕ್ಕೆ ಹತ್ತಿರವಾದವು. 'ವ್ಯಭಿಚಾರ' ಎನ್ನುವ ಪದದ ಅರ್ಥವನ್ನೇ ಮರುಚಿಂತನೆಗೆ ಹಚ್ಚುವ ವ್ಯಭಿಚಾರ, ದಲಿತರೇ ದಲಿತರ ಶೋಷಣೆ ಮಾಡಬಹುದೆಂಬ ವಾಸ್ತವವನ್ನು ಸರಿಸುಮಾರು ಇಪ್ಪತ್ತು ವರ್ಷಗಳ ಹಿಂದೆಯೇ ಹೇಳಿದ 'ಕಳ್ಳುಬಳ್ಳಿ', ಹೆಣ್ಣುಗಂಡಿನ ಸಂಬಂಧದ ಹಲವು ನೆಲೆಗಳ ಆತ್ಯಂತಿಕ ಸೂಕ್ಷ್ಮಗಳನ್ನು ಪ್ರಾಯಶಃ ಕನ್ನಡದಲ್ಲಿ ಮೊದಲಬಾರಿಗೆ ಅನಾವರಣ ಮಾಡಿರುವ ಇನ್ನೆಷ್ಟೋ ಕತೆಗಳು. ಜೀವನದ ಪರಿಚಿತ ಚಹರೆಗಳನ್ನು, ಒತ್ತಾಯಗಳನ್ನು ಮೀರುವ, ಹೊಸದಕ್ಕೆ ಕೊಟ್ಟುಕೊಳ್ಳುವ ಪ್ರಯತ್ನದಲ್ಲಿ ಬಹಳ 'ರಿಸ್ಕು'ಗಳಿವೆ. ಕೊನೆಗೂ ಕತೆಗಾರ್ತಿಯು ಕೇವಲ ಇಂದಿನ ವಾಸ್ತವಗಳನ್ನು ಮಾತ್ರ ಹೇಳುವುದಿಲ್ಲ. ನಾಳಿನ ಸಾಧ್ಯತೆಗಳನ್ನು ಗ್ರಹಿಸಿ, ಸೃಷ್ಟಿಸಿ ಕೊಡುತ್ತಾಳೆ. ಆ ಅರ್ಥದಲ್ಲಿ ಬರವಣಿಗೆಯು ಜೀವಂತಿಕೆಯ ಫಲವಾದ ಆಶಾಚಿಂತನೆಯೂ ಹೌದು. ಇಲ್ಲಿ ಇನ್ನೂ ಒಂದು ಗುಟ್ಟಿದೆ, ಜೀವನದ ಸುಳಿಗಳಲ್ಲಿ ದಿಟ್ಟವಾದ ನಿರ್ಧಾರ ತೆಗೆದುಕೊಂಡು ಅದಕ್ಕೆ ಅನುಗುಣವಾದ ಶಿಲುಬೆಗಳನ್ನು ಹೊರುತ್ತಿರುವವರು, ಬೌದ್ಧಿಕವಾದ ಪೂರ್ವಸಿದ್ಧತೆ ಮತ್ತು ಆಲೋಚನೆಗಳ ಮೂಲಕ ತೀರ್ಮಾನ ತೆಗೆದುಕೊಂಡಿರುವುದಿಲ್ಲ. ಬದಲಾಗಿ ಅಂತಹವರ 'ಕ್ರಿಯೆಗಳು'. ವ್ಯಾಖ್ಯಾನಕ್ಕೆ ಒಳಪಟ್ಟಾಗ ಅವುಗಳ ನಿಜವಾದ ಆಯಾಮಗಳು ನಮಗೆ ತಿಳಿಯುತ್ತವೆ. ಉದಾಹರಣೆಗೆ, 'ವ್ಯಭಿಚಾರ' ಕಥೆಯ ಲೀಲಕ್ಕನ ಬದುಕಿನ ಇಕ್ಕಟ್ಟುಗಳು, ಅವರ ತೀರ್ಮಾನಗಳು ಮತ್ತು ಅವರ ಪಡಿಪಾಟಲುಗಳು ಓದುಗರಿಗೆ ನೇರವಾಗಿ ತಿಳಿಯುವುದೇ ಇಲ್ಲ. ತಿಳಿಯುವುದೇನಿದ್ದರೂ ಅವರ ಕಹಿಬೆರೆಯದ ವ್ಯಕ್ತಿತ್ವವಷ್ಟೇ. ಆದರೆ, ನಮಗೆ ಮುಖ್ಯವಾಗುವುದು ಆಕೆಯ ಬಾಳಿನ ವೀಕ್ಷಕರಾದ ಅಕ್ಕತಂಗಿಯರ ತಿಳಿವಳಿಕೆಯಲ್ಲಿ ಆಗುವ ಪಲ್ಲಟ. ಆ ತಿಳಿವಳಿಕೆಯು ಮದುವೆಯಾಗದ–ಗಂಡು ತಿಳಿಯದ ಅಕ್ಕನ ಒಂಟಿತನ ಮತ್ತು ಅದೆಲ್ಲವನ್ನೂ ತಿಳಿದ/ಪಡೆದ ತಂಗಿಯ ಒಂಟಿತನಗಳ ಅಗ್ನಿದಿವ್ಯದ

ಮೂಲಕವೇ ಮೂಡುತ್ತದೆ. "ಲೀಲಕ್ಕ ಯೂ ಆರ್ ಗ್ರೇಟ್." ಎನ್ನುವ ಮಾತು ನಮ್ಮೆಲ್ಲರ ದೈನಂದಿನ ವರ್ತನೆಗೆ ಹಾದಿ ತೋರುವ ಬೆಳಕಾಗಲು ದಶಕಗಳೇ ಬೇಕಾಗಬಹುದು. ಆ ಬೆಳಕಿನೊಳಗೆ ಇನ್ನೆಷ್ಟೋ ತೊಡಕುಗಳೂ ಇರಬಹುದು. ಅದು ಮುಖ್ಯವಲ್ಲ. ಮುಕ್ತವಾದ ಪ್ರಜ್ಞೆಯು ಹಿಂಸೆಯ ಮೂಲಕವಾಗಿಯೂ ಕಲಿಯುವುದಿದೆಯಲ್ಲ ಅದು ಮುಖ್ಯ. ನೆನ್ನೆ ಸಂಜೆ, ಗಿರೀಶ ಕಾಸರವಳ್ಳಿಯವರ 'ಘಟಶ್ರಾದ್ಧ'ವನ್ನು ನೋಡುತ್ತಿದ್ದೆ. ಅಲ್ಲಿಯೂ ಕೂಡ ಯಮುನಕ್ಕನು ಸಾಂಪ್ರದಾಯಿಕ ಕ್ರೌರ್ಯದಿಂದ ಅನುಭವಿಸುವ ಹಿಂಸೆಗಿಂತ ನಾಣಿಯು ಮುಗ್ಧತೆಯು ಸ್ಫೋಟವಾಗುವ ಬಗೆಯು ಮುಖ್ಯವಾಗುತ್ತದೆ. ಕನಿಷ್ಠಪಕ್ಷ ಯಮುನೆಗಾದ ಅನ್ಯಾಯವು ಕೆಲವರಿಗಾದರೂ ಹೊಳೆಯುತ್ತದೆ. ಆದರೆ ನಾಣಿಯ ನೋವುಗಳು ಅನುಕ್ತವಾಗಿಯೇ ಉಳಿದುಬಿಡುತ್ತವೆ. ಜಾಹ್ನವಿಯವರು ಸುಜಯ ಮತ್ತು ಸವಿತರನ್ನು ಹೀಗೆ ತೋರಿಸಿದ್ದಾರೆ. ಹಾಗೆಯೇ ಈ ಸೋದರಿಯರು ಬಳಸುವ ಭಾಷೆಯು ಮುಗ್ಧರದೇನೂ ಅಲ್ಲ. ಲೀಲಕ್ಕ ಮತ್ತು ಅವಳ ಪ್ರಿಯಕರ 'ಪ್ರಾಣಿ'ಯ ಸಂಬಂಧದ ಬಗ್ಗೆ ಅವರು ಬಳಸುವ ಭಾಷೆಯು ನಿಜಕ್ಕೂ 'raw' ಆದುದು. ಅದರಲ್ಲಿ, ಮಧ್ಯಮವರ್ಗದ ಬ್ರಾಹ್ಮಣರ ಕನ್ನಡದಲ್ಲಿ ಹಿಡಿಯಲಾಗದ ಯಾವುದೋ ಒಂದು ಜೀವನದ್ರವ್ಯವಿದೆ. ಇದು ಬೇರೆ ಹಲವು ಕಥೆಗಳ ವಿಷಯದಲ್ಲಿಯೂ ನಿಜ. ಆದರೆ, ಅಕ್ಕತಂಗಿಯರ ತಿಳಿವಳಿಕೆಯು ಹೊಸದಾದರೂ ಅವರ ಮೌಲ್ಯಪ್ರಜ್ಞೆಯು ಹಳತಾಗಿಯೇ ಉಳಿದಿರುತ್ತದೆ. ಅದಕ್ಕೆ ಆಗುವ Jolt ಈ ಕತೆಯ ಮುಖ್ಯನೆಲೆ. ಪ್ರಾಯಶಃ ಈ ಸಂಕಲನದ ಸರಿಸುಮಾರಿನಲ್ಲಿ ಅಥವಾ ಅನಂತರ ಬಂದ ವೈದೇಹಿಯವರ ಕೆಲವು ಕಥೆಗಳಲ್ಲಿಯೂ ಇಂತಹುದೇ ಹುಡುಕಾಟಗಳಿವೆ. ಇದು ಪ್ರೇಕ್ಷಕರೇ ಪಾತ್ರಧಾರಿಗಳಾಗಿಬಿಡುವ ಹಾದಿಯ ಪಯಣ. ನನಗೆ ಬಹಳ ಇಷ್ಟವಾದ ಇಂತಹುದೇ ಇನ್ನೊಂದು ಕತೆ, 'ದೂಪ್ದಳ್ಳಿ ಸೆಕ್ಸಿ ದುರುಗ' ಎನ್ನುವುದು. ಜಾಹ್ನವಿಯವರ ಬಹುಪಾಲು ಕತೆಗಳು ವರ್ಣಭೇದ, ಜಾತಿಭೇದ ಮುಂತಾದ ಸಂಗತಿಗಳ ಜೊತೆಜೊತೆಗೆ ವರ್ಗಭೇದ ಮತ್ತು ಜೀವನಶೈಲಿಗಳ ನಡುವಿನ ಅಂತರದಿಂದ ಹುಟ್ಟುವ ದುರಂತಗಳನ್ನು ಬಗೆಯುತ್ತವೆ. ಕುವೆಂಪುರವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕಾವೇರಿಗೆ ಗುತ್ತಿಯು ಆರೋಗ್ಯಶಾಲಿಯೂ ಸುಂದರವೂ ಆದ ಪ್ರಾಣಿಯಂತೆ ಕಾಣುತ್ತಿದ್ದನೆಂದು ಹೇಳುತ್ತಾರೆ. ಹಾಗೆಯೇ ಪೀಂಚಲು, ಐತನ ಮೇಲಿನ ತನ್ನ ಪ್ರೀತಿಗೆ ಕೊಂಚವೂ ಭಂಗ ಬರದಂತೆ ಮುಕುಂದಯ್ಯನಿಗೆ ತನ್ನನ್ನು ಸಮರ್ಪಿಸಿಕೊಳ್ಳುತ್ತಿದ್ದಳೆಂದು ಹೇಳುತ್ತಾರೆ. ಆ ಅನಿಸಿಕೆಗಳನ್ನು ಮರುಪರಿಶೀಲಿಸುವ ಕಾಲ ಈಗ ಖಂಡಿತವಾಗಿಯೂ ಬಂದಿದೆ. ಅದೇನೇ ಇರಲಿ, ಈ ಕತೆಯಲ್ಲಿ ನಿರೂಪಕಿಯ ಗೆಳತಿಯರ ಅಷ್ಟೇನೂ ಮುಗ್ಧವಲ್ಲದ ಚೆಲ್ಲಾಟ, ದುರುಗನೆಂಬ ಇಲಿಗೆ ಪ್ರಾಣಸಂಕಟ ವಾಗುತ್ತದೆ. ಅವನಲ್ಲಿ ಲೈಂಗಿಕ ಮತ್ತು ಪ್ರೇಮಸಂಬಂಧಿಯಾದ ಭಾವನೆಗಳು ಮೂಡುವ ಕ್ರಮ ಮತ್ತು ಅದರ ದುರಂತದ ಹಾಗೆಯೇ, ಕತೆ ಹೇಳುತ್ತಿರುವ ಹುಡುಗಿಯು ಬೆಳೆಯುವ ಮತ್ತು ತನ್ನ ವಾತಾವರಣದ ಒಳಗಡೆಯೇ ಅಡಗಿರುವ ಅಸಮತೆ ಮತ್ತು ಕ್ರೌರ್ಯಗಳನ್ನು ಕಂಡುಕೊಳ್ಳುವ ಬಗೆಯನ್ನೂ ಕಟ್ಟಿಕೊಡುತ್ತದೆ. ಇಷ್ಟಕ್ಕೂ ಇದು ದುರುಗ ಮೂಡಿಬಂದಿರುವ ಗ್ರಾಮೀಣ ವಾತಾವರಣವು ಮುಗ್ಧವೆಂದು ಹೇಳುವ ಕಥೆಯಲ್ಲ.

ಅಲ್ಲಿಯೂ ರತ್ನಳಂತಹ ಅಸಹಾಯಕಳನ್ನು 'ಹಾಲಿಂಡಸ್ಟೂರು' (All India Tour) ಕರೆದುಕೊಂಡುಹೋಗಿ ದುರುಪಯೋಗ ಮಾಡಿಕೊಳ್ಳುವ ಸಾಹುಕಾರರಿದ್ದಾರೆ. ಆದರೆ ಅದು ದುರುಗನ ತಿಳಿವಳಿಕೆಗೆ ನಿಲುಕುವುದಿಲ್ಲ. ಆದರೆ ನಿರೂಪಕಿಯ ವಿದ್ಯಾಭ್ಯಾಸ ಮತ್ತು ಅದಕ್ಕಿಂತ ನೂರುಪಟ್ಟು ಹೆಚ್ಚಾಗಿ ಅವಳ ಸಂವೇದನಾಶೀಲತೆ ಅವಳಿಗೆ ದುರುಗನ ದುರಂತವನ್ನು ಮನದಟ್ಟು ಮಾಡಿಸುತ್ತದೆ. ಆದ್ದರಿಂದಲೇ ಜಾಹ್ನವಿಯವರ. ಪಾತ್ರಗಳು ಪ್ರಾತಿನಿಧಿಕವಾಗುವ ಹಂಬಲದಲ್ಲಿ ಸ್ವಂತಿಕೆಯನ್ನು ಕಳೆದುಕೊಳ್ಳುವುದಿಲ್ಲ. ಅವರ ಯಾವ ಪಾತ್ರವೂ ರಕ್ತಮಾಂಸಹೃದಯಮೆದುಳುಗಳ ಸ್ವಂತ ವಾಸ್ತವಕ್ಕೆ ಹೊರತಾಗುವುದಿಲ್ಲ.

ಜಾಹ್ನವಿಯವರ ಕಥೆಗಳು ಆಧುನಿಕತೆಯನ್ನು ಮೈಗೂಡಿಸಿಕೊಂಡಿವೆಯೆಂದು ನಾನು ಹೇಳಿದೆ. ಆದರೆ, ಇದು ಅಷ್ಟು ಸರಳವಿಲ್ಲ. ಜಾಹ್ನವಿಯವರ ತಂದೆಯವರು ಮೂಡಿಸಿದ ಆಧುನಿಕವಾದ ತಿಳಿವಳಿಕೆಗೂ ಇಪ್ಪತ್ತನೆಯ ಶತಮಾನವು ಹುಟ್ಟುಹಾಕಿಕೊಂಡಿರುವ 'ಜಾಗತಿಕ ಆಧುನಿಕತೆ'ಯ ನರಕಕ್ಕೂ ಖಚಿತವಾದ ವ್ಯತ್ಯಾಸಗಳಿವೆ. ಜಾಹ್ನವಿಯವರು ಮೊದಲನೆಯದರ ಗುಣಗಳು ಮತ್ತು ಎರಡನೆಯದರ ಮಿತಿಗಳು ಎರಡನ್ನೂ ಗುರುತಿಸಿದ್ದಾರೆ. ಅವರ ಬಹುಪಾಲು ಕತೆಗಳು ಮಧ್ಯಮವರ್ಗಕ್ಕೆ ಚಲಿಸಿರುವ, ಹಳ್ಳಿಗಳಿಂದಲೇ ಬಂದು ನಗರದಲ್ಲಿ ಜೀವನ ನಡೆಸುತ್ತಿರುವ ಹಲವು ಜಾತಿಗಳ ವಿದ್ಯಾವಂತರ ಆಷಾಢಭೂತಿತನದ ಜೊತೆಗೆ ಹಳ್ಳಿಗಳಿಂದ ಬಂದ ಚಿಕ್ಕ ವಯಸ್ಸಿನ ಅವಲಂಬಿತರ ಮೌಲ್ಯಗಳನ್ನು ಮುಖಾಮುಖಿಯಾಗಿಸುತ್ತವೆ. ಇದು ನಿಜವಾಗಿಯೂ 'ಹುಸಿಯಾದ' ವಿದ್ಯಾಭ್ಯಾಸವು ಹುಟ್ಟಿಸಿದ ಕೆಟ್ಟತನದ ಕತೆ. ಆ ಕೆಟ್ಟತನವೂ ಎಲ್ಲ ಮನುಷ್ಯರ ಒಳಗಡೆಯೇ ಇರುವಂಥದ್ದು. ಆಕಾಶದಿಂದ ಉದುರುವುದಲ್ಲ. ಆದರೆ, ಮಧ್ಯಮವರ್ಗದವರ ತಣ್ಣನೆಯ ಕ್ರೌರ್ಯವನ್ನು 'ಸಭ್ಯತೆ', 'ನಾಗರಿಕತೆ' ಎಂದು ಮೆರೆಸುವ ಹುನ್ನಾರಗಳು ನಮ್ಮ ಕಣ್ಣೆದುರಿಗೆ ಇವೆ. ಜಾಹ್ನವಿಯವರು ಅಂತಹ ಹುನ್ನಾರಗಳ ಬುಡಕ್ಕೆ ಕೊಡಲಿಪೆಟ್ಟು ಹಾಕುತ್ತಾರೆ. ಅದರಲ್ಲಿಯೂ ಇದು ಹೊಸದಾಗಿ ಮೈದಳೆದಿರುವ ನವಮಧ್ಯಮವರ್ಗ. ನಿಜಕ್ಕೂ 'ಇದರ ಬಾಯಲ್ಲಿ ಬೆಲ್ಲ, ಕೈಯಲ್ಲಿ ಕತ್ತರಿ' ಇರುತ್ತದೆ. ಅದು ಕ್ರೌರ್ಯದ ಪರಮಾವಧಿ.

ಜಾಹ್ನವಿಯವರ ಕತೆಗಳ ಇನ್ನೊಂದು ಲಕ್ಷಣವೆಂದರೆ ಗಂಡು-ಹೆಣ್ಣುಗಳ ಸಂಬಂಧದ ಹಲವು ಸೂಕ್ಷ್ಮಗಳನ್ನು ಹಲವು ನೆಲೆಗಳಲ್ಲಿ ನೋಡಿರುವುದು. ಕಥಾಸಾಹಿತ್ಯದಲ್ಲಿ ಇದು ಬಹಳ ಕಷ್ಟದ ಕೆಲಸ. ಶಿವರಾಮ ಕಾರಂತರಿಂದ ಹಿಡಿದು ವೀಣಾ ಶಾಂತೇಶ್ವರ ಮತ್ತು ವೈದೇಹಿಯವರವರೆಗೆ ಅನೇಕ ಲೇಖಕರು ಇಂಥ ಪ್ರಯತ್ನ ಮಾಡಿದ್ದಾರೆ. ದೇಹ, ವಿಚಾರಗಳು ಮತ್ತು ಭಾವನೆಗಳ ನಡುವಿನ ಕೊಡುಕೊಳ್ಳುವ ಸಂಬಂಧಗಳನ್ನು, ಅಂತೆಯೇ ಗಡಿಗೆರೆಗಳನ್ನು ಗುರುತಿಸುವುದು ಕಷ್ಟ. ಜಾಹ್ನವಿಯವರು ಆಧುನಿಕವೆಂದು ತೋರುವಾಗಲೂ ಎಲ್ಲ ಕಾಲಕ್ಕೂ ನಿಜವಿರಬಹುದಾದ ಸತ್ಯಗಳನ್ನು ಹುಡುಕಿ ತೆಗೆದಿದ್ದಾರೆ. ಕಾಮ ಮತ್ತು ಪ್ರೇಮಗಳನ್ನು ಪರಸ್ಪರ ವಿರುದ್ಧ ಧ್ರುವಗಳೆಂದು ತಿಳಿಯದ. ಒರಟುತನ, ಸೌಮ್ಯತೆ, ನಾಜೂಕು, ಹುಸಿತನ ಮುಂತಾದ ಸಂಗತಿಗಳನ್ನು ಎಚ್ಚರಿಕೆಯಿಂದ ಶೋಧಿಸುವ ಕೆಲಸ ಇಲ್ಲಿ ನಡೆದಿದೆ. ಗಂಡು-ಹೆಣ್ಣುಗಳ ಸಂಬಂಧವು

ಅದರ ಒಟ್ಟಂದದಲ್ಲಿ ಮೂಡುವುದೇ ವಿನಾ ಕೇವಲ ಕಾಮ–ಪ್ರೇಮಗಳಲ್ಲಿ ಅಲ್ಲವೆಂಬ ತಿಳಿವಳಿಕೆಯು ಇಲ್ಲಿ ನಿಚ್ಚಳವಾಗಿದೆ. ಈ ವಿಚಾರಗಳನ್ನು ಇನ್ನಷ್ಟು ಭಿನ್ನವಾಗಿ ನೋಡುವ ಕತೆ, 'ನೆರೆಹಾವಳಿ'. ಇದರಲ್ಲಿ ಬರುವ ಅನಿತಾ ಎಂಬ ಹದಿನೆಂಟರ ಹುಡುಗಿಯ ಆಯ್ಕೆಗಳ ಹಿಂದಿರುವ ದಿಟ್ಟತನ ಮತ್ತು ತಿಳಿವಳಿಕೆಗಳು ಬದುಕಿನ ಪಾಠಶಾಲೆಯಲ್ಲೇ ಕಲಿತ ಅನಿವಾರ್ಯಗಳು. ಐವತ್ತು ವರ್ಷ ಮೀರಿದ ಶೆಟ್ಟರ ಸಂಗಡದ ತನ್ನ ಸಂಬಂಧವನ್ನು ಹೇಳುವಾಗ, "ಅಷ್ಟಕ್ಕೂ ನಾನು ಈಗ ಮಾಡ್ತಿರದ್ನ ಮದ್ವೆಯಾದ್ಮೇಲೂ ಮಾಡದಲ್ವಾ ಸರ್ ಏನು ವ್ಯತ್ಯಾಸ?" "ಅಂದು ನಮ್ಮೊಳಗೊಂದು ಸಮರವನ್ನೇ ಸಾರಿ, ತಾನು ಸುಮ್ಮನೆ ಕುಳಿತುಬಿಟ್ಟಳಾಕೆ." ಅವಳ ತಿಳಿವಳಿಕೆಯನ್ನು ನಿರೂಪಕಿ ಸರಿಯಾಗಿ ಗುರುತಿಸುತ್ತಾಳೆ: "ಮನು, ಅವ್ಳು ಪ್ರಜ್ಞೆಯಿಟ್ಕಂಡೇ ಎಲ್ಲಾ ಮಾಡ್ತಿದಾಳೆ. ಪ್ರಜ್ಞೆ ಕಳ್ಕಂಡಲ್ಲ. ಮತ್ತೆ ಯಾಕ್ಮಾಡ್ತಿದಾಳೆ, ಆಕಿಗೇನ್ ಬೇಕು ಇದರ ಸ್ಪಷ್ಟ ಅರಿವೂ ಇದೆ. ಎಚ್ಚರಿಕೇನೂ ಇದೆ, ಅದಕ್ಕೆ ಅಲ್ಲಿ ಯಾವ ಕನ್ ಫ್ಯೂಷನ್ನೂ ಇಲ್ಲ, ಕನ್ ಫೆಷನ್ನೂ ಇಲ್ಲ?..." ಈ ನಿಲುವು ಒಬ್ಬ ನಿರ್ಭಾವುಕಳಾದ ಒರಟು ಹುಡುಗಿಯನ್ನು ಸೃಷ್ಟಿಸಿಲ್ಲವೆನ್ನುವುದು ಈ ಕತೆಗಿರುವ ಇನ್ನೊಂದು ಆಯಾಮ. ಇಂತಹ ದಿಟ್ಟ ಹುಡುಗಿಯೂ ಕೊಂಚವೇ ಕೊಂಚ ಪ್ರೀತಿಯನ್ನು ಕಂಡಾಗ, ಪುಟ್ಟ ಹುಡುಗಿಯಾಗುತ್ತಾಳೆ. ಆದರೂ ಸರಿಯಾದ ತೀರ್ಮಾನವನ್ನೇ ತೆಗೆದುಕೊಳ್ಳುತ್ತಾಳೆ. ನಾನು ಬಹಳ ಕೋಟ್ ಮಾಡಲು ಇಷ್ಟಪಡುವುದಿಲ್ಲ. ದಯವಿಟ್ಟು ಅದೊಂದು ಕತೆಯನ್ನಾದರೂ ಓದಿ. ಈ ಕತೆಯು ಇನ್ನಷ್ಟು ಸಾಂದ್ರವಾಗುವುದು, ನಿರೂಪಕಿ ಮತ್ತು ಮನು ಎಂಬ ಯುವಕನ ಬಿಡುಬೀಸು ಎಂಬಂತೆ ಕಂಡರೂ ಮುಕ್ತವಾದ ಆರೋಗ್ಯಕರವಾದ ಸಂಬಂಧದಿಂದ. ಅವರ ಮಾತುಕತೆ ಮತ್ತು ಕ್ರಿಯೆಯಲ್ಲಿಯೇ ತಾರುಣ್ಯದ ಉಕ್ಕಂದ ಮತ್ತು ಕಲ್ಪಕತೆಗಳು ತುಂಬಿತುಳುಕುತ್ತವೆ. ಆದರೆ, ಹದಿನೆಂಟರ ಅನಿತಾಳ 'ಪ್ರಬುದ್ಧತೆ' ಮತ್ತು ಮೂವತ್ತರ ಆಸುಪಾಸಿನ ಇವರಿಬ್ಬರ 'ಹುಡುಗುತನ'ವನ್ನು ಅಕ್ಕಪಕ್ಕ ಇಟ್ಟು ನೋಡಿದಾಗ, ಬದುಕಿನ ಸ್ವರೂಪದಲ್ಲಿಯೇ ಇರುವ ಅಸಮಾನತೆ ಮತ್ತು ಕ್ರೌರ್ಯಗಳು ಎದ್ದು ಕಾಣುತ್ತವೆ. ಹಾಗೆ ನೋಡಿದರೆ, ಇವರು ಯಾರೂ ಖಳನಾಯಕರಲ್ಲ, ಕೆಟ್ಟವರಲ್ಲ. ಎಲ್ಲರೂ ತಮ್ಮ ಪರಿಸರವು ರೂಪಿಸಿದ ಗೊಂಬೆಗಳು. ಆದರೆ, ಆ ಒತ್ತಾಯಗಳನ್ನು, ಒತ್ತಡಗಳನ್ನು ಮೀರಿ ಮಾನವೀಯವಾಗುವ ಕರ್ತವ್ಯ ಮತ್ತು ಸಾಧ್ಯತೆಗಳನ್ನು ಈ ಕತೆಗಳು ತಿಳಿಸಿಕೊಡುತ್ತವೆ.

ಇಲ್ಲಿರುವ ಎಲ್ಲ ಕತೆಗಳನ್ನೂ ಪರಿಚಯ ಮಾಡಿಕೊಡುವ ಉದ್ದೇಶ ನನಗಿಲ್ಲ. ಕೆಲವು ಕತೆಗಳು ಮನುಷ್ಯರ ಬಡತನ, ಕೆಟ್ಟತನ ಮತ್ತು ಸ್ವಾರ್ಥಗಳ ಫಲವಾದ ದುಃಖವನ್ನು, ಅದರ ನಡುವೆಯೂ ಪುಟಿಯುವ ಮನುಷ್ಯತ್ವದ ಜೀವಸೆಲೆಯನ್ನು ಅಚ್ಚುಕಟ್ಟಾಗಿ ಹೇಳುತ್ತವೆ. ಅವುಗಳಿಗೆ ಹೆಚ್ಚಿನ ಮಹತ್ವಾಕಾಂಕ್ಷೆ ಇಲ್ಲ. ಸಮುದಾಯಗಳೊಂದಿಗೆ ಬೆರೆತು ಅವರ ಹಾಡುಪಾಡುಗಳನ್ನು ಹಂಚಿಕೊಂಡವರಿಗೆ ಇಂಥದೊಂದು ಅಪೇಕ್ಷೆ ಸಹಜವಾಗಿಯೇ ಇರುತ್ತದೆ. ಹೀಗೆ ಹೇಳುವಾಗ ನನಗೆ ಗುಲ್ಬರ್ಗಾದ ಹೋರಾಟಗಾರ್ತಿ–ಕಥೆಗಾರ್ತಿಯಾದ ಕೆ. ನೀಲಾ ಅವರು ನೆನಪಿಗೆ ಬರುತ್ತಿದ್ದಾರೆ. ಹೀಗೆ ಹಂಚಿಕೊಳ್ಳುವ ಕೆಲಸವು ಸ್ವ–ಕೇಂದ್ರಿತವಾದ ಗೋಳುಕರೆಗಿಂತ ಒಳ್ಳೆಯದು.

ಜಾಹ್ನವಿಯವರ ಕೆಲವು ಕಥೆಗಳಲ್ಲಿ, ಸನ್ನಿವೇಶದ ವಿಷಮತೆಯಿಂದ ತಪ್ಪಿಸಿಕೊಳ್ಳಲು ಹೆಣ್ಣುಮಕ್ಕಳು ಹೂಡುವ ಉಪಾಯಗಳ ಪ್ರಸ್ತಾಪ ಬರುತ್ತದೆ. ಶಕ್ತಿಯ ಬದಲು ಯುಕ್ತಿಯನ್ನು ಬಳಸುವ ಇವರು ಕುವೆಂಪು ಕಾದಂಬರಿಗಳ ಹಳೇಪೈಕದ ತಿಮ್ಮ ಮತ್ತು ನಾಯಿ ಗುತ್ತಿಯರ ಹಾಗೆ 'Trickster Hero'ಗಳ ಗುಂಪಿಗೆ ಸೇರುತ್ತಾರೆ. 'ದೇವರ್ ಬಂದಾವ್ ಬನ್ನಿರೋ?' ಕತೆಯ ರೇಣುಕಾ ಮತ್ತು 'ಒಬ್ರು ಸುದ್ಯಾಕೆ??..' ಕತೆಯ ಕಲ್ಯಾಣಿ ಇಂತಹ ಪಾತ್ರಗಳು. ನಮ್ಮ ಲೇಖಕಿಯರ ಕತೆ–ಕಾದಂಬರಿಗಳಲ್ಲಿ ಇಂತಹ ಜಾಣೆಯರೂ ಅಪರೂಪವೇ. 'ನೆಲಬಾನಿನ ಗೆಳೆತನ' ಕತೆಯ ಪಾರ್ವತಿ ಕೂಡ ಇವರಿಗಿಂತ ಭಿನ್ನವಾದರೂ ಗಮನಿಸ ಬೇಕಾದ ಪಾತ್ರ.

ಜಾಹ್ನವಿಯವರು ನೂರಕ್ಕೆ ನೂರರಷ್ಟು ಕನ್ನಡದ, ಕರ್ನಾಟಕದ ಮತ್ತು ತನ್ನ ಕಾಲದ ಭಾಷೆಯನ್ನು ಬಳಸಿದ್ದಾರೆ. ಇದು ಬಹಳ ಮುಖ್ಯವಾದುದು. ಏಕೆಂದರೆ, ನಮ್ಮ ಸಂವೇದನೆ, ತಿಳಿವಳಿಕೆ ಮತ್ತು ನಾವು ಕಟ್ಟಿಕೊಡುವ ಲೋಕ ಇವೆಲ್ಲವೂ ನಿಜವಾಗುವುದು ಭಾಷೆಯಿಂದ ಮಾತ್ರವೇ. ಇಲ್ಲಿ ಸಂಸ್ಕೃತ ಪದಗಳ ಬಳಕೆ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಲಂಕೇಶ್ ಮತ್ತು ತೇಜಸ್ವಿಯವರು ಹೀಗೆ ಅಬ್ಬರವಿಲ್ಲದೆ, ಘೋಷಣೆಗಳಿಲ್ಲದೆ ಕನ್ನಡವನ್ನು ಬಳಸುವ ಬಗೆಯನ್ನು ನಮಗೆ ಹೇಳಿಕೊಟ್ಟರು, ಹಾಗೆಯೇ ಇಲ್ಲಿ ಮಧ್ಯ ಕರ್ನಾಟಕದ ಅದರಲ್ಲಿಯೂ ಚಿತ್ರದುರ್ಗ ಜಿಲ್ಲೆಯ ಆಡುಮಾತನ್ನು ಬಹಳ ಪರಿಣಾಮಕಾರಿಯಾಗಿ ಬಳಸಲಾಗಿದೆ. ಅದು ತನ್ನಷ್ಟಕ್ಕೆ ತಾನು ಮುಖ್ಯವಲ್ಲ. ಕತೆಗಾರ್ತಿಯು ಆ ಉಪಭಾಷೆಯನ್ನು ಬಳಸಿಕೊಂಡು ತನ್ನದೇ ಆದ ಶೈಲಿಯನ್ನು ಕಟ್ಟಿಕೊಂಡಿರುವುದು ಮುಖ್ಯ. ಅದರಲ್ಲಿ ನಿಜಕ್ಕೂ ಸೃಜನಶೀಲತೆ ಮತ್ತು ಧೈರ್ಯಗಳಿವೆ. 'ಒಬ್ರು ಸುದ್ದ್ಯಾಕೆ ಒಬ್ರು ಗದ್ಲ್ಯಾಕೆ?..' ಮುಂತಾದ ಕತೆಗಳ ಹೆಸರಿನಿಂದ ಹಿಡಿದು ಕತೆಗಳ ಒಳಗೆ ತುಂಬಿರುವ ವಿವರಗಳವರೆಗೆ ಹಲವು ಪ್ರಾದೇಶಿಕ ಸಂಗತಿಗಳು ಈ ಬರವಣಿಗೆಯ ರಕ್ತಮಾಂಸಗಳಾಗಿವೆ. ಹಾಗೆಂದು ಪ್ರಾದೇಶಿಕತೆಯು 'ಲಂಪಟತೆ'ಯೋ ಅನನ್ಯತೆಯನ್ನು ಪಡೆದುಕೊಳ್ಳುವ ಸುಲಭ ಹಾದಿಯೋ ಆಗದಂತೆ ಅವರು ಎಚ್ಚರ ವಹಿಸಿದ್ದಾರೆ. ಇಲ್ಲದೆ ಹೋದರೆ ಪ್ರಾದೇಶಿಕತೆ ಇರುತ್ತದೆ, ಆದರೆ ಕತೆಯೇ ಇರುವುದಿಲ್ಲ. ಅಲ್ಲದೆ ಬರೆಯುವವರು ಭಾವುಕತೆ, ಜಾಣತನ, ತುಂಟತನ, ನೋವು ಮುಂತಾದ ಹತ್ತು ಹಲವು ಸಂಕೀರ್ಣ ಸೂಕ್ಷ್ಮಗಳನ್ನು ಶೈಲಿಯಲ್ಲಿ ಮಾಡಿಕೊಳ್ಳುವ ಬದಲಾವಣೆಗಳಿಂದಲೇ ತೋರಿಸಬೇಕಾಗುತ್ತದೆ. ಸ್ವತಃ ಭಾವುಕಳಾಗುವ ಲೇಖಕಿಯು ಭಾವುಕವಾದ ಕತೆಗಳನ್ನು ಬರೆಯಲಾರಳು. ವಿಚಾರವೂ ಹಾಗೆಯೇ ಕತೆಯ ಮತ್ತು ಶೈಲಿಯ ಒಡಲಿನಿಂದಲೇ ಮೂಡಿಬರಬೇಕು. 'ಪ್ರಿ–ಡೆಟರ್ಮೈನ್ಡ್' ಆದ ವೈಚಾರಿಕತೆಯಿಂದ ಅಲ್ಲ. 'ವಿಮುಖ' ಮತ್ತು 'ವ್ಯಭಿಚಾರ' ಕತೆಗಳನ್ನು ಈ ದೃಷ್ಟಿಯಿಂದ ನೋಡಬಹುದು.

ಈ ಮುನ್ನುಡಿಯು ಈಗಾಗಲೇ ಸಾಕಷ್ಟು ಉದ್ದವಾಗಿದೆ. ಇಂಥ ಸಂಕಲನಗಳು ಪ್ರಕಟವಾದ ಮೇಲೆ ಬರುವ ವಿಮರ್ಶೆಗಳು ಇಲ್ಲವೇ ಇಲ್ಲ ಅಥವಾ ಬಹಳ ಕಡಿಮೆ ಎನ್ನುವ ಕೊರಗು ಕೂಡ ಇದಕ್ಕೆ ಕಾರಣವೆಂದು ತೋರುತ್ತದೆ. ಅದೂ ಅಲ್ಲದೆ, ಸ್ವತಃ ಜಾಹ್ನವಿಯವರು ಈ ಪುಸ್ತಕದೊಂದಿಗೆ ನಾನು, ನನ್ನೋರು, ನನ್ ಬರವಣಿಗೆ' ಎಂಬ

ಬಹಳ ಒಳ್ಳೆಯ ಬರವಣಿಗೆಯನ್ನು ಕೊಟ್ಟಿದ್ದಾರೆ. ಅದೇ ಒಂದು ಕತೆಯ ಹಾಗೆ ತಲ್ಲಣಿಸುತ್ತದೆ. ಅದಕ್ಕೆ ಹೋಲಿಸಿದರೆ ನನ್ನ ಮುನ್ನುಡಿಯು ನೀರಸ. ಅದೇನೇ ಇರಲಿ, ಜಾಹ್ನವಿಯವರು ತಮ್ಮ ಮೊದಲ ಸಂಕಲನವನ್ನು ತಮ್ಮ ತಂದೆ ಡಾ. ತಿಪ್ಪೇಸ್ವಾಮಿ ಯವರಿಗೆ ಮತ್ತು ಲಂಕೇಶ್ ಅವರಿಗೆ ಅರ್ಪಿಸಿದರು. ಇಬ್ಬರೂ ಈಗ ಇಲ್ಲ. ಆದರೆ, ಅವರು ನಂತರದ ಕತೆಗಳ ಈ ಫಸಲನ್ನು ನೋಡಿದ್ದರೆ ಸಂತೋಷ ಪಡುತ್ತಿದ್ದರೆಂಬ ನಂಬಿಕೆ ನನಗಿದೆ. ಇವರು ಬರವಣಿಗೆಗೆ ಇನ್ನಷ್ಟು ಸಮಯ ಮತ್ತು ಗಮನಗಳನ್ನು ಕೊಡಲಿ ಮತ್ತು ತಮ್ಮ ಸಂಗಡವೇ ಬೆಳೆಯುವ ಹೊಸ ಕತೆಗಳನ್ನು ಬರೆಯಲಿ ಎಂದು ನನ್ನ ಆಸೆ. ಆದರೆ, ಈಗ ಬರೆದಿರುವಷ್ಟರಿಂದಲೇ ಅವರು ಕನ್ನಡದ ಮುಖ್ಯ ಕತೆಗಾರ್ತಿಯರಲ್ಲಿ ಒಬ್ಬರು. ಇಲ್ಲಿ ಈ ಮಾತುಗಳನ್ನು ಬರೆಯುವ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳು.

07–07–2013 **ಎಚ್. ಎಸ್. ರಾಘವೇಂದ್ರರಾವ್**

ಪ್ರಕಾಶಕರ ಮಾತು

ಜಾಹ್ನವಿ ಕಥೆಗಳೇಕೆ ಮುಖ್ಯವೆಂದರೆ......

ಅನುಭವಕ್ಕೆ ಅಕ್ಷರ ದೊರಕಿದರೆ ಏನಾಗುತ್ತದೋ ಅದು ಜಾಹ್ನವಿ ಕಥೆಗಳಲ್ಲಿ ಕಾಣಸಿಗುತ್ತದೆ. ವಿಚಾರವಂತಿಕೆ ಜಾತಿ, ಧರ್ಮದ ಚೌಕಟ್ಟನ್ನು ಮೀರಿ ಮನುಷ್ಯತ್ವ ನೆಲೆಗಟ್ಟನ್ನು ಹುಡುಕಿ ಕೊಂಡಾಗ ಏನಾಗಬೇಕೋ ಅದು ಇಲ್ಲಿಯ ಪಾತ್ರಗಳ ವರ್ತನೆಯಲ್ಲಿ ಮಡುಗಟ್ಟಿದೆ. ಕೃತಕವಾಗಿ ಯಾವುದನ್ನೂ ಸೃಷ್ಟಿಸಿಲ್ಲದ ಜಾಹ್ನವಿ ದಲಿತಲೋಕವನ್ನೊಳಗೊಂಡ ಮನುಷ್ಯ ಪ್ರಪಂಚದ ಸುಕೃತಿ, ವಿಕೃತಿಗಳ ಕುರಿತು ದಲಿತತ್ವ ಮೀರಿ ಕೂಡ ಬರೆಯಬಲ್ಲರೆಂಬ ಕಾರಣಕ್ಕೆ ಸಣ್ಣಕತೆಗಳ ಸಂದರ್ಭದಲ್ಲಿ ಈ ಕತೆಗಳು ತುಂಬ ಮುಖ್ಯವಾಗುತ್ತವೆ. ಇವುಗಳನ್ನು ಸಮಗ್ರ ರೂಪದಲ್ಲಿ ಪ್ರಕಟಿಸುತ್ತಿರುವ ಹೆಮ್ಮೆ ನಮ್ಮದು.

ಸ್ತ್ರೀವಾದವೆಂಬುದು ಅನೇಕ ಆಯಾಮಗಳಲ್ಲಿ ಪ್ರತಿಬಿಂಬಿತ ಗೊಳ್ಳುತ್ತಿರುವ ಈ ಹೊತ್ತಿನಲ್ಲಿ ದಲಿತಮಹಿಳಾ ಲೋಕವು ಪ್ರತ್ಯೇಕವಾಗಿ ಮತ್ತು ಸಾಮುದಾಯಿಕವಾಗಿ ಏಕಕಾಲಕ್ಕೆ ತೆರೆದುಕೊಳ್ಳಬೇಕಾದ ಸವಾಲಿಗೆ ಮುಖಾಮುಖಿಯಾಗಿ ನಿಂತಿದೆ. ಈ ಸವಾಲನ್ನು ಸಹಜವೆಂಬಂತೆ ಸ್ವೀಕರಿಸಿದ ಜಾಹ್ನವಿ ಅನುಭವಮುಖೇನ ಒಂದು ವಿಭಿನ್ನ ಲೋಕವನ್ನು ನಮ್ಮೆದುರಿಗೆ ಹರಡಿಕೊಟ್ಟಿದ್ದಾರೆ. ಅವುಗಳನ್ನು ಚರ್ಚೆಯ ಮೂಲಕಕ್ಕಿಂತ ಓದುವುದರ ಮೂಲಕ ಹೆಚ್ಚು ಯಶಸ್ವಿಯಾಗಿ ತಲುಪಬಹು ದೆನಿಸುತ್ತದೆ. ಆ ಅನಿಸಿಕೆಯ ಮುಂದಿನ ಭಾವವೇ ಈ ಕಳ್ಳುಬಳ್ಳಿ.

ಈ ಪುಸ್ತಕ ರೂಪುಗೊಳ್ಳುವಲ್ಲಿ ನೆರವಾದ ಹಲವು ಜೀವಗಳನ್ನು ಸ್ಮರಿಸಿಕೊಳ್ಳದಿದ್ದರೆ ಅಪಚಾರವಾದೀತು.

ಮೊದಲಿಗೆ ಕಥೆಗಳನ್ನು ಪ್ರಕಟಿಸಲು ನಮಗೆ ಕೊಟ್ಟ ಜಾಹ್ನವಿಯವರಿಗೆ, ಬಿಡುಗಡೆಯ ಸಮಾರಂಭಕ್ಕೆ ಒತ್ತಾಸೆಯಾಗಿ

ನಿಂತ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಮಾಲತಿ ಪಟ್ಟಣಶೆಟ್ಟಿ, ಕಿರಿಯರ ಪ್ರಜ್ಞೆಗಳನ್ನು ಕಾಯುವ ಕೃಷ್ಣಮೂರ್ತಿ ಹನೂರ ಮತ್ತು ಸವಿತಾ ನಾಗಭೂಷಣ ಅವರಿಗೆ, ತಮ್ಮ hard work ಮೂಲಕ ಸಮಕಾಲೀನರಿಗೆ ಸ್ಫೂರ್ತಿಯಾಗುವ ಜೋಗಿಗೆ, ಸಂಘಟನೆಯಲ್ಲಿ ಹೆಗಲಿಗೆ ಹೆಗಲು ಜೋಡಿಸಿದ ಚಕ್ರವರ್ತಿಗೆ

ಜೊತೆಗೆ ನಮ್ಮ ಸುತ್ತಮುತ್ತಲೂ ಆವರಿಸಿಕೊಂಡಂತಿರುವ ಡಾ. ಬಸವರಾಜ ರೆಡ್ಡಿ, ಡಾ. ಬಂಡ್ರಿ ವಿಶ್ವನಾಥ್, ಡಾ. ಸುಲೋಚನಾ, ಡಾ. ಸಿದ್ದಮಲ್ಲಪ್ಪನವರಿಗೆ. ಡಾ. ಅಂಬಣ್ಣ ನವರಿಗೆ

ಸರಿಯಾದ ಸಮಯಕ್ಕೆ ಸೊಗಸಾಗಿ ಪುಸ್ತಕ ಮುದ್ರಿಸಿಕೊಡುವ ಇಳಾ ಗುರುಮೂರ್ತಿಯವರಿಗೆ,

ಮುಖಪುಟ ಕಲಾವಿದ ಅರುಣ್ ಕುಮಾರ್ ಜಿ ಅವರಿಗೆ

ಜಿ. ಎನ್. ಮೋಹನರಿಗೆ

ಪ್ರಕಾಶನದ ಪರವಾಗಿ ವಂದನೆಗಳು.

ಕನ್ನಡ ಪುಸ್ತಕಗಳನ್ನು ಕೊಂಡು, ಓದಿ ಪ್ರೋತ್ಸಾಹಿಸಿರೆಂಬ ಆಗ್ರಹದೊಂದಿಗೆ,

ಇಂತಿ ನಮಸ್ಕಾರಗಳು,

ನವೆಂಬರ್2, 2014

ಹಗರಿಬೊಮ್ಮನಹಳ್ಳಿ.

ಮನದ ಮಾತು...

ಉಹೂಂ ಹೊಸದೇನೂ ಇಲ್ಲ. ಇಪ್ಪತ್ತು ವರುಷಗಳ ಹಿಂದಿನಿಂದ ಹಿಡಿದು ಈಗೊಂದತ್ತು ವರುಷದವರೆಗಿನವು, ಎಲ್ಲೋ ಒಂದೆರಡು ಇತ್ತೀಚಿನವಷ್ಟೇ. ಕಳೆದ ಇಪ್ಪತ್ತೈದು ವರುಷಗಳಲ್ಲಿ ನಾನು ಬರೆದ ಕೆಲವೇ ಕಥೆಗಳು ಎರಡು ಸಂಕಲನಗಳಲ್ಲಿ ಹಂಚಿಹೋಗಿದ್ದವು. ಅವನ್ನೆಲ್ಲಾ ಒಟ್ಟಾಗಿ, ಒಂದೆಡೆಯೆ ಕಲೆ ಹಾಕುವ ವಿಚಾರ ಮಾಡಿದ್ದು ಸುಧಾ ಚಿದಾನಂದಗೌಡ. ಒಂದು ಔಪಚಾರಿಕ ಭೇಟಿಗೆಂದು ಮನೆಗೆ ಬಂದವರು ಮಾತಿನ ನಡುವೆ ಹಾಗೆ ಈ ವಿಚಾರವೆತ್ತಿ. ನನ್ನ ತಲೆಯಲ್ಲೂ ಬಿತ್ತಿ, ಹೋದವರು ಸುಮ್ಮನಿರಲಿಲ್ಲ; ನನ್ನನ್ನೂ ಸುಮ್ಮನಿರಲು ಬಿಡಲಿಲ್ಲ. ಆ ಕಾರಣ ಈ ಪುಸ್ತಕ. ಜತೆಗೆ ಪುಸ್ತಕದ ಗೀಳು ಹಿಡಿಸಿದ ಅಪ್ಪಾಜಿ, ಅಮ್ಮನ ಜೀವನಪ್ರೀತಿ, ನನ್ನ ಸಂಭಾಳಿಸಿದ ಮಗ ವಿಕಾಸ, ಆ ಸ್ಪೇಸ್ ಒದಗಿಸಿದ ನಿರಂಜನ, ಬರೆಯುವ ಹುರುಪು ಮೂಡಿಸಿದ ಲಂಕೇಶ್, ನನಗೆ ದಕ್ಕಿದ ಆ ಪರಿಸರ, ಅಪಾರ ಬಂಧುಬಳಗ ಇವರಿಲ್ಲದೆ ಹೋಗಿದ್ದರೆ ಇದೂ ಇರುತ್ತಿರಲಿಲ್ಲ.

ಒಂದು ಸಣ್ಣ ಛತ್ರದಂತಿದ್ದ ಮನೆಯಲ್ಲಿ, ಯಾವತ್ತೂ ತುಂಬಿ ತುಳುಕುತ್ತಿದ್ದ ಜನರ ನಡುವೆ ಹುಟ್ಟಿ, ಬೆಳೆಯುತ್ತಾ, ಆ ಜನಜೀವನದ ಒಂದು ಭಾಗವಾಗಿ ನಾ ಕಂಡು, ಕೇಳಿ, ಅನುಭವಿಸಿದ್ದನ್ನು ಬೆರಗಿನಿಂದ ಬಸಿದಿಟ್ಟ ಸಾರವಿದು. ಎಲ್ಲಾ ಸೊಪ್ಪಿನೆಗಳುದುಕ!

ಪುಸ್ತಕದ ಪ್ರತಿ ವಿಷಯದಲ್ಲೂ ಖುದ್ದು ಕಾಳಜಿವಹಿಸಿ ನನ್ನ ಕಥೆಗಳಿಗೆ ಮರುಜನ್ಮ ನೀಡಿದ್ದಾರೆ ಸುಧಾ ಮತ್ತು ಪ್ರಕಾಶಕರಾದ ಚಿದಾನಂದಗೌಡ. ಇವರಿಗೆ ನನ್ನ ಪ್ರೀತಿಯ ನಮನ . ಇದೇ ಸಂದರ್ಭದಲ್ಲಿ, ನನ್ನ ಕಥೆಗಳನ್ನ ಪ್ರಕಟಿಸಿದ ಪ್ರತಿಯೊಂದು ಪತ್ರಿಕೆಯ ಪ್ರೀತಿಯ ಸ್ಮರಣ. ನನ್ನ ಈ ಮೊದಲಿನ ಎರಡು

ಕಥಾಸಂಕಲನಗಳು 'ಕಳೆದುಕೊಂಡವಳು ಹಾಗು ಇತರ ಕಥೆಗಳು' ಮತ್ತು 'ಹುಡುಕಾಟ' ಇವುಗಳನ್ನು ಪ್ರಕಟಿಸಿದ್ದ ಪಿ. ಲಂಕೇಶರಿಗೆ ಹಾಗು ದಾಸನೂರು ಕೂಸಣ್ಣ ಇವರಿಗೆ ಎಂದೂ ಕೃತಜ್ಞೆ. "ಸರ್, ನನ್ನ ಪುಸ್ತಕಕ್ಕೆ ಮುನ್ನುಡಿ ಬರೀತಿರಾ ?" ಅಂತ ಬಹಳ ಸಂಕೋಚದಿಂದ, ಹಿಂಜರಿಕೆಯಿಂದ ಹೆಚ್. ಎಸ್. ರಾಘವೇಂದ್ರರಾವ್ ಅವರಿಗೆ ಕರೆ ಮಾಡಿದಾಗ ಯಾವ ಸಬೂಬೂ ಹೇಳದೇ, ಹಿಂದೆಮುಂದೆ ನೋಡದೇ ಬಹಳ ಸಂತೋಷದಿಂದ ಒಂದೇಟಿಗೆ ಒಪ್ಪಿಕೊಂಡು ಮುನ್ನುಡಿ ಬರೆದುಕೊಟ್ಟರು. ಹಾಗೆಯೇ ಬೆನ್ನುಡಿ ಬರೆದವರು ಜಿ.ಪಿ.ಬಸವರಾಜು. ಕಥೆಗಳ ಬಗ್ಗೆ ನಾಲ್ಕು ಸಾಲುಗಳಲ್ಲಿ ತಮ್ಮ ತಮ್ಮ ಅಭಿಪ್ರಾಯ ತಿಳಿಸಿ ಬೆನ್ನು ತಟ್ಟಿದವರು ಹಿರಿಯರಾದ ವೀಣಾ ಶಾಂತೇಶ್ವರ, ಗೆಳೆಯರಾದ ಸವಿತಾ ನಾಗಭೂಷಣ. ನನ್ನ ಮೊದಲ ಕಥಾಸಂಕಲನಕ್ಕೆ ಪಿ. ಲಂಕೇಶರು ಬರೆದ ಬೆನ್ನುಡಿಯನ್ನು ಮತ್ತು ದೇಶಕಾಲ ವಿಶೇಷ ಸಂಚಿಕೆಗೆ ಜಯಂತ ಕಾಯ್ಕಿಣಿ ಬರೆದ ಸಣ್ಣ ಟಿಪ್ಪಣಿಯನ್ನು ಹಾಗೆಯೇ ಬಳಸಿಕೊಳ್ಳಲಾಗಿದೆ. ಈ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದ.

ಪುಸ್ತಕವನ್ನು ಅಂದವಾಗಿ ಮುದ್ರಿಸಿದ ಇಳಾ ಮುದ್ರಣದ ಬಿ. ಗುರುಮೂರ್ತಿ, ಮುಖಪುಟ ಕಲಾವಿದರಾದ ಅರುಣ್‌ಕುಮಾರ್.ಜಿ. ಛಾಯಾಚಿತ್ರಕರಾದ ಶಿವಶಂಕರ್ ಇವರಲ್ಲರಿಗೂ ಎಂದೂ ಅಭಾರಿ. ನನ್ನ ಬರವಣಿಗೆಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕಾರಣರಾದ ಎಲ್ಲರಿಗೂ, ಪ್ರೀತಿಯ ಓದುಗರಿಗೂ ಗೌರವದ ನೆನಹು.

ಪರಿವಿಡಿ

ವಿಮುಖ

ಮೈಯೆಲ್ಲಾ ನೋವು, ಭಾರ, ಏಳೋಕೆ ಮನಸ್ಸೇ ಇಲ್ಲ, ಆದ್ರೂ ಏಳ್ಲೇಬೇಕು. ಇವತ್ತು ಹೊಸ ಮ್ಯಾನೇಜರ್ ಬರುವವನಿದ್ದಾನೆ. ಆದ್ದರಿಂದ ಆಫೀಸಿಗೂ ತಪ್ಪಿಸುವ ಹಾಗಿಲ್ಲ. ಪ್ರತಿ ಸಾರಿ ರಘು ಜೊತೇಲಿ ಮಲಗಿದಾಗ್ಲು ಇದೇ ಗೋಳು. ಒಳ್ಳೆ ಜ್ವರ ಬಂದ ಹಾಗೆ ಮೈಯೆಲ್ಲಾ ಆಲಸ್ಯದಿಂದ ತುಂಬಿರುತ್ತೆ. ಪಕ್ಕಕ್ಕೆ ತಿರುಗಿದರೆ ಅವನು ಹಾಯಾಗಿ ಮಲಗಿದ್ದಾನೆ. ಮುಖ ನೋಡಿದರೆ ಎಷ್ಟೊಂದು ಮೆದು. ಆದರೆ ಹಾಸಿಗೇಲಿ ಅಷ್ಟೇ ಒರಟ. ಆ ಒರಟುತನಕ್ಕೇ ಜೀವ ರೋಸಿಹೋಗಿದೆ. ಆದರೂ ಅವನೆಂದರೆ ಬಲು ಪ್ರೀತಿ, ವಿಶ್ವಾಸ. ಅವನ ರೀತಿಯೇ ವಿಚಿತ್ರ, ಅವನು ಪ್ರೇಮಿಯೋ, ಕಾಮಿಯೋ ಎನ್ನುವ ಅನುಮಾನ ಹುಟ್ಟುತ್ತದೆ ಕೆಲವೊಮ್ಮೆ. ಮನಸ್ಸು ಕಾಮಕ್ಕೆ ನಿಂತಾಗ ಬಹುಶಃ ಪ್ರೇಮದ ಆ ಸವಿ ಬೇರೆಯೇ ಏನೋ. ಸ್ನೇಹ, ಸಲುಗೆ, ಕಣ್ಣಂಚಿನ ನೋಟ, ತುಟಿಯಂಚಿನ ನಗು, ಮನದಾಳದ ಮಾತು ರಂಗು ಕಳೆದು ಬೆಲೆಯೇ ಇಲ್ಲದಂತೆ ಆಗುವುದೋ ಏನೋ ಕ್ರಮೇಣ.......

ಅಪ್ಪನ ತಂಗಿಯ ಮಗ ರಘು. ಮಾವ ಹಣವಂತ. ಅಪ್ಪ ಸತ್ತ ನಂತರ ಕುಟುಂಬಕ್ಕೆ ದಿಕ್ಕಾದ. ಅಕ್ಕನ ಮದುವೆ, ತಮ್ಮನ ವಿದ್ಯಾಭ್ಯಾಸ, ಅವಳ ಕೆಲಸ ಎಲ್ಲಕ್ಕೂ ಜವಾಬ್ದಾರನಾದ. ಅವನ ಋಣವೂ ಅವರ ಮೇಲಿತ್ತು. ಎಂದೋ ಮದುವೆಯಾಗಿ ಹೋಗಬೇಕಿತ್ತು. ಆದರೆ ತೊನ್ನಿದ್ದ ರಘುವಿನ ತಂಗಿಯ ಸಲುವಾಗಿ ಮುಂದಕ್ಕೋಗುತ್ತಲೇ ಇತ್ತು. ಇವನೂ ಏನು ಮದುವೆಗೆ ಅಂತಹ ಅವಸರ

ವ್ಯಕ್ತಪಡಿಸುತ್ತಿರಲಿಲ್ಲ. ಆದರೆ ಇವಳ ಮನದಲ್ಲಿ ಆ ಬಯಕೆ ಆಗಾಗ ಮೂಡುತ್ತಿತ್ತು. ಆ ಮೊರೆ ದೇವರಿಗೆ ಕೇಳಿಸಿತೋ ಎಂಬಂತೆ ಪುಣ್ಯಾತ್ಮನೊಬ್ಬ ತಂಗಿಗೆ ತೊನ್ನಿದ್ದರೂ ಪರ್ವಾಗಿಲ್ಲ ಮದುವೆಗೆ ಸಿದ್ಧ ಎಂದು ಮುಂದೆ. ಹಿರಿಯರೆಲ್ಲಾ ಸೇರಿ ಎರಡೂ ಲಗ್ನ ಒಟ್ಟಿಗೆ ಮಾಡಲು ನಿಶ್ಚಯಿಸಿ, ನಿಶ್ಚಿತಾರ್ಥದ ಉಂಗುರಗಳು ಇವರುಗಳ ಬೆರಳುಗಳನ್ನು ಅಲಂಕರಿಸಿ ಆಗಲೇ ವರ್ಷವಾಗುತ್ತ ಬರುತ್ತಿದೆ...

ಮುಂದೆ ಬಿದ್ದಿರುವ ಫೈಲುಗಳನ್ನು ನೋಡಿ ತಲೆ ಸಿಡಿತ ಹೆಚ್ಚಾಗುತ್ತ ಹೋಗುತ್ತಿದೆ. ಪಕ್ಕದ ಟೇಬಲಿನಲ್ಲಿದ್ದ ಸರಸು

"ಯಾಕೆ ಮೈತ್ರ ಒಂಥರಾ ಇದ್ದೀ? ಇತ್ತೀಚೆಗಂತೂ ನೀನು ತುಂಬಾ ಡಲ್ಲಾಗಿರ್ತಿ. ಮೊದಲಿನ ಆ ಹಸನ್ಮುಖ, ಉಲ್ಲಾಸ, ಲವಲವಿಕೆ ಎಲ್ಲೋಯ್ತೇ.....?"

ಎಂದು ಕೇಳಿದಾಗ ನೀರಸ ನಗುವೇ ಅದಕ್ಕೆ ಪ್ರತಿಕ್ರಿಯೆ.

"ಇವೊತ್ತು ಹಾಸ್ಟೆಲ್ಲಿಗೆ ಬರ್ತಿಯೋ ಹ್ಯಾಗೆ? ಫಸ್ಟ್ ಶೋ ಸಿನಿಮಾಗಾದ್ರ ಹೋಗೋಣ....."

ಎಂಬ ಸರಸು ಮಾತಿಗೆ ಬರೀ

"ಇಲ್ಲ......."

ಎಂಬ ಉತ್ತರ ಸಿಕ್ಕಾಗ ಮಾತು ಮುಂದುವರಿಯಲಿಲ್ಲ.

ತಿಂಗಳಲ್ಲಿ ಇಪ್ಪತ್ತೈದು ದಿನಗಳು ಬಿಸಿನೆಸ್ ಟೂರ್ ಎಂದು ಹೊರಗೇ ಉಳಿಯುವ ರಘು ಈಗೊಂದು ಎಂಟು ದಿನ ಫ್ರೀ ಎಂದಿದ್ದ. ಸಂಜೆ ಅವನ ಸ್ನೇಹಿತನ್ಯಾರೋ ಒಬ್ಬನಿಗೆ ಊಟಕ್ಕೆ ಆಹ್ವಾನವಿದ್ದರಿಂದ ರಾತ್ರಿಗೆ ವಿಶೇಷ ಅಡುಗೆಯಾಗಬೇಕಿತ್ತು. ಇರುವುದೇನೋ ಹಾಸ್ಟೆಲ್‌ನಲ್ಲೇ ಆದರೂ ರಘು ಊರಿನಲ್ಲಿ ಇದ್ದಾಗ, ಅವನು ಇರುವಷ್ಟು ದಿನಗಳೂ ಅವನ ಮನೇಲೇ ಬಿಡಾರ. ಹಾಸ್ಟೆಲ್ ವಾರ್ಡನ್ ಅವನಿಗೆ ಚೆನ್ನಾಗಿ ಪರಿಚಯವಿದ್ದರಿಂದ ಯಾವ ನಿರ್ಬಂಧವೂ ಇರಲಿಲ್ಲ. ಹಳ್ಳಿಯಲ್ಲಿರುವ ಹಿರಿಯರಿಗೆ ಈ ಯಾವ ವಿಷಯಗಳು ತಿಳಿಯುವಂತಿರಲಿಲ್ಲ. ಒಂದು ವೇಳೆ ತಿಳಿದರೂ

"ಯಾಕ್ಹೀಗೆ.....'

ಎಂದು ಕೇಳುವ ಗಟ್ಟಿತನ ಯಾರಿಗೂ ಇಲ್ಲ. ಹಾಗಾಗಿ ಮನೆಯಲ್ಲಿ ಗೊತ್ತಾದರೇ ಎಂಬ ಅಳುಕು, ಹೆದರಿಕೆ ಇಬ್ಬರಿಗೂ ಇಲ್ಲ. ಆದರೂ ರಘುವಿನ ಮನೆಯಲ್ಲಿ ಉಳಿಯುವ ಅಭ್ಯಾಸವಿಲ್ಲದ ಮೊದಲಿಗೆ ಆ ಒಡನಾಟಕ್ಕೆ ಒಂದು ಅರ್ಥವಿತ್ತು. ರಘು ಒಳ್ಳೆ ಮಾತುಗಾರ. ಆ ಮಾತು ಕೇಳುವುದೇ ಒಂದು ಆನಂದ. ಅವನ ಎದೆಗೊರಗಿ, ಆ ಮಾತುಗಳನ್ನು ಕೇಳುತ್ತಿದ್ದರೆ ಪ್ರಪಂಚದ ಪರಿವೇ ಇರುತ್ತಿರಲಿಲ್ಲ. ಅದು ಅತ್ಯಂತ ಪ್ರಿಯವಾದದ್ದು ಹೌದು. ಆಫೀಸಿಗೆ ರಜೆ ಹಾಕಿ, ದಿನವಿಡೀ ಊರೆಲ್ಲಾ ಸುತ್ತಾಡಿ, ಮನದಣಿಯೆ ಮಾತಾಡಿ, ರಾತ್ರಿ ಹಾಸ್ಟೆಲ್ಲಿಗೆ ಹಿಂದಿರುಗಿ ಕಣ್ಮುಚ್ಚಿದರೆ ಸುಂದರ ಸ್ವಪ್ನಗಳು! ಈಗಿನಂತೆ ದಿನಗಳು ಕುಂಟುತ್ತಾ ಸಾಗುತ್ತಿರಲಿಲ್ಲ, ಆಗ ಹಾರುತ್ತಾ ಹೋಗುತ್ತಿದ್ದವು.

ಎಂದಿನಂತೆ ಬಸ್ಸಿಗಾಗಿ ಕಾಯದೆ ಆಟೋ ಹಿಡಿದು ಮನೆ ತಲುಪಿದಾಗ ರಘು ಮನೆಯಲ್ಲೇ ಇದ್ದ. ಅಡುಗೆಯ ತಯಾರಿಗೆ ಸಹಾಯ ಮಾಡುತ್ತ ಮಾತಿಗೆ ತೊಡಗಿದ.

"ನೋಡು ಮೈತ್ರ, ನಿಂಗೆ ಭರತ್ ಇಷ್ಟ ಆಗ್ಲಿಲ್ಲಾಂದ್ರೆ ನನ್ನ ಬೈಬೇಡ. ಅವ್ನು ನಿಂಗೆ ಇಷ್ಟ ಆಗೋದೂ ಇಲ್ಲ ಬಿಡು. ತುಂಬಾ ಖಯಾಲಿ ಮನುಷ್ಯ. ನಂಗೆ ಅವ್ನು ಬಾಂಬೇಲಿ ಪರಿಚಯ ಆಗಿದ್ದು. ಅವ್ನಿಗೆ ಅಪ್ಪ, ಅಮ್ಮ ಹಿಂದೆ ಮುಂದೆ ಯಾರೂ ಇಲ್ಲ. ದಿಕ್ಕಿಲ್ದೆ ಇರೋ ಒಬ್ಬ ವಯಸ್ಸಾದ ಹೆಂಗ್ಸಿದ್ದಾಳೆ. ಸದ್ಯಕ್ಕೆ ಅವ್ನಿಗೆ ಆಕೇನೇ ಎಲ್ಲಾ. ನೀನು ನಂಬ್ತಿಯೋ ಇಲ್ವೋ ಮೈತ್ರ ಅವ್ನಿಗೆ ದಿನಕ್ಕೊಬ್ಬ ಹುಡ್ಗಿ ಬೇಕು! ಮತ್ತೆ ಒಂದು ಹುಡ್ಗಿ ಜೊತೆ ಒಂದ್ಸಾರಿ ಮಲ್ಗಿದ್ರೆ ಮುಗೀತು ಇನ್ನೊಮ್ಮೆ ಆಕೆ ಕಡೆಗೆ ಕಣ್ಣೆತ್ತಿ ಸಹ ನೋಡೋಲ್ಲ. ಇದುವರಗೂ ಅವ್ನು ಕಣ್ಣಿಟ್ಟ ಯಾವುದೇ ಹುಡ್ಗಿ ಅವ್ನಿಂದ ತಪ್ಪಿಸ್ಕೊಳ್ಳೋಕೆ ಸಾಧ್ಯವಾಗಿಲ್ಲ. ಹೇಗಾದ್ರು ಅವರ್ನ ಬಲೆಗೆ ಬೀಳಿಸ್ತಾನೆ, ಬಡ್ಡೀಮಗ......! ಸಕತ್ ಎಂಜಾಯ್ ಮಾಡ್ತನೆ ಲೈಫ್‌ನ........."

ಕೊನೆಯ ಮಾತು ಆಶ್ಚರ್ಯ ತರಿಸಿದ್ರೂ ತೋರಿಸಿಕೊಳ್ಳದೆ

"ದಿನಕ್ಕೊಂದು ಹೆಣ್ಣಿನ್ನ ಹಾಳ್ಮೋಡುವ ಬದ್ಲು ಯಾರ್ನಾದ್ರೂ ಮದ್ವೆಯಾಗಿ ಸಂಸಾರ ಮಾಡ್ಬಹುದಲ್ಲಾ...." ಎಂದಾಗ ರಘು ಜೋರಾಗಿ ನಕ್ಕ.

ಅಷ್ಟರಲ್ಲಿ ಹೊರಗೆ ಗೇಟಿನ ಸದ್ದಾಗಿ ಅತ್ತ ಹೊರಡುತ್ತಾ ಹೇಳಿದ.

"ಅವ್ನೆ ಬಂದಾಂತ ಕಾಣುತ್ತೆ..... ಸಾಯೋವರ್ಗೂ ಒಂದೇ ಹೆಣ್ಣಿಗೆ ಜೋತು ಬೀಳೋರೆಲ್ಲ ಫೂಲ್ಸ್ ಅಂತಾನೆ ಅವ್ನು. ಅವ್ನೆದುರ್ಗೆಯಲ್ಲಾದ್ರು ಹಾಗೇ ಮಾತಾಡ್ಬಿಟ್ಟೀಯೆ ಮತ್ತೆ......." ರಘುವಿನ ಬಾಯಲ್ಲಿ ಇಂತಹ ಮಾತುಗಳನ್ನು ಕೇಳಿ ಮನಸೇಕೋ ಮುದುಡಿತು.

ಭರತ್ ಬಾಂಬೆಯಿಂದ ಒಂದು ತಿಂಗಳಾಗುತ್ತ ಬಂದರೂ ತಿರುಗಿ ಹೋಗುವ ಸೂಚನೆಗಳೇ ಕಾಣಲಿಲ್ಲ. ಯಾವಾಗಲೂ ಟೂರ್ ಎಂದು ಬ್ಯುಸಿಯಿರುತ್ತಿದ್ದ ರಘುವೂ ಅವನೊಡನೆ ಫ್ರೀಯಾದ. ಮೊದಲ ಭೇಟಿಯಲ್ಲೇ, ಒಂದೇ ನೋಟಕ್ಕೆ ಮೈತ್ರಳನ್ನು ಅಳೆದುಬಿಟ್ಟವು ಭರತ್‌ನ ಕಣ್ಣುಗಳು. ಎಷ್ಟೇ ಮಾತಾಡಿಸಿದರೂ, ಏನೇ ಕೇಳಿದರೂ ಕೇವಲ ಒಂದೇ ಮಾತಿನಲ್ಲಿ ಉತ್ತರಿಸುವ, ಸದಾ ಗಂಭೀರವಾಗಿರುವ ಆ ವ್ಯಕ್ತಿತ್ವ ಅವನನ್ನು ಆಗಾಗ ಹುಚ್ಚೆಬ್ಬಿಸುತ್ತಿತ್ತು. ರಘುವಿನ ಹೆಂಡತಿಯಾಗುವವಳೆಂದು ಸಂಯಮ ತಂದುಕೊಂಡರೂ ಕೆಲವೊಮ್ಮೆ ರಘು ಆಡುವ ಮಾತುಗಳೇ ಅವನಿಗೆ ಉತ್ತೇಜನ ಕೊಡುವಂತಿರುತ್ತಿದ್ದವು.

"ನಿಜವಾದ ಅರ್ಥದಲ್ಲಿ ಲೈಫ್‌ನ ಎಂಜಾಯ್ ಮಾಡ್ತಿರೋನು ನೀನೇ ಕಣೋ. ಐ ರಿಯಲೀ ಎನ್ವಿ ಯೂ ಯಾರ್........ ಆದ್ರೇನ್ಮಾಡೋದು ನಿನ್ನಷ್ಟು ಧೈರ್ಯ ನನಗಿಲ್ಲ ಬಿಡು. ನೀನ್ಯಾವ್ದೇ ಕಮಿಟ್ ಮಾಡ್ಕೊಳ್ಳೋದಿಲ್ವಲ್ಲಾ......? ಯಾವ್ದೆ ಬಂಧನಕ್ಕೆ ಸಿಕ್ಕೊಳ್ದೆ, ಯಾವೊಂದು ಅಳುಕೂ ಇಲ್ದೆ ಫ್ರೀಯಾಗಿ ಇರೋಕೆ ಹ್ಯಾಗೆ ಸಾಧ್ಯವೋ ನಿಂಗೆ? ಇತ್ತೀಚೆಗೆ ನನ್ನಲ್ಲೇ ಆಗಿರೋ ಬದಲಾವಣೆಗಳನ್ನ ಗಮನಿಸಿದ್ರೆ ನಿನ್ನ ಮಾತುಗಳು ತುಂಬಾ ಸತ್ಯ ಅನ್ಸುತ್ತೆ. ನನ್ನ ಮತ್ತು ಮೈತ್ರ ಸ್ನೇಹ, ಪ್ರೇಮ ಹೆಚ್ಚೂ ಕಮ್ಮಿ ನಾಲ್ಕೈದು ವರ್ಷದ್ದು. ಈಗೊಂದ್ವರ್ಷದಿಂದ ನಮ್ಮಿಬ್ಬರಲ್ಲಿ ದೈಹಿಕ ಸಂಬಂಧಾನೂ ಏರ್ಪಟ್ಟಿದೆ. ಆದರೆ ಈಗೀಗ ಮೊದಲಿನ ಆಸಕ್ತಿ ನನ್ನಲ್ಲಿ ಉಳಿದಿಲ್ಲ. ದಿನೇದಿನೇ ನಮ್ಮ ಸಂಬಂಧ ಹಳಸ್ತ ಇದೆ ಅನ್ಸುತ್ತೆ. ಆಕರ್ಷಣೆ ಇಲ್ದೆ ಹೋದ್ರು ದೇಹದ ಬಯಕೆ ತಡೀಲಾರ್ದೆ ಅನುಭವಿಸ್ತೀನಿ. ಕಮಿಟ್ ಮಾಡ್ಕೊಂಡಿರೋದ್ರಿಂದ ಇದರಿಂದ ತಪ್ಪಿಸ್ಕೊಳ್ಳೋ ಮಾತೇ ಇಲ್ಲ..... ಯಾಕಂದ್ರೆ,

ಮರ್ಯಾದೆ ಪ್ರಶ್ನೆ ನೋಡು. ಅದೂ ಅಲ್ದೆ, ಯಾವತ್ತಿದ್ರೂ ಮದ್ವೆಯಾಗ್ಲೇಬೇಕು. ಇವ್ಳೂ ಒಳ್ಳೆ ಹೆಂಡ್ತಿಯಾಗೋಕೆ ಬಲು ಲಾಯಕ್ಕಾದ ಹುಡ್ಗಿ. ಯಾವೊಂದು ತಂಟೆ ತಗಾದೆ ಇಲ್ದೆ ಹೇಳ್ದಾಗೆ ಕೇಳ್ಕೊಂಡು ಇರೋ ಸ್ವಭಾವದೋಳು.. ಹೀಗೇ ನೋಡೋ ನಮ್ ಲೈಫ್ನಲ್ಲಿ ಯಾವ್ದೇ ಚಾರ್ಮಿಲ್ಲ; ಚೇಂಜಿಲ್ಲ. ಕೇವಲ ಕಟ್ಟುಪಾಡುಗಳ ದಾರಕ್ಕೆ ನೇತಾಡ್ತಿರೋ ಸೂತ್ರದ ಗೊಂಬೆಗಳು ನಾವು ಅಷ್ಟೇ....."

ಬರೀ ನಿಟ್ಟುಸಿರೇ ನಿಟ್ಟುಸಿರು. ಆಗಾಗ ಕಿವಿಗೆ ಬೀಳುವ ಈ ನಿಟ್ಟುಸಿರು 'ಒಂದು ಕೈ ನೋಡಬಾರದೇಕೆ.....?' ಎಂಬ ಬಯಕೆಯನ್ನ ಭರತನ ಮನಸ್ಸಿನಲ್ಲಿ ಹುಟ್ಟಿಸುತ್ತಲೇ ಇದೆ. ಹೆಣ್ಣುಗಳ ವಿಷ್ಯಕ್ಕೆ ಬಂದಾಗ ನೀತಿ, ನಿಯತ್ತು ಯಾವೊಂದೂ ಕಟ್ಟುಪಾಡುಗಳಿಲ್ಲ. ಬೇಕೆಂದರೇ ಮುಗೀತು. ಈ ಜೀವನದಲ್ಲಿ ಬಂದುಹೋದ ಹೆಣ್ಣುಗಳಿಗೆ ಲೆಕ್ಕವಿಲ್ಲ. ಮೋಜಿಗಾಗಿ ಬಂದವರೆಷ್ಟೋ, ಸುಖ ಬಯಸಿ ಬಂದ ಅತೃಪ್ತ ಹೆಣ್ಣುಗಳೆಷ್ಟೋ, ನೇರವಾಗಿ ಬರಲಾರದೆ ಬಲತ್ಕಾರಕ್ಕೊಳಪಟ್ಟಂತೆ ನಟಿಸುತ್ತಾ ಸುಖಪಡುವ ಹೆಣ್ಣುಗಳೆಷ್ಟೋ! ರಘುವಿನ ಮಾತು ಕೇಳಿದರೆ ಆ ಅತೃಪ್ತಿ ಇವಳಲ್ಲೂ ಇದ್ದೇ ಇರಬೇಕು. ಏಕಂದ್ರೆ ಇಬ್ಬರಲ್ಲಿ ಒಬ್ಬರಿಗೆ ಆಸಕ್ತಿ ಕ್ಷೀಣಿಸಿದರೂ ಅದರ ಪರಿಣಾಮ ಇಬ್ಬರ ಮೇಲೂ ಒಂದೇ ರೀತಿಯದ್ದಾಗಿರುತ್ತೆ ಎಂಬುದಂತೂ ಸತ್ಯ.

ಆಕೇನ ಒಲಿಸುವುದು ಕಷ್ಟವಾಗಲಾರ್ದು ಅನ್ನಿಸಿದ್ರೂ ಅಪ್ಪಿತಪ್ಪಿಯೂ ತನ್ನತ್ತ ಕಣ್ಣಾಯಿಸದ ಅವಳ ರೀತಿ ಅವನಿಗೊಂದು ಸವಾಲು. ಆಗಾಗ ಮೈತ್ರಳ ಮೇಲೆ ಹರಿದಾಡುವ ಆ ನೋಟದ ಅರಿವಿದ್ದರೂ ಅರಿಯದವನಂತಿದ್ದ ರಘು. ಅವನದು ಇಬ್ಬಗೆಯ ಮನಸ್ಥಿತಿ. ಭರತನ ಗುಣ ತಿಳಿದೂ ಮಾಡಿರುವ ಸ್ನೇಹವದು. ಆಗಾಗ ಧೂರ್ತ ಯೋಚನೆಗಳೂ ಬಾರದಿರವು. ಮರುಕ್ಷಣ ಆ ಯೋಚನೆ ತಪ್ಪು ಎನಿಸುತ್ತಲೂ ಇತ್ತು. ಅವನ ಮನಸ್ಸೊಂದು ಗೊಂದಲದ ಗೂಡು. ಈ ಮನಸ್ಥಿತಿಯ ಅರಿವು ಇರದಿದ್ದರೂ ಭರತನ ಕೆಟ್ಟ ನೋಟದ ಹೊಂಚು ತಿಳಿಯುತ್ತಿತ್ತು ಮೈತ್ರಾಗೆ. ರಘುವಿನ ಮೌನವೂ ಒಂದು ಒಗಟಿನಂತಿತ್ತು.

ಏನೇ ಆದರೂ ಭರತನಿಗೊಂದು ಅವಕಾಶ ಒದಗಿಯೇ ಒದಗಿತು.

ರಘು ಒಂದು ದಿನದ ಮಟ್ಟಿಗೆ ಹಳ್ಳಿಗೆ ಹೋದ ದಿನ ಮೈತ್ರ ಭರತನ ಕೈಗೆ ಒಂಟಿಯಾಗಿ ಸಿಕ್ಕಳು. ಈ ಅವಕಾಶವನ್ನು ಯಾವುದೇ ಕಾರಣಕ್ಕೂ ಕಳೆದುಕೊಳ್ಳಲು ಅವನು ಸಿದ್ಧನಿರಲಿಲ್ಲ. ಅವಳೂ ಶಕ್ತಿಮೀರಿ ಹೋರಾಡಿದಳು, ಪ್ರತಿಭಟಿಸಿದಳು. ಆದರವನು ಅಷ್ಟೇ ಬಲವಾಗುತ್ತ ಹೋದ. ತುಟಿಯೊಡೆದು, ರಕ್ತ ಸೋರುವಂತೆ ಕೆನ್ನೆಗೊಂದು ಬಾರಿಸಿದಾಗ ಅವನು ಪಶುವಾದ. ಬಲವೆಲ್ಲ ಸೋರಿ, ದೇಹ ದಣಿದು ನಡೆಯುವುದರಿಂದ ತಪ್ಪಿಸಿಕೊಳ್ಳಲು ಅಸಾಧ್ಯ ಎಂಬ ಸತ್ಯ ನಿಚ್ಚಳವಾಗಿ, ಮನಸ್ಸು ಶರಣಾಗತಿ ಬಯಸಿತು. ಬಲಾತ್ಕಾರದಿಂದ ನಡೆಯುವುದೂ ಅದೇ, ಒಪ್ಪಿಕೊಂಡರೆ ನಡೆಯುವುದು ಅದೇ! ಒಪ್ಪಿಕೊಂಡರೆ ಹಿಂಸೆಯೆನಿಸದು ಎನ್ನಿಸಿದಾಗ ಒಳಗಿನ ಕೋಲಾಹಲ ಕ್ಷೀಣಿಸಿ, ಮೆಲ್ಲಮೆಲ್ಲಗೆ ಧೈರ್ಯ ಮೂಡಿ ಬಂದು ಮಿಸುಕಾಡದೆ ನಿಂತರೂ ಒರಟು ಕೈಗಳಲ್ಲಿ ಸಿಕ್ಕ ದೇಹ ನಲುಗಿ, ಅವನ ಹಲ್ಲುಗಳು ಕೆನ್ನೆಯಲ್ಲಿ ಆಳವಾಗಿ ಇಳಿದಾಗ

"ಅಮ್ಮಾ......"

ಎಂಬ ಚೀತ್ಕಾರದೊಡನೆ, ನೋವಿಗೆ ಕಣ್ಣುಗಳಲ್ಲಿ ಉಕ್ಕಿದ ನೀರು ಕೆನ್ನೆಯ ಮೇಲಿಳಿದವು. ರೋಷ ಹೆಪ್ಪುಗಟ್ಟಿದ್ದ ಆ ಮುಖ ಮತ್ತೊಮ್ಮೆ ಅದೇ ಕೆನ್ನೆಯತ್ತಲೇ ಬಾಗಿದಾಗ ಮೈಯೊಮ್ಮೆ ಅದುರಿತು. ನಡುಗುತ್ತಾ ಹೊರಬಂದವು ಮಾತುಗಳು.

"ಪ್ಲೀಸ್ ರೀ.... ಪ್ಲೀಸ್, ಪ್ಲೀಸ್..... ದಯವಿಟ್ಟು, ದಯವಿಟ್ಟು ಈ ರೀತಿ ಮಾತ್ರ ನೋಯಿಸ್ಬೇಡಿ......"

ಇದನ್ನು ಆಲಿಸಿದ್ದೆ ಸೊಟ್ಟಗಾದ ತುಟಿಗಳನ್ನು ಕಂಡು ಹೆಚ್ಚಿದ ಅಧೀರತೆಯಿಂದ ಕಣ್ಗಳು ಬಿಗಿಯಾಗಿ ಮುಚ್ಚಿ, ಅವುಡುಗಚ್ಚಿ, ಮೈಯೆಲ್ಲಾ ಬಿಗಿದು, ಎರಡೂ ಪಕ್ಕಕ್ಕೆ ಕೈಗಳು ಬಟ್ಟೆಯನ್ನು ಮುಷ್ಠಿ ಹಿಡಿದು ನಡುಗುತ್ತಾ ನಿಂತ ಆ ಭಂಗಿ ಅವನಿಗೆ ತೀರಾ ಹೊಸದು. ಸ್ವಲ್ಪ ಹೊತ್ತು ಹಾಗೇ ನೋಡುತ್ತಿದ್ದಾಗ ಏನೋ ಎಂತೋ ಆ ಭಂಗಿ ಅವನೊಳಗೆ ಇದುವರೆಗೂ ತಿಳಿಯದ ಹೊಸ ಭಾವನೆಯೊಂದು ಮೂಡಿಸಿ, ಹೆಪ್ಪುಗಟ್ಟಿದ್ದ ರೋಷವನ್ನು ಕರಗಿಸುತ್ತಾ, ಒರಟನ್ನು ಮೆದುವಾಗಿಸಿ, ಕೆಂಪಗಾಗಿದ್ದ ಕೆನ್ನೆಯನ್ನು ಸವರುತ್ತಾ, ದೇಹವನ್ನು ತೋಳುಗಳೊಳಕ್ಕೆ ಸೆಳೆದಿತ್ತು. ಮೃದುವಾದ, ದೀರ್ಘ ಚುಂಬನ ಇದುವರೆಗೂ ಅದುರುತ್ತಿದ್ದ ದೇಹವನ್ನು ಬೆಚ್ಚಗಾಗಿಸಿ, ಹಗುರಾಗಿಸಿ ಮೈಮರೆಸಿತು.

ಸರಸಳಿಗಂತು ಆಶ್ಚರ್ಯವೋ ಆಶ್ಚರ್ಯ. ಎರಡು ವರ್ಷದ ಹಿಂದಿನ ಆ ಮೈತ್ರ ದಿಢೀರೆಂದು ಎಲ್ಲಿಂದಿಳಿದಳು!

"ಏನೇ ವಿಷ್ಯ? ಮುಖದ ತುಂಬಾ ನಗು ಹರಡ್ಕೊಂಡು ಓಡಾಡ್ತಿದ್ದಿಯಲ್ಲಾ.....!? ಮುಖದಲ್ಲಿ ಅಷ್ಟೊಂದು ಗೆಲುವು, ಕಣ್ಣಲ್ಲಿ ಹೊಳಪು ಏನಸಮಾಚಾರ? ಯಾರೋ ಹೊಸಬರನ್ನ ನೋಡ್ದಾಗೆ ಅನ್ನಿಸ್ತಿದೆ.......!"

ಈ ಮಾತು ಕೇಳಿದ್ದೇ ತೃಪ್ತಿಯ ನಗೆಯರಳಿತು ಮೈತ್ರಳ ಮುಖದಲ್ಲಿ. ಅವಳೊಳಗೆ ಉಕ್ಕುತ್ತಿದ್ದ ಉತ್ಸಾಹ, ಸಂಭ್ರಮ, ಉಲ್ಲಾಸ ಅವಳಿಗೇ ಒಂದು ಒಗಟು. ಆ ದಿನದ ಘಟನೆಯ ಬಗ್ಗೆ ಎಷ್ಟೇ ಯೋಚಿಸಿದರೂ ಜಾರಿದೆನೆಂದೋ, ಕಳಂಕಿತಳಾದೆ ಎಂದೋ ಅನ್ನಿಸುತ್ತಲೇ ಇಲ್ಲ. ಹಾಗೇ ನೋಡಿದರೆ ರಘುವಿನೊಡನೆ ಮೊದಮೊದಲು ಸೇರಿದಾಗ ಎಷ್ಟೊಂದು ಸಂಕೋಚ, ಅಳುಕು, ತಪ್ಪು ಮಾಡುತ್ತಿರುವೆನೆಂಬ ಭಾವನೆ ಸದಾ ಕೊರಗಿಸುತ್ತಿತ್ತು. ಆದರೆ ಇಲ್ಲೇನೋ ಬದಲಾವಣೆ. ಭರತನೆಂದರೇ ಹೇಸಿಕೊಳ್ಳುತ್ತಿದ್ದ ಮನಸ್ಸು ಅಂದು, ಇಷ್ಟವಿಲ್ಲದೆ ಹೋದರೂ ಕೇವಲ ತಪ್ಪಿಸಲಾಗದಲ್ಲಾ ಎಂಬುದಕ್ಕೆ ಒಪ್ಪಿಕೊಂಡು ಪೂರ್ಣ ಮೈಮರೆತು, ಅವನಲ್ಲಿಯೇ ಸೇರಿಹೋಗಿದ್ದು ಒಂದು ಪವಾಡದಂತೆ ತೋರುತ್ತಿತ್ತು. ರಾತ್ರಿಯೆಲ್ಲಾ ಮೈಮರೆಸಿ, ಬೆಳಗ್ಗೆ ಕಣ್ಬಿಡುವುದರಲ್ಲಿ ಮರೆಯಾಗಿದ್ದವನು.

ಒಬ್ಬ ವುಮನ್ಯೆಸರ್‌ನಿಂದ ಇನ್ನೇನು ತಾನೆ ನಿರೀಕ್ಷಿಸಲು ಸಾಧ್ಯ? ಅಲ್ಲದೆ, ಕೇವಲ ಜೊತೇಲಿ ಮಲಗಿದ್ದಕ್ಕೆ ಏನನ್ನಾದರೂ ನಿರೀಕ್ಷಿಸಿದರೆ ಅದಕ್ಕಿಂತ ಮೂರ್ಖತನ ಇನ್ನೇನಿದ್ದಿತು? ಇದರ ಬಗ್ಗೆ ಹೆಚ್ಚಿಗೆ ತಲೆ ಕೆಡಿಸಿಕೊಳ್ಳಲಿಲ್ಲ. ಯಾಂತ್ರಿಕ ಜೀವನಕ್ಕೆ ಸಿಕ್ಕು ಜಡ್ಡುಗಟ್ಟಿದ್ದ ಮೈಮನಸ್ಸು ಹೊಸತನ ಕಂಡುಕೊಂಡಿದ್ದೆ ಸಂತೃಪ್ತಿ. ರಘುವಿಗೆ ತಿಳಿಸುವ ಅಗತ್ಯವಿಲ್ಲ ಎನಿಸಿತು; ತಿಳಿಸಲಿಲ್ಲ.

ಆದರೆ ರಘುವೇಕೋ ಮಂಕಾಗಿದ್ದ. ಮದುವೆಯ ದಿನ ಹತ್ತಿರ ಬರುತ್ತಿತ್ತು. ಅದರ ಪಾಡಿಗದು ಬರುತ್ತಿತ್ತೆ ಹೊರತು ಇಬ್ಬರಲ್ಲೂ ಅದರ ನಿರೀಕ್ಷೆಯಾಗಲಿ, ಅದರ ಸಂಭ್ರಮವಾಗಲಿ ಇರಲಿಲ್ಲ. ಬರೀ ನಿರ್ಲಿಪ್ತ, ನಿರ್ವಿಕಾರ ಮನೋಭಾವ ಜೀವನವಿಡೀ ಒಂದಾಗಿರಲು ಹೊರಟಂತಿತ್ತು. ಭರತ್ ರಘುವಿನೊಡನೆ ಮಾತಾಡಿರಬಹುದೆ? ಎಂದು ಕೆಲವೊಮ್ಮೆ ಅನ್ನಿಸುತ್ತಿತ್ತು. ಹಾಗೆಯೇ ಆಯ್ತು. ಒಂದು ದಿನ ರಘು ಬಂದವನೆ

"ನಿನ್ನೊಡನೆ ಮಾತಾಡ್ಬೇಕು. ಮತ್ತೆ ನಂಗೆ ಸತ್ಯ ತಿಳೀಬೇಕು. ನೀನು ಸತ್ಯನೇ ಹೇಳ್ತಿಯಾಂತ ನಂಬಿದ್ದೀನಿ......" ಎಂದಾಗ ಯಾವುದೇ ಅಳುಕಿಲ್ಲದೆ ಮಾತಿಗೆ ತೊಡಗಿದಳು.

"ನಾನು ಹಳ್ಳಿಗೆ ಹೋದ ದಿನ ನಡೆದದ್ದೆಲ್ಲಾ ಭರತ್ ತಿಳಿಸಿದ. ಆವತ್ತು ನಡೆದದ್ದು ನಿಜಾನಾ..........?"

"ಹೌದು ನಿಜ"

"ನಾನು ಬರೋಲ್ಲಾಂತ ಗೊತ್ತಾದ್ಮೇಲೆ ಹಾಸ್ಟೆಲ್ಲಿಗೆ ಹೋಗ್ಬಹುದಿತ್ತಲ್ಲಾ........"

"ನಾನು ಬಂದೇಬರ್ತೀನಿ ಎಷ್ಟೊತ್ತಾದ್ರೂ ನೀನು ಇಲ್ಲೇ ಕಾಯ್ತಿರು ಅಂತ ಹೇಳಿ ಹೋದೋನು ನೀನೇ ತಾನೆ?" ಮೊನಚಾಗಿತ್ತು ಸ್ವರ. ಅರೆಕ್ಷಣ ಮೌನದ ನಂತರ ತಡವರಿಸುತ್ತ ಬಂದವು ಮಾತುಗಳು.

"ಅವನ್ಜೊತೆ ಸಹಕರಿಸದ್ಯಂತೆ....."

"ಹೌದು. ಯಾಕಂದ್ರೆ ನಂಗೆ ಬೇರೆ ದಾರಿ ಇರ್ಲಿಲ್ಲ. ನಾನು ಸಹಕರಿಸ್ದೆ ಇದ್ದದ್ರೂ ನನ್ನೇನು ಅವ್ನು ಬಿಡ್ತಿರ್ಲಿಲ್ಲ"

"ಅರೆ! ಎಷ್ಟು ಕೂಲಾಗಿ ಹೇಳ್ತಿಯಲ್ಲಾ.........? ಬಿಡ್ದೆ ಇದ್ರೆ ಹೋರಾಡ್ಬೇಕಿತ್ತು. ಶೀಲ ಕಾಪಾಡ್ಕೊಳ್ಳೋಕೆ ಪ್ರಾಣನೇ ತೆಗಿತಾರೆ... ಪ್ರಾಣನೇ ಕೊಡ್ತಾರೆ... ಅಂತದ್ರಲ್ಲಿ ನೀನು ವಿಚಿತ್ರವಾಗಿ ಮಾತಾಡ್ತಿಯೇ..?"

"ವಿಚಿತ್ರ ಏನಿಲ್ಲ. ನಾನು ಹೋರಾಡಿದಷ್ಟೂ ಅವ್ನು ಬಲವಾಗ್ತಿದ್ದ. ಅವನಾಸೆ ಹೆಚ್ಚಾಗ್ತಿತ್ತು. ಅಲ್ದೆ ಅವ್ನ ಪ್ರಾಣ ತಗೀಯೋಷ್ಟು ಶಕ್ತಿ ನನಗಿಲ್ಲ. ಮತ್ತೆ ಇಂತಹ ಕ್ಷುಲ್ಲಕ ವಿಚಾರಕ್ಕೆ ಪ್ರಾಣ ತಕ್ಕೊಳಷ್ಟು ಮೂರ್ಖಳಲ್ಲ ನಾನು.........." ತಣ್ಣಗಿತ್ತು ಸ್ವರ. ಆದರೆ ಅವ್ನು ಆವೇಶಗೊಂಡಿದ್ದ.

"ಹೌದೌದು, ನೀನು ಮೂರ್ಖಳಲ್ಲ. ಆದ್ರೆ ನನ್ನ ಮೂರ್ಖನ್ಮಾಡ್ದೆ. ದಿಸಿಸ್ ನಾಟ್ ಎ ರೇಪ್! ಅಂಡರ್‌ಸ್ಟ್ಯಾಂಡಿಂಗ್ ಮೇಲೇ ಆಗಿರೋದು! ಸೊ, ಯು ವಾಂಟೆಡ್ ದಿಸ್....... ಯು ವಾಂಟೆಡ್.......!"

"ಒಪ್ಗೊಂಡೇ ಅಂದಾಕ್ಷಣ ಅದು ನಂಗೇ ಬೇಕಾಗಿತ್ತು ಅನ್ನೋದು ತಪ್ಪು. ಕೇವಲ ಹಿಂಸೆಯಿಂದ ಮುಕ್ತಳಾಗೋಕೆ ಒಪ್ಕೊಂಡಿದ್ದು ಹೌದು. ಆದರೆ ಏನೇ ತಲೆಕೆಳಗಾಗಿದ್ರೂ ಆ ದಿನ ಅಲ್ಲಿಂದ ತಪ್ಪಿಸಿಕೊಳ್ಳೋಕ್ಕೆ ಸಾಧ್ಯವೇ ಇರ್ಲಿಲ್ಲ ಅನ್ನೋದು ಕಟುಸತ್ಯ. ನಂಗೆ ಈಗ್ಲೂ ಒಂದೊಂದ್ಸಾರಿ ಅನ್ಸುತ್ತೆ ಅವ್ನು ಹ್ಯಾಗೋ ನಾನೊಬ್ಳೆ ಇರೋದು ಪತ್ತೆ ಮಾಡಿದ್ದಾನೇಂತ....." ಈ ಮಾತು ಕೇಳಿದ್ದೇ ಆವೇಶವೆಲ್ಲಾ ಜರ್ರನಿಳಿಯಿತು. ಆದರೂ ಬಿಡಲಿಲ್ಲ.

"ಹೋಗ್ಲಿ ಬಿಡು ಅದೆಲ್ಲ ಸರಿ......... ಆದ್ರೆ ನನ್ನತ್ರ ಮುಚ್ಚಿಟ್ಟದ್ದಕ್ಕೇನು ಕಾರಣ?"

"ಏನೂ ಕಾರಣವಿಲ್ಲ. ನಮ್ಮಿಬ್ಬರ ಮನಸ್ಸೇ ಒಂದಾಗಿರುವಾಗ ಈ ಕ್ಷಣಿಕವಾದ್ದಕ್ಕೆ ನೀನೇನು ಮಹತ್ವ ಕೊಡೋಲ್ಲ ಅಂದ್ಕೊಂಡೆ. ರಘು, ನಿನ್ನ ವೇನಲ್ಲೇ ಹೋದ್ರೂ.. ತಪ್ಪಿಸಿಕೊಳ್ಳೋಕೆ ಆಗ್ದೆ ಇದ್ದದ್ದನ್ನ ಒಪ್ಪಿಕೊಂಡದ್ದಕ್ಕೆ ನಾನೇ ಹೊಣೆ ಅಂತಾದ್ರೆ.. ಅವ್ನ ಗುಣ ತಿಳ್ದೂ, ಅವ್ನ ನೋಟ ನನ್ನ ಅಳೀತಿದ್ದು ಗೊತ್ತಿದ್ದೂ, ಅವ್ನನ್ನ ನನ್ನ ಹಿಂದೆಮುಂದೆ ಕರ್ಕೊಂಡು ಓಡಾಡಿ, ಆ ತಪ್ಪಿಸ್ಕೊಳ್ಳೋಕೆ ಆಗ್ದೆ ಇದ್ದಂತ ಅಥ್ವಾ ನಾನು ಒಪ್ಕೊಳ್ಳೋ ಅಂತಹ ಸನ್ನಿವೇಶ ಸೃಷ್ಟಿಯಾಗೋಕೆ ನೀನೂ ನನ್ನಷ್ಟೆ ಹೊಣೆ ಅಂತ ಅನ್ನಿಸೋಲ್ವಾ...?" ನೇರವಾದ ಪ್ರಶ್ನೆಗೆ ಮುಖದಲ್ಲಿ ಬೆವರೊಡೆದರೂ ಅದನ್ನ ಒರೆಸುತ್ತ "ಇಲ್ಲಾ.........."

ಎಂದು ಮಾತು ಮುಗಿಸಿಬಿಟ್ಟ.

ರಘುವಿಗಿಂದು ಸಂಭ್ರಮವೋ ಸಂಭ್ರಮ. ಕೂತಲ್ಲಿ, ನಿಂತಲ್ಲಿ ಕನಸು.. ಬರೀ ಕನಸು.. ಸುಖದ ಕನಸು. ಈ ದಿನ ಪ್ರಥಮ ರಾತ್ರಿಯ ಶುಭದಿನ. ಆರತಿಯೆಲ್ಲಾ ಅದೇ ತಾನೇ ಮುಗಿದು ಇನ್ನೇನು ಸಜ್ಜೆಮನೆಗೆ ಹೊರಡುವವನಿದ್ದ.

ಹೊರಬಾಗಿಲಲ್ಲಿ ಪ್ರತ್ಯಕ್ಷನಾದ ಭರತ್ "ಕಂಗ್ರಾಜ್ಯುಲೇಷನ್ಸ್ ರಘೂ! ಸ್ಸಾರಿ ಮದ್ವೆ ದಿವ್ಸ ಬರೋಕಾಗ್ಲಿಲ್ಲ.........."

"ಪರ್ವಾಗಿಲ್ಲ ಬಿಡು, ನೀನ್ ಬರೋಲ್ಲಾಂತ ನಂಗೂ ಗೊತ್ತಿತ್ತು. ಸದ್ಯ ಇವತ್ತಾದ್ರೂ ಬಂದ್ಯಲ್ಲ ಬಾ ಊಟ ಮಾಡ್ಬಾ...." ಅವ್ನ ಹೆಗಲ ಸುತ್ತ ಕೈಯ್ಯಾಕಿ ಅವನನ್ನ ಒಳಗೆ ಕರೆದೊಯ್ದ.

ಇಬ್ಬರೇ ಕೂತಾಗ ಭರತ್ ಕಾರ್ಡ್ ಒಂದು ತೆಗೆದುಕೊಟ್ಟ. ಬಲು ಆಶ್ಚರ್ಯದಿಂದ ಉದ್ಗಾರ ತೆಗೆದ ರಘು

"ಯಾರ್‍ದೊ ಮದ್ವೇ......?! ನಿಂದಾ.........?!"

ಇಡೀ ಮನೆಯೊಮ್ಮೆ ಗಿರ್ರನೆ ಸುತ್ತಿ ನಿಂತಂತಾಯ್ತು ಒಳಗೆ 'ಭರತ್ ವಿತ್ ಮೈತ್ರ' ಎಂದಿದ್ದದ್ದು ಕಂಡು.

"ನಂಗೊತ್ತೋ ರಘು ನಿಂಗೆ ತುಂಬಾ ಶಾಕ್ ಆಗುತ್ತೇಂತ. ಅದೇನೋ ಏನೋ ಆ ದಿನ ಅವ್ಳು ಹೋರಾಡಿದ್ದು... ಹೆದರಿದ್ದು... ಕಡೆಗೆ ನನಗೆ ತನ್ನನ್ನ ಒಪ್ಪಿಸ್ಕೊಳ್ತಾಹೋಗಿದ್ದು... ಇದೆಲ್ಲಾ ನನಗೆ ತೀರಾ ಹೊಸ್ದು. ಅವ್ಳು ನನ್ನ ಒಪ್ಕೊಳ್ತಿದ್ದಾಳೆ ಅನ್ನೋ ಭಾವನೇನೆ ನಂಗೆ ಸುಖ ಕೊಡ್ತಿತ್ತು. ಮೈತ್ರ ನನ್ನ ಎಷ್ಟು ಬದಲಾಯಿಸಿದ್ಲು ಅಂದ್ರೆ ಆಮೇಲಿನಿಂದ ಅವ್ಳನ್ನ ಮರೆಯೋಕೆ ಆಗ್ಲಿಲ್ಲ ನಂಗೆ. ಅವ್ಳ ಸ್ನೇಹ ಗಳಿಸ್ಬೇಕು, ಅವ್ಳ ಜೊತೇಲಿ ಮಾತಾಡ್ಬೇಕು, ಅವ್ಳಿಗೆ ಹತ್ತಿರದೋನಾಗ್ಬೇಕು ಅನ್ನೋ ಆಸೆ ದಿನೇದಿನೇ ಹೆಚ್ಚಾಗಿತ್ತು. ಸತ್ಯವಾಗ್ಲು ರಘು, ಮೈತ್ರ ನನ್ನೊಳಗೆ ಸದಾ ನೆಲಸಿದ್ದ ಆ ಅಭಾವ, ಬೇಕುಬೇಕೆನ್ನೋ ಹಾಹಾಕಾರನ ಪೂರ್ತಿಯಾಗಿ ಅಡಗ್ಸಿ ಬಿಟ್ಲು ಅನ್ಸುತ್ತೆ. ನೌ ಐ ಫೀಲ್ ದಟ್ ಐ ಯಾಂ ಫುಲ್ ವಿತಿನ್! ಅದಾದ್ಮೇಲೆ ಬೇರೆ ಹೆಣ್ಣು ಬೇಕನ್ಸಿಲ್ಲ! ನನ್ನ ಇದುವರೆಗಿನ ಜೀವ್ನದ ಪ್ರತಿಯೊಂದು ಕ್ಷಣವನ್ನೂ ಆಕೆಗೆ ತಿಳಿಸಿದ್ದೀನಿ. ನನಗೆ ನಿನ್ ಮನ್ಸು, ನಿನ್ ಪ್ರೀತಿ ಮುಖ್ಯಾಂದ್ಲು. ಏನೋ ಒಂದು ಅಂಡರ್‌ಸ್ಟ್ಯಾಂಡಿಂಗ್ ಮೇಲೆ ಹೊಸಜೀವನ ನಡೆಸೋಕೆ ಇಬ್ರೂ

ರಾಜಿಯಾಗಿದ್ದೀವಿ. ಪ್ಲೀಸ್ ವಿಶ್ ಅಸ್ ಯಾರ್! ನಮ್ಗೆ ಒಳ್ಳೆದಾಗ್ಲಿ, ಕೊನೇವರ್ಗೂ ಜೊತೆಯಾಗಿರ್ಲೀಂತ ಹಾರೈಸೋ.........."

ರಘುವಿನ ಬಾಯಿಂದ ಮಾತೇ ಹೊರಡ್ಲಿಲ್ಲ. ಭರತ್ ಪಕ್ಕನೆ ಏನೋ ನೆನಪು ಮಾಡಿಕೊಂಡು ಹೇಳಿದ

"ಒಂದೇ ಒಂದ್ವಿಷ್ಯ ಮುಚ್ಚಿಟ್ಟೆ ಅವ್ಳತ್ರ. ಏನ್ಗೊತ್ತಾ..........? ಅದೇ ಆ ದಿನ ನೀನು ಹಳ್ಳಿಗೆ ಹೋಗೋ ಮುಂಚೆ ನನ್ನ ಹತ್ರ ಬಂದು 'ಮೈತ್ರ ಮನೇಲಿ ಒಬ್ಳೆ ಇರ್ತಾಳೆ, ನಾನ್ ಊರಿಗೋಗ್ತಿದ್ದೀನಿ.' ಅಂತ ಹೇಳಿ ಹೋಗಿದ್ದು. ಈ ಸತ್ಯಾನ ಅರಗಿಸ್ಕೊಳ್ಳೋಕೆ ಅವ್ಳಿಂದ ಆಗ್ಲಾರ್ದೂಂತ ಬೇಕಂತ ಹೇಳ್ಲಿಲ್ಲ. ಹೋಗ್ಲಿಬಿಡೋ, ಹಿಂದಿಂದೆಲ್ಲಾ ಯಾಕೆ. ಆದ್ರೂ ನಿನ್ನೀ ಉಪಕಾರನ ಸಾಯೋತನಕ ಮರೆಯೊಲ್ಲ.........."

ಆದರೆ ರಘು ಮರೆತ. ಪ್ರಥಮ ರಾತ್ರಿ, ಹರೆಯದ ಹೆಣ್ಣು, ಬೆಚ್ಚನೆಯ ಕೋಣೆ, ಮೆತ್ತನೆಯ ಹಾಸಿಗೆ, ಹೂಗಳ ಸರಮಾಲೆ ಎಲ್ಲವನ್ನೂ ಮರೆತ. ಭರತನಾಡಿದ ಮಾತುಗಳಲ್ಲಿ ಸಿಕ್ಕಿ ಅದರ ಗುಂಗಿನಲ್ಲೇ ಮುಳುಗಿಹೋದ...

✦ ✦

ಕಳ್ಳುಬಳ್ಳಿ

ಕೆಂಚನಿಗೆ ಕಣ್ಣು ಎಳೆಯುತ್ತಿದ್ದವು. ಗಂಟೆ ಆಗಲೇ ಹತ್ತಾಗಿತ್ತು. ಆದರೂ ಉಣ್ಣುವವರಿನ್ನೂ ಇದ್ದರು. ಎಲ್ಲರೂ ಉಂಡ ಮೇಲೆ ಪಾತ್ರೆಗಳನ್ನೆಲ್ಲ ಬೆಳಗಿ, ನೆಲ ಗುಡಿಸಿ, ಒರೆಸಿ ಮಗ ತಿಪ್ಪ ನೆಲ ಕಾಣುವ ಹೊತ್ತಿಗೆ ಹನ್ನೊಂದಾದರೂ ಆಯ್ತು ಹನ್ನೆರಡಾದರೂ ಆಯ್ತು. ಹತ್ತು ವರ್ಷದ ತಿಪ್ಪ ಬೆಳಗ್ಗಿನಿಂದ ಈ ಮನೆಯ ಕೆಲಸ ಮಾಡಿ, ಮಾಡಿ ಸೋತು ಸುಣ್ಣ ಆಗಿದ್ದ.

ಈ ಮನೆಯ ಯಜಮಾನರು ಶಿವಣ್ಣ ಮತ್ತು ಇಂದ್ರ. ನಾಳೆಯೆ ಅವರ ಒಬ್ಬನೇ ಮಗ ರಾಜುವಿನ ಹನ್ನೆರಡನೇ ವರ್ಷದ ಹುಟ್ಟುಹಬ್ಬ.



ಇಂದೇ ಬಂಧು ಬಳಗವೆಲ್ಲ ಬಂದಿಳಿದಿತ್ತು. ಅವರುಗಳೆಲ್ಲ ಉಂಡು ಮುಗಿಸುವ ತನಕ ತಿಪ್ಗನ ಹೊಟ್ಟೆಯೂ ಖಾಲಿ.

ಹೆಂಡತಿ ಬಸ್ವಿಯ ಬಳಿ ತಿಪ್ಗನನ್ನು ಕರೆತರುವೆ ಉಗಾದಿ ಹಬ್ಬಕ್ಕೆ ಅಂತ ಹೇಳಿ ಬಂದಿದ್ದ. ಆದರೆ ಶಿವಣ್ಣನ ಮನೆಗೆ ಬಂದಾಗ ಆ ವಿಷಯ ಮಾತಾಡಲೇ ಇಲ್ಲ. ಬದಲಿಗೆ ದುಡ್ಡಿಗಾಗಿ ಬಂದಿದ್ದೆ ಎಂದಿದ್ದ. ತಿಪ್ಗನನ್ನು ಊರಿಗೆ ಕರೆದುಕೊಂಡು ಹೋಗಬಾರದೆಂದೇನೂ ಇರಲಿಲ್ಲ ಅವನಿಗೆ. ಆದರೆ ಮಗನನ್ನು ನೋಡಿ ಬಸ್ವಿ ಮತ್ತೆಲ್ಲಾದರೂ ಮನಸ್ಸನ್ನ ಬದಲಾಯಿಸಿ, ರಂಪ ತೆಗೆದು ಗಲಾಟೆ ಮಾಡಿದರೆ ಎಲ್ಲೀ ಸಹವಾಸ ಅಂತ ಅ ವಿಚಾರವನ್ನೇ ಕೈಬಿಟ್ಟಿದ್ದ. ಸಾಮಾನ್ಯವಾಗಿ ಅವನು ಶಿವಣ್ಣನ ಮನೆಯ ಬಳಿಗೆ ಬರುತ್ತಿರಲಿಲ್ಲ. ಆಫೀಸಿನ ಬಳಿಯೆ ಹೋಗಿಬರುತ್ತಿದ್ದ. ಆದರೆ ಇಂದು ರಜವಿದ್ದುದರಿಂದ ಮನೆಗೆ ಬಂದಿದ್ದ. ಇಲ್ಲಿ ಮಗನ ದುಡಿತದ ಅಂದಾಜು ಈಗವನಿಗೆ ಅರಿವಾಗಿತ್ತು. ಒಳಗೊಳಗೇ ಸಂಕಟವೂ ಆಯ್ತು.

ಕೆಂಚನಿಗೆ ನಾಲ್ಕು ಮಕ್ಕಳು. ರತ್ನಿ, ಮಲ್ಲಿ, ಕೆಂಚಿ, ತಿಪ್ಗ. ತಿಪ್ಗನೇ ಕಿರಿಯವನು. ಅಂತೆಯೇ ಅವ್ವನ ಕಣ್ಮಣಿ. ಕಿರಿಮಗಳು ಕೆಂಚಿಯೊಬ್ಬಳೇ ಉಳಿದು ಇನ್ನಿಬ್ಬರು ಹಿರಿಯರಿಗೆ ಮದ್ವೆಯಾಗಿತ್ತು. ಕೈಯಲ್ಲಿ ಬಿಡಿಗಾಸು ಇರಲಿಲ್ಲವಾದ್ದರಿಂದ ಮುಂದಿನ ವರ್ಷಕ್ಕೇ ಅವಳ ಮದುವೆ. ಹುಡುಗನೂ ಗೊತ್ತಾಗಿದ್ದ. ಆದರೆ ಅಷ್ಟರೊಳಗೆ ಬೆಳಗ್ಗೆ ಚೆಂಬು ತೆಗೆದುಕೊಂಡು ಹೋದಾಗೋ, ಮಧ್ಯಾಹ್ನ ಅಪ್ಪಯ್ಯನಿಗೆ ಬುತ್ತಿ ಒಯ್ವಾಗ ಬಂಡೆ ಅಡಿಯಲ್ಲೋ, ಬಣವೆ ಮರೆಯಲ್ಲೋ ಕೆಂಚಿ, ಅವಳ ಭಾವಿ ಗಂಡ ಕೂಡಿ ಮಾಡಿದ ಪ್ರೀತಿಯ ಕಾವಿಗೆ ಕೆಂಚಿ ಕಕ್ಕಿಕೊಳ್ಳತೊಡಗಿದ್ದಳು. ಆ ಕ್ಷಣವೇ ಮದುವೆ ಮುಗಿಸಬೇಕಿತ್ತು. ಎಲ್ಲೂ ದುಡ್ಡು ಸಿಗದಿದ್ದಾಗ ಆ ಊರಿನ ಲಿಂಗಾಯತರ ರಾಮಣ್ಣನ ಸಲಹೆಯಂತೆ, ಸ್ಕೂಲಿಗೆ ಹೋಗುತ್ತಿದ್ದ ತಿಪ್ಗನನ್ನು ಅವರ ಮನೆಯಲ್ಲಿ ಇಟ್ಟು, ದುಡ್ಡು ಇಸಿದುಕೊಂಡು ಬಂದಿದ್ದ ಕೆಂಚ. ತನ್ನ ಕರುಳನ್ನು ಬಗೆದು ಒಯ್ಯುತ್ತಿರುವರೇನೋ ಎಂಬಂತೆ ಗೋಳಾಡಿದ್ದಳು ಬಸ್ವಿ ತಿಪ್ಗನ್ನ ಕರೆದೊಯ್ಯುವಾಗ!

"ನಮ್ ಪಡಿಪಾಟ್ಲು, ನಮ್ ಬವಣೆ ಆ ಮಗಿಗೆ ಬ್ಯಾಡ ಅಂತ ಇಸ್ಕೂಲಿಗಾಕಿದ್ರೆ... ಇವತ್ತು ಅದಕ್ಕೂ ಕಲ್ಲು ಬಿತ್ತು. ನನ್ಮಗನಿಗೂ ಕಂಡೋರ್ಮನೆ ಚಾಕರೀನೆ ಗತಿಯಾಯ್ತಲ್ಲಾ..." ಅಂತ ಬಡಬಡಿಸಿದ್ದಳು.

ಹೇಗೋ ಆರು ತಿಂಗಳು ಕಾಲ ಹಾಕುವ ಹೊತ್ತಿಗೆ ಸಾಕುಸಾಕಾಯ್ತು. ಅಳುತ್ತ ಕರೆಯುತ್ತ, ಉಪವಾಸ ವನವಾಸ ಮಾಡಿ ನೆಲ ಕಚ್ಚಿ ಮಲಗಿಬಿಟ್ಟಳು ಆಕೆ. ಮೊಮ್ಮಕ್ಕಳನ್ನ ಕಂಡಿದ್ದರೂ ಇನ್ನೂ ಗಟ್ಟಿಮುಟ್ಟಾಗಿ, ಬಿರುಸಾಗಿದ್ದ ಬಸ್ವಿ, ನಾಲ್ಕಾಳು ಕೆಲಸವನ್ನು ಒಬ್ಬಳೇ ಮಾಡಿ ಬಿಸಾಕುವಂತಹ ಹೆಣ್ಣು. ಆಕೆ ಮೇಲೇಳದ ಹಾಗೆ ಮಲಗಿದಾಗ ಕೆಂಚ ನಿಜಕ್ಕೂ ಹೆದರಿದ.

ಕೆಂಚನಿಗೆ ಅವಳೆಂದರೆ ಒಂಥರ ಭಯ ಸಿಟ್ಟು, ಪ್ರೀತಿ ಎಲ್ಲವೂ ಇತ್ತು. ಅವಳ ಜೊತೆಯಿಲ್ಲದೆ ಅವನಿಂದ ಏನೊಂದು ಕೆಲಸವೂ ಸಾಧ್ಯವೇ ಇರಲಿಲ್ಲ. ಆದರೀಗ ಪೂರ್ತಿ ಹೆದರಿದ. ಎದ್ದೆನೋ ಬಿದ್ದೆನೋ ಅಂತ ತನ್ನ ಹಿರಿಮಗಳು ರತ್ನಿಯ ಊರಿಗೆ ಓಡಿದ. ಅಳಿಯ ವೀರೇಶಿ ಮುನ್ಸಿಪಾಲಿಟಿ ಕ್ಲೀನರ್ರೂ. ಕೆಲಸ ಸಿಕ್ಕು ಎರಡು ವರ್ಷಗಳಾಗಿದ್ದವು. ಆ

ಮೊದಲು ಈರೇಸಿ ಆಗಿದ್ದೋನು ಕೆಲಸ ಸಿಕ್ಕನಂತರ ವಿರೇಶಿ ಆಗಿದ್ದ. ಮಗಳು ಅಳಿಯನ ಎದುರಿಗೆ ತನ್ನ ಕಷ್ಟ ಹೇಳಿಕೊಂಡ ಕೆಂಚ

"ಏನನ ಮಾಡ್ರಪ್ಪ... ಬಸ್ವಿ ನೆಲ ಹಿಡ್ದು ಮಲ್ಗಿದ್ರೆ ನನ್ ಕೈಕಾಲು ಬಿದ್ದೋದಂಗೆಯ........." ಅಂದ.

"ಸುಮ್ಕೆ ನಾನೆಳ್ದಂಗೆ ಮಾಡ್ಮಾವ. ಎಲ್ಲಾನ ಒಂದೈನೂರು ಜೋಡಿಸ್ಕೆಂಡು ಹೋಗಿ ಮಗನ್ನ ಕರ್ಕಂಡ್ಬಾ. ಯಂಗ ಆರ್ತಿಂಗ್ಳು ಆಗೋಗೈತೆ. ಇನ್ನಾರ್ತಿಂಗ್ಳಿಗೆ ಐನೂರು ಸರಿವೋಗ್ತೈತೆ...." ಅಂತ ಸಲಹೆ ಕೊಟ್ಟ ವೀರೇಶಿ.

"ಅಯ್ಯೋ ನನ್ತಾವೆಲ್ಲೆದೋ ವಿರೇಸಿ ಆಟೊಂದುಡ್ಡು... ನಾನೆಲ್ಲಿಂದ ವೊಂದ್ಸಾನೇಳು...?" ಕೆಂಚ ಗೋಳಾಡಿ, ಕಾಡಿ ಬೇಡಿದಾಗ ವೀರೇಶಿ ಒಂದಿನ ತಡೆದು ಮಾವನ ಕೈಗೆ ಐನೂರು ಕೊಟ್ಟು ಹೇಳಿದ.

"ನೋಡ್ಮಾವ ಯೇನೋ ಸ್ನೇಹಿತ ಅಂತ ಹುಸೇನಣ್ಣ ಮೂರ್ತಿಂಗ್ಳು ಗಡುವು ಯೇಳಿ ಬಡ್ಡಿಯಿಲ್ಲದಂಗೆ ದುಡ್ಡು ಕೊಟ್ಟವ್ನೆ... ಆಟ್ರೋಳ್ಗೆ ನೀನೇನ ದುಡ್ಡು ವೊಂದಿಸಿಲ್ಲಾಂದ್ರೆ ನೂರಕ್ಕೆ ಹತ್ತರಂಗೆ ಬಡ್ಡಿಯಾಗ್ತೈತೆ ನೋಡ್ಮತ್ತೆ.........."

"ಇಲ್ಲಪ್ಪ ಆಟೋತ್ತಿಗೆ ಯಂಗಾನ ಮಾಡಿ ನಾನೆಲ್ಲ ವೊಂದುಸ್ತೀನಿ........." ಅಂತ ಹೇಳಿ ಊರ ಕಡೆಗೆ ಓಟಕಿತ್ತಿದ್ದ ಕೆಂಚ.

ಅವನಿಗೆ ಕೊನೆಗೂ ತಿಳೀಲಿಲ್ಲ ಐನೂರು ವೀರೇಶಿಯ ಅಣ್ಣ ಮಾರಪ್ಪ ಕೊಟ್ಟಿದ್ದು ಅಂತ. ತನ್ನದು ಅಂತ ಹೇಳಿದರೆ ದುಡ್ಡು ವಾಪಸ್ಸು ಬರುತ್ತೋ ಇಲ್ಲವೋ ಅಂತ ಮಾರಪ್ಪನೇ ವೀರೇಶಿ ಕೈಲಿ ಹಾಗೇ ಹೇಳಿಸಿದ್ದ. ಅದಕ್ಕೆ ರತ್ನಿಯೂ ಸಮ್ಮತಿಸಿದ್ದಳು.

ಕೆಂಚ ತಿಪ್ಗನ್ನ ಕರೆದುಕೊಂಡು ಬಂದ ದಿನ ನೋಡಬೇಕಿತ್ತು ತಾಯಿ ಮಗನ ಸಂತೋಷನ.

"ಅವ್ವಾ......." ಅಂತ ಓಡಿಬಂದ ಮಗನನ್ನ "ತಿಪ್ಗಾ ಬಂದ್ಯಾ ಸಾಮಿ....." ಅಂತ ಎದೆಗೆ ಅವಚಿಕೊಂಡು, ಮುಖದ ತುಂಬಾ ಮುತ್ತು ಸುರಿಸಿದ್ಳು ಬಸ್ವಿ. ಅವ ಅಪ್ಪುಗೆಯಲ್ಲಿ ಕರಗಿ, ಅವಳೆದೆಯಲ್ಲಿ ಮುಖವುದುಗಿಸಿದ್ದ ತಿಪ್ಗ.

ಹಿಂದಿನ ನೆನಪಿನಲ್ಲಿ ಎಲ್ಲೋ ತೇಲಿಹೋಗಿದ್ದ ಕೆಂಚನನ್ನು ಶಿವಣ್ಣನ ದನಿ ಎಚ್ಚರಿಸಿತು. "ಹೋಗಯ್ಯ ನೀನೆದ್ದು ಹೋಗಿ ಮಲ್ಕೋಹೋಗು.... ಇಲ್ಲಿ ಕುಂತ್ಗಂಡು ಏನ್ಮಾಡ್ತಿದ್ದಿ.....? ನಾನು ಮಧ್ಯಾಹ್ನವೇ ನಿನಗೆ ಹೇಳಿದ್ದೀನಿ ಈಗ ನನ್ನತ್ರ ದುಡ್ಡಿಲ್ಲ ಅಂತ........." ಇವನನ್ನು ನೋಡಿ ಶಿವಣ್ಣ ಹೇಳಿದ.

"ಅಂಗದ್ರೆಂಗಣ್ಣಾ............? ವೋಗ್ಲಿ ಐನೂರಿಲ್ದಿದ್ರೋಟವೋತು ಒಂದಿನ್ನೂರಾನ ಕೊಡು.........."

ತಲೆ ಕೆರೆಯುತ್ತಾ ಕೇಳಿದ ಕೆಂಚ.

"ಏನೂ......? ಮಾತ್ಮಾತಿಗೂ ದುಡ್ಡು, ದುಡ್ಡು ಅಂತೀರಲ್ಲ ನಾನೇನಿಲ್ಲಿ ದುಡ್ಡಿನ್ಮರಗಿರ ಹಾಕಿದ್ದೀನಿ ಅಂದ್ಕಂಡಿರೇನು.........?" ಕೆರಳಿದ ಶಿವಣ್ಣ. "ಅಂಗಲ್ಲಣ್ಣಾ............." ಅಂದ ಕೆಂಚನನ್ನು ಅರ್ಧಕ್ಕೆ ತಡೆದು

"ನೋಡು ಕೆಂಚ ಹಂಗೂ ಇಲ್ಲ ಯಂಗೂ ಇಲ್ಲ. ಈಗ ಇಲ್ಲಾಂದ್ರೆ ಇಲ್ಲ ಅಷ್ಟೆ. ಆ ಹುಡಗನ್ನ ಕರ್‍ಕಂಡು ಬಂದ ದಿನವೇ ಒಂದು ಸಾವಿರ ಇಸ್ಕಂಡೋದ್ರಿ ನೀವು. ಮತ್ತೆ ಆಫೀಸಿನತ್ರ ಒಂದಿನ ಬಂದು ಮುನ್ನೂರು ಇಸ್ಕಂಡಿದ್ದೀಯ..... ಮತ್ತೆ ಕೊಡು ಅಂದ್ರೆ ಯಂಗೆ.........? ಇನ್ನೇನಿದ್ರೂ ಈ ವರ್ಷದ ಕೊನೆಗೆ. ಅಲ್ಲಿವರೆಗೂ ಏನು ಇಲ್ಲ......."

ಅಷ್ಟೇಳಿ ಶಿವಣ್ಣ ತನ್ನ ಕೋಣೆಯತ್ತ ಹೊರಟ.

ಯಾಕೋ ತಾನು ಬಂದ ಕೆಲಸ ಎಡವಟ್ಟಾಗಿ ಕಾಣಿಸ್ತು ಕೆಂಚನಿಗೆ.

"ಯಂತಾ ಕೆಲ್ಸ ಆತಲ್ಲ............. ಆ ವುಡ್ಗನ್ನಾರ ಊರಿಗೆ ಕರ್‍ಕಂಡೋಗ್ಬಹುದಿತ್ತು........" ಕೆಂಚ ಒಬ್ಬನೆ ಒದ್ದಾಡಿಕೊಂಡ.

ಅಡುಗೆ ಮನೆಯಲ್ಲಿ ನಿದ್ದೆ ಮೆತ್ತಿದಂತಿದ್ದ ಕಣ್ಣುಗಳ ರೆಪ್ಪೆಯನ್ನು ತೆರೆಯಲಾರದೆ ತೆರೆಯುತ್ತ ಕಸಗುಡಿಸುತ್ತಿದ್ದ ತಿಪ್ಪನನ್ನೆ ನೋಡಿದ. ಹುಡುಗ ಬಹಳ ಸೊರಗಿದ್ದ. ಕಣ್ಣು, ಗಲ್ಲ ಎಲ್ಲಾ ಒಳಕ್ಕೋಗಿ, ಗುಳಿ ಬಿದ್ದಿದ್ದವು. ಹೇಗೋ ಆಡಿಕೊಂಡು ಮಾಡಿಕೊಂಡು ಶಾಲೆಗೆ ಹೋಗುತ್ತಿದ್ದ ಅವನು ರಾಮಣ್ಣನ ಮನೇಲಿ ಬಿಡೋಕ್ಮುಂಚೆ. ಬಿಡಿಸಿದ್ದೆ ಬಂತು ಆಮೇಲೆ ಅತ್ತ ಕಡೆ ತಲೆ ಹಾಕಲಿಲ್ಲ. ಅವನು ಆನಂತರ ಹಳ್ಳಿಯಲ್ಲಿ ಇದ್ದಿದ್ದಾದರೂ ಕೇವಲ ಮೂರು ತಿಂಗಳು ಅಷ್ಟೆ.

ಕೆಂಚನಿಗೆ ಬಸ್ವಿಯ ಮಾತುಗಳು ನೆನಪಾದವು.

"ನನ್ ಮಗಿನ ಮತ್ತೆ ದೂರ ಮಾಡ್ಬಿಟ್ಯಲ್ಲಾ..........? ನಿನಗೆಂಗೆ ಅರಿವಾದೀತೇಳು ನನ್ ವಟ್ಟೆ ಸಂಕ್ಟಾ........... ನೀನೇನ್ ವತ್ಗಂಡನಲ್ಲ, ಹಡ್ದನಲ್ಲ..........."
ಎಂದು ಮಗನ ನೆನಪು ಬಂದಾಗಲೆಲ್ಲ ಗೋಳಾಡುತ್ತಿದ್ದಳಾಕೆ. ಆದರೆ ಇದ್ದ ಅಲ್ಪಸ್ವಲ್ಪ ಭೂಮಿಯ ಬಗೆಗಿದ್ದ ಮಮಕಾರ, ಅದಕ್ಕೇ ಬಿತ್ತುವ ಬೀಜ, ಹಾಕುವ ಗೊಬ್ಬರಕ್ಕೆ ದುಡ್ಡಾಗುವುದಲ್ಲ ಎಂಬ ಆಸೆ ತನ್ನನ್ನು ನಿಷ್ಠೂರನನ್ನ ಮಾಡಿದ್ದವು.

ರಾಮಣ್ಣನ ಮನೆಯಿಂದ ಬಂದ ಮೇಲೆ ಅವ್ವನ ಆರೈಕೆಯಲ್ಲಿ ತಿಪ್ಪ ಬಲು ಕಳೆಕಳೆಯಾಗಿದ್ದ. ಆಕೆ ಹಟ್ಟಿಯಲ್ಲಿ ಸಾಕಿದ್ದ ಕೋಳಿಗಳನ್ನ ವಾರಕ್ಕೊಂದರಂತೆ ತಿಪ್ಪನಿಗಾಗಿ ಕೊಯ್ದು, ಬಿಸಿಯಾದ ಮುದ್ದೆ ಇಕ್ಕಿದರೆ ಸರಿಯಾಗಿ ಹೊಡೆಯುತ್ತಿದ್ದ. ಬಸ್ವಿಯಾದರೂ ಮಗನಿಗೆ ಬರಿಯ ಉಣ್ಣಿಸುತ್ತ ಸುಮ್ಮನಿರಲಿಲ್ಲ. ರಾಮಣ್ಣನ ಮನೆಯಿಂದ ಬಂದೊಡನೆ ಅ ಊರಿನ ಸ್ಕೂಲಿನ ಮೇಷ್ಟರ ಬಳಿಗೆ ಕರೆದೊಯ್ದಳು. ಆದರೆ ಈ ವರ್ಷ ಮುಗಿಯಲಿ ಎಂದು ಹೇಳಿದ್ದರವರು. ಅಪ್ಪ ಅವ್ವನ ಜೊತೆಯಲ್ಲಿ ಉಂಡಾಡಿಕೊಂಡು ಹೇಗೋ ಮಜವಾಗಿದ್ದ ತಿಪ್ಪ ಅವನ ಅಕ್ಕ ರತ್ನಿ ಊರಿನಿಂದ ಬಂದು ಅಪ್ಪನನ್ನು ಜೊತೆಯಲ್ಲಿ ಊರಿಗೆ ಕರೆದೊಯ್ಯುವ ತನಕ. ಅಲ್ಲಿಂದ ವಾಪಸ್ಸು ಬಂದಾಗ ಅವನು ಸುಮ್ಮನೆ ಬರಲಿಲ್ಲ. ಬದಲಾಗಿದ್ದ. ಹೆಂಗೋ ಇದ್ದ ಚೂರುಪಾರು ಹೊಲದಲ್ಲಿ ಗಂಡ ಹೆಂಡತಿ, ಮಗನಿಗೆ ಎರಡು ಹೊತ್ತಿನ ಊಟಕ್ಕೆ ಆಗುವಷ್ಟು ಕಾಳುಕಡ್ಡಿ ಬೆಳೆದುಕೊಂಡು ತನ್ನ ಪಾಡಿಗೆ ತಾನು ಕಾಲ ಹಾಕುತ್ತಿದ್ದ. ಆದರೆ ವೀರೇಶಿ, ಅವನ ಅಣ್ಣ ಮಾರಣ್ಣ ಇಬ್ಬರು ಸೇರಿ ಕೆಂಚನ ತಲೆಯನ್ನು ಕೆಡಿಸಿಟ್ಟಿದ್ದರು. ಶಿವಣ್ಣ ಮೇಲಧಿಕಾರಿ ಮಾರಣ್ಣನಿಗೆ, ತನ್ನ ಮನೆಯಲ್ಲಿ ಒಬ್ಬ

ಹುಡುಗ ಕೆಲಸಕ್ಕೆ ಬೇಕು, ನಮ್ಮ ಪೈಕಿನೆ ಯಾರಾದರು ಇದ್ದರೆ ಹೇಳು ಎಂದಿದ್ದ ಮಾರಣ್ಣನ ಬಳಿ. ಶಿವಣ್ಣ ಕೆಂಚನಿಗೂ ದೂರದ ಸಂಬಂಧಿ.

ಮಾರಣ್ಣ ಆ ಮಾತನ್ನ ವೀರೇಶಿ, ರತ್ನಿ ಮುಂದೆ ಹೇಳಿದಾಗ ರತ್ನಿಗೆ ತಕ್ಷಣವೆ ತಿಪ್ಪನ ನೆನಪಾಗಿ

"ಸುಮ್ಕೆ ತಿಂದ್ತಿಂದು ತಿರುಗಾ ಬದ್ಲು ಅವರ್ಮನೆಯಾಗೆ ಬಿದ್ದಿರ್ಲೇಳು.... ಕೈಯಾಗ್ನಾಕು ಕಾಸರ ಆಕ್ತಾವೆ.........." ಅನ್ನುತ್ತ ಹಿಂದೆಯೇ ಊರಿಗೆ ಹೊರಟು ಬಂದು ಅಪ್ಪನ್ನ ಜೊತೆಗೆ ಕರೆದೊಯ್ದಿದ್ದಳು. ಅಣ್ಣ ತಮ್ಮ ಇಬ್ಬರು ಸೇರಿ ಹೇಳಿದ್ದರು ಕೆಂಚನಿಗೆ

"ನೋಡು, ಬಂಗಾರ ಬೆಳಿಯಾಂತ ಭೂಮಿ ಐತೆ. ಸುಮ್ಕೆ ಯಾಕೆ ಅನ್ಯಾಯ ಮಾಡ್ಕಂತಿಯಾ........? ಶಿವಣ್ಣನಿಗೆ ಬೇಕಾದಂಗೈತೆ. ಹೆಣ್ತಿನೂ ದುಡೀತಾಳೆ. ಇರಾನೊಬ್ಮಗ ಅವ್ರಿಗೆ. ನಿನ್ಮಗ ಅವರ ಮನ್ಯಾಗ ಚೂರ್ಪಾರು ಮೇಲಿನ ಕೆಲ್ಸ ಮಾಡ್ಕೆಂಡು ಬಿದ್ದಿದ್ರೆ ಸಾಕು.. ದುಡ್ಡಿನ ಯೋಚ್ನೆನೇ ಮಾಡ್ಬ್ಯಾಡ್ರಿ ನೀವು.. ಅವ್ರೇನೆಂಗೂ ಬ್ಯಾರೆಯಲ್ಲ ನಮ್ಮೋರೆ ಕಳ್ಳುಬಳ್ಳಿ.. ಮಗ ನಮ್ಮನ್ಯಾಗೆ ಇದ್ದಂಗೇ ಇರ್ತಾನೆ.. ಬರ ದುಡ್ನ ವೊಲಕ್ಕೊಗ್ದು ವಳ್ಳೆ ಬೆಳೆ ಬೆಳ್ಕಂಡು ಬಂಗಾರ್ದಂಗಿರ್ಬಹುದ್ದು. ಖರೆಯಾಗ್ಲು ಮಾವಯ್ಯ ನೀನಾ ಮನೆ ನೋಡ್ಬೇಕು ದಂಗಾಗೋಗ್ತಿ. ಆ ಮನ್ಯಾಗಿರಾಕೆ ನಿನ್ಮಗ ಪುಣ್ಯ ಮಾಡಿರ್ಬೇಕು.."

ಕೆಂಚ ಅವರುಗಳು ಹೇಳೋದನ್ನ ಕೇಳಿಯೇ ದಂಗಾಗಿದ್ದ. "ನಂದೇನೈತಪ್ಪ ನಾನೀಗ್ಲೆ ಕಳುಸ್ತಿ. ಆದ್ರೆ ನಮ್ ಬಸ್ವಿನ್ ವೊಪ್ಸಾದೇ ಬಲು ಕಸ್ಟ.........." ಅಂದ.

"ನಿನಗ್ಯಾಕ ಯೋಚ್ನೆ ಬಿಡ್ಮಾವ.. ನೀನ್ಸುಮ್ನೆ ಏನೂ ಗೊತ್ತಿಲ್ದಂಗಿರು. ಅಪ್ಪರಮ್ಯಾಲೆ ಅತ್ತೆ ಯಾಕೋಗಿದ್ದೆ ಅಂತ್ಕೇಳಿದ್ರೆ ವಿರೇಶಿ ದುಡ್ಡಿಗೆ ಹೇಳಿ ಕಳಿಸಿದ್ದ ಅಂತೇಳು. ಮುಂದಿಂದು ನಮಗ್ಬಿಡು......" ವೀರೇಶಿ ಹೇಳ್ದಾಗ ಕೆಂಚ ಅದಕ್ಕೆ ತಲೆಯಾಡಿಸಿದ್ದ.

ಅಂದ ಹಾಗೆ ಮರುದಿನವೇ ಮಾರಣ್ಣ ಊರಿಂದ ಬಂದಿಳಿದ. ಬಹಳ ವರ್ಷಕ್ಕೆ ಬಂದ ಮಾರಣ್ಣನ ನೋಡಿ ಸಡಗರಪಟ್ಟಳು ಬಸ್ವಿ, ರಾತ್ರಿಗೆ ಕೋಳಿ ಕೊಯ್ದು, ಎಸರಿಟ್ಟು ಮುದ್ದೆ ಮಾಡಿ, ಅವರಿಬ್ಬರನ್ನ ಊಟಕ್ಕೆಬ್ಬಿಸಿದ್ಲು. ತಿಪ್ಪ ಹೊಟ್ಟೆಯ ತುಂಬ ಬರಿ ತುಂಡು ತಿಂದು ಮಲಗಿದ್ದ ಆಗಲೇ. ಮುದ್ದೆ ಮುರ್ಕಂಡು, ಸಾರಿನಲ್ಲಿ ಹೊರಳಾಡಿಸುತ್ತ ಹೇಳಿದ ಮಾರಣ್ಣ,

"ವೀರೇಶಿ ಬಹಳ ಬೇಜಾರ್ಮಾಡ್ಕೆಂಡವನೆ ಕೆಂಚ.......... ಯಂಗನ ಮಾಡಿ ಆ ಸಾಬಿ ದುಡ್ಡು ಕೊಡು........"

"ಅಲ್ಮಾರಣ್ಣ ನೀನೂ ವೀರೇಸಿಯಂಗೇ ಮಾತಾಡ್ತಿಯಲ್ಲ..........? ಆಟೊಂದುಡ್ಡು ನಾನೆಲ್ಲಿಂದ ವೊಂದುಸ್ಲಿಯೇಳು..?" ಬಾಯಿ ಜೋರಾಗೇ ಮಾಡಿದ್ದ ಕೆಂಚ.

"ಅಲ್ಲಪ್ಪ ಎಲ್ಲಿಂದ ತರ್ಲಿ ಅಂದ್ರೆಂಗ........? ಕೊಡಕಾಗ್ದಿದ್ಮ್ಯಾಕೆ ಯಾಕೆ ಇಸ್ಕಂಡೆ.........? ಇಸ್ಕಂಡ್ಮ್ಯಾಕೆ ಯಂಗನ ಮಾಡಿ ಕೊಡ್ಬೇಕಪ್ಪ.. ಇಲ್ಲಾಂತಂದ್ರೆ ಯಾರ್ಕೇಳ್ತಾರೆ..?"

ಕೆಂಚ ಮೂಳೆ ಕಟಕಟ ಕಡಿದ. "ನಾನೇನ್ಮಾಡನ ಮಾರಣ್ಣ..? ಇರಾದೀಟು ಭೂಮಿನ ಯಾರ್ತಾವನ ಅಡವಿಡ್ಬೇಕಟೆಯ.."

ಈ ಮಾತು ಕೇಳಿದ್ದೆ ಮಾರಣ್ಣ ಹಲ್ಲಿಯಂಗೆ ಲೊಚುಗುಟ್ಟಿದ.

"ಅಯ್ಯ ಇಷ್ಟೊಂದು ಸಣ್ಣಿಷ್ಯಕ್ಕೆ ಏಟೊಂದು ತಲೆಕೆಡ್ಸಿಕೆಂತಿಯಲ್ಲಾ ನೀನೂ..........?

ನೋಡ್ಕೆಂಚ ನಾನೊಂದ್ಮಾತು ಹೇಳ್ತೀನಿ ಕೇಳ್ತಿಯಾ..........? ನಾನೇಳಾದು ನಿನ್ನ ಬಲಕ್ಕೆಯಾ.. ಮತ್ತೆ ನೀನು ಮನ್ಸು ಸಣ್ಣಿಗ್ಮಾಡ್ಕೆಬಾರ್ದು.."

ಈ ಮಾತು ಕೇಳಿದ ತಕ್ಷಣ ಹೇಳಿದ್ದ ಕೆಂಚ

"ಅಯ್ಯ ಎಲ್ಲಾದ್ರುಂಟೇನಣ್ಣಾ........? ಅದೇನ್ಯೇಳು.........." ಹೇಳುತ್ತಲೇ ಹೆಂಡತಿಯನ್ನು ಕೂಗಿ ಕರೆದ "ಲೇ ಬಸ್ವಿ ಮಾರಣ್ಣನಿಗೆ ಇನ್ನೊಂದ್ನಾಕು ತುಂಡಾಕೆ........" ಅಂದ.

ತಟ್ಟೆಗೆ ತುಂಡು ಬೀಳುತ್ತಲೇ ಶುರು ಮಾಡಿದ ಮಾರಣ್ಣ. "ನಮ್ಮ ಆಫೀಸರ್ರು ಶಿವಣ್ಣ ಗೊತ್ತೆತಲ್ಲ ಕೆಂಚ.........? ಅದೇ ನಿಮ್ ಬಸಜ್ಜನ ಮೊಮ್ಮಗ.........."

"ಅಲೆ ಗೊತ್ತಿಲ್ದೇನೇಳು ಮಾರಣ್ಣ ನೋಡಿ ಭಾಳ ವರ್ಸಾತು ಅಂದ್ರೆ.........."

ಅವರಿಬ್ಬರ ಮಾತುಗಳನ್ನ ಆಲಿಸಿ ಬಸ್ವಿ ಕಿವಿ ನಿಮಿರಿಸಿ ಕೂತಳು.

"ಶಿವಣ್ಣನ ಮನ್ಯಾಗೆ ಇರೋರು ಮೂರ್ಜನ. ಗಂಡಯೆಣ್ತಿ, ಮಗ. ಆಯಮ್ಮನೂ ಹೊರಗೆ ದುಡೀತೈತೆ. ಅದ್ಕೆ ಮ್ಯಾಲಿನ್ಕೆಲ್ಸಕ್ಕೆ ಒಬ್ಬ ಹುಡ್ಗ ಬೇಕಂತೆ. ಅವ್ನು ನಮ್ಮ ಪೈಕಿನೇ ಆದ್ರೆ ಚೆನ್ನಾಗಿರ್ತೆತಿ ನೋಡು ಅಂತ ಶಿವಣ್ಣ ಮೊನ್ನೆ ಆಫೀಸಿನ್ತಾವ ಯೇಳಿದ್ನೇಳು. ನನಿಗೆ ನಿಮ್ಮುಡುಗುನ್ದು ನೆಪ್ಪಾಗಿ ಯೇಳ್ದೆ ಆವಣ್ಣನಿಗೆ. ಅದಕ್ಕಾತ

"ದುಡ್ಡಿಗೇನು ಯೋಚ್ನೆ ಮಾಡ್ಬೇಡ್ರಿ........" ಅಂದು

"ನೀನೋಗಿ ಹುಡ್ಗನ್ನ ಕರ್ಕಂಡ್ಬಾ ಬಾ ಅಂದ.... ನೋಡು ಹೆಂಗ್ಮಾಡ್ತಿ.."

ಮಾರಣ್ಣ ಮಾತು ನಿಲ್ಲಿಸಿದ್ದೆ ತಡ ಬಸ್ವಿ ದಡಕ್ಕನೆ ಎದ್ದು ಬಂದು

"ಅಯ್ಯೋ ಅದೆಲ್ಲೆದಚ್ಚಿದಿ ಏಳಾನಮ್ಮಪ್ಪ.. ಇರಾದೊಂದು ಕೂಸಿನ್ಮೇಲೆ ಅದೇನ್ಕಣ್ಣು ನಿಮ್ದೂ..? ಬ್ಯಾರೇನರ ಇದ್ರೆಯೇಳು ಇಲ್ಲಂದ್ರೆ ಸುಮ್ಕಿರು.." ಅಂದು ಕೈತೊಳೆದಿದ್ದ ತಟ್ಟೆ ಎತ್ತಿಕೊಂಡು ಹೊರಗೋದಳು.

ಗಂಡಸರಿಬ್ರು ಸ್ವಲ್ಪ ಹೊತ್ತು ಮೌನವಾಗಿ ಕುಳಿತರು. "ಮನ್ಸಿಗೇನು ತಿಳ್ಕಬ್ಯಾಡ ಮಾರಣ್ಣ......." ಅಂದ ಕೆಂಚ. ಮಾರಣ್ಣ ಟವೆಲ್ ಕೊಡವಿ ಏಳುತ್ತ

"ಏನೋ ನಿಮ್ಮ ಒಳ್ಳೇದಕ್ಕಂತ ಹೇಳ್ದೆ ನೋಡಪ್ಪ........ನಮ್ಗೇನೋ ನಮ್ ಕಳ್ಳುಬಳ್ಳಿ ಉದ್ಧಾರಾಗ್ಲಿ, ಒಂದು ಮಟ್ಟಕ್ಕೆ ಬರ್ಲಿ ಅಂಬ ಆಸೆ.. ನಿಮ್ಮಿಷ್ಟ. ನಿಮಿಗೆ ತಿಳದಂಗ್ಮಾಡ್ರಿ.. ಶಿವಣ್ಣನಿಗೇನ್ ಕೆಂಚ ಬೇಕಾದಂಗೈತೆ.. ನಿನ್ಮಗ ಇಲ್ದಿದ್ರೆ ಬ್ಯಾರೆ ಯಾರನ ಬರ್ತಾರೆ.."

ಅಂದು ಹೊರಡುತ್ತಾ "ವೀರೇಶಿನ ಕಳುಸ್ತ್ನಿ ನಾಳೆ ನೋಡ್ರಿ ಏನ್ಮಾಡ್ತೀರಿ.........." ಅಂದು ಬಸ್ಸತ್ತಿದ್ದ.

ಇವತ್ತು ಇವ್ಳಿಗೆ ಸರ್‍ಯಾಗಿ ರಿಪೇರಿ ಮಾಡೇಬಿಡ್ತೀನಿ........... ಅಂದುಕೊಳ್ಳುತ್ತ ಮನೆ ಸೇರಿದ ಕೆಂಚ. ಆದರೆ ಬಸ್ವೀನ ನೋಡಿದ್ಮೇಲೆ ಒಂದು ಮಾತೂ ಬರಲಿಲ್ಲ. ಬಸ್ವಿ ಮುಖ ಊದಿತ್ತು. ಮಾರಣ್ಣನ ಮಾತು ಕೇಳಿ ಅವಳ ಹೊಟ್ಟೆಯಲ್ಲಿ ಬೆಂಕಿ ಬಿದ್ದಂಗಾಗಿತ್ತು. ಮಗನ್ನ ಗಟ್ಟಿಗೆ ತಬ್ಬಿಕೊಂಡು, ಸೆರಗಿನಲ್ಲಿ ಮುಚ್ಚಿಕೊಂಡು ಮಲಗಿದ್ಲು ರಾತ್ರಿಯೆಲ್ಲಾ. ಕಣ್ಣಾಗಿನ ನೀರು ತಪ್ಪಲೇ ಇಲ್ಲ.

ಕೆಂಚನಿಗೋ ಒಳ್ಳೆಯ ಪೀಕಲಾಟ. ಆ ಕಡೆ ಸಾಲಗಾರನ ಕಾಟ. ಒಂದೆಡೆ ಅವ್ವ ಮಗನ ಯೋಚ್ನೆ. ಇನ್ನೊಂದೆಡೆ ವೀರೇಶಿ, ಮಾರಣ್ಣನ ಮಾತುಗಳು. ಅವ್ವ ಅತ್ತ ಇತ್ತ ಹೊಯ್ದಾಡುತ್ತಿದ್ದಾಗಲೇ ವೀರೇಶಿ, ರತ್ನಿ ಬಂದಿಳಿದರು. ವಿರೇಶಿಯಂತೂ ಕೂಗಾಡುತ್ತಲೇ ಮನೆಯೊಳಗೆ ಕಾಲಿರಿಸಿದ್ದ

"ಅಲ್ಮಾವ ದುಡ್ಡಿಸ್ಕಂಡು ಬಂದೋನು ಮತ್ತೆ ಆ ಕಡಿಗೆ ತಿರ್ಗಿ ನೋಡ್ದಂಗಿದ್ರೆ ಏನ್ಗತಿ........? ವಟ್ಟೆಗೇನ್ ತಿನ್ತಿ ಮಾವ ನೀನೂ..? ಇಸಕಬೇಕಾದ್ರೆ ಇರೋ ತೆವ್ನ ಕೊಡ್ಬೇಕಾರೆ ಇರಲ್ನೋಡು.. ಅಲ್ಲಾ, ಜನ ಸಾಲ ಸಾಲ ಅಂತ ನಮ್ಮನಿಗೆ ಅಲೆದಾಡಿದ್ರೆ ನನ್ನ ಪ್ರಿಸ್ಟೇಜೇನಾಗ್ತೈತೆ ಯೇಳು..? ಏಟನಾಗ್ಲಿ ಮಾನ ಮರ್ವಾದೆ ಇಲ್ಲದ ಜನ ನೀವೂ......." ಅಂತ ಒಂದೇ ಸಮನೆ ಒದರಾಡಿದ.

ಇತ್ತ ರತ್ನಿ ಅವ್ವನ ಬಳಿ "ಯೇನವ್ವಾ, ಯಿಂಗೆಲ್ಲ ಮಾಡಿದ್ರೆಂಗವ್ವಾ.....? ಅಲ್ಲಾ, ಆ ಸಾಬಿ ವತಾರೆ ಮನೆಗ್ತಾವ ಬಂದಿದ್ದೆ ಸೈ ನೋಡು, ವಳ್ಳೆ ದನಕ್ಕೆ ಬಡ್ದಂಗೆ ಬಡ್ಡೂ, ಬಾಯಿಗ್ಬಂದಂಗೆ ಬೈದೂ ನಿಂತ ನಿಲುವಿನ್ಯಾಗೆ ಕರ್ಕಂಡದೇ ಬಂದ್ರು......." ಅಂತ ಸೊರಸೊರ ಅಂದ್ಲು. ಕಣ್ಣು, ಮೂಗು ಒರೆಸಿಕೊಂಡು.

"ಮಾರಣ್ಣ ಬಂದ್ರೆ ಬೈದು ಕಳ್ಸಿದ್ಯಂತೆ..? ಅಲ್ಲವ್ವ, ಅ ಹುಡ್ಗನ್ನ ಮನ್ಯಾಗಿಟ್ಕಂಡ ಏನ್ಮಾಡ್ತೀಯೇಳವ್ವಾ? ಇತ್ಲಾಗೆ ಓದು ಬರಹ ಕಲ್ತಂಗರ ಅಲ್ಲ ಅತ್ಲಾಗೆ ವೊಲಮನಿ ಕೆಲ್ಸನರ ಕಲ್ತಂಗಲ್ಲ. ಸುಮ್ಕೆ ಪೋಲಿ ತಿರ್ಗಾಕೆ ಬಿಟ್ಟೆಯಲ್ಲಾ..? ಹತ್ತೊರ್ಷದ ಕತ್ತೆ ಅದು. ಈಗನ ದುಡ್ಕಂಡು ತಿಂಬಾದನ್ನ ಕಲ್ಸು...?" ರತ್ನಿ ಮೂಗು ಮುಸುಡಿ ತಿರುವಿದ್ಲು.

"ಹೊಲನ ಅಡವಿಟ್ಟಾನ ದುಡ್ತಂದು ಒಪ್ಪಿದ್ರೆ ಸರಿ........." ಅಂತ ಗಂಡಹೆಂಡ್ತಿ ಇಬ್ಬರು ನಿಷ್ಠುರವಾಗಿ ಹೇಳಿ ಹೋದಾಗ ಬಸ್ವಿ ಮೆತ್ತಗಾದ್ಲು. ತಿಪ್ಗ ಶಿವಣ್ಣನ ಮನೆ ಸೇರಿದ್ದ.

"ಏಯ್ ತಿಪ್ಪೇಶಿ............ ಕಿಚನೆಲ್ಲಾ ಕ್ಲೀನ್ಮಾಡ್ದೇನೋ..........?" ಕೂಗುತ್ತಲೇ ಬಂದಳು ಇಂದ್ರ. "ಹೂಂನಕ್ಕ ಆತು........." ಅಂದು ಹಿತ್ತಲ ಕಡೆಗೆ ಓಡಿ ಕೈನಲ್ಲೊಂದು ಅಲ್ಯುಮಿನಿಯಂ ತಟ್ಟೆ, ಲೋಟ ಹಿಡಿದುಕೊಂಡು ಬಂದ ತಿಪ್ಗ. ಇಂದ್ರ ಒಳಗಿನಿಂದ ಒಂದು ಪಾತ್ರೆಯಿಡದು ಬಂದು, ಅದರಲ್ಲಿನ ಅನ್ನಸಾರನ್ನು ಆ ತಟ್ಟೆಗೆ ಸುರುವಿ "ಬೇಗ ತಿಂದು ಮಲ್ಕೋ........" ಎಂದು ಅಡುಗೆ ಮನೆಯ ಬಾಗಿಲಿಕ್ಕಿ ಹೋದಳು. ತಟ್ಟೆ ಹಿಡಿದುಕೊಂಡು ಹಿತ್ತಲಿನತ್ತ ಹೋದ ತಿಪ್ಗ. ಕೆಂಚನಿಗೆ ಬಲು ಸೋಜಿಗವಾಯ್ತು. ಅವನೆಂದೂ ಇಲ್ಲಿ ಉಳಿದಿರಲಿಲ್ಲ. ಮನೆಯ ಒಳಗಿನದೇನೂ ಅವನಿಗೆ ಗೊತ್ತಿರಲಿಲ್ಲ.

"ಅದ್ಯಾಕ್ಮಗ ನಿನಿಗೆ ಬ್ಯಾರೆ ಸಿಲಾವರುದ್ತಟ್ಟೆ........?" ಅಂತ ತಿಪ್ಗನನ್ನು ಕೇಳಿದ. "ಇಲ್ಲಂಗೆಯಾ........." ಅಂದ ತಿಪ್ಗ. ತಟ್ಟೆಯಲ್ಲಿನ ಅನ್ನವನ್ನ ಗಬಗಬನೆ ತಿನ್ನುತ್ತಿದ್ದ. ಅವನು ಹಸಿದಿದ್ದ.

"ವೋಗ್ಲೋಗು ಇನ್ನಂದ್ಸಲ್ಪ ಅನ್ನಯಿಕ್ಕೆಂಡು ತಿನ್ನೋಗು......" ಅಂದ ಕೆಂಚ. "ಇಲ್ಕಣಪ್ಪ ಎಲ್ಲಾ ಖಾಲಿ ಆಗೈತೆ. ನಾನೇ ಯಲ್ಲಾ ಕಿಲೀನ್ಮಾಡ್ದೆ.........." ಅಂದು ಸರಸರ ಎದ್ದು, ತಟ್ಟೆ ಲೋಟ ತೊಳೆದಿಟ್ಟು, ಅಲ್ಲೇ ಮೂಲೆಯಲ್ಲಿ ನಿಲ್ಲಿಸಿದ್ದ ಚಾಪೆ, ಚಾದರ ಹಿಡಿದು "ಬಾರಪ್ಪ ಮಲ್ಗನಾ........." ಅಂತ ಹೊರಟ ತಿಪ್ಗ.

ಬಸವಿ ಮಗನ ನೆನಪಾಗಿ ಕಣ್ಣೀರು ಹಾಕಿದಾಗಲೆಲ್ಲಾ "ಯಾಕಳ್ತಿಯೇ ಬಸ್ವಿ ಸುಮ್ಕೆ.. ನಿನ್ಮಗ್ನೇನು ಬ್ಯಾರೆ ಮನ್ಯಾಗದನೇನು..? ನಮ್ ಕಳ್ಳುಬಳ್ಳಿ ಮನ್ಯಾಗಿರಾದು.. ಅಲ್ಲಿ ಇಲ್ಲಿಗಪ್ಪನಂಗೆ ಉಣ್ಕಂಡು ತಿನ್ಕಂಡು ಇರ್ತಾನೇಳು.." ಅಂತಿದ್ದ ಕೆಂಚ. ಅವ್ನಿಗ್ಯಾಕೋ ಕಣ್ಣುಮುಚ್ಚಲು ಆಗಲೇ ಇಲ್ಲ. ಕಣ್ಣು ಮುಚ್ಚಿದೊಡನೆ ತಟ್ಟೆ ತುಂಬಾ ಸಾರು ಹಾಕಿ, ಬಿಸಿ ಮುದ್ದೆಯಿಟ್ಟು, ಪಕ್ಕದಲ್ಲಿ ಕೂತು ಮಗನಿಗೆ ಉಣ್ಣಿಸುತ್ತಿದ್ದ ಬಸ್ವಿಯ ಚಿತ್ರ ಅವನನ್ನ ಬೆಚ್ಚಿ ಬೀಳಿಸುತ್ತಿತ್ತು.

ಪಕ್ಕದಲ್ಲಿ ಮಲಗಿದ್ದ ತಿಪ್ಗ "ಅಪ್ಪಾ, ಹಬ್ಬಕ್ಕೆ ಊರಿಗೆ ಕರ್ಕಂಡೋಗು........ ಅವ್ವನ್ನ ನೋಡಂಗಾಗೈತೆ........." ಅಂದಾಗ ಕೆಂಚನಿಗೆ ಸ್ವರ ಹೊರಡದಾಯ್ತು. ಮತ್ತೆ ತಿಪ್ಗನೇ ಹೇಳಿದ

"ಮೊನ್ನಿನಾಗ ವೀರೇಶ್ಮಾವ, ಮಾರಪ್ಮಾವ ಬಂದಿದ್ರು, ಅಯಕ್ಕನ್ತಾವ ಏನೇನ ಯೇಳಿ ದುಡ್ಡಿಸ್ಕಂಡೋದ್ರು........" ಯಾರೋ ಎದೆಗೆ ಗುದ್ದಿದ ಹಾಗಾಯ್ತು ಕೆಂಚನಿಗೆ. "ಅದ್ಕೆ ಸಿವಣ್ಣಂಗೆ ಮಾತಾಡ್ದಬಿಡು. ಯಂಗೋ ಇನ್ನೊಂದ್ನಾಕ್ದಿವ್ಸ ಇರು ಆಮ್ಯಾಕೆ ಊರಿಗೋಗನ ಅತ್ಲಾಗೆ.........." ಅಂದು ನಿಟ್ಟುಸಿರಿಟ್ಟ ಕೆಂಚ.

ಮಾರನೆಯ ದಿನ ಪುರುಸೊತ್ತೆ ಇಲ್ಲದಷ್ಟು ಕೆಲಸ ಅವರಿಗೆ. ಒಂದ್ನೈವತ್ತು ಜನ ಬಂದಿದ್ದರು ಊಟಕ್ಕೆ. ತಿಪ್ಗ ಹೊರಗೆ ತಟ್ಟೆಗಳನ್ನ ತೊಳೆಯುತ್ತಿದ್ದ. ಕೆಂಚ ಎಲ್ಲರೂ ಉಂಡುಬಿಟ್ಟ ತಟ್ಟೆಗಳನ್ನು ಎತ್ತಿಕೊಂಡು ಹೋಗಿ ಮಗನಿಗೆ ಕೊಡುತ್ತಿದ್ದ. ಎಲ್ಲಾ ಮಾಂಸದಡುಗೆ. ಆದರೆ ಯಾರೂ ಸರಿಯಾಗಿ ತಿನ್ನದೆ ಎಲ್ಲಾ ಹಾಗೆಯೆ ಬಿಟ್ಟು ಕೈ ತೊಳೆದಿದ್ದರು.

"ಬಲೇ ಅನ್ಯಾಯದ ಜನ ಕಣ್ಲೆ ತಿಪ್ಗ ಈ ಪ್ಯಾಟಿ ಜನ. ಅಲ್ಲಾ, ಬರೇ ಇದ್ರೆ ಎನ್ನಂತೇಳು ಸರ್ಯಾಗಿ ಉಣ್ಣಾಕ್ತಿನ್ನಾಕೆ ಬರ್ದಿದ್ಮ್ಯಾಕೆ........." ಅಂದು, ತಿಪ್ಗ ತೊಳೆದಿಟ್ಟಿದ್ದ ತಟ್ಟೆಗಳನ್ನ ಎತ್ತಿಕೊಂಡು ಒಳ ಹೋದ.

ಅಡುಗೆ ಮನೆಯಲ್ಲಿ ಇಂದ್ರ ಇದ್ದಳೆಂದು ಬಾಗಿಲಲ್ಲೆ ನಿಂತ. ಅವಳು ಇವನನ್ನು ನೋಡಲಿಲ್ಲ. ಅಲ್ಲಿಯೇ ಕಟ್ಟೆಯ ಮೇಲೆ ನಾಲ್ಕು ಎಂಜಲು ತಟ್ಟೆಗಳಿದ್ದವು. ಆ ತಟ್ಟೆಗಳಲ್ಲಿ ಹಾಕಿದ್ದ ಮಾಂಸದ ತುಂಡುಗಳೆಲ್ಲ ಹಾಗೆಯೇ ಇದ್ದು, ಅದರಲ್ಲಿಯೇ ಕೈ ತೊಳೆದಿದ್ದರು ಯಾರೋ ಪುಣ್ಯಾತ್ಮರು. ಇಂದಿರ ಆ ತಟ್ಟೆಗಳಲ್ಲಿನ ಎಂಜಲು ನೀರನ್ನೆಲ್ಲ ಬಸಿದು, ತುಂಡುಗಳನ್ನೆಲ್ಲ ಮೇಲಿಟ್ಟಿದ್ದ ಹಳೆಯದಾದ ಒಂದು ಅಲ್ಯುಮಿನಿಯಂ ಪಾತ್ರೆಯೊಳಗೆ ಹಾಕಿಟ್ಟಳು. ಎಲ್ಲವನ್ನು ನೋಡಿದ ಕೆಂಚ

"ಈ ಮನೆಯ ನಾಯಿಗಳೇ ಪುಣ್ಯದವು......"

ಎಂದುಕೊಳ್ಳುತ್ತ ಮೆಲ್ಲನೆ ಒಳಗೋಗಿ ತಟ್ಟೆಗಳನ್ನಿಟ್ಟು ಹೊರಬಂದ. ಬಂದವರ ಊಟವೆಲ್ಲ ಮುಗಿದ ಬಳಿಕ ಕೆಂಚನಿಗೆ ತಟ್ಟೆ ಬಂತು. ತಿಪ್ಗ ಇನ್ನೂ ಹೊರಗೆ ಏನೋ ಮಾಡುತ್ತಲಿದ್ದ. ಕೆಂಚ ತಾನುಂಡ ತಟ್ಟೆಯನ್ನು ಎತ್ತಿಕೊಂಡು ಹೋಗುವ ಹೊತ್ತಿಗೆ ತಿಪ್ಗ ಕೆಲಸವನ್ನೆಲ್ಲ ಮುಗಿಸಿ, ಹಿತ್ತಲಲ್ಲಿದ್ದ ತನ್ನ ತಟ್ಟೆ, ಲೋಟ ಹಿಡುದು ಹೊರಟಿದ್ದ. ಕೆಂಚ ತಟ್ಟೆಯನ್ನು ತೊಳೆದು, ಅದನ್ನ ಅಡುಗೆಯ ಮನೆಯಲ್ಲಿಟ್ಟು ಹೊರಗೆ ಉಣ್ಣುತ್ತಿದ್ದ ತಿಪ್ಗನ

ಪಕ್ಕಕ್ಕೆ ಹೋಗಿ ಕೂತ. ತಿಪ್ಪನ ತಟ್ಟೆಯಲ್ಲಿ ಅನ್ನ, ಸಾರು ಒಂದ್ನಾಲ್ಕು ಎಲುಬಿನಂತ ತುಂಡುಗಳಿದ್ದವು.

"ಬೆಳಗ್ನಿಂದ ಮುಕ್ಕಿ ಮುರಿಯಂಗೆ ದುಡುದ್ರೂ ವಟ್ಟುಂಬಾ ಉಣ್ಣಾಕ್ಕಿಕಾಕೆ ಯಂಗಾಡುತಲ್ಲ ಈ ಯಂಗ್ಸೂ.........? ಯೇಟೊಂದು ಜನ ಪುಕ್ಸಟ್ಟೇರು ಬಂದು ತಿಂದು ಬಿಸಾಕಿ ವೋದ್ರೆ ಖುಸಿ ಇವ್ರಿಗೆ........ ದುಡಿಯ ಮಕ್ಳಿಗೆ ವಟ್ಟೆ ತುಂಬ ಇಕ್ಕಾಕ್ಕೇನ್ ಧಾಡಿಯಿಕೀಗೆ.............?"

ಸಂಕಟದಿಂದ ಮಗನ ಮುಂದೆ ಒದರಾಡಿದ ಕೆಂಚ. ಅವನ ಹೊಟ್ಟೆಯಲ್ಲಿ ಉರಿ ಎದ್ದಿತ್ತು. ಆ ಹೊತ್ತಿಗೆ ಸರಿಯಾಗಿ ಒಳಗಿಂದ ಇಂದ್ರ ತಿಪ್ಪನ್ನ ಕೂಗಿದಳು. "ಬಂದೇ........" ಎನ್ನುತ್ತ ಉಣ್ಣುವುದನ್ನು ನಿಲ್ಲಿಸಿ ಓಡಿದ ತಿಪ್ಪ. ಬರುವಾಗ ಅವನ ಕೈಯಲ್ಲಿ ಒಂದು ಸಣ್ಣ ಹಳೆಯ ಅಲ್ಯುಮಿನಿಯಂ ಪಾತ್ರೆಯಿತ್ತು. ಅದರ ತುಂಬಾ ತುಂಡುಗಳಿದ್ದು, ಅವುಗಳನ್ನು ತನ್ನ ತಟ್ಟೆಗೆ ಸುರುವಿಕೊಂಡ ತಿಪ್ಪ. ಕೆಂಚ ಕಣ್ಣು ಕೆಕ್ಕರಿಸಿ ನೋಡಿದ. ಇಂದ್ರ ಎಂಜಲು ತಟ್ಟೆಯ ನೀರು ಬಸಿದು, ಅದರಿಂದ ಆಯ್ದು ಇಟ್ಟಿದ್ದ ತುಂಡುಗಳಿದ್ದ ಪಾತ್ರೆಯಿದು..! ಬರಿಯ ಒಗ್ಗರಣೆಯಲ್ಲೆ ಕೋಳಿಯನ್ನ ಉಪ್ಪಾಕಿ ಮೆತ್ತಗೆ ಬೇಯಿಸಿ ಮಗನ ಮುಂದೆ ಇಡುತ್ತಿದ್ದ ಬಸ್ವಿಯ ನೆನಪಾಯ್ತು. ಅವನ ಕರುಳು ಕಿವುಚಿದಂಗಾಯ್ತು.

"ಉಣ್ಬೇಡ ಬಿಡಲೇ.." ಅಂತ ತಿಪ್ಪನ ತಟ್ಟೆಯನ್ನು ಕಸಿದುಕೊಂಡ.

"ಅಪ್ಪಾ ಕೊಡಪ್ಪ.. ಬಾಳ ವಟ್ಟೆ ಹಸದೈತೆ ಕೊಡಪ್ಪಾ"

ಅಂತ ತಿಪ್ಪಾಗ ತಟ್ಟೆಗೆ ಕೈ ಹಾಕುತ್ತಿದ್ದಂತೆ ಅವನಿಗೊಂದು ಎತ್ತಿ ಬಾರಿಸಿದ.

"ವೋಗಲೇ ಒಂದಿನ ಉಣ್ದಿದ್ರೇನು ಸಾಯಲ್ಲ ವೋಗ... ವೋಗಿ ಕೈಚೀಲ ವೊಂದಿಸ್ಕ.."

ಅಂದವನೆ ತಟ್ಟೆಯನ್ನು ಸೀದಾ ಶಿವಣ್ಣನ ಮುಂದೆ ಎತ್ತಿಕೊಂಡು ಹೋದ. ಹಾಲ್‌ನಲ್ಲಿ ಎಲ್ಲರೂ ಕೂತು ತಾಂಬೂಲ ಮೆಲ್ಲುತ್ತ ಮಾತಿನಲ್ಲಿ ತೊಡಗಿದ್ದರು. ಅಲ್ಲಿದ್ದ ಇಂದ್ರನ್ನ ನೋಡಿ

"ಯೇನವ್ವ ಯಿಂದ್ರವ್ವ.., ನಿನ್ನ ದೊಡ್ಡ ಗನಸ್ತೆ ಅಂದ್ಕಂಡಿದ್ನಲ್ಲವ್ವಾ. ನನ್ ಮಗುನ್ನ ನಿನ್ ಮನೆ ಕಾಯೋ ನಾಯಿ ಅಂತ ತಿಳ್ಕಂಡೇನವ್ವಾ........?"

ಅಂದಾಗ ಅಲ್ಲಿ ಕುಂತಿದ್ದವರೆಲ್ಲ ಒಮ್ಮೆಲೆ ಎಗರಿಬಿದ್ದರು.

"ಏಯ್ ಏನೋ ಅದು ಗಲಾಟೆ.........? ಏನಾಯ್ತೀಗ?" ಶಿವಣ್ಣ ರೇಗಿದ.

"ಯೇನಾಗೈತೆ ಅಂತ ನಿನ್ನೆಣ್ತಿನ್ಕೇಳು. ಅಲ್ಲಾ... ಯಾರೋ ಉಂಡು, ಕೈ ತೊಳ್ಕಂಡು ಬಿಟ್ಟಿದ್ದ ತಟ್ಯಾಗಿಂದ ತುಂಡು ಆಯ್ಕಂಡು, ನನ್ಮಗನಿಗೆ ತಿನ್ನು ಅಂತ ಕೊಟ್ಟಿದ್ದಾಳಲ್ಲ.. ವಟ್ಟಗೆ ಅನ್ನ ತಿಂಬಾರ್ದ್ಮಾಡ ಕೆಲ್ಸನಯಿದೂ...........?" ಕೆಂಚ ಆವೇಶಗೊಂಡಿದ್ದ.

"ಏಯ್ ನೆಟ್ಟಗೆ ಮಾತಾಡೋ........." ಕೆಂಪಗಾಗಿದ್ಲು ಇಂದ್ರ.

"ಯೇನ್ ನೆಟ್ಟಗವ್ವ..? ನೀನ್ಮಾಡಿರ ಬದ್ಕು ನೆಟ್ಟಗಿದ್ದಿದ್ರೆ ನನ್ಮಾತೂ ನೆಟ್ಟಗಿರಾವು.. ಅಲ್ಲವ್ವ ನನ್ಮಗನ್ನೆ ನೀನೇನ್ ಬಿಟ್ಟಿ ಕೂಳಾಕ್ತಿಯಾ..? ಯೇನ್ ವೊದಿದ್ರೇನ್ ಬರುದ್ರೇನ್ ವಳ್ಳೆ ಗುಣ ಇಲ್ದಿದ್ಮ್ಯಾಕೆ.." ಅಂದ ಕೆಂಚ.

"ಸಾಕ್ಮುಚ್ಕೋ ಬಾಯ್ನ್.." ಶಿವಣ್ಣ ಗದರಿದ.

"ಅದ್ಯಾಕಪ್ಪ... ನಾನೇನು ನಿನ್ನ ಮನ್ಯಾಗೆ ಕಳ್ತನ ಮಾಡಿಲ್ಲ ಬಾಯ್ಮುಚ್ಚಾಕೆ. ನನಗೇನು ತಿಂಬಾಕೆ ಗತಿಯಿಲ್ಲ ಅಂತ ನನ್ಮಗುನ್ನ ನಿನ್ ಮನ್ಯಾಗೆ ಬಿಟ್ಟಿದಿನಿ ಅಂದ್ಕಂಡಿಯಾ..? ಇಲ್ಲಾ, ನಿಸ್ದುಡ್ಡು ದೊಡ್ಡಸ್ತಿಕೆ ನೋಡಿ ನನ್ಮಗುನ್ನ ನಿನ್ ಮನ್ಯಾಗೆ ಬಿಟ್ಟೀನಿ ಅಂದ್ಕಂಡಿಯಾ..? ಯೇನೋ ನಮ್ ಜನ.. ನಮ್ ಕಳ್ಳುಬಳ್ಳಿ.. ನಿಮ್ಗೂ ಒಂದು ಆಸರ, ನನ್ ಮಗುನ್ಗೂ ಒಂದು ಆಸರ ಅಂತ ಬಿಟ್ಟೆ. ನೀನಿವತ್ತು ಯೇಟು ದೊಡ್ಮನ್ಸ ಯಾಕೆ ಆಗಿರ್ವಲ್ಲಿ ಯೇಳು ನಿಮ್ಮಪ್ಪ, ನಿಮ್ಮಜ್ಜ ಸಣ್ಣೊಯ್ಸನಾಗೆ ಗೌಡ್ರ ಮನ್ಯಾಗೆ ಸಗ್ಣಿ ಬಾಚಿ, ಎಂಜಲೆತ್ತಿ ಬದುಕ್ದಾರು ಅನ್ನದು ಮರಿಬಾರ್ದು.. ಮರಿಬಾರ್ದಪ್ಪ ಶಿವಣ್ಣ ಮೂಲ ಮರಿಬಾರ್ದು.. ಏನಿದ್ಯೆ ಬುದ್ಧಿ ಕಲ್ತು, ದೊಡ್ಡ ದೊಡ್ಡ ಜನರು ಜತೀಗೆ ಕುಂತೆದ್ರೂ ಸಣ್ತನ ಸಣ್ ಬುದ್ದಿ ತನ್ನ ರಕುತದಾಗೆ ಹರೀತ್ಯೆತೆ ಅಂತ ತೋರ್ಸಿದ್ಲು ನಿನ್ನೆಣ್ತಿ ಇವತ್ತು.. ಬರ್ತೀನಪ್ಪ, ನಾನು ನನ್ಮಗನ್ನ ಕರ್ಕಂಡು ವೋಗ್ತೀನಿ..." ಅಂತ ಹೊರಟ ಕೆಂಚ

"ಕರ್ಕಂಡು ಹೋಗೋ ಯಾರು ಬೇಡಾಂತರೆ ನಿನಗೆ..? ನಿಮ್ಗೆಲ್ಲ ಹೊರಗಡೆ ನಿಲ್ಲಿಸಿ, ಎತ್ತಿ ಕೂಳಾಕಿ ದೂರ ಸರೀತಾರಲ್ಲ ಅವ್ರೆ ಸರಿ... ಅವ್ರೆ ಸರಿ ನಿಮ್ಗೆ... ಅಲ್ಲಿಗೇ ಲಾಯಕ್ಕು ನೀವೂ..." ಇಂದ್ರ ಬುಸುಗುಟ್ಟಿದಳು.

ಕೆಂಚ ನಿಂತು "ಹೌದವ್ವ ನೀನು ಯೇಳಾದು ಸರಿನೇಯ. ಯೇನೋ ನಾಕು ಅಕ್ಸರ ಕಲ್ತೆ ನಾಕ್ದುಡ್ಡು ಸಂಪಾದಿಸ್ದೆ ಅಂತ ನೀನೇ ನಮ್ಗೆ ಅನ್ನ ಎತ್ತಾಕ್ತಿ, ಬ್ಯಾರೆ ತಟ್ಟೆ ಲೋಟ ಇಟ್ಟಿದಿ... ಹೊರಗೆ ಉಣ್ಣಾಕೆ ಕುಂದ್ರುಸ್ತಿ... ಎಂಜಲು ತಿನ್ನಕಾಕ್ತಿ ಅಂದ್ಮ್ಯಾಕೆ... ಅನಾದಿ ಕಾಲದಿಂದ ನಡೆಸ್ಕೆಂಡು ಬಂದಿರಾರ್ದು ಯಾವ ಲೆಕ್ಕಯೇಳು...? ವರಾಗ್ನಿಲ್ಲಿ ಉಣ್ಣಾಕಾಕರೂ, ನಮ್ಮನ್ನ ನೋಡಿ ದೂರ ಸರ್ಕಳಾರೂ ಬ್ಯಾರೆರವ್ವಾ.. ಅವ್ರೆಲ್ಲ ಬ್ಯಾರೆ.. ಆದ್ರೆ ನೀವೂ...? ನೀವು ನಮ್ಮರವ್ವ..! ನಮ್ಮ ಜನ, ನಮ್ ಕಳ್ಳುಬಳ್ಳಿ ಕಣವ್ವ ನೀವೂ ನಮ್ ಕಳ್ಳುಬಳ್ಳಿ..."

ಕಣ್ಣಲ್ಲಿ ತುಂಬಿ ಬಂದ ಕಂಬನಿಯನ್ನ ತೊಡೆದುಕೊಂಡು, ಕೈಚೀಲ ಹಿಡಿದು ನಿಂತಿದ್ದ ತಿಪ್ಗನ ಕೈಹಿಡಿದುಕೊಂಡು ಹೊರಟ ಕೆಂಚ. ಮಗನನ್ನ ನೋಡಿ ಬಸ್ವಿ ಹೇಗೆ ಖುಷಿಪಡಬಹುದು...! ಎಷ್ಟು ಸಂಭ್ರಮಪಡಬಹುದು...! ಎಂಬುದನ್ನ ಕಲ್ಪಿಸಿಕೊಳ್ಳುತ್ತ ತನ್ನೆದೆಯಲ್ಲಿನ ತಳಮಳ, ನೋವು, ತನ್ನ ಹೊಟ್ಟೆಯಲ್ಲಿನ ಸಂಕಟವನ್ನ ಮರೆಯುವುದಕ್ಕೆ ಪ್ರಯತ್ನಿಸಿದ.

✦ ✦

ವ್ಯಭಿಚಾರ

ಲೇ ಸುಜೀ.. ಅದು ಬರ್‍ತಿದೇ ಕಣೇ..."

ಕೂಗುತ್ತ ಬಂದು ಮಧ್ಯಾಹ್ನದ ಸಿಹಿನಿದ್ದೆಯ ತಯಾರಿಯಲ್ಲಿದ್ದ ನನ್ನನ್ನು ನನ್ನ ತಂಗಿ ಸವಿತ ಬಂದು ಕೈಹಿಡಿದು ಎಳೆಯತೊಡಗಿದಳು. ನಾನು ಕಣ್ಣರಳಿಸಿ "ಎಲ್ಲಿ?" ಎಂದೆ. "ಇಲ್ಲೆ ಕುತ್ಕೊಂಡು ಎಲ್ಲಿಂದ್ರೆ ಹೇಗೆ ಕಾಣುತ್ತೆ? ಬೇಗ ಎದ್ಬಾ ಸ್ವಲ್ಪ ತಡವಾದ್ರು ಆ ಪ್ರಾಣಿ ಗುಹೆಯೊಳಕ್ಕೆ ನುಸುಳಿಬಿಡುತ್ತೆ........" .

ಸವಿ ನನ್ನ ಹೆಚ್ಚು ಕಮ್ಮಿ ಎಳೆದುಕೊಂಡೇ ಹೊರಟಳು. ನಾವು ವರಾಂಡದೊಳಕ್ಕೆ ಕಾಲಿಡುವುದಕ್ಕೂ ಸವಿ ಹೇಳಿದ ಆ ಪ್ರಾಣಿ ನಮ್ಮನೆ ಮುಂದೆ ಹಾಯುವುದಕ್ಕೂ ಸರಿಯಾಯ್ತು. ನಾವು ಕಿಟಕಿಯಿಂದ ಇಣುಕುತ್ತಿರುವಂತೆಯೇ ನಮ್ಮನೆಯ ಎದುರು ಮನೆಯಿಂದ ಎಡಕ್ಕಿದ್ದ ಎರಡನೆಯ ಮನೆಯ ಮುಂದೆ ನಿಂತು, ಗೇಟು ತೆರೆದು ಒಳನಡೆದು ಕಾಲಿಂಗ್‌ಬೆಲ್ ಮೇಲೆ ಬೆರಳಿರಿಸಿತ್ತು! ಕೆಲವೇ ಕ್ಷಣಗಳಲ್ಲಿ ಆ ಮನೆಯ ಬಾಗಿಲು ತೆರೆಯಿತು. ತೆರೆದ ವ್ಯಕ್ತಿ ನಮಗೆ ಕಾಣಿಸಲಿಲ್ಲ ಆದರೆ ಹೊರಗಿನ ಪ್ರಾಣಿ ಒಳನುಸುಳಿದ್ದು ಸ್ಪಷ್ಟವಾಗಿ ಕಾಣಿಸಿತು.

ಹಿಂದೆಯೇ ಬಾಗಿಲು ಮುಚ್ಚಿದಾಗ "ಹದಿನೈದು ದಿವಸ ಎಲ್ಲಿ ನಾಪತ್ತೆ ಆಗಿತ್ತೊ? ಬಹುಶಃ ಬೇರೆಲ್ಲಿಯಾದ್ರು ಕಾಂಟ್ರ್ಯಾಕ್ಟ್ ಇತ್ತೋ ಏನೋ........." ಸವಿ ಕುಚೇಷ್ಟೆ ದನಿಯಲ್ಲಿ ಹೇಳಿದಳು.

"ಎಲ್ಲಿ ಹಾಳಾಗೋಗಿದ್ನೋ ಮತ್ತೆ ಪ್ರತ್ಯಕ್ಷ ಆಗಿದ್ದಾನೆ......" ಎಂದೆ ನಾನು.

ನಮ್ಮ ತಲೆಗಳನ್ನು ಕಿಟಕಿಯಿಂದ ಒಳಕ್ಕೆಳೆದುಕೊಂಡು ಮಹಡಿ ಏರಿದೆವು. ಮೇಲೆ ರೂಂನಲ್ಲಿ ಎಲ್ಲಾ ಕಿಟಕಿಗಳನ್ನು ತೆರೆದು ಆ ಮನೆ ಸರಿಯಾಗಿ ಕಾಣುವಂತೆ ಇಬ್ಬರೂ ಕುರ್ಚಿ ಎಳೆದುಕೊಂಡು ಆ ಪ್ರಾಣಿಯಿಂದು ಎಷ್ಟೊತ್ತಿಗೆ ವಾಪಸ್ಸು ಬರುವುದೋ ಎಂಬ ಕುತೂಹಲದಿಂದ ಕುಳಿತೆವು. ಟೈಂಪಾಸ್ ಮಾಡಲು ಕೇರಂ ಆಡಲು ನಿರ್ಧರಿಸಿ, ಪಾನ್ಸ್ ಜೋಡಿಸುತ್ತಿದ್ದಾಗಲೇ ಆ ಮನೆಯ ಗೇಟು ಶಬ್ದವಾಗಿ ಸರಕ್ಕನೆ ಎದ್ದು ನೋಡಿದರೆ ಆ ಪ್ರಾಣಿ ಗೇಟು ತೆರೆದುಕೊಂಡು ಹೊರಬರುತ್ತಿದೆ.

"ವಾಟ್ ಎ ಸರ್‌ಪ್ರೈಸ್! ಹೋಗಿನ್ನು ಹತ್ತು ನಿಮಿಷ ಕೂಡ ಆಗಿಲ್ಲ ಆಗ್ಲೆ ವಾಪಸ್ಸು ಬರ್ತಿದ್ದಾನೆ..........!" ನಾನು ಆಶ್ಚರ್ಯದಿಂದ ಉದ್ಗರಿಸುತ್ತಿದ್ದಂತೆ ಆ ಪ್ರಾಣಿ ನಮ್ಮನೆಯನ್ನು ಸಮೀಪಿಸಿತ್ತು.

"ಏನಿಲ್ಲಾಂದ್ರು ಒಂದ್ಮೂರು ರೌಂಡಾದ್ರು ಮುಗ್ಸಿ ಬರ್ಬಹುದ್ದು ಅಂದ್ಕೊಂಡಿದ್ರ ಇದೇನು ಹೀಗೆ..? ಏನೋ ಎಡವಟ್ಟಾಗಿದೆ ಕಣೇ.."

ಸವಿ ಹೇಳಿದಾಗ ಇಬ್ರೂ ಜೋರಾಗಿ ನಕ್ಕೆವು. ನಮ್ಮ ನಗು ಕೇಳಿಸಿತೇನೋ ಹಿಂದಕ್ಕೆ ತಿರುಗಿ ನೋಡಿತು. ನಾವು ಕೆಳಗಿಳಿದು, ಬಾಗಿಲು ತೆರೆದು ಹೊರಬಂದಾಗ ಆಗಲೇ ಬೀದಿಯ ತಿರುವಿನಲ್ಲಿತ್ತು. ನಮ್ಮನ್ನು ನೋಡಿದ್ದೆ ಎದುರು ಮನೆಯ ವಿಮಲ ಆಂಟಿಯೂ ಹೊರ ಬಂದರು.

"ಏನ್ ಆಸಾಮಿ ದಿಢೀರ್ ಅಂತ ಪ್ರತ್ಯಕ್ಷ ಆಗಿ ದಿಢೀರಂತ ಮಾಯ ಆಗ್ಬಿಟ್ನಲ್ಲಾ........" ಆಂಟಿ ನಗುತ್ತ ಅಂದಾಗ

"ಅಯ್ಯೋ ಅವ್ನು ಪ್ರತ್ಯಕ್ಷ ಆಗಿದ್ದು ಮಾಯ ಆಗಿದ್ದು ಮುಖ್ಯ ಅಲ್ಲ ಆಂಟಿ ಹತ್ತೇ ನಿಮಿಷದಲ್ಲಿ ಮಾಯವಾಗಿದ್ದು ಮುಖ್ಯ.........."

ಎಂದು ಸವಿ ಅದು ಹೋದ ದಿಕ್ಕನ್ನೆ ನೋಡುತ್ತ

"ಅಲ್ಲಾ ಹದಿನೈದು ದಿನದ ಹಿಂದೆ ನಿತ್ಯ ಬರೋವಾಗ್ಲೇ ಹೊರಬರೋದು ಎರಡ್ಮೂರು ಗಂಟೆಯಾಗಿರೋದು... ಈಗ ಹದಿನೈದು ದಿನಗಳ gap ಆದ್ಮೇಲೂ ಕನಿಷ್ಠ ಅಂದ್ರೆ ಆರೇಳು ಗಂಟೇನಾದ್ರೂ ಇರ್ಬೇಕಿತ್ತು.."

ಸವಿ ಕಣ್ಣೊಡೆದು ಹೇಳಿದಾಗ ವಿಮಲ ಆಂಟಿ ಕಣ್ಣಗಲಿಸಿ

"ಏಯ್ ಹುಡ್ಗಿ ಬಹಳ ಜೋರಾಗ್ತಿದ್ದೀ............." ಎಂದರು ನಗುತ್ತ.

ನಾವು ನೋಡುತ್ತಿದ್ದಂತೆಯೇ ನಮ್ಮ ಬೀದಿಯಲ್ಲಿ ಅಲ್ಲಲ್ಲಿ ನಮ್ಮಂತೆ ನಾಲ್ಕೈದು ಗುಂಪುಗಳು ಸೃಷ್ಟಿಯಾದವು. ನಾವು ಮಾತಾಡುತ್ತಿದ್ದ ವಿಷಯವೇ ಅಲ್ಲಿಯೂ ಚರ್ಚಿತವಾಗುತ್ತಿರುವುದರಲ್ಲಿ ಯಾರಿಗೂ ಸಂಶಯವಿರಲಿಲ್ಲ.

"ನಾನೆಲ್ಲೋ ಗುಡ್ ಬೈ ಹೇಳಿರಬೇಕು ಅಂದ್ಕೊಂಡಿದ್ದೆ............."

"ಅಯ್ಯೋ ಅಷ್ಟು ಸುಲಭ ಅಲ್ಲಮ್ಮ ಅದು ಬಿಡೋದು..........."

"ಹೌದಾ ಆಂಟಿ ಅದು ಬಿಡೋದು ಅಷ್ಟು ಸುಲಭ ಅಲ್ವಾ.........?!"

"ಅಲ್ಲಾ, ಎಲ್ಲರಿಗೂ ಗೊತ್ತಾಗಿರೋವಾಗ ಆ ಮನೆಯೋರಿಗೆ ಗೊತ್ತಾಗಿರಲ್ವಾ........? so wonder ಅಲ್ವಾ?

ಹೀಗೆ ನಮ್ಮ ಮಾತುಗಳು ಆ ವಿಷಯದ ಸುತ್ತಲೇ ಹರಿದಾಡುತ್ತಿದ್ದವು. ನಿಜವಾಗಿಯೂ ಎಲ್ಲರಿಗೂ ಇದೊಂದು ಬಿಡಿಸದ ಒಗಟಾಗಿತ್ತು. ಈ ಪ್ರಾಣಿ ಈ ಬೀದಿಯಲ್ಲಿ ಕಾಣಿಸಲು ತೊಡಗಿ ಎರಡು ವರ್ಷಗಳಾಗುತ್ತ ಬಂದಿತ್ತು. ಆದರೆ ಎರಡು ವಾರಗಳ ಕಾಲ ನಾಪತ್ತೆಯಾದದ್ದು ಇದೇ ಮೊದಲು. ನನ್ನ ಮನಸ್ಸು ಎರಡು ವರ್ಷಗಳ ಹಿಂದಕ್ಕೋಡಿತು.

ಆ ಮನೆಯ ಮಾಲೀಕರು ಮುತ್ತಣ್ಣನವರು. ಸುಮಾರು ನಲವತ್ತೈದರ ಅಂಚಿನಲ್ಲಿದ್ದರೂ ಒಳ್ಳೆ ಮೂವತ್ತೈದರ ಮೈಕಟ್ಟು. ಅವರ ಹೆಂಡತಿ ಲೀಲಾವತಿ. ಮುತ್ತಣ್ಣನವರಿಗೆ ಹೇಳಿ ಮಾಡಿಸಿದ ಜೋಡಿ. ಇಬ್ಬರು ಮುದ್ದಾದ ಮಕ್ಕಳು ರವಿ, ಕಿರಣ್. ಒಟ್ಟಲ್ಲಿ ಅದೊಂದು ಸುಂದರ ಸಂಸಾರ. ಲೀಲಾವತಿ, ನಮಗೆಲ್ಲ ಲೀಲಕ್ಕ. ಸ್ನೇಹಜೀವಿ ಲೀಲಕ್ಕ ತುಂಬಾ ರೂಪವಂತೆ. ಬೆಳಗ್ಗಿನಿಂದ ಸಂಜೆ ಮಕ್ಕಳು ಮನೆಗೆ ಹಿಂದಿರುಗುವವರೆಗೆ ಲೀಲಕ್ಕ ಫ್ರೀ. ಆ ಸಮಯದಲ್ಲಿ ನಿಟ್ಟಿಂಗ್ಗೋ ಇಲ್ಲ ಪೇಂಟಿಂಗೋ ಮಾಡುತ್ತಿದ್ದರು. ಎಲ್ಲರೊಡನೆ ಬೇಗ ಹೊಂದಿಕೊಂಡರೂ ನನ್ನೊಡನೆ ಅವರ ಒಡನಾಟ ಜಾಸ್ತಿ. ಶ್ರೀಮಂತಿಕೆಯಿದ್ದರೂ ಸರಸ ಸ್ವಭಾವದ ಆಕೆ ಬೀದಿಯವರಿಗೆಲ್ಲಾ ಮೆಚ್ಚಿನವರಾದರು.

ನಾನಂತು ಅವರನ್ನು ಸ್ವಂತ ಅಕ್ಕನಂತೆ ಕಾಣುತ್ತಿದ್ದೆ. ಹೊರಗೆ ಹೋಗುವಾಗಲೆಲ್ಲಾ ನಾನೇ ಅವರಿಗೆ ಜತೆ. ರಾತ್ರಿ ಹನ್ನೆರಡರತನಕ ಅವರೊಡನೆ ಹರಟೆ ಹೊಡೆಯುತ್ತಿದ್ದೆ. ಮುತ್ತಣ್ಣ ಊರಲ್ಲಿ ಇರುತ್ತಿದ್ದುದೇ ಅಪರೂಪ. ಯಾವಾಗಲು ಮನೆಗೆ ಬರುವಾಗ ಹನ್ನೆರಡಾಗುತ್ತಿತ್ತು. ಅವರಿಬ್ಬರು ಕೂಡಿ ಹೊರ ಹೋಗಿದ್ದನ್ನು ನೋಡಿದ್ದೆ ಅಪರೂಪ. ಅವರ ಮನೆಗೆ ಬೇರೆ ಸ್ನೇಹಿತರಾಗಲಿ, ಸಂಬಂಧಿಗಳಾಗಲಿ ಬಂದಿದ್ದನ್ನೂ ನಾವು ಕಾಣೆವು. ಆದರೆ ಇದ್ದಕ್ಕಿದ್ದಂತೆ ಆ ಪ್ರಾಣಿ ಎಲ್ಲಿಂದಲೋ ಪ್ರತ್ಯಕ್ಷನಾದ.

ಲೀಲಕ್ಕ ನನ್ನೊಂದಿಗೆ ದೂರದ ಸಂಬಂಧಿ ಎಂದು ಹೇಳಿದ್ದರು. ನಾವು ನೋಡಿದ, ಆ ಮನೆ ಪ್ರವೇಶಿಸಿದ ಮೊದಲ ಸಂಬಂಧಿ ಅವನೇ. ನೋಡಲು ಲಕ್ಷಣ ಅಂತಲೂ ಹೇಳಲಾಗದೆ, ತೆಳ್ಳಗೆ ಬಳುಕುತ್ತ, ಉದ್ದಕ್ಕಿದ್ದ ಮನುಷ್ಯ ಮೊದಮೊದಲಿಗೆ ತಿಂಗಳಿಗೊಮ್ಮೆ ಎರಡು ಬಾರಿ ಬರುತ್ತಿದ್ದ. ಆದರೆ ಬರುಬರುತ್ತ ನಿತ್ಯ ಕಾಣಿಸತೊಡಗಿದ. ಆತ ಮನೆಯಲ್ಲಿರುವ ಸಮಯ ಲೀಲಕ್ಕ ಹೊರಗೇ ಬರುತ್ತಿರಲಿಲ್ಲ. ಅವನು ಹೋದ ನಂತರವೇ ಬರುತ್ತಿದ್ದುದು. ಆತನ ನಿತ್ಯದರ್ಶನ ನಮಗೆ ಲಭ್ಯವಾದಂತೆ ನಮ್ಮ ನೆಚ್ಚಿನ ಲೀಲಕ್ಕನ ದರ್ಶನ ಅಪರೂಪವಾಗತೊಡಗಿತ್ತು. ಆತನೂ ಯಾವಾಗಲೂ ಯಾರೂ ಇಲ್ಲದ ಸಮಯದಲ್ಲೇ ಬಂದು ಹೋಗುತ್ತಿದ್ದು, ಅವನ ಈ ತೆರನ ವರ್ತನೆ ಬೀದಿಯವರೆಲ್ಲರ ಅನುಮಾನಕ್ಕೆ ಎಡೆಯಾಯ್ತು. ಕೆಲವರಾಗಲೇ ಅವರೊಂದಿಗೆ ಮಾತನಾಡುವುದನ್ನೇ ಬಿಟ್ಟಿದ್ದರು. ಆದರೆ ಅಪರೂಪಕ್ಕೆ ಹೊರ ಬಂದಾಗಲೂ ನನ್ನೊಡನೆ ಎಂದಿನಂತೆ ಸ್ನೇಹದಿಂದ ಮಾತಾಡುತ್ತಲಿದ್ದರು ಲೀಲಕ್ಕ. ನಮಗೆ ತಿಳಿದಂತೆ ಈ ಮನುಷ್ಯ ಮುತ್ತಣ್ಣನವರನ್ನು ಭೇಟಿಯಾದಂತೆ ಇರಲಿಲ್ಲ. ಅವರಿಲ್ಲದ ಸಮಯದಲ್ಲೇ ಅವನು ಬರುತ್ತಿದ್ದುದು ಸಹಜವಾಗಿ ಎಲ್ಲರ ಕುತೂಹಲ ಹೆಮ್ಮರವಾಗಿ ಅನುಮಾನ ಮೊಳಕೆಯೊಡೆದಿತ್ತು.

ನಾನು ಎಷ್ಟೋ ಬಾರಿ ಈ ಬಗ್ಗೆ ಅವರನ್ನ ಕೇಳಬೇಕೆಂದು ಪ್ರಯತ್ನಿಸಿ, ಸಂಕೋಚದಿಂದ ಸೋತು ಹೋಗಿದ್ದೆ. ನಾನು ಅವರೊಡನೆ ಬೆರೆಯುವ ಬಗ್ಗೆ ಅಮ್ಮನಾಗಲೇ ಅಸಮಾಧಾನ ವ್ಯಕ್ತಪಡಿಸಿದ್ದಳು. ಸವಿ, ವಿಮಲ ಆಂಟಿ ಎಲ್ಲರೂ ಅಮ್ಮನಿಗೆ ಸಪೋರ್ಟ್. ಆದರೆ ನನಗ್ಯಾಕೋ ಲೀಲಕ್ಕನ ಬಗ್ಗೆ ಒಳ್ಳೆಯ ಅಭಿಪ್ರಾಯ ಇನ್ನೂ ಇತ್ತು. ಆದರೆ ನನ್ನ ಅಭಿಪ್ರಾಯವೂ ಬದಲಾಗುವಂತಹ ಘಟನೆಯೊಂದು ಶುಕ್ರವಾರದ ಮಧ್ಯಾಹ್ನ ನಡೆದು, ನಾನು ಯಾವುದನ್ನು ಸುಳ್ಳೆಂದು ಸಾಧಿಸಬೇಕೆಂದು ಅಂದುಕೊಂಡಿದ್ದೇನೋ ಅದು ನಿಜವಾಗಿ ದೃಢಪಟ್ಟಿತ್ತು.

ಅಂದು ನಾನು, ಆಂಟಿ ನಡುಮನೆಯಲ್ಲಿ ಮಾತನಾಡುತ್ತಿದ್ದಾಗ ಮಹಡಿಯ ರೂಂನಲ್ಲಿದ್ದ ಸವಿ ಜೋರಾಗಿ "ಸುಜೀ.......... ಆಂಟಿ......" ಎಂದು ಕೂಗಿದಳು. ನಾವು ಮೇಲಕ್ಕೆ ಹೋಗಿ ನೋಡಿದಾಗ ಎಂದೂ ಮಧ್ಯಾಹ್ನ ಮನೆಗೆ ಬಾರದ ಮುತ್ತಣ್ಣ ಇಂದು ಕಾಲಿಂಗ್ ಬೆಲ್ ಒತ್ತುತ್ತಾ ನಿಂತಿದ್ದರು. ಆ ಸಮಯದಲ್ಲಿ ಆತ ಒಳಗಿದ್ದ. ಸವಿ ಒಮ್ಮೆಲೇ ಏಣಿಯೇರಿ ಟೆರೇಸ್ ಏರಿದಳು. ನಾವೂ ಆಕೆಯನ್ನು ಹಿಂಬಾಲಿದೆವು. ನಮ್ಮ ಮನೆಯ ಟೆರೇಸ್ ಮೇಲಿನಿಂದ ಎದುರು ಮನೆಗಳ ಹಿತ್ತಲು, ಹಿಂದಿನ ಸಾಲು ಚೆನ್ನಾಗಿ ಕಾಣುತ್ತಿದ್ದವು. ನಾವು ನೋಡುತ್ತಿರುವಂತೆಯೇ ಆತ ಆ ಮನೆಯ ಹಿತ್ತಲಿಂದ ಹೊರಬಿದ್ದು ಹೋಗುತ್ತಿರುವುದು ಕಂಡಿತು. ಸವಿ ಜೋರಾಗಿ ಶಿಳ್ಳೆ ಹಾಕಿದಳು.

ಮರುಕ್ಷಣವೇ ಮುಂದಿನ ಬಾಗಿಲು ತೆರೆದು, ಮುತ್ತಣ್ಣ "ಯಾಕಿಷ್ಟು ಹೊತ್ತು........?" ಎಂದು ಒಳಹೋದದ್ದು ಒಟ್ಟಿಗೇ ನಡೆದವು. ಪೆಚ್ಚಾಗಿ ನಿಂತಿದ್ದ ನನ್ನನ್ನು ನೋಡಿ

"ನೀನ್ಯಾಕೆ ಹೀಗೆ ಮುಖ ಸಣ್ಣಗೆ ಮಾಡ್ಕೊಂಡಿದ್ದಿ...........? ಸಾಕ್ಷಿ ಸಮೇತ ನಿನ್ನ ಲೀಲಕ್ಕನ ವ್ಯಭಿಚಾರನ ಹಿಡಿದುಕೊಟ್ಟಿದ್ದೀನಿ ನೋಡು. ಅವರಿಬ್ಬರ ಮಧ್ಯೆ ಏನೋ ಅನೈತಿಕವಾದ್ದು ನಡೆಯುತ್ತಿದೆ ಎಂಬುದನ್ನು ಈಗಲಾದರೂ ಒಪ್ಕೋತಿಯಾ........?" ಸವಿ ಕೇಳುತ್ತಿದ್ದಳು.

ಲೀಲಕ್ಕನ ಬಗೆಗಿದ್ದ ಒಳ್ಳೆಯ ಭಾವನೆಗಳು ಪುರ್ರನೆ ಹಾರಿಹೋಗಿದ್ದವು.

"ಇಂಥವ್ರಿಗಿಂತ ರೆಡ್‌ಲೈಟ್ ಏರಿಯಾದೋರೇ ವಾಸಿ. ಅವರಾದ್ರೆ ಯಾವ್ದೊ ಒತ್ತಡಕ್ಕೆ, ಬಲವಂತಕ್ಕೆ ಸಿಕ್ಕು ಆ ದಾರಿಗಿಳಿದಿರ್ತಾರೆ.........."

ಸವಿ, ಆಂಟಿ ಇಬ್ಬರೂ ಸೇರಿ ಅವಳ ಜಾತಕ ಜಾಲಾಡುತ್ತಿದ್ದರು. ಸವಿಯ ಈ ಸಂಶೋಧನೆ ಇಡೀ ಬೀದಿಗೆ ತಿಳಿಯುವುದು ತಡವಾಗಲಿಲ್ಲ. ಹೀಗಾಗಿ ಬೀದಿಯ ನಾಲಿಗೆ ಉದ್ದವಾಗಿತ್ತು. ಅಂದಿನಿಂದ ನಾನು ಅಪ್ಪಿತಪ್ಪಿಯೂ ಅವರ ಮನೆಯತ್ತ ತಲೆ ಹಾಕಲಿಲ್ಲ. ಅವರಾಗಿಯೇ ಮಾತನಾಡಿಸಲು ಬಂದಾಗಲೂ ಮುಖ ತಿರುವಿದ್ದೆ. ಅಪರೂಪಕ್ಕೆ ಆಕೆಯೇನಾದರೂ ಹೊರಗೆ ನಿಂತಲ್ಲಿ ಸವಿ

"ಏನ್ ಆಂಟಿ ಇವೊತ್ತು ಆರಾಮಾಗಿ ಹೊರಗ್ಬಂದಿದ್ದೀರಿ? ಇವತ್ತು ರಜಾನ?"

"ಆಂಟಿ ಇವತ್ತು ಎಷ್ಟು ರೌಂಡೂ........"

ಎಂದೋ ವಿಮಲ ಆಂಟಿಗೆ ಅನ್ನುವಂತೆ ಪರೋಕ್ಷವಾಗಿ ಆಕೆಯನ್ನೆ ತನ್ನ ವ್ಯಂಗ್ಯದಿಂದ ಇರಿದಾಗ ಸರಕ್ಕನೆ ಒಳಗೋಗಿ ಬಿಡುತ್ತಿದ್ದಳಾಕೆ. ಆ ಮನುಷ್ಯ ಬರುವಾಗ ಅದೆಷ್ಟು ಬಾರಿ

'ಥೂ.........' ಎಂದು ಉಗಿದಿರುವಳೋ... ಆದರೆ, ಆತ ತಗ್ಗಿಸಿದ ತಲೆಯನ್ನು ಆ ಮನೆ ಮುಂದೆ ನಿಂತಾಗಲೇ ಎತ್ತುತ್ತಿದ್ದು. ಹೀಗೆ ನಿಲ್ಲದೆ ನಡೆಯುತ್ತಿದ್ದ ಭೇಟಿ ಇದ್ದಕ್ಕಿದ್ದಂತೆ ಹದಿನೈದು ದಿವಸ ನಿಂತಾಗ ನಾವೆಲ್ಲ ಮುಗಿಯಿತೆಂದು ತಪ್ಪು ಭಾವಿಸಿದ್ದೆವು!

ಈ ಮಧ್ಯೆ ಅಪ್ಪ ನಮ್ಮಿಬ್ಬರಿಗೂ ವರಾನ್ವೇಷಣೆಯಲ್ಲಿ ತೊಡಗಿದ್ರು. ಸವಿಯಲ್ಲಿ ಏನು ಆಕರ್ಷಣೆ ಇತ್ತೋ ಬಂದ ಗಂಡುಗಳೆಲ್ಲ ಆಕೆಯನ್ನೇ ಬಯಸುತ್ತಿದ್ದರು. ನಾಲ್ಕೈದು ಹೀಗೇ ಆದ ನಂತರ ನನಗೆ ಮದುವೆಯ ಬಗೆಗಿದ್ದ ಕನಸು ಕರಗತೊಡಗಿತು. ಸವಿಯ ಮದುವೆ ಮುಗಿಸಲು ಅಪ್ಪ ಅಮ್ಮನಿಗೆ ಹೇಳಿ, ಊಟ, ನೀರು ಬಿಟ್ಟು ಕಡೆಗೂ ಎಲ್ಲರನ್ನು ಒಪ್ಪಿಸಿದಾಗ ಶೇಖರ್ ಎಂಬ ಬ್ಯಾಂಕ್ ಉದ್ಯೋಗಿ ಸವಿಯ ಗಂಡನಾಗಿ ಬಂದ. ಗಂಡನ ಮನೆಗೆ ತೆರಳುವ ಮುನ್ನ

"ವಾರಕ್ಕೊಂದು ಪತ್ರ ಬರೆ, ಅದರಲ್ಲಿ ಆ ಪ್ರಾಣಿಯ ಬಗ್ಗೆ ವರದಿ ಮಾಡುವುದನ್ನು ಮರೆಯಬೇಡ........." ಎಂದು ನಗುತ್ತ ಹೇಳಿದ್ದಳು. ಆಡಾಡುತ್ತಲೇ ಸವಿ ಗಂಡನ ಮನೆಗೆ ಹೋಗಿ ವರ್ಷವಾಗುತ್ತ ಬಂದಿತ್ತು. ಆಕೆಯಿಲ್ಲದ ಮನೆ ಬೋಳು ಬೋಳೆನಿಸುತ್ತಿತ್ತು ನನಗೆ. ಅವಳು ಎಷ್ಟು ಮಾತುಗಾರ್ತಿಯೋ ಅವಳ ಗಂಡ ಅಷ್ಟೇ ಮಿತಭಾಷಿ. ಯಾರೊಡನೆಯೂ ಹೆಚ್ಚು ಬೆರೆಯುತ್ತಿರಲಿಲ್ಲ. ತಾನಾಯಿತು ತನ್ನ ಪಾಡಾಯ್ತು.

ವರ್ಷಗಳುರುಳಿದಂತೆ ಸವಿಯ ಜೀವನದಲ್ಲಿ ಅನೇಕ ಬದಲಾವಣೆಗಳಾದವು. ಸುರೇಶ್, ಸತೀಶ್ ಎಂಬ ಇಬ್ಬರು ಮಕ್ಕಳು ಆಕೆಯ ಮಡಿಲನ್ನು ತುಂಬಿದರು. ಸವಿ ತೌರಿಗೆ ಬರುತ್ತಿದ್ದುದೇ ಅಪರೂಪ. ಇತ್ತೀಚೆಗೆ ಅವಳಿಂದ ಪತ್ರವೂ ಅಪರೂಪವಾಗಿತ್ತು. ಮನೆ ಕೆಲಸ, ಮಕ್ಕಳ ನಡುವೆ ಸಮಯ ಸಿಗಲಾರದೆಂದು ನಾನೇ ಆಗಾಗ ಪತ್ರ ಬರೆಯುತ್ತಿದ್ದೆ. ಮರೆಯದೆ ಅವಳ ಈ ಪ್ರಾಣಿಯ ಡೀಟೆಲ್ಸ್ ತಿಳಿಸುತ್ತಿದ್ದೆ. ಎಂದಿನಂತೆ ಇಂದೂ ಕೂಡ ಅಡುಗೆಯ ತಯಾರಿಯಲ್ಲಿದ್ದೆ. ಮನೆಯ ಮುಂದೆ ಆಟೋ ನಿಂತ ಶಬ್ದ ಕೇಳಿಸಿತು. ಹೊರಬಂದು ನೋಡಿದರೇ ಸವಿ ತನ್ನ ಪರಿವಾರದೊಂದಿಗೆ ನಿಂತಿದ್ದಾಳೆ! ಅವಳ ಅನಿರೀಕ್ಷಿತ ಆಗಮನ ನನ್ನ ಸಂತೋಷವನ್ನು ಇಮ್ಮಡಿಗೊಳಿಸಿತ್ತು.

ಸವಿಯೇಕೋ ತುಂಬ ಸೊರಗಿದ್ದಳು. ಮುಖದಲ್ಲಿಯೂ ಎಂದಿನ ಕಳೆಯಿರಲಿಲ್ಲ. ಮಕ್ಕಳು ಅಜ್ಜ ಅಜ್ಜಿಯನ್ನು ಸೇರಿಬಿಟ್ಟಿದ್ದರು. ಬಹಳ ದಿನಗಳ ನಂತರ ಬಂದ ಸವಿಯ ಬಳಿ ಮಾತನಾಡಲು ಸಾಕಷ್ಟು ವಿಷಯವಿತ್ತು. ಆದರೆ ಶೇಖರ್ ಇದ್ದುದರಿಂದ ಒಂಟಿಯಾಗಿ ಸಿಕ್ಕಲಿಲ್ಲ ಸವಿ.

ಒಂದು ವಾರ ಕಳದದ್ದೇ ತಿಳಿಯದಾಯ್ತು. ಆಕೆ ಹೊರಡುವ ಭಾನುವಾರ ಸಮೀಪಿಸುತ್ತಿತ್ತು. ನಾನಾಕೆಯನ್ನು ಇನ್ನೊಂದು ವಾರ ಹೇಗೆ ನಿಲ್ಲಿಸಿಕೊಳ್ಳುವುದು ಎಂಬ ಯೋಚನೆಯಲ್ಲಿ ಮುಳುಗಿದ್ದೆ. ಎದುರು ಮನೆಯ ಆ ಪ್ರಾಣಿಯ ಬಗ್ಗೆ ಸವಿ ಕೇಳುವಳೇನೋ ಎಂಬ ನನ್ನ ಕಾತರ ಹುಸಿಯಾಗಿ ಅವಳದರ ಬಗ್ಗೆ ಚಕಾರವೆತ್ತಿರಲಿಲ್ಲ.

ಇತ್ತೀಚೆಗೆ ಆ ಮನುಷ್ಯ ಯಾವಾಗಲಾದರೊಮ್ಮೆ ಬಂದು ಹೋಗುತ್ತಿದ್ದ. ಸವಿಗೆ ಅದರ ಬಗ್ಗೆ ತಿಳಿಸಲಾಗಲೇ ಇಲ್ಲ. ಅವಳ ಗಂಡನೆದುರು ಈ ಬಗ್ಗೆ ಮಾತನಾಡುವ ಧೈರ್ಯ ನನಗಿರಲಿಲ್ಲ. ನಾನು ಬಯಸಿದಂತೆಯೇ ಸವಿ ಅದೇಗೋ ಶೇಖರ್‌ನನ್ನು ಒಪ್ಪಿಸಿ,

ಇನ್ನೊಂದು ವಾರ ಇರುವ ಮನಸ್ಸು ಮಾಡಿದ್ದಳು. ರಾತ್ರಿ ಶೇಖರ್ ಮಕ್ಕಳೊಡನೆ ಊರಿಗೆ ಹಿಂದಿರುಗಿದರು. ಹೀಗಾದರೂ ಸವಿಯ ಹಿಂದಿನ ತುಂಟು ಮಾತುಗಳನ್ನು ಕೇಳಬಹುದೆಂದು ನಾನು ಖುಷಿಯಿಂದ ಅವುಗಳ ನಿರೀಕ್ಷಣೆಯಲ್ಲಿದ್ದೆ. ಅಂದು ಮಹಡಿಯ ಆ ಕೋಣೆಯಲ್ಲಿ ಕುಳಿತು ಕೇರಂ ಆಡಲು ನಿರ್ಧರಿಸಿದೆವು ನಾವಿಬ್ಬರೂ.

"ಸೆಕೆ ಕಣೇ ಕಿಟಕಿ ತಗಿ........." ಆಕೆ ಎಂದಾಗ ನಾನು ನಗುತ್ತ "ಓಹೋ ಸೆಕೆನಾ.........!" ಎಂದು ಕಿಟಕಿಗಳನ್ನೆಲ್ಲ ತೆರೆದೆ.

ಅಂದೇ ಆತ ಪ್ರತ್ಯಕ್ಷನಾಗಬೇಕೆ....! "ಸವೀ...... ಎಂತಹ ಸಮಯಕ್ಕೆ ಕಿಟಕಿ ತೆರೆಸಿದಿಯಲ್ಲೇ.........!" ಎಂದೆ.

ಅವಳ ಬಾಯಿಂದ ಹೊರಡುವ ಮಾತುಗಳನ್ನು ಕೇಳಲು ಕಾತುರಳಾಗಿ. ಆದರೆ ಸವಿಯೇಕೋ ತುಂಬಾ ಗಂಭೀರವಾಗಿದ್ದಳು. ಸ್ವಲ್ಪವೂ ನಗುವಿಲ್ಲ. ಮಾತು ಇಲ್ಲ. ಒಂದೇ ಸಮ ಆ ಮನೆಯತ್ತಲೇ ದಿಟ್ಟಿಸುತ್ತಿದ್ದಳು. ಅವಳ ಈ ವರ್ತನೆ ತೀರಾ ಹೊಸದು. ಆಕೆಯನ್ನು ಅಲುಗಿಸಿ ಕೇಳಿದೆ

"ಸವಿ ಯಾಕ್ ಹಾಗೆ ನೋಡ್ತಿದ್ದಿ........." ಕನಸಿನಿಂದ ಎಚ್ಚೆತ್ತವಳಂತೆ ಬೆಚ್ಚಿಬಿದ್ದು "ಹಾಂ.........!" ಎಂದಳು.

"ಸುಜೀ ನಿನ್ನ ಆ ಲೀಲಕ್ಕ ರಿಯಲೀ ಗ್ರೇಟ್ ಕಣೇ.......! ಈ ಮನುಷ್ಯ, ಆಕೆ ಇಬ್ರೂ ತುಂಬಾ ಧೈರ್ಯವಂತರು.......!"

ಸವಿಯ ಈ ಮಾತುಗಳಿಂದ ಆದ ಆಘಾತಕ್ಕೆ ನಾನು ಮೂರ್ಛೆ ಹೋಗದಿದ್ದುದು ಹೆಚ್ಚು. ಇವಳಿಗೆ ಲೀಲಕ್ಕನ ಬಗ್ಗೆಯಿದ್ದ ತಿರಸ್ಕಾರ ಎಷ್ಟೆಂದು ನನಗಿಂತ ತಿಳಿದವರಾರು. ಆಕೆಯನ್ನು ನೋಡಿದರೇ ಹೇಸಿಗೆಯನ್ನು ಕಂಡಂತೆ ಅಸಹ್ಯಿಸುತ್ತಿದ್ದಳು. ಚಡಪಡಿಸುತ್ತಿದಳು.

"ಯಾಕ್ ಸವಿ? ಹುಷಾರಿಲ್ವಾ..........?" ನಾನು ನಿಜವಾಗಿಯೂ ಗಾಬರಿಗೊಂಡಿದ್ದೆ.

"ಆಕೆ ಹೆಸರೆತ್ತಿದರೇ ಹೇಸಿಗೆ ಅಂತಿದ್ದೆ.......... ಈಗ ನೋಡಿದ್ರೆ ಗ್ರೇಟ್ ಅಂತಿಯಾ...........? ದೇವ್ರಂಥ ಗಂಡ, ಮುತ್ತಿನಂತಹ ಮಕ್ಳು ಇದ್ದೂ ಬೇರೆ..........."

"ಇಲ್ಲ ಸುಜೀ.........." ಸವಿ ನನ್ನ ಮಾತುಗಳನ್ನು ತಡೆದಳು.

"ಆಕೆಗೆ ತೀರ ಅವಶ್ಯವಾದ ಸುಖ, ಸಂತೋಷಗಳು ತನ್ನ ಮನೇಲೇ ಹೇರಳವಾಗಿ ದೊರಕಿದ್ದಿದ್ರೆ ಇನ್ನೊಬ್ಬರತ್ತ ನೋಡೋ ಅವಶ್ಯಕತೆಯೇ ಇರುತ್ತಿರಲಿಲ್ಲ. ಇಡೀ ಬೀದಿ ಅವ್ರ ಬಗ್ಗೆ ಮಾತಾಡಿದ್ರೂ ದೇ ಜಸ್ಟ್ ಡೋಂಟ್ ಕೇರ್... ನಿಜವಾಗಿಯೂ ಅವರ್ದು ಗಟ್ಸ್ ಬಿಡು..."

ಸವಿಯ ಮಾತುಗಳು ನನ್ನಲ್ಲೇಕೋ ಭಯ ಹುಟ್ಟಿಸುತ್ತಿದ್ದವು. ಅವಳ ಭಾವನೆಗಳನ್ನ ಬದಲಿಸುವ ಸಲುವಾಗಿ ನಾನು ಮತ್ತೆ ಮತ್ತೆ ಒತ್ತಿ ಹೇಳಿದೆ.

"ಏನೇ ಆದರೆ ಅವರು ಮಾಡುತ್ತಿರುವುದು ವ್ಯಭಿಚಾರ, ಅವರದು ಅನೈತಿಕ ಸಂಬಂಧ..........!"

"ಯಾವ್ದು ವ್ಯಭಿಚಾರ? ಆ ಮುಚ್ಚಿದ ಬಾಗಿಲುಗಳ ಮರೇಲಿ ಏನು ನಡೆಯುತ್ತಿದೆ ಅಂತ ನೋಡಿದವರ್ಯಾರು? ಒಂದು ಹೆಣ್ಣು, ಗಂಡಿಗೆ ಏಕಾಂತದಲ್ಲಿ ಅದು ಬಿಟ್ಟರೆ ಬೇರೇನೂ ಇರುವುದಿಲ್ವಾ..? ಆಯ್ತು ನಿನ್ನ ಮಾತಿನಂತೆ ವ್ಯಭಿಚಾರನೇ ಅಂತಿಟ್ಕೊ.. ಬರೀ ಲೀಲಕ್ಕನ ಬಗ್ಗೇನೆ ಯಾಕೆ ಯೋಚಿಸ್ತಿ? ಆಕೇನ ಮಾತ್ರ ಯಾಕೆ ದೂಷಿಸ್ತಿ? ಬರೀ ದುಡ್ಡು ಮನೆ ಇದ್ಬಿಟ್ರೆ ಸಾಕಾ? ಮುತ್ತಿನಂತಹ ಮಕ್ಕು ನಿಜ. ಆದ್ರೆ ಮಕ್ಳು ಆಗ್ಬಿಟ್ರೆ ಎಲ್ಲ ಮುಗಿದೋಯ್ತಾ? ಲೀಲಕ್ಕನಿಗೂ ಚಿಕ್ಕ ವಯಸ್ಸು. ಮಕ್ಕಳಾದ ಮಾತ್ರಕ್ಕೆ ಗಂಡನ ಪ್ರೀತಿ, ಪ್ರೇಮ ಅಪೇಕ್ಷಿಸೋದು ತಪ್ಪಾ?" ಮತ್ತೆ ಮೌನ. ನಾನು ಅಚ್ಚರಿಯಿಂದ ಬಾಯ್ತೆರೆದು ಕೂತೆ.

"ಆತನೋ ಯಾವಾಗಲೂ ಬಿಸಿನೆಸ್ಸು ಅಂತ ಮನೇಲಿರೋದೇ ಅಪರೂಪ. ಸದಾ ಊರಿಂದ ಹೊರಗೆ. ಎಂದಾದರೂ ಅವನು, ಲೀಲಕ್ಕ ಒಟ್ಟಾಗಿ ಹೊರಹೋಗಿದ್ದು ನೋಡಿದ್ಯಾ..........? ಒಂದು ಮಾತುಕತೆ, ನಗುನಲಿವು ಇಲ್ದೆ ಆ ದೊಡ್ಡ ಬಂಗಲೆಯಲ್ಲಿ ಒಂಟಿಯಾಗಿ ಬಿದ್ದಿರು ಅಂದ್ರೆ ಅವಳೇನು ಮರದ ಕೊರಡಾ..........? ಅದಕ್ಕೆ ಕಣೇ ಲೀಲಕ್ಕ ದಿಟ್ಟೆ. ಗೆದ್ದಲು ಹಿಡಿದವಳಂತೆ ಒಳಗೇ ಸವೆದು ಹೋಗುವ ಬದಲು ಜೀವನವನ್ನು ತನಗೆ ಬೇಕಾದ ಹಾಗೆ ಅನುಭವಿಸುತ್ತಿದ್ದಾಳೆ. ಪುಕ್ಕಲಾಗಿದ್ದರೆ, ಜನಕ್ಕೆ ಅಂಜಿ ಒಳಗೇ ಇರುತ್ತಿದ್ಲು ನಿಜ. ಆದರೆ ಮನಸ್ಸು...? ಅದ್ಯಾರ ಹಿಡಿತಕ್ಕೆ ಸಿಗುತ್ತಿತ್ತು ಹೇಳು...? ಮನಸ್ಸಲ್ಲಾದರೂ ಇನ್ನೊಬ್ಬನನ್ನು ಬಯಸುತ್ತಿದ್ದಳು, ಅವನೊಂದಿಗೆ ಸುಖಿಸುತ್ತಿದ್ದಳು, ನೇರವಾಗಿ ಹೇಳ್ಬೇಕಂದ್ರೆ ಮಾನಸಿಕ ವ್ಯಭಿಚಾರಿ ಆಗಿರುತ್ತಿದ್ಲು ನನ್ನ ಹಾಗೆ..!"

"ಸವೀ......" ನಾನು ಚೀರಿದೆ. ನನ್ನ ದನಿ ಕಂಪಿಸುತ್ತಿತ್ತು.

"ಯಾಕೆ ನಿನ್ನ ಸವಿ ಲೀಲಕ್ಕನ ಇನ್ನೊಂದು ಮುಖ ಎಂದು ಹೇಸಿಗೆ ಆಗತಿದ್ಯಾ?"

"ಸವಿ, ಸವಿ.......... ಶೇಖರ್......? ಶೇಖರ್........." ನಾನು ತೊದಲುತ್ತಿದ್ದೆ.

"ಶೇಖರ್........."

ಅವಳ ಮಾತಿನಲ್ಲಿ ಉಕ್ಕಿದ ತಿರಸ್ಕಾರ, ಹೇಸಿಗೆ ಹಿಂದೆ ಲೀಲಕ್ಕನ ಬಗ್ಗೆಯಿದ್ದಷ್ಟೆ ಗಾಢವಾಗಿದ್ದಂತಿತ್ತು. ನನಗೇಕೋ ಅಳು ಒತ್ತರಿಸಿಕೊಂಡು ಬರುತ್ತಿತ್ತು. ಸವಿಯ ಗಂಭೀರತೆ, ಅವಳಾಡುವ ಮಾತು, ಗಂಡನ ಮೇಲಿನ ತಿರಸ್ಕಾರ ಎಲ್ಲವನ್ನೂ ಗಮನಿಸಿದಾಗ ಸವಿಯ ಜೀವನದಲ್ಲೇನೋ ಹೆಚ್ಚು ಕಮ್ಮಿ ಆಗಿದೆಯೆಂಬುದು ಖಚಿತವಾಗಿತ್ತು ನನಗೆ.

ಅಂದು ರಾತ್ರಿ ಮಲಗಿದ್ದಾಗ ಹಾಸಿಗೆಯಲ್ಲಿ ತನ್ನ ನೋವನ್ನು ನನ್ನೆದುರು ತೋಡಿಕೊಂಡಳು ಸವಿ. "ಸುಜಿ, ಮದ್ವೆಯಾದ ಒಂದೆರಡು ವರ್ಷ ನನ್ನಷ್ಟು ಸುಖಿ ಯಾರೂ ಇಲ್ಲ ಎಂದೇ ಭಾವಿಸಿದ್ದೆ ನಾನು. ಬಹುಶಃ ಎಲ್ಲಾ ಹೆಣ್ಣುಗಳೂ ಹೀಗೇ ಭಾವಿಸುವರೋ ಏನೋ. ನಿನಗೆ ತಿಳಿದ ಹಾಗೆ ನಾನು ಶೇಖರ್ ಅಗಲಿರುತ್ತಿದ್ದೆ ಅಪರೂಪ. ಬ್ಯಾಂಕ್ ಮುಗಿದೊಡನೆ ಸೀದ ನನ್ನ ತೋಳಿನೊಳಕ್ಕೆ.. ಒಮ್ಮೆ ಅವನ ಎದೆಯಲ್ಲಿ ಹುದುಗಿದರೆ ಬೆಳಗಾಗುವತನಕ ಎಚ್ಚರವಿರುತ್ತಿರಲಿಲ್ಲ ಹಾಗೆ ಅಮಲೇರಿಸುತ್ತಿದ್ದ. ಅವನ ಬೆಚ್ಚಗಿನ ಅಪ್ಪುಗೆಯಲ್ಲಿ ನಿದ್ರೆ ನನ್ನತ್ತಿರವೂ ಸುಳಿಯುತ್ತಿರಲಿಲ್ಲ. ನಮ್ಮ ಈ ಪ್ರೇಮಕ್ಕೆ ಸಾಕ್ಷಿ ಎಂಬಂತೆ ಸುರೇಶ್ ನನ್ನ ಗರ್ಭದಲ್ಲಿ ಚಿಗುರುತ್ತಿದ್ದ.

ಶೇಖರ್ ಅತಿಕಾಮಿ ಹಾಗೂ ಸ್ವಾರ್ಥಿ. ವರ್ಷಕ್ಕೊಂದರಂತೆ ಹುಟ್ಟಿದ ಎರಡು ಮಕ್ಕಳು ನಮ್ಮ ಬದುಕನ್ನು ಪ್ರವೇಶಿಸಿದ್ದವು. ಅವುಗಳ ಆಗಮನದಿಂದ ಅನೇಕ ಬದಲಾವಣೆಗಳಾದವು. ಅವು ಅನಿವಾರ್ಯವಾಗಿದ್ದರೂ ಅವುಗಳನ್ನು ಅರಿಯುವ ತಾಳ್ಮೆ, ದೊಡ್ಡ ಮನಸ್ಸು ಶೇಖರನಿಗಿರಲಿಲ್ಲ. ಒಟ್ಟಿನಲ್ಲಿ ಅವನಾಸೆ ತೀರಬೇಕು.

ಸುರೇಶ್ ಎರಡು ವರ್ಷದವನಾಗುವವರೆಗೂ ಪದೇ ಪದೇ ಖಾಯಿಲೆ ಬೀಳುತ್ತಿದ್ದ. ಎರಡು ಚಿಕ್ಕ ಮಕ್ಕಳನ್ನು ನೋಡಿಕೊಂಡು, ಮನೆಕೆಲಸ ತೂಗಿಸಿ ಏಗುವುದರಲ್ಲಿ ನನಗೆ ಸಾಕಾಗಿ ಹೋಗುತ್ತಿತ್ತು. ಮಕ್ಕಳತ್ತಲೇ ನನ್ನೆಲ್ಲ ಲಕ್ಷ್ಯ. ಹಿಂದಿನಂತೆ ಸದಾ ಶೇಖರನಿಗೆ ಅಂಟಿಕೊಂಡೇ ಇರಲು, ಸಂಜೆ ಅವನು ಬಂದೊಡನೆ ಅವನ ತೆಕ್ಕೆಗೆ ಹಾರಲು ಸಾಧ್ಯವಾಗುತ್ತಿರಲಿಲ್ಲ. ಅವನ ಎಷ್ಟೋ ಬಯಕೆಗಳನ್ನು ನನ್ನಿಂದ ಪೂರೈಸಲು ಸಾಧ್ಯವೇ ಆಗುತ್ತಿರಲಿಲ್ಲ. ನನ್ನ ದೇಹಸ್ಥಿತಿಯೂ ಇದಕ್ಕೆ ಕಾರಣವಾಗಿ ಅವನು ಸಿಡುಕಿ ರೇಗತೊಡಗಿದ್ದ. ನನ್ನ ಕಷ್ಟ ಹೇಳಿದರೆ ಕೇಳುವ ಮನಸ್ಥಿತಿ ಅವನಲ್ಲಿರಲಿಲ್ಲ.

'ನೀನೊಬ್ಬಳೆ ಅಲ್ಲ ಮಕ್ಕಳನ್ನು ಹಡೆದಿರುವುದು, ಪ್ರತಿಯೊಬ್ಬ ಹೆಣ್ಣೂ ಹಡೀತಾಳೆ ಆದರೆಷ್ಟು ಲವಲವಿಕೆಯಿಂದ ಇರ್ತಾರೆ'

ಎಂದು ತನ್ನ ಸಹೋದ್ಯೋಗಿಗಳೊಂದಿಗೋ, ಬೇರಾರೋ ಹೆಂಗಸೊಂದಿಗೋ ನನ್ನನ್ನು ಹೋಲಿಸಿ ಗೇಲಿಮಾಡುತ್ತಿದ್ದ.

ಮಕ್ಕಳೊಡನೆಯೂ ಅಷ್ಟೆ ಎಷ್ಟೋ ಅಷ್ಟು. ಪರಿಸ್ಥಿತಿ ಹೀಗೇ ಮುಂದುವರೆದು ಯಾವ ಮಟ್ಟಕ್ಕೆ ಹೋಯಿತೆಂದರೆ ಅವನು ದಿನಾ ಮನೆ ಸೇರುವುದು ಮಧ್ಯರಾತ್ರಿಗೆ. ನನ್ನೊಂದಿಗೆ ಮಾತೇ ಕಮ್ಮಿಯಾಗಿ ಬರಬರುತ್ತ ಅವನ್ಯಾರೋ ಅಪರಿಚಿತನಂತೆ ಭಾಸವಾಗಹತ್ತಿದ್ದ.

ಅವನ ವರ್ತನೆಯಿಂದ ದಿಗಿಲುಗೊಂಡ ನಾನು ಮಕ್ಕಳನ್ನು ನೋಡಿಕೊಳ್ಳಲು ಆಯಾಳನ್ನು ನೇಮಿಸಿಕೊಂಡೆ. ಮಕ್ಕಳನ್ನು ಆಕೆಗೆ ರೂಢಿಗೊಳಿಸಿ ನಾನು ಬಿಡುವಾಗಿ ಶೇಖರತ್ತ ಸಂಪೂರ್ಣ ಗಮನಹರಿಸಿದೆ. ಅವನು ಬದಲಾಗಲಿ ಎಂದು ತಾಳ್ಮೆಯಿಂದ ಕಾದೆ. ಆದರೆ ಶೇಖರ್ ಬದಲಾಗುವಂತೆಯೇ ಇರಲಿಲ್ಲ. ಸದಾ ಹೊರಗೆ ಸುತ್ತಾಟ, ಬೇಕೆಂದಾಗ ಊಟ ತೀರಿದರೆ ಮುಗಿಯಿತು. ತನಗೇ ಬಯಕೆ ಕಾಡಿದಾಗ ಸುಮ್ಮನೆ ನನ್ನೊಂದಿಗೆ ಹಾಸಿಗೆಯಲ್ಲಿ ಹೊರಳಾಡುತ್ತಿದ್ದ. ಒಂದು ಮಾತಿಲ್ಲ ಕತೆಯಿಲ್ಲ. ಅವನ ಈ ವರ್ತನೆ ನನ್ನನ್ನು ನೋಯಿಸುತ್ತಿತ್ತು. ಕೆಲವೊಮ್ಮೆ ತಡಿಯಲಾರದೆ ಕಣ್ಣೀರಿಡುತ್ತಿದ್ದೆ. ಅದನ್ನೂ ಸಹಿಸದವ

'ಏನಾಗಿದ್ಯೆ......?' ಎಂದು ಸಿಡುಕಿ, ರಂಪ ಮಾಡಿಬಿಡುತ್ತಿದ್ದ.

ನನ್ನ ಹೃದಯ ಬೆಂದುಹೋಗುತಿತ್ತು. ಮನಸ್ಸು ನೆಮ್ಮದಿಗೆಟ್ಟಿತ್ತು. ನನಗೆ ಅವನ ಹಿಂದಿನ ಪ್ರೀತಿ ಬೇಕಾಗಿತ್ತು. ಅದಿಲ್ಲದೆ ನಾನು ಹುಚ್ಚಳಂತಾಗಿದ್ದೆ. ಅವನ ಬೆಚ್ಚಗಿನ ಅಪ್ಪುಗೆಯಿಲ್ಲದೆ ಅದೆಷ್ಟು ದಿನಗಳಾಗಿದ್ದವು. ನಾನಾಗಿಯೇ ಅವನನ್ನು ಬಳಸಿ ಹಿಡಿದರೆ

'ಸುಮ್ನೆ ಬಿದ್ಕೊಳೇ ನಂಗೆ ನಿದ್ದೆ ಬರ್ತಿದೇ.......' ಎನ್ನುತ್ತಿದ್ದ.

ನಾನಾಗ ಕೆರಳುತ್ತಿದ್ದೆ. ಹೀಗೆ ಒಮ್ಮೆ ತಾಳ್ಮೆಗೆಟ್ಟು ಅವನನ್ನು ಜೋರಾಗಿ ಹಿಡಿದು ಅಲ್ಲಾಡಿಸಿ

'ನನಗೆ ನಿದ್ದೆ ಬರ್ತಾ ಇಲ್ವಲ್ಲ ನಾನು ಏನ್ಮಾಡ್ಲಿ..........?' ಎಂದಾಗ ದಡಕ್ಕನೆದ್ದವನೆ

'ನಿದ್ದೆ ಬರಲ್ವೇನೆ? ಏನ್ಮಾಡ್ಲೆ ನಾನು......... ಹೇಳೇ ಅದೇನ್ಮಾಡ್ಬೇಕು ಹೇಳೇ ಮಾಡ್ತೀನಿ..........'
ಎಂದು ತೀರ ಅಸಹ್ಯವಾಗಿ ವರ್ತಿಸಿದಾಗ ನನಗಲ್ಲೇ ಸಾಯುವಂತಾಗಿತ್ತು. ಮೈಯಲ್ಲಿ ಪರಚಿಕೊಂಡು ಜೋರಾಗಿ ಚೀರುವಂತಾಗಿತ್ತು. ಇಂತಹ ಅಪಮಾನ ಕನಸಿನಲ್ಲಿಯೂ ಎಣಿಸಿದವಳಲ್ಲ ನಾನು. ನನ್ನೆದೆ ಒಡೆದುಹೋಗಿತ್ತು. ಅವನು ನನ್ನ ಹೆಣ್ತನಕ್ಕೆ ಅಪಮಾನ ಮಾಡಿದ್ದ. ನನ್ನನ್ನು ಚೂರುಚೂರು ಮಾಡಿದ್ದ.

ಅದೆಷ್ಟು ರಾತ್ರಿಗಳನ್ನು ನಿದ್ದೆಯಿಲ್ಲದೆ ಕಳೆದಿರುವೆನೋ ಆ ದೇವರಿಗೇ ಗೊತ್ತು. ಅವನು ನನ್ನ ಮೇಲೆ ಸೇಡು ತೀರಿಸಿಕೊಳ್ಳುವವನಂತೆ ವರ್ತಿಸುತ್ತಿದ್ದ. ಅವನ ಹೊರಗಿನ ಯಾವೊಂದು ಚಟುವಟಿಕೆಗಳೂ ನನಗೆ ಗೊತ್ತಿರಲಿಲ್ಲ. ನಾನು ಯಾವ ಗೊಡವೆಗೂ ಹೋಗಲಿಲ್ಲ. ಅವನಿಗಾಗಿ ಹಂಬಲಿಸಿ, ಕೊರಗುವುದನ್ನು ಬಿಟ್ಟೆ. ಅವನಿಂದ ಯಾವ ನಿರೀಕ್ಷೆಯೂ ನನ್ನಲ್ಲುಳಿಯಲಿಲ್ಲ. ಅವನ ಬಗೆಗಿದ್ದ ಆಸೆ ಆಕಾಂಕ್ಷೆ ಸಾಯತೊಡಗಿದ್ದವು.

ಆದರೆ ನನ್ನ ಭಾವನೆಗಳು ಇನ್ನೂ ಜೀವಂತವಾಗಿದ್ದು ಅದಕ್ಕೆ ಸಾಕ್ಷಿಯೋ ಎಂಬಂತೆ ಆ ದಿನಗಳಲ್ಲಿ ಲೀಲಕ್ಕ ನೆನಪಾಗುತ್ತಿದ್ದರು. ಹಿಂದೆಯೇ ಆ ಪ್ರಾಣಿ–ಅವನು ಮನಸ್ಸಿಗೆ ಬರುತ್ತಿದ್ದ. ಲೀಲಕ್ಕನ ಪರಿಸ್ಥಿತಿ ಅರ್ಥವಾಗತೊಡಗಿತ್ತು. ಕಣ್ಮುಚ್ಚುತ್ತಲೂ ಇವರಿಬ್ಬರು ನನ್ನಾವರಿಸುತ್ತಿದ್ದರು. ಬರಬರುತ್ತ ಲೀಲಕ್ಕ ಮರೆಯಾಗಿ ಅವನೊಬ್ಬನೇ ಉಳಿಯುತ್ತಿದ್ದ.. ಕೆಲವೊಮ್ಮೆ ಅಂದು ನೋಡಿದ ಸಿನಿಮಾದ ನಾಯಕನಂತೆ ಕಂಡರೆ ಮಗದೊಮ್ಮೆ ಅಂದು ಓದಿದ ಕಥೆಯ ನಾಯಕನಂತೆ ಕಾಣುತ್ತಿದ್ದ.. ನಾನಾಗ ನಿದ್ರಿಸತೊಡಗಿದ್ದೆ..!"

ಮಾತು ನಿಲ್ಲಿಸಿ ನನ್ನತ್ತ ನೋಡಿದಳು ಸವಿ ನಾನು ಮೂಕಳಾಗಿದ್ದೆ. ಅರೆಕ್ಷಣ ನನ್ನ ಮೊಗವನ್ನೆ ದಿಟ್ಟಿಸಿ ಹೇಳಿದಳು

"ಹೀಗೆ ನೇರವಾಗಿ ಹೇಳ್ತಿದ್ದೀನಿ ಅಂತ ಬೇಸರಪಡಬೇಡ, ನಿನ್ನ ನೋಯಿಸ್ತಿದ್ದೀನಿ ಅಂತ ಖಂಡಿತ ಅಂದ್ಕೋಬೇಡ ಇರುವ ವಿಷ್ಯ ತಿಳಿಸ್ತೀನಿ. ಸುಜಿ, ಗಂಡಿನ ಸುಖ, ಅವನ ಸಾಮಿಪ್ಯದ ಅನುಭವವಿಲ್ಲ ನಿನಗೆ. ನನ್ನ ಒಳಗುದಿ ಅರ್ಥವಾಗಲಾರ್ದು. ಆದರೆ ಒಮ್ಮೆ ಅದನ್ನು ಅನುಭವಿಸಿ, ಅದರಿಂದ ವಂಚಿಸಲ್ಪಟ್ಟರೆ ಆ ಹಿಂಸೆ ಬಲು ಕ್ರೂರ. ಕೆಲವೊಮ್ಮೆ ನನ್ನನ್ನು ನಾನೇ ಕೊಂದುಕೊಳ್ಳಲೇ ಎನಿಸುತ್ತೆ..."

ನಾನು ಪಕ್ಕನೆ ಅವಳ ಬಾಯಿ ಮುಚ್ಚಿದೆ. ನನ್ನ ಕೈ ಸರಿಸುತ್ತ ವಿಷಾದದಿಂದ ನಕ್ಕು ಹೇಳಿದಳು ಸವಿ

"ಅಷ್ಟೊಂದು ಧೈರ್ಯವಿದ್ದಿದ್ದರೆ ಲೀಲಕ್ಕನಂತೆ ರಾಜಾರೋಷವಾಗಿ ಬದುಕುತ್ತಿದ್ದೆ.."

ಸವಿ ಊರಿಗೆ ಹೋಗಿ ಆಗಲೇ ಒಂದು ವಾರದ ಮೇಲಾಗಿತ್ತು. ಈ ಬಾರಿ ಅಮ್ಮನನ್ನೂ ಜೊತೆಯಲ್ಲಿ ಕರೆದೊಯ್ದಿದ್ದಳು. ಮನೆಯಲ್ಲಿ ಒಬ್ಬಳೇ. ಹೊರಗೆ ತರಕಾರಿ ಮಾರುವವನು ಕೂಗುತ್ತಿದ್ದ. ಏನಿದೆಯೋ ನೋಡೋಣವೆಂದು ಬಾಗಿಲು ತೆರೆದು ಹೊರಬಂದೆ ಲೀಲಕ್ಕ ಏನನ್ನೋ ಖರೀದಿಸುತ್ತಿದ್ದರು. ಅವರನ್ನು ನೋಡಿ ಮುಂಚಿನಂತೆ ಹೇಸಿಗೆ ಎನಿಸಲಿಲ್ಲ!

ತಿರಸ್ಕಾರ ಉಕ್ಕಲಿಲ್ಲ! ಬದಲಿಗೆ ಹಿಂದಿನಂತೆ ಅವರನ್ನು "ಲೀಲಕ್ಕ........ ಎಂದು ಕರೆದಿದ್ದೆ.. ಊಟ ಆಯ್ತಾ ಲೀಲಕ್ಕ........?" ಎಂದಿದ್ದೆ ನನಗರಿವಿಲ್ಲದೆ.

ನನ್ನ ಮಾತು ಕೇಳಿ ಅರೆಕ್ಷಣ ಅವರು ಗಲಿಬಿಲಿಗೊಂಡರು. ತಮಗಾದ ಆಶ್ಚರ್ಯವನ್ನು ಅಡಗಿಸುವ ಪ್ರಯತ್ನವನ್ನೂ ಮಾಡಲಿಲ್ಲ.

"ಹೂಂನಮ್ಮ ಆಯ್ತು. ನಿಂದಾಯ್ತ?" ಎಂದರು.

ಅವರ ಆಶ್ಚರ್ಯ ಸಂತೋಷವಾಗಿ ಅದು ಮುಖವನ್ನು ಅರಳಿಸುತ್ತಿತ್ತು. ಬಹುಶಃ ಹೆಚ್ಚು ಹೊತ್ತು ನಿಲ್ಲಲಾಗಲಿಲ್ಲವೇನೋ

"ಬರ್ಲಾ ಸುಜೀ ಒಳ್ಗೆ ಕೆಲ್ಸ ಇದೆ.........." ಎಂದು ತಮ್ಮ ಬುಟ್ಟಿಯೊಡನೆ ಸರಿದು ಹೋದರು.

ನಾವು ಅವರ ಬಗ್ಗೆ ಎಷ್ಟು ಕೀಳಾಗಿ ನಡೆದುಕೊಂಡಿದ್ದವೆಂದರೆ ಇನ್ನಾರಾದರೂ ಆಗಿದ್ದಲ್ಲಿ ಮುಖಕ್ಕೆ ಉಗಿದು ಹೋಗುತ್ತಿದ್ದರೇನೋ. ಆದರೆ ಲೀಲಕ್ಕ ಅದೇ ಆತ್ಮೀಯತೆಯಿಂದ ಮಾತಾಡಿ ಹೋಗಿದ್ದರು. ಸವಿ ಆಡಿದ್ದನ್ನೇ ನಾನು ಮತ್ತೆ ಆಡಿದೆ.

"ಲೀಲಕ್ಕ ಯೂ ಆರ್ ರಿಯಲೀ ಗ್ರೇಟ್!"

✦ ✦



ಅಜ್ಞಾತ

ಇಡೀ ದಿನದ ಪಯಣದ ಆಯಾಸ ಹಳ್ಳಿಯ ತೋಟದ ಮನೆ ನೋಡುತ್ತಿದ್ದಂತೆ ಪರಿಹಾರ ಆಗಿತ್ತು. ಜೊತೆಯಲ್ಲಿ ಅವ್ವ ತಂದಿತ್ತ ತಣ್ಣನೆಯ ಮಜ್ಜಿಗೆ ಕುಡಿದು, ನೆಲದ ಮೇಲೆ ದಿಂಬಿಗೆ ತಲೆಯಿಟ್ಟು ಉರುಳಿಕೊಂಡಾಗ ನಿದ್ದೆ ತಾನಾಗಿಯೇ ಆವರಿಸಿತ್ತು ಮಾಲಿಂಗನನ್ನು. ಕಣ್ಣುಬಿಟ್ಟಾಗ ಆಗಲೇ ಸಂಜೆಯಾಗಿ ಅವ್ವ ಹಿತ್ತಾಳೆ ಲೋಟದ ತುಂಬಾ ಘಮಘಮಿಸುವ ಕಾಫಿ ಹಿಡಿದು ಬಂದಾಗ ದಿಗ್ಗನೆದ್ದ. ಕಾಫಿ ಹೀರಿ "ಹೀಗೆ ಅಡ್ಡಾಡಿ ಬರ್ತೀನಿ" ಎಂದು ಹೊರಟ ಮಗನನ್ನೆ ದಿಟ್ಟಿಸಿದಳು ಅವ್ವ.

ಎರಡು ವರ್ಷಗಳ ಹಿಂದೆ ಬಂದವನು. ಎರಡು ತಿಂಗಳ ಹಿಂದೆ ಮೊಮ್ಮಗಳು ನಳಿನಳ ಮದುವೆಗೆ ಎಲ್ಲರೂ ಹೋಗಿದ್ದರು ಬೆಂಗಳೂರಿಗೆ. ಮದುವೆಯ ಕಾರ್ಯ ಮುಗಿದೊಡನೆ ತಾವು ಹೊರಟುನಿಂತಾಗ ಹೂಂ ಎನ್ನಲು ಆಗದೆ ಬೇಡವೆನ್ನಲೂ ಆಗದ ಚಡಪಡಿಕೆ, ವರ್ಷಗಳ ನಂತರ ಬಂದ ಅವ್ವನನ್ನು ಇನ್ನೆರಡು ದಿನ ಉಳಿದುಹೋಗು ಎನ್ನಲಾಗದ ಸಂದಿಗ್ಧತೆ ಅವನ ಕಂಗಳಲ್ಲಿ ಸ್ಪಷ್ಟವಾಗಿತ್ತು.

"ಆಯ್ತವ್ವ ಹೊರಡ್ರಿ.......... ರಾಮಯ್ಯನಿಗೇಳ್ತೀನಿ ಕಾರ್ನಾಗೆ ಸ್ಟ್ಯಾಂಡ್‌ವರ್ಗೂ ಬಿಡ್ತಾನೆ........."
ಎಂದು ಕಾರತ್ತಿಸಿ ಕೈಬೀಸಿದ್ದ. ಬಸ್ಸತ್ತಿಸಿದ ರಾಮಯ್ಯ ತನ್ನ ಕೈಗೆ ಇನ್ನೂರ ನೋಟಿತ್ತು

"ಸಾಹೇಬ್ರು ಕೊಡಾಕೇಳಿದ್ರು" ಎಂದಾಗ ಊರು ತಲುಪುವ ವರೆಗೂ ಕಂಬನಿ ನಿಂತಿರಲಿಲ್ಲ. ನೆನಪಿನಿಂದ ತೊಟ್ಟಿಕ್ಕಿದ್ದ ಕಂಬನಿ

ಯನ್ನು ತೊಡೆದು ಮೇಲೇಳುವಷ್ಟರಲ್ಲಿ ದುಗ್ಗ "ಕೋಳಿ ಮುಚ್ಚಿಟ್ಟೀನವ್ವಾ........" ಎಂದು ಬಂದು ಹೇಳಿದ. ಹಿರಿಸೊಸೇನ ಕೂಗಿ

"ರಾತ್ರಿಗೆ ಮುದ್ದೆ ಕೋಳಿಸಾರು ಬೇಗ ಮಾಡ್ಬಿಡು. ಮುದ್ದೆ ಬೆಣ್ಣೆಯಿದ್ದಂಗಿರ್ಬೇಕು.. ದಪ್ಪನಾಗ್ ಕಾಯದವೆ ಅಂತ ಸುರ್‍ವಿ ಸಾರು ಗಬ್ಬೆಬ್ಬಿಸ್ಬೇಡ. ಅಂಗೆಯ ಆ ಪುಕ್ಕದ್ದು, ಹೀರಿ, ಮೊಟ್ಟೇದೆಲ್ಲಾ ತಗ್ದು ಬೆಳ್ಳುಳ್ಳಿ, ಖಾರ ಜಜ್ಜಿ ಹಾಕಿ ಎಣ್ಣ್ಯಾಗೆ ಹುರ್‍ದು ಬಿಡ್ರಿ.. ಮೊದ್ಲೆ ಆ ಪ್ಯಾಟೆಗೆ ಆ ನೀಸುನಾತ ಹೊಡಿಯೋ ಬಯ್ಲರ್ ಕೋಳಿ ತಿಂದು ತಿಂದು ನಾಲ್ಗೆ ಜಡ್ಡುಗಟ್ಟಿ ಹೋಗಿರ್‍ತ್ಯೆತೆ.. ಇಲ್ಲಾನ ಸ್ವಲ್ಪ ಸಮಾಧಾನದಾಗ ಉಣ್ಲಿ........."

ಎಂದು ಹೇಳಿ ಹೊರಬರುವಷ್ಟರಲ್ಲಿ ದೂರದಲ್ಲಿ ಮಾಲಿಂಗ, ಸ್ನೇಹಿತ ಮಲ್ಲಯ್ಯನ ಜತೇಲಿ ಬರೋದು ಕಾಣಿಸಿತು. ಬರುಬರುತ್ತಲೆ 'ಅವ್ವಾ........' ಎಂದು ಕೂಗುತ್ತ ಬಂದವನು ಅಲ್ಲಿಯೇ ನಿಂತಿದ್ದ ಅವ್ವನನ್ನು ನೋಡಿ "ರಾತ್ರಿಕೇನವ್ವ ಅಡ್ಗೆ........" ಎಂದ. ಮದುವೆಗೂ ಮೊದಲಿನ ಆ ಮಾಲಿಂಗ ತಟ್ಟನೆ ಕಣ್ಣೆದುರು ಬಂದಂಗಾಯ್ತು.

ಮದುವೆ ಆದೇ ಆಯ್ತು ಹೆಂಡತಿ, ಮಕ್ಕಳ ಹೊರತು ಬೇರೆಯೆಲ್ಲ ಮರೆತು ಹೋದವ ನಂತಿದ್ದ ಮಾಲಿಂಗ. ಊರಿಗೆ ಬಂದರೂ ಎರಡು ತಾಸು ಇದ್ರೆ ಹೆಚ್ಚಾತು. ಪಕ್ಕದೂರಿನ ಪ್ರವಾಸಿಮಂದಿರದಲ್ಲಿ ಇಳಿದುಕೊಂಡು ಬರೀ ಊಟಕ್ಕೆ ಮಾತ್ರ ಬಂದು ಹೋಗುತ್ತಿದ್ದರು ಅವನ ಹೆಂಡತಿ, ಮಕ್ಕಳು. ಕೆಲವೊಮ್ಮೆ ಊಟವನ್ನೂ ಅಲ್ಲಿಗೆ ಕಳುಹಿಸಬೇಕಾಗುತ್ತಿತ್ತು.

ಮೊದಮೊದಲು ಮಗ ಪಕ್ಕದೂರಿನ ಪ್ರವಾಸಿ ಮಂದಿರದಲ್ಲಿ ಉಳಿದು ಹೋಗುವಾಗ "ಇಂತಹ ದೆವ್ವದಂತಹ ಮನೆಯಿದ್ದೂ ಯಾರೋ ಪರ್ದೇಸಿಯಂಗೆ ಎಲ್ಲೊ ಬಂದು ಉಳ್ಕಂಡು ಹೋಗ್ತಾನಲ್ಲ ಮಗ" ಅಂತ ಅವ್ವನ ಕರುಳು ಕುದ್ದು, ಸಂಕಟದಿಂದ ರೋದಿಸುತ್ತಿದ್ದಳು. ಆದರೆ ದಿನಕಳೆದಂತೆ ಸೊಸೆಯ ರೀತಿ, ನಡವಳಿಕೆ ಗಮನಿಸಿ ಎಲ್ಲಾದರೂ ಇರಲಿ, ಹೆಂಗಾನ ಇರಲಿ ಒಟ್ನಲ್ಲಿ ನೆಮ್ಮದಿಯಾಗಿ ಅವರಿದ್ರೆ ಅಷ್ಟೆ ಸಾಕು ಎಂದುಕೊಂಡು ತನ್ನ ಎದೆಯಲ್ಲಿನ ಸಂಕಟ ನುಂಗಿಕೊಂಡಿದ್ದಳು.

ಕಮಲಮ್ಮ ತಮ್ಮ ದೂರದ ಸಂಬಂಧಿಯ ಮಗಳೇ. ಕಲಿತ ಹೆಣ್ಣು. ಮೂವತ್ತೈದು ಆದರೂ ಮದುವೆಯಾಗದ ಮಗ ಆಕೇನ ನೋಡಿದ ಕ್ಷಣವೇ ಮದುವೆಗೆ ಒಪ್ಪಿಗೆ ನೀಡಿದ್ದ. ತಡಮಾಡದೆ, ಹಿಂದೆ ಮುಂದೆ ಯೋಚಿಸದೆ ಮದುವೆ ಮುಗಿಸಿದ್ದರು. ದೂರಕ್ಕೇನೋ ಜೋಡಿ ಚೆನ್ನಾಗಿ ಕಂಡರೂ ಕೆಲವೊಮ್ಮೆ ಸೊಸೆಯೆದುರಿಗೆ ತೀರ ವಯಸ್ಸಾದವನಂತೆ ಕಾಣಿಸುತ್ತಿದ್ದ ಮಗ. ಯೌವನ ಉಕ್ಕುತ್ತಿದ್ದ ಸೊಸೆಯ ಹದಿನಾರರ ಪ್ರಾಯ, ಆ ಪ್ರಾಯ ಅವಳ ಕಂಗಳಲ್ಲಿ ಚಿಮ್ಮಿಸುತ್ತಿದ್ದ ಚಂಚಲತೆ ಅವ್ವನ ಎದೆಯಲ್ಲಿ ಅವಳಿಗರಿವಿಲ್ಲದೆ ಕಂಪನ ಹುಟ್ಟಿಸುತ್ತಿತ್ತು.

"ಅವ್ವಾ ಅವ್ವಾ.. ನಾನು ರಾತ್ರೇಗೇನ್ ಅಡ್ಗೆ ಅಂತ ಕೇಳ್ತಾ ಇದ್ದೀನಿ.. ನೀನೇನು ಯೋಚ್ನೆ ಮಾಡ್ತಿದ್ದಿಯಾ..........?" ಎಂದು ಮಾಲಿಂಗ ಅವ್ವನ ಪಕ್ಕಕ್ಕೆ ಕುಳಿತು ಆಕೆಯ ಭುಜದ ಮೇಲೆ ಕೈಯಿಟ್ಟ.

"ಅಂತಾದ್ದೇನು ಇಲ್ಲಪ್ಪ. ನೀನಿಂಗೆ ಊರಿಗ್ಬಂದು, ಉಳ್ಕಂಡು ಎಷ್ಟು ವರ್ಷ ಆಯ್ತು ಅಂದ್ಕಂತಿದ್ದೆ. ಏನ್ ಅಡ್ಗೆ ಅಂದ್ಯಾ..? ಅಗೋ ನೋಡು ದುಗ್ಗ ಎರ್‍ಡು ಕೋಳಿ ಮುಚ್ಚಿಟ್ಟಾನೆ.."

"ಒಳ್ಳೆದಾಯ್ತು ಬಿಡವ್ವ ನಿನ್ ಕೈನ ಕೋಳಿ ಸಾರು ಉಂಡು ಅದೆಷ್ಟು ಕಾಲ ಆಯ್ತೋ.........."

ಮಗ ಅಂದೊಡನೆ ಅವ್ವನೇ ಸೀದ ಅಡುಗೆ ಮನೆ ಹೊಕ್ಕಳು. ಮಗ ಒಂದೊಂದು ತುತ್ತು ತಿಂದಾಗಲು ಅವಳ ಒಡಲು ಸಂತೃಪ್ತಿಯಿಂದ ಬಿರಿದು ಹೋಗುತ್ತಿತ್ತು.

ಮೊದಮೊದಲು ಎಲ್ಲವೂ ಸರಿಯಾಗಿದ್ದಂತೇ ತೋರಿತ್ತು. ಒಂದೆರಡು ಬಾರಿ ಮನೆಗೆ ಬಂದಿದ್ದ ಸೊಸೆ ಹೆಚ್ಚು ಮಾತಾಡಲಿಲ್ಲ ಎಂಬುದರ ಹೊರತು ಉಳಿದಂತೆ ಸಮನಾಗಿಯೇ ಇದ್ದಳು. ಆದರೆ ಯುಗಾದಿಗೆ ಮಗನ ಮನೆಗೆ ಹೋದ ದಿನ ಅವ್ವನಿಗೆ ಅವಳ ನಿಜರೂಪದ ದರ್ಶನವಾಗಿತ್ತು.

ಅಂದು ಅವಳು ಬೆಂಗಳೂರಿಗೆ ಹೋದ ದಿನ ಮನೆಯಲ್ಲಿ ಅವರು ಕೆಲಸಕ್ಕೆಂದು ಮನೆಯಲ್ಲೇ ಇಟ್ಟುಕೊಂಡಿದ್ದ ಅನಾಥ ಹುಡುಗಿ ಸಾವಿತ್ರಿಯನ್ನು ಬಿಟ್ಟು ಬೇರಾರು ಕಾಣಲಿಲ್ಲ. ಸಾವಿತ್ರಿಯನ್ನು ವಿಚಾರಿಸಿದಾಗ ತಿಳಿಯಿತು ಸೊಸೆ ಕೋಣೆಯಲ್ಲಿ ಇರುವಳೆಂದೂ, ಯಾರು ಬಂದರೂ ಎಬ್ಬಿಸಬೇಡ ಎಂದು ಹೇಳಿರುವಳೆಂದೂ.

ಸಂಜೆ ಮಗ ಮನೆಗೆ ಬರುವವರೆಗೂ ಕೋಣೆ ಬಿಟ್ಟು ಹೊರಬರದ ಸೊಸೆ ಅವನು ಬರುತ್ತಿದ್ದಂತೆ ದೊಡ್ಡ ರಂಪನೇ ತೆಗೆದುಬಿಟ್ಟಳು. ಅಳುತ್ತ ದೂಷಿಸಿದ್ದಳು ಅವ್ವನನ್ನು

"ನೋಡ್ರಿ ಮಧ್ಯಾಹ್ನ ಬಂದೋರು, ತಲೆನೋವಂತ ಮಲ್ಗಿದ್ದೀನಿ ಏನಮ್ಮ ಹೇಗಿದ್ದಿ.........? ಅಂತ ಒಂದ್ಮಾತು ಕೇಳ್ಬಾರ್ದ..? ಹೋಗಿ ಆ ಕೆಲ್ಸದೋಳ್ ಹತ್ರ ಹರಟೆ ಹೊಡೀತಾರಲ್ಲ ನನಗಿಂತ ಅವ್ಳೆ ಹೆಚ್ಚಾದ್ಲ..? ಅವ್ಳ ಮುಂದೆ ಇದೆಂತಹ ಅವಮಾನರೀ..? ಈ ಮನೇಲಿ ನನಗಿಲ್ಲದ ಮರ್ಯಾದೆ ಅವ್ಳಿಗಿದೆ ಅಂದಂಗಾಯ್ತು.. ನಾನೇನು ಅಂತದ್ದು ಮಾಡಿದ್ದೆ..?"

ಹೀಗೆ ಅವಳ ಮಾತುಗಳು ಬೆಳೆಯುತ್ತಲೇ ಹೋಗಿ ಅವ್ವನನ್ನು ಗಾಬರಿಗೊಳಿಸಿ, ತಲೆ ಚಿಟ್ಟೆನಿಸಿತ್ತು. ಹೆಂಡತಿಯನ್ನು ಸಮಾಧಾನ ಪಡಿಸಲು ಹೆಣಗಾಡುತ್ತ ಮಗ

"ಯಾಕಂಗೆ ಮಾಡ್ದೆವ್ವ...........?"

ಎಂದಾಗ ತನ್ನೆದುರು ಅವನ ಅಸಹಾಯಕತೆ, ಅರಾಜಕತೆಯನ್ನ ಮುಚ್ಚಿಡುವ ಪ್ರಯತ್ನವನ್ನೂ ಮರೆತವನಂತೆ ಕಂಡಿದ್ದ ಅವನು. ಇತ್ತ ಬೆದರಿದ ಹರಿಣಿಯಂತೆ ನಡುಗುತ್ತ ಮೂಲೆ ಸೇರಿದ್ದ ಸಾವಿತ್ರಿ ಅವ್ವನ ಕೈಗಳನ್ನು ಹಿಡಿದು

"ಅಮ್ಮಾ ನೀವು ಹೋದ್ಮೇಲೆ ನನಗೇನು ಕಾದೈತೋ ಏನೋ.........."

ಎಂದು ಕಣ್ಣಲ್ಲಿ ನೀರು ತಂದಾಗ ಆ ಸುಂದರ ರೂಪದ ಮರೇಲಿ ಅಡಗಿರುವ ಕರಾಳ ಛಾಯೆಗೆ ವಿಸ್ಮಯಪಟ್ಟು, ಇನ್ನು ಮಗನ ಪಾಡು ನೆನೆದು ಮರುಗಿದಳು. ಅವನು ಹೆಂಡತಿಯನ್ನು ವಹಿಸಿದನಲ್ಲಾ ಎಂಬ ಅಸಮಾಧಾನದ ಬದಲು ಆಕೆಯೆದುರಲ್ಲಿ ಅವನು ಪ್ರದರ್ಶಿಸುತ್ತಿದ್ದ ದೀನಸ್ಥಿತಿಗೆ ಮರುಕವುಕ್ಕಿ ಪರಿಸ್ಥಿತಿಯನ್ನು ಸಹಜಸ್ಥಿತಿಗೆ ಮರಳಿಸಲು ಎಂದೂ ಯಾರಿಗೂ ತಲೆಬಾಗದ ಅವ್ವ ಅಂದು ಸೊಸೆಯೆದುರು ತಲೆಬಾಗಿದ್ದಳು. ಮನಸ್ಸಿಲ್ಲದ ಮನಸ್ಸಿನಿಂದ ಹಬ್ಬ ಮುಗಿಸಿ, ಮರುದಿನವೇ ಊರಿಗೆ ಹಿಂತಿರುಗಿದ್ದ ಅವ್ವ ಮತ್ತೆ ಆ ಮನೆಗೆ ಕಾಲಿಟ್ಟದ್ದು ಮೊಮ್ಮಗ ಹುಟ್ಟಿದ ಮೇಲೆಯೆ.

ಬೆಳಗಿನ ಜಾವವೇ ಹೊರಟು ನಿಂತ ಮಾಲಿಂಗ

"ಮತ್ತೆ ಮುಂದಿನ್ವಾರ ಬರ್ತೀನಿ. ಅಣ್ಣಯ್ಯನತ್ರ ಎಲ್ಲ ಮಾತಾಡೀನಿ, ಒಂದು ನೂರು ತೆಂಗಿನಸಸಿ ಕಳಸ್ತೀನಿ.. ಅದಕ್ಕೆ ಎಲ್ಲಾ ವ್ಯವಸ್ಥೆ ಮಾಡ್ಬಿಡ್ರಿ.." ಎಂದಿದ್ದ.

ಅವನ ಮುಖದಲ್ಲಿ ಅದುವರೆಗು ಸದಾ ರಾರಾಜಿಸುತ್ತಿದ್ದ ನೋವು, ಅಸಹಾಯಕತೆ ಮಾಯವಾಗಿದ್ದು ಪವಾಡದಂತೆ ತೋರುತ್ತಿತ್ತು.

ಮೊಮ್ಮಗ ಚಂದ್ರ ಹುಟ್ಟಿದಾಗ ನೋಡಲು ಹೋದ ಅವ್ವನಿಗೆ ಆಶ್ಚರ್ಯ ಕಾದಿತ್ತು. ಮುಖ ಬಿಗಿದುಕೊಂಡು, ಚುಚ್ಚು ಮಾತುಗಳಿಂದ ಅವ್ವನನ್ನು ಘಾಸಿಗೊಳಿಸದೆ ನಗುನಗುತ್ತ, ಪ್ರೀತ್ಯಾದರಗಳಿಂದ ನಡೆದುಕೊಂಡಳು ಸೊಸೆ.

"ನಿಮ್ಮ ಮೊಮ್ಮಗ ಎಲ್ಲ ನಿಮ್ಮಂಗೆ.........." ಎಂದಾಗ ಅಮ್ಮ ಸೋತುಹೋಗಿದ್ದಳು.

ಸೊಸೆಯ ಬಲವಂತಕ್ಕೆ ಒಂದು ವಾರ ಉಳಿದು, ಹೊರಟು ನಿಂತಾಗ ಕಾಲಿಗೆ ನಮಸ್ಕರಿಸಿ, ಕಣ್ಣೀರು ಸುರಿಸುತ್ತ

"ನೀವು ಹೋದ್ರೆ ನಾನೊಬ್ಬೆ ಆಗ್ಬಿಡ್ತೀನಿ.. ಇವ್ನ ನೋಡ್ಕಳಾದು ನನಗೊಬ್ಳಿಗೆ ತುಂಬಾ ಕಷ್ಟವಾಗುತ್ತೆ.......... ದೊಡ್ಡ ಭಾವನ ಮಗಳು ಲಕ್ಷ್ಮಿಯನ್ನಾದ್ರೂ ಕಳುಹಿಸಿದ್ರೆ ನನ್ಗೂ ಜತೆ ಆಗುತ್ತೆ ಪಾಪನೂ ಮನೇವ್ರ ಕೈಲಿ ಇದ್ದಂಗಾಗುತ್ತೆ.........." ಎಂದಿದ್ದಾಗ ಅವ್ವನಿಂದ ಇಲ್ಲವೆನ್ನಲು ಸಾಧ್ಯವಾಗದೆ ಹೋಗಿತ್ತು.

ಮದುವೆಗೆ ಬೆಳೆದು ನಿಂತಿದ್ದ ಲಕ್ಷ್ಮಿಯನ್ನು ಎಂದೂ ಮನೆಯಿಂದ ಹೊರಗೆ ಕಳುಹಿಸಿರಲಿಲ್ಲ. ಆದರ ಈಗ ತಾನೇ ಖುದ್ದಾಗಿ ಮಗ ಸೊಸೆಯನ್ನು ಒಪ್ಪಿಸಿ, ಅವರ ಜತೇಲೇ ಲಕ್ಷ್ಮಿಯನ್ನು ಬೆಂಗಳೂರಿಗೆ ಕಳುಹಿಸಿಕೊಟ್ಟಳು. ಬಲು ಸಂಭ್ರಮದಿಂದಲೇ ಹೊರಟಿದ್ದಳು ಹುಡುಗಿ. ಆದರೆ ಕುಣಿದು ಕುಪ್ಪಳಿಸುತ್ತ ಹೋದವಳು ಹದಿನೈದು ದಿನಕ್ಕೆ ಅಳುತ್ತ ಹಿಂದಿರುಗಿದ್ದಳು. ಬಂದವಳೇ ಅಜ್ಜಿಯನ್ನು ತೋಟಕ್ಕೆ ಕರೆದೊಯ್ದು ಏಕಾಂತದಲ್ಲಿ ಮಾತಾಡಿದ್ಲು.

"ಚಿಕ್ಕಪ್ಪ ಯಾರಿಗೂ ಹೇಳ್ಬೇಡ ಅಂದಿದ್ದ. ಆದ್ರೆ ನನ್ ಮನ್ಸು ತಡೀತಿಲ್ಲ ಅದ್ಕೆ ನಿನ್ನ ಇಲ್ಲಿಗೆ ಕರ್ಕಂಡ್ಬಂದೆ........" ಎಂದು ಮಾತು ನಿಲ್ಲಿಸಿದಾಗ ದಿಗಿಲುಗೊಂಡ ಅವ್ವ

"ಯಾಕೆ.........? ಏನಾಯ್ತೆ..........?" ಅಂತ ಒಂದೇ ಉಸಿರಿಗೆ ಕೇಳಿದ್ದಳು. ತಡೆತಡೆದು ಹೇಳಿದ್ದಳು ಲಕ್ಷ್ಮಿ

"ಅಜ್ಜಿ ಅಜ್ಜಿ ಸಣ್ಣಮ್ಮನಿಗೆ ತಲೆ ಸರಿಯಿಲ್ಲ... ಹೆಂಗೆಂಗೋ ಮಾಡ್ತಾಳೆ, ಏನೇನೋ ಮಾತಾಡ್ತಾಳೆ.. ಆ ಸಾವಿತ್ರಿನಂತೂ ಎದುರಲ್ಲಂದ್ರೆ ಅದರಲ್ಲಿ, ಹೆಂಗಂದ್ರಂಗೆ ಹೊಡೀತಾಳೆ... ನನ್ಗೂ ಮೊನ್ನಿನಾಗೆ ಹಂಗೆ ಹೊಡಿದಿದ್ಲು..."

"ಭೋಸುಡಿಮುಂಡೆ..........." ಅವ್ವ ಒಮ್ಮೆಗೆ ಸಿಟ್ಟಿಗೆದ್ದಿದ್ದಳು.

"ಅಲ್ಲೆ ಏನೋ ದೊಡ್ಡೋರು ಒಂದ್ನಾಕು ಮಾತೇಳಿದ್ರೆ, ಒಂದ್ ಹೊತ್ತ ಹೊಡುದ್ರೆ ಅದ್ನೆ ದೊಡ್ಡದ್ ಮಾಡದಲ್ದೆ ತಲೆಸರಿಯಿಲ್ಲ ಅಂತ ಬೊಗಳ್ತೀಯಾ........? ಅದ್ಕೆ ನಾಲ್ಕ್ ದಿವಸಕ್ಕೆ ಕಿತ್ಕಂಡದೇ ಬಂದೆ............."

"ಅಯ್ಯೋ ನಾನೇಳದ್ನ ಪೂರ್ತಿ ಕೇಳಜ್ಜಿ ಮೊದ್ಲು......... ಅಮ್ಯಾಕೆ ನೀನೆ ಹೇಳು

ಅದ್ಯಾರ್ದು ತಪ್ಪೂ ಸರೀಂತ.........." ಅಂದ್ಲು ಲಕ್ಷ್ಮಿ. ಆದ್ರೆ ಅದೇ ಸೆಡವಿನಲ್ಲಿದ್ದಳು ಅವ್ವ "ಅದೇನ್ ಬೊಗಳ್ತಿಯೋ ಬೊಗಳು.......... ಅಂದಳು.

ಸೊಸೆಯ ಪ್ರೀತಿ, ಆದರ ಅವಳ ಮನಸ್ಸು ತುಂಬಿ ನಿಂತಿದ್ದವು. ಎಷ್ಟೇ ಆಗ್ಲಿ ಇನ್ನೂ ಚಿಕ್ಕೊಯ್ಸು. ನಾನಿಷ್ಟು ವಯಸು ಕಳ್ದೋಳು ಆ ಹುಡ್ಗಿನ ಅರ್ಥ ಮಾಡ್ಕಂಡ್ಡಂಗೆ ಏನೇನೋ ಅಪಾರ್ಥ ತಿಳ್ಕಂಡಿದ್ನಲ್ಲಾ ಅಂತ ಪೇಚಾಡಿಕೊಂಡಿದ್ದಳು. ಅಂತದ್ರಲ್ಲಿ ಲಕ್ಷ್ಮಿ ಎರಡೇ ವಾರಕ್ಕೆ ಓಡಿ ಬಂದಾಗ ಸಿಟ್ಟು ತಾನಾಗಿಯೇ ಉಕ್ಕಿತ್ತು. ಅವಳಿನ್ನೂ ಸುಮ್ಮನೆ ಕುಳಿತಿದ್ದನ್ನು ಕಂಡು ಸಿಡುಕಿದಳು.

"ಅದೇನ್ ಬೊಗಳು ಅಂದ್ನೆಲ್ಲಾ............" ಲಕ್ಷ್ಮಿ ಬಾಯ್ಬಿಟ್ಟಳು.

"ಅಜ್ಜಿ ಅವತ್ತು ಗುರುವಾರ , ರಾತ್ರಿ ಆಗ್ಲೇ ಎರ್ಡು ಗಂಟೆ ಆಗಿತ್ತು. ನಾನು ದಿನಾಲು ಅವ್ರ ಕೋಣೆ ಹೊರ್ಗೆ ಮಲ್ಗತ್ತಿದ್ದೆ. ಅವತ್ತು ಇದ್ದಕ್ಕಿದ್ದಂಗೆ ಅಷ್ಟೊತ್ನಾಗೆ ಪಾಪ ಅಳಾಕತ್ತಿದ. ಅದರ ಜೊತ್ಯಾಗೆ ಸಣ್ಣಮ್ಮನ ಕಿರುಚಾಟ ಕೇಳಿಸ್ತಿತ್ತು. ನಡುನಡುವೆ ಸಣ್ಣಪ್ಪನೂ ಮಾತಾಡ್ತಿದ್ದ. ಎಷ್ಟೊತ್ತಾದ್ರು ಒಳ್ಗಿನ ಗದ್ಲ ನಿಲ್ಲೆ ಇಲ್ಲ. ನಾನು ಹೆದ್ರಿಕೊಂಡು ಎದ್ದೋಳೆ ಸೀದಾ ಹೋಗಿ ದಬದಬ ಅವ್ರ ಕೋಣೆ ಬಾಗ್ಲು ಬಡ್ದೆ. ಪಾಪ ಚೀರ್ಕಂತ್ಲೆ ಇದ್ದ. ನಾನು ಇನ್ನೂ ಜೋರಾಗಿ ಬಡಿಯಕತ್ತಿದೆ... ಎಷ್ಟೋ ಹೊತ್ತಾದ್ಮೆಲೆ ಸಣ್ಣಪ್ಪ ಬಾಗ್ಲು ತಗ್ದು ಹೊರಕ್ಬಂದ.. ಅಜ್ಜೀ ಅವ್ನ ಮೈಮ್ಯಾಲಿನ ಅರ್ಬಿಯಲ್ಲಾ ಕಿತ್ತೋಗಿತ್ತು! ಮಗೂನ ಎತ್ಕಂಡು ಹೋಗು ಅಂತ ನನ್ಗೇಳಿ ಸೀದ ಹೊರಕ್ಹೋದ ಸಣ್ಣಪ್ಪ. ಒಳ್ಗೆ ಸಣ್ಣ ದೀಪ ಉರೀತ ಇತ್ತು. ನಾನು ಬಾಗ್ಲು ಮೆಲ್ಲಗೆ ದಬ್ಬಿ ಒಳ್ಹೋದೆ ಯವ್ವಾ..! ಕಣ್ಣಾಗ್ ನೋಡ್ಬಾರ್ದು ಅದ್ನ..!"

ಹೇಸಿಗೆಯಿಂದ ಮೈಯೆಲ್ಲ ಕೊಡವಿದಳು ಲಕ್ಷ್ಮಿ ಮಾತು ನಿಲ್ಲಿಸಿ. ಅವ್ವನ ಕುತೂಹಲ ಏರುತ್ತಿತ್ತು.

"ಮತ್ತೆ.. ಮತ್ತೆ.. ಆ ಕೋಣ್ಯಾಗೆ ಸಣ್ಣಮ್ಮ ಬೆತ್ತಲಿದ್ಲು ! ಮೈಮೇಲೆ ಒಂಚೂರು ಅರಿವೆಯಿರ್ಲಿಲ್ಲ! ಪಾಪನ್ನ ಬರೀ ನೆಲದ್ಮೆಲೆ ಉಲ್ಡಾಕಿದ್ಲು ಕಣಜ್ಜಿ ಕೆಳ್ಗೆ..! ಅದಂತು ವದರಾಡ್ತಿತ್ತು. ಆಯಮ್ಮನ ಅವತಾರ ನೋಡಿ ಮೈ ಜುಂ ಅಂದ್ರೂ ಆ ಮಗನ್ನ ಅಳು ಕೇಳ್ಲಾರ್ದೆ ಧೈರ್ಯಮಾಡಿ ಓಡೋಗಿ, ಮಗನೆತ್ಕಂಡು ಇನ್ನೇನು ಹೊರಗೆ ಬರ್ಬೇಕು ಮುಂದಿದ್ದ ಲೋಟ ಎತ್ಕಂಡು ಬೀಸಿ ಒಗದ್ಲು ನೋಡು ಸಣ್ಣಮ್ಮ.. ನಾನು ಚೀರ್ಕಂಡು, ಆ ಹುಡ್ಗನ್ನು ಗಟ್ಯಾಗೆ ಅವಚ್ಕಂಡು ಓಟಕಿತ್ತೆ ಅಲ್ಲಿಂದ..!"

ಲಕ್ಷ್ಮಿ ಹೇಳುತ್ತಲೇ ಇದ್ದಳು. ಆದರೆ ಅವ್ವ ಗರಬಡಿದವಳಂತೆ ಕೂತಿದ್ದಳು. ಅಂದು ಅವಳಿಗರಿವಿಲ್ಲದೆ ಎದೆಯಲ್ಲಿ ಕಂಪನ ಹುಟ್ಟಿಸಿದ್ದ ಆ ಚಂಚಲ ಕಣ್ಣುಗಳು ಪಕ್ಕನೆದುರಾಗಿ ಅಲ್ಲಾಡಿ ಹೋದಳಾಕೆ. ಲಕ್ಷ್ಮಿ ಮಾತನಾಡುತ್ತಲೇ ಇದ್ದಳು.

"ಅಜ್ಜಿ......... ಸಾವಿತ್ರಿನೂ ಒಂದೆರ್ಡು ಸಾರಿ ಹಂಗೆ ನೋಡಿದಾಳಂತೆ! ಪಾಪ, ಸಣ್ಣಪ್ಪ ಮೊದ್ಲೆ ಮೆತ್ತನನು, ನಿಧಾನಸ್ಥ ಆಯಮ್ಮನ ಅದೆಂಗೆ ನಿಭಾಯಿಸ್ತಾನೋ ಏನೋ.. ನಮ್ ಮನ್ದೇವ್ರಾಣೆಗೂ ಆಯಮ್ಮನಿಂದ ಸಣ್ಣಪ್ಪಗೇನೂ ಸುಖ ಇಲ್ಲ ಕಣಜ್ಜಿ.. ಆ"

ಅವ್ವ ಗಪ್ಪನೆ ಲಕ್ಷ್ಮಿಯ ಬಾಯನ್ನು ತನ್ನ ಕೈಗಳಿಂದ ಮುಚ್ಚಿದಳು. ಅವಳ ಒಂದೊಂದು ಮಾತು ನೇರವಾಗಿ ಅವಳ ಹೃದಯಕ್ಕೆ ಇರಿದು ಘಾಸಿಗೊಳಿಸುತ್ತಿದ್ದವು. ಬೆತ್ತಲಿದ್ದ ಸಣ್ಣಮ್ಮ,

ಆಕೆಯಲ್ಲಿ ಅಸಹ್ಯವುಟ್ಟಿಸಿ, ಅಸಹಾಯಕ ಸಣ್ಣಪ್ಪ ಆಕೆಯಲ್ಲಿ ಕರುಣೆಯುಟ್ಟಿಸಿ ಮೇಲಿನ ಮಾತುಗನ್ನು ಆಡಿಸುತ್ತಿದ್ದರು. ಪ್ರಸ್ತುತ ಪರಿಸ್ಥಿತಿಯನ್ನು, ಅದರ ಗಂಭೀರತೆಯನ್ನು ತುಲನೆ ಮಾಡಿ ಅರ್ಥ ಮಾಡಿಕೊಳ್ಳುವಷ್ಟು ಬಲಿತವಳಲ್ಲ ಲಕ್ಷ್ಮಿ. ಆದರೆ ಅವ್ವನಲ್ಲಿ ಒಪ್ಪಿಕೊಳ್ಳ ಬಯಸದ ಕಹಿಸತ್ಯವೊಂದನ್ನು ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯದ ಅರಿವು ಜಾಗೃತ ಗೊಳ್ಳುತ್ತಿತ್ತು. ಅದು ಆಕೆಯನ್ನು ಚುಚ್ಚುತ್ತಿತ್ತು.

ಲಕ್ಷ್ಮಿಯ ಬಾಯೇನೋ ಮುಚ್ಚಿಸಿದ್ದಳು. ಆದರೆ ಸ್ವತಃ ಅವಳ ಅಂತರಂಗ ಹುಯಿಲಿಟ್ಟಿತ್ತು. ಇದೇ ಯೋಚನೆಯಲ್ಲಿದ್ದವಳು ಮನೆಗೆ ಬಂದ ಮಾಲಿಂಗನನ್ನು ಅದೇಕೋ ಹಿಂದಿನಂತೆ ಮುಖ ಕೊಟ್ಟು ಮಾತಾಡಿಸದಾದಳು. ಆದರೆ ಮಾಲಿಂಗ ಮಾತ್ರ ಇದ್ಯಾವುದನ್ನು ಗಮನಿಸುವ ಸ್ಥಿತಿಯಲ್ಲಿರಲಿಲ್ಲ. ವ್ಯಾಕುಲನಾಗಿದ್ದ ಅವನು

"ಅವ್ವ ಮಗು ನೋಡಿಕೊಳ್ಳೋಕೆ ದಯವಿಟ್ಟು ಯಾರನ್ನಾದ್ರು ಹೊಂದಿಸ್ಕೊಡು... ನನಗೆ ತುಂಬಾ ತೊಂದ್ರೆ ಆಗ್ಬಿಟ್ಟಿದೆ. ಅಫೀಗ್ನೋಡಿದ್ರೆ ಒಂದಿನ ಅರಾಮಿದ್ರೆ ಇನ್ನೊಂದಿನ ಇಲ್ಲ. ನಾನು ಆ ಮಗೂನ ನೋಡ್ಕಳ್ಳೋ ಆಫೀಸಿಗೋಗ್ಲೋ ಒಂದು ತೋಚ್ದಂಗಾಗಿದೆ.."

ತನ್ನಳಲನ್ನು ತೋಡಿಕೊಂಡಿದ್ದ. ನೋವು ಮಿಳಿತವಾದ ಆ ಸ್ವರ ಭಾರವಾಗಿತ್ತು. ಅವ್ವ ತಡಮಾಡಲಿಲ್ಲ. ಸುರಿಯುವ ಮಳೆಯಲ್ಲೆ ಪಕ್ಕದ ಪಂಚಳ್ಳಿಗೆ ಹೊರಟಳು ಮಕ್ಕಳಿಲ್ಲದ ವಿಧವೆ ತಂಗಿ ಸಾಕವ್ವನನ್ನು ಕರೆತರಲು. ಪರಿಸ್ಥಿತಿಯ ಸೂಕ್ಷ್ಮ ವಿವರಣೆ ನೀಡಿ ಆಕೆಯನ್ನು ಒಪ್ಪಿಸಿದ್ದಳು. ಮಳೆ ಸುರಿಯುತ್ತಲೇ ಇತ್ತು.

"ಇದೆಂತಹ ಹುಚ್ಚು ಮಳೆ........" ಗೊಣಗಿದ್ದಳು ಅವ್ವ.

"ಮೋಡ ಹೆಂಗೆ ಹೆಪ್ಪುಗಟ್ಕಂಡೈತೆ.. ಅದೆಲ್ಲ ಕರಗವರ್ಗೂ ಈ ಮಳೆ ಹಿಂಗೆ ಹುಚ್ಚು ಹಿಡ್ದಂಗೆ ಸುರೀತಲೇ ಇರ್ರೈತೆ.. ಆ ಮೋಡ ಕರಗ್ಬೇಕು ಆ ಮಳೆ ಶಮನ ಆಗ್ಬೇಕು.." ಸಾಕವ್ವನ ಮಾತಿಗೆ ನಿಟ್ಟುಸಿರಿಟ್ಟಳು ಅವ್ವ.

"ಈ ಜನುಮ್ದಾಗೆ ಸಾಧ್ಯವಿಲ್ಲದ ಮಾತದು..." ತನಗೇ ತಾನು ಪಿಸುಗುಟ್ಟಿದ್ದಳು. ಆದರೆ ಸಾಕವ್ವನ ಕಿವಿ ಬಲು ಚುರುಕು.

"ಅಯ್ಯ ಅದೇನ್ ಮಹಾಬಿಡಕ್ಕ. ಇತ್ಲಾಗಿಂದ್ ಒಂದು ಗಾಳಿ ಎದ್ರೆ ಅತ್ಲಾಗ್ ಹೊಡ್ಕಂಡು ಹೋತ್ಗೈತೆ ಮೋಡನೆಲ್ಲಾ.........." ಎಂದಳು.

ಆ ಮಾತಿಗೋ, ಓಡುವ ಬಸ್ಸಿನಿಂದ ಒಳಕ್ಕೆ ನುಗ್ಗುತ್ತಿದ್ದ ಗಾಳಿಯ ಹೊಡೆತಕ್ಕೊ ಅವ್ವ ಗಡಗಡ ನಡುಗುತ್ತ ಸೆರಗನ್ನು ಎಳೆದು ಗಟ್ಟಿಯಾಗಿ ಹೊದ್ದುಕೊಂಡಿದ್ದಳು.

ಹೇಳಿದ ಸಮಯಕ್ಕಲ್ಲದೆ ಹೋದರು ತಡವಾಗಿಯಾದರೂ ತೆಂಗಿನ ಸಸಿಗಳು ಬಂದಿಳಿದವು.

"ಚಂದ್ರಣ್ಣಾರೇ ತಗಂಡು ಬರ್ಬೇಕಂತ ಇದ್ರು ಅದ್ಕೆ ತಡ ಆಯ್ತು..." ಎಂದ ಸಸಿ ತಂದ ಆಳು.

ಚಂದ್ರ ಎಂದೊಡನೆ ಮೊಮ್ಮಗನ ರೂಪ ತಟ್ಟನೆ ಕಣ್ಣೆದುರಿಗೆ ಬಂತು. ಚಂದ್ರ ಎಂದರೆ ಸಾಕ್ಷಾತ್ ಚಂದ್ರನೇ! ಎಲ್ಲರೆದುರು ಹೇಳುತ್ತಿದ್ದಳು ಅವ್ವ

"ನಮ್ ಚಂದ್ರನದು ಬೆಳದಿಂಗಳ ಮೈ ಬಣ್ಣ......." ಎಂದು.

ಆದರೆ ಅದೇ ನಳಿನಳ ವಿಷಯಕ್ಕೆ ಬಂದರೆ ಅಷ್ಟೆ ಓಂಜರಿಯುತ್ತಿದ್ದಳು. ಇವನು ಬೆಳದಿಂಗಳಾದರೆ ಆಕೆ ಕಗ್ಗತ್ತಲು. ನೆನಪಾದರೆ ಸಾಕು ಬರೀ ನಿಟ್ಟುಸಿರೇ. ನಿಟ್ಟುಸಿರು! ಚಂದ್ರನಿಗೆ ಮೂರು ವರ್ಷ ತುಂಬಿದಾಗ ಜವಳ ತೆಗೆಸಲು ಊರ ದೇವರಿಗೆ ಬಂದ ಮಾಲಿಂಗನ ಪರಿವಾರದ ಜತೇಲೆ ಅವನ ಇಬ್ಬರು ಸ್ನೇಹಿತರೂ ಇದ್ದರು. ಒಟ್ಟಾಗಿ ಕಾಲೇಜಿನಲ್ಲಿ ಕಲಿತವರೂ, ಒಂದೇ ಕೋಣೆಯಲ್ಲೆ ಇದ್ದವರೂ ಎಂದಿದ್ದ ಮಾಲಿಂಗ,

ಮಂಜುನಾಥ ಬಲು ಸಂಕೋಚದ ಮಿತಭಾಷಿ. ಮೈಸೂರಿನಲ್ಲಿ ಕೆಲಸ. ಇನ್ನೊಬ್ಬ ಶ್ರೀನಿವಾಸ ಅಷ್ಟೆ ಮಾತುಗಾರ. ಬೀದರ್‌ನಿಂದ ಇದೀಗ ಬೆಂಗಳೂರಿಗೆ ವರ್ಗವಾಗಿ ಬಂದಿದ್ದವ. ನೋಡಲು ಲಕ್ಷಣವಾಗಿದ್ದರೂ ಬಣ್ಣ ಮಾತ್ರ ತೊಳೆದ ಕೆಂಡ. ಹೆಚ್ಚು ಮಾತನಾಡದ, ಯಾರೊಂದಿಗೂ ಬೆರೆಯದ ಗಂಟು ಮುಖದ ಕಮಲಮ್ಮನನ್ನೂ ಬಿಡದೆ ಛೇಡಿಸುತ್ತ, ರೇಗಿಸುತ್ತ ಆಕೆಯನ್ನು ಮಾತಿಗೆಳೆಯಲು ಪ್ರಯತ್ನಿಸುತ್ತಿದ್ದ.

ಅವ್ವನಿಗೋ ಒಳಗೇ ನಡುಕ. ಅವನ ಗ್ರಹಚಾರಕ್ಕೊ, ನಮ್ಮ ಗ್ರಹಚಾರಕ್ಕೊ ಸೊಸೆ ರೇಗಿ ರಂಪ ತೆಗೆದರೆ ಇಡೀ ವಾತಾವರಣವೇ ಗಬ್ಬೆದ್ದು ಹೋಗುತ್ತಿತ್ತು. ಆದರೆ ಹಾಗಾಗಲಿಲ್ಲ. ಅವ್ವ ನಿರೀಕ್ಷೆ ತಲೆಕೆಳಗಾಗುವಂತೆ ಶ್ರೀನಿವಾಸನೊಡನೆ ಮಾತಿಗೆ ತೊಡಗದಿದ್ದರೂ ಅವನ ಮಾತುಗಳನ್ನು ಮುಗುಳ್ನಗುತ್ತ ಸ್ವಾಗತಿಸುತ್ತಿದ್ದಳು. ಅವ್ವನಿಗೆ ನಿರಾಳವೆನಿಸಿತ್ತು. ಆದರೆ ಊರಿಂದ ಬಂದ ಸಾಕವ್ವ ಬೇರೆಯೇ ಮಾತಾಡಿ ಅವಳ ಗಾಯಕ್ಕೆ ಉಪ್ಪು ಸುರಿದಿದ್ದಳು ಮತ್ತೆ.

"ನಿನ್ ಹತ್ರ ಏನ್ ಮುಚ್ಚುಮರೆಯಕ್ಕ ಆ ಹುಡ್ಗಿನ ಸಂಪಾಳ್ಸದು ನಮ್ ಮಾಲಿಂಗನ್ಕೈಯಾಗೆ ಆಗದ್ ಕೆಲ್ಸ. ಪುಣ್ಯಾವಿಲ್ದ್ ಗಂಡ ಹಿಂದ್ ಮಲ್ಗಿದ್ರೇನ್ ಮುಂದ್ ಮಲ್ಗಿದ್ರೇನ್ ಅನ್ನಂಗೆ ಐತೆ ಅಲ್ಲಿ ಪರಿಸ್ಥಿತಿ. ಇವ್ನು ಆಗೊತ್ಗೆ ಎಲ್ಲಾ ಸೈಸಿಕೊಂಡು ಹೋಗ್ತವನೆ ನೋಡು. ಬ್ಯಾರೆ ಯಾರನ ಆಗಿದ್ರೆ ಇಟೊತ್ಗೆ ಅವ್ಳ ಚೆಂಡುತಿರ್ವಿ ಕೆರೆಬಾವಿ ಪಾಲು ಮಾಡ್ತಿದ್ರು........" ಅಂದು ಮತ್ತೆ ಅವ್ವನ್ನೆ ತರಾಟೆ ತಗಂಡಿದ್ಲು.

"ಅದಕ್ಕೆ ಸರಿಯಾಗಿ ನೀನಿದಿ. ಮೊದ್ಲೆ ಮಾಲಿಂಗ ಮೆತ್ತನನು ಕಣಕ್ಕ ನೀನೂ ಹಿಂಗೆ ಸಂಬಂಧ ಇಲ್ದಳಂಗಿದ್ರೆ ಏನ್ಗತಿ........?" ಎಂದಿದ್ದಳು.

ಅವಳ ಮಾತಿಗೆ ಅವ್ವನ ಎದೆಯಲ್ಲಿ ದೊಡ್ಡ ಗದ್ದಲವೇ ಎದ್ದಿತ್ತು. ಎಲ್ಲರೂ ಮಗನನ್ನು ಮೆತ್ತನನು, ನಿಧಾನಸ್ತ ಎಂದು ಕೊಂಡಾಡುತ್ತಲೇ ಹೀಯಾಳಿಸುತ್ತಿರುವಂತೆ ತೋರುತ್ತಿತ್ತು. ಏನೇ ಆದರು ಸೊಸೇನ ಪ್ರಶ್ನಿಸಿ, ವಿಚಾರಿಸುವ ಧೈರ್ಯ, ಎದೆಗಾರಿಕೆ ಅವ್ವನಿಗಿರಲಿಲ್ಲ. ಆದರೆ ಈ ಬಾರಿ ಸೊಸೆ ಯಾವ ಗಲಾಟೆಯೂ ಇಲ್ಲದೆ ನಗುಮುಖ ಹೊತ್ತು ಓಡಾಡುವುದನ್ನು ನೋಡಿ ಕಾಲಕ್ರಮೇಣ ಎಲ್ಲಾ ಸರಿಹೋದೀತು ಎಂದುಕೊಂಡಿದ್ದಳು.

ಈ ಸರ್ತಿ ಹೋದ ಸಾಕವ್ವ ತಿರುಗಿ ಬಂದದ್ದು ಮೂರು ತಿಂಗಳ ನಂತರ.

"ಅಯ್ಯೋ ನಿನ್ ಸೊಸೆ ಈಗ ಕಾರು ಓಡ್ಸಾದನ್ನ ಕಲಿತಳೆ ಕಣವ್ವ....... ಅದ್ಕೆ ಆ ಹುಡ್ಗನ್ನ ನೋಡ್ಕಂಡಿರು ಅಂತ ಏನ್ಮಾಡಿದ್ರು ನನ್ನ ಬಿಡ್ಲಿಲ್ಲ........" ಎಂದು ಮೂಗುಮುಸುಡಿ ತಿರುವಿದಳು. ಅದನ್ನು ಗಮನಿಸದವಳಂತೆ ಅವ್ವ ಆಶ್ಚರ್ಯದಿಂದ

"ಕಾರ್ ಓಡ್ಸಾದಾ..........?" ಎಂದು ಕಣ್ಣಗಲಿಸಿ "ಮಾಲಿಂಗಂದು ಕಾರಿಲ್ಲ, ಅವ್ನಿಗದು ಬರಾದಿಲ್ಲ ಯಾರ್ ಕಲುಸ್ತಾರೆ..........?' ಎಂದು ಕೇಳಿದ್ದಳು. ಸಾಕವ್ವನದು ಅದೇ ವ್ಯಂಗ್ಯ

"ಅಯ್ಯ ನಿನ್ ಮಗುನ್ಗೆ ಬರ್ಬಕೇನೂ..? ಆಯಪ್ಪದನಲ್ಲ ಶ್ರೀನಿವಾಸ.. ಆತ ಕಲುಸ್ತಾನೆ..

ಆದರೆ ಅವ್ವನದು ಅದೇ ಅಚ್ಚರಿಯ ಪ್ರಶ್ನೆ

"ಅವ್ನ ಹತ್ರ ಕಾರ್ಯೆತೇನೂ..........?"

"ಅದ್ಕೆಯಲ್ವಾ ಹಗಲು ರಾತ್ರಿ ಪರ್ರ್ರೋ ಅಂತ ನಿನ್ ಸೊಸೆ ತಿರುಗಾದು........ ಹೇಳಾರು ಕೇಳಾರು ಇಲ್ದಿದ್ಮಾಕೆ ಹಾಗೆಯೆ ಮತ್ತೆ........." ಅವಳ ವ್ಯಂಗ್ಯ ತಿವಿದರೂ ತೋರ್ಪಡಿಸಿಕೊಳ್ಳದೆ

"ಏನೋ ಅವ್ರೆಲ್ಲ ನಕ್ಕಂತ ಖುಷಿಯಾಗಿದ್ರೆ ಅಷ್ಟೆ ಸಾಕ್ಬಿಡು........" ಎಂದು ಹೇಳಿ ತಂಗಿಯನ್ನು ಸಾಗಾಕಿದ್ದಳು. ಹೆಂಗನ ಇರ್ಲಿ ಏನನ ಮಾಡ್ಲಿ ಒಟ್ನಾಗೆ ಗಂಡಹೆಂಡ್ತಿ ಹೊಂದ್ಕಂಡು ನೆಮ್ಮದಿಯಾಗಿ ಬದುಕಿದರೇ ಸಾಕೆಂದುಕೊಳ್ಳುತ್ತಿದ್ದಳು. ಕಳೆಗೆಟ್ಟ ಮಾಲಿಂಗನ ಮುಖ ಅವಳಿಂದ ನೋಡಲು ಆಗುತ್ತಿರಲಿಲ್ಲ. ಆದ್ದರಿಂದಲೇ ಹೇಗಾದರೂ ಸರಿ ಅವರಿಬ್ಬರು ಸರಿಹೋದರೆ ಸಾಕು ಎಂಬುದು ಅವಳ ಆರೈಕೆ. ಅಂತೆಯೇ ಆಯ್ತು. ಕಮಲಮ್ಮ ಮತ್ತೆ ನೀರೊಯ್ಕಂಡಾಳೆ.. ಎಂಬ ಸುದ್ದಿ ಬಂತು ಬೆಂಗಳೂರಿಂದ. ನಾಲ್ಕು ದಿಕ್ಕಿಗೂ ಕೈಮುಗಿದು ತನ್ನ ಕೃತಜ್ಞತೆ ಅರ್ಪಿಸಿದ್ದಳು ದೇವರಿಗೆ ಅವ್ವ.

ಸೊಸೆ ಹೆಣ್ಣುಮಗುವಿಗೆ ಜನ್ಮವಿತ್ತ ಸುದ್ದಿ ಬಂದೊಡನೆ ತಡ ಮಾಡಲಿಲ್ಲ ತಕ್ಷಣವೆ ಹೊರಟುಬಿಟ್ಟಳು. ಸಂಭ್ರಮದಿಂದ ಹೋದ ಅವ್ವನಿಗೆ ಸಿಡಿಲು ಬಡಿದಂತಾಗಿತ್ತು ಮಗುವನ್ನು ನೋಡಿ. ಕಡುಕಪ್ಪಿನ ಮಗುವಿನ ಅಳು, ಆಟ ಯಾವುದೂ ಅವಳ ಮನಮುಟ್ಟಲಿಲ್ಲ. ತಡೆಯಲಾರದೆ ಎಲ್ಲರೆದುರೇ ಆಡಿಬಿಟ್ಟಳು

"ಅಲ್ವೋ ನಮ್ ವಂಶದಾಗೆ ಇಷ್ಟು ಕರ್ರಗಿರಾರು ಯಾರೂ ಇಲ್ಲಪ್ಪ........ ಇದೆಲ್ಲಿಂದ ಇಷ್ಟು ಕರ್ರಗುಟ್ತು.........? ನೋಡು, ನೋಡು ಒಂದ್ಸಾರಿ ಆ ಡಾಕ್ಟ್ರನ್ನ ಸರಿಯಾಗಿ ಕೇಳ್ನೋಡು.. ಇತ್ತಿತ್ಲಾಗೆ ಆಸ್ಪತ್ರೆಗುಳಾಗೆ ಒಳ್ಳೊಳ್ಳೆ ಮಕ್ಳನ್ನ ಅದ್ಲುಬದ್ಲು ಮಾಡ್ತರಂತೆ.. ಹಂಗೇನೋ ಆಗಿರ್ಬೇಕು ಕಣ ಈ ಮಗು ನಮ್ಮದು ಆಗಾಕೆ ಸಾಧ್ಯವೇ ಇಲ್ಲ.."

ಮಾಲಿಂಗ ತಕ್ಷಣ ಅವ್ವನನ್ನು ಹೊರಕ್ಕೆಳೆದು "ಎಲ್ಲಾನುಂಟೇನವ್ವ ಮಕ್ಳುನ ಅದ್ಲುಬದ್ಲು ಮಾಡದು ಅಷ್ಟು ಸುಲಭ ಅಂತ ತಿಳ್ಕಂಡಿಯೇನು..........? ನೋಡು, ಕಮಲನ ಮುತ್ತಜ್ಜಿ ಎಲ್ಲಾ ಹಿಂಗೆ ಅಂತ ಇದ್ದಿದ್ದು... ಅವೆಲ್ಲಾ ನಮ್ಮಜ್ಜಿ ಇದ್ದಂಗೇ, ನಮ್ಮುತ್ತಜ್ಜಿ ಇದ್ದಂಗೇ ಅಂತ ಖುಷಿಯಾಗಿರ್ಬೇಕಾರೆ ನೀನು ಸುಮ್ನೆ ಏನೇನೋ ಅವರೆದ್ರುಗೆ ಮಾತಾಡ್ಬೇಡ ದಯವಿಟ್ಟು........"

ಮಗ ಗಂಭೀರವಾಗಿ ಹೇಳಿದಾಗ ಅವ್ವ ಬಂದ ದಾರಿಯಲ್ಲೇ ಹಿಂದಿರುಗಿದ್ದಳು. ಮಾಲಿಂಗ ಬದಲಾಗಿದ್ದ.

ಮಗಳು ಬೆಳೆದಂತೆಲ್ಲ ಅವನು ಹೆಚ್ಚು ಗಂಭೀರನಾಗುತ್ತ ಹೋದ. ಹೊರಗಿನ ಸಂಪರ್ಕ ಕಡಿಮೆಯಾಯ್ತು. ಸದಾ ತಾನು, ತನ್ನ ಮಗಳು ಹೆಂಡತಿ ಎಂಬಂತಿರುತ್ತಿದ್ದ. ಊರಿಗೆ ಹೋಗುವುದಿರಲಿ ಪತ್ರ ಬರೆಯುವುದನ್ನೂ ನಿಲ್ಲಿಸಿದ್ದ! ಏನೇ ಸುದ್ದಿಯಿದ್ದರೂ ಅದು ಸಾಕವ್ವನಿಂದಲೇ ಗೊತ್ತಾಗಬೇಕಿತ್ತು.

ಅವರು ಹೊಸ ಕಾರೊಂದನ್ನು ಕೊಂಡಿರುವುದು,. ಅದಕ್ಕೆ ಶ್ರೀನಿವಾಸನೇ ದುಡ್ಡು

ಕೊಟ್ಟಿರಬೇಕೆಂಬ ಗುಮಾನಿ ತನಗಿರುವುದು... ಅವನು ಬೇರೆ ಕಡೆಗೆ ವರ್ಗವಾಗಿ ಹೋದದ್ದೂ... ನಳಿನ ಅಪ್ಪ ಅಮ್ಮನ ಕಣ್ಮಣಿಯಾಗಿ ಬೆಳೆಯುತ್ತಿರುವುದು... ಚಂದ್ರುವನ್ನು ಬೇರೆ ಊರಿನ ಬೋರ್ಡಿಂಗ್ ಶಾಲೆಯಲ್ಲಿ ಬಿಟ್ಟಿರುವುದು.. ಕಮಲಮ್ಮ ಮುಂಚಿನಂತಿರದೆ ಸದಾ ಗೆಲುವಾಗಿ ಸಮಾಧಾನದಿಂದ ಇರುವುದು, ಮಾಲಿಂಗ ಹೆಂಡತಿ ಮಗಳಿಗೆ ಅಂಟಿಕೊಂಡೇ ಇರುವುದು... ಏನೊಂದು ಸಾಕವ್ವ ಮುಚ್ಚಿಡುತ್ತಿರಲಿಲ್ಲ.

"ಹೆಂಗೋ ಬಿಡು ಆ ಹುಡ್ಗಿ ಕಾಲ್ಗುಣದಿಂದ ಸದ್ಯ ಆಕೆ ಹುಚ್ಚು ಬಿಟ್ಟು ಮನುಷ್ಯಳಾದ್ಲಲ್ಲ ಅಷ್ಟೆ ಸಾಕು........." ನಿಡುಸುಯ್ದು ಹೇಳಿದಳು ಅವ್ವ

"ಅಯ್ಯ ಹುಚ್ಚು ಬಿಡ್ದಂಗೇನವ್ವ........? ಒಂದೇ ವರ್ಷದಾಗೆ ಹುಚ್ಚೆಲ್ಲ ಕಿತ್ಕಂಡೋಗೈತೆ ನೋಡು........" ಸಾಕವ್ವನದು ಅದೇ ಕೊಂಕು ಮಾತುಗಳು.

ಆದರೆ ನಳಿನಳ ಮದುವೆ ಮುಗಿದೊಡನೆ ದಿಢೀರನೆ ಬದಲಾಗಿದ್ದ ಮಾಲಿಂಗ ಹೊಸ ಮನುಷ್ಯನಾಗಿದ್ದ. ಅವನು ಅವ್ವನಿಗೆ ಒಂದು ಒಗಟಿನಂತೆ ತೋರುತ್ತಿದ್ದ. ತೆಂಗಿನ ಸಸಿ ಕಳುಹಿಸಿ ಬರುತ್ತೇನೆಂದಿದ್ದ ಮಾಲಿಂಗ ತಿಂಗಳಾದರೂ ಇತ್ತ ಬರಲಿಲ್ಲ. ಅವನ ಬದಲು ಸಾಕವ್ವನನ್ನು ಕಳುಹಿಸಿದ್ದ.

"ಮಗಳು ಅಳಿಯನ್ನ ಅದ್ಯಾವ್ದೋ ದೇಸಕ್ಕೆ ಕಳುಸ್ತಾರಂತವ್ವ ಅದ್ಕೆ ಓಡಾಡತವ್ನೆ ನಿನ್ ಮಗ.......... ಮುಂದಿನ್ವಾರ ಅವರ್ನ ಕಳುಸಿ ಬರ್ತೀವಿ ಅಂತ ಹೇಳು ಅಂದ........."

ಅಂತೇಳಿದ್ದಳು ಸಾಕವ್ವ. ಹೋಗುವ ಮೊದಲು ಒಮ್ಮೆ ಅಜ್ಜಿಯನ್ನು ತೋರಿಸುವ ಇಚ್ಛೆಯೂ ಮಾಲಿಂಗನಿಗೆ ಇಲ್ಲವಾಯ್ತೆ ಎಂದು ಬೇಸರಗೊಂಡಳು ಅವ್ವ. ಊರಿಗೆ ಹೊರಡುವ ಮುನ್ನ ಸಾಕವ್ವ ಅನುಮಾನಿಸುತ್ತ ಕೇಳಿದಳು

"ಅಕ್ಕ ನಮ್ಮಮ್ಮನ ಕಡೆ ಯಾರೋ ಭಾಳ ಕರ್‍ರಗಿದ್ರಂತಲ್ಲ ಯಾರೆ ಅದು.........?"

ಅದಕ್ಕುತ್ತರಿಸುವ ಬದಲು ಅವ್ವ ಮರು ಪ್ರಶ್ನೆ ಹಾಕಿದಳು

"ಈಗ್ಯಾಕೆ ಆ ವಿಷ್ಯ..........? ಯಾರೇಳಿದ್ರು ನಿನ್ಗೆ..........?'

"ಮೊನ್ನೆ ಗಂಡಿನ್ಕಡೇರು ನೀವಿಬ್ರೂ ಇಷ್ಟು ಬೆಳ್ಳಗಿದ್ದೀರಾ ನಳಿನ ಯಾಕಷ್ಟು ಕಪ್ಪು? ಯಾರಂಗಿದ್ದಾಳೆ ಅವ್ಳು? ಅಂತ ಕೇಳಿದ್ರೇಳು ಅವಾಗ ಮಾಲಿಂಗ ಹಂಗಂದು.. ಎಲ್ಲಾ ನಮ್ಮವ್ವನ ಅಜ್ಜಿಯಂಗೆ ಅವ್ಳು... ನಮ್ಮನ್ಯಾಗೆ ಆಕೀನ ಬಿಟ್ರೆ ಮತ್ತೆ ಇವ್ಳೆ ಇಷ್ಟು ಕಪ್ಪು ಅಂದ್ನವ್ವ. ಏನೋ ಬಿಡು ಬರ್‍ಲಾ...?"

ಎಂದು ಹೊರಟು ಹೋದಳು ಸಾಕವ್ವ. ಆದರೆ ಅವ್ವ ನಿಂತಲ್ಲೆ ಕುಸಿದಿದ್ದಳು. ಮುದ್ದೆ ನೀರು ಸೇರದಾಯ್ತು. ಮಗನ ಸುಳ್ಳಿಗೆ ಕಾರಣ ಹುಡುಕುವ ಜಂಜಾಟದಲ್ಲಿ ನಲುಗಿದಳು. ಕಣ್ಮುಚ್ಚಿದರೆ ಸಾಕು ಸ್ವಪ್ನಗಳು.. ಬರೀ ಸ್ವಪ್ನಗಳು.. ಎಲ್ಲಾ ಅಸಂಬದ್ಧ ಸ್ವಪ್ನಗಳೇ.. ಸಾಕವ್ವನ ಬಾಯಲ್ಲಿ ಅಜೀರ್ಣ ಆಗುವಷ್ಟು ವರ್ಣಿಸಲ್ಪಟ್ಟ ಆ ನಾಲ್ಕು ಗಾಲಿಯ ಬಂಡಿ ಆಗಾಗ ನಿದ್ದೆಯಲ್ಲಿ ಕಾಣಿಸುತ್ತಲೇ ಇತ್ತು. ಇಂದು ಹಾಗೆಯೇ ಆದರದು ಬೃಹದಾಕಾರ ತಾಳಿ ನಿಂತಿತ್ತು. ಆ ನಾಲ್ಕು ಗಾಲಿಗಳು ಕೈಕಾಲುಗಳ ರೂಪ ತಳೆದಿದ್ದವು.

ಅಬ್ಬಾ! ಅದೇನು ವೇಗ.. ಅದೇನು ರಭಸ.. ಅದೆಂತಹ ಶಕ್ತಿ... ನೋಡು ನೋಡುತ್ತಿದ್ದಂತೆಯೇ ಬಂಡಿಯ ಕೈಗಳು ಉದ್ದುದ್ದ ಚಾಚಿಕೊಳ್ಳುತ್ತ ಲಕ್ಷ್ಮಿ ಹೇಳಿದ್ದ ಸೊಸೆ

ಬೆತ್ತಲಿದ್ದ ಆ ಕೋಣೆಯತ್ತ ಸಾಗಿ, ಗಬಕ್ಕನೆ ಏನನ್ನೊ ಹಿಡಿದಿದ್ದವು. ಕಣ್ಣಗಲಿಸಿ ನೋಡಿದರೆ ಆ ಕೈಗಳಲ್ಲಿ ಬೆತ್ತಲಿರುವ ತನ್ನ ಸೊಸೆ!

ಒಂದೇ ಕ್ಷಣ ಆಕೇನ ತನ್ನೊಳಕ್ಕೆ ಸೆಳೆದುಕೊಂಡು ಕಣ್ಮರೆಯಾಗಿ, ದಿಗ್ಭ್ರಾಂತಳಾಗಿ ಅವ್ವ ತಡಕಾಡುತ್ತಿದ್ದಂತೆ ಮತ್ತೆ ಫಕ್ಕನೆ ಪ್ರತ್ಯಕ್ಷವಾಗಿತ್ತು. ಆದರ ಆ ಕೈಗಳಲ್ಲಿ ಸೊಸೆಯಿರದೆ ಬೆತ್ತಲಿದ್ದ ಕಡುಕಪ್ಪು ಬಣ್ಣದ ಸಣ್ಣ ಮಗುವೊಂದಿತ್ತು. ಅವ್ವನ ಮುಂದಕ್ಕೆ ಚಾಚಿದ್ದವು ಮಗುವನ್ನು ಹಿಡಿದಿದ್ದ ಆ ಕೈಗಳು.

ಅವ್ವ ನಡುಗುತ್ತಿದ್ದಳು. ಉಟ್ಟ ಬಟ್ಟೆಯೆಲ್ಲಾ ಬೆವರಿನಿಂದ ತೊಯ್ದು ಮೈಗೆ ಅಂಟಿ ಕೊಂಡಿದ್ದವು. ಕತ್ತಲಲ್ಲಿ ಕಣ್ಣಗಲಿಸಿ ಕಂಬದಂತೆ ಕೂತಿದ್ದಳು. ಬೆಳಕಿನಲ್ಲಿ ಹುದುಗಿ ಮರೆಯಾಗಿದ್ದ ನಿಗೂಢವೊಂದು ಕತ್ತಲಲ್ಲಿ ಗೋಚರಿಸಿತ್ತು!

ನೀಲಿ ಛಾಯೆಯೂ ಕಾಣದಂತೆ ಕಪ್ಪನೆಯ ಮೋಡ ಹೆಪ್ಪುಗಟ್ಟಿ ಎರಡು ದಿನದಿಂದ ನಿಲ್ಲದೆ ಮಳೆ ಸುರಿಸುತ್ತಲೇ ಇತ್ತು. ಅವ್ವ ತೋಟಕ್ಕೂ ಹೋಗದೆ, ಎರಡು ದಿನದಿಂದ ದುಪ್ಪಟಿ ಹೊದ್ದು ಒಲೆಯ ಮುಂದೆ ಕೊಳ್ಳಿ ಚಾಚುತ್ತ ಕೂತಿದ್ದಳು.

ಬೆಳಿಗ್ಗೆ ಮಲ್ಲಯ್ಯ ಮಗಳ ಮನೆಯಲ್ಲಿ ಪಾಲಾಕಿದ್ದ ಮಾಂಸವನ್ನು ತಂದುಕೊಟ್ಟಿದ್ದ. ಒಲೆ ಮೇಲೆ ಅದು ಬೇಯುತ್ತಿತ್ತು. ಬೆಂದ ಮಾಂಸದ ವಾಸನೆ ಗಮ್ಮನೆ ಹರಡುತ್ತಿದ್ದಂತೆ ಹೊರಗೆ ಕಾರು ನಿಂತ ಶಬ್ದವಾಯ್ತು. ಅರೆಬರೆ ನೆನೆಯುತ್ತಲೇ ಒಳ ಬಂದರು ಮಾಲಿಂಗ, ಕಮಲವ್ವ ಮತ್ತು ಸಾಕವ್ವ, ಅವ್ವನ ಕಣ್ಣುಗಳು ಕಮಲಮ್ಮನನ್ನು ಅಳೆಯುತ್ತಿದ್ದವು.

"ಚೆನ್ನಾಗಿದ್ದೀರಾ ಅತ್ತೆ........?" ಎಂದು ನಕ್ಕಿದ್ದಳು........ ಗಂಡನೊಡನೆ ಕೂತು ಉಣ್ಣುತ್ತ ನಗುತ್ತಿದ್ದಳು..

ಅಡುಗೆಮನೆಯಲ್ಲಿ ಎಂದೂ ಮಾತನಾಡದ ಅಕ್ಕಂದಿರೊಡನೆ ಹರಟೆ ಹೊಡೆಯುತ್ತ ನಗುತ್ತಿದ್ದಳು..

ಮಗಳು ನಳಿನಳ ಮೇಲಿನ ಅತಿಶಯವಾದ ಪ್ರೀತಿ, ಆಕೆ ಹುಟ್ಟಿದಾಗಿಂದ ಹೊರಗಿನ ಪ್ರಪಂಚದೊಡನೆ ಕಡಿದ ಸಂಪರ್ಕ, ಹೆತ್ತವ್ವನನ್ನೂ, ಹುಟ್ಟಿದೂರನ್ನೂ ದೂರ ಮಾಡಿ ಕೊಂಡು ಸದಾ ಮಗಳಿಗೆ ಬೆಂಗಾವಲಿನಂತೆ ಓಡಾಡುತ್ತಿದ್ದ ಮಗನ ಹೊಸಪರಿ ಎಲ್ಲಕ್ಕೂ ಆ ನಗುವಿನಲ್ಲಿ ಉತ್ತರವಿತ್ತು.

ಎರಡು ದಿನದಿಂದ ಕಾರ್ಮೋಡ ಹೆಪ್ಪುಗಟ್ಟಿ ನಿಂತಿತ್ತು ಎಂಬುದನ್ನು ನಂಬಲೂ ಆಗದಷ್ಟು ಆಗಸ ನಿಚ್ಚಳವಾಗಿ ಮಿನುಗುತ್ತಿತ್ತು. ಮಳೆಯೂ ನಿಂತು ವಾತಾವರಣ ಪ್ರಶಾಂತವಾಗಿದ್ದು ಮನಕ್ಕೆ ಆಹ್ಲಾದವುಂಟುಮಾಡುತ್ತಿತ್ತು.

"ನೋಡಕ್ಕ ನಿನ್ನಿನಾಗ ನಾವು ಬಂದಾಗಿನ್ನೂ ಮಳೆ ಸುರೀತಿತ್ತು.. ಮೋಡ ಅಡರ್ಬಿಟ್ಟಿತ್ತು.. ಇವತ್ತಾಗ್ಲೆ ಮಳೆ ಬಂದಿತ್ತೊ ಇಲ್ಲೊ ಅನ್ನಷ್ಟು ನಿಚ್ಚಳಾಗೈತೆ ನೋಡು........."

ಸಾಕವ್ವ ಮಾತಾಡುತ್ತಲೇ ಇದ್ದಳು.. ಕಮಲಮ್ಮ ನಗುತ್ತಲೇ ಇದ್ದಳು....

✦ ✦

ಕಳೆದುಕೊಂಡವಳು

ಕೈಯಲ್ಲಿದ್ದ ಬ್ಯಾಗನ್ನು ಹಾಸಿಗೆಯ ಮೇಲೆ ಕುಕ್ಕಿ, ಬಚ್ಚಲಿನತ್ತ ಓಡಿದಳು ರಾಜಿ. ಅವಳು ಬರುವುದಕ್ಕೆ ಕಾಯುತ್ತ, ಬಸ್ಸಿನ ಕುಲುಕಾಟದಿಂದ ದಣಿದಿದ್ದ ದೇಹವನ್ನು ಆರಾಮ ಕುರ್ಚಿಯಲ್ಲಿ ಒರಗಿಸಿದಳು ಕೀರ್ತಿ. ಬೆಂಗಳೂರಿನ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದಾಕೆ. ಬೆಂಗ್ಳೂರಿಗೆ ಹೋಗಿದ್ದ ರಾಜಿ ದಸರ ರಜೆಯಲ್ಲಿ ಒಂದು ವಾರವನ್ನಾದರೂ ತನ್ನೊಡನೆ ಕಳೆಯಲೇಬೇಕೆಂದು ಗೆಳತಿಯೊಡನೆ ಸಣ್ಣ ಸಮರವನ್ನೇ ಹೂಡಿ ಕಡೆಗೂ ಅವಳನ್ನು ಕರೆತರುವಲ್ಲಿ ಸಫಲಳಾಗಿದ್ದಳು. ಚಿತ್ರದುರ್ಗ ಕೀರ್ತಿಯ ತವರೂರು. ನಾಲ್ಕು ವರ್ಷಗಳ ಹಿಂದೆ ಊರನ್ನು ಬಿಟ್ಟಿದ್ದವಳು ಮತ್ತೆ ಇಂದೇ ಕಾಲಿಟ್ಟಿದ್ದು.

ರಾಜಿ ಬಂದೊಡನೆ ತಾನು ಬಚ್ಚಲಿನತ್ತ ಹೊರಟಿದ್ದು, ಮುಂಬಾಗಿಲಿನಿಂದ ಬಿರುಗಾಳಿಯಂತೆ ಒಳನುಗ್ಗಿದವನನ್ನು ಕಂಡು ಆಶ್ಚರ್ಯದಿಂದ ಕಣ್ಣರಳಿಸಿದಳು ಕೀರ್ತಿ. ತನ್ನ ಚಿಕ್ಕ ತಮ್ಮ! ಇನ್ನು ಈ ಜನ್ಮದಲ್ಲಿ ಅಕ್ಕನನ್ನು ಕಾಣಲಾರೆವೆಂದು ತಿಳಿದಿದ್ದ ತಮ್ಮನೂ ಕೀರ್ತಿಯನ್ನು ನೋಡಿ ಸಂತೋಷಾಶ್ಚರ್ಯದಿಂದ ಕಣ್ಣರಳಿಸಿ ನಿಂತುಬಿಟ್ಟ, ಅವನು ಒಳಬಂದಾಗ ಅವನ ಕಂಗಳಲ್ಲಿದ್ದ ನೀರನ್ನು, ಮುಖದಲ್ಲಿ ನೆಲೆಸಿದ್ದ ಭಯಮಿಶ್ರಿತ ಗಾಬರಿಯನ್ನೂ ಗಮನಿಸಿದ್ದ ರಾಜಿ ಅವನನ್ನ ಎಚ್ಚರಿಸಿದಳು.

ಒಮ್ಮೆಲೆ ಅಕ್ಕನ ಕಾಲ್ಗಳನ್ನು ತಬ್ಬಿಹಿಡಿದು

"ಅಕ್ಕಾ, ಭಾವ ಬಿದ್ದು ತಲೆಯೊಡ್ಕಂಡಿದಾನೆ........ ಅಪ್ಪನ್ಗೂ ಹುಷಾರಿಲ್ಲ. ಎಲ್ರೂ ಅತ್ಗಂಡು ಕುತ್ಕಂಡಿದಾರೆ....... ರಾಜಕ್ಕನ

ಕರ್ಕೊಂಡೋಗನಂತ ಬಂದೆ. ನೀನು ಬಂದಿದ್ದಿಯಲ್ಲಾ ಬಾರಕ್ಕ......... ಪ್ಲೀಸ್ ಬಾರಕ್ಕಾ....." ಎಂದು "ನೀವಿಬ್ರೂ ಹೋಗಿರ್ರಿ.. ನಾನೀಗ್ಬಂದೆ..." ಅಂದೋನು ಬಂದಷ್ಟೇ ವೇಗವಾಗಿ ಹಿಂದಕ್ಕೋಡಿದ.

ಅವರಿಬ್ರು ಕೀರ್ತಿ ಮನೆ ತಲುಪೋಷ್ಟರಲ್ಲಿ ಮನೆ ಮುಂದೆ ಜನ ನೆರೆದಿದ್ರು. ಅಳು ದೂರಕ್ಕೆ ಕೇಳಿಸುತ್ತಿತ್ತು. ಇಬ್ಬರನ್ನು ನೋಡಿದ ಜನ ಗುಸುಗುಡುತ್ತಲೇ ದಾರಿ ಕೊಟ್ಟರು. ಗುಂಪಿನ ಮಧ್ಯದಲ್ಲಿ ರಕ್ತದಲ್ಲಿ ಅದ್ದಿ ತೆಗೆದಂತಿದ್ದ ಮಹೇಶ ಬಿದ್ದಿದ್ದ. ಬವಳಿ ಬಂದಂತಾದರೂ ಸಾವರಿಸಿಕೊಂಡಳು ಕೀರ್ತಿ. ಆಕೆಯನ್ನು ಕಂಡು ಮನೆಯವರೆಲ್ಲ ಅರೆಕ್ಷಣ ಬೆಚ್ಚಿದರೂ, ಮರುಕ್ಷಣ ಆಕೆಗೆ ಜೋತುಬಿದ್ದರು. ಅಪ್ಪ ತಗ್ಗಿಸಿದ್ದ ತಲೆಯನ್ನು ಮೇಲೆತ್ತಲಿಲ್ಲ.

"ಹೇಗಾಯ್ತು? ಏಕಾಯ್ತು?" ಎಂದು ಕೇಳಲು ಸಮಯವಿರಲಿಲ್ಲ. ಮಹೇಶನನ್ನು ತುರ್ತಾಗಿ ಆಸ್ಪತ್ರೆಗೆ ಸಾಗಿಸಬೇಕಿತ್ತು.

ಅಷ್ಟರಲ್ಲಿ ತಮ್ಮ ಆಟೋದಲ್ಲಿ ಬಂದಿಳಿದ. ಎರಡು ದಿನಗಳಾದರೂ ಮಹೇಶನಿಗೆ ಜ್ಞಾನ ಬಂದಿರಲಿಲ್ಲ. ಡಾಕ್ಟ್ರು, ಅವನ ಬಗ್ಗೆ ಯಾವ ಭರವಸೆಯನ್ನೂ ಕೊಟ್ಟಿರಲಿಲ್ಲ. ಈ ಅವಧಿಯಲ್ಲಿ ತಮ್ಮ ಅಂದಿನ ಅನಾಹುತದ ಬಗ್ಗೆ ತಿಳಿಸಿದ್ದ.

ಅಂದು ಬೆಳಗ್ಗಿನಿಂದಲೂ ಮಹೇಶ ಮನೆಗೆ ಬಂದಿರಲಿಲ್ಲ. ಸಂಜೆ ಬಂದಾಗಲೂ ಅವಸರದಲ್ಲಿದ್ದ. ಕಾಂಪೌಂಡಿನಲ್ಲಿ ಮನೆಯ ದುರಸ್ತಿಗಾಗಿ ಸೈಜುಕಲ್ಲುಗಳನ್ನು ಹೇರಿಸಿದ್ದರು. ಹಿಂದಿನ ದಿನದ ಮಳೆಯಿಂದಾಗಿ ಕಲ್ಲಿನ ರಾಶಿಯ ಪಕ್ಕದಲ್ಲಿ ತುಂಬಾ ಕೆಸರಿತ್ತು. ಗಡಿಬಿಡಿಯಲ್ಲಿದ್ದ ಮಹೇಶ ಅದನ್ನು ಗಮನಿಸದೆ, ಧಾವಂತದಲ್ಲಿ ಕೆಸರಿನಲ್ಲಿ ಕಾಲಿಟ್ಟಿದ್ದಷ್ಟೆ ಅವನ ತಲೆ ದೊಡ್ಡದೊಂದು ಕಲ್ಲಿಗೆ ಅಪ್ಪಳಿಸಿತ್ತು.

ಮೂರನೆಯ ದಿನದಂದು ಮೆಲ್ಲನೆ ಕಣ್ತೆರೆದ ಮಹೇಶ ಮಸುಕಾದರೂ ಮೊದಲು ಕಂಡದ್ದು ಕೀರ್ತಿಯ ಮುಖ. 'ಕೀರ್ತಿ........!' ಅವನ ಕಣ್ಗಳು ಮಿಂಚಿ ಅರಳಿದವು. ಅವನು ಎಚ್ಚರಾದ್ದನ್ನು ಗಮನಿಸಿದ ಕೀರ್ತಿ ಅವನ ತಲೆಯ ಹಿಂಬದಿಯಲ್ಲಿ ನಿಂತು ಅಳುತ್ತಿದ್ದ ಸ್ವರ್ಣಳನ್ನು ಕರೆದು ತಾನು ನಿಂತಿದ್ದ ಜಾಗದಲ್ಲಿ ನಿಲ್ಲಿಸಿ, ಮೆಲ್ಲನೆ ವಾರ್ಡಿನಿಂದ ಹೊರ ನಡೆದಳು. ಸೂಕ್ಷ್ಮವಾಗಿ ಎಲ್ಲವನ್ನೂ ಗಮನಿಸುತ್ತಿದ್ದ ರಾಜಿ ತಾನೂ ಕೀರ್ತಿಯನ್ನು ಹಿಂಬಾಲಿಸಿದಳು. ಇಬ್ಬರೂ ಸ್ವಲ್ಪ ದೂರ ನಡೆದು ಒಂದೆಡೆ ನಿಂತರು. ನಿಂತು ನಿಮಿಷವೂ ಆಗಲಿಲ್ಲ ವಾರ್ಡಿನೊಳಗಿಂದ ಸ್ವರ್ಣಳ ಚೀತ್ಕಾರ ಕೇಳಿಸಿ, ಬಂದ ದಾರಿಯಲ್ಲೇ, ಇಬ್ಬರೂ ದೌಡಾಯಿಸಿದರು.

ರಾಜಿ ಓಡುತ್ತಾ ಬೆಡ್ ಸಮೀಪಿಸಿದರು ಕೀರ್ತಿ ಬಾಗಿಲಲ್ಲೇ ನಿಂತುಬಿಟ್ಟಳು. ಸ್ವರ್ಣ ಮಹೇಶನನ್ನು ತಬ್ಬಿ ಅಳುತ್ತಿದ್ದರೆ, ಅಪ್ಪ ಮಗಳ ದುರ್ಗತಿಯನ್ನ ಪ್ರಲಾಪಿಸುತ್ತ ತಾನೂ ಮಗಳೊಡನೆ ರೋಧಿಸುತ್ತಿದ್ದಾನೆ.

ಬಾಗಿಲ ಬಳಿ ನಿಂತವಳನ್ನು ನೋಡಿ ಅಮ್ಮ ಧಾವಿಸಿ ಬಂದು

"ನಮ್ನೆಲ್ಲ ಪರ್ದೇಸಿ ಮಾಡಿ ಹೋಗ್ಬಿಟ್ನಮ್ಮಾ ಮಹೇಶ.. ನನ್ ಮಗ್ನಿಗಿಂತ ಹೆಚ್ಚಾಗಿದ್ದ... ವಳ್ಳೆ ಪ್ರಾಯ್ದಾಗೆ ಮಗಳ್ನ ರಂಡೆ ಮಾಡಿ ಹೋದ್ನಲ್ಲೆ... ಅವ್ನಿಲ್ದಂಗೆ ಸ್ವರ್ಣ ಯಂಗೆ

ಬದುಕ್ತಾಳೇ... ನಾವ್ ಯಾರಿಗೇನ್ ಅನ್ಯಾಯ ಮಾಡಿದ್ವಿ ಅಂತ ದೇವ್ರು ಈ ಶಿಕ್ಷೆ ಕೊಟ್ನಮ್ಮಾ..." ಎನ್ನುತ್ತ ಅವಳನ್ನು ತಬ್ಬಿಹಿಡಿದಳು.

ಆ ಕ್ಷಣದಲ್ಲಿಯೂ ಕೀರ್ತಿಯ ಮುಖದಲ್ಲಿ ವ್ಯಂಗ ನಗೆಯೊಂದು ಸುಳಿದುಹೋಯ್ತು. ಒಂದೇ ಒಂದು ಸಮಾಧಾನದ ಮಾತೂ ಆಡದೆ ತಾಯಿಯಿಂದ ಬಿಡಿಸಿಕೊಂಡು, ಹೆಣವನ್ನು ಮನೆಗೆ ಸಾಗಿಸುವ ಏರ್ಪಾಡು ಮಾಡಲು ಅತ್ತ ಹೊರಟಳಾಕೆ. ಮಹೇಶನನ್ನು ಹೊತ್ತ ಕಾರು ಮನೆಯ ದಾರಿ ಹಿಡಿಯುತ್ತಲೂ ರಾಜಿಯ ಮನೆಯತ್ತ ಹೊರಟಳು ಕೀರ್ತಿ.

ಮನೆ ತಲುಪಿದವಳೇ ಹಾಸಿಗೆಯಲ್ಲಿ ಮೈಚಲ್ಲಿ ಕಣ್ಮುಚ್ಚಿದಳು. ಅವಳ ಮೈಮನಗಳೆರಡೂ ಭಾರವಾಗಿದ್ದವು. ಕಣ್ಮುಚ್ಚಿ, ಹಾಸಿಗೆಯಲ್ಲಿ ಒರಗಿದವಳನ್ನು ವಿಸ್ಮಯದಿಂದ ನೋಡಿದಳು ರಾಜಿ. ಅನಾಹುತ ನಡೆದ ದಿನದಿಂದಲೂ ಅವಳನ್ನು ಗಮನಿಸುತ್ತಲೇ ಇದ್ದಳು. ಅವಳ ಮುಖದಲ್ಲಿ ಕಿಂಚಿತ್ತೂ ದುಃಖದ ಛಾಯೆಯಿಲ್ಲ! ಕಣ್ಣಿಂದ ಹನಿ ನೀರೂ ಉದುರಿಲ್ಲ! ಕೇವಲ ಕಷ್ಟದಲ್ಲಿರುವ ಬಂಧುಗಳಿಗೆ ಸಹಾಯ ಮಾಡುವ ಕರ್ತವ್ಯ ಎದ್ದು ಕಾಣುತ್ತಿತ್ತಷ್ಟೆ.

ಏಕೋ ಏನೋ ಈ ಬಾರಿ ಬೆಂಗ್ಳೂರಿಗೆ ಹೋಗಿದ್ದಾಗ ಕೀರ್ತಿಯನ್ನು ತನ್ನೊಡನೆ ಕರೆದೊಯ್ಯಲೇಬೇಕೆಂಬ ಹಟ ಬಂದುಬಿಟ್ಟಿತ್ತು. ಅವಳೊಡನೆ ಜಗಳವಾಡಿ, ಮಾತು ಬಿಟ್ಟು, ಊಟ ಬಿಟ್ಟು, ಅತ್ತುಕರ್ದ್ದು ಕೊನೆಗೂ ಅವಳನ್ನು ಒಪ್ಪಿಸಿ ಕರೆತಂದಿದ್ದಳು. ಆದರೆ ಇಲ್ಲಿಗೆ ಬಂದಾಗ ಮಹೇಶನನ್ನು ಕೊನೆಯ ಬಾರಿಗೆ ಅವಳು ನೋಡಲೆಂದೇ ಕರೆತಂದಂತಾಗಿತ್ತು. ನಿಟ್ಟುಸಿರಿಟ್ಟಳು ರಾಜಿ.

ಮಹೇಶನನ್ನು ದುರ್ಗದಲ್ಲಿಯೇ ಮಣ್ಣು ಮಾಡುವುದೆಂದು ನಿರ್ಧರಿಸಿದ ಮೇಲೆ ತಮ್ಮ ಅವರನ್ನು ಕರೆಯಲು ಬಂದ. "ನಾನು ಅಲ್ಲಿಗೆ ಲಾಯಕ್ಕಾದವಳಲ್ಲ ನೀನು ಹೋಗ್ಬಿಟ್ಟು ಬಾ........" ಎಂದು ಅವರೊಡನೆ ಹೋಗಲು ನಿರಾಕರಿಸಿದಳು ಕೀರ್ತಿ.

ರಾಜಿ ಬಿಡಲಿಲ್ಲ. ಅವಳನ್ನು ಒಪ್ಪಿಸಿ, ಕರೆದುಕೊಂಡು ಹೋಗುವಷ್ಟರಲ್ಲಿ ಮಹೇಶನ ಹೆಣವನ್ನು ಸಿಂಗರಿಸಿ, ಪಕ್ಕದಲ್ಲಿ ಹಣೆ ತುಂಬಾ ಕುಂಕುಮ ಬಳಿದು, ಹೂ ಮುಡಿಸಿ ಸ್ವರ್ಣಳನ್ನೂ ಕೂರಿಸಿದ್ದರು. ಕೀರ್ತಿಯನ್ನು ನೋಡಿದ್ದೆ ಅಮ್ಮನೂ ಸೇರಿದಂತೆ ಒಂದು ಗುಂಪು ಅವಳನ್ನು ಸಮೀಪಿಸಿತು. ಅಮ್ಮ ಪಕ್ಕಕ್ಕೆ ಸರಿದಳು.

"ಬೇಗ ಬಾರಮ್ಮ ಕೀರ್ತಿ... ಆ ದೇವ್ರೇ ಕಡೇ ಗಳಿಗೆಯಲ್ಲಿ ನಿಂಗೆ ಈ ಕಡೆದಾರಿ ತೋರ್ಸಿದಾನೆ.. ಬೇಗ್ಬಾ ಇನ್ನು ಮಾಡ್ಬೋ ಶಾಸ್ತ್ರ ಬಹಳ ಐತೆ..." ಎಂದಿತು ಗುಂಪು.

ಕೀರ್ತಿ ತನ್ನ ಮೊನಚು ದೃಷ್ಟಿಯನ್ನ ಅಮ್ಮನತ್ತ ಹರಿಸಿದಳು.

"ನಿಮ್ಮ ಶಾಸ್ತ್ರಗಳನೆಲ್ಲ ನನ್ನತ್ರ ಹೇಳ್ಬೇಡಿ. ನನ್ನ ತಂಟೆಗೆ ನೀವು ಬರ್ದೆ ಇದ್ರೇನೇ ಕ್ಷೇಮ........"

ಮಾತು ಹರಿತವಾಗಿದ್ದವು. ಅದಕ್ಕೇನು ಹೇಳಲು ತೋಚದೆ ತೊದಲುತ್ತ ತಡವರಿಸುತ್ತ ಸರಿದುಹೋಯಿತು ಗುಂಪು. ಅಪರೂಪದ ವಸ್ತುವನ್ನು ನೋಡುವಂತೆ ಅವಳನ್ನೇ ನೋಡಿದರು ಅಲ್ಲಿ ನೆರೆದಿದ್ದ ಜನ.

ಹೆಣದ ಪಕ್ಕದಲ್ಲಿ ಸ್ವರ್ಣಳನ್ನು ಕೂರಿಸಿ ಅವರು ಮಾಡುತ್ತಿದ್ದ ಶಾಸ್ತ್ರಗಳನ್ನು ನೋಡಿ ದಿಗ್ಭ್ರಾಂತಳಾದಳು ರಾಜಿ. ಇದೀಗ ತಾನೆ ಗಂಡನನ್ನು ಕಳೆದುಕೊಂಡು ಆಘಾತದಿಂದ , ನೋವಿನಿಂದ ಜರ್ಝರಿತಳಾಗಿ, ಕರುಳು ಕಿತ್ತುಬರುವಂತೆ ರೋಧಿಸುತ್ತಿದ್ದವಳನ್ನು ಮತ್ತೊಮ್ಮೆ ಮದುಮಗಳಂತೆ ಸಿಂಗರಿಸಿ, ಹೆಣದೊಂದಿಗೆ ಮದುವೆ ಮಾಡುವಂಥ ಕ್ರೂರ ಪದ್ಧತಿಯಿಂದ ಅವಳನ್ನು ಇನ್ನಷ್ಟು ಹಿಂಸಿಸುತ್ತಿರುವ ಅವರ ಬಗ್ಗೆ ಹೇಸಿಗೆಯೆನಿಸಿತು. ಒಬ್ಬಾಕೆ ಆಕೆಯ ಉಡಿ ತುಂಬಲು ಹೆಣಗಾಡಿದರೆ, ಇನ್ನೊಬ್ಬಾಕೆ ಆಕೆಗೆ ಆರತಿ ಮಾಡುವ ಸಡಗರದಲ್ಲಿದ್ದಾಳೆ! ಎಲ್ಲವನ್ನೂ ನೋಡುತ್ತಿದ್ದವಳ ಚಿತ್ರದಲ್ಲಿ ಏಳು ವರ್ಷಗಳ ಹಿಂದಿನ ಘಟನೆಗಳು ಧುತ್ತೆಂದು ಎದುರಾದವು.

ಕೀರ್ತಿಯ ಜೀವನದ ಅಮೃತಘಳಿಗೆಯದು! ಮದುಮಗಳಾಗಿ ಶೋಭಿಸುತ್ತಿದ್ದ ಕೀರ್ತಿಯನ್ನು ಎಲ್ಲರೂ ರೇಗಿಸಿದ್ದೇ ರೇಗಿಸಿದ್ದು. ಮಂಗಳವಾದ್ಯಗಳ ಮೊಳಗುವಿಕೆ ಯೊಡನೆ ಕೀರ್ತಿಯ ಕುತ್ತಿಗೆಗೆ ತಾಳಿ ಬಿದ್ದಾಗ ರಾಜಿಯ ಕಣ್ಣುಗಳು ಆನಂದಬಾಷ್ಪ ಸುರಿಸಿದ್ದವು.

ನಾಲ್ಕು ಹೆಣ್ಣು, ಎರಡು ಗಂಡುಮಕ್ಕಳಲ್ಲಿ ಹಿರಿಯವಳೇ ಕೀರ್ತಿ. ಡಿಗ್ರಿ ಮುಗಿಸಿ, ಬಿ.ಎಡ್ ಮುಗಿಸಿದ್ದರೂ ಇತ್ತ ನೌಕರಿಯೂ ಸಿಕ್ಕಿರಲಿಲ್ಲ. ಅತ್ತ ಕಂಕಣವೂ ಕೂಡಿ ಬಂದಿರಲಿಲ್ಲ. ಆಕೆಯ ಹಿಂದೆಯೇ ತುಂಬ ಚೆಲುವೆ ಆದ ಸ್ವರ್ಣಳೂ ಸಿದ್ಧಳಿದ್ದಳು. ಆದರೆ ಅಪ್ಪನೋ ವಿಪರೀತ ಬೇಜವಾಬ್ದಾರಿಯ ಮನುಷ್ಯ. ಜೊತೆಗೆ ಜಿಪುಣತನವೂ ಅಂಟಿಕೊಂಡಿತ್ತು. ಆದ್ದರಿಂದ ವರಾನ್ವೇಷಣೆಯ ಬಗ್ಗೆ ತಲೆಕೆಡಿಸಿಕೊಂಡವನೆ ಅಲ್ಲ.

ತಾಲ್ಲೂಕು ಕಚೇರಿಯಲ್ಲಿ ಗುಮಾಸ್ತನಾಗಿ ಸಂಬಳದ ಜೊತೆಗೆ ಗಿಂಬಳವನ್ನೂ ಧಾರಾಳವಾಗಿ ಗಿಟ್ಟಿಸುತ್ತ ಹಣವನ್ನೇನೋ ಕೂಡಿಟ್ಟಿದ್ದ; ಆದರೆ ಖರ್ಚು ಮಾಡುವುದೆಂದರೆ ಕುತ್ತಿಗೆಗೆ ಬರುತ್ತಿತ್ತು. ಇನ್ನು ಅವರಿವರು ಕರೆದುಕೊಂಡು ಬಂದ ವರಗಳು ತಾಳಿಕಟ್ಟಲು ಬಾಯಿಗೆ ಬಂದಷ್ಟು ಕೂಲಿ ಕೇಳುತ್ತ ಅಪ್ಪನ ಎದೆಬಡಿತ ಹೆಚ್ಚಿಸಿ ಹೋಗಿದ್ದರಷ್ಟೆ.

ಕೀರ್ತಿಗೆ ಇಂದಲ್ಲ, ನಾಳೆ ಕೆಲಸ ಸಿಗುವುದು ಖಂಡಿತ ಎಂದು ಗೊತ್ತಿದ್ದ ಅಪ್ಪನಿಗೆ, ಎಂಟಕ್ಕೇ ಓದಿಗೆ ತಿಲಾಂಜಲಿಯಿತ್ತು ಅಡುಗೆ ಮನೆಗೆ ಖಾಯಂ ಆಗಿದ್ದ ಸ್ವರ್ಣಳನ್ನು ಬೇಗ ಸಾಗಿಸುವ ಯೋಚನೆ. ಮನೆಯಲ್ಲಿದ್ದೂ ಕೂಳು ದಂಡ ಅವ್ಳಿಗೆ! ಕೀರ್ತಿಗೆ ಅಪ್ಪನ ಈ ಕಂತ್ರಿ ಬುದ್ಧಿಯ ಬಗ್ಗೆ ಬಲು ಬೇಸರ. "ದೇವ್ರೇ........ ಇಂತಹ ಅನಿಷ್ಟ ಅಪ್ಪನನ್ನು ಎಲ್ಲಿಂದ ತಗುಲಿ ಹಾಕಿದೆ ನಮಗೆ............" ಎಂದುಕೊಳ್ಳುತ್ತಿದ್ದಳು.

ಅಪ್ಪನ ದುರಾಸೆಗೆ ಕಲ್ಲು ಬಿದ್ದಿದ್ದು ಕೀರ್ತಿಯನ್ನು ಮೆಚ್ಚಿದ್ದೂ ಅಲ್ಲದೆ, ವರದಕ್ಷಿಣೆಯನ್ನೂ ತಿರಸ್ಕರಿಸಿದ ಮಹೇಶನ ಪ್ರವೇಶದಿಂದಾಗಿ, ಅಪ್ಪನ ಸ್ನೇಹಿತರೊಬ್ಬರ ಕಳಕಳಿಯ ಮನವಿಗೆ ದೊಡ್ಡ ಮನಸ್ಸಿನಿಂದ ಒಪ್ಪಿಗೆ ಸೂಚಿಸಿದ್ದ ಮಹೇಶ ಮುಂದಿನ ಒಂದೇ ತಿಂಗಳಲ್ಲಿ ಆಕೆಗೆ ತಾಳಿಯನ್ನೂ ಕಟ್ಟಿಬಿಟ್ಟ. ಮದುವೆಯಾದ ಆರ್ತಿಂಗಳಿಗೆ ಕೀರ್ತಿಗೆ ಟೀಚರ್ ಕೆಲಸವೂ ಸಿಕ್ಕಿತು.

"ಏನಮ್ಮ ಕೀರ್ತಿನ ಸ್ಮಶಾನಕ್ಕೆ ಕರ್ಕಂಡ್ಹರ ಜವಾಬ್ದಾರಿ ನಿಂದೇ...." ಎನ್ನುತ್ತ ಮಹೇಶನ ಅಮ್ಮ ರಾಜಿಯನ್ನು ಹಿಡಿದು ಅಲುಗಿಸಿದಾಗಲೇ ಅವಳಿಗೆ ಎಚ್ಚರ. ಆಗಲೇ ಹೆಣ

ಎತ್ತುವುದರಲ್ಲಿದ್ದರು. ಕೆಲವು ಹೆಂಗಸರು ಸ್ವರ್ಣಳ ಕುಂಕುಮವನ್ನು ಅಳಿಸಲು ತಿಣುಕಾಡುತ್ತಿದ್ದರು. ಇನ್ನು ಸ್ಮಶಾನದಲ್ಲಿ ಆಕೆಯ ಬಳೆಗಳನ್ನು ಒಡೆಯುವ ಇನ್ನೊಂದು ಶಾಸ್ತ್ರವಿತ್ತು.

ಒಂಟಿಯಾಗಿ ಜನರಿಂದ ಸ್ವಲ್ಪ ದೂರದಲ್ಲಿ ನಿಂತಿದ್ದ ಕೀರ್ತಿಯನ್ನ ಸಮೀಪಿಸಿ

"ಬಾ ಕೀರ್ತಿ ನಾವು ಹೋಗಿ ಎರಡಿಡಿ ಮಣ್ಣಕಿ ಬರೋಣ. ಮತ್ತೆ ಬೇಕಂದ್ರೂ ಮಹೇಶ ಸಿಗೊಲ್ಲ. ನೀನೀಗ ಅಲ್ಲಿಗೆ ಬರದಿದ್ರ ಈ ಜನ ಸುಮ್ನೆ ಬಾಯಿಗೆ ಬಂದಂಗ ಮಾತಾಡ್ತಾರೆ..." ಎಂದಳು ರಾಜಿ.

ಕೀರ್ತಿ ರಾಜಿಯನ್ನ ಬೆರಗಿನಿಂದ ನೋಡಿದಳು.

"ರಾಜಿ ನಿಂಗೆ ಬಹುಶಃ ಮರೆತೋಗಿರ್ಬಹುದು ಆದ್ರೆ ನಂಗೆ ಚೆನ್ನಾಗಿ ಜ್ಞಾಪ್ಕ ಇದೆ. ಮಹೇಶ ಮತ್ತೆ ಸಿಗದ ಹಾಗೆ ಕಳೆದೋಗಿ ಆಗ್ಲೇ ನಾಲ್ಕು ವರ್ಷಗಳಾದ್ವು. ಜೀವನದಲ್ಲಿ ಸಾವು ಸಂಭವಿಸೋದು ಒಮ್ಮೆ ತಾನೆ? ಈ ದರಿದ್ರ ಜನರಿಗೋಸ್ಕರ ನಾನಲ್ಲಿಗ್ಬಂದು ಇಲ್ದಿರೋ ದುಃಖ ಬರಿಸ್ಕೊಂಡು, ಬರ್ದಿರೋ ಕಣ್ಣೀರನ್ನ ಉದುರಿಸೋಂತ ನಾಟ್ಕ ಮಾಡಿ, ಆತ್ಮವಂಚನೆ ಮಾಡ್ಕೊಳ್ಳೋಕೆ ಸಿದ್ಧಳಿಲ್ಲ. ಈ ವಿಷಯದಲ್ಲಿ ಮಾತ್ರ ನನ್ನ ಬಲವಂತಪಡಿಸ್ಬೇಡ ಪ್ಲೀಸ್..........." ಅಂದ್ಲು.

ಈ ಮಾತುಗಳನ್ನು ಅಲ್ಲಿಯೇ ನಿಂತು ಕೇಳಿಸಿಕೊಳ್ಳುತ್ತಿದ್ದ ಮಹೇಶನ ತಂಗಿ ಕೋಪದಿಂದ ಬುಸುಗುಟ್ಟಿದಳು. "ನಿನ್ ಕರ್ಮಕ್ಕೆ ಇನ್ನೊಬ್ರನ್ನ ಯಾಕೆ ಅನ್ತಿಯಾ........? ನೀನ್ ನೆಟ್ಟಗಿದ್ದಿದ್ರೆ ನಿನ್ ಗಂಡ ಯಾಕೆ ಇನ್ನೊಬ್ಬತ್ರಕ್ಕೆ ಹೋಗ್ತಿದ್ದ......? ಗಂಡನ ಹೆಣಾನ ಪಕ್ಕದಲ್ಲಿಟ್ಕಂಡು ಒಳ್ಳೆ ಬೀದಿ ಸೂಳೆ ತರಹ ಓಡಾಡ್ತಿರೋ ನಿನ್ನಂಥ ಮೂರು ಬಿಟ್ಟೋಳಿಗೆ ಗಂಡನಾದ್ರು ಯಾಕೆ ಬೇಕು.........? ಕಟ್ಕಂಡು ಮೂರ್ವರ್ಷ ಆದ್ರೂ ನಿನ್ ಹೊಟ್ಟೆ ಉಬ್ಲಿಲ್ಲಾಂದ್ರೆ ಅವ್ನೇನ್ ಮಾಡ್ತಾನೆ........?"

ಅವ್ಳ ಮಾತು ಇನ್ನೂ ಮುಂದುವರಿಯೋ ಮುನ್ನವೇ ಬಾಣದಂತೆ ನುಗ್ಗಿದ ಕೀರ್ತಿ ಆಕೆಯ ಕೆನ್ನೆಗೊಂದು ಬಾರಿಸಿದಳು. ಹೊಡೆತದ ರಭಸಕ್ಕೆ ಉರುಳಿಬಿದ್ದಳಾಕೆ. ಕೋಪದಿಂದ ನಡುಗುತ್ತಿದ್ದ ಕೀರ್ತಿಯನ್ನ ಎಳೆದುಕೊಂಡು ಹೋಗಿ ಆಟೋವೊಂದನ್ನು ಹತ್ತಿದಳು ರಾಜಿ.

ಕೀರ್ತಿಗೂ ಕೆಲಸ ಸಿಕ್ಕ ನಂತರ, ಬದುಕು ಸುಂದರವಾಗಿತ್ತು. ವಾರಕ್ಕೆರಡ್ಮೂರು ಸಲ ಅವರನ್ನ ಮನೆಗೆ ಊಟಕ್ಕೆ ಕರೆದೊಯ್ಯುತ್ತ ತನ್ನ ನೂರಾರು ತಾಪತ್ರಯಗಳ ತರಲೆ ಮಾಡುತ್ತ ಹಣ ಕೇಳುತ್ತಿದ್ದ ಅಪ್ಪ. ಗಂಡನೆದುರು ಅಪ್ಪನನ್ನು ಕೀಳು ಮಾಡಲಾರದೆ ಅವನು ಕೇಳಿದಾಗಲೆಲ್ಲಾ ತೆಪ್ಪಗೆ ದುಡ್ಡು ಕೊಡುತ್ತಿದ್ದಳು ಕೀರ್ತಿ.

ಎರಡು ವರ್ಷಗಳು ಹಾರುತ್ತ ಹೋದವು. ತಾಯಿಯಾಗುವ ಅವಳ ಹಂಬಲವನ್ನು

"ಇನ್ನೊಂದ್ವರ್ಷ ಆರಾಮಾಗಿದ್ದು ಆಮೇಲೆ ಖಂಡಿತ ಅಪ್ಪ, ಅಮ್ಮ ಆಗೋಣ........." ಎಂದು ತಮಾಷೆ ಮಾಡುತ್ತ ಮಹೇಶ ತನ್ನ ಮನದಾಸೆ ತಿಳಿಸಿದಾಗ ಗಂಡನನ್ನು ಬಲುಪ್ರೀತಿಯಿಂದ, ಗೌರವದಿಂದ ಕಾಣುತ್ತಿದ್ದ ಕೀರ್ತಿ ಅವನ ಮಾತು ಮೀರಲಾರದೆ, ಅವನ ಮನ ನೋಯಿಸಲಿಚ್ಛಿಸದೆ ತನ್ನ ಹಂಬಲವನ್ನು ಹಾಗೆ ಅಡಗಿಸಿಕೊಂಡಳು.

ಮೂರನೇ ವರ್ಷಕ್ಕೇ ಅವಳಿಗೆ ಗದುಗಿಗೆ ವರ್ಗವಾದಾಗ ನಿಜಕ್ಕೂ ಕಂಗಾಲಾದಳು. ಮಹೇಶನೇ ಅವಳಿಗೆ ಧೈರ್ಯ ಹೇಳಿ ವಾರಕ್ಕೊಮ್ಮೆ ಬಂದು ಹೋಗುವುದಾಗಿಯೂ, ವರ್ಗ ರದ್ದುಪಡಿಸಲು ಪ್ರಯತ್ನಿಸುವುದಾಗಿಯೂ ಭರವಸೆ ನೀಡಿ ಅವಳನ್ನ ಗದುಗಿಗೆ ಬಿಟ್ಟು ಬಂದ. ಕೊಟ್ಟ ಮಾತಿನಂತೆ ವಾರಕ್ಕೊಮ್ಮೆಯೋ ಹದಿನೈದು ದಿನಕ್ಕೊಮ್ಮೆಯೋ ಹೋಗಿ ಬರುತ್ತಿದ್ದ. ಹಾಗಾಗಿ ಕೀರ್ತಿ ದುರ್ಗದ ಕಡೆಗೆ ತಲೆ ಹಾಕಲಿಲ್ಲ. ಆದರೆ ವರ್ಷದ ಕೊನೆಯಲ್ಲಿ ರಾಜಿಯಿಂದ ಬಂದ ಪತ್ರ ಅವಳ ನೆಮ್ಮದಿಯನ್ನು ಕಲಕಿ, ಅವಳನ್ನು ಅಶಾಂತತೆಯ ಮಡುವಿನಲ್ಲಿ ಕೆಡವಿತು. ಸ್ವರ್ಣ, ಮಹೇಶರ ಬಗ್ಗೆ ಅನೇಕ ಕಥೆಗಳು ಹುಟ್ಟುತ್ತಿದೆಯೆಂದೂ ಆಕೆಯೊಮ್ಮೆ ದುರ್ಗಕ್ಕೆ ಬಂದರೆ ಒಳ್ಳೆಯದೆಂದೂ ಬರೆದಿದ್ದಳು.

ಸುಳಿವು ಕೊಡದೆ ಬಂದಿಳಿದ ಕೀರ್ತಿ ಎಲ್ಲರನ್ನೂ ಗಾಬರಿಗೊಳಿಸಿದ್ದಳು. ಕೀರ್ತಿ ಗದುಗಿಗೆ ಹೋದ ನಂತರ ಒಂಟಿಯಾಗಿದ್ದ ಅಳಿಯನಿಗೆ ಮಾವನ ಮನೆಯ ಉಪಚಾರ ಜೋರಾಗಿತ್ತು. ಮಹೇಶನ ಹೊಟ್ಟೆ ತಣಿಸುವ ನೆಪದಲ್ಲಿ ಅವನ ಹಿಂದೆ ಮುಂದೆ ಓಡಾಡುತ್ತ ಕಣ್ಮನಗಳನ್ನು ತಣಿಸುತ್ತಿದ್ದಳು ಸುವರ್ಣ. ಅರಿತೂ ಅರಿಯದಂತಿದ್ದ ಅಪ್ಪ, ಅಮ್ಮ ಪರೋಕ್ಷವಾಗಿ ಅವರಿಗೆ ಪ್ರೋತ್ಸಾಹಿಸಿದರು. ಅಪ್ಪನ ಜಿಪುಣತನ, ಲೆಕ್ಕಾಚಾರದ ಬುದ್ಧಿ ಗರಿಬಿಚ್ಚಿತ್ತು. ಒಂದು ಮದುವೆಯ ಖರ್ಚು ಉಳಿಸುವ ದುರಾಸೆಯ ಸಡಗರದಲ್ಲಿ ಕೀರ್ತಿಯ ಬಾಳಿಗೆ ತಾನೇ ಮುಳ್ಳಾದ.

ಕೀರ್ತಿ ವಿಷ್ಯ ತಿಳಿಯುವಷ್ಟರಲ್ಲಿ ಕಾಲಮಿಂಚಿ ಹೋಗಿತ್ತು. ಕಪಟವರಿಯದ ಆಕೆ ಕನಸಿನಲ್ಲಿಯೂ ಗಂಡನನ್ನು ಸಂಶಯಿಸಿದವಳಲ್ಲ. ಮಹೇಶನಿಗಾದರೂ ಕೀರ್ತಿಯ ಮೇಲಿನ ಪ್ರೀತಿ ಕಡಿಮೆಯಾಗಿರಲಿಲ್ಲ. ಆದರೆ ಸ್ವರ್ಣಳ ಹಿಡಿತಕ್ಕೆ ಸಿಕ್ಕಿಬಿಟ್ಟಿದ್ದ. ಕಾಮಾತುರದಲ್ಲಿ ಎಚ್ಚರತಪ್ಪಿ, ಎಡವಿದ ಕಾರಣ ಆಕೆಗೆ ಸುಸ್ತು, ವಾಂತಿ ಬರಿಸಿದ ಅವನು ಸಂಪೂರ್ಣ ಅವಳ ವಶನಾದ. ತಾಯಿಯಾಗುವ ಅವಳ ಹಂಬಲವನ್ನು ನಯವಾಗಿ ಚಿವುಟಿ ಹಾಕಿದ್ದ ಅದೇ ಮಹೇಶನ ಕುಡಿ ಸ್ವರ್ಣಳ ಗರ್ಭವನ್ನ ಅಲಂಕರಿಸಿತ್ತು. ಮಹೇಶ ಕೀರ್ತಿಗೆ ದ್ರೋಹವೆಸಗಿದ್ದ!

ತನ್ನ ಸುಂದರ ಬದುಕನ್ನು ಸಮಾಧಿ ಮಾಡಿ, ಅದರ ಮೇಲೆ ತಮ್ಮ ಸುಖದ ಮಹಲನ್ನು ನಿರ್ಮಿಸಿಕೊಂಡ ಗಂಡ, ತಂಗಿ, ಅಪ್ಪ, ಅಮ್ಮನ ಮೇಲೆ ತಿರಸ್ಕಾರ ಉಕ್ಕಿ ಹರಿಯಿತು ಕೀರ್ತಿಯಲ್ಲಿ. ಅಮ್ಮ ಮೆಲ್ಲನೆ ಮಾತು ತೆಗೆದಳು "ಸ್ವರ್ಣನ ವಿಷ್ಯ ಏನ್ಮಾಡೋಣ.........?" ಎಂದು.

"ಮದ್ವೇನೇ ಇಲ್ದೆ ಪ್ರಸ್ಥ ಮಾಡಿದ್ದೀರಿ, ಇನ್ನು ಹೆರಿಗೆ ಮಾಡ್ಸಿ ಬಾಣಂತನ ಮಾಡ್ರಿ ಅಷ್ಟೆ.........." ವ್ಯಂಗದಿಂದ ಇರಿದಳು ಕೀರ್ತಿ ಅವರನ್ನ.

ಅಮ್ಮ ಅಷ್ಟಕ್ಕೇ ತೆಪ್ಪಗಾದಾಗ ಅಪ್ಪ ಬಾಯ್ಬಿಟ್ಟ.

"ನಿನ್ ಮನಸ್ಗೆಷ್ಟು ನೋವಾಗಿದೆ ಅಂತ ನಂಗೊತ್ತಮ್ಮ ಆದ್ರೇನ್ಮಾಡೋದು.........? ಎಲ್ಲಾ ಋಣಾನುಬಂಧ. ಈಗಾಗ್ಲೆ ನಿನ್ತಂಗಿಗೆ ಮೂರ್ತಿಂಗ್ಳು. ಈ ಸ್ಥಿತೀಲಿ ಅವಳ್ನ ಕೈಬಿಟ್ರೆ ನಿನ್ನ ಆ ದೇವ್ರೂ ಮೆಚ್ಚಲ್ಲ. ಈಗಾಗ್ಲೆ ಜನ ಬಾಯಿಗ್ಬಂದಂಗೆ ಮಾತಾಡ್ತಿದಾರೆ. ನಿಂಗೆ ಮಕ್ಳು

ಆಗಿಲ್ಲಾಂತ ನೀನೆ ಸ್ವರ್ಣನ್ನ ಅವ್ನಿಗೊಪ್ಸಿದ್ವಿ ಅಂಥ ಏನೇನೋ ಮಾತಾಡ್ತಾರೆ. ಇನ್ನೂ ಮದ್ವೆಯಾಗೋ ಇಬ್ರು ಹೆಣ್ಮಕ್ಳಿದಾರೆ........."

ಅವನ ನಯವಂಚಕತನಕ್ಕೆ ಕೀರ್ತಿಯ ರಕ್ತ ಕೊತಕೊತ ಕುದಿಯಿತು.

"ನಿನ್ ಮಗಳ್ನ ಕಳ್ಳತನದಲ್ಲಿ ಬಸುರಿ ಮಾಡಿಸಿದಲ್ದೆ ಅದಕ್ಕೊಳ್ಳೆ ಕಾರಣನೂ ಹುಡುಕ್ಬಿಟ್ಯಾ ಆಗ್ಲೆ.........? ಎಂತಹ ಮಾಸ್ಟರ್ ಪ್ಲಾನಪ್ಪ ನಿಂದೂ..........? ಇನ್ನು ಇಬ್ರು ಹೆಣ್ಮಕ್ಕಳಿಗೆ ಗಂಡ್ಯಾಕ್ನೋಡ್ತಿ...........? ಹೇಗಿದ್ರೂ ಅಳಿಯ ಮನೆಲೇ ಇದಾನೆ ಅವ್ರಿಗೂ ನೀನೇ ಮೀಡಿಯೇಟರ್ ಆಗ್ಬಿಡು. ದುಡ್ಡು ಉಳಿಯುತ್ತೆ.. ಮಕ್ಳು ಮದ್ವೇನೂ ಆಗುತ್ತೆ.." ಕೀರ್ತಿ ನುಡಿದಾಗ ಅಪ್ಪ ಅಬ್ಬರಿಸಿದ.

"ಥೂ ಬೇವರ್ಸಿ ನೀನು ನನ್ಮಗ್ಳೇ ಅಲ್ಲ.........."

"ನಿನ್ನಂತ ತಲೆಹಿಡುಕನಿಗೆ ಮಗ್ಳು ಆಗ್ದೆ ಇರೋದ್ಕಿಂತ ಹೆಚ್ಚಿನ ಭಾಗ್ಯ ಇನ್ಯಾವ್ದಿದೆ ಹೇಳು......" ಮಾತಿನಿಂದಲೇ ಇರಿದಳು ಕೀರ್ತಿ. ಈಗ ಅಮ್ಮನ ಪಿತ್ತ ನೆತ್ತಿಗೇರಿತ್ತು.

"ನೆಟ್ಟಗೆ ಮಾತಾಡೆ ಲೌಡಿ. ಅಪ್ಪ ಅನ್ನೋ ಮರ್ಯಾದೇನೆ ಇಲ್ವಲ್ಲೆ ನಿಂಗೆ? ಅವರಾಗೋ ಹೊತ್ಗೆ ಸುಮ್ನಿದಾರೆ.. ಬೇರೆ ಯಾರಾದ್ರೂ ಆಗಿದ್ರೆ ನಿನ್ನ ಹುಟ್ಲಿಲ್ಲಾ ಅನ್ನಿಸ್ತಿದ್ರು...?"

ಎನ್ನುತ್ತ ಮಗಳ ಮೇಲೆ ಕೈಯೆತ್ತಿಕೊಂಡು ಹೋಗಿದ್ದಳು. ಆಕೆಯನ್ನು ತಡೆದು ನಿಲ್ಲಿಸಿ

"ನೀನು ತಪ್ಪು ತಿಳ್ಕೊಂಡಿದ್ದೀಯ. ಅಪ್ಪ ಅಮ್ಮ ಅನ್ನೊ ಮರ್ಯಾದೆ ಇನ್ನು ಸ್ವಲ್ಪ ಇರೋದ್ರಿಂದ್ಲೇ ನಾನು ಸುಮ್ನೇ ಇದ್ದೀನಿ. ಇಲ್ಲಂದಿದ್ರ ನೀವು ಮಾಡಿರೋ ಹಲ್ಕ ಕೆಲ್ಸಕ್ಕೆ ಬೇರೆ ಯಾರಾದ್ರೂ ಆಗಿದ್ದಲ್ಲಿ ಕೆರದಲ್ಲಿ ಹೊಡಿತಿದ್ರು..." ಎಂದು ಹೇಳಿ ಅಂದೇ ಮನೆ ಬಿಟ್ಟಿದ್ದಳು ಕೀರ್ತಿ.

ಅವಳಲ್ಲಿ ಇರುವವರೆಗೆ ಮಹೇಶ ಅವಳ ಕಣ್ಣಿಗೆ ಬಿದ್ದಿರಲಿಲ್ಲ. ಅವನಂತಹ ನರಸತ್ತವನೊಂದಿಗೆ ಬದುಕೋದ್ಕಿಂತ ಸಾವೇ ಲೇಸು ಎಂದು ಅಂದೇ ದುರ್ಗ ಬಿಟ್ಟವಳು ಪುನಃ ಈಗಲೇ ಮಹೇಶ ಸಾಯುವ ಘಳಿಗೆಯಲ್ಲಿ ಇಲ್ಲಿಗೆ ಕಾಲಿಟ್ಟಿದ್ದದ್ದು; ಮಹೇಶನನ್ನು ನೋಡಿದ್ದು. ಆದರೆ ಅಷ್ಟೊತ್ತಿಗೆ ಅವಳು ಸಂಪೂರ್ಣ ಬದಲಾಗಿದ್ದಳು.

ಅಂದು ಕೀರ್ತಿ ವಾಪಸ್ಸು ಬೆಂಗ್ಳೂರಿಗೆ ಹೊರಟಿದ್ದಳು. ಗೆಳತಿಯರಿಬ್ಬರು ಹರಟುತ್ತ ಬಸ್‌ಸ್ಟ್ಯಾಂಡಿನತ್ತ ಹೊರಟಿದ್ದರು. ವಿಪರೀತ ಜ್ವರದಿಂದ ನರಳುತ್ತಿದ್ದ ಮಗನನ್ನು ಆಸ್ಪತ್ರೆಗೆ ಕರೆತಂದಿದ್ದಳು ಸ್ವರ್ಣ. ಅಕಸ್ಮಾತ್ ಕೀರ್ತಿಯನ್ನು ಆಸ್ಪತ್ರೆಯ ಎದುರಿಗೆ ಕಂಡಳು. ಅವಳ ಮುಡಿಯಲ್ಲಿದ್ದ ಹೂ, ಕೈಯಲ್ಲಿದ್ದ ಬಳೆ, ಹಣೆಯ ಮೇಲಿದ್ದ ಕುಂಕುಮ ಇವಳನ್ನು ಅಣಕಿಸಿದಂತಾಯ್ತು. ಮುಂಚೆಗಿಂತಲೂ ಆರೋಗ್ಯವಾಗಿ, ಸುಂದರವಾಗಿ ಕಾಣುತ್ತಿದ್ದಳು ಕೀರ್ತಿ. ತಾನಾದರೂ ಬಡಕಲು ನಾಯಿಯಂತೆ ಆಗಿದ್ದಳು.

ಮದುವೆಗೆ ಮುನ್ನ ಮಹೇಶನೊಡನೆ ಕಳೆದಿದ್ದ ಸುಂದರ ಕ್ಷಣಗಳೇ ಆಕೆಯ ಜೀವನದ ಸುಂದರ ಕ್ಷಣಗಳು. ಆನಂತರ ಮಹೇಶ ಪೂರ್ಣ ಬದಲಾಗಿದ್ದ. ಅವನ ಹೃದಯದಲ್ಲಿ ಇನ್ನೂ ನೆಲೆಸಿದ್ದ ಕೀರ್ತಿ ಅವನ ನೆಮ್ಮದಿಯನ್ನು ಸಂಪೂರ್ಣವಾಗಿ ಕಿತ್ತುಕೊಂಡಿದ್ದಳು. ಪುನಃ ಅವಳ ಬಳಿಗೆ ಹೋಗುವ ಧೈರ್ಯ ಸಾಲದೆ ಇತ್ತ

ಸ್ವರ್ಣಳೊಡನೆಯೂ ನೆಮ್ಮದಿಯಿಂದ ಇರಲಾಗದೆ ಮಾನಸಿಕ ಹಿಂಸೆಯಿಂದ ಸಂಕಟ ಪಡುತ್ತಿದ್ದ. ಹೀಗಾಗಿ ಸ್ವರ್ಣ ಸುಖಜೀವನದಿಂದ ಪೂರ್ತಿ ವಂಚಿತಳಾಗಿದ್ದಳು. ಅವಳಿಗೆ ಈಗೀಗ ಅನ್ನಿಸುತ್ತಿತ್ತು.

ನಾನಂದು ಕೀರ್ತಿಯ ಬಾಳಿನಲ್ಲಿ ಪ್ರವೇಶಿಸದೆ ಇದ್ದಿದ್ದರೆ..? ಇಂದು ನನ್ನ ಸ್ಥಾನದಲ್ಲಿ ಅವಳಿರುತ್ತಿದ್ದಳು.. ಗಂಡನನ್ನು ಕಳೆದುಕೊಂಡೂ ಮುತ್ತೈದೆಯಂತೆ ಕಂಗೊಳಿಸುತ್ತಿದ್ದಾಳೆ! ಆದರೆ ನಾನು..? ಅವಳಿಗೆ ನಾನು ಬಗೆದ ದ್ರೋಹಕ್ಕೆ ದೇವ್ರು ನನಗೀ ಶಿಕ್ಷೆ ಕೊಟ್ಟನೇನೋ.. ಅಂದೆ ಕೀರ್ತಿ ನನಗೆ ಛೀಮಾರಿ ಹಾಕಿ ಗಂಡನನ್ನು ಕರೆದುಕೊಂಡು ಹೋಗಿದ್ದಿದ್ದರೆ ನಾನಿಂದು ಸುಖವಾಗಿರುತ್ತಿದ್ದೆ. ಆದರೆ ಅವಳು ತನ್ನದೆಲ್ಲವನ್ನೂ ನನಗೆ ಬಿಟ್ಟುಕೊಟ್ಟು ಹೋಗಿಬಿಟ್ಟಳು.

ಎಲ್ಲವನ್ನೂ ಕಳೆದುಕೊಂಡವಳು ಎಷ್ಟು ನಿಶ್ಚಿಂತೆಯಿಂದಿದ್ದಾಳೆ..! ಎಷ್ಟು ಸುಖ ವಾಗಿದ್ದಾಳೆ..! ಆದರೆ ಎಲ್ಲವನ್ನು ಪಡೆದುಕೊಂಡ ನಾನು..?

ದುಃಖವುಕ್ಕಿ ಬಂತು ಆಕೆಗೆ. ದೂರದಲ್ಲಿ ಜನರ ಮಧ್ಯೆ ಹೋಗುತ್ತಿದ್ದ ಕೀರ್ತಿಯನ್ನು ಕೊನೆಯ ಬಾರಿಯೆಂಬಂತೆ ಕಣ್ಣರಳಿಸಿ ನೋಡಲು ಪ್ರಯತ್ನಪಟ್ಟಳು.

ಆದರೆ ತುಂಬಿ ಬಂದ ಕಣ್ಣೀರು ಆಕೆಯ ಪ್ರಯತ್ನವನ್ನು ವ್ಯರ್ಥಗೊಳಿಸಿ, ಕೀರ್ತಿಯನ್ನು ಮರೆ ಮಾಡಿದ್ದವು.

✦ ✦

ಹೋರಾಟ

ಒಂದು ಕಡೆ ಆ ಊರಿನ ಹೊಲಸೆಲ್ಲ ಹರಿದು ಬಂದು ಸದ್ದಿಲ್ಲದೆ ಮೆಲ್ಲಗೆ, ಮಂದಗತಿಯಲ್ಲಿ ಹರಿಯುತ್ತಿದ್ದ ಹೊಳೆಯಲ್ಲಿ ಲೀನವಾಗುತ್ತಿತ್ತು. ಅಲ್ಲಿಯೇ ಪಕ್ಕಕ್ಕಿದ್ದ ಪಾಳುಮಂಟಪದ ಕಡೆಯ ಮೆಟ್ಟಿಲಲ್ಲಿ ಕುಳಿತು ಆ ಹೊಲಸು ಹೊಳೆ ಸೇರಿ ಆಗುತ್ತಿದ್ದ ಸಂಗಮದಲ್ಲಿ ಕಾಲಾಡಿಸುತ್ತ ತಮ್ಮಲ್ಲಿದ್ದ ಕೊಳೆತು, ಜೀರ್ಣವಾದಂತಿದ್ದ ಬಲೆಯನ್ನು ಆ ನೀರಿನೊಳಕ್ಕೆ ಇಳಿಬಿಟ್ಟು, ಅದರಲ್ಲಿ ಬೀಳುವ ಮೀನಿಗಾಗಿ ಕಾಯುತ್ತ ಕುಳಿತಿರುತ್ತಿದ್ದ ಪಡ್ಡೆ ಹುಡುಗರ ಸಣ್ಣ ಗುಂಪೊಂದು ಯಾವಾಗಲೂ ಅಲ್ಲಿರುತ್ತಲಿತ್ತು. ಆ ಜಾಗದಿಂದ ಇಪ್ಪತ್ತು ಅಡಿಗಳ ಅಂತರದಲ್ಲಿ ಒಂದು ಸಣ್ಣ ಬಂಡೆಗಳ ಸಮೂಹ. ಎದುರಿಗೆ ಒಂದು ಕಾಲುದಾರಿ. ಆ ಕಾಲುದಾರಿಗುಂಟ ಮತ್ತೊಂದು ಪಕ್ಕಕ್ಕೆ ಹುಲುಸಾಗಿ ಬೆಳೆದಿದ್ದ ಪೊದೆ.

ಆ ಕಾಲುದಾರಿ ಸೀದಾ, ಎರಡು ದಿನಕ್ಕೊಮ್ಮೆ ದೊಡ್ಡ ಬಟ್ಟೆಗಳ ಹೊರೆ ಹೊತ್ತು ತಂದು, ತನ್ನ ಮಾಮೂಲಿನ ಜಾಗವಾದ ಈ ಬಂಡೆಗಳ ಬುಡದಲ್ಲಿ ಅವುಗಳನ್ನು ಒಗೆದುಕೊಂಡು ಹೋಗುವ, ಯಾರೊಂದಿಗೂ ಹೆಚ್ಚು ಬೆರೆಯದ, ಹೆಚ್ಚು ಮಾತನಾಡದ ಮುಗ್ಧ ಹುಡುಗಿ ಲಕ್ಷ್ಮಿಯ ಕೇರಿಗೆ ಹೋಗುವ ದಾರಿ.

ಹನ್ನೆರಡರ ನಂತರ ಆ ಪ್ರದೇಶ ಸಾಮಾನ್ಯವಾಗಿ ನಿರ್ಜನವಾಗಿ ಇರುತ್ತದೆ. ಆ ಮೀನು ಹಿಡಿಯುವ ಹುಡುಗರ ಹೊರತು. ಆದರೆ ಲಕ್ಷ್ಮಿ ಮಾತ್ರ ಯಾವಾಗಂದರೆ ಆಗ ನಿರ್ಭೀತಳಾಗಿ ತನ್ನ ಬಟ್ಟೆಗಳೊಂದಿಗೆ ಹೋಗಿ ಬರುತ್ತಲಿದ್ದಳು. ಇಂದೂ ಕೂಡ ಅವಳು

ಬಟ್ಟೆಯ ಹೊರೆ ಹೊತ್ತು ಬಂದಾಗ ಸೂರ್ಯನಾಗಲೇ ನೆತ್ತಿಯ ಮೇಲಿದ್ದ. ಸರಸರನೆ ನಡೆದು ಬರುತ್ತಿದ್ದ ಲಕ್ಷ್ಮಿಗೆ ಪೊದೆಯ ಬಳಿ ಕೈಯಲ್ಲಿ ಬಾಟಲುಗಳೊಂದಿಗೆ ಅವುಗಳನ್ನು ಖಾಲಿ ಮಾಡಲು ಪ್ರಶಸ್ತವಾದ ಜಾಗಕ್ಕೆ ತಡಕಾಡುತ್ತಿದ್ದ, ನಾಲ್ಕು ದಿನ ಚೇಂಜ್‌ಗೆಂದು ಬೆಂಗಳೂರಿಂದ ಈ ಚಿಕ್ಕ ಊರಿಗೆ ಬಂದಿದ್ದ, ಅ ಊರಿನ ದೊಡ್ಡ ಕುಳ ಕುಲಕರ್ಣಿಯವರ ಮಗನ ನಾಲ್ವರು ಸ್ನೇಹಿತರು ಕಾಣುವಂತಿರಲಿಲ್ಲ. ಆದರೆ ಅವರಾಗಲೇ ಈಕೆಯನ್ನು ಗಮನಿಸಿದ್ದರು.

ಬಟ್ಟೆಯನ್ನು ಕೆಳಕ್ಕಿಳಿಸಿದ ಲಕ್ಷ್ಮಿ ಸೀರೆಯನ್ನೆತ್ತಿ ಮೇಲಕ್ಕೆ ಸಿಕ್ಕಿಸಿದಳು. ಮಿರಮಿರನೆ ಮಿಂಚುತ್ತಿದ್ದ ತೊಡೆಯ ಕೆಳಭಾಗ ಪೊದೆಯಲ್ಲಿ ತಡಕಾಡುತ್ತಿದ್ದವರ ಕಣ್ಣಿಗೆ ರಪ್ಪನೆ ರಾಚಿ, ಜಾಡಿಸಿ ಒದ್ದಂತಾಯ್ತು. ಸೆರಗನ್ನು ಎಳೆದು ಸಿಕ್ಕಿಸಿ, ಬಾಯಲ್ಲಿ 'ಹಿಸ್ ಹಿಸ್..' ಎಂಬ ಶಬ್ದ ಹೊರಡಿಸುತ್ತ, ಆ ಶಬ್ದಕ್ಕೆ ತಕ್ಕಂತೆ ತನ್ನ ದೇಹವನ್ನ ಮಣಿಸುತ್ತ, ಬಟ್ಟೆಗಳನ್ನು ಬೀಸಿ, ಬೀಸಿ ಸೆಳೆಯುತ್ತಿದ್ದ ಲಕ್ಷ್ಮಿಯ ತುಂಬು ಹರೆಯದ ಕುಲುಕಾಟ, ತೆರೆದ ತೊಡೆಯ ಭಾಗವನ್ನು ಕೌತುಕದಿಂದ ದಿಟ್ಟಿಸುತ್ತ, ಬೆಚ್ಚಗಾಗಿ ಒಬ್ಬರನ್ನೊಬ್ಬರು ತಬ್ಬಿ ಕೂತ ಹುಡುಗರು ಕೂತಲ್ಲಿಯೆ ತಿಣುಕಾಡತೊಡಗಿದ್ದರು.

ಇತ್ತ ಲಕ್ಷ್ಮಿಯ ಅಪ್ಪ ಸ್ವಾಮಣ್ಣ ಮಗಳ ಮದುವೆಯ ವ್ಯಸನದಲ್ಲಿ ಬಳಲುತ್ತಿದ್ದ. ಇಡೀ ಕೇರಿಗೆ ತಕ್ಕಮಟ್ಟಿಗಿದ್ದ ನಿಂಗಯ್ಯನ ಒಬ್ಬನೇ ಮಗ ದೇವರಾಜು ಕೇರಿಯಲ್ಲೇ ಕಾಲೇಜು ಮೆಟ್ಟಿಲು ಹತ್ತಿದ ಮೊದಲಿಗ. ಈಗ ಎಂ.ಎ. ಮಾಡುತ್ತಿದ್ದ. ಬಿಳುಪಾದ, ನುಣುಪಾದ ದೇವರಾಜುವಿಗೆ ಮಗಳನ್ನು ಕೊಡಬೇಕೆಂಬ ಮಹದಾಸೆಯನ್ನು ತನ್ನ ಗೆಳೆಯನ ಕಿವಿಗೆ ಹಾಕಿದ್ದರೂ ಇದುವರೆಗೆ ಅವನಿಂದ ಯಾವ ಉತ್ತರ ಬಾರದಿದ್ದುದು ಸ್ವಾಮಣ್ಣನನ್ನು ಚಿಂತೆಗೀಡು ಮಾಡಿತ್ತು. ಆದರೆ ನಿಂಗಯ್ಯನ ಕೈಯಲ್ಲಿ ಏನಿತ್ತು ಪಾಪ! ಹೈಸ್ಕೂಲಿನಿಂದಲೂ ಪೇಟೆ ನೋಡಿದ ದೇವರಾಜು ಇತ್ತೀಚೆಗೆ ತನ್ನೂರೆಂದರೆ ಮೂಗುಮುರಿಯುತ್ತಿದ್ದ. ಅಂತದ್ದರಲ್ಲಿ ಅಪ್ಪ ಮದುವೆಯ ಪ್ರಸ್ತಾಪ ಮುಂದಿಟ್ಟಾಗ ಸಿಡಿಮಿಡಿಯಾಗಿದ್ದ.

"ಅಲ್ಲಪ್ಪ ನಾನಿಷ್ಟು ಕಷ್ಟಪಟ್ಟು ಓದಿದ್ದು, ಬರೆದದ್ದೆಲ್ಲ ಮದ್ವೆಯಾಗಕೇ ಅಂದ್ಕಂಡಿಯಾ..........? ನಾನಿನ್ನೂ ತುಂಬ ಓದ್ಬೇಕು.. ಏನೇನೋ ಸಾಧಿಸ್ಬೇಕು.. ನನ್ನ ಗುರಿ ಮುಟ್ಟೋತನಕ ಮದ್ವೆ ಬಗ್ಗೆ ನಾನು ಯೋಚ್ಸಲ್ಲ. ನೀನೂ ಯೋಚಿಸ್ಬೇಡ"

ನಿಂಗಯ್ಯ ಮಗ ಸಮಾಧಾನಗೊಳ್ಳಲಿ ಎಂದು ಸ್ವಲ್ಪ ತಡೆದು, ಮೆಲ್ಲನೆ ನುಡಿದಿದ್ದ

"ಸರಿಕಣಪ್ಪ ಆಯ್ತು ನಿನ್ನಿಷ್ಟ ಬಂದಾಗ ಲಗ್ನಾಗು ಯಾರು ಬೇಡಂತಾರೆ.. ಆದ್ರೆ, ಆ ಹುಡ್ಗಿ ಲಕ್ಷ್ಮಿನ ಶಾಸ್ತ್ರಾನುಸಾರವಾಗಿ ಹೆಣ್ಣು ನಮ್ದು ಅಂತ ಮಾಡ್ಕೆಂಡು ಬಿಟ್ರೆ ಆತು.."

ದೇವರಾಜು ಒಮ್ಮೆಗೆ ಗಹಗಹಿಸಿ ನಕ್ಕಿದ್ದ ಅಪ್ಪನ ಮಾತುಗಳನ್ನು ಕೇಳಿ. ತನ್ನ ನಗುವನ್ನು ನೋಡಿ ಅರಳಿದ ಅಪ್ಪನ ಮುಖವನ್ನೆ ದಿಟ್ಟಿಸುತ್ತ ಹೇಳಿದ್ದ

"ಹೋಗಿ, ಹೋಗಿ ಆ ಹಳ್ಳಿನ ನನ್ನ ಕೊರಳಿಗ ಕಟ್ಟೋಕೆ ಹೊರಟಿದ್ದಿಯಲ್ಲಪ್ಪಾ.. ಆ ಪೇಟೆ ವಾತಾವರಣ ಹೇಗಿದೆ ಅಂತ ನಿಂಗೇನು ಗೊತ್ತು ಪಾಪ! ಅಲ್ಲಾ... ಒಂದು ಮಗೂಗೆ ಶಾಲೆಯಲ್ಲಿ ಸೀಟು ಬೇಕಂದ್ರೆ ಮೊದ್ಲು ಆ ಮಗುವಿನ ಅಪ್ಪ, ಅಮ್ಮನ್ನ ಸಂದರ್ಶಿಸ್ತಾರೆ. ಅವರ ಹಿನ್ನೆಲೆ ಏನು? ಅವರು ಎಂತಹ ಜನ? ಅವರೆಷ್ಟು ಓದಿದ್ದಾರೆ? ಇವೆಲ್ಲ ತಿಳ್ಕಂಡ್ಮೇಲೆ

ಆ ಮಗೂಗೆ ಆ ಸ್ಕೂಲಲ್ಲಿ ಸೀಟು ಕೊಡ್ತಾರೆ. ಇಂತಹ ವಾತಾವರಣದಲ್ಲಿ ಆ ಹಳ್ಳಿನ ಕಟ್ಕೊಂಡ್ರೆ ನಾನು ಸಿಟಿ ಬಿಟ್ಟು ಬಂದು ಇಲ್ಲೇ ನಿನ್ನ ಹೊಲ್ದಾಗೆ ಕಳೆ ಕಿತ್‌ಗಂಡು ಕಾಲ ಕಳೀಬೇಕಷ್ಟೆ........"

ನಗುತ್ತಿದ್ದವ ಒಮ್ಮೆಗೆ ಗಂಭೀರನಾದಾಗ ಅವ್ವ ನಾಗವ್ವ ಗಂಡನಿಗೇ ತಗಲಿಕೊಂಡಳು.

"ಅಯ್ ಬಿಡ್ಬಾರ್ದ ಅತ್ಲಾಗೆ ಅದೆಲ್ಲೆದಚ್ಚಿದಿ.. ಆ ಹಳ್ಳಿಮೊದ್ದು ಕಟ್ಟಿ ಈ ಹುಡ್ಗ ಇಟ್ಟಿನ ಓದಿಬರ್ದ್ದಿದ್ನೆಲ್ಲ ಹೊಳ್ಯಾಗೆ ಹುಣ್ಸೆಹಣ್ಣು ತೊಳ್ದಂಗೆ ತೊಳೀಬೇಕಂಥ ಮಾಡೀಯೇನೂ..?" ಎಂದು ಮಗನ ಪರವಹಿಸಿ, ಅವನನ್ನು ಸಮಾಧಾನಗೊಳಿಸಿ ಅಂದೇ ಊರಿಗೆ ಕಳುಹಿಸಿಕೊಟ್ಟಿದ್ದಳು.

ನಿಂಗಯ್ಯ ಸ್ನೇಹಿತನಿಗೆ ವಿಷಯ ಹೇಗೆ ತಿಳಿಸುವುದೆಂದು ಒದ್ದಾಡುತ್ತಲೇ ಇದ್ದ. ಆದರೆ ಲಕ್ಷ್ಮಿಯ ಅವ್ವ ಕೆಂಚವ್ವಗೆ ತನ್ನ ಅಣ್ಣ ಬಸಪ್ಪನ ಮಗ ಧರೆಣೆಪ್ಪನಿಗೆ ತನ್ನ ಮಗಳನ್ನು ಕೊಡುವ ಆಸೆ. ನಿಂಗಯ್ಯನಿಗೊ ಧರೆಣೆಪ್ಪನ ನೆರಳೆಂದರೂ ಆಗದು. ಇದಕ್ಕೆ ಕಾರಣ ಇಲ್ಲದಿಲ್ಲ. ಧರಣೆಪ್ಪ ಎಸ್.ಎಸ್.ಎಲ್.ಸಿ ಮುಗಿಸಿದ್ದ ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ. ಆನಂತರ ಓದಿಗೆ ತಿಲಾಂಜಲಿಯಿತ್ತು ಹೋರಾಟ, ಚಳುವಳಿ ಎಂದೆಲ್ಲ ಓಡಾಡುತ್ತ ಕೆಲ ರಾಜಕಾರಣಿಗಳ ಬಾಲಂಗೋಸಿಯಾಗಿದ್ದ. ಊರಿನಲ್ಲಿ ಎಲ್ಲೇ ಗದ್ದಲವಾದರೂ ಅವನ ಹೆಸರು. ಜಗಳ ಆಡಲೂ ಸೈ. ಜಗಳ ಬಿಡಿಸಿ ಪಂಚಾಯ್ತಿ ಮಾಡಲು ಸೈ.

ನೋಡಿದೊಡನೆ 'ಶುದ್ಧ ಒರಟು' ಎಂಬ ಭಾವನೆ ಒತ್ತಿಕೊಂಡು ಬರುವಂತಿದ್ದ ಧರಣೆಪ್ಪನೆಂದರೆ ಅರ್ಧ ಊರಿಗೆ ಮೆಚ್ಚು ಅರ್ಧ ಊರಿಗೆ ರಚ್ಚು. ಸದಾ ನ್ಯಾಯ, ಅನ್ಯಾಯ ಎಂದು ಬಡಬಡಿಸುವ ಅವನ ಕಿವಿಗೆ ಅಪ್ಪಿತಪ್ಪಿ ಅನ್ಯಾಯ ಎಂಬ ಶಬ್ದ ಬಿದ್ದರೂ ಸಾಕು ಕಟಕಟನೆ ಹಲ್ಲು ಕಡಿದು, ದೇವರು ಬಂದವನಂತೆ ಮೈ ನಡುಗಿಸುತ್ತ ಹೋರಾಟ ಎಂದು ಸಡ್ಡೊಡೆದು ನಿಲ್ಲಬಲ್ಲ ಧರಣೆಪ್ಪ ಕೆಂಚವ್ವನ ದೃಷ್ಟಿಯಲ್ಲಿ 'ಓರಾಟಗಾರ'.. 'ಲೀಡರ್ರೂ'.. ಆದರೆ ಅದೇ ನಿಂಗಯ್ಯನ ದೃಷ್ಟಿಯಲ್ಲಿ ಕೆಲಸಕ್ಕೆ ಬಾರದ ಪುಂಡ ಪೋಕರಿ.

ಅಪ್ಪ, ಅವ್ವನ ಈ ಪೈಪೋಟಿ ಕಿತ್ತಾಟ ನೋಡಿ

"ನಾನು ಲಗ್ನಾಗಕ್ಕೆ ಇವ್ರ್ಯಾಕೆ ಹಿಂಗೆ ಕಿತ್ತಾಡ್ಬೇಕು...." ಅಂದುಕೊಂಡು ನಗು ಬರುತ್ತಿತ್ತು ಲಕ್ಷ್ಮಿಗೆ. ಅದ್ಯಾಕೋ ಅಪ್ಪ, ಅವ್ವ ಎಂದೂ ಇಲ್ಲದವರು ಅಂದು

"ನಿನ್ನ ಮನ್ಸು ಹೆಂಗವ್ವ ಲಕ್ಷ್ಮಿ.............?'

ಎಂದು ಕೇಳಿದಾಗ ತಡವರಿಸದೆ ತಟ್ಟನೆ ಉತ್ತರಿಸಿದ್ದಳು. "ನೀವಿಬ್ರೂ ಕಿತ್ತಾಡ್ದಂಗೆ ಸಮಾಧಾನ್ದಿಲಿ ಏನೇ ನಿರ್ಧಾರ ತಗಂಡ್ರೂ ನಾನಂಗೆ ಕಣಪ್ಪ............." ಅಂದಿದ್ದಳು.

ಅದೇ ಗುಂಗಿನಲ್ಲಿ ಬಟ್ಟೆಗಳನ್ನು ತೊಳೆದು, ಜಾಲಾಡಿ, ಹಿಂಡಿ ಹೊರೆಕಟ್ಟಿ, ಸೊಂಟಕ್ಕೇರಿಸಿ, ಮೇಲಕ್ಕೆ ಸಿಗಿಸಿದ್ದ ಸೀರೆ ಸರಿಪಡಿಸಿಕೊಂಡು ಬಂಡೆಗಳನ್ನು ಸಾಗಿ ಬಂದು ಕಾಲುದಾರಿಗೆ ತಲುಪಿದಳಿಲ್ಲೊ "ಸಿಕ್ತೂ..! ಸಿಕ್ತೂ..!" ಎಂದು ಹುಯಿಲೆಬ್ಬಿಸಿ, ಕೂಗಾಡತೊಡಗಿದರು ಮೀನು ಹಿಡಿದ ಹುಡುಗರು. ಇವರ ಕೂಗಾಟ, ಕೇಕೆ ಪೊದೆಯಲ್ಲಿ ಕುಳಿತು ಹೊಂಚುತ್ತಿದ್ದವರಿಗೆ ಹಾಸಿಗೆ ಹಾಸಿದಂತಾಯ್ತು.

ಕೇರಿಯತ್ತ ಹೊರಟ ಲಕ್ಷ್ಮಿ ಪೊದೆಯೊಳಕ್ಕೆ ಸೆಳೆಯಲ್ಪಟ್ಟಿದ್ದು... ನಾಲ್ವರಲ್ಲಿ ಇಬ್ಬರು ಹೆದರಿ ಮೆಲ್ಲನೆ ಕಂಬಿಕಿತ್ತದ್ದು.... ಉಳಿದ ಇಬ್ಬರು ತಪ್ಪಿಸಿಕೊಳ್ಳಲು ಹೆಣಗಾಡುತ್ತಿದ್ದ ಲಕ್ಷ್ಮಿಗೆ ಮುಗಿಬಿದ್ದದ್ದು.... ಇದ್ಯಾವುದೂ ಆ ಹುಡುಗರ ಗಲಾಟೆಯಲ್ಲಿ ಕೇಳದಾಯ್ತು; ಕಾಣದಾಯ್ತು.

ಹೊತ್ತು ಮುಳುಗಲು ಬಂದರೂ ಮನೆಗೆ ಬಾರದ ಮಗಳನ್ನು ಹುಡುಕಿ ಬಂದ ಕೆಂಚವ್ವ ಪೊದೆಯ ಬಳಿ ಅರೆಬರೆ ಪ್ರಜ್ಞೆಯಲ್ಲಿ ಬಿದ್ದ ಮಗಳನ್ನು ಕಂಡು ಹೌಹಾರಿ ನಿಂತಳು. ಕೇರಿಕೇರಿಯೇ ಸ್ವಾಮಣ್ಣನ ಮನೆಯತ್ತಿರ ಸೇರಿತು. ಒಂದೇ ಕ್ಷಣದಲ್ಲಿ ಲಕ್ಷ್ಮಿಯನ್ನು ಯಾರೋ ಅಪರಿಚಿತರು ಕೆಡಿಸಿ, ಹೊಳೆದಂಡ್ಯಾಗೆ ಬಿಸಾಡಿದ ಸುದ್ದಿ ಊರಲ್ಲೆಲ್ಲಾ ಹಬ್ಬಿತು. ಆ ಕ್ಷಣವೇ ಕುಲಕರ್ಣಿ ತನ್ನ ಮಗನನ್ನು, ಅವನ ಸ್ನೇಹಿತರನ್ನು ಊರು ಬಿಡಿಸಿದ.

ಕಂಗಾಲಾಗಿ, ಕಣ್ಣೀರಿಡುತ್ತ ತಲೆಯ ಮೇಲೆ ಕೈಹೊತ್ತು ಕುಳಿತ ಅತ್ತೆ ಮಾವನನ್ನು ಧರಣೆಪ್ಪ ಸಮಾಧಾನಗೊಳಿಸುತ್ತಿದ್ದ. ಸದಾ ನಗುನಗುತ್ತ ಕಳೆಕಳೆಯಾಗಿ, ಚೂಟಿಯಾಗಿ ಏನಾದರೊಂದು ಕೆಲಸ ಮಾಡುತ್ತ ಓಡಾಡುತ್ತಿದ್ದ ಲಕ್ಷ್ಮಿ ಸೋತು ಸೊರಗಿದ್ದಳು. ಹನಿ ನೀರೂ ಮುಟ್ಟದೆ, ಮಂಡಿಯೊಳಗೆ ಮುಖವುದುಗಿಸಿ, ಗುಬ್ಬಚ್ಚಿಯಂತೆ ಮುದುರಿ ಕತ್ತಲ ಕೋಣೆಯ ಮೂಲೆ ಹಿಡಿದು ಬಿಕ್ಕುವುದನ್ನು ನೋಡಿದ ಧರಣೆಪ್ಪ ಚಲಿಸಿಹೋದ. ಕುಕ್ಕರಗಾಲಲ್ಲಿ ಅವಳ ಮುಂದೆ ಕೂತು, ಮಂಡಿಯೊಳಕ್ಕೆ ಹುದುಗಿದ್ದ ಮುಖವನ್ನು ಬಲವಂತದಿಂದ ಮೇಲೆತ್ತಿ ತನ್ನ ಅಂಗೈಯಲ್ಲಿಡಿದು ದೃಢವಾಗಿ ನುಡಿದ

"ಲಕ್ಷ್ಮಿ ನಿನ್ನ ಈ ಸ್ಥಿತಿ ಯಾರೇ ಕಾರಣ ಆಗಿರ್ಲಿ ಅವರನ್ನ ಹಿಡಿಸಿ, ಶಿಕ್ಷಿಸಿಸುವವರೆಗೆ ನಾನು ಅನ್ನ ನೀರು ಮುಟ್ಟಲ್ಲ ನಿನ್ನಾಣೆಗೂ........"

ಅವಳ ಕಂಗಳಿಂದ ಒಂದೇ ಸಮನೆ ಸುರಿಯುವ ಕಂಬನಿಯನ್ನು ತೊಡೆಯುತ್ತ

"ನೋಡು ಲಕ್ಷ್ಮಿ ನಾನು ಜೀವಂತ ಇರೋನತನ್ಕ ನೀನು ಯಾವುದಕ್ಕೂ ಹೆದರ್ಬೇಡ, ಕಂಗಾಲಾಗ್ಬೇಡ....... ಏನೇ ಆಗಿರ್ಲಿ ನಾನು ನಿನ್ನ ಕೈ ಬಿಡಲ್ಲ........." ಎಂದು ಸಣ್ಣಮಗುವನ್ನು ರಮಿಸುವಂತೆ ಅವಳನ್ನು ರಮಿಸಿದ.

ಸ್ವಾಮಣ್ಣ ಧರಣೆಪ್ಪ ಕಾಲನ್ನು ಗಟ್ಟಿಯಾಗಿ ಹಿಡಿದು ಗೋಳೋ ಎಂದುಬಿಟ್ಟ.

"ನಾನು ನಿನ್ನ ತಪ್ಪು ತಿಳ್ದಿದ್ನಲ್ಲೊ ಧರಣ್ಯಾ... ತಪ್ಪು ತಿಳಿದಿದ್ದೆ.. ನಮ್ಮ ಅಳಿವು ಉಳಿವು ಎಲ್ಲಾ ನಿನ್ನ ಕೈಯ್ಯಾಗೈತಪ್ಪ..."

ಎಲ್ಲರನ್ನೂ ಸಮಾಧಾನಗೊಳಿಸಿದ ಧರಣೆಪ್ಪ ಅಲ್ಲಿಯೇ ಇದ್ದ ನಿಂಗಯ್ಯನಿಗೆ ದೇವರಾಜುವನ್ನು ಕರೆಸಲು ಹೇಳಿದ.

"ಅವ್ನು ಕಾನೂನುಕಟ್ಟಳೆ ಓದಿ ತಿಳ್ಕಂಡಿರೋನು ನಮ್ಮ ಹೋರಾಟಕ್ಕೆ ಮಾರ್ಗದರ್ಶಕನಾಗಿ ಇರ್ಲಿ ಬೇಗ ಕರ್ಸು ಸಣ್ಣಪ್ಪ..." ಎಂದಿದ್ದ.

ಆಗಲೇ ಒಬ್ಬ ಆಳನ್ನು ಮಗನನ್ನು ಕರೆತರಲು ಕಳಿಸಿದ ನಿಂಗಯ್ಯ.

ಊರಿನಲ್ಲಿ ಯಾರಾದರೂ ಹೊಸಬರು ಕಣ್ಣಿಗೆ ಬೀಳುವರೋ ಎಂಬುದನ್ನು ತಿಳಿಯಲು ಕೆಲವರನ್ನು ಬಿಟ್ಟ ಧರಣೆಪ್ಪ, ತಮ್ಮವರನ್ನು ಸಂಘಟಿಸುವತ್ತ ಗಮನ ಕೊಟ್ಟ. ಮಾವನನ್ನು ಕರೆದೊಯ್ದು ಕಂಪ್ಲೆಂಟ್ ಕೊಟ್ಟು ಬಂದ. ತನಗೆ ಗೊತ್ತಿದ್ದ ಕೆಲವು

ರಾಜಕೀಯ ವ್ಯಕ್ತಿಗಳ ಸಹಾಯದಿಂದ ಪೇಪರಿನವರಿಗೆ ಸುದ್ದಿ ಮುಟ್ಟಿಸಿದ. ತನ್ನೂರಿನ, ಪಕ್ಕದೂರಿನ ತಮ್ಮವರಾದ ಹಿರಿಯರು, ಹುಡುಗರನ್ನೆಲ್ಲ ಸೇರಿಸಿದ.

ಪೊಲೀಸರು ವಿಚಾರಣೆ ಮಾಡಲು ಲಕ್ಷ್ಮಿಯನ್ನು ಪ್ರಶ್ನಿಸಿದಾಗ ಆಕೆ ಅವರ ಯಾವ ಪ್ರಶ್ನೆಗೂ ಸಮರ್ಪಕವಾಗಿ ಉತ್ತರಿಸಲಿಲ್ಲ. ಅವರ್‍ಯಾರು? ಎಲ್ಲಿಯವರಿರಬಹುದು? ಹೇಗಿದ್ದರು? ಅವರ ಚರ್ಯೆ ಯಾವುದರ ಬಗ್ಗೆಯೂ ಅವಳು ಹೇಳದಾದಳು. ಆದರೆ ಈ ಸುತ್ತಮುತ್ತಲ ಊರಿನವರಂತು ಖಂಡಿತ ಅಲ್ಲ ಎಂಬುದನ್ನು ಮಾತ್ರ ದೃಢಪಡಿಸಿದಳು. ಎಸ್‌ಐ.

"ಈ ಊರಿನ ಯಾರ ಮನೆಗಾದರೂ ಬಂದಿರಬಹುದಾದ ಹೊಸಬರಾದ ಅತಿಥಿಗಳು, ಪರಿಚಿತರು ಇದ್ದರೆ ಒಮ್ಮೆ ನೋಡಿ.........."
ಎಂದಾಗ ಅವರೊಡನೆಯೇ ಓಡಾಡುತ್ತಿದ್ದ ಕುಲಕರ್ಣಿಯ ಎದೆಗೆ ಒದ್ದಂತಾಯ್ತು. ಇಷ್ಟೆಲ್ಲ ನಡೆಯುವ ಹೊತ್ತಿಗೆ ದೇವರಾಜುವನ್ನು ಕರೆಯಲು ಹೋದ ಆಳು ಅವನ ಚೀಟಿಯೊಂದಿಗ ಮರಳಿದ. ಅದರಲ್ಲಿ ಸ್ಪಷ್ಟವಾಗಿ ಬರೆದಿದ್ದ ದೇವರಾಜು

"ಸುಮ್ಮನೆ ಇಂತಹ ಚಿಲ್ಲರೆ, ತರ್ಲೆ ಕೆಲ್ಸಕ್ಕೆಲ್ಲ ನನ್ನ ಕರೀಬೇಡ. ಈಗಾಗ್ಲೆ ಕೆಟ್ಟು ಕೆರಹಿಡ್ದಿರ ಆ ಹುಡ್ಗಿನ ಇಟ್ಕಂಡು ಅದೇನ್ ಹೋರಾಟ ಮಾಡ್ತಿರಿ........? ಸುಮ್ನೆ ಒಳಗೊಳ್ಗೆ ಯಾವನ್ದನ ಕುತ್ತಿಗೆಗೆ ಕಟ್ಟಿ ನಡೀ ಅನ್ರಿ.. ಇಲ್ಲಂದ್ರ ಯಾವ್ದನ ಕೆರೆನೋ ಬಾವಿನೋ ನೋಡ್ಕಳ್ಲಿ ನಿಮ್ಮ ಪಾಡಿಗೆ ನೀವಿದ್ದುಬಿಡ್ರಿ. ನನ್ನ ಮಾತ್ರ ಇಲ್ಲದ ತಾಪತ್ರಯಗಳಿಗೆ ಎಳೀಬೇಡ್ರಿ..."

ಇಡೀ ಊರಿಗೆ ಊರೇ ಆ ಹುಡುಗಿಗಾಗಿ ಮರುಗಿ, ಹೋರಾಟಕ್ಕೆ ಸಿದ್ಧವಿರುವಾಗ ವಿದ್ಯಾವಂತ, ಬುದ್ಧಿವಂತನಾದ ಮಗನ ಈ ಧೋರಣೆಯಿಂದ ನೊಂದುಕೊಂಡ ನಿಂಗಯ್ಯ "ಅವ್ನು ಊರಲ್ಲೆ ಇರ್‍ಲಿಲ್ವಂತೆ......" ಎಂದು ಸುಳ್ಳಾಡಿದ.

ಆದರೇನು ಧರಣೆಪ್ಪ ಜಗ್ಗಲಿಲ್ಲ. ತನ್ನ ಭಾಷಣ, ಘೋಷಣೆಗಳಿಂದ ಎಲ್ಲರನ್ನು ಪ್ರಚೋದಿಸಿ, ಹೆಂಗಸರನ್ನೂ ಬೀದಿಗೆಳೆದ. ಎಲ್ಲರೊಡನೆ ಹೋಗಿ ಸಂಬಂಧಪಟ್ಟವರಿಗೆಲ್ಲ ನ್ಯಾಯ ಕೋರಿ ಮನವಿ ಸಲ್ಲಿಸಿದ. ಇಂತಹ ಕುತೂಹಲಕರ ಸುದ್ದಿಗಾಗಿ ಕಾಯುತ್ತಿದ್ದ ಪತ್ರಕರ್ತರು ಸುದ್ದಿಗೆ ಮತ್ತಷ್ಟು ಬಣ್ಣ ಸೇರಿಸಿ ದಿನವೂ ತಮ್ಮ ಪತ್ರಿಕೆಗಳಲ್ಲಿ ಬಿತ್ತರಿಸ ತೊಡಗಿದರು. ಪುಂಡಪೋಕರಿ, ಕೆಲಸಕ್ಕೆ ಬಾರದ ಧರಣೆಪ್ಪ ವಿಜೃಂಭಿಸತೊಡಗಿದ. ಇಷ್ಟಾದರೂ ದಿನಗಳು ಯಾವ ಆಶಯ ತೋರದೆ ವ್ಯರ್ಥವಾಗಿ ಕಳೆಯುವುದನ್ನು ಗಮನಿಸಿ ಹೆಣ್ಣುಮಕ್ಕಳನ್ನು ಆಮರಣಾಂತ ಉಪವಾಸ ಕೈಗೊಳ್ಳಲು ಪ್ರೇರೇಪಿಸಿ, ಕೂರಿಸಿಯೇ ಬಿಟ್ಟ.

ಯಾಕೋ ಧರಣೆಪ್ಪನ ಹೋರಾಟ ದಿನೇದಿನೇ ವಿಪರೀತಕ್ಕೆ ಇಟ್ಟುಕೊಳ್ಳುತ್ತಿರುವುದನ್ನು ಗಮನಿಸಿದ ಕುಲಕರ್ಣಿಯ ಫೋನು ಒಳಗೊಳಗೆ ಕೆಲಸ ಮಾಡಹತ್ತಿತ್ತು. ಅಪರಾಧಿಗಳನ್ನು ಲಕ್ಷ್ಮಿಯೇ ನೋಡಿದ್ದು ಅವರ್‍ಯಾರೆಂದು ಗುರುತಿಸಲು, ಅವರ ಬಗ್ಗೆ ಸುಳಿವು, ಮಾಹಿತಿ ಕೊಡಲು ಅಸಮರ್ಥಳಾದ ಕಾರಣ ಅಪರಾಧಿಗಳನ್ನು ಹಿಡಿಯುವಲ್ಲಿ ವಿಳಂಬವಾಗುತ್ತಿದೆ ಎಂಬ ಹೇಳಿಕೆಗಳು ಪ್ರಕಟವಾಗುತ್ತಿದ್ದಂತೆ ಸರ್ಕಾರ ಲಕ್ಷ್ಮಿಯ ಮುಂದಿನ ಸುಭದ್ರ ಜೀವನಕ್ಕಾಗಿ ಒಂದೂವರೆ ಲಕ್ಷ ಹಾಗೂ ತಿಂಗಳಿಗೆ ಐದು ಸಾವಿರ ಸಂಬಳ

ಬರುವಂತೆ ಕೆಲಸವೊಂದನ್ನು ನೀಡುವುದಾಗಿ ಘೋಷಿಸಿತು. ಕುಲಕರ್ಣಿಯವರು ತಮ್ಮೂರಿನ ಹೆಣ್ಣುಮಗುವಿನ ಮೇಲಾದ ದೌರ್ಜನ್ಯಕ್ಕೆ ಮರುಗಿ, ಅವಳ ಭವಿಷ್ಯ ಭದ್ರವಾಗಲಿ ಎಂದು ಹಾರೈಸಿ ತಮ್ಮದೊಂದು ಜಾಗದಲ್ಲಿ ಅವಳಿಗೊಂದು ಸೈಟು ಬರೆದು ಎಲ್ಲರ ದೃಷ್ಟಿಯಲ್ಲಿ ದೈವಸಮಾನರಾದರು.

ಅಪರಾಧಿಗಳು ಇನ್ನೂ ಸಿಗಲಿಲ್ಲ ಎಂಬುದೊಂದು ಬಿಟ್ಟರೆ ಲಕ್ಷ್ಮಿಯ ಜೀವನಕ್ಕೆ ಬೇಕಾದ ಎಲ್ಲಾ ಸೌಲಭ್ಯಗಳು ದೊರಕಿದವು. ಊರಿಗೆ ಊರೇ ಧರಣೆಪ್ಪನನ್ನು ಕೊಂಡಾಡಹತ್ತಿತು. ಆದರೆ ಅವನಿಗೆ ಇದ್ಯಾವುದರತ್ತ ಗಮನವಿರಲಿಲ್ಲ. ಇನ್ನೂ ಬಾರದ ಲಕ್ಷ್ಮಿಯ ಕೆಲಸದ ಆರ್ಡರಿಗಾಗಿ ಓಡಾಡುತ್ತಿದ್ದ. ಹೇಗಾದರೂ ಲಕ್ಷ್ಮಿ ಮೊದಲಿನಂತಾದರೆ ಸಾಕು ಎನ್ನುವುದೊಂದೆ ಅವನ ಹಾರೈಕೆ.

ಆರ್ಡರ್ ತರಲು ಬೆಂಗಳೂರಿಗೆ ಕುಲಕರ್ಣಿಯವರೊಡನೆ ಹೊರಟು ನಿಂತಿದ್ದ ಧರಣೆಪ್ಪನ ಕಾಲಿಗೆ ಬಿದ್ದು ಲಕ್ಷ್ಮಿ

"ನೀವು ನನ್ನ ಪಾಲಿನ ದೇವ್ರು......"

ಎಂದು ಪಿಸುನುಡಿದಾಗ ಅತ್ಯಂತ ಪ್ರೇಮದಿಂದ ಆಕೇನ ಹಿಡಿದೆತ್ತಿ

"ನಮ್ಮಿಬ್ಬರ ನಡುವೆ ಅಷ್ಟು ದೊಡ್ಡ ಮಾತು ಬೇಡ ಲಕ್ಷ್ಮಿ. ನೀನು ಮೊದಲಿನಂಗೆ ನಗುತ್ತ ಇದ್ರೆ ಅಷ್ಟೆ ಸಾಕು ನನ್ಗೆ......"

ಎಂದು ತನ್ನ ಕೈಗಳನ್ನು ಭದ್ರವಾಗಿ ಹಿಡಿದು ನಿಂತಿದ್ದ ಲಕ್ಷ್ಮಿಯಿಂದ ಮೆಲ್ಲನೆ ಕೈಗಳನ್ನು ಬಿಡಿಸಿಕೊಂಡು, ಅವಳ ಕೈಗಳನ್ನು ಮೃದುವಾಗಿ ಅಮುಕಿ

"ಬೇಗ ಬಂದ್ಬಿಡ್ತೀನಿ......" ಎಂದು ಹೇಳಿ ಹೊರಟುಹೋದ.

ಅವನತ್ತ ಹೋಗುತ್ತಿದ್ದಂತೆ ಸ್ಯಾಮಣ್ಣನ ಮನೆಯಲ್ಲಿ ಕೂತು ಲಕ್ಷ್ಮಿಗೆ ಧೈರ್ಯ ನೀಡುತ್ತ ಹಿತವಚನ ಹೇಳುತ್ತಿದ್ದ ನಿಂಗಯ್ಯ ಹಾಗು ನಾಗವ್ವನ ಕಿವಿಯಲ್ಲಿ, ಹುಡುಗನೊಬ್ಬ ಓಡೋಡಿ ಬಂದು "ದೇವರಾಜಣ್ಣ ಬರ್‍ತಾ ಅವ್ನೆ.." ಎಂದಾಗ ಒಳಗೊಳಗೆ ಅಳುಕಿದ ನಿಂಗಯ್ಯ ಹೆಂಡತಿಗೆ ಸನ್ನೆ ಮಾಡಿ ಎಬ್ಬಿಸಿಕೊಂಡು ಹೊರಟ. ಅಷ್ಟರಲ್ಲಿ ಆಗಲೇ ದೇವರಾಜು ಸ್ಯಾಮಣ್ಣನ ಮನೆ ಬಾಗಿಲಲ್ಲಿ ನಿಂತಿದ್ದ.

"ನಡಿಯಪ್ಪ ದೇವರಾಜು ಹೋಗನ ಇದೋ ಬಂದ್ವಿ......"

ಎಂದು ಹೊರಗೆ ಹೊರಟ ನಿಂಗಯ್ಯನನ್ನು ತಡೆದು

"ಇರ್ರಿ ಕೂತ್ಕಪ್ಪ ನಾನು ಇಲ್ಲಿಗೆ ಬಂದೆ. ಸ್ಯಾಮಪ್ಪನ್ನ, ಲಕ್ಷ್ಮಿನ್ನ ಮಾತಾಡ್ಸಕಂಡು ಹೋಗೋಣಾಂತ ಬಂದೆ......" ಎಂದ.

"ನಾನು ಊರಲಿರ್‍ಲಿಲ್ಲ. ಟೂರಲ್ಲಿದ್ದೆ. ನಿನ್ನೆ ತಾನೇ ಬಂದೆ. ಬಂದ ತಕ್ಷಣ ವಿಷ್ಯ ತಿಳ್ದು ಹಾಗೇ ಬಂದ್ಬಿಟ್ಟೆ...... ಅಪರಾಧಿಗಳು ಸಿಕ್ರಾ......?" ಎಂದು ಕೇಳಿದ.

ನಿಂಗಯ್ಯನಿಗೆ ಒಮ್ಮೆಲೆ ತಲೆಚಕ್ರ ಬಂದಂತಾಗಿ, ಕೆಳಗೆ ಬೀಳದಂತೆ ನಿಲ್ಲಲು ಆಸರೆಗಾಗಿ ಪಕ್ಕದಲ್ಲಿದ್ದ ನಾಗವ್ವನನ್ನೇ ಬಳಸಿದ. ದೇವರಾಜುನ ಮಾತು, ಠೀವಿ, ಪಟ್ಟಣದ ನಾಜೂಕು ಕಳೆಯಿಂದ ಕೂಡಿದ ವಿದ್ಯಾವಂತನ ಗತ್ತು, ಇಸ್ತ್ರಿ ಮಾಡಿದ ಶುಭ್ರವಾದ ಉಡುಗೆ ಜನರನ್ನು

ಸ್ಯಾಮಣ್ಣನ ಮನೆಯತ್ತ ಸೆಳೆಯತೊಡಗಿತು. ಸ್ಯಾಮಣ್ಣ ಚಿಕ್ಕ ಮಗನಿಗೆ ಕುರ್ಚಿ ತರಲು ಹೇಳಿದ. ಲಕ್ಷ್ಮಿ ನಿಂತಿದ್ದ ಕಡೆ ಅವಳ ಪಕ್ಕಕ್ಕೆ ಕುರ್ಚಿ ಹಾಕಿಕೊಂಡು ಕುಳಿತ ದೇವರಾಜು

"ನೀವಿಷ್ಟು ಜನರಿದ್ದೂ ಅಪರಾಧಿಗಳನ್ನು ಹಿಡ್ದು, ಶಿಕ್ಷಿಸ್ಲಿಕೆ ಆಗ್ಲಿಲ್ಲ ಅಂದ್ರೆ ಏನಾಯ್ತು......?" ಎಂದ.

ಅವನ ಮಾತಿನಿಂದೇಕೋ ಇರುಸುಮುರುಸಾಗಿ, ತಡಿಯಲಾರದೆ ಧರಣೆಪ್ಪನ ಅಪ್ಪ ಬಸಣ್ಣ, ಅಂದಿನಿಂದ ಇಂದಿನವರೆಗೆ ನಡೆದದ್ದೆಲ್ಲ ಚಾಚೂ ತಪ್ಪದೆ ವಿವರಿಸಿದ. ದೇವರಾಜು ಅದೇ ಠೀವಿಯಲ್ಲಿ ಮಾತಾಡತೊಡಗಿದ.

"ಸರಿ, ಸರಿ ನೀವು ಹೇಳೋದೆಲ್ಲ ಸರಿ. ದುಡ್ಡು, ಸೈಟು ಕೆಲಸ ಲಕ್ಷ್ಮಿಗೆ ಮುಂದಿನ ಜೀವನಕ್ಕೆ ದಾರಿ ಮಾಡಬಹುದು. ಅದು ಸರಿ. ಆದ್ರೆ ಅವಳ ಭವಿಷ್ಯ ಏನು? ಈ ಕ್ರೂರ ಸಮಾಜ ಒಂದು ಶೀಲಗೆಟ್ಟ ಹೆಣ್ಣಿಗೆ ಕೊಡೋ ಸ್ಥಾನಮಾನ ಏನಂತ ನಿಮಗ್ಗೊತ್ತಾ.....? ಈ ಅಸಹಾಯಕ, ಮುಗ್ಧ ಹೆಣ್ಣು ಒಬ್ಬಂಟಿಯಾಗಿ ಇಡೀ ಸಮಾಜನ ಎದುರಿಸಿ ಬದುಕೋಕೆ ಸಾಧ್ಯವಾ......? ಈಗಾಗ್ಲೆ ಹೆಚ್ಚುಕಮ್ಮಿ ಇಡೀ ರಾಜ್ಯಕ್ಕೆ ಪ್ರಚಾರ ಆಗಿರೋ ಇವಳ ಸುದ್ದಿ ನಾಳೆ ಇವಳು ಹೋದಡೆಯಲ್ಲೆಲ್ಲಾ, ಇವಳ ಹಿಂದೆ ಮುಂದೆ ಚರ್ಚೆ ಆಗದೆ ಇರುತ್ತಾ...? ಇದರ ಬಗ್ಗೆ ನಿಮಗೆ ಸ್ವಲ್ಪವಾದರೂ ಅರಿವಿದ್ದಿದ್ದರೆ ಇಷ್ಟು ದೊಡ್ಡ ನಾಟಕ ಆಡುತ್ತಿರಲಿಲ್ಲ.. ಅರೆ, ಹೋರಾಟ ಮಾಡೋದು, ಪ್ರಚಾರ ಮಾಡೋದು, ಪರಿಹಾರ ಕೇಳೋದು ಇದೆಲ್ಲ ಸುಲಭಾರೀ ಬಹಳ ಸುಲಭ.. ಆದರೆ, ನೀವೆಲ್ಲ ಸೇರಿ ಈ ಹೆಣ್ಣು ಶೀಲಗೆಟ್ಟಿದೆ ಅಂತ ಇಷ್ಟೆಲ್ಲ ಮಾಡಿರೋ ಪ್ರಚಾರನ ಈ ಮುಗ್ಧ ಹೆಣ್ಣು ಅರಗಿಸಿಕೊಳ್ಳೋದು ಹೇಗೆ.....? ಒಂದು ಹೆಣ್ಣಿನ ಶೀಲವನ್ನು ಮುಂದಿಟ್ಟುಕೊಂಡು ಹೋರಾಟ ಮಾಡಿ ಪ್ರಚಾರ ಪಡೆಯೋದು.., ಆ ನೆಪದಲ್ಲಿ ದೊಡ್ಡ ವ್ಯಕ್ತಿಗಳ ಜತೇಲಿ ಓಡಾಡಿ ನಾಯಕರಾಗೋದೂ..., ಇದೆಲ್ಲ ಅವಶ್ಯಕತೆ ಇತ್ತಾ.....? ಹೋಗ್ಲಿ ಇಷ್ಟೆಲ್ಲಾ ಮಾಡಿದಕ್ಕೆ ಅಪರಾಧಿಗಳು ಸಿಕ್ರಾ......?" ಒಂದು ಕ್ಷಣ ತನ್ನ ಮಾತು ನಿಲ್ಲಿಸಿ ಅಲ್ಲಿ ಸೇರಿದ್ದವರನ್ನೆಲ್ಲ ಸೂಕ್ಷ್ಮವಾಗಿ ಅವಲೋಕಿಸಿದ.

ಎಲ್ಲರೂ ಉಸಿರಾಡುವುದನ್ನು ಮರೆತು ತನ್ನತ್ತ ನೆಟ್ಟಿರುವ ನೋಟದಲ್ಲೆಲ್ಲ ತಾನೇ ಕಾಣಿಸಿ, ಪಕ್ಕಕ್ಕೆ ತಿರುಗಿದರೆ ಲಕ್ಷ್ಮಿಯ ಕಣ್ಣುಗಳಲ್ಲೂ ತನ್ನ ಛಾಯೆ! ಎದ್ದು ನಿಂತ ದೇವರಾಜು "ಲಕ್ಷ್ಮಿ ಇಲ್ಲಿ ಬಾ......" ಎಂದಾಕೆಯನ್ನು ಕರೆದ. ಅದೇನು ಗತ್ತು, ಅದೇನು ಠೀವಿ! ಕೀಲಿ ಕೊಟ್ಟ ಬೊಂಬೆಯಂತೆ ಲಕ್ಷ್ಮಿ ಪಕ್ಕಕ್ಕೋಗಿ ನಿಂತಳು. ಆಕೆಯನ್ನು ಬಲ ತೋಳಿನಿಂದ ಬಳಸಿ ಹಿಡಿದು ಅಲ್ಲಿ ನೆರದಿದ್ದವರನ್ನು ಉದ್ದೇಶಿಸಿ ಮಾತಾಡತೊಡಗಿದ.

"ನೋಡ್ರಿ ಎಲ್ಲೂ್ರ ಹೇಗಿದ್ದ ಹುಡುಗಿ ಹೇಗಿದಾಳೆ ಅಂತ...... ಇವ್ಳಿಗೆ ಬೇಕಾಗಿರೋದು ನಿಮ್ಮ ಹೋರಾಟ, ಚಳುವಳಿ, ನಿಮ್ಮ ಹಣ, ಅಂತಸ್ಥಲ್ಲ. ಆದರೆ, ಇವ್ಳಿಗೆ ಬೇಕಾಗಿರೋದು ನೆಮ್ಮದಿಯಾದ ಬಾಳು, ಗೌರವವಾದ ಬಾಳು. ಇಷ್ಟೆಲ್ಲ ರಂಪ ರಾದ್ಧಾಂತ ಮಾಡುವ ಬದಲು, ಈ ಅಸಹಾಯ ಹೆಣ್ಣುಮಗಳ ಶೀಲವನ್ನು ಮುಂದೆ ಮಾಡಿ, ಹೋರಾಟ ಮಾಡಿ. ಪ್ರಚಾರ ಮಾಡಿ, ಪರಿಹಾರ ಕೇಳಿ ಲೀಡರ್‌ಗಳಾಗುವ ಬದಲು, ಆಗಲೇ ಆ ಕ್ಷಣವೇ ಇವಳ ಕುತ್ತಿಗೆಗೆ ಒಂದು ತಾಳಿ ಕಟ್ಟಿದ್ದಿದ್ರೇ ಇವಳ ಬಾಳು ನೇರವಾಗುತ್ತಿರಲಿಲ್ವೆ? ಈಕೆಗೆ ತಲೆಯೆತ್ತಿ ಬದುಕುವ ಅವಕಾಶ ಕಲ್ಪಿಸಿದಂತಾಗುತ್ತಿರಲಿಲ್ವೆ? ಹೇಳಿ, ಹೇಳಿ ನೀವೇ ಹೇಳಿ........"

ನೆರೆದಿದ್ದವರಲ್ಲಿ ಗುಸುಗುಸು ಪ್ರಾರಂಭ ಆಯ್ತು. ನಿಂಗಯ್ಯ, ನಾಗವ್ವ ಗರ ಬಡಿದವರಂತೆ ನಿಂತಿದ್ದರು. ದೇವರಾಜು ಒಮ್ಮೆ ಸುತ್ತಲೂ ಕಣ್ಣಾಯಿಸಿದೊಡನೆ ಅವನ ಬರುವನ್ನು ತಿಳಿಸಿದ ಆ ಹುಡುಗ ಮತ್ತು ಅವನೊಡನಿದ್ದ ಚಿಕ್ಕ ಗುಂಪು "ಹೌದು ಹೌದು....." ಎಂದು ಅರಚ ತೊಡಗಿತು. ಒಡನೇ ಎಲ್ಲೆಲ್ಲು ಅದೇ ಶಬ್ದವಾಯ್ತು. ಹಿರಿಯರೂ ಹೌದೆಂದು ತಲೆಯಾಡಿಸತೊಡಗಿದರು.

ದೇವರಾಜು ಆವೇಶದಿಂದ, ಭಾವತುಂಬಿ ಚೀರಿ ಚೀರಿ ಹೇಳತೊಡಗಿದ

"ಆ ಹೆಣ್ಣಿಗೆ ನ್ಯಾಯ ಒದಗಿಸಲು, ಬಾಳು ಕೊಡಲು ಪ್ರಚಾರ ಬೇಕಿಲ್ಲ ಹೋರಾಟದ ಅಗತ್ಯವಿಲ್ಲ. ಸರ್ಕಾರ ಕೊಡುವ ಪರಿಹಾರದ ಪರಿವೆಯೇ ಬೇಡ. ಆದರೆ, ದೊಡ್ಡ ಮನಸ್ಸಿರಬೇಕು, ವಿಶಾಲವಾದ ಹೃದಯವಿರಬೇಕು. ಜೀವನಪೂರ್ತಿ ಇವಳಿಗೆ ಆಧಾರವಾಗಿ ನೆರಳಾಗಿ ಬದುಕುವೆ ಎನ್ನುವ ಆತ್ಮವಿಶ್ವಾಸ ಬೇಕು. ಊರೇನೇ ಅನ್ನಲಿ ಯಾರೇನೇ ಕಿರುಚಲಿ ಎಲ್ಲವನ್ನೂ ತಿರಸ್ಕರಿಸಿ ನಡೆಯುವ ಗುಂಡಿಗೆ ಬೇಕು.."

ಅಷ್ಟೆ ಎಲ್ಲೆಲ್ಲೂ ಜಯಕಾರ..... ಹರ್ಷೋದ್ಗಾರ.....

ಲಕ್ಷ್ಮಿಗೆ ಸಂಬಂಧಿಸಿದ ಎಲ್ಲಾ ದಾಖಲೆಪತ್ರಗಳು ಹಾಗೂ ಕೆಲಸದ ಆರ್ಡರೊಂದಿಗೆ ನಾಲ್ಕು ದಿನಗಳ ನಂತರ ಊರಿಗೆ ಹಿಂದಿರುಗಿದ ಧರಣೆಪ್ಪನಿಗೆ ಕೇರಿಯಲ್ಲಿ ದೊಡ್ಡದಾಗಿ ಚಪ್ಪರ, ತಳಿರುತೋರಣಗಳು ಕಾಣಿಸಿದವು. ಇಡೀ ಕೇರಿ ನಿಂಗಯ್ಯನ ಮನೆಯತ್ತಿರ ನೆರೆದಿತ್ತು. ಅವನ ಮನೆಯ ಮುಂದಿದ್ದ ದೊಡ್ಡ ಪೆಂಡಾಲಿನಲ್ಲಿ ಆ ಕ್ಷೇತ್ರದ ಶಾಸಕರು, ತಾಲೂಕಿಗೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು, ಮಹಿಳಾ ಸಂಘದ ಪದಾಧಿಕಾರಿಗಳು, ಪತ್ರಕರ್ತರು ಸೇರಿದ್ದರು. ಅವರೆಲ್ಲರ ನಡುವಲ್ಲಿ ಲಕ್ಷ್ಮಿ, ದೇವರಾಜು ಮದುಮಕ್ಕಳಾಗಿ ಕಂಗೊಳಿಸುತ್ತಿದ್ದರು!

ಯಾರೋ 'ಗಟ್ಟಿಮೇಳ.....' ಎಂದೊಡನೆ ಮೇಳ ಮೊಳಗಿತು. ಅದರೊಂದಿಗೆ ದೇವರಾಜು ಲಕ್ಷ್ಮಿಯ ಕೊರಳಿಗೆ ತಾಳಿ ಕಟ್ಟಿದ. ಆಗಲೇ ಬಂದ ಕುಲಕರ್ಣಿ ಧರಣೆಪ್ಪನ ಕೈಯಲ್ಲಿದ್ದ ಲಕೋಟೆಯನ್ನು ಇಸಿದು ದೇವರಾಜನ ಕೈಗಿತ್ತು, ಅವನನ್ನು ಆಲಂಗಿಸಿಕೊಂಡ. ಎಲ್ಲೆಲ್ಲೂ ಮತ್ತೆ ಜಯಕಾರ.....!

ಮೇಳದ ಸದ್ದು, ಜಯಕಾರಗಳ ನಡುವೆ, ಅಲ್ಲಿ ತುಂಬಿದ್ದ ಸಡಗರ, ಸಂಭ್ರಮದ ಮಧ್ಯೆ ಬೆಪ್ಪಾಗಿ, ಕಣ್ಣು ಬಿಟ್ಟುಕೊಂಡು ನಿಂತ ಧರಣೆಪ್ಪ.

✦ ✦

ಆಸರೆ

ಎಂತಹ ಪ್ರೀತಿಯವ್ವಾ ನಿಮ್ಮದು? ಎಷ್ಟು ಪ್ರೀತಿಸುತ್ತಾನವ್ವ ನಿನ್ನ?"

ಅಪ್ಪಯ್ಯನ ಪ್ರಶ್ನೆಗೆ ಎದೆಯುಬ್ಬಿಸಿ, ಹೆಮ್ಮೆಯಿಂದ ಉತ್ತರಿಸಿದಳು ಮಗಳು ಗಂಗ.

"ಆ ಪ್ರೀತಿ ಎಷ್ಟಂತ ಹೇಳ್ಲಪ್ಪಾ...? ಹೇಗಂತ ಹೇಳ್ಲಿ...?"

"ಹೇಳಲಾಗದಂತಹ ಪ್ರೀತಿಯೇನು ಅದು....?"

ತುಟಿಗಳಲ್ಲಿ ಹುಸಿನಗುವಿದ್ದರೂ ಮುಖದಲ್ಲಿ ಆಶ್ಚರ್ಯ ಸೂಸಿ ಕೇಳಿದ ಅಪ್ಪಯ್ಯ. ಆ ಮಾತಿಗೆ ತಾನೂ ಮುಖದಲ್ಲಿ ಹುಸಿಕೋಪ ತೋರಿ, ಮುಖ ತಿರುವಿ ಹೇಳಿದಳು ಗಂಗ



"ಹಾಸ್ಯ ಮಾಡಬೇಡಪ್ಪ. ನಮ್ಮ ಪ್ರೀತಿ ಆ ಸೂರ್ಯನಿಗಿಂತಲೂ ಎತ್ತರವಾದ್ದು...... ಅದಕ್ಕಿಂತಲೂ ಪ್ರಕಾಶವಾದ್ದು.........."

ಅಪ್ಪಯ್ಯನ ಮುಖದಲ್ಲಿ ಕಂಡೂ ಕಾಣದಂತೆ ಚಿಂತೆಯ ಗೆರೆಗಳು ಮೂಡಿ ಮರೆಯಾದವು. ಗಂಗಳ ಲಕ್ಷ್ಯಕ್ಕದು ಬೀಳಲಿಲ್ಲ. ಮಗಳನ್ನು ಕೆಣಕುತ್ತ ಕೇಳಿದ

"ಸೂರ್ಯನಿಗಿಂತಲೂ ಎತ್ತರವಾದ್ದು ಅಂದ್ರೆ ಕೈಗೆಟು ಕ್ದಂತದ್ದು....... ಅದಕ್ಕಿಂತಲೂ ಪ್ರಕಾಶವಾದ್ದು ಅಂದ್ರೆ ಧಗಧಗನೆ ಹೊತ್ತಿ ಉರಿದುಹೋಗದಿಲ್ಲೇನೆ ಹುಡುಗಿ...?"

ಅವನ ಮಾತಿಗೆ ಗಂಗಳಿಗೆ ನಗು ಬಂತು. ಅಪ್ಪಯ್ಯನಿಗೆ ಪ್ರೀತಿಸುವುದೊಂದೇ ಗೊತ್ತು. ಅದರ ಆಳ, ಎತ್ತರ ಬಗ್ಗೆ ಅರ್ಥವೇ ಆಗದು.

"ಅಪ್ಪಾ, ನನ್ನ ಮ್ಯಾಲೆ ನಿನಗೆ ಪ್ರೀತಿ ಇಲ್ಲೇನು......?"

ಮಗಳ ಮಾತಿಗೆ ಇದೆಯೆಂದು ತಲೆ ಹಾಕಿದ ಅಪ್ಪಯ್ಯ.

"ಮತ್ತೆ ನೀನು ಒಳ್ಳೇನಲ್ಲೇನೂ.......?"

"ನೀನೇ ಹೇಳು......" ಅಪ್ಪಯ್ಯ ನಸುನಕ್ಕ.

"ಹಾಗಿನ್ನು ಮತ್ತೆ. ಅಪ್ಪಯ್ಯ, ಅವ್ನು ನನ್ನ ಭಾಳ ಪ್ರೀತಿ ಮಾಡ್ತಾನೆ. ಕೊನೆತನ್ಕ ನಮ್ಮ ಜತೇಗೆ ಇರ್ತೀನಿ ಅಂತ ಒಪ್ಗಂಡಾನೆ... ಅಲ್ಲ ಅಪ್ಪಯ್ಯ, ಅವ್ನು ನನ್ನ ಅಷ್ಟೊಂದು ಪ್ರೀತಿ ಮಾಡ್ತಾನಂದ್ರೆ ಅವ್ನು ಎಲ್ಲಾ ನಿನ್ನ ತರಹನೇ ಅಲ್ವಾ......? ನಿನ್ನಂತಹ ಮನ್ಸು, ಹೃದಯ ಇರೋರ್ಗೆ ಮಾತ್ರ ಪ್ರೀತಿ ಮಾಡಕೆ ಬರೋದು. ಅದಕ್ಕೆ, ನಾನು ಅವ್ನ ಪ್ರೀತಿಗೆ ಹೂಂ ಅಂದ್ಬಿಟ್ಟೆ. ತಪ್ಪಾಯ್ತೇನಪ್ಪಯ್ಯ...?"

ಮಗಳ ಮುಗ್ಧತನಕ್ಕೆ, ತನ್ನ ಪ್ರೀತಿಯ ಮೇಲಿಟ್ಟಿರುವ ಅವಳ ನಂಬಿಕೆಗೆ ದಿಗಿಲಾಗಿ ಏನು ಉತ್ತರಿಸುವುದೆಂದು ತಿಳಿಯದೆ ಚಡಪಡಿಸಿದ ಅಪ್ಪಯ್ಯ.

ನೆಪಕ್ಕೆ ಬೆಂಗಳೂರಲ್ಲಿ ಕಾಲೇಜು ಮುಗಿಸಿದ ಸೂರಳ್ಳಿ ಸರದಾರ ಸಂಗಪ್ಪನ ಮಗ ಚೆಲುವರಾಜು, ಅವನ ಭವಿಷ್ಯ, ಅಪ್ಪನ ಆಪ್ತ ಸ್ನೇಹಿತ ಸೂರೇನಳ್ಳಿಯ ಎಕ್ಸೈಜು ಮಂತ್ರಿ ಕರಿಯಪ್ಪನ ಕೃಪಾಕಟಾಕ್ಷದಿಂದ ಸ್ಪಿರಿಟ್ ಫ್ಯಾಕ್ಟರಿಗೆ ಸಿಕ್ಕ ಪರ್ಮಿಟ್‌ನಲ್ಲಿ ಭದ್ರವಾಗಿತ್ತು. ಸೂರೇನಳ್ಳಿಯಿಂದ ಇನ್ನೂರು ಕಿ.ಮೀ. ದೂರವಿದ್ದ ವಿರಾಜಪಟ್ಟಣ ಫ್ಯಾಕ್ಟರಿಗೆ ಬಲು ಅನುಕೂಲವಾಗಿತ್ತು. ಅಲ್ಲಿಯೇ ಅಕ್ಕಪಕ್ಕ ಪ್ರಶಸ್ತವಾದ ಜಾಗದ ತಲಾಶ್‌ನಲ್ಲಿ ಅಪ್ಪ, ಮಗ ತೊಡಗಿದಾಗ ವಿರಾಜಪಟ್ಟಣದಿಂದ ಇಪ್ಪತ್ತು ಮೈಲಿ ದೂರವಿದ್ದು, ಐದು ಎಕರೆಯ ವಿಸ್ತಾರದಲ್ಲಿ ಮೈತಳೆದಿದ್ದ ಮಾವು, ಸೀಬೆ, ಸಪೋಟ, ಸೀತಾಫಲಗಳು ಕಂಡು ಬಂದವು. ಆ ಮಣ್ಣಿನ ಒಂದೊಂದು ಕಣದಲ್ಲೂ ಅದರ ಒಡೆಯನ ಒಂದೊಂದು ಕಣವೂ ಬೆರೆತು, ಬೆಸೆದು ಒಡಮೂಡಿದ್ದ ಆ ಸುಂದರ ತೋಟವೇ ಸ್ಪಿರಿಟ್ ಫ್ಯಾಕ್ಟರಿಗೆ ಪ್ರಶಸ್ತವಾದ ಜಾಗವೆಂದು ಸ್ಪಿರಿಟ್‌ನ ಸರದಾರರ ಹಿತೈಷಿಗಳು ಒಕ್ಕೊರಲಿನಿಂದ ಹೇಳಿದಾಗ ಕಲೆಗಾರನಾದ ಚೆಲುವರಾಜು ಆ ತೋಟದ ಒಡೆಯ ಮುತ್ತಯ್ಯನ ಏಕೈಕ ಕುವರಿ, ಸಹಜ ಸುಂದರಿ ಗಂಗಳ ಹಿಂದೆ ಮುಂದೆ ಸುತ್ತತೊಡಗಿದ್ದು, ಕಪಟವರಿಯದ ಮುಗ್ಧೆ ಗಂಗಳನ್ನು ಒಲಿಸಿಕೊಳ್ಳುವುದು ಚಿಟಿಕೆ ಹೊಡೆದಷ್ಟು ಸುಲಭವಾಯ್ತು.

ಅತ್ತೆ ಕಮಲಮ್ಮನ ಊರಿನ ಜಾತ್ರೆಯಂದು ಬಯಲಿಗೆ ಬಂದ ಗಂಗಳ ಹಿಂದೆ,

ಮುಂದೆ ನಿದ್ರಾಹಾರಗಳನ್ನು ತೊರೆದು, ಆಕೆಗಾಗಿ ಪ್ರಾಣ ಬಿಡುವವನ ಪೋಸಿನಲ್ಲಿ ಕಳೆಗೆಡತೊಡಗಿದಾಗ ಮೊದಲೇ ಭಾವಜೀವಿ ಗಂಗಾಳನ್ನು ಒಂದು ತೆರನ ಚಡಪಡಿಕೆ, ಕಾತರ, ಭಯ ಮುತ್ತುತ್ತಿರಲು, ಸಮಯ ನೋಡಿ ಅಸ್ತ್ರ ಪ್ರಯೋಗಿಸಿದ್ದ ಚೆಲುವರಾಜು.

"ಗಂಗಾ....." ಎಂದು ಮೃದುಮಧುರವಾಗಿ ಕರೆದು, ಅಪ್ಪಯ್ಯನ ಹೊರತು ತನ್ನನ್ನು ಹೀಗೆ ಹೆಸರಿಡಿದು ವಾತ್ಸಲ್ಯದಿಂದ ಕರೆದ ಗಂಡಸು ಈತನೇ ಎಂದು ಸೋಜಿಗಪಡುತ್ತ ಕಣ್ಣರಳಿಸಿ ನಿಂತಿದ್ದವಳನ್ನು ಸಮೀಪಿಸಿ

"ನನ್ನೆಸರು ಚೆಲುವ. ನಮ್ಮೂರು ಸೂರಳ್ಳಿ. ನಿನ್ನತ್ರ ಮಾತಾಡ್ಬೇಕಂತ ಎಷ್ಟು ದಿನಗಳಿಂದ ಕಾಯ್ತ ಇದ್ದೀನಿ ಗೊತ್ತಾ......? ನಿನ್ನತ್ರ ಮಾತಾಡೋದು ಬಹಳ ಇದೆ. ಅದಕ್ಕೆ... ಅದಕ್ಕೆ ಕೆರೆದಂಡೇಲಿರೋ ಆ ಮಲ್ಲಿಗೆ ಮಂಟಪದಾಗೆ ಕಾದಿರ್ತೀನಿ ಬರ್ತಿಯಾ.....?"

ಎಂದವನು ಅವಳ ಉತ್ತರಕ್ಕೂ ಕಾಯದೆ

"ಬರದಿದ್ರೆ ನಾಳೆ ಕೆರೆಯಾಗೆ ನನ್ನ ಹೆಣ ತೇಲುತ್ತೆ ಅಷ್ಟೆ....."

ಎಂದು ನೇರ ಅವಳ ಹೃದಯಕ್ಕೆ ನೆಡುವ ಬಾಣ ಒಗೆದು ನಡೆದುಬಿಟ್ಟ.

ಸೂಕ್ಷ್ಮ ಮನಸ್ಸಿನ ಹೆಣ್ಣು ಸಣ್ಣಗೆ ನಡುಗಿತ್ತು. ಕಣ್ಣಾಲಿಗಳು ತುಂಬಿ ನಿಂತಿದ್ದವು.

"ಅವ್ನಾಡೋದು ಸತ್ಯ ಕಣೇ... ಕೆರ‍್ಯಾಗೆ ಮುಳ್ಗಿ ಸತ್ರೂ ಸತ್ನೆ..." ಜೊತೆಗಾತಿಯರೆಂದರು.

ಕಣ್ಣಂಚಿನ ನೀರು ಬಳಕ್ಕನೆ ಕೆನ್ನೆಯ ಮೇಲೆ ಉರುಳಿತು.

"ನಾನು ಹೋಗ್ದಿದ್ರೆ ಅವ್ನ್ಯಾಕೆ ಸಾಯ್ಬೇಕು......?"

ತಡವರಿಸುತ್ತ ಬಂದ ಆ ಪ್ರಶ್ನೆಗೆ ಹಣೆಚಚ್ಚಿಗೊಂಡು, ಗೊಳ್ಳೆಂದ ಗೆಳತಿಯರು

"ಅಯ್ಯೋ! ಯಾಕಂದ್ರೆ ಅವ್ನು ನಿನ್ನ ಪ್ರೀತಿ ಮಾಡ್ತಾನೆ ಅದಕ್ಕೆ......." ಎಂದರು.

ಆ ಮಾತುಗಳೇ ಕಿವಿಯಲ್ಲಿ ಮೊಳಗಿ, ಅವಳನ್ನು ಹೊಸಲೋಕಕ್ಕೆ ಎಳೆದೊಯ್ದುವು. ಮಧುರ ಭಾವವೊಂದು ತನುಮನದಲ್ಲಿ ಹರಿದಾಡಿ ಅವಳನ್ನು ಮಲ್ಲಿಗೆ ಮಂಟಪದತ್ತ ಸೆಳೆದಿತ್ತು.

ಅಪ್ಪಯ್ಯನಿಗೆ ಮಗಳ ಮುಗ್ಧತನದ ಅರಿವಿತ್ತು. ಆ ತೋಟ, ಗಂಗ ಅವನ ಎರಡು ಕಣ್ಣುಗಳು. ಮೃದುಮನಸ್ಸಿನ, ಭಾವಜೀವಿ ಗಂಗ ಮದುವೆಗೆ ಬೆಳೆದು ನಿಂತರೂ ಅವನ ತಟ್ಟೆಯಲ್ಲೇ ಉಣ್ಣುವುದನ್ನು, ಅವನ ಮಡಿಲಲ್ಲಿ ತಲೆಯಿಟ್ಟು ಮಲಗುವುದನ್ನು ಬಿಡದಾಕೆ. ಅವನಿಗವಳು, ಅವಳಿಗವನು ಎಂಬಂತೆ ಇದ್ದರವರು. ಮಗಳ ಲಾಲನೆಪಾಲನೆಗೆ ಜೀವನವನ್ನೆ ಮೀಸಲಿಟ್ಟ ಅಪ್ಪಯ್ಯ ತಾಯಿ ಇಲ್ಲದಿದ್ದರೂ ಬೇಕೆನಿಸದಂತಹ ವಾತ್ಸಲ್ಯದ ಹೊಳೆಯನ್ನ ಹರಿಸುತ್ತಿದ್ದ.

ಅವನ ಪ್ರೀತಿಯ ನೆರಳಲ್ಲಿ ಬೆಚ್ಚಗಿದ್ದವಳು ಗಂಗ. ಆಕೆ ಬಿಸಿಲಿಗೆ ಸ್ವಲ್ಪ ಬಳಲಿದರೂ, ಚಳಿಗೆ ನಿಂತು ನಡುಗಿದರೂ ಕಂಗೆಡುವ ಅಪ್ಪಯ್ಯ ಮಗಳ ತಲೆಯನ್ನು ಮಡಿಲಲ್ಲಿಟ್ಟುಕೊಂಡು, ಹಣೆ ಸವರುತ್ತ ಆರೈಕೆ ಮಾಡುವುದರಲ್ಲೇ ಜೀವನದ ಸಾರ್ಥಕತೆ ಪಡೆಯುವವನು. ಅವಳ ಮುಖದ ಮೇಲಿನ ನಗುವೇ ಅವನಿಗೆ ಸಂಜೀವಿನಿ, ಅವನ ಪ್ರೀತಿಯೇ ಅವಳಿಗೆ ರಕ್ಷಾಕವಚ. ಇಂತಹ ಮಗಳಿಗೆ ತಕ್ಕನಾದ ವರ ಹುಡುಕುವುದೇ ಸಮಸ್ಯೆಯಾಗಿತ್ತು ಅವನಿಗೆ.

ಸದಾ ನಗುತ್ತಲಿರುವ ಗಂಗ, ಮನಸ್ಸಿಗೆ ಸ್ವಲ್ಪ ಬೇಸರವಾದರೂ ಅವನ ಎದೆಗೊರಗಿ, ಅವನು ಅವಳ ತಲೆ ನೇವರಿಸುತ್ತಿದ್ದರೆ ಕಣ್ಮುಚ್ಚಿ ಎಲ್ಲಾ ಮರೆತು, ಮರುಕ್ಷಣ ಕಿಲಕಿಲ ನಗುವ ಹುಡುಗಿ. ಯಾರನ್ನೂ ದ್ವೇಷಿಸದ ಅವಳ ಕಡುವೈರಿ ಎಂದರೆ ಒಂಟಿತನ ಮಾತ್ರ. ಆದ್ದರಿಂದಲೇ ಹೆಜ್ಜೆ ಹೆಜ್ಜೆಗೂ ಅವಳಿಗೆ ಆಸರೆಯಾಗಿದ್ದವನು ಅವನು. ಮತ್ತೊಂದು ಅಂತದ್ದೆ ಆಸರೆ ಮಗಳಿಗೆ ಒದಗಿಸುವುದೇ ಅವನ ಜೀವನದ ಏಕೈಕ ಗುರಿಯಾಗಿತ್ತು. ಆದರೆ ಅವನ ನಿರೀಕ್ಷೆ ಆಸೆಯೆಲ್ಲಾ ಹುಸಿಯಾಗಿತ್ತು. ಅವನ ಹೃದಯ ಒಡೆದರೂ ಅವಳಿಗೆ ಅನುಮಾನಬಾರದಂತೆ ತನ್ನ ಭಾವನೆಗಳನ್ನು ಅಡಗಿಸಿಕೊಂಡ ಅವಳಿಗೆ ಮಗಳು ಮೆಚ್ಚಿದವನನ್ನು ತಿರಸ್ಕರಿಸುವ ಧೈರ್ಯವೂ ಇರಲಿಲ್ಲ.

ಒಂದು ಒಳ್ಳೆಯ ದಿನ ನೋಡಿ ಹೆಣ್ಣು ನೋಡುವ ಶಾಸ್ತ್ರ ಮಾಡಲು ಬಂದಿಳಿದರು ಚೆಲುವನ ಅಪ್ಪ, ಅವ್ವ, ನೆಪಕ್ಕೆ ಹೆಣ್ಣು ನೋಡಿದ ಶಾಸ್ತ್ರ ಮುಗಿದೊಡನೆ ಗಂಗಳನ್ನು ತೋಟಕ್ಕೆ ಕರೆದೊಯ್ದ ಚೆಲುವರಾಜು. ಅವರತ್ತ ಹೋಗುತ್ತಲೇ ಸಂಗಪ್ಪ

"ಹೆಣ್ಣಿನ ಬಗ್ಗೆ ನಮ್ದೇನು ಚಕಾರ ಇಲ್ಲ. ಮುಂದಿನ ವ್ಯವಹಾರ ಕುದುರ್ಸಾನ......" ಎಂದು ಮಾತಿಗೆ ತೊಡಗಿದ. ಅಪ್ಪಯ್ಯನಿಗೆ ಮಾತಾಡಲು ಅವಕಾಶವೇ ಕೊಡಲಿಲ್ಲ. ಅವಕಾಶಸಿಕ್ಕಾಗ ಮಾತಾಡುವ ಸ್ಥಿತಿಯಲ್ಲಿ ಅಪ್ಪಯ್ಯ ಇರಲಿಲ್ಲ. ಒಂದೇ ಮಾತಿನಲ್ಲಿ ಹೇಳಿಬಿಟ್ಟ ಸಂಗಪ್ಪ.

"ನಮ್ಮ ಘನತೆ, ಅಂತಸ್ತಿಗೆ ತಕ್ಕಂತ ಹೆಣ್ಣುಗಳು ಬೇಕಾದಷ್ಟಿವೆ. ಆದ್ರೆ ನಮ್ಮುಡುಗ ನಿಮ್ಮುಡುಗೀನೆ ಬೇಕಂತಾನೆ. ಹುಡ್ಗಿ ವಿಚಾರ ಏನಾರ ಇರ್ಲಿ ಮನೆ ತುಂಬೋದಂತು ನಮ್ಮ ಘನತೆಗೆ ತಕ್ಕಂತಿರ್ಬೇಕು. ಹೆಚ್ಗೇನಿಲ್ಲ ಹುಡುಗನ್ಗೆ ಎರಡು ಲಕ್ಷ ಕ್ಯಾಶು, ಹುಡ್ಗಿಗೆ ಅರವತ್ತೊಲ ಬಂಗಾರ, ಇಪ್ಪತ್ತೊಲ ಬೆಳ್ಳಿ, ಮದ್ವೆ ಖರ್ಚು ಇಷ್ಟಾತು. ಮ್ಯಾಲೆ ಹುಡ್ಗನ್ಗೆ ಬಟ್ಟೆ, ಸೂಟು, ವಾಚು, ಉಂಗುರು, ಸರ ಇತ್ಯಾದಿ ಇತ್ಯಾದಿ....... ಈ ಶ್ರಾವಣಕ್ಕೆ ನಮ್ಮುಡಗನ ಮದ್ವೆ ಆಗೇ ತೀರ್ಬೇಕು. ನಿಮ್ಮುಡಿಗಿ ಆದ್ರೂ ಸೈ ಬ್ಯಾರೆ ಆದ್ರೂ ಸೈ......"

ಅಪ್ಪಯ್ಯ ತುಟಿಬಿಚ್ಚಲೇ ಇಲ್ಲ. ಅವನ ಮೌನ ಕಂಡು ತಾನೇ ಮಾತಾಡಿದ

"ನೋಡ್ರಿ ಮುತ್ತಯ್ಯನೋರೆ, ನಿಮ್ಗೆ ಹಣ ಕೊಡಾಕೆ ತೊಂದ್ರೆ ಆತಂದ್ರೆ ತೋಟನ ನಮ್ಮುಡುಗನ ಹೆಸರಿಗೆ ಬರ್ದು ಬಿಡ್ರಿ, ಸಾಕ್ನೋಡ್ರಿ ನಾವೇನು ಕೇಳಲ್ಲ......"

ದೂರದಲ್ಲಿ ಮಗಳು ಚೆಲುವರಾಜನ ಜತೆಗೆ ನಗುತ್ತಾ ಬರುತ್ತಿದ್ದಳು. ಮಗಳ ನಗು ಕಂಡಿದ್ದೆ ಅಪ್ಪಯ್ಯ ಸಂಗಪ್ಪ ಹೇಳಿದ್ದಕ್ಕೆಲ್ಲ ತಲೆಯಾಡಿಸಿಬಿಟ್ಟ.

ಏನೊಂದು ಅರಿಯದ ಗಂಗಳಲ್ಲಿ ಮಾತ್ರ ಸಡಗರ, ಸಂಭ್ರಮದೊಂದಿಗೆ ನೂರಾರು ಬಯಕೆಗಳು ತುಂಬಿ ನಿಂತವು. ಆದರೆ ಒಂದೇ ತಿಂಗಳಿಗೆ ಹೆಂಡತಿಯನ್ನು ತನ್ನೂರಿಗೆ ಹೊರಡಿಸಿದ ಚೆಲುವರಾಜು. ಅಪ್ಪಯ್ಯ ಅಳಲೂ ಇಲ್ಲ, ನಗಲು ಇಲ್ಲ. ನೋವು, ನಲಿವು ಏನೊಂದು ಪ್ರಕಟಿಸದೆ ನಿರ್ಲಿಪ್ತನಂತಿದ್ದ. ತನ್ನ ಕೊರಳನ್ನು ತಬ್ಬಿ ಬಿಕ್ಕುತ್ತಿದ್ದ ಗಂಗಳ ತಲೆಯನ್ನೂ ನೇವರಿಸದಾದ. ಆದರೆ ಆಕೆ ಹೊರಟು ಹೋದೊಡನೆ ಮಂಕಾಗಿ, ಸೊರಗುತ್ತ ಹಾಸಿಗೆಯಿಡಿದ ಅಪ್ಪಯ್ಯ. ಮಾವನನ್ನು ತಣ್ಣಗಾಗಿಸಲು ಸುಲಭ ವಿಧಾನ

ತಂದೆ ಮಗಳ ಅಗಲಿಕೆ ಎಂದು ಮನದಟ್ಟಾದ ಮರುಗಳಿಗೆ ಒಂದೇ ಹಟದಿಂದ ಹಿಂದೆಯೇ ಅವಳನ್ನು ತನ್ನೂರಿಗೆ ಹೊರಡಿಸಿಬಿಟ್ಟ ಚೆಲುವರಾಜು.

ಗಂಗಳಿಲ್ಲದ ಮನೆ, ತೋಟ ಮಸಣವಾಗಿ ಅಪ್ಪಯ್ಯ ಹಾಸಿಗೆ ಸೇರಿದರೆ, ಅವರಿಬ್ಬರ ಉಸಿರಾದ, ಕೇಳುವವರೇ ದಿಕ್ಕಿಲ್ಲದಂತಾದ ಮರಗಳು ಒಂದೊಂದಾಗಿ ಬುಡಸಮೇತ ನೆಲಕಚ್ಚಿಕೊಳ್ಳತೊಡಗಿದವು.

ಅತ್ತ ಗಂಗಾಳದ್ದು ಅದೇ ಪಾಡು. ಗಂಗ ತನ್ನ ಮನೆಹೊಕ್ಕ ಕ್ಷಣದಿಂದಲೇ ತನ್ನ ನಿಜರೂಪ ತೋರುತ್ತ, ಅವಳಿಗೆ ಅಪರೂಪನಾಗಿ ಹೋದ ಚೆಲುವರಾಜು. ಮನೆ ತುಂಬ ಜನರಿದ್ದೂ ಆಕೆ ಒಂಟಿ. ಅವಳೆಂದೂ ನೋಡದ ದರ್ಪ, ದಬ್ಬಾಳಿಕೆ, ಎಂದೂ ಅನುಭವಿಸದ ಒಂಟಿತನ ಒಳಗೊಳಗೆ ಆಕೆಯನ್ನು ಸವೆಸತೊಡಗಿದವು. ದೊಡ್ಡ ಮನೆಯ ಮಹಡಿ ಮೇಲಿನ ಒಂಟಿ ಕೋಣೆಯ ನೀರವತೆಯೆ ಭೂತವಾಗಿ ಮೇಲೆರಗಿದಂತೆ ಭಾಸವಾಗಿ ರಾತ್ರಿ ಮುದುರಿ ಕೂತು, ಜೀವ ಬಿಗಿಹಿಡಿದು ಭಯದಿಂದ ತತ್ತರಿಸುತ್ತ, ಬೆಚ್ಚುತ್ತ "ಅಪ್ಪಯ್ಯ....... ಅಪ್ಪಯ್ಯ.........." ಎಂದು ಕನವರಿಸತೊಡಗಿದಳು.

'ಯಾರ್ದೋ ಕಣ್ಣು ಬಿದ್ದೈತೆ' ಎಂದು ಪೊರಕೆಯಿಂದ ನೀವಾಳಿಸಿದರು ಮೊದ ಮೊದಲು ಮನೆಯವರು. ಅನಂತರ ಯಾರೋ ಮಾಟ ಮಾಡಿಸಿರಬೇಕೆಂದು ಕಟ್ಟು ಮಾಡಿಸುತ್ತ, ಗಾಳಿ ಮೆಟ್ಟಿರಬಹುದೆಂದು ಮಾಂತ್ರಿಕನನ್ನು ಕರೆಸುತ್ತ ಅವರ ಕಾಳಜಿ ಹೆಚ್ಚಾದಂತೆ ಗಂಗ ಪೂರ್ತಿ ಮಂಕಾದಳು. ಕೊನೆಗೆ ಊರಿನ ಜನರೆಲ್ಲ ಸೂರೇನಳ್ಳಿ ಸರದಾರ ಸಂಗಪ್ಪನ ಸೊಸೆಗೆ ತಲೆ ಸರಿಯಿಲ್ಲ ಎಂದು ಮಾತಾಡಿಕೊಳ್ಳುವ ಹೊತ್ತಿಗೆ ತೋಟದಲ್ಲಿ ಫ್ಯಾಕ್ಟರಿಯ ಕಟ್ಟಡ ಭವ್ಯವಾಗಿ ತಲೆಯೆತ್ತಿತ್ತು.

ಪ್ರಾರಂಭೋತ್ಸವ ಇನ್ನೊಂದು ವಾರವಿದೆ ಎನ್ನುವಾಗ ಸಂಗಪ್ಪ ಸೊಸೆಯನ್ನು ತಂಗಿಯ ಊರು ಸೇರಿದ್ದ ಅಪ್ಪಯ್ಯನ ಬಳಿಗೆ ಕರೆದೊಯ್ದು, ಜನ ಸೇರುವಂತೆ ಗದ್ದಲವೆಬ್ಬಿಸಿ

"ನಿನ್ ಮಗ್ಳಿಗೆ ತಲೆಸರಿಯಿಲ್ಲಾಂದ್ರೆ ಯಾವ್ದನ ಹುಚ್ಚಾಸ್ಪತ್ರೆಗೆ ಸೇರಿಸ್ಬೇಕಯ್ಯ... ಅದ್ಬಿಟ್ಟು ಒಳ್ಳೆ ಅಮಾಯಕ ಹುಡುಗ್ರಿಂದೆ ಬಿಡ್ಬಾರ್ದು.. ತಲೆಸರಿಯಿಲ್ಲದ ಈ ಪ್ರಾರಬ್ಧ ಕಟ್ಕಂಡು, ನನ್ನ ಮಗನ ಜೀವ್ನ ಹಾಳಾಗೋಯ್ತು...."
ಎಂದು ಗಂಗಳನ್ನು ಅಲ್ಲಿಯೇ ಬಿಟ್ಟು ಹೊರಟುಬಿಟ್ಟ. ಅಪ್ಪಯ್ಯ ಗರಬಡಿದವನಂತೆ ಕೂತಿದ್ದರೆ, ತಂಗಿ ಕಮಲವ್ವ ಎದೆಬಡಿದುಕೊಳ್ಳತೊಡಗಿದಳು. ಮನೆಯ ಹೊರಗಿನ ವಿದ್ಯಮಾನಗಳೊಂದು ಅರಿಯದ ಗಂಗಳ ಎದೆ ಪ್ರಸ್ತುತ ಪರಿಸ್ಥಿತಿಯ ಗಂಭೀರತೆಗೆ ಬೆಚ್ಚಿ ನಡುಗಿತು. ಅಪ್ಪಯ್ಯ ತೋಟ ಯಾಕೆ ತೊರೆದನೆಂಬ ಸತ್ಯವು ತೆರೆದುಕೊಳ್ಳುತ್ತಿದ್ದಂತೆ ಪ್ರೀತಿಯ ಮರೆಯಲ್ಲಿನ ವಂಚನೆ ನಿಚ್ಚಳವಾಗಿ ಗಂಗಳ ಹೃದಯ ನೋವಿನಿಂದ ವಿಲವಿಲನೆ ಒದ್ದಾಡಿತು.

ಅಪ್ಪಯ್ಯ ಪೂರ್ತಿ ಹಾಸಿಗೆ ಹಿಡಿದು, ಅವನ ಸ್ಥಿತಿ ಚಿಂತಾಜನಕವಾಗಿತ್ತು. ಮೂರು ದಿನಗಳ ನಂತರ ಕಣ್ತೆರೆದು, ಸ್ವಲ್ಪ ಸುಧಾರಿಸಿದಂತೆ ಕಂಡ.

"ನೀನಾಡಿದ ಮಾತು ಸತ್ಯ ಅಪ್ಪಯ್ಯ. ಕೈಗೆ ಎಟುಕದ್ದಕ್ಕೆ ಆಸೆಪಟ್ಟು, ನನ್ನ ಜತೇಲಿ ನಿನ್ನನ್ನೂ ಅ ಉರಿಯುವ ಬೆಂಕಿಗೆ ತಳ್ಳಿಬಿಟ್ಟೆ. ನಾನು ತಪ್ಮಾಡಿದೆ ಅಪ್ಪಯ್ಯ... ನಾನು ತಪ್ಮಾಡಿಬಿಟ್ಟೆ...."

ಗಂಗ ಗದ್ಗದಿತಳಾಗಿ ನುಡಿದಳು ಅಪ್ಪಯ್ಯನ ಕೈ ಹಿಡಿದು. ಹೆಚ್ಚು ಮಾತನಾಡಲು ಶಕ್ಯನಿಲ್ಲದ ಅಪ್ಪಯ್ಯ ಮಗಳನ್ನು ಹತ್ತಿರಕ್ಕೆ ಕರೆದುಕೊಳ್ಳುತ್ತ, ಅವಳನ್ನೊಮ್ಮೆ ಪ್ರೀತಿಯಿಂದ ತಡವಿ, ಪಕ್ಕದಲ್ಲಿದ್ದ ತಂಗಿಯ ಮಗ ಸಿದ್ದನಿಗೆ ಕಣ್ಸನ್ನೆ ಆಡಿ, ತೊದಲುತ್ತ ನುಡಿದ.

"ತಪ್ಪು ನಿಂದಲ್ಲವ್ವ ನಂದು. ನಿನ್ನ ಪ್ರಪಂಚ ನಮ್ಮಿಬ್ಬರ ನಡುವೆ, ಆ ಮರಗಳ ನಡುವೆ ಮಾತ್ರ ಇತ್ತು. ಅದಕ್ಕಿಂತ ಹೊರಗಿನ ವಿಶಾಲವಾದ ಪ್ರಪಂಚದ ಸತ್ಯದರ್ಶನ ನಾ ನಿನಗೆ ಮಾಡಿಸಲೇ ಇಲ್ಲ. ಇವತ್ತಿನ ನಿನ್ನೀ ಸ್ಥಿತಿಗೆ ಕಾರಣ ಆದೇ......"

ಗಂಗ ಅಪ್ಪಯ್ಯನ ಎದೆಯ ಮೇಲೊರಗಿ ಬಿಕ್ಕಿದಳು.

"ಗಂಗಾ......!"

ನೋವು ವಾತ್ಸಲ್ಯ ಮೇಳೈಸಿ ಬಂತು ಕರೆ.

"ಈಗ ಸದ್ಯಕ್ಕೆ ನಂದು ಅಂತಿರೋದು ಇವು ಮಾತ್ರ. ಆ ಜಾಗಕ್ಕೆ ನೀನು ಇನ್ಮುಂದೆ ಕಾಲಿಡಬೇಡ. ಅವರನ್ನ ಕೇಳಲೂ ಬೇಡ. ಇದೋ ಈ ಮಾವಿನ ಸಸಿಗಳೇ ಇನ್ಮುಂದೆ ನಿನಗೆ ಆಸರೆ. ನಿನ್ನ ಹೊಟ್ಟೇಲಿ ಹುಟ್ಟಿದ ಮಕ್ಕಳಿವು. ರಕ್ತ ಮಾಂಸ ಇರುವ ಮಕ್ಕಳಾದ್ರು ಎದೆಗೊದ್ದು ಹೋದಾರು ಆದ್ರೆ, ಇವು ಎಂದೂ ನಿನ್ನ ಕೈಬಿಡಲಾರ್ವು, ಮೋಸ ವಂಚನೆ ಒಂದೂ ಅರೀದ ನಿನ್ನಂತೆ ಮುಗ್ಧಜೀವರು. ಒಬ್ಬ ಮನುಷ್ಯ ಜೀವನದಲ್ಲಿ ಅನುಭವಿಸ ಬೇಕಾದ್ದನ್ನೆಲ್ಲ ನೀನು ಈ ನಾಲ್ಕು ತಿಂಗಳಲ್ಲಿ ಅನುಭವಿಸಿದ್ದಿ. ಅಷ್ಟಕ್ಕೆ ಈ ಎಲ್ಲಾ ಬಡಿದಾಟ. ನೀನು ಅದೆಲ್ಲ ಮೀರಿ ನಿಲ್ಲು. ಈ ಸಸಿಗಳು ಮರವಾಗಿ ನಿನ್ನೆಂದೂ ಕೈಬಿಡಲಾರ್ವು, ಅವುಗಳ ಪ್ರೀತಿ, ಒಡನಾಟ ಎಲ್ಲಾ ಮನುಷ್ಯರ ಒಡನಾಟಕ್ಕು ಮೀರಿ ನಿಂತಿದ್ದು......."

ಅಪ್ಪಯ್ಯ ಮಾತಾಡುತ್ತಿದ್ದಂತೆ ಗಂಗ ಸಿದ್ದನ ತೆಕ್ಕೆಯಲ್ಲಿದ್ದ ಸಸಿಗಳನ್ನು ತನ್ನ ಕೈಗೆ ತೆಗೆದುಕೊಂಡು, ಬಲು ಜತನದಿಂದ ಅವುಗಳನ್ನು ತಬ್ಬಿಕೊಂಡು, ಎದೆಗೊತ್ತಿಕೊಂಡಳು. ಕಣ್ಮುಚ್ಚಿ ಮೈ ಮರೆತಳು. ಆ ಕ್ಷಣ ಸಮಾಧಾನದ ನಿಟ್ಟುಸಿರಿನೊಡನೆ ಅಪ್ಪಯ್ಯನ ಮೈಮನ ಶಾಂತಗೊಂಡವು.

ಮರುದಿನವೇ ಫ್ಯಾಕ್ಟರಿಯ ಪ್ರಾರಂಭೋತ್ಸವ.

"ಮುದುಕ ಈಗಲೇ ಸಾಯಬೇಕಿತ್ತೆ.....?"

ಎಂದು ಗೊಣಗುಟ್ಟುತ್ತಲೇ ಬಂದಿಳಿದರು ಗಂಗಳ ಗಂಡ, ಅತ್ತೆ ಮಾವ. ಅವಳ ಮುಂದೊಂದು ನೋಟಿನ ಕಂತಿಟ್ಟು,

"ಮುತ್ತಯ್ಯ ಹೀಗೆ ಇದ್ದಕ್ಕಿದ್ದಂಗೆ ಸತ್ತು ನಿನ್ನ ಒಂಟಿ ಮಾಡ್ತಾನಂತ ಯಾರು ತಿಳ್ದಿದ್ರು ಹೇಳು.....? ಏನೋ ಎಲ್ಲಾ ಕೆಟ್ಟ ಘಳಿಗೆ...... ಗಂಗ, ಇನ್ಮುಂದೆ ನಿನ್ಗೆ ತಿಂಗ್ಳಾ ಇಷ್ಟಂತ ದುಡ್ಡು ಕಳಿಸಿಕೊಡ್ತೀನಿ. ನೀನು ಯಾವ್ದುಕ್ಕೂ ಯೋಚ್ನೆ ಮಾಡ್ಬೇಡ......"

ಸಂಗಪ್ಪನೇ ಮಾತಾಡುತ್ತಿದ್ದ. ಚೆಲುವರಾಜು, ಅವನ ಅವ್ವ ಸುಮ್ಮನೆ ತಲೆಬಗ್ಗಿಸಿ ಕೂತಿದ್ದ ಗಂಗಳನ್ನೇ ನೋಡುತ್ತಿದ್ದರು.

ಮೇಲ್ನೋಟಕ್ಕೆ ಶಾಂತಳಾಗೇ ಕಂಡರೂ ಒಳಗೆ ಕುದಿಯುತ್ತಿದ್ದಳು ಗಂಗ. ಆದರೆ ಸಂಗಪ್ಪ ದುಡ್ಡಿನ ವಿಷಯ ಮಾತಾಡಿದೊಡನೆ ಕೆರಳಿದಳು.

"ಮೊದ್ಲು ಈ ದುಡ್ಡು ಏತ್ಕೊಳ್ರಿ ನೀವು. ಯಾರ ಹಂಗೂ, ಅನುಕಂಪನೂ ಬೇಡ ನನ್ಗೆ. ತಲೆಹಿಡುಕರ ದುಡ್ನಾಗೆ ಕಾಲ ಹಾಕೋಂತ ಕೇಡುಗಾಲ ನನಗೇನು ಬಂದಿಲ್ಲ......."

ಹರಿತವಾಗಿದ್ದವು ಮಾತುಗಳು. ಅಪ್ಪ, ಮಗ ಒಟ್ಟಿಗೇ ಮೆಟ್ಟಿಬಿದ್ದರು.

"ಏಯ್ ಯಾರಿಗೇ ನೀನಂದಿದ್ದು...........?'

ಚೆಲುವರಾಜು ಹಲ್ಲುಕಡಿದ.

"ಹಲ್ಕಕೆ ಕಡೀತಿಯೋ ನಾಮರ್ದ ನಿಮ್ಮಪ್ಪನಿಗೆ, ನಿನ್ಗೆ ಅಂದಿದ್ದು. ಬೆಳ್ದು, ಫಲಕೊಟ್ಟು, ನಮ್ಗೆ ಅನ್ನ ಕೊಡ್ತಿದ್ದ ಮರಗಳ್ನ ಕೆಡವಿರೋ ನಿಮ್ಮ ಕೆಲ್ಸ ನೀವು ನಿಮ್ಮವ್ವಾಗಳ್ ಮ್ಯಾಲೆ ಬಲತ್ಕಾರ ಮಾಡ್ದಂಗೈತೆ......."

ಗಂಗಳ ಮಾತು ಮೂವರ ಮರ್ಮಕ್ಕೆ ನಾಟಿ, ಅವಳ ಅತ್ತೆ ಕಿವಿಮುಚ್ಚಿ "ಸಿವಾಸಿವಾ......" ಎಂದು ಕೆಳಕ್ಕೆ ಕುಸಿದು ಕುಳಿತಳು. ಚೆಲುವರಾಜು ಗಂಗಳ ಮೇಲೇರಿ ಹೋದ. ಗಂಗ ತಟಕ್ಕನೆ ಪಕ್ಕದಲ್ಲಿದ್ದ ಚಪ್ಪಲಿಯನ್ನು ಎತ್ತಿಕೊಂಡು ಚಂಡಿಯಾಗಿ ನಿಂತಳು. ಅವಳ ಅವತಾರ ಕಂಡು ದೂರ ಸರಿದನವ.

"ಲೋ ನಮ್ಮಪ್ಪ ಸತ್ತಿಲ್ಲೊ... ನಾನು ಒಂಟಿಯೂ ಅಲ್ಲ... ಆ ಮರಗಳು ಬರೀ ಮರಗಳಲ್ಲೊ.. ನಮ್ಮಪ್ಪಯ್ಯನ ಪ್ರಾಣ. ಆ ಮಣ್ಣು ಬರೀ ಮಣ್ಣಲ್ಲ ಅದು ಅಪ್ಪಯ್ಯನ ರಕ್ತಮಾಂಸ. ಅಲ್ಲಿ ಬೀಸ್ತಿರೋ ಗಾಳಿ ಬರೀ ಗಾಳಿಯಲ್ಲ ಅಪ್ಪಯ್ಯನ ಉಸಿರದು. ಆ ಮಣ್ಣಿನ ಕಣಕಣದಾಗೂ ಅಪ್ಪಯ್ಯನ ಆತ್ಮ ಐತೆ. ಅಲ್ಲಿ ನೀವು ಉದ್ಧಾರಾಗ್ತಿರೇನೋ......? ಹೋಗ್ರೋ....... ಅದೆಂಗೆ ಉದ್ಧಾರಾಗ್ತಿರಿ ಆಗೋಗ್ರೋ......."

ಗಂಗಳ ಬಾಯಿ ಜೋರಾಗುತ್ತಲೇ ಇತ್ತು. ಮೂವರು ಬೆವತು ಒಳಗೇ ನಡುಗುತ್ತಿದ್ದರು. ನೆರೆದ ಜನರೆದುರು ಮರ್ಯಾದೆಯೂ ಹೋಗುತ್ತಿತ್ತು. ಅದನ್ನು ಉಳಿಸಿಕೊಳ್ಳಲು ಚೆಲುವರಾಜು ಬಾಯ್ಬಿಟ್ಟ.

"ಪಾಪ! ಏನೋ ದುಃಖದಾಗಿದಾಳೆ, ಸಾಧ್ಯವಾದ್ರೆ ಕರ್ಕಂಡೋಗಣ ಅಂತ ಬಂದ್ರೆ ಇವ್ಳ ಹುಚ್ಚು ವಿಪರೀತಕ್ಕೆ ತಿರುಗೈತೆ......"

ಸರಕ್ಕನೆ ಕತ್ತಿನಲ್ಲಿದ್ದ ತಾಳಿಸರವನ್ನು ಕಿತ್ತು ಸೀದಾ ಚೆಲುವರಾಜ ಮುಖಕ್ಕೆ ಒಗೆದು

"ನನ್ನ ನೀನು ಸಾಕ್ತಿಯೇನೋ ಷಂಡ......! ನಿನ್ನ ಕೂಳಿಗೇ ಇನ್ನೊಬ್ರ ಕುತ್ತಿಗೆ ಕುಯ್ದು ಬದುಕಾಕೆ ಪರದಾಡ್ತಿರೋ ನಿನ್ನಂತಹ ನರಸತ್ತೋನ್ ಜತಿಗೆ ನಾ ಬರ್ತಿನೇನೊ ಥೂ.....!" ಎಂದು ಉಗುಳಿ

"ನೀನು, ನಿಮ್ಮಪ್ಪ ನನ್ನ ಋಣದಲ್ಲಿ ಇದ್ದೂ, ನನ್ನ ಋಣದಲ್ಲೇ ಸಾಯ್ಬೇಕು.. ನಿಮ್ಮಿಬ್ಬರಿಗೆ ಮುಕ್ತಿನೇ ಇಲ್ಲ ಹೋಗ್ರಲೇ......."

ಎಂದು ತನ್ನ ಮುಂದಿದ್ದ ನೋಟಿನ ಕಂತೆಯನ್ನೂ ಎತ್ತಿ ಅವರತ್ತ ಬಿಸಾಡಿದಳು.

ಅಷ್ಟರಲ್ಲಿ ಸಿದ್ದ ಸಸಿಗಳನ್ನು ಹೊತ್ತು, ಕೈಯಲ್ಲಿ ಸಲಿಕೆ, ಗುದ್ದಲಿ ಹಿಡಿದು ಬಂದ. ಆ ಕ್ಷಣ ಗಂಗ ಒಮ್ಮೆಗೆ ತಣ್ಣಗಾಗಿ, ಎಂದಿನ ಸೌಮ್ಯರೂಪ ತಾಳಿದಳು. ಆ ಸಸಿಗಳನ್ನು ಎತ್ತಿಕೊಳ್ಳುತ್ತ ಬಿಳಚಿಕೊಂಡು ನಿಂತಿದ್ದ ಮೂವರಿಗೂ ಶಾಂತಳಾಗಿ ಹೇಳಿದಳು.

"ಇನ್ನು ಮುಂದೆ ಈ ಗಿಡಗಳೇ ನನಗೆ ಎಲ್ಲಾ. ಇವೇ ನನ್ನ ಬಂಧು ಬಳಗ. ಇನ್ನೆಂದೂ ನನ್ಮೇಲೆ ಕರುಣೆ ತೋರ್ಸ ನಾಟ್ಕ ಆಡ್ಕಂಡು ಬರ್ಬೇಡ್ರಿ, ನಾನು ಅಷ್ಟೆ ನಿಮ್ಮ ತಂಟೆಗೆ ಬರಲ್ಲ. ಇನ್ನು ನನ್ ಪಾಡು ನನ್ಗೆ. ನಿಮ್ ಪಾಡು ನಿಮ್ಗೆ. ಬಿಡಿಗಾಸು ಅಲ್ಲ ನಿಮ್ಮ ಸಹವಾಸವೇ ಬೇಡ ನನ್ಗೆ. ನನ್ನ ಮುಂದಲ ಬದುಕು, ಬಾಳುವೆ ಈ ಗಿಡಗಳ ಜತೆಗೆ, ನಾಳೆ ಬೆಳೆಯೋ ಮರಗಳ ಜತೆಗೆ ಸೇರಿ ಹಂಚಿಹೋಗ್ಯತೆ. ಅಪ್ಪಯ್ಯ ನನ್ನ ಕೈಗೆ ಒಪ್ಸಿ ಹೋಗಿರೋ ಅವನ ಕಂದಮ್ಮಗಳೇ ಇವು. ಇನ್ಮುಂದಕ್ಕೂ ಇವೇ ನನ್ಗೆ ಆಸರೆ. ನೀವು ಮಾತ್ರ ಧೈರ್ಯವಾಗಿ ಹೋಗ್ರಿ. ನನ್ನಿಂದ ನಿಮ್ಗೆ ಯಾವ ಕಷ್ಟನಷ್ಟನೂ ಇಲ್ಲ....."

ಅವರು ಮೂವರಿನ್ನೂ ಬೆಪ್ಪರಂತೆ ನಿಂತೇ ಇದ್ದಾಗಲೇ ಸಿದ್ದನ ಹಿಂದೆ ಹಿಂದೆ ಅಪ್ಪಯ್ಯ ಸಾಯುವ ಮೊದಲು ತಂಗಿಯ ಹತ್ತಿರ ಕೊಂಡು, ಇದೀಗ ಅಲ್ಲೇ ಸಮಾಧಿಯಾಗಿದ್ದ ಒಂದು ಎಕರೆಯ ಭೂಮಿಯ ಕಡೆಗೆ ಹೆಜ್ಜೆ ಹಾಕಿದಳು ಗಂಗ.

✦ ✦



ತಾಯ್ತನ

ಆಟೋ ಇಳಿದು ದುಡ್ಡು ಕೊಡಲು ಪರ್ಸ್ ಬಿಡಿಸುತ್ತಿದ್ದಳು ಪೃಥ್ವಿ. ಅಲ್ಲಿಗೆ ಕೇಳಿಬಂತು ಪಾಪುವಿನ ಅಳು. ಆತುರಾತುರವಾಗಿ ಚಾಲಕನ ಕೈಯಲ್ಲಿ ದುಡ್ಡನ್ನು ತುರುಕಿ ಒಳಗೋಡಿದಳು. ಅಮ್ಮನನ್ನು ನೋಡಿ ತನ್ನೆರಡು ಕೈಗಳನ್ನು ಆಕೆಯತ್ತ ಚಾಚುತ್ತ ಅಳುವನ್ನು ಮತ್ತೂ ಜೋರು ಮಾಡಿದ ಪಾಪವನ್ನು ರಮಿಸುತ್ತಾ ಮುದ್ದುಗರೆಯುತ್ತಾ ರೂಮಿನೊಳಕ್ಕೆ ಹೋದಳು. ಪಕ್ಕದಲ್ಲಿ ಮಲಗಿಸಿಕೊಂಡು ಹಾಲು ಕುಡಿಸುತ್ತಾ ಅವನ ಮುಖವನ್ನೇ ದಿಟ್ಟಿಸಿದಳು. ಇದುವರೆಗೆ ನೆಲೆಸಿದ್ದ ದುಃಖ ದುಮ್ಮಾನ ಮಾಯವಾಗಿ ಅಲ್ಲಿ ಸಂತಸ ತುಂಬಿತ್ತು. ಅವಳ ಬಾಯಿಯಿಂದ ನಿಟ್ಟುಸಿರೊಂದು ಹೊರಟಿತು.

ಅಪಘಾತಕ್ಕೀಡಾಗಿ ಕೈಕಾಲು ಮುರಿದುಕೊಂಡು ಆಸ್ಪತ್ರೆಯಲ್ಲಿ ಬಿದ್ದಿದ್ದ ಅಪ್ಪನನ್ನು ನೋಡಲು ಹೋಗಿದ್ದಳು. ಆಗ ಈಗ ಎನ್ನುತ್ತಿದ್ದ ಅವನನ್ನು ನೋಡಿಯೂ ಮನಸ್ಸು ಮರುಗಲಿಲ್ಲ. ಅವನ ನರಳಾಟ ಕೇಳಿದಾಗಲೆಲ್ಲಾ ಕಣ್ಣೀರು ತುಂಬಿದ್ದ ಅಮ್ಮನ ಮುಖ ಎದುರಿಗೆ ಬಂದು ನಿಲ್ಲುತಿತ್ತು. ಅಮ್ಮ ಬದುಕಿರುವವರೆಗೂ ಅವಳನ್ನು ಕಣ್ಣೀರಲ್ಲೇ ಮುಳುಗಿಸಿದ್ದ

"ನರಳೂ... ನೀನು ನರಳಿ ನರಳಿಯೇ ಸಾಯಬೇಕು. ಅಮ್ಮ ದಿನವಿಡೀ ಸುರಿಸುತ್ತಿದ್ದ ಕಣ್ಣೀರೇ ಈ ನಿನ್ನ ನರಳಿಕೆ...... ನಿನ್ನ ಕ್ರೌರ್ಯಕ್ಕೆ ಒಳಗಾಗಿ ಆಕೆಯ ಬಾಯಿಂದ ಹೊರಡುತ್ತಿದ್ದ ಆಕ್ರಂದನವೇ ನಿನ್ನ ಈ ಚೀರಾಟ, ಕೂಗಾಟ.. ನೀನು ಬೇಗನೆ ಸಾಯಕೂಡದು..... ಪಾಪದ ಫಲವನ್ನೆಲ್ಲಾ ತೀರಿಸಿಯೇ ಸಾಯಬೇಕು....."

ಮನಸ್ಸು ಚೀರುತ್ತಿತ್ತು.

"ಕೇವಲ ನೀನೊಬ್ಬ ಗಂಡಸು ಎಂಬ ಕಾರಣಕ್ಕೆ ನನ್ನ ಅಮ್ಮನನ್ನು ಕೀಳಾಗಿ ಕಾಣುತ್ತಿದ್ದೆಯಲ್ಲಾ...... ಅವಳ ಕೋಮಲವಾದ ದೇಹದ ಮೇಲೆ ನಿನ್ನ ಪೌರುಷದ ಪ್ರದರ್ಶನ ನಡೆಸುತ್ತಿದ್ದೆಯಲ್ಲಾ..... ಅವಳನ್ನು, ಅವಳ ಹೆತ್ತವರ ಬಡತನವನ್ನು ಹೀಯಾಳಿಸಿ ನಗುತ್ತಿದ್ದೆಯಲ್ಲಾ..... ಕೈ ಹಿಡಿಯುವವನ ಬಗ್ಗೆ ನೂರಾರು ಕನಸು ಹೆಣೆದು, ಆಶಾಗೋಪುರವನ್ನು ಕಟ್ಟಿ ನಿನ್ನ ಜೀವನದ ಸಂಗಾತಿಯಾಗಲು, ನಿನ್ನ ಸಹಧರ್ಮಿಣಿಯಾಗಲು ಬಂದ ಅವಳನ್ನು ಕ್ಷಣಕ್ಷಣವೂ ಅಪಮಾನಿಸಿ, ತುಚ್ಛೀಕರಿಸಿ ನಿನ್ನ ಕಾಲಕಸವನ್ನಾಗಿ ಮಾಡಿಕೊಂಡೆಯಲ್ಲಾ..... ಅಯ್ಯೋ, ಅಯ್ಯೋ ಅವಳ ಮೇಲೆ ನನ್ನಮ್ಮನ ಮೇಲೆ ನೀನೆಸಗಿದ್ದ ಅಕೃತ್ಯಗಳಿಗೆ ಲೆಕ್ಕವಿತ್ತೆ?"

ಹೃದಯ ಮೂಕವಾಗಿ ರೋದಿಸುತ್ತಿತ್ತು. ಅವನ ನರಳಾಟ, ಕೂಗಾಟ, ಚೀರಾಟ ಕಿವಿಗೆ ಇಂಪಾದ ರಾಗದಂತಿದ್ದವು.

ಪ್ರತಿ ಬಾರಿ ನಿನ್ನ ದಾಳಿಗೆ ತುತ್ತಾದಾಗಲೂ ಅಮ್ಮ ಹೀಗೆ ಚೀರುತ್ತಿದ್ದಳು, ಹೀಗೆ ನರಳುತ್ತಿದ್ದಳು...... ಹೌದು...... ಹೀಗೆ..... ಹೀಗೆ......! ನೀರು ಧಾರೆಯಾಗಿ ಹರಿಯ ತೊಡಗಿದವು. ಆಗಲೇ ವೈದ್ಯರು ಬಂದು ಅವನ ಕಾಲುಗಳನ್ನು ಮೊಣಕಾಲಿನವರೆಗೆ ತೆಗೆಯಬೇಕೆಂದು ಹೇಳಿದಾಗ ಮನಸ್ಸು ಗಹಗಹಿಸಿ ನಗತೊಡಗಿತು! ಅಮ್ಮ ಮತ್ತೆ ಕಾಣಿಸಿಕೊಂಡಳು.

ಈ ಕಾಲುಗಳು ಅಮ್ಮನ ಮೇಲೆ ನಡೆಸಿದ ಅತ್ಯಾಚಾರದ ನೆನಪು ಇನ್ನೂ ಹಸಿಯಾಗಿದೆ ಹೃದಯದಲ್ಲಿ. ನೆನಪಾಗುತ್ತದೆ.. ಅಮ್ಮನ ಮೈ ಸುಡುತ್ತಿದೆ ಅದರಲ್ಲಿಯೇ ಅಡುಗೆ ಮಾಡಿದ್ದಾಳೆ.. ಸಾರಿಗೆ ಉಪ್ಪು ಜಾಸ್ತಿಯಾಗಿಬಿಟ್ಟಿದೆ.. ಅಪ್ಪ ಊಟದ ಮನೆಯಲ್ಲಿ ಕೈತೊಳೆದು ಕೂತಿದ್ದಾನೆ.. ಅವನ ಸ್ನೇಹಿತರಿಬ್ಬರು ಹೊರಗೆ ಅವನಿಗಾಗಿ ಕಾಯುತ್ತಿದ್ದಾರೆ.. ಹೆದರುತ್ತಲೇ ಅಮ್ಮ ಅಪ್ಪನ ತಟ್ಟೆಗೆ ಸಾರು ಬಡಿಸುತ್ತಿದ್ದಾಳೆ.. ಒಂದು ತುತ್ತು ಬಾಯಲ್ಲಿ ಇಟ್ಟ ಅಷ್ಟೆ. ಅನ್ನದ ಸಮೇತ ತಟ್ಟೆಯನ್ನು ಎತ್ತಿಕೊಂಡು ಅಲ್ಲಿಯೆ ನಿಂತಿದ್ದ ಅಮ್ಮನ ತಲೆಯ ಮೇಲೆ ಕುಕ್ಕಿದ್ದಾನೆ. ಅವನ ಈ ಅವತಾರ ಕಂಡು ನಾನು ಮೂಲೆ ಸೇರಿಬಿಟ್ಟಿದ್ದೆ.

"ಬೇಕೂಂತ ಮಾಡ್ತೀಯೇನೆ? ನಾನು ತಿನ್ನಬಾರ್ದೂಂತ ಮಾಡ್ತಿಯೇನೆ? ನಿಮ್ಮಪ್ಪನ ಮನೆಯಿಂದ ತಂದು ಬೇಯಿಸ್ತಿಯೇನೆ?" ಎನ್ನುತ್ತಾ ಅಮ್ಮನನ್ನು ಹಿಡಿದು ಬಾರಿಸುತ್ತಿದ್ದಾನೆ.

ನಾನಾಗ ಚೀರಲು ಬಾರದಷ್ಟು ಭಯಭೀತಳಾಗಿದ್ದೆ. ಅವನ ಹಿಡಿತದಿಂದ ಬಿಡಿಸಿ ಕೊಂಡು ಹೇಗೋ ದೂರ ಓಡಿದ ಅಮ್ಮ, ಅಂದು ತಡೆಯಲಾರದೆ ಚೆಲ್ಲಿದ್ದ ಅನ್ನವನ್ನು ನೋಡುತ್ತಾ

"ಅನ್ನದ ಮೇಲೆ ಸೊಕ್ಕು ಮಾಡುವುದು ಒಳ್ಳೆಯದಲ್ಲಾರಿ......" ಎನ್ನುತ್ತಿದ್ದಾಳೆ ಅಳುತ್ತಾ.

"ಏನಂದೆ ಮೂರು ಕಾಸಿನೋಳೆ.....? ನನಗೆ ಸೊಕ್ಕು ಅಂದೆಯಾ....?"

ಎನ್ನುತ್ತ ಆಕೆಯತ್ತ ಧಾವಿಸಿದ ಅಪ್ಪ ಕಾಲಿನಿಂದ ಝಾಡಿಸುತ್ತಿದ್ದಾನೆ.. ಅಮ್ಮ ಉರುಳುರುಳಿ ಬೀಳುತ್ತಿದ್ದಾಳೆ.. ಅವಳು ಮೆಲ್ಲಗೆ ಏಳಲು ಪ್ರಯತ್ನಿಸುತ್ತಿರುವಾಗಲೆ ಇನ್ನೊಮ್ಮೆ ಕಾಲಿನಿಂದ ಝಾಡಿಸಿದ್ದಾನೆ.

"ಅಯ್ಯೋ...." ಎಂದು ಚೀರುತ್ತಾ ಹಾರಿ ಬಿದ್ದಿದ್ದಾಳೆ ಅಮ್ಮ.

ಅಮ್ಮ ಬದುಕುವುದಿಲ್ಲ ಎಂದುಕೊಂಡೆ ನಾನು. ಜೋರಾಗಿ ಅಳುತ್ತ ಅಮ್ಮನನ್ನು ಬಿಡಿಸಿಕೊಳ್ಳಲು ಹೋದೆ.

"ಅಪ್ಪಾ ನನ್ನಮ್ಮನ್ನ ಬಿಡು..... ಹೊಡಿಬೇಡ ಬಿಡಪ್ಪಾ...... ಅಮ್ಮನ್ನ ಬಿಟ್ಬಿಡಪ್ಪಾ....." ಕೈಮುಗಿಯುತ್ತ ಬೇಡಿದೆ. ನನ್ನನ್ನು ಎತ್ತಿ ಬಿಸಾಕಿದ. ಸೋಫಾದ ಮೇಲೆ ಬಿದ್ದುದ್ದರಿಂದ ಆ ದಿನ ಉಳಿದುಕೊಂಡೆ.

ಅಮ್ಮ ಕೆಳಗೆ ಬಿದ್ದು ವಿಲವಿಲನೆ ಒದ್ದಾಡುತ್ತಿದ್ದಾಳೆ. ಅವನು ಅವಳ ಮೇಲೆ ನಿಂತು ತನ್ನ ಕಾಲುಗಳಿಂದ ಒಂದೆ ಸಮನೆ ತುಳಿಯುತ್ತಿದ್ದಾನೆ. ಆ ನೋವಿನಲ್ಲೂ ಅಮ್ಮ ಅವನ ಕಾಲುಗಳನ್ನು ಹಿಡಿದಿದ್ದಾಳೆ..

"ಬೇಡೀಂದ್ರೆ ದಯವಿಟ್ಟು ಬಿಟ್ಬಿಡೀಂದ್ರೆ.... ನಂದು ತಪ್ಪಾಯ್ತೂಂದ್ರೆ....." ಬೇಡುತ್ತಿದ್ದಾಳೆ. ನಾನೂ ಸಹ ಅಲ್ಲಿಂದಲೇ ಕೂಗುತ್ತಿದ್ದೇನೆ

"ಅಯ್ಯೋ ಅಮ್ಮನ್ನ ಸಾಯಿಸ್ಬೇಡ ಬಿಡೋ..... ಬಿಟ್ಬಿಡೋ...... ಅಮ್ಮಾ.....?"

ನನ್ನ ಕೂಗು ಕೇಳಿ ಹೊರಗಿದ್ದ ಅವನ ಸ್ನೇಹಿತರು ಒಳಕ್ಕೆ ಧಾವಿಸುತ್ತಿದ್ದಾರೆ. ಅಮ್ಮನನ್ನು ಕೆಳಕ್ಕೇ ಹಾಕಿಕೊಂಡು, ಅವಳ ಮೇಲೆ ನಿಂತು ತನ್ನ ಕಾಲುಗಳಿಂದ ಅವಳ ಒಂದೊಂದೆ ಅಂಗವನ್ನು ತುಳಿಯುತ್ತಲಿರುವ ಅವರ ಗೆಳೆಯನ ಪೈಶಾಚಿಕ ರೂಪವನ್ನು ಕಂಡು ದಂಗಾಗಿದ್ದಾರೆ. ನಾನು ಅವರ ಬಳಿಗೆ ಓಡಿದೆ.

"ಅಂಕಲ್..... ನಮ್ಮಮ್ಮನ್ನ ಬದುಕಿಸಿ ಅಂಕಲ್...... ಅಮ್ಮನ ಬಿಡಿಸಿ ಅಂಕಲ್....."

ನನ್ನ ಗಂಟಲು ಚೀರಿ ಚೀರಿ ಒಣಗಿ ಹೋಗುತ್ತಿದೆ. ಪ್ರಯಾಸಪಡುತ್ತಾ ಅಪ್ಪನನ್ನು ಎಳೆದುಕೊಂಡು ಹೋಗುತ್ತಿದ್ದಾರೆ ಅವರು. ಆದರೆ ಅಮ್ಮ......? ಉಟ್ಟ ಸೀರೆಯೆಲ್ಲಾ ಅಸ್ತವ್ಯಸ್ತಗೊಂಡು ಕೂದಲೆಲ್ಲಾ ಕೆದರಿ, ತೊಟ್ಟ ರವಿಕೆಯೆಲ್ಲಾ ಹರಿದುಹೋಗಿ, ಮೈಮೇಲೆಲ್ಲಾ ಕೆಂಪಗೆ ಬಾಸುಂಡೆಗಳು ಮೂಡಿ, ಆಘಾತದಿಂದ ಎಚ್ಚರವಿಲ್ಲದೆ ಬಿದ್ದಿದ್ದಾಳೆ.......

"ಅಮ್ಮಾ..... ಅಯ್ಯೋ..... ಅಮ್ಮಾ....." ಎನ್ನುತ್ತಾ ನಾನು ಆಕೆಯ ಮೇಲೆ ಕುಸಿದೆ.

* * *

ಕೆಳಕ್ಕೆ ಕುಸಿದು ಬಿಕ್ಕಿ ಬಿಕ್ಕಿ ಅಳುತ್ತಿದ್ದ ಪೃಥ್ವಿಯನ್ನು ನೋಡಿ

'ಬಿ ಬೋಲ್ಡ್ ಮೈ ಚೈಲ್ಡ್ ಟೇಕ್ ಕರೇಜ್....." ಎಂದರು ವೈದ್ಯರು.

"ಇಲ್ಲ ಡಾಕ್ಟರ್ ಆ ಕಾಲುಗಳನ್ನು ಕತ್ತರಿಸಿಬಿಡಿ...... ಕತ್ತರಿಸಿಬಿಡಿ ಡಾಕ್ಟರ್............."

ಅವರು ಅವಳ ತಲೆ ನೇವರಿಸಿ ಹೊರಹೋದರೂ ಆಕೆಯ ಬಡಬಡಿಕೆ ನಿಲ್ಲಲಿಲ್ಲ.

"ಕೊಚ್ಚಿ ಕೊಚ್ಚಿ ಹಾಕಿ ಡಾಕ್ಟರ್..... ತುಂಡು ತುಂಡು ಮಾಡಿಬಿಡಿ ಆ ಕಾಲುಗಳನ್ನು. ಅಮ್ಮಾ.... ನಿನಗೆ ಮಾಡಿದ್ದನ್ನೆಲ್ಲಾ ಈಗ ತೀರಿಸುತ್ತಿದ್ದಾನಮ್ಮಾ.... ಈಗ ತೀರಿಸುತ್ತಿದ್ದಾನೆ...!"

ಆಟೋದಲ್ಲಿ ಕುಳಿತಾಗಲೂ ತಲೆ ಜುಮ್ಮೆನ್ನುತ್ತಿತ್ತು. ಅವಳ ಮನಸ್ಸು ಆವೇಶಗೊಂಡಿತ್ತು. ಗಂಡು ಜಾತಿಯನ್ನೇ ಸರ್ವನಾಶ ಮಾಡುವ ವಿಚಾರ ಮಾಡುತ್ತಾ ಬಂದಿದ್ದಳು ದಾರಿಯುದ್ದಕ್ಕೂ. ಆದರೆ ಮನೆಯಲ್ಲಿ ಮಗನ ಅಳು ಕೇಳಿ, ಅಳುತ್ತಳುತ್ತಾ

ತನ್ನೆಡೆಗೆ ಕೈಚಾಚಿದ್ದ ಅವನ ಮುಖ ನೋಡಿ, ತನ್ನನ್ನೇ ಮರೆತು ಕಂದನನ್ನು ಬಾಚಿ ತಬ್ಬಿ, ಮುತ್ತಿಕ್ಕಿ ಎದೆಗೊತ್ತಿಕೊಂಡಿದ್ದಳು!

ಮೊಲೆ ಚೀಪುತ್ತಾ ಹಾಗೆಯೇ ನಿದ್ದೆ ಹೋದ ಮಗನ ಪಕ್ಕದಿಂದ ಬಲು ಜಾಗರೂಕತೆಯಿಂದ ಸ್ವಲ್ಪವೂ ಸದ್ದಾಗದಂತೆ ಎದ್ದು, ಅವನ ಹೊದಿಕೆಯನ್ನು ಸರಿಪಡಿಸಿ ಹಣೆಗೆ ಮುತ್ತನ್ನಿತ್ತು, ನೊಣಗಳು ಕಾಡದಿರಲೆಂದು ಪರದೆಯನ್ನು ಇಳಿಬಿಟ್ಟು, ಸುತ್ತಲೂ ಬಿಗಿಯಾಗಿ ಸಿಗಿಸಿ, ಎಲ್ಲವೂ ಸರಿಯಿದೆಯೇ ಎಂದು ಇನ್ನೊಮ್ಮೆ ನೋಡಿ ಅಡುಗೆ ಮನೆಯತ್ತ ಹೊರಟಳು.

ಅಮ್ಮನನ್ನು ಕೊರಗಿಸಿ ಕೊರಗಿಸಿ ಸಾಯಿಸಿದ್ದ ಅಪ್ಪ ಇಂದು ಹೆಳವನಾಗಿ ನರಳುತ್ತಾ ಬಿದ್ದಿದ್ದರೆ ಅಪ್ಪನನ್ನೆ ಎರಕಹೊಯ್ದಿದ್ದ ಮಗ ಚಿಕ್ಕ ವಯಸ್ಸಿನಲ್ಲಿಯೆ ಕ್ಯಾನ್ಸರ್‌ಗೆ ಬಲಿಯಾಗಿದ್ದ. ಅಮ್ಮನ ಮೇಲೆ ಪ್ರೀತಿ, ಗೌರವವಾಗಲಿ, ತಂಗಿಯೆಂಬ ಅಕ್ಕರೆ, ಮಮತೆ ಯಾಗಲಿ ಊಹೂಂ, ಆ ಶಬ್ದಗಳ ಅರಿವೇ ಇರಲಿಲ್ಲ ಅವನಿಗೆ. ಅಪ್ಪನ ನೆರಳಾಗಿಯೇ ಬೆಳೆದ ಅವನು ಅಪ್ಪನಂತೆ ನಡೆದುಕೊಳ್ಳುತ್ತಿದ್ದ. ಅಮ್ಮನನ್ನು ಏಕವಚನದಲ್ಲಿಯೇ ಮಾತನಾಡುತ್ತಿದ್ದ. ಹೆತ್ತು, ಹೊತ್ತು ಸಾಕಿದ ತಾಯಿಯನ್ನು ಹಾಗೆ ಮಾತನಾಡಿಸ ಬಾರದೆಂದು ಸೋದರತ್ತೆ ಒಮ್ಮೆ ಹೇಳಿದ್ದಾಗ

"ಅಯ್ಯೋ ಯಾರೂ ಮಾಡದೆ ಇರೋ ಘನಕಾರ್ಯವಲ್ಲ ಹಡೆಯೋದು. ಪ್ರತಿಯೊಂದು ಹೆಣ್ಣೂ ಒಂದು ದಿನ ಹಡೆಯಲೇಬೇಕು.. ಹಾಗೆ ಈಕೆ ಕೂಡ ನನ್ನ ಹಡೆದಿದ್ದಾಳೆ. ಅದರಲ್ಲಿ ಯಾವ ದೊಡ್ಡತನವಿದೆ ಅವಳ ಕೆಲಸವೆ ಅದಲ್ಲವೆ....."

ಎನ್ನಬೇಕೆ!

ತನ್ನೆರಡು ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಕೆಳಗೆ ಕುಸಿದಿದ್ದಳು ಅಮ್ಮ ಆ ಮಾತು ಕೇಳಿ. ಅವನನ್ನು ಹಡೆಯುವಾಗ ಅನುಭವಿಸಿದ ನೋವಿಗಿಂತಲೂ ಅಧಿಕವಾಗಿ ನೋವುಂಡಳು ಆ ಮಾತಿನಿಂದ. ಅಸಹಾಯಕಳಾಗಿದ್ದಳು ಆಕೆ. ಪ್ರತಿ ಅವಹೇಳನದ, ದುಃಖದ, ನೋವಿನ, ಅಪಮಾನದ ಕ್ಷಣದಲ್ಲಿಯೂ ಅಮ್ಮನಿಗೆ ಜೊತೆಯಾಗಿದ್ದವಳು ನಾನು. ಅಪ್ಪನನ್ನ, ಅಣ್ಣನನ್ನು ಎದುರಿಸುವ ಧೈರ್ಯ ಶಕ್ತಿ ನನ್ನಲ್ಲಿ ಇರಲಿಲ್ಲ ನಿಜ. ಆದರೆ ಅಮ್ಮನಿಗೆ ಸಾಂತ್ವನ ನೀಡಬಲ್ಲವಳಾಗಿದ್ದೆ. ನಾವಿಬ್ಬರು ಅವರ ಭಯದ ನೆರಳಿನಲ್ಲಿಯೆ ಬದುಕಿದವರು. ಅವರ ಮೇಲೆ ಪ್ರೀತಿ, ಗೌರವಕ್ಕಿಂತ ಭಯವೇ ಅಧಿಕವಾಗಿತ್ತು. ಮಗನಿಗೂ ಹೆದರುತ್ತಿದ್ದಳು ಅಮ್ಮ! ಆದರೆ ಅದು ಅವನ ಖಾಯಿಲೆಗೆ ತುತ್ತಾಗುವವರೆಗೆ ಮಾತ್ರ.

ನೋವು ಅವನನ್ನು ಮೆತ್ತಗಾಗಿಸಿತ್ತು. ಸಂಕಟದ ಸಮಯದಲ್ಲಿ ಅಮ್ಮನಿಗೆ ಶರಣು ಹೋಗಿದ್ದ. ಅವನ ಬಾಯಿಂದ ಹೊರಟಿದ್ದ "ಅಮ್ಮಾ......" ಎಂಬ ಆರ್ತ ಕರೆಗೆ ಅಮ್ಮ ಕರಗಿದ್ದಳು. ಆ ಕ್ಷಣವೆ ಅವನನ್ನು ಕ್ಷಮಿಸಿದ್ದಳು; ಎಲ್ಲವನ್ನೂ ಮರೆತು ಬಿಟ್ಟಿದ್ದಳು. ಹುಟ್ಟಿದಾಗ ಅವರ ಮಡಿಲಲ್ಲಿ ನಲಿದಾಡಿದ್ದ ಮಗ ಸಾಯುವಾಗ ಮತ್ತೆ ಅವರ ಮಡಿಲನ್ನು ಆಶ್ರಯಿಸಿದ್ದ. ಮಗನ ಹೆಣವನ್ನು ತಟ್ಟಿ ಅಳುತ್ತಿದ್ದ ಅಮ್ಮನನ್ನು ಸೋಜಿಗದಿಂದ ನೋಡುತ್ತಿದ್ದೆ ನಾನು. ನನ್ನ ಕಣ್ಣಿನಿಂದ ಹನಿ ನೀರೂ ಉದುರಲಿಲ್ಲ. ಅಪ್ಪ ಆನಂತರವೂ

ಸರಿಹೋಗಲಿಲ್ಲ; ಅಮ್ಮ ಹೆಚ್ಚು ದಿನ ಬದುಕಲೂ ಇಲ್ಲ. ನನ್ನನ್ನು ಈ ಪ್ರಪಂಚದಲ್ಲಿ ಒಂಟಿಯಾಗಿ ಬಿಟ್ಟು ಹೋಗಿದ್ದಳು.

ಪೃಥ್ವಿಯ ಕಣ್ಣಿನಿಂದ ಉದುರಿದ ನೀರು ಒಲೆಯ ಮೇಲೆ ಹಾಲು ಕಾಯಿಸಲು ಇಟ್ಟಿದ್ದ ಪಾತ್ರೆಯ ಕಂಠಕ್ಕೇ ಬಿದ್ದು "ಚುರ್ರ್....." ಎಂದು ಶಬ್ದವಾದಾಗ ಎಚ್ಚೆತ್ತು ಪಾತ್ರೆಯನ್ನು ಕೆಳಗಿಳಿಸಿ ಮಗನ ಬಳಿಗೆ ಹೊರಟಳು. ಪರದೆಯನ್ನೆತ್ತಿ ಮೇಲಕ್ಕೆ ಹಾಕಿ, ಅವನ ಪಕ್ಕದಲ್ಲಿ ಕುಳಿತು, ಮಗನ ಹಣೆಯ ಮೇಲೆ ಮೃದುವಾಗಿ ಕೈಯಾಡಿಸುತ್ತಿದ್ದಳು...... ಅಮ್ಮ ಕಾಣಿಸಿದಳು!

ಹೌದು, ಅಮ್ಮ ಹೋದ ಮೇಲೆ ನನಗೆ ಒಂದೇ ಯೋಚನೆ 'ಅಮ್ಮನಿಗೆ ಮಗನನ್ನು ಕ್ಷಮಿಸಲು ಅದ್ಹೇಗೆ ಸಾಧ್ಯವಾಯ್ತು!' ಎಂದು 'ಅವಳ ಜಾಗದಲ್ಲಿ ನಾನಿದ್ದಿದ್ದರೆ ಖಂಡಿತ ಕ್ಷಮಿಸುತ್ತಿರಲಿಲ್ಲ. ಅವನ ಸಾವಿಗೆ ಕಣ್ಣೀರು ಹಾಕುತ್ತಿರಲಿಲ್ಲ. ಬದಲಿಗೆ ಸಮಯ ಸಿಕ್ಕರೆ ನಾನೇ ಅವನ ಕುತ್ತಿಗೆ ಹಿಸುಕಿ ಸಾಯಿಸುತ್ತಿದ್ದೆ' ಎಂದು. ಅಯ್ಯೋ ಒಂದೇ, ಎರಡೇ, ನನ್ನ ಮನದ ತುಂಬ ವಿಷ ತುಂಬಿಕೊಂಡಿದ್ದೆ ಅವರಿಬ್ಬರ ಮೇಲೆ.

ಅವನಂತು ನೆಗೆದುಬಿದ್ದ. ಆದರೆ ಅಪ್ಪ ಎಂಬ ರಾಕ್ಷಸನೊಡನೆ ನಾನು ಒಂಟಿಯಾಗಿ ಜೀವಿಸಬೇಕಿತ್ತು. ಆ ಮನೆ ನನಗೆ ಭೂತದ ವಾಸಸ್ಥಾನದಂತೆ ಇತ್ತು. ಅಮ್ಮನ ಪಡಿಯಚ್ಚಿನಂತೆ ಇದ್ದ ನಾನೆಂದರೆ ಅವನಿಗೆ ತಿರಸ್ಕಾರ. ನನ್ನ ಮೇಲೆ ಕೈ ಮಾಡದಿದ್ದರೂ ಬಾಯಿಗೆ ಮಿತಿ ಇರಲಿಲ್ಲ. ಕ್ಷಣಕ್ಷಣವೂ ಹೆದರಿಕೆಯಿಂದ ಸಾಯುತ್ತಿದ್ದೆ. ಒಂದು ದಿನ ಇದ್ದಕ್ಕಿದ್ದಂತೆ ಅತ್ತೆ ಬಂದು

"ನಿನ್ನ ಮದುವೆ.....!" ಎಂದಳು.

ನಾನು ಕಂಗಾಲಾದೆ. ಗಂಡ, ಮನೆ, ಮಕ್ಕಳು ಎಂಬುದನ್ನು ಕಲ್ಪಿಸಿಕೊಳ್ಳಲು ಭಯವಾಗುತ್ತಿತ್ತು. ವಯಸ್ಸಿಗೆ ಸಹಜವಾದ ಆಸೆ, ಆಕಾಂಕ್ಷೆ, ಬಯಕೆಗಳೊಂದೂ ನನಗಿರಲಿಲ್ಲ. ಪ್ರೀತಿ, ಪ್ರೇಮ ನನ್ನ ಊಹೆಗೂ ನಿಲುಕದ ವಿಷಯವಾಗಿತ್ತು. ಮದುವೆ ಒಂದು ಭಯಂಕರ ದುಃಸ್ವಪ್ನದಂತೆ ನನ್ನನ್ನು ಪೀಡಿಸಿತು. ಆದರೆ ನಾನು ಅಪ್ಪನ ಮಾತನ್ನು ತೆಗೆದು ಹಾಕುವಂತೆ ಇರಲಿಲ್ಲ. ಅವನು ಹೇಳಿದ್ದಕ್ಕೆಲ್ಲಾ ತಲೆಯಾಡಿಸಿದೆ!

ಮೊದಲ ರಾತ್ರಿಯೆ ನಾನು ನನ್ನ ಗಂಡನಾದವನ ಮುಖ ನೋಡಿದ್ದು. ಅವನನ್ನು ನೋಡಿ ಅನುರಾಗ ಹುಟ್ಟುವ ಬದಲು ಹೇಸಿಗೆಯೆನಿಸಿತ್ತು. ಮೇಲಿನಿಂದ ಕೆಳಗಿನವರೆಗೆ ಏಕವಾಗಿದ್ದ. ಸುಮಾರು ನಲವತ್ತು, ನಲವತ್ತೈದರ ವಯಸ್ಸಿನವನು; ಆದರೇನು ದೊಡ್ಡ ಶ್ರೀಮಂತ! ನನ್ನ ದಾಂಪತ್ಯದ ಮೊದಲ ರಾತ್ರಿ ನನ್ನ ಪಾಲಿಗೆ ಅತಿ ಭೀಕರವಾದ, ಅಸಹ್ಯಕರವಾದ ರಾತ್ರಿಯಾಗಿತ್ತು.

ಫ್ಯಾನು, ಟಿ.ವಿ, ಫ್ರಿಜ್‌ನಂತೆ ಹೆಂಡತಿಯೂ ಒಂದು ಭೋಗದ ವಸ್ತು ಎಂಬಂತೆ ವರ್ತಿಸುತ್ತಿದ್ದ ಗಂಡ. ಮನಸ್ಸು ಬಂದಾಗ ಹೋಗಿ ಬರುತ್ತಿದ್ದ. ಅವನಿಗೆ ಬೇಕೆನಿಸಿದಾಗ ಪಕ್ಕಕ್ಕೆಳೆದುಕೊಳ್ಳುತ್ತಿದ್ದ.. ಬೇಡವೆನಿಸಿದಾಗ ದೂರ ತಳ್ಳುತ್ತಿದ್ದ. ಪಾರ್ಟಿ ಫಂಕ್ಷನ್‌ಗಳಿಗೆ ವಸ್ತು ಪ್ರದರ್ಶನದ ಬೊಂಬೆಯಂತೆ ಅಲಂಕರಿಸಿಕೊಂಡು ಅವನ ಜೊತೆಯಲ್ಲಿ ಹೋಗಲೇ

ಬೇಕಿತ್ತು. ಅವನು ಹೇಳಿದವರ ಜೊತೆಯಲ್ಲಿ ಅವರಿಗನುಗುಣವಾಗಿ ವರ್ತಿಸಬೇಕಿತ್ತು. ಅಪ್ಪನ ಮನೆಯೊಂದು ನರಕವಾದರೆ, ಗಂಡನ ಮನೆ ಇನ್ನೊಂದು ನರಕ.

"ಥೂ.......!" ಎಂದು ಅಸಹ್ಯದಿಂದ ತಲೆಕೊಡಹಿದಾಗ ಮಗ ಮಿಸುಕಾಡಿದ. ಅವನ ಸನಿಹಕ್ಕೇ ಸರಿದು ಮೆಲ್ಲನೆ, ಮೃದುವಾಗಿ ತಟ್ಟಿದಾಗ ಹಾಗೆಯೇ ನಿದ್ದೆ ಹೋದ.

ಇವನು ನನ್ನ ಹೊಟ್ಟೆಯಲ್ಲಿ ರೂಪುಗೊಳ್ಳುತ್ತಿದ್ದಾನೆ ಎಂದು ಗೊತ್ತಾದ ದಿನ ಸಿಡಿಲೆರಗಿದಂತೆ ಆಗಿತ್ತು ನನಗೆ. ಬೇಡವೆಂದು ಅದೆಷ್ಟು ಗಲಾಟೆ ಮಾಡಿದ್ದೆ. ಆದರೆ ಅತ್ತೆ ಬಿಡಲಿಲ್ಲ. ಅವಳು ನನ್ನ ಜೊತೆಯಲ್ಲೇ ಇದ್ದಳು. 'ಟೂರ್.....' ಎಂದು ಹೋದ ಗಂಡ ಅಲ್ಲಿಯೇ ಎಲ್ಲೋ ಕೊಲೆಯಾಗಿದ್ದ. ಹಾರ್ಟ್‌ಅಟಾಕ್ ಎಂದು ಮುಚ್ಚಿ ಹಾಕಿದರು. ನನಗೂ ಅದರಲ್ಲಿ ಆಸಕ್ತಿಯಿರಲಿಲ್ಲ! ಆಳವಾಗಿ ಹೋಗಲೂ ಇಲ್ಲ.

ನಿಜ ಹೇಳಬೇಕೆಂದರೆ ನನಗೆ ಜೀವನದಲ್ಲಿಯೆ ಜಿಗುಪ್ಸೆ ಮೂಡಿತ್ತು. ಕೇವಲ ಒಂದು ಯಂತ್ರದಂತೆ ಬದುಕುತ್ತಿದ್ದಾಗ ತಾಯಾಗಲಿರುವ ವಿಷಯ ತಿಳಿದಿತ್ತು. ಪ್ರತಿ ಕ್ಷಣವೂ ತಾಯಾಗದಿದ್ದರೂ ಸರಿಯೆ ನನ್ನ ಗರ್ಭದಿಂದ ಗಂಡು ಮಾತ್ರ ಹುಟ್ಟುವುದು ಬೇಡ ಎಂದು ದೇವರಲ್ಲಿ ಮೊರೆಯಿಡುತ್ತಿದ್ದೆ. 'ಗಂಡು ಹುಟ್ಟಿದರೆ.....?' ಎಂಬ ಯೋಚನೆಯೇ ಸ್ತ್ರೀಯ ಅತ್ಯಂತ ಸಹಜವಾದ ತಾಯ್ತನದ ಬಯಕೆಯನ್ನೆ ಕಮರಿಸುತ್ತಿತ್ತು.

ದಿನಗಳುರುಳಿದಂತೆ ನಿರ್ವಿಣ್ಣಳಾಗುತ್ತಾ ನನ್ನ ಸುತ್ತಲೂ ಅಂಧಕಾರವನ್ನೆ ಸೃಷ್ಟಿಸಿಕೊಳ್ಳುತ್ತ ಹೋದೆ. ಆದರೆ ಅತ್ತೆ ಸುಮ್ಮನೆ ಕೂಡಲಿಲ್ಲ. ಎಲ್ಲವನ್ನೂ ನೋಡಿ ಕೊಳ್ಳುತ್ತಿದ್ದರು. ಅಂತು ಹೀಗೆ ನಾಲ್ಕೈದು ತಿಂಗಳು ಕಳೆದವು. ಆ ದಿನ ಅದೇಕೋ ಅಮ್ಮ ಬಹಳ ನೆನಪಾಗುತ್ತಲಿದ್ದಳು. ಆಕೆ ಬೇಕೆನಿಸುತ್ತಿತ್ತು ನನಗೆ. ಅವಳ ಯೋಚನೆಯಲ್ಲೇ ಇರುವಾಗ ಇದ್ದಕ್ಕಿದ್ದಂತೆ ಹೊಟ್ಟೆಯಲ್ಲಿ ಏನೋ ಆದಂತಾಯ್ತು. ನಾನದಕ್ಕೆ ಲಕ್ಷ್ಯ ಕೊಡಲಿಲ್ಲ. ಆದರೆ ನಾಲ್ಕೈದು ಬಾರಿ ಹಾಗೆ ಆದಾಗ ನನಗೆ ಏನಿರಬಹುದು ಎಂಬ ಕುತೂಹಲ ಮೂಡಿತು. ಅಂದು ಸಂಜೆ ಬಂದ ವೈದ್ಯರು

"ಮಗು ಮಿಸುಕಾಡುತ್ತಾ..?" ಎಂದು ಕೇಳಿದಾಗ ವಿಸ್ಮಯಗೊಂಡೆ.

ಅತ್ತೆ ಅದೇನೆಂದು ಹೇಳಿದಳಾದರೂ ನನ್ನ ಹೊಟ್ಟೆಯಲ್ಲಿ ಏನೋ ಆಗುವುದು ಹೆಚ್ಚಿದಂತೆಲ್ಲಾ ನನಗೆ ಅವರ ಮಾತು ಅರ್ಥ ಆಗಿತ್ತು. ನನಗಾಗುತ್ತಿದ್ದ ವಿಚಿತ್ರ ಅನುಭವ, ನನ್ನ ಹೊಟ್ಟೆಯಲ್ಲಿರುವ ಮಗುವಿನ ಓಡಾಟದಿಂದ ಉಂಟಾದ್ದು ಎಂಬ ಸತ್ಯ ಅರಿವಿಗೆ ಬಂದೊಡನೆ ನನ್ನ ಮನಸ್ಸು ಪುಲಕಗೊಂಡು, ದೇಹ ರೋಮಾಂಚನಗೊಂಡಿತ್ತು. ಹೀಗೆ ಅದು ಹೊಟ್ಟೆಯಲ್ಲೆಲ್ಲಾ ಓಡಾಡಿದಂತಾಗಿ ನನಗರಿವಿಲ್ಲದೆ ಮನಸ್ಸು ಮುದಗೊಳ್ಳುತ್ತಿತ್ತು.

ಕ್ರಮೇಣ ಯಂತ್ರಕ್ಕೆ ಜೀವ ಬಂದಿತ್ತು. ಯಾವುದೋ ವರ್ಣಿಸಲಾಗದ ರೀತಿಯಲ್ಲಿ ಪ್ರೀತಿಯನ್ನು ಅನುಭವಿಸುತ್ತಿರುವ ಭಾವನೆ, ನನ್ನ ಸುತ್ತಲಿದ್ದ ಅಂಧಕಾರದ ಕೋಟೆಯನ್ನು ಭೇದಿಸಿ, ಅಲ್ಲಿ ಬೆಳಕಿನ ಕಿರಣಗಳನ್ನು ತೂರಿಸಿತ್ತು. ತನ್ನೊಳಗೆ ಸೃಷ್ಟಿಯಾಗುತ್ತ ಅಲ್ಲಿಂದಲೆ ತುಂಟತನದಿಂದ ತನ್ನಿರುವನ್ನು ನನಗೆ ನೆನಪಿಸುತ್ತಿದ್ದ ಹೊಸ ಜೀವದ ಬಗ್ಗೆ ನನಗೆ ಕಾತರವಿತ್ತು. ಕುತೂಹಲವಿತ್ತು. ನನ್ನ ನೋವೆಲ್ಲಾ ನಿವಾರಿಸಿ ನನ್ನನ್ನು ಮನುಷ್ಯಳನ್ನಾಗಿಸಿದ್ದ

ಗರ್ಭದ ಬಗ್ಗೆ ಗೌರವ ಬೆಳೆದಿತ್ತು. ನನ್ನಲ್ಲಿ ಜಾಗೃತಗೊಂಡಿದ್ದ ತಾಯ್ತನ ಮನಸ್ಸಿನ ದುಗುಡ, ದುಮ್ಮಾನ. ರೋಷಾವೇಷಗಳನ್ನೆಲ್ಲಾ ಮೆಟ್ಟಿ ನಿಂತಿತ್ತು.

ಅಂದು ರಾತ್ರಿಯಿಡೀ ನೋವು ನಿದ್ರಿಸಲು ಬಿಡಲಿಲ್ಲ. ಅವುಡುಗಚ್ಚಿ ನೋವನ್ನು ನುಂಗುವ ವಿಫಲ ಯತ್ನ ಮಾಡುತ್ತಿರುವಾಗಲೇ ಅದು ತೀವ್ರವಾಗಿ ಜೋರಾಗಿ ಚೀರಿದ್ದೆ. ಹಿಂದೆಯೇ ಕೇಳಿಬಂತು ಮಗುವಿನ ಅಳು. ನನ್ನೆಲ್ಲಾ ಸುಸ್ತು, ಆಯಾಸ ಮಾಯವಾಗಿತ್ತು. ಅತ್ತೆ ಹೆದರುತ್ತಲೇ ಮಗುವನ್ನು ಪಕ್ಕಕ್ಕೆ ತಂದು "ಗಂಡು....." ಎಂದಿದ್ದಳು.

ನಗುನಗುತ್ತಲೇ ಅವನನ್ನು ಮಡಿಲಿಗೆ ಹಾಕಿಕೊಂಡಿದ್ದೆ. ಗಂಡು ಹೆಣ್ಣೆಂಬ ಭೇದವಾಗಲಿ, ಗಂಡಿನ ಬಗ್ಗೆಯಿದ್ದ ನಿಕೃಷ್ಟತೆ, ಆಕ್ರೋಶವಾಗಲೀ ಒಂದೂ ನೆನಪಿರಲಿಲ್ಲ. ಕಣಕಣವೂ ನನ್ನ ಮಗುವಿನಿಂದ ತುಂಬಿತ್ತು. ಪಕ್ಕದಲ್ಲಿ ಮಲಗಿ ಮೊಲೆ ಕುಡಿಯುವ ನನ್ನ ಕಂದನನ್ನು ನೋಡುತ್ತ ಮೈ ಮರೆಯುತ್ತಿದ್ದೆ. ನನಗಾಗ ಉಂಟಾಗುತ್ತಿದ್ದ ವಿಚಿತ್ರ ತೃಪ್ತಿ, ಆನಂದ ಸ್ವರ್ಗಸುಖವನ್ನು ನೀಡುತ್ತಿದ್ದವು. ನನ್ನ ರಕ್ತಮಾಂಸವನ್ನೆ ಹಂಚಿಕೊಂಡು ಹುಟ್ಟಿದ್ದ ನನ್ನ ಕರುಳಿನ ಕುಡಿ ಮಡಿಲಲ್ಲಿ ಮಲಗಿದಾಗ, ಅವನ ಸಾಮಿಪ್ಯವೆ ನನಗೆ ಆಸರೆಯಾಗಿತ್ತು.

ನನ್ನ ಬಾಳಿನಲ್ಲಿದ್ದ ಕಗ್ಗತ್ತಲನ್ನು ಓಡಿಸುತ್ತ ಸೂರ್ಯನಂತೆ ಉದಯಿಸಿದ್ದ ಮಗ ಬದುಕಿಗೊಂದು ಹೊಸ ರೂಪ ಕೊಟ್ಟಿದ್ದ. ನಾನು ಅಂದುಕೊಳ್ಳುತ್ತಿದ್ದೆ

"ಇದೆಂತಹ ವ್ಯಾಮೋಹ.....?' "ತಾಯ್ತನಕ್ಕೆ ಅದೆಂತಹ ಶಕ್ತಿ ಇದೆ......?" ಎಂದು.

ಅಮ್ಮ ನೆನಪಾಗುತ್ತಿದ್ದಳಾಗ. ಅಂದು ಮಗನನ್ನು ಕ್ಷಮಿಸಿದ್ದ ಅವಳ ಔದಾರ್ಯದ ಹಿಂದಿದ್ದ ಶಕ್ತಿ ಯಾವುದೆಂದು ಅರಿವಾಗಿತ್ತು. ಹಾಗೆಂದು ಅಪ್ಪ, ಅಣ್ಣನನ್ನು ಮರೆತಿರಲಿಲ್ಲ ನಾನು. ಆದರೆ ಅದರ ಬಗ್ಗೆ ಲಕ್ಷ್ಯವಿರಲಿಲ್ಲ. ನಮ್ಮ ಹೊಟ್ಟೆಯಲ್ಲಿ ಒಳ್ಳೆಯ ಮಕ್ಕಳು ಹುಟ್ಟುತ್ತಾರೆ...... ಅವರೇ ಮುಂದೆ ನಮ್ಮ ಜೀವನದ ಆಧಾರ ಎಂಬಂತಹ ಕ್ಷುಲ್ಲಕ ಕಾರಣಗಳು ಅಥವಾ ಆಸೆಗಳು ಬಸಿರು, ಪ್ರಸವದಂತ ಕಠಿಣವಾದ ಅವಸ್ಥೆಗಳನ್ನು ದಾಟಿ ಬರುವ ಶಕ್ತಿಯನ್ನು ಹೆಣ್ಣಿಗೆ ಕೊಡಲು ಸಾಧ್ಯವಾಗಿದ್ದಲ್ಲಿ ತಾಯ್ತನವೊಂದು ಕೇವಲ ಕೊಟ್ಟುಕೊಳ್ಳುವ ವ್ಯವಹಾರ ಆಗುತ್ತಿತ್ತಷ್ಟೆ.

ನಿದ್ದೆಯಲ್ಲೆ ಅಮ್ಮ ಪಕ್ಕದಲ್ಲಿ ಇರುವಳೋ ಇಲ್ಲವೋ ಎಂದು ತಡಕಾಡುತ್ತಿದ್ದ ಮಗನನ್ನು ಗಮನಿಸಿ ಅತ್ತ ಸರಿದು

"ಇಲ್ಲೆ ಇದ್ದೀನಿ ಚಿನ್ನಾ...." ಎನ್ನುತ್ತಾ ಅವನನ್ನು ತಬ್ಬಿಕೊಂಡೆ.

ಬೆಚ್ಚಗಿನ ಅಪ್ಪುಗೆಯಲ್ಲಿ ಹಾಗೆಯೆ ಆತುಕೊಂಡ. ಹಿಂದೊಮ್ಮೆ ಒಂದು ಗಂಡಿಗೆ ಜನ್ಮ ಕೊಡುವ ವಿಚಾರವೆ ನನ್ನ ತಾಯ್ತನದ ಬಯಕೆಯನ್ನು ಚಿವುಟುತ್ತಿದ್ದು, ಎಲ್ಲಾ ಹರಕೆಗಳು ಹುಸಿಯಾಗಿ ಮಗನೆ ಮಡಿಲು ತುಂಬಿ, ಅವನಲ್ಲೆ ನನ್ನ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುತ್ತಿದ್ದ ನನ್ನ ಈಗಿನ ಪರಿಗೆ ನಾನೇ ಅಚ್ಚರಿಗೊಳ್ಳುತ್ತಿದ್ದೆ. ತಾಯ್ತನಕ್ಕೆ ಅಂಥಾ ವರ್ಣಿಸಲಾಗದ, ಅಳೆಯಲಾಗದ ಅದ್ಭುತ ಶಕ್ತಿಯಿತ್ತು. ಮಕ್ಕಳಿಂದ ಎಷ್ಟೇ ನೋವುಂಡರೂ ಅದನ್ನು ಕ್ಷಣದಲ್ಲಿ ಮರೆತು ಅವರ ಉಪಚಾರಕ್ಕೆ ನಿಲ್ಲುವ, ಅವರ ಸುಖದುಃಖದಲ್ಲಿ

ಭಾಗಿಯಾಗಿ ಅವರ ಹಿತಚಿಂತನೆ ಮಾಡುವ, ಅವರಿಗಾಗಿ ಮರುಗುವ ಈ ಎಲ್ಲಾ ಕ್ರಿಯೆಗಳ ಹಿಂದಿರುವ ಅನನ್ಯ ಪ್ರೇಮದ ಆಳ ಅಳತೆಗೆ ಸಿಗುವುದು ಅನುಭವಕ್ಕೆ ಮಾತ್ರ.

"ಪಾಪುಗೆ ಹಾಲು ಬಿಡಿಸಬೇಕಲ್ಲವೆ.......?' ಈ ಯೋಚನೆ ಅದೇಕೋ ಹೃದಯವನ್ನು ತಳಮಳಗೊಳಿಸಿತ್ತು.

ಮಗ ದೊಡ್ಡವನಾಗುತ್ತಿದ್ದಾನೆ! ಅದೇಕೆ ಸಮಯ ಹೀಗೆ ಓಡುವುದೊ... ಇವನೇಕೆ ಇಷ್ಟು ವೇಗದಲ್ಲಿ ಬೆಳೆಯುತ್ತ ಹೋಗಬೇಕೋ...... ಈ ಕಂದ ಹೀಗೆಯೇ ಇದ್ದು ಬಿಡುವಂತಿದ್ದರೆ......!

ಅದೇಕೋ ಖಿನ್ನತೆ ಆವರಿಸಿಕೊಂಡಿತು. ಯಂತ್ರಮಾನವರ ಈ ಯುಗದಲ್ಲಿ ಮನುಷ್ಯನು ಕ್ರಮೇಣ ಯಂತ್ರವಾಗುವ ಸನ್ನಾಹದಲ್ಲಿರುವ ಈ ಕಾಲದಲ್ಲಿ ತನ್ನ ಆಗಮನದಿಂದ ನನ್ನ ಜನ್ಮ ಸಾರ್ಥಕಗೊಳಿಸಿ, ಪ್ರತಿಯೊಂದು ಕಣವನ್ನು ಅತ್ಯಂತ ಸುಮಧುರಗೊಳಿಸಿ, ರೋಮಾಂಚನಗೊಳಿಸಿದ ಈ ಕಂದನೆ ಮುಂದೊಂದು ದಿನ ನನ್ನ ಈ ಭಾವುಕತೆಯನ್ನು ಅಪಹಾಸ್ಯ ಮಾಡುವಂತಾದರೆ....

ಈ ಯೋಚನೆ ಬಂದೊಡನೆ ಮನಸ್ಸು ದೇವರ ಮೊರೆ ಹೊಕ್ಕಿತು. "ಓಹ್ ದೇವರೆ...... ನನ್ನ ಕಂದನ ಈ ಸುಂದರವಾದ ಆಕೃತಿಯೊಂದಿಗೆ, ಅವನ ಈ ಮುಗ್ಧತೆಯೊಂದಿಗೆ; ಸುಂದರವಾದ ನಗುವಿನೊಂದಿಗೆ, ಮನಸ್ಸಿಗೆ ಮುದ ನೀಡುವ ಅವನ ಸಾಮಿಪ್ಯದೊಂದಿಗೆ, ಪುಲಕಗೊಳಿಸುವ ಈ ಬೆಚ್ಚಗಿನ ಅಪ್ಪುಗೆಯೊಂದಿಗೆ, ಹಾಲುಣಿಸುವಂತಹ ಮಧುರವಾದ ಅನುಭವದೊಂದಿಗೆ, ನಿರ್ವಂಚನೆಯ ಪ್ರೀತಿಯೊಂದಿಗೆ, ಸಮಯ ತನ್ನ ಓಟವನ್ನು ನಿಲ್ಲಿಸಿ, ಇಲ್ಲಿಯೆ ಹೀಗೆಯೆ ಸ್ಥಗಿತಗೊಳ್ಳಬಾರದೆ.....?"

ಗೋಡೆಯ ಮೇಲಿದ್ದ ಗಡಿಯಾರ 'ಢಣ್....' ಎಂದು ಬಾರಿಸಿದಾಗ ಪೃಥ್ವಿ ಬೆಚ್ಚಿ ಕಣ್ತೆರೆದಳು. ಸಮಯ ಓಡುತ್ತಲೆ ಇತ್ತು. ಆಗಲೇ ಎಚ್ಚರಗೊಂಡ ಮಗ ಅಮ್ಮನ ಮಡಿಲಿನಿಂದ ಹೊರಬಂದು, ಆಕೆಯತ್ತ ನೋಡಿ ತನ್ನ ಬೊಚ್ಚು ಬಾಯಗಲಿಸಿ ನಕ್ಕಾಗ, ಅವಳ ಕಣ್ಣಂಚಿನಲ್ಲಿದ್ದ ನೀರು ಫಳಕ್ಕನೆ ಕೆಳಗುರುಳಿತು.

✦ ✦



ಒಳಗುದಿ

ಗಡಿಯಾರ 'ಢಣ್....' ಎಂದು ಒಂದು ಬಾರಿಸಿದಾಗ ಪಕ್ಕನೆ ತೆರೆದುಕೊಂಡವು ಕಣ್ಗಳು. ಭಗಭಗನೆ ಉರಿಯುತ್ತಿದ್ದವು. ಇಂದು ಅಪರೂಪಕ್ಕೆ ರಾಜು ಮಧ್ಯಾಹ್ನಕ್ಕೆ ಮನೆಗೇ ಊಟಕ್ಕೆ ಬರುವುದಾಗಿ ಹೇಳಿ ಹೋಗಿದ್ದು ನೆನಪಾಗಿ ಅಡುಗೆ ಮನೆಯತ್ತ ನಡೆದೆ. ಊಟ ಮಾಡುತ್ತ ಹೇಳಿದರು ರಾಜು

"ಕಂಪನಿಯ ಮ್ಯಾನೇಜರ್ ರಾಮು ಸಿಕ್ಕಿದ್ರು ಗೌರಿ ಫ್ಯಾಮಿಲಿ, ಬಾಸ್ ಫ್ಯಾಮಿಲಿ ಸೇರಿ ಊಟಿಗೆ ಹೋಗಿದಾರಂತೆ......" ಎಂದು.

ಎದೆಯಲ್ಲಿ ಯಾಕೋ ಚಳುಕು ಮೂಡಿದಂತಾಯ್ತು. ಮುಖ ಕಿವಿಚಿದ್ದು ಕಂಡು

"ಯಾಕೆ? ಏನಾಯ್ತು?" ಎಂದು ಕೇಳಿದ ರಾಜುಗೆ

"ಸ್ವಲ್ಪ ಸುಸ್ತಷ್ಟೆ....." ಎಂದುತ್ತರಿಸಿದೆ.

"Take rest......." ಎಂದವರು ಹೇಳಿ ಹೋದ ಮೇಲೆ ನಾನು ರೆಸ್ಟ್ ಲೆಸ್ ಆಗತೊಡಗಿದೆ.

ಮನಸ್ಸನ್ನು ಹಿಡಿತಕ್ಕೆ ತೆಗೆದುಕೊಳ್ಳುವ ಸಲುವಾಗಿ ನನ್ನ ಅತಿ ಪ್ರಿಯವಾದ ತಾಣ ನನ್ನ ತೋಟಕ್ಕೆ ನಡೆದೆ. ಮೆದುಳಿಗೆ ವಿರಾಮ ಸಿಗಲಿ ಎಂದು ಪೈಪ್ ಎಳೆದು ನಲ್ಲಿಗೆ ಹಚ್ಚಿ, ನೀರು ಹಾಯಿಸುತ್ತ ನಿಂತೆ. ಕೈಗಳು ಯಾಂತ್ರಿಕವಾಗಿ ಅತ್ತಿತ್ತ ಮಿಸುಕಾಡುತ್ತಿದ್ದವೇ ಹೊರತು ಏನು ಮಾಡಿದರೂ ಕೆಲಸದಲ್ಲಿ ತೊಡಗದಾಯ್ತು ಈ ಹಾಳು ಮನಸ್ಸು. ತೋಟಕ್ಕೆ ಕಾಲಿಟ್ಟ ಕ್ಷಣವೇ ಊಟಿ ಕಣ್ಮುಂದೆ ಸುಳಿದು, ಒತ್ತರಿಸಿಕೊಂಡು ಬರುತ್ತ ಮನಃಪಟಲದಲ್ಲಿ ಮೂಡುತ್ತಿತ್ತು. ಒಡನೆ ಗೌರಿ ನೆನಪಾದಳು.

ಹೌದು, ಅದೇಕೋ ಈಗೀಗ ಸಹ್ಯವಾಗುತ್ತಿರುವಳು ಆಕೆ. ನಮ್ಮ ಬಡಾವಣೆಗು, ಕಂಪನಿಗು ಮಧ್ಯದಲ್ಲಿ ಕೊಂಡಿಯ ಹಾಗಿರುವ ಜನತಾಬಜಾರ್‌ನಲ್ಲಿ ಅದೊಂದು ದಿನ ತನ್ನ ಬಾಸ್‌ನೊಟ್ಟಿಗೆ ಕಾರಿನಿಂದಿಳಿದಿದ್ದಳು ಗೌರಿ. ಅಂದೆ ಮೊದಲ ಬಾರಿ ನಾನು ಆತನನ್ನು ನೋಡಿದ್ದು. ತುಂಬಾ ಹ್ಯಾಂಡ್‌ಸಮ್ ಆಗಿದ್ದ ಆತ ನಗುತ್ತ ಗೌರಿಯೊಡನೆ ಬರುತ್ತಿದ್ದ. ಅವರು ಅಲ್ಲಿ ಇದ್ದಷ್ಟು ಹೊತ್ತು ತುಂಬಾ ಸಹನೆಯಿಂದ ಗೌರಿಯನ್ನು ನೋಡಿದ್ದು ಅಂದೇ ಮೊದಲು. ಮುಖದ ತುಂಬಾ ನಗು ಹರಡಿಕೊಂಡೇ ಇದ್ದಳಾಕೆ. ಇಬ್ಬರು ಕೂಡಿ ಏನೇನೋ ಖರೀದಿ ಮಾಡಿ, ಹೋಗುವಾಗ ಹೊರಗೆ ನಿಂತಿದ್ದ ನನ್ನತ್ತ ಒಂದು ಕ್ಯಾಷುಯಲ್ ಸ್ಮೈಲ್ ಒಗೆದು ಹೋಗಿದ್ದಳು. ಅಚ್ಚರಿಯೆಂದರೆ ಅದುವರೆಗೂ ಆಕೇನ ಕಂಡಾಕ್ಷಣ ನನ್ನಲ್ಲಿ ಉಕ್ಕುತ್ತಿದ್ದ ತಿರಸ್ಕಾರ. ಉಪೇಕ್ಷೆ ಅಂದು ಮಾತ್ರ ಏಕೋ, ಎಲ್ಲೋ ಕಮರಿಹೋದಂತಿತ್ತು.

ಒಂದು ಕಂಪನಿಯ ಬಾಸ್ ಆದವರು ತನ್ನ ಕೈಕೆಳಗಿನ ನೌಕರಳೊಡನೆ ಹೀಗೆ ವರ್ತಿಸಲು ಹೇಗೆ ಸಾಧ್ಯ.....? ಹೀಗೆ ಸ್ನೇಹದಿಂದಿರಲು ಹೇಗೆ ಸಾಧ್ಯ....? ಅದೂ ಹೋಗಿ ಹೋಗಿ ಗೌರಿ ಅಂತಹ ಹೆಣ್ಣಿನೊಡನೆ! ಏನಿದೆ ಅವಳಲ್ಲಿ.....? ಅಲ್ಲಿ ಕೆಲಸ ಮಾಡುವ ಅನೇಕರ ಬಾಯಿಂದ ಅವನ ಶಿಸ್ತಿನ ಬಗ್ಗೆ, ಸಿಟ್ಟಿನ ಬಗ್ಗೆ ಕೇಳಿ ಗೊತ್ತಷ್ಟೆ. ಏನೋ ಮಂಕುತನ ಅಂದೆಲ್ಲ ನನ್ನನ್ನು ಕವಿದಿತ್ತು.

ಏನೋ ಮಾಡಲು ಹೋಗಿ ಏನೇನೋ ಮಾಡಿ ಮೊದಲ ಬಾರಿಗೆ ಅಂದು ರಾಜುವಿನ ಅಸಹನೆಗೆ ಗುರಿಯಾಗಿದ್ದೆ.

"ಯಾಕಿಷ್ಟು absent minded.......?" ಎಂದಿದ್ದರು.

ಹೌದು, ನನ್ನ ಮನಸ್ಸಿನ ಆಬ್ಸೆನ್ಸು..... ಪ್ರೆಸೆನ್ಸು....... ವಿಪರೀತದ ಏರುಪೇರಿಗೆ ಗುರಿಯಾಗಿ ಔಟ್ ಆಫ್ ಕಂಟ್ರೋಲ್ ಆಗಿಹೋಗುತ್ತಿತ್ತು. ನನ್ನನ್ನು ಹೀಗೆ ಮಂಕು ಮಾಡುವ ಘಟನೆಗಳು ಘಟಿಸುತ್ತಲೇ ಇದ್ದವು ಆಗಾಗ. ಒಮ್ಮೆ ನಮ್ಮ ಹಿಂದಿನ ಬೀದಿಯ ಗಿರಿಜೆ ಸಿನಿಮಾ ಹಾಲ್‌ನಲ್ಲಿ ಆ ಬಾಸ್‌ನನ್ನು, ಅವನ ಹೆಂಡತಿಯನ್ನೂ ನನಗೆ ಪರಿಚಯಿಸಿದ್ದಳು. ನಾನು ಅದೆಷ್ಟು ಸವಿಯಾಗಿ, ಆತ್ಮೀಯವಾಗಿ ಮಾತನಾಡಿದ್ದೆ.. ಆದರೆ, ಮತ್ತೊಂದು ದಿನ ಗಂಡಹೆಂಡತಿ ಎದುರು ಸಿಕ್ಕಾಗ ನಾನು ಕೊಟ್ಟ ಸ್ಮೈಲ್‌ಗೆ ಯಾವ ಪ್ರತಿಕ್ರಿಯೆ ತೋರಿಸದೇ ಹೊರಟುಹೋಗಿದ್ದರಲ್ಲಾ......? ನನ್ನ ಜೀವನದ ಪ್ರಥಮ ಅವಹೇಳನಕರ ಘಟನೆಯದು.

ಹೌದು, ಇಡೀ ಬಡಾವಣೆ ನನ್ನ ಸ್ನೇಹಕ್ಕಾಗಿ ಹಾತೊರೆದು, ಕಾತರಿಸುತ್ತಿತ್ತು ಎಂದರೆ ಉತ್ಪ್ರೇಕ್ಷೆಯಲ್ಲ. ನಾನಿಲ್ಲದೆ ಈ ಬಡಾವಣೆಯ ಯಾವೊಂದು ಪೂಜೆ, ಸಮಾರಂಭವೂ ನಡೆದಿಲ್ಲ, ನಡೆಯುವುದಿಲ್ಲ. ನನ್ನ ಸಾತ್ವಿಕತೆ, ದೈವಭಕ್ತಿಯೂ ಅಷ್ಟೇ ಮೆಚ್ಚು. ನನ್ನ ಸ್ನೇಹಿತೆಯರೂ ಅಂತಹವರೆ. ವಿಭಿನ್ನಳಾಗಿದ್ದು, ಎಲ್ಲರ ಗಮನ ತನ್ನತ್ತ ಸೆಳೆಯುತ್ತಿದ್ದವಳೆಂದರೆ ಗೌರಿಯೆ. ಯಾವ ಪೂಜೆಯನ್ನೂ ಮಾಡಿದವಳಲ್ಲ, ಯಾರನ್ನೂ ಮನೆಗೆ ಕರೆದವಳಲ್ಲ. 'ಅಯ್ಯ ತಿರುಗ್ಲಿಕ್ಕೆ ಅವಳಿಗೆ ಸಾಲ್ದು ಸಮಯ.....' ಎಂದಾಕೆಯನ್ನು ಲೇವಡಿ ಮಾಡುತ್ತಿದ್ದರು ಹೆಂಗಸರೆಲ್ಲ. ಆದರೇನು? ಯಾರನ್ನೂ ಕೇರ್ ಮಾಡದ, ಯಾವುದನ್ನೂ ಹಚ್ಚಿಕೊಳ್ಳದ ಸ್ವಭಾವದವಳು ಆಕೆ.

ಅದೇಕೋ ಇತ್ತಿತ್ಲಾಗೆ ಅವಳ ಬಗ್ಗೆ ಯೋಚಿಸುವುದು ಹೆಚ್ಚುತ್ತಿದೆ. ಹಾಗವಳ ಕುರಿತ ಯೋಚಿಸಿದಂತೆಲ್ಲ ನನ್ನ ಮನಸ್ಥಿತಿ ಏರುಪೇರಾಗುತ್ತದೆ. ಆಕೆಯ ಆ ನಗುವಂತೂ ನನ್ನನ್ನು ಅಸ್ವಸ್ಥಗೊಳಿಸಿಬಿಡುತ್ತದೆ. ರಾಜುವೂ ಸಹ

"ಈಗೀಗ ನೀನ್ಯಾಕೆ ಒಂಥರಾ ಇರ್ತಿ.....? ಈ ಕ್ಷಣ ಇದ್ದಂಗೆ ಇನ್ನೊಂದು ಕ್ಷಣ ಇರೊಲ್ವಲ್ವಾ.....?" ಎನ್ನುತ್ತಿದ್ದರು.

ನಿಜ ಹೇಳಬೇಕೆಂದರ ರಾಜುವಿಗೆ ಏನನ್ನೂ ಗಮನಿಸಲು ಸಮಯವಿಲ್ಲ. ತಾವಾಯ್ತು, ತಮ್ಮ ಕೆಲಸವಾಯ್ತು. ಅಂತಹ ಅವರ ಗಮನವನ್ನು ಸೆಳೆಯುವ ಮಟ್ಟಿಗೆ ನಾನು ಬದಲಾಗಿದ್ದೇನೆಯೆ? ಎಂದು ಒಳಗೊಳಗೇ ವಿಸ್ಮಯಗೊಳ್ಳುತ್ತೇನೆ ನಾನೆ. ಆದರೇನು, ಅವರನ್ನುವುದು ಸತ್ಯವೆ.

ಈ ಕ್ಷಣ ಆಕಾಶದಲ್ಲಿ ಹಾರುತ್ತಿರುವೆನೋ ಎಂಬಷ್ಟು ಹಗುರ ಎನಿಸುವ ಮನಸ್ಸು ಮರುಕ್ಷಣ ಆ ಆಕಾಶವೇ ಕಳಚಿ ಬಂದು ತಲೆಯ ಮೇಲೆ ಕೂತಿದೆಯೋ ಎಂಬಷ್ಟು ಭಾರ! ಈ ಕ್ಷಣ ಸುಖದ ಖಜಾನೆಯನ್ನೇ ಸೂರೆಗೊಂಡಂತಹ ಮೈಮನ ಬಿರಿಯುವ ಸಂಭ್ರಮ, ಸಂತೃಪ್ತಿ.. ಮರುಕ್ಷಣ ಎಲ್ಲಾ ಕಳೆದುಹೋದಂತಹ ಖಾಲಿತನ, ಬೇಕುಬೇಕೆನ್ನುವ ತಹತಹ! ಏನೀ ವಿಚಿತ್ರ ಅವಸ್ಥೆ.....? ನನ್ನ ಹಗಲುರಾತ್ರಿ ಕೊರೆಯುತ್ತಿದೆ ಈ ಪ್ರಶ್ನೆ. ಈ ಕ್ಷಣ ಸುಖ ಮರುಕ್ಷಣ ದುಃಖ; ಈ ಕ್ಷಣ ಅಳು ಮರುಕ್ಷಣ ನಗು; ಈ ಕ್ಷಣ ಎಲ್ಲಾ ಪಡೆದುಕೊಂಡ ಸಂತೃಪ್ತಿ ಮರುಕ್ಷಣ ಎಲ್ಲಾ ಕಳೆದುಕೊಂಡ ಅತೃಪ್ತಿ.....

ಏನಿಲ್ಲ ನನಗೆ? ಒಳ್ಳೆಯತನಕ್ಕೆ ಮತ್ತೊಂದು ಹೆಸರೇ ಎನ್ನುವಂತಹ ವ್ಯಕ್ತಿತ್ವದ, ಸ್ಫುರದ್ರೂಪಿ ಗಂಡ, ಮುದ್ದಾದ ಮಗ, ಬಂಗಲೆ ಆಳುಕಾಳು, ಹೊರಗೆ ಸುತ್ತಲು ಬೇಕಾದ ವೆಹಿಕಲ್ಲುಗಳು....... ಏನಿಲ್ಲ? ಈ ಮನೇಲಿ ಪ್ರತಿಯೊಂದು ನಡೆವುದೇ ನನ್ನ ಆಜ್ಞೆಯಂತೆ. ನನ್ನ ಹೊರತು ನನ್ನ ಮೇಲೆ ಅಧಿಕಾರ ಚಲಾಯಿಸುವ ಮತ್ತೊಂದು ಪಿಳ್ಳೆ ಇಲ್ಲ. ರಾಜು ಸದಾ ತನ್ನ ಕೆಲಸದಲ್ಲೇ ಮಗ್ನ. ನಾನೆಲ್ಲಿ ಹೋದರೂ, ಏನೇ ಮಾಡಿದರೂ, ಏನೇ ಕೊಂಡರೂ, ಎಷ್ಟೇ ಕಳೆದರೂ ಯಾವುದನ್ನೂ ಕೇಳುವವರಲ್ಲ. ಒಟ್ಟಲ್ಲಿ ಹೇಳಬೇಕೆಂದರೆ ನನ್ನ ತಂಟೆಗೇ ಬರುವವರಲ್ಲ.

ಇದ್ದೊಬ್ಬ ಮಗನೂ ಸೈನಿಕ್ ಸ್ಕೂಲ್ ಸೇರಿದ ಮೇಲೆ ಪೂರ್ಣ ವಿರಾಮ. ಇಷ್ಟೆಲ್ಲ ಆರಾಮ, ಐಷಾರಾಮ, ಸ್ವಾತಂತ್ರ್ಯವಿದ್ದೂ ಈ fluctuating moodನ ಹೊಸ ಸಮಸ್ಯೆ ಹುಟ್ಟಿ ಕಾಡುತ್ತಿದೆ ನನ್ನನವರತ. ಈ ಮೊದಲು, ಹಿಂದೆಂದೂ ಹೀಗಾದ್ದು ನೆನಪಿಲ್ಲ. ಉಹೂಂ..... ಎಷ್ಟು ಕೆದಕಿದರೂ, ಎಷ್ಟು ಮೆಲುಕು ಹಾಕಿದರೂ ಹೀಗೆಂದೂ ಆದ ನೆನಪಿಲ್ಲ. ಹಾಗಾದರೆ ಅದೇಕೆ ದಿಢೀರನೆ ಶುರುವಾಯಿತೋ ಇದು.....? ಅದ್ಹೇಗೆ ಶುರುವಾಯಿತೊ? ಒಮ್ಮಿಂದೊಮ್ಮೆಲೆ ನನ್ನ ಭಾವನೆಗಳು ಇಷ್ಟೊಂದು ಏರುಪೇರಾಗಲು, ಇಷ್ಟು ವರ್ಷಗಳೂ ಒಂದೇ ಸ್ತರದಲ್ಲಿದ್ದ ಈ ಬದುಕು ಹೀಗೆ ಒಮ್ಮಿಂದೊಮ್ಮೆ ಏರಿಳಿತ ಕಾಣಲು ಹೇಗೆ ಸಾಧ್ಯವಾಯ್ತು? ಆಳಕ್ಕೆ ಹೋದಂತೆ, ಹೋದಂತೆ ಅದು ಅಸಾಧ್ಯವೆನಿಸುತ್ತಿದೆ.

ಒಮ್ಮಿಂದೊಮ್ಮೆಲೆ ಹೀಗಾಗಲು ಸಾಧ್ಯವೇ ಇಲ್ಲ ಎನಿಸುತ್ತಿದೆ. ಎಲ್ಲೋ ಭೂಗರ್ಭದಲ್ಲಿ ತಣ್ಣಗೆ ಅಡಗಿ ಕುಳಿತಿರುವ ಲಾವಾರಸದಂತೆ ನನ್ನೊಳಗೇ ಸುಪ್ತವಾಗಿದ್ದ ಎಂಥದೋ

ಆಸೆಗಳ, ನಿರಾಸೆಗಳ ತಾಕಲಾಟಗಳು ಹೀಗೆ, ಈಗ ಒಮ್ಮಿಂದೊಮ್ಮೆಲೆ ಜಾಗೃತಗೊಂಡಿರಬೇಕು........ ಹೌದು! ನಿಜವೇ...... ಆದರೆ, ಎಂದಿನಿಂದ......?

ಆಯಾಸವಾದಂತಾಗಿ ಕಣ್ಮುಚ್ಚಿ ಹಿಂದಕ್ಕೊರಗಿದೆ. ತಟ್ಟನೆ ಎದುರಾದಳು ಗೌರಿ. ಸದಾ ಎಣ್ಣೆ ಬಸಿಯುತ್ತಲೇ ಇರುವುದೋ ಎನಿಸುವ ಚರ್ಮದ, ಕಪ್ಪುವರ್ಣದ, ಸ್ಥೂಲ ಎನಿಸುವ ಕುಳ್ಳಗಿನ ದೇಹದ ಗೌರಿ ನನಗಿಂತಲೂ ಎರಡು ವರ್ಷಕ್ಕೆ ದೊಡ್ಡವಳೇ ಇರಬೇಕು. ನನಗಿಂತಲೂ ಮೊದಲೇ ಈ ಬಡಾವಣೆಯ ವಾಸಿ. ನಮ್ಮ ಮನೆಯಿಂದ ಆರನೆಯ ಮನೆಯೆ ಅವಳದು. ಇಡೀ ಬಡಾವಣೆಯ ಸ್ನೇಹವನ್ನು ಬಂದ ಹದಿನೈದು ದಿನದಲ್ಲೇ ಗಳಿಸಿದ್ದೆ ನಾನು. ಎಲ್ಲಾ ಸಂಪ್ರದಾಯಸ್ಥ ಕುಟುಂಬಗಳು. ಕಂಡ ಕ್ಷಣದಿಂದಲೇ ಅದೇಕೋ ಗೌರಿಯ ಬಗ್ಗೆ ತಿರಸ್ಕಾರ ಹುಟ್ಟಿ, ಬೆಳೆಯುತ್ತ ಹೋಗಿತ್ತು.

ಮೊದಮೊದಲು ಆ ಹೆಣ್ಣಿನಲ್ಲಿ ಆಸಕ್ತಿಯೇ ಇರಲಿಲ್ಲ. ಆಕೆಯ ಸ್ನೇಹ ನೆನಸಿಕೊಳ್ಳಲೂ ಮುಜುಗರ ಎನಿಸುತ್ತಿತ್ತು. ಹತ್ತು ಜನರಲ್ಲಿ ಎದ್ದು ಕಾಣುವ ರೂಪದ, ಸದಾ ಮಾಡ್ ಆಗಿರಲು ಬಯಸುವ ನನಗೆ ಬಡಾವಣೆಗೆ ಅಂಟಿಕೊಂಡಿರುವ ಕಂಪನಿಯ ನೌಕರಳು ಗೌರಿ ಎಂದು ತಿಳಿದು, ಅವಳ ಗಂಡನೂ ಯಾವುದೋ ಕಚೇರಿಯ ಗುಮಾಸ್ತನು ಎಂದು ಗೊತ್ತಾದ ಮೇಲೆ ಅವಳಲ್ಲಿನ ಆಸಕ್ತಿ ಇನ್ನಷ್ಟು ಕ್ಷೀಣಿಸಿತ್ತು. ಯವಾಗಲೋ ಒಮ್ಮೊಮ್ಮೆ ಮಾತ್ರ ಎದುರು ಸಿಕ್ಕಾಗ ಒಂದು ಕಾಟಾಚಾರದ ಸ್ಮಯಲ್ ಕೊಡುವುದರಲ್ಲಿ ಬೇಸರವಾಗಿ ಹೋಗುತ್ತಿತ್ತು.

ಈಗೊಂದು ಮೂರು ತಿಂಗಳಿಂದ ಆ ಕಂಪನಿಗೆ ಹೊಸ ಮ್ಯಾನೇಜರ್ರೂ, ಬಾಸೂ ಬಂದು, ಅವರುಗಳ ಆ ಕಂಪನಿಯ ಕ್ಯಾಂಪಸ್‌ನಲ್ಲಿ ವಾಸಿಸತೊಡಗಿ, ಅವರ ಗೌರಿಯ ಒಡನಾಟ ಎಲ್ಲರ ಕಣ್ಣುಗಳನ್ನು ಚುಚ್ಚತೊಡಗಿದಂತೆ ನನಗೆ ಆಕೇನ ಗಮನಿಸುವುದೇ ಕೆಲಸವಾಯ್ತು. ಒಮ್ಮೆ ಬಾಸ್, ಮತ್ತೊಮ್ಮೆ ಮ್ಯಾನೇಜರ್, ಕೆಲವೊಮ್ಮೆ ಬಾಸ್‌ನ ಹೆಂಡತಿ, ಅಪರೂಪಕ್ಕೊಮ್ಮೆ ಗಂಡ ಮಕ್ಕಳೊಡನೆ ಮುಖದ ತುಂಬಾ ನಗು ಹರಡಿಕೊಂಡು ಸದಾ ಹೊರಗೆ ಸುತ್ತುವಾಗ ಆ ನಗು ಕುರೂಪದ ಆ ಮುಖಕ್ಕೂ ಏನೋ ಒಂದು ಕಳೆ ನೀಡಿದೆಯೋ ಎನಿಸುತ್ತ ಕ್ರಮೇಣ ನಾನಾಕೇನ ಸಮೀಪಿಸಲು ಪ್ರಯತ್ನಿಸತೊಡಗಿದ್ದೆ. ನನ್ನ ಕಾಟಾಚಾರದ ನಗೆಗೆ ಆತ್ಮೀಯತೆಯ ಲೇಪನ ಮಾಡಿ, ಮಾಡಿದ ಪ್ರಯತ್ನಕ್ಕೆ ಕೊನೆಗೂ ಫಲ ಸಿಕ್ಕಾಗ ಒಳಗೊಳಗೆ ಹರ್ಷಿಸಿದ್ದೆ.

ಆಗಲೇ ಈ ವಿವರಗಳನ್ನೆಲ್ಲ ಕಲೆ ಹಾಕಿದ್ದು. ಆ ಬಾಸ್‌ನ ಹೆಸರು ಮದನ್ ಎಂದೂ ಮ್ಯಾನೇಜರ್ ರಾಮುವೆಂದೂ ರಾಮು ಈಕೆಯ ಬಾಲ್ಯ ಸ್ನೇಹಿತೆ ಲತಾಳ ಗಂಡನೆಂದೂ ಈ ನಾಲ್ವರೆ ಅವಳಿಗೆ ಮಿತ್ರರೆಂದೂ. ಕಂಪನಿಯಲ್ಲಿ ಅವರಿಬ್ಬರು ಈಕೆಗೆ ಮೇಲಾಧಿಕಾರಿಗಳು ಮಾತ್ರ. ಎಂದೂ ಪರಸ್ಪರ ಸ್ನೇಹಿತರೆಂದು ತೋರಿಸಿಕೊಳ್ಳುವುದಿಲ್ಲ ಅಲ್ಲಿ. ಆದರೆ ಒಮ್ಮೆ ವರ್ಕಿಂಗ್ ಹವರ್ಸ್ ಮುಗಿಯಿತೆಂದರೆ ಅವರೆಲ್ಲ ಮಿತ್ರರಂತೆ ಕೇವಲ ಮಿತ್ರರು ಬೇರೇನೂ ಅಲ್ಲವಂತೆ...... ಕಿಲಕಿಲನೆ ನಗುತ್ತ ಹೇಳುತ್ತಿದ್ದಳು!

ಮದನ್ ಸೌತೂ ಅವನ ಹೆಂಡತಿ ಸುಪ್ರೀತ ನಾರ್ತೂ. ಆಕೆಗೆ ಹಿಂದಿ, ಇಂಗ್ಲಿಷ್ ಹೊರತು ಬೇರೆ ಭಾಷೆಯ ಗಂಧವಿರಲಿಲ್ಲವಂತೆ.. ಹೀಗಾಗಿ ಅವರುಗಳು ಇನ್ನಷ್ಟು

ಕ್ಲೋಸಂತೆ... ತನ್ನ ಸ್ನೇಹಿತರ ಕುರಿತು ಮಾತಾಡುತ್ತ ಮಾತಾಡುತ್ತ ಅದೆಷ್ಟು ಭಾವುಕಳಾಗುತ್ತಿದ್ದಳವಳು.....? ಅವರ ಬಗ್ಗೆ ಮಾತಾಡುವ ಹೊತ್ತಿಗೇ ಕಂಗಳಲ್ಲಿ ಮಿಂಚು ಮೂಡುತ್ತಿತ್ತು. ಆದರೆ, ನನ್ನ ಕಣ್ಣುಗಳಲ್ಲಿ ಅದೇನು ಕಂಡಳೋ ಒಡನೆ ಹೇಳಿದ್ದಳು. "ನಿಮ್ಗೂ ಅವರ್ನ ಪರಿಚಯಿಸ್ತೀನಿ ಇರಿ......" ಎಂದು. ಆದರೆ, ತನ್ನ ಬಾಯಿಯಿಂದಲೇ ಅವರನ್ನು ಸಾಕಷ್ಟು ಪರಿಚಯಿಸಿದ್ದಳು.

ನಾನು ಆಕೇನ ಸಹಿಸಿಕೊಳ್ಳುವುದನ್ನು ರೂಢಿಸಿಕೊಳ್ಳತೊಡಗಿದೆ. ಅದರ ಪರಿಣಾಮವೋ ಎಂಬಂತೆ ಇನ್ನಷ್ಟು ವಿವರಗಳು ಸಿಕ್ಕವು. ಮದನ್ ತುಂಬಾ sportive, very friendly; ಆದರೆ ಸುಪ್ರೀತ ಸ್ವಲ್ಪ ಮೂಡಿ. ಬಾಯಿನೂ ಅಷ್ಟೇ ಜೋರೇ. ಕೆಲವೊಮ್ಮೆ ಮದನ್ ತೀರ ಒರಟನಂತೆ ವರ್ತಿಸುತ್ತ ಸುಪ್ರೀತಳನ್ನು ರೇಗಿಸಿ, ಅಳಿಸುತ್ತಿದ್ದು.. ಅವರ ಆ ಕಲಹಕ್ಕೆ ತನ್ನನ್ನು ಮಧ್ಯಕ್ಕೆ ಸಿಕ್ಕಿಸಿಕೊಳ್ಳುತ್ತಿದ್ದುದೂ... ರಾಮು ಎಷ್ಟು ಧಾರಾಳಿಯೋ ಲತ ಅಷ್ಟೇ ಜಿಪುಣಿಯಾದರೂ ಅವರ ಪ್ರೇಮಕಲಹ ನೋಡಲೇ ಒಂದು ಚಂದವಂತೆ..

ಇಷ್ಟೆಲ್ಲ ಮಾತಾಡಿಕೊಳ್ಳುವ ಹೊತ್ತಿಗೆ ಗೌರಿ ನಮ್ಮನೆಗೆ ತೀರ ಪರಿಚಿತಳಾಗಿ, ಆತ್ಮೀಯಳಂತೆ ತಿನ್ನುವುದು, ಉಣ್ಣುವುದು ಮಾಡುತ್ತ ಕೆಲವೊಮ್ಮೆ ನನ್ನ ಬಲವಂತಕ್ಕೆ ನನ್ನ ಒಡವೆ, ವಸ್ತ್ರಗಳನ್ನೂ ಧರಿಸುತ್ತ ಸಂಪೂರ್ಣ ನನ್ನ ವಿಶ್ವಾಸಕ್ಕೆ ಸಿಕ್ಕಿಕೊಂಡಿದ್ದಳು. ಇಷ್ಟಾದರೂ ಊಟಿಗೆ ಹೋಗುವುದನ್ನು ಅದ್ಹೇಗೆ ಹೇಳಲು ಮರೆತಳೊ......? ನಾನು ತಲೆ ಕೆಡಿಸಿಕೊಂಡು ಒದ್ದಾಡುತ್ತಿರುವಾಗಲೇ ಪ್ರತ್ಯಕ್ಷಳಾದಳು ಮುಂಬಾಗಿಲಲ್ಲಿ ನಗುತ್ತ. ಆಕೇನ ನೋಡಿದ ಗಳಿಗೆಯೇ ನನ್ನೆಲ್ಲ ಸಂಕಟ, ಆಲಸ್ಯ, ಚಿಂತೆ ಮಂಗಮಾಯವಾಗಿ ನನಗರಿವಿಲ್ಲದೆಯೇ ದನಿಯಲ್ಲಿ ಸಂಭ್ರಮ.. ನನ್ನೊಳಗೇ ಸಂತಸದ ಅಲೆಯುಕ್ಕಿ ಬರುತ್ತಿರುವಂತೆ ಇತ್ತು.. ಆದರದು ಕ್ಷಣಿಕ.

ಇರುವಷ್ಟು ಹೊತ್ತು ಊಟಿಯನ್ನೇ ಮಾತಾಡುತ್ತ, ಊಟಿಯನ್ನೇ ಉಸಿರಾಡುತ್ತ ಉತ್ಸಾಹದ ಚಿಲುಮೆಯಂತೆ ಚಿಮ್ಮುತ್ತಿದ್ದ ಆಕೆಯನ್ನ ನೋಡುತ್ತ, ಕೇಳುತ್ತ ನನ್ನ ತಲೆ ಸಿಡಿಯತೊಡಗಿತು. ನಾನು ಒಳಗೊಳಗೆ ಮುದುಡತೊಡಗಿದೆ. ಇದೊಂದೂ ಗೌರಿಗೆ ತಿಳಿಯದು. ನನ್ನ ಒಳಗು ಅವಳಿಗೆ ಅರ್ಥವಾಗದು.

ಅಂತೆಯೇ ಒಂದು ಸಂಜೆ ಸುಪ್ರೀತಳ ಮನೆಗೆ ನನ್ನ ಕರೆದೊಯ್ದೆಬಿಟ್ಟಳು. ನಾನು, ಸುಪ್ರೀತ ಒಳಗೆ ಮಾತಾಡುತ್ತಿರುವಾಗ ಆಕೆ ಹೊರಗೆ ರಾಮು, ಮದನ್‌ರೊಟ್ಟಿಗೆ ಮಾತಾಡುತ್ತ, ನಗುತ್ತಲಿದ್ದಳು. ಎಂಥ ಸುಖವಾದ, ಸಮೃದ್ಧವಾದ ನಗೆ ಆಕೆಯದು.......! ನಾನೂ ಆಕೆಯಂತೆ ನಗಬೇಕೆಂದು ಎಷ್ಟೇ ಪ್ರಯತ್ನಿಸಿದರೂ ಕೇವಲ ಸಪ್ಪಗಿನ, ನೀರಸ ನಗೆಯೇ ನನ್ನ ತುಟಿಗಳಲ್ಲಿ ಹೊಮ್ಮುತ್ತಿದ್ದುದು.

ಅವಳ ಆ ನಗು ಕೇಳಿದಂತೆಲ್ಲ ಒಂದು ತೆರನ ಅಭದ್ರತೆ, ಅಸ್ಥಿರತೆಯಿಂದ ತಳಮಳಗೊಳ್ಳುತ್ತ ಹೋದೆ ನಾನು. ನನ್ನ ಈ ತಳಮಳ ಹೆಚ್ಚಿದಂತೆಲ್ಲ ಸುಪ್ರೀತಳಿಗೆ ಸಮೀಪಳಾಗುತ್ತ ಹೋದೆ. ಆತ್ಮೀಯತೆಯ ಪರಾಕಾಷ್ಠೆಯಲ್ಲಿ ಒಮ್ಮೆ

"ನೀವು ಯಾವಾಗಲೂ ಹೇಗೆ ನಗ್ನಗ್ತಾ ಎಷ್ಟು ಫ್ರೆಂಡ್ಲಿಯಾಗಿ ಇರ್ತೀರಲ್ಲಾ.....? ಆದ್ರೆ

ಗೌರಿ ನೀವು ತುಂಬಾ ಮೂಡಿ ತುಂಬಾ ಜೋರು ಅಂತೆಲ್ಲ ಹೇಳಿದ್ಲು.. ಬಟ್, ಖಂಡಿತ ನೀವು ಹಾಗನ್ಸಲ್ಲಪ್ಪ.........." ಎಂದೂ

ಇನ್ನೊಮ್ಮೆ

"ಮದನ್ ನೋಡ್ಲಿಕ್ಕೆ ಎಷ್ಟು mild ಅನ್ನಿಸ್ತಾರಲ್ವಾ...?"

ಎಂದ ನನ್ನ ಮಾತಿಗೆ ಸುಪ್ರೀತ ಸೋಜಿಗಳಾಗಿ

"ಅದೇನು ಅನ್ನಿಸೋದು......? ಅವ್ರು ಯಾವಾಗ್ಲು ಮೈಲ್ಡೇ...."

ಎಂದಾಗ ನಾನು ತುಂಬಾ ಕ್ಯಾಷುಯಲ್ಲಾಗಿ

"ಛೆ, ಛೆ, ನನಗೇನು ಗೊತ್ತೇಳಿ ನಿಮ್ಮ ಬಗ್ಗೆ......? ಗೌರಿ ಹಾಗಂತಿದ್ಲು ಮದನ್ ತುಂಬಾ ಒರಟೂ, ಸುಪ್ರೀತನ್ನ ಅಳಿಸ್ತಾನೇ ಇರ್ತಾರೆ..... ಅಂತ" ಎಂದೂ

ಮತ್ತೊಮ್ಮೆ

"ನೀವಿಬ್ರು ಒಳ್ಳೆ ಫ್ರೆಂಡ್ಸ ತರಹ ಇದೀರಪ್ಪ ಒಮ್ಮೆನೂ ಕಿತ್ತಾಡಿದ್ದು ನೋಡ್ಲೆ ಇಲ್ಲ......"

ನಾನಂದಾಗ ಸುಪ್ರೀತ ಬೆರಗಾಗಿ, ನಗುತ್ತ ಕೇಳಿದ್ದಳು

"ನಿಮ್ಗೆ ಹಾಗೆ ಕಿತ್ತಾಡ್ತ ಇದ್ರೆ ಇಷ್ಟನಾ.....?"

ನಾನಾಗ ತುಂಬಾ ಇನ್ನೋಸೆಂಟಾಗಿ

"ಅಯ್ಯಯ್ಯೋ ಇಲ್ಲಪ್ಪ, ಗೌರಿ ಹೇಳ್ತಿದ್ಲು ನಂಗೆ ಅವರಿಬ್ಬರ ಜಗಳ ಬಿಡಿಸೋದೇ ಕೆಲ್ಸ ಅಂತ ಅದಕ್ಕೆ......." ಎಂದಿದ್ದೆ.

ರಾಜೂ ಅಂತೂ ಮೊನ್ನೆ ಕೇಳಿಯೇಬಿಟ್ಟರು

"ಏನು ತುಂಬಾ ಖುಷಿ ಈಗೀಗ.....?" ಅಂತ. ನನ್ನ ನಗುವೇ ಅವರಿಗುತ್ತರ.

"ಎಲ್ಲಿ ಗೌರಿ ಕಾಣ್ತಿಲ್ಲ......" ಎಂದು ಕೇಳುವುದನ್ನೂ ಮರೀಲಿಲ್ಲ ಅವರು.

ನಾನು ಅಸಡ್ಡೆಯಿಂದ

"ಅಯ್ಯ ಯಾರಿಗ್ಗೊತ್ತೀ.....?" ಎಂದಿದ್ದೆ.

ಹೌದು, ನಾನೂ ಆಕೇನ ನೋಡಿ ಬಹಳ ದಿನಗಳೇ ಆಗಿದ್ದವು. ನಾನಾದರೂ ಅವಳನ್ಯಾಕೆ ಗಮನಿಸಲು ಹೋಗಲಿ.......? ಸುಪ್ರೀತಳ ಜತೇಲಿ ಸಿಟಿಗೊ ಸಿನಿಮಾಗೋ ಇಲ್ಲ ಅವಳ ಮನೆಗೋ ಹೋಗುತ್ತ ಅವರಿಬ್ಬರನ್ನು ನಮ್ಮನೆಗೆ ಆಹ್ವಾನಿಸುತ್ತ ಅವರಿಗೆ ತಿಂಡಿಯೋ, ಊಟವೋ ಸಿದ್ಧಗೊಳಿಸುತ್ತ ಹೀಗೆ ನಾನಂತೂ ಸದಾ ಬ್ಯುಸಿ.

ಮೊದಲಿನ ಹಾಗೆ ಗೌರೀನ entertain ಮಾಡೋಕು ಆಗೋಲ್ಲ. ಅದೇಕೋ ಮತ್ತೆ ಮೊದಲಿನ ಅದೇ ತಿರಸ್ಕಾರ, ಉಪೇಕ್ಷೆ. ಆಕೆನ ನೋಡಿದೊಡನೆ ನನ್ನೆಲ್ಲ ಪ್ರಯತ್ನ ಮೀರಿ ಚಿಮ್ಮಿ ಚೆಲ್ಲುತ್ತದೆ. ಹಿಂದಿನ ಅದೇ ನಗು ಕಾಟಾಚಾರಕ್ಕೆ ಅರಳುತ್ತದೆ. ಈಗೀಗ ರಾಮು, ಮದನ್ ಅವರೊಟ್ಟಿಗೂ ಕಾಣುತ್ತಿಲ್ಲ ಅವಳು. ಮೊದಲಿನಂತಿಲ್ಲದೆ ಯಾಕೋ ಡಲ್ಲಾಗಿರುವಳು ಎಂದು ಕಂಡವರು ಹೇಳುವುದನ್ನು ಕೇಳಿದ್ದೇನೆ.

ಮೈಮನಸ್ಸೆಲ್ಲ ಒಮ್ಮೆಲೇ ಹಗುರಾಗಿ, ಹಾಯೆನಿಸುತ್ತಿದೆ...... ಸ್ಥಿರತೆ, ಭದ್ರತೆ ಮೆಲ್ಲನೆ ನನ್ನನ್ನು ಆಕ್ರಮಿಸುತ್ತಿವೆ...... ಬತ್ತಿದ್ದ ಜೀವಸೆಲೆಯ ಚಿಗುರಿಗೆ ಸಾಕ್ಷಿಯೊ ಎಂಬಂತೆ ಹಿಂದೆ ನನ್ನ ಮನಸ್ಥಿತಿಯನ್ನೆ, ನನ್ನ ಬದುಕನ್ನೆ ಏರುಪೇರಾಗಿಸಿದ್ದ ಅದೇ ಆ ನಗು.. ನನ್ನ

ಜೀವನವೇ ಅರ್ಥರಹಿತ ಎಂಬ ಭಾವನೆಯನ್ನು ಹುಟ್ಟುಹಾಕುತ್ತ ನನ್ನೆಲ್ಲ ಸುಖ, ಸಂಪತ್ತು ನಿರರ್ಥಕ, ನನ್ನ ಅಸ್ತಿತ್ವವೇ ನಿರರ್ಥಕ ಎಂಬ ಭಾವನೆಯನ್ನು ಬೆಳಸಿ ಬೀಗುತ್ತಿದ್ದ ಅದೇ ಆ ನಗುವಿಂದು ನನ್ನೀ ಅಧರಗಳಲ್ಲಿ ಅರಳುತ್ತಿದೆ.

ಈ ಸಂಭ್ರಮದ ನಡುವೆಯೇ ಹೌದು, ಈ ನಡುವೆಯೇ ಒಂದೆರಡು ಬಾರಿ ಮನೆಬಾಗಿಲಿಗೆ ಬಂದಿದ್ದ ಗೌರಿಯನ್ನು ಒಳಗೂ ಕರೆಯದೆ ಹೊರಗೆ ಮಾತನಾಡಿಸಿ ಕಳುಹಿಸಿದ್ದೆ. ಆದರೂ ಮೊನ್ನೆ ಒಮ್ಮೆ ಬಂದಿದ್ದಳು. ತಾನು ಆರ್.ಸಿ.ಪುರದ ಕಂಪನಿಯ ಬ್ರಾಂಚ್‌ಗೆ ಟ್ರಾನ್ಸ್‌ಫರ್‌ಗೆ ಪ್ರಯತ್ನಿಸುತ್ತಿರುವುದಾಗಿ ತಿಳಿಸಿದಳು. ನಾನು ಹೆಚ್ಚು ಕೆದಕದೇ ಕಳುಹಿಸಿದ್ದೆ.

ಮನೆಯ ಪಕ್ಕದಲ್ಲಿರುವ ಕಂಪನಿ ಬಿಟ್ಟು ಇಲ್ಲಿಂದ ಇಪ್ಪತ್ತೋ, ಇಪ್ಪತ್ತೈದೋ ಮೈಲು ದೂರದಲ್ಲಿರುವ ಬ್ರಾಂಚ್‌ಗೆ ತಾನಾಗಿ ಹೋಗಲು ಬಯಸುತ್ತೇನೆ ಎಂದಾಕೆ ಹೇಳಿದರೆ ನಂಬಲು ನನಗೇನು ಲೂಸೇ......? ಎಲ್ಲೋ ಮದನ್ ಇಲ್ಲಿಂದ ಕಿತ್ತು ಹಾಕ್ತಿರ್ಬೇಕು...! ಹಾಗೆ ಹೇಳ್ಕೊಳ್ಳೋಕೆ ಅವಳಿಗೆ ಅವಮಾನವಲ್ವೆ ಮತ್ತೇನು......?

ಅರೆ! ಮರೆತಿತ್ತು. ಇಂದೇ ಅವಳ ವರ್ಗಾವಣೆಯನ್ನು ನಿರ್ಣಯಿಸುವ ದಿನ. ಸುಪ್ರೀತ ಮೊನ್ನೆ ಹೇಳಿದ್ದಳಲ್ಲವೆ......? ಏಕೋ ನಗು ಬಂತು. ಮೈಮನ ಹತ್ತಿಯಂತೆ ಹಗುರಾಗಿ, ತಂಗಾಳಿಯ ಗತಿಯಲ್ಲಿ, ಹಕ್ಕಿಯಂತೆ ಹಾಯಾಗಿ ವಿಹರಿಸುತ್ತಿರುವಂತೆ ಗೌರಿಯನ್ನು ತಲೆಯಿಂದ ಝಾಡಿಸಿ ಸುಪ್ರೀತಳ ಮನೆಗೆ ಹೋಗಲು ತಯಾರಿ ನಡೆಸತೊಡಗಿದೆ. ಅಷ್ಟರಲ್ಲಿ ಕಾರಿನ ಹಾರ್ನ್ ಕೇಳಿಸಿ ಅಚ್ಚರಿಯಿಂದ ಕಿಟಕಿಯಲ್ಲಿ ಇಣುಕಿದೆ. ಅದೇನು.....? ನಂಬಲೇ ಆಗುತ್ತಿಲ್ಲ... ಮದನ್‌ರ ಕಾರು ಗೌರಿಯ ಮನೆಯ ಮುಂದೆ ನಿಂತಿದೆ? ಕಣ್ಣಗಲಿಸಿ ನಿಂತೆ.

ಹೌದು, ಅನುಮಾನವೇ ಇಲ್ಲ ಕೆಳಗೆ ಇಳಿಯುತ್ತಿರುವುದು ರಾಮು, ಮದನ್, ಲತ ಮತ್ತು ಸುಪ್ರೀತ. ನಾಲ್ವರು ಗೌರಿಯ ಮನೆ ಪ್ರವೇಶಿಸಿದಂತೆಯೇ ಮುಂಬಾಗಿಲು ಮುಚ್ಚಿಕೊಂಡಿತು. ದುಸ್ವಪ್ನ ಕಂಡಂತೆ ಬೆಚ್ಚಿಬಿದ್ದೆ. ಇದೇನಿದೂ.....? ಇದ್ದಕ್ಕಿದ್ದಂತೆ ಏನಾಗುತ್ತಿದೇ.....? ಸುಪ್ರೀತ ಶಾಪಿಂಗ್‌ಗೆ ಹೋಗಲು ಸಂಜೆ ನನ್ನ ಬರಹೇಳಿದ್ದು ಮರೆತಳೇ.....? ಹತ್ತು ನಿಮಿಷಗಳಾದರೂ ಯಾರ ಸುಳಿವೂ ಇಲ್ಲವಲ್ಲಾ...... ತಲೆಯ ನರಗಳು ಸೇದತೊಡಗಿದವು. ಎಷ್ಟೇ ಅದುಮಿ ಹಿಡಿದು ನಿಂತರೂ, ಕೂತರೂ ತೊಡೆಗಳು ಕಂಪಿಸತೊಡಗಿದವು. ಚಡಪಡಿಕೆ ಹೆಚ್ಚಾದಂತೆ ಹೊರಕ್ಕೂ, ಒಳಕ್ಕೂ ಓಡಾಡತೊಡಗಿದೆ.

ಅರ್ಧ ಗಂಟೆಯಾದರೂ ಯಾವ ಸೂಚನೆಯೇ ಇಲ್ಲ. ನನ್ನೊಳಗೆ ಯಾವುದೋ ಜ್ವಾಲಾಗ್ನಿ ಸ್ಫೋಟಗೊಳ್ಳಲು ಕಾತರಿಸುತ್ತಿದೆಯೋ ಎನಿಸತೊಡಗಿ ಒಳಗೆಲ್ಲ ಧಗೆ ಹೆಚ್ಚಿ ಮುಚ್ಚಿದ್ದ ಕಿಟಕಿಗಳನ್ನೆಲ್ಲಾ ತೆರೆದು ದೇಹವನ್ನು ಸರಳಿಗಾನಿಸಿ ನಿಂತೆ. ಛೆ, ಈ ಸುಪ್ರೀತಳೇಕೆ ಹೀಗೆ ಮಾಡಿದಳು.....? ನಾನಿಲ್ಲಿ ಆಕೆಗಾಗಿ ಸಿದ್ಧಳಾಗಿ ನಿಂತಿರುವ ಜ್ಞಾನವಾದರೂ ಬೇಡವೇ....? ಏನೆಂದು ತಿಳಿದಿರುವಳೀಕೆ ನನ್ನನ್ನ......? ಇಲ್ಲಿಯೇ ಪಕ್ಕದಲ್ಲಿ ಬಂದು atleast ಹೇಳಿ ಕಳುಹಿಸುವಷ್ಟಾಗಲಿ ಇಲ್ಲವೇ ಮನೆಯಿಂದಲೇ ಇಂದು ಬರಲಾಗದು ಎಂದು ರಿಂಗ್ ಕೊಡುವಷ್ಟಾಗಲಿ ಸೌಜನ್ಯವಿಲ್ಲವೇ ಈಕೆಗೇ.....?

ನನ್ನ ಮನಸ್ಸು ಕುದಿಯುತ್ತಿದೆ..... ಎದೆಯೊಳಗೆಲ್ಲಾ ಸೇದಿದಂತಾಗುತ್ತಿದೆ..... ಕತ್ತಲು ಎಲ್ಲೆಡೆ ಆವರಿಸಿಕೊಳ್ಳುತ್ತಿದೆ...... ನೋಟವನ್ನು ಆಗಸಕ್ಕೆ ಸರಿಸಿದೆ. ಎಲ್ಲವೂ ಮಂಕೂ ಎಲ್ಲಾ ಅಸ್ಪಷ್ಟ. ತಟ್ಟನೆ ಗೌರಿಯ ಮನೆಯ ಮುಂಬಾಗಿಲು ತೆರೆದು ಎಲ್ಲರೂ ಹೊರಬಂದರು. ನಾನೇನು ಮಾಡುತ್ತಿದ್ದೇನೆ ಎಂಬ ಅರಿವೇ ನನಗಿರಲಿಲ್ಲ. ಒಂದೇ ಉಸಿರಿಗೆ ಮಹಡಿ ಮೆಟ್ಟಿಲನ್ನು ದಡದಡನೆ ಇಳಿದು, ಬಾಣದಂತೆ ಹೊರಕ್ಕೆ ಚಿಮ್ಮಿದೆ. ಅಷ್ಟರಲ್ಲಿ ಕಾರು ನಮ್ಮನೆಯನ್ನು ಹಾಯ್ದಿತ್ತು.

ಬವಳಿ ಬಂದಂತಾಗಿ ಕಣ್ಮುಚ್ಚಿ ಬಾಗಿಲಿಗೇ ಕುಸಿದೆ. ಗೇಟು ಶಬ್ದವಾದಾಗಲೇ ಎಚ್ಚರ. ಬೆಚ್ಚಿ ಬೆದರಿ ಕಣ್ತೆರೆದರೆ ಗೌರಿ........! ಎದುರಿಗೇ ನಿಂತಿದ್ದಾಳೆ ನಗುತ್ತಾ......!

✦ ✦

ಬಸವಿ

ರಾತ್ರೋರಾತ್ರಿ ಮಗಳು ದೇವೀರಿಯೊಡನೆ ಸೂರೇನಳ್ಳಿ ಪ್ರವೇಶಿಸಿದಳು ಶಾಂತವ್ವ. ಹಟ್ಟಿಯೊಳಕ್ಕೆ ಕಾಲಿಟ್ಟ ಘಳಿಗೆಯೇ ಹುಯಿಲಿಟ್ಟವು ನಾಯಿಗಳು. ನಿದ್ದೆಗಣ್ಣನ್ನು ಹೊಸಕುತ್ತಲೇ ಕುತೂಹಲದಿಂದ ನೆರಕೆಯ ಹೊರಕ್ಕೆ ಕಣ್ಣು ನೆಟ್ಟು ನಿಂತಿತ್ತು ಇಡೀ ಹಟ್ಟಿ. ಬಾಗಿಲು ಸರಿಸಿ ಆಶ್ಚರ್ಯದಿಂದ ಬಾಯಗಲಿಸಿ ನಿಂತ ದ್ಯಾಮಯ್ಯ ಹೊರಗೆ ನಿಂತಿದ್ದ ತಂಗಿಯನ್ನು, ಆಕೆಯ ಮಗಳನ್ನು ನೋಡಿದ. ಅವ್ವನಿಗಿಂತಲೂ ಎತ್ತರಕ್ಕೆ ಬೆಳೆದು ನಿಂತಿದ್ದ ಸೊಂಪಾದ ಚೆಲುವಿನ ಖನಿ ಸೊಸೆ ದೇವೀರಿಯನ್ನು ನೋಡಿಯೇ ಈ ಹೊತ್ತಿನಲ್ಲಿ ಅವರುಗಳು ಬಂದಿರುವ ಕಾರಣವನ್ನು ಊಹಿಸಿದ ದ್ಯಾಮಯ್ಯ, ಮಗಳು ಲಕ್ಷ್ಮಿಗೆ ಒಲೆ ಅಂಟಿಸಿ ಎಸರಿಡಲು ಹೇಳಿ ತಾನು ತಂಗಿಯ ಮುಂದೆ ಕುಳಿತ.

"ನಿಮ್ಮಾವ ಸತ್ತಿದ್ದೆ ತಡ, ನಾನೆಷ್ಟು ಬಡ್ಕಂಡ್ರೂ ಕಿವಿಗಾಕೆಣ್ದಂಗೆ ಸಣ್ಣಪ್ಪುಗಳೆಲ್ಲ ಸೇರ್ಕೆಂಡು ಈ ಹುಡ್ಗಿಗೆ ಮುತ್ತು ಕಟ್ಟಿಸಿ, ಬಸವಿ ಮಾಡಿದ್ರು. ಇದಕ್ಕೊ ಬರೇ ಓದಾ ಹುಚ್ಚು. ಯಂಗೊ ಅಂಗಿಂಗೆ ಏಳ್ನೆ ಕಲಾಸು ಪಾಸು ಮಾಡಿದ್ದೆ ಎಚ್ಚಾತು. ಆಟೊತ್ಗೆ ಏನು ಅರೀದ ಹುಡ್ಗಿ ಕತ್ತು ಕೊಯ್ದುಬಿಟ್ರು..... ನಿಮ್ಮಾವ ಬದ್ಕಿದ್ರೆ ಆ ಮಾತು ಬ್ಯಾರೆ ಇತ್ತಿಡು. ನಾನೊಬ್ಬೆ ಹೆಣ್ಣೆಂಗ್ಸು ಏನ್ಮಾಡ್ಲಿ? ವರಗ್ನೋರ್ದು ಬಿಡು, ಸ್ವಂತ ಸಣ್ಣೆಪ್ಪುಗಳೇ ತಮ್ಮ ತೀಟೆ ತೆವಲುಗಳಿಗೆ ಈ ಹುಡ್ಗೀನ ಮಾರಾಟ ಮಾಡಕೆ ನೋಡಿದ್ರೆ ನನಗ್ಯಾರೆ ದಾರಿ ಏನಣ್ಣಾ......? ಅದ್ಕೆಯ ರಾತ್ರೋರಾತ್ರಿ ಯಾವನ್ನೂಗ್ಗ ಯೇಳ್ದಂಗೆ ಕೇಳ್ದಂಗೆ ಹುಡಿಗಿನ್ಕರ್ಕಂಡು ಅದೇ ಓಡ್ಬಂದೆ....."

ಬಿಕ್ಕಿ ಬಿಕ್ಕಿ ಅಳುತ್ತಾ ಶಾಂತವ್ವ ವಿವರಣೆ ನೀಡಿದಾಗ ದ್ಯಾಮಯ್ಯ ನಿಟ್ಟುಸಿರಿಟ್ಟ.

"ಅದ್ನರಿಯವ್ವಾ...... ಆದ್ರೆ ಈ ಊರಿನ ಜನವಾದ್ರು ಯಾವ ಗನಸ್ತ್ರು ಯೇಳೂ......? ನಮ್ಮಟ್ಟಿ ಹೆಣ್ಮಕ್ಳು ಮೈನೆರೆಯದೇ ಕಾಯ್ಕಂಡಿರ್ತಾವೆ ನಾಯಿಗಳು. ಅದ್ರಾಗು ಇಂತಹ ಹೆಣ್ಣು ಕಟ್ಕಂಡು ಎಲ್ಲೋದ್ರು ತಂಟೆ ತಪ್ಪಿದ್ದಲ್ಲ ಬಿಡೂ. ಏನೋ ನಮ್ಮಟ್ಟಿವೊ ಇಲ್ಲ ಪಕ್ಕದೂರ್ ಹಟ್ಟಿವೊ ಯಾರನ ಹುಡ್ಗ ಸಿಕ್ರೆ ಅತ್ಲಾಗೆ ಲಗ್ನ ಮಾಡ್ಬಿಡಾದು ಅಷ್ಟೆ...."

ಬಾಯಲ್ಲಿ ಹಾಗೆ ನುಡಿದರೂ ಮನದಲ್ಲಿ ಶಂಕೆ ತಪ್ಪದು. ಈ ಊರ್‍ನಾಗೆ ಅವನು ಇರತೊಡಗಿ ಇಪ್ಪತ್ತು ವರ್ಷ. ಅದ್ಯಾಕೋ ದೇವೀರಿ ನೋಡ್ದಾಗಿಂದ ಕಣ್ಣಿಗೆ ನಿದ್ದೆ ಹತ್ತವಲ್ದು. ಕಣ್ಮುಚ್ಚಿದರೇ ಸಾಕು ಚೇರ್ಮಿನ್ ಶನಿದೇವಯ್ಯ, ಅವನ ಮಕ್ಕಳು ಮರಿಯ, ಮಾದೇವ ಕಣ್ಮುಂದೆ ಬರುತ್ತಿದ್ದರು. ಹೆಸರಿಗೆ ತಕ್ಕಂತೆ ಈ ಊರಿಗೆ ಶನಿಯೇ ಅವ್ನು. ಲಂಪಟತನ, ದುರುಳತನದ ಪ್ರತೀಕ. ಅವನಿಗೆ ಬಲಿಯಾದ ಈ ಹಟ್ಟಿ ಹೆಣ್ಣುಗಳ ಲೆಕ್ಕವಿಟ್ಟವರ್‍ಯಾರು? ಅವನ ಕಣ್ಣು ಬಿದ್ದ ಹೆಣ್ಣು ತಪ್ಪಿಸಿಕೊಳ್ಳುವುದು ಅಸಾಧ್ಯದ ಮಾತು.

ಇತ್ತೀಚೆಗೆ ಅವನ ಪಡಿಯಚ್ಚಿನಂತೆ ಕಿರಿಯ ಮಗ ಮಾದೇವನದೂ ಊರಲ್ಲಿ ಹಾವಳಿ ಹರಡುತ್ತಿತ್ತು. ಈ ಅಪ್ಪ, ಮಗನನ್ನು ಎದುರು ಹಾಕಿಕೊಳ್ಳುವ ಎದೆಗಾರಿಕೆ ಊರಲ್ಲಿ ಯಾರಿಗೂ ಇಲ್ಲ. ಆದರೆ ಇವರಿಬ್ಬರಿಗೆ ವ್ಯತಿರಿಕ್ತವಾಗಿದ್ದ ಹಿರಿಯವ ಮರಿಯ. ಯಾವ ತಂಟೆ ತಗಾದೆಯೂ ಇಲ್ಲದೆ ತನ್ನ ಪಾಡಿಗಿರುವ ಇಪ್ಪತ್ತೈದರ ಕಟ್ಟುಮಸ್ತಾದ, ಪೊದೆ ಮೀಸೆಯ ಚೆಲುವ. ಕಣ್ಣೋಟದಲ್ಲೆ ಹೆಣ್ಣುಗಳ ಬಯಕೆಗೆ ಕಿಚ್ಚಿಟ್ಟು, ಪೊದೆಮೀಸೆಯ ಮರೆಯ ಆ ನಗುವಲ್ಲೇ ಅವರನ್ನು ಕೊಲ್ಲುತ್ತ, ಸದಾ ಆ ಹರೆಯದ ಹೆಣ್ಣುಗಳ ಕನಸಲ್ಲಿಯೇ ವಿಹರಿಸುವವ. ಹೋದ ವರ್ಷ ಮದ್ವೆಯಾಗಿ, ಮೊನ್ನೆ ಹೆರಿಗೆಯಲ್ಲಿ ಹೆಂಡತಿ ಮತ್ತು ಕೂಸು ತೀರಿಕೊಂಡ ಮೇಲೆ ಸೊರಗಿ, ಮೆತ್ತಗಾಗಿದ್ದ. ಮಾದೇವನ ಹೆಂಡತಿ ಮನೆ ತುಂಬಿದ ಮೇಲೆ ಹೆಚ್ಚುಕಮ್ಮಿ ಇವನ ವಾಸ ತೋಟದಲ್ಲಿಯೇ. ಹೀಗಾಗಿ ಊರವರ ಕಣ್ಣಿಗೆ ಬೀಳುವುದೇ ಅಪರೂಪ.

ಇನ್ನು ಮೇಲ್ನೋಟಕ್ಕೆ ಶನಿದೇವಯ್ಯನ ಹಿಂಬಾಲಕನಂತಿದ್ದೂ ಅವನಿಗೆ ಕಡು ವಿರೋಧಿ ಪರಶಿವಗೌಡ, ಶನಿದೇವಯ್ಯನ ಎಲ್ಲಾ ಹೊಲಸುತನವನ್ನು ತುಂಬಿ ಕೊಂಡಿದ್ದರೂ ಸಹ, ಅವನನ್ನು ಚೇರ್ಮನ್‌ಗಿರಿಯಿಂದ ಕೆಳಗಿಳಿಸಲು ಜನರ ಮನವೊಲಿಸಲು ಸೋಗಲಾಡಿಯಂತೆ ಓಡಾಡುವ ಖದೀಮ. ಇವರುಗಳ ಹಿಂದೆ ದೊಡ್ಡ ಗುಂಪುಗಳು ಇವರು ಮಾಡುವ ಹಲ್ಕಾತನಕ್ಕೆ ಜಯ್ ಎನ್ನಲು ಸದಾ ಸಿದ್ಧವಿರುವುವು.

ಇಡೀ ಹಳ್ಳಿಯ ಪ್ರೀತಿ ವಿಶ್ವಾಸಕ್ಕೆ, ಗೌರವಕ್ಕೆ ಪಾತ್ರನಾಗಿರುವ ರಾಘವಯ್ಯ ಈ ಊರಿನ ಪಾಠಶಾಲೆಯ ಮೇಷ್ಟ್ರು. ಯಾರನ್ನು ಎದುರು ಹಾಕಿಕೊಳ್ಳದ, ನೀತಿ ನಿಯಮಗಳಿಲ್ಲದ ಸಮಯಾನುವರ್ತನೆಯ ಚಾಣಾಕ್ಷ. ಅಂತೆಯೇ ಗೌರವಾನ್ವಿತ ವ್ಯಕ್ತಿ. ಇನ್ನು ಹಟ್ಟಿಯ ಜನರೋ ಶುದ್ಧ ಮೂಢರು. ಸ್ವಂತ ಬುದ್ಧಿಯಿರದೆ, ತಮ್ಮ ತಮ್ಮಲ್ಲಿಯೇ ಕಚ್ಚಾಡುತ್ತ ಸದಾ ಬೇರೆಯವರ ತೆವಲುಗಳಿಗೆ ಬಲಿಯಾಗಲು ಸಿದ್ಧವಿರುವವರು. ಒಗ್ಗಟ್ಟಿನ ಅರ್ಥವೇ ಅರಿಯದ, ತಮ್ಮವರು ಉದ್ಧಾರವಾದರೇ ಸಹಿಸದ ಕುದುಗು ಬುದ್ಧಿಯ ಜನ. ಇಂತಹವರ ನಡುವೆ ಸಿಕ್ಕಿಕೊಂಡಿದ್ದಳು ದೇವೀರಿ.

ಕಣ್ಮುಚ್ಚಿ ತೆರೆಯುವುದರೊಳಗೆ ದೇವೀರಿಯ ಚೆಲುವು ಆ ಹಳ್ಳಿಗೇ ಮಿಂಚಾಗಿ, ನೋಡು ನೋಡುತ್ತಿರುವಂತೆಯೇ ಇಡೀ ಊರಿಗೆ ಕಿಚ್ಚಿಟ್ಟಿತು. ಸ್ವಲ್ಪ ಒತ್ತಿದರೂ ರಕ್ತ ಚಿಮ್ಮುವುದೋ ಎಂಬಂತಹ ಮೈಬಣ್ಣ. ದುಂಡು ಮುಖದಲ್ಲಿ ನೋಡುವವರ ಚಿತ್ತ ಚಂಚಲಗೊಳಿಸುವ ಅರಳುಗಣ್ಣುಗಳು, ಬಿಗಿದು ಕಟ್ಟಿದ ಕುಪ್ಪಸದಲ್ಲೂ ಹೊರಗೆ ಇಣುಕುವ ತುಂಬಿದೆದೆ, ಸಣ್ಣನೆಯ ನಡುವಿಗೆ ಮೀನಖಂಡ ಕಾಣುವಂತೆ ಸೀರೆ ಸುತ್ತಿ, ಕಾಲಿನ ಗೆಜ್ಜೆಯನ್ನು ಘಲ್ ಎನಿಸುತ್ತ ಹೊರಟರೆ ಗಂಡಸರೆದೆ ಝಲ್ ಎಂದು ನೋಡುತ್ತಲೇ ಕಚ್ಚೆಗಳು ಸಡಿಲಗೊಳ್ಳುತ್ತಿದ್ದವು.

ಊರಿಗೆ ಊರೇ ಆಕೆಗಾಗಿ ಪರಿತಪಿಸಿ, ನಿದ್ದೆಗೆಟ್ಟಿತು. ಸೂಕ್ಷ್ಮ ತಿಳಿದ ಮಾವ ದ್ಯಾಮಯ್ಯ ಗಂಡುಗಳ ಬೇಟೆಗೆ ತೊಡಗಿದರೆ, ಹಣವನ್ನು ಚೆಲ್ಲಿ, ತಿನ್ನಿಸಿ ಕುಡಿಸಿ, ಹೆದರಿಸಿ ಬೆದರಿಸಿ ಯಾರೂ ಆಕೆಯನ್ನು ಮೂಸದಂತೆ ಮಾಡುವಲ್ಲಿ ಸಫಲವಾಯ್ತು ಮಾದೇವನ ಗುಂಪು. ಆದರೂ ಹಟ್ಟಿಯ ಪಡ್ಡೆ ಹುಡುಗರ ಅಂತರಂಗದಲ್ಲಿ ಅವಳನ್ನು ಅನುಭವಿಸುವ ಆಸೆ ಅಡಗದೆ ಮಾದೇವನೋ, ಮತ್ಯಾರೋ ಆದಮೇಲೆ ನಮಗಾದರೂ ಸರಿ ಎಂಬ ಧೋರಣೆ ಬೆಳೆದು, ಅವರತ್ತ ಅವಳ ಮನವೊಲಿಸಲು ತಾವೇ ಮುಂದಾದರು.

ಆದರೆ ದೇವೀರಿಯ ಮನಸ್ಸು ಮಾತ್ರ ಸದಾ ಆ ಹಳ್ಳಿಯ ಶಾಲೆಗೆ ಹೋಗಿ ಬರುವ ಮಕ್ಕಳಲ್ಲಿಯೇ ಹುದುಗಿ, ಅವಳ ಆಸೆಗಣ್ಣು ಪಾಠಶಾಲೆಯತ್ತಲೇ ತೆರೆದಿತ್ತು. ಹಟ್ಟಿಯ ಮಕ್ಕಳಿಗೆ ತನಗೆ ತಿಳಿದಷ್ಟು ಓದು ಬರಹದ ಅರಿವು ಮಾಡಿಕೊಡುವುದರಲ್ಲಿ ಸಂತೃಪ್ತಿ ಪಡೆಯುತ್ತಿತ್ತು. ತನ್ನನ್ನು ಸುತ್ತುವರಿದು ನಿಂತಿದ್ದ ಸಮಸ್ಯೆಯ ಗಂಭೀರತೆಯ ಅರಿವು ಅವಳಿಗೆ ಇಲ್ಲವೆಂದಲ್ಲ. ಆದರೆ ಆಕೆಯದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಸದಾ ತಲೆ ಮೇಲೆ ಕೈ ಹೊತ್ತು ಕೂರುವ ಅವ್ವನನ್ನು

"ಯಾಕವ್ವ ಸುಮ್ಕೆ ಯೋಚ್ನೆ ಮಾಡಿ, ಮಾಡಿ ದೇಹ ಸವೆಸ್ಕೆಂತಿ? ನನ್ನ ಹಣೆಬರಹದಾಗಿ ಏನೈತೋ ಅಂಗಾಗ್ತೈತೆ ಬಿಡು....." ಎಂದು ತಾನೇ ಸಂತೈಸುತ್ತಿದ್ದಳು.

ಎಂದೂ ತನ್ನ ಭವಿಷ್ಯಕ್ಕಾಗಿ ಅಳಲಿಲ್ಲ ಕೊರಗಲಿಲ್ಲ. ಆದ್ರೆ ಅವಳ ಮಾತಿನಂತೆ ನಿರ್ಲಿಪ್ತವಾಗಿರಲು ಶಾಂತವ್ವನಿಗೆ, ದ್ಯಾಮಯ್ಯನಿಗೆ ಸಾಧ್ಯವಾಗದಾಯ್ತು. ಶನಿದೇವಯ್ಯ ದೇವೀರಿಯನ್ನು ಪರ್ಮನೆಂಟಾಗಿ ಇಟ್ಟುಕೊಳ್ಳಲು ಸಿದ್ಧನಾದ. ಅದಕ್ಕಾಗಿ ಏನೂ ಮಾಡಲೂ ತಯಾರಾದ. ಆದರೆ ಆದದ್ದೇ ಬೇರೆ.

ಅಂದು ಸೂರ್ಯ ಮುಳುಗುವ ಸಮಯದಲ್ಲಿ ಕೆರೆಯಲ್ಲಿ ಮಿಂದು, ಕೆರೆಯ ಏರಿಯ ಮೇಲೆ ಮನೆಯತ್ತ ಹೊರಟಿದ್ದ ದೇವೀರಿಗೆ ತೋಟದ ಕಡೆಯಿಂದ ಬರುತ್ತಿದ್ದ ಮರಿಯ ಎದುರಾದ. ಅರೆಕ್ಷಣ ನೋಟಗಳು ಸಂಧಿಸಿದವು. ಮುಂದಕ್ಕೆ ನಡೆಯುತ್ತ "ನಮ್ಮೂರಿನ ನಿದ್ದೆಗೆಡಿಸಿದವಳು ಇವಳೇ ಇರಬೇಕು" ಎಂದು ಮನಸ್ಸಲ್ಲಿಯೇ ಅಂದುಕೊಂಡು ಹಿಂದಕ್ಕೆ ತಿರುಗಿದ ಮರಿಯ. ಆಗಲೇ "ಯಾರಿವನೂ.....?" ಎಂದುಕೊಂಡು ಹಿಂದಕ್ಕೆ ತಿರುಗಿದಳು ದೇವೀರಿ. ತಟ್ಟನೆ ಕತ್ತು ತಿರುಗಿಸಿ ಹೊರಟ ಮರಿಯ.

ಆದರೆ ದೇವೀರಿ ಯಾಕೋ ಮತ್ತೆ ಮತ್ತೆ ನೋಡಿದಳು. ಅಂದಿನಿಂದ ಸೂರ್ಯ ಮುಳುಗುವ ಹೊತ್ತಿಗೆ ದೇವೀರಿಯ ಕಾಲ್ಗಳು ಕೆರೆಯತ್ತ ಹೊರಟರೆ, ಊರೊಳಗೆ

ಅಪರೂಪವಾದ ಮರಿಯ ಆಗಾಗ ಕಣ್ಣಿಗೆ ಬೀಳತೊಡಗಿದ. ಅದುವರೆಗೂ ಸಮಚಿತ್ತದಿಂದ, ಶಾಂತವಾಗಿದ್ದ ಮನಸ್ಸುಗಳು ಏರಿಳಿತಗೊಂಡವು. ಲಕ್ಷ್ಮಿ ಮರಿಯನ ವಿಷಯವೆಲ್ಲ ಚಾಚೂ ತಪ್ಪದೆ ದೇವೀರಿಯೆದುರು ಹೇಳಿ

"ಇತ್ತಿತ್ಲಾಗೆ ಮಂಕಾಗವ್ನೆ ಕಣೆ, ಮೊದ್ಲಂಗಿಲ್ಲ......" ಅಂದ್ಲು.

"ಒಮ್ಮೆ ನನ್ನ ಕಣ್ಣಿನಾಗೆ ನೋಟ ನೆಡ್ಲಿ ಸಾಕು, ಆ ಕಿಚ್ಚೆಬ್ಬಿಸೋ ನೋಟಕ್ಕೆ, ಕೊಲೆಪಾತಕ ನಗೂಗೆ ಜೀವಬರಿಸಿ ನಾನದಕ್ಕೆ ಬಲಿಯಾಗದಂಗೆ ಇರಲಾರೆ...... ಒಂದೇ ಒಂದು ನೋಟ ಸಾಕು....."

ಎಂದು ತನ್ನ ಮನದಳಲು ಲಕ್ಷ್ಮಿಯೆದುರು ದೇವೀರಿ ಬಿಚ್ಚಿದಾಗ ಮಧ್ಯಸ್ಥಿಕೆ ವಹಿಸಲು ಆಕೆ ಹೊರಟಳು. ಅವಳ ಆಸೆ, ಅಳಲನ್ನು ಮನಕರಗುವಂತೆ ಮರಿಯನ ಮುಂದೆ ಲಕ್ಷ್ಮಿ ಹೇಳಿದಾಗ ಅವನು ನಕ್ಕು, ತಲೆಕೊಡಹಿ ಹೋಗಿಬಿಟ್ಟ. ದೇವೀರಿ ಕಂಗಳು ತುಂಬಿ ಹರಿದವು. ಅವಳ ಹಗಲುರಾತ್ರಿ, ಕನಸುಮನಸ್ಸಿನಲ್ಲೂ ಮರಿಯನೇ ತುಂಬಿ, ಇನ್ನು ತಡೆಯದಾದ ಹೆಣ್ಣು ಸಮಯ ನೋಡಿ ಅವನನ್ನು ತೋಟಕ್ಕೇ ಹಿಂಬಾಲಿಸಿ ಹೊರಟಳು. ಅಂಗಿ ಕಳಚಿ ಪಂಚೆ ಎತ್ತಿಕಟ್ಟಿ ಇನ್ನೇನು ಕೆಲಸದಲ್ಲಿ ತೊಡಗಬೇಕು

"ಮರಿಯಾ...." ಎಂಬ ಸ್ವರ ಕೇಳಿಸಿ ಬೆಚ್ಚಿ ತಿರುಗಿದ ಮರಿಯ.

ಮರದ ಮರೆಯಿಂದ ಹೊರಬಂದು ತಲೆತಗ್ಗಿಸಿ ನಿಂತಳು ದೇವೀರಿ.

"ನೀ...... ನೀನೂ......" ಎಂದು ತೊದಲುತ್ತಲೇ ಅವಳತ್ತ ಅಡಿಯಿರಿಸಿದ.

ಅವನು ಸಮೀಪ ಬರುತ್ತಲೇ ಮೆಲ್ಲನೆ ತಲೆಯೆತ್ತಿ, ಅವನ ಅಚ್ಚರಿಯ ನೋಟಕ್ಕೆ ತನ್ನ ನೋಟ ನೆಟ್ಟು

'ಮರಿಯಾ.....' ಎಂದು ಮೆಲ್ಲನುಸುರಿದಳು.

ತುಟಿಗಳು ಮೆಲ್ಲನೆ ಕಂಪಿಸುತ್ತಿದ್ದವು. ಮರಿಯ ಸೋತ. ಆ ನೋಟದಲ್ಲಿ ಹರಿದುಬಂದ ಪ್ರೀತಿಯ ಕಾವಿಗೆ ಮೈ ಬೆಚ್ಚಗಾಗಿ, ಏನೋ ಹೇಳಲು ತವಕಿಸುತ್ತಿದ್ದ ತುಟಿಗಳ ಕಂಪನಕ್ಕೆ ದೇಹ ಕಾವೇರಿ, ಬಯಕೆಯ ಭಾರಕ್ಕೆ ಬಳಲಿದಂತೆ ನಿಂತಿದ್ದ ಹೆಣ್ಣಿನತ್ತ ಅವನಿಗರಿವಿಲ್ಲದೆ ಕೈ ಚಾಚಿದಾಗ ಉಡದಂತೆ ಅವನನ್ನು ಕಚ್ಚಿಕೊಂಡಳಾಕೆ.

ಹುಲ್ಲು ಬಣವೆಯ ಮೆತ್ತೆಯಲ್ಲಿ ಅವಳನ್ನು ಪೂರ್ಣವಾಗಿ ಆವರಿಸಿದ ಮರಿಯ ಯಾವುದೋ ವರ್ಣಿಸಲಾಗದ ಪ್ರೇಮದ ಸೆಳವಿಗೆ ಸಿಕ್ಕು, ಸುಖದ ಸವಿಯೊಳಗೆ ಮುಳುಗಿಹೋದ. ಎಂದು ಕಲ್ಪಿಸಿಕೊಳ್ಳಲು ಆಗದಂತಹ ಅನುರಾಗದ ಅನುಭವದಲ್ಲಿ ಮಿಂದು, ಹೊಸ ಜೀವ ಪಡೆದ. ಸವಿದಷ್ಟೂ ಸವಿಯುವ ಬಯಕೆ, ಅನುಭವಿಸಿದಷ್ಟೂ ಅನುಭವಿಸುವ ಹುಮ್ಮಸ್ಸು, ತೀರದ ದಾಹ ಅವರದು.

ಆದರೆ ಈ ಒಡನಾಟ ದೇವೀರಿಗಾಗಿ ಪರಿತಪಿಸುತ್ತಿದ್ದವರ ಒಡಲಿಗೆ ಬೆಂಕಿ ಸುರಿಯಿತು. ಮಾದೇವ ಹುಚ್ಚನಂತೆ ತಲೆಕೂದಲು ಕಿತ್ತುಕೊಂಡರೆ, ಪರಶಿವಯ್ಯ ತನ್ನ ಶತ್ರುವಿನ ಮೊದಲ ಸೋಲಿಗೆ ಹಾಲು ಕುಡಿದು ಕುಣಿದಾಡಿದ. ಸಂತಸದ ಭರದಲ್ಲಿ ಎಲ್ಲರೆದುರಿಗೆ ಶನಿದೇವಯ್ಯನನ್ನು ಹೀಯಾಳಿಸಿದ. ಆದರೆ ಶನಿದೇವಯ್ಯ ಎಲ್ಲರ ಎಣಿಕೆಗೆ ವಿರುದ್ಧವಾಗಿ ಶಾಂತನಾಗಿ ಕಂಡ. ಆದರೆ ಒಳಗೆ ಜ್ವಾಲಾಮುಖಿ!

ಹೆಣ್ಣಿನ ವಿಷಯದಲ್ಲಿ ಮೊದಲ ಪರಾಭವ, ಅದೂ ಮಗನಿಂದಲೇ. ತಾನು ಆಸೆಪಟ್ಟದ್ದು ತನ್ನ ಕೈ ಬಿಡುವುದೆಂದರೆ......? ರಾತ್ರಿಯಾಯಿತೆಂದರೆ ತನ್ನ ಮಂಚ, ಹಾಸಿಗೆ, ದಿಂಬು, ಹೊದಿಕೆ ಎಲ್ಲವೂ ದೇವೀರಿಯಾಗೇ ಕಾಣಿಸುತ್ತಿರಲಿಲ್ಲವೆ? ಕೈ ಕೈ ಹಿಸುಕಿಕೊಂಡ. ಏಕಾಂತದಲ್ಲಿ ಮೇಷ್ಟ್ರು ರಾಘವಯ್ಯನ ಮುಂದೆ ತನ್ನ ದುಃಖ ತೋಡಿಕೊಂಡ.

"ನನ್ನ ಪ್ರತಿಷ್ಠೆಗೆ ದೊಡ್ಡ ಪೆಟ್ಟು. ಹೋಗಿ, ಹೋಗಿ ಆ ಕೀಳುಜಾತಿಯ ಬಸವಿಯ ಸಂಗದಲ್ಲಿ ತಿಳಿಯದೆ ಮಗ ಏನಾದರೂ ಯಚ್ಚುಕಮ್ಮಿ ಮಾಡಿಕಂಡ್ರೆ ಅಂಬ ಗಾಬರಿ, ಹೆದರಿಕೆ ಮೇಷ್ಟ್ರೇ.. ನೀವು ಅವನಿಗೆ ನಾಕು ಬುದ್ದಿ ಮಾತು ಯೇಳ್ಬೋಡ್ರಿ ಮೇಷ್ಟ್ರೆ..."

ಅಂತ ರಾಘವಯ್ಯನನ್ನು ಮಗನಿಗೆ ಬುದ್ಧಿವಾದ ಹೇಳಲು ಕಳುಹಿಸಿದ. ಮೇಷ್ಟ್ರ ಮಾತುಗಳನ್ನು ಸಾವಧಾನದಿಂದ ಕೇಳಿಸಿಕೊಂಡ ಮರಿಯ ನಗುತ್ತಾ ನುಡಿದ

"ಆ ವಿಷಯ ಅತ್ತಿರ್ಲಿ ಮೇಷ್ಟ್ರೆ.. ನೀವೆಷ್ಟೇ ಆಗ್ಲಿ ದೊಡ್ಡರು, ಪಾಠ ಹೇಳೋ ಗುರುಗುಳು. ನಿಮಗಿಂತ ತೆಪ್ಪು, ಸರಿ ಇನ್ಯಾರಿಗೆ ತಿಳಿದೀತು.. ನಂದು ತೆಪ್ಪೊ, ಸರಿನೋ ನಿಮ್ಗೆ ಗೊತ್ತೈತೆ. ಆದ್ರೆ ಬಾಯ್ಬಿಟ್ಟು ಯೇಳ್ಲಾರ್ರಿ.. ನಿಮ್ಯಾಲೆ ನಂಗೆ ಭಾಳ ಯಿಶ್ವಾಸ, ಗೌರವ ಐತೆ ಮೇಷ್ಟ್ರೆ.. ನನ್‌ದೊಂದು ಮಾತು ನಡ್ಸಿ ಕೊಡ್ತಿರಾ.....?"

ಎಂದು ಪ್ರಶ್ನಿಸಿ ಅವರ ಉತ್ತರಕ್ಕೂ ಕಾಯದೆ ತಾನೇ ಹೇಳಿದ

"ನನ್ ದೇವೀರಿಗೆ ಈಗ್ಲೂ ವೋದ ಆಸೆ ತುಂಬ್ಕಂಡೈತೆ. ಏಳ್ನೆ ಕಲಾಸ್ವರ್ಗೂ ಕಲ್ತವ್ಳೆ. ಆದ್ರೆ ಮುಂದೆ ಇನ್ನೂ ಕಲೀಬೇಕನ್ನ ಇಚ್ಚೆ ಆಕೀದು. ಅದನ್ನ ಪೂರೈಸಕೆ ಸಾಧ್ಯವಾ ಮೇಷ್ಟ್ರೆ.....? ನೀವು ಏನಾರ ಮಾಡಕೆ ಆಯ್ತದಾ.....?"

ಅರೆಕ್ಷಣ ಉಸಿರು ಸಿಕ್ಕಿಕೊಂಡಂತಾಯ್ತು ಮೇಷ್ಟ್ರಿಗೆ. ಮಾತನಾಡದೆ ಎದ್ದು ಹೊರಟರು. ಆದರೆ ಅದರ ಬಗ್ಗೆ ಶನಿದೇವಯ್ಯನೊಡನೆ ಸಮಾಲೋಚಿಸುತ್ತ ಅವರ ಚಾಣಾಕ್ಷತೆ ಗರಿಗೆದರಿ ಮಾದೇವ, ಶನಿದೇವಯ್ಯ ಇಬ್ಬರನ್ನೂ ಸಮಾಧಾನಗೊಳಿಸಿದ್ದು, ಇದ್ದಕ್ಕಿದ್ದಂತೇ ಊರೇ ಶಾಂತವಾಯ್ತು.

ದಿನವೂ ಪಾಠ ಕಲಿಸಲು ತೋಟಕ್ಕೇ ಬರುವ ಮೇಷ್ಟರನ್ನು ದೇವರಿಗಿಂತ ಹೆಚ್ಚಿನ ಭಕ್ತಿಯಿಂದ ಕಂಡರು ಮರಿಯ, ದೇವೀರಿ. ಅವಳು ಮೇಷ್ಟರ ಕೃಪೆಯಿಂದ ಪ್ರೈವೇಟಾಗಿ ಪರೀಕ್ಷೆಗೆ ಕೂತಳು. ಪರೀಕ್ಷೆ ಮುಗಿದಾಕ್ಷಣ ಮರಿಯ ಅವಳನ್ನು ವರಿಸುವವನಿದ್ದ. ಇದೂ ಸಹ ಅವರ ಕೃಪೆಯೇ. ಪರೀಕ್ಷೆಯ ಸೆಂಟರ್ ಅಲ್ಲಿಂದ ನೂರು ಮೈಲಿ ದೂರದ ಟೌನಿನಲ್ಲಿ. ಆದ್ದರಿಂದ ದೇವೀರಿ ದಿನವೂ ಹೋಗಿಬರಬೇಕಿತ್ತು. ಮರಿಯನಿಗೋ ಈಗಲೇ ತೋಟದಲ್ಲಿ ವಿಪರೀತ ಕೆಲಸ. ಸರಿ, ಅವಳನ್ನು ಟೌನಿಗೆ ಕರೆದುಕೊಂಡು ಹೋಗಿಬರುವ ಜವಾಬ್ದಾರಿ ಮೇಷ್ಟರ ಪಾಲಿಗೆ. ಇದಕ್ಕಾಗಿಯೇ ಅವರು ಶ್ರಮಿಸಿದ್ದರು. ಆ ಕ್ಷಣ ಮದ್ವೆಯಾಗ ಬಯಸಿದ್ದ ಅವರನ್ನು ತಡೆದು, ಪರೀಕ್ಷೆ ಮುಗಿಯಲಿ ನಾನೇ ನಿಂತು ಮಾಡಿಸುತ್ತೇನೆ ಎಂದು ವಾಗ್ದಾನ ಮಾಡಿದ್ದರು.

ಒಂದೊಂದು ಪರೀಕ್ಷೆ ಮುಗಿಯುತ್ತಿದ್ದಂತೆ ದೇವೀರಿಯ ಆನಂದಕ್ಕೆ ಪಾರವೇ ಇರಲಿಲ್ಲ. ಆದರೆ ಕೊನೆಯ ದಿನದಂದು ರಾತ್ರಿ ಒಂಬತ್ತಾದರೂ ದೇವೀರಿ, ಮೇಷ್ಟ್ರು ಇಬ್ಬರೂ ಬಾರದಿದ್ದಾಗ ಮರಿಯ, ಶಾಂತವ್ವ, ದ್ಯಾಮಯ್ಯ ಗಾಬರಿಗೊಂಡರು. ಹತ್ತು

ಗಂಟೆಯಾದರೂ ಅವರು ಬಾರದಿದ್ದಾಗ ಮರಿಯನಲ್ಲಿ ಚಡಪಡಿಕೆ ಹೆಚ್ಚಾಯ್ತು. ಬಸ್‌ಸ್ಟಾಪಿನಲ್ಲೇ ಕೂತ. ಟೌನಿನಿಂದ ಬರುವ ಬಸ್ಸಿನ ಹಾದಿಗೆ ಕಣ್ಣು ನೆಟ್ಟು ಕೂತಿದ್ದ ಅವನಲ್ಲಿ ಗಾಬರಿ, ಭಯ, ತಳಮಳ. ಜೊತೆಗೆ ಪಕ್ಕಕ್ಕೆ ಕೂತು ಬಿಕ್ಕಳಿಸುತ್ತಿದ್ದ ಶಾಂತವ್ವ, ರಾತ್ರಿಯ ನೀರವತೆಯಲ್ಲಿ ಆ ಬಿಕ್ಕಳಿಕೆ ಅತಿ ಭಯಂಕರವಾಗಿ ಅವನೆದೆಯನ್ನು ನಡುಗಿಸುತ್ತಿತ್ತು. ಕೇಳಲಾರದೆ ಬಲವಂತದಿಂದ ಅಣ್ಣ ತಂಗಿಯನ್ನು ಎಬ್ಬಿಸಿ ಮನೆಗೆ ಕಳುಹಿಸಿದ.

ಮೂಡಣ ಮೆಲ್ಲನೆ ಕೆಂಪಡರುತ್ತ ಸಾಗುತ್ತಿತ್ತು. ಆದರೂ ಚಲಿಸದೇ ಕುಳಿತೇ ಇದ್ದ ಮರಿಯ ಟೌನಿನ ಮೊದಲ ಬಸ್ಸು ಬರುವವರೆಗೆ. ಆ ಬಸ್ಸಿನಿಂದ ದೇವೀರಿ ಕೆಳಗಿಳಿದಾಗ ದೇಹದಲ್ಲಿ ಮಿಂಚು ಹರಿದು, ದಿಗ್ಗನೆದ್ದು ಒಂದೇ ಹಾರಿಗೆ ಅವಳನ್ನು ಸಮೀಪಿಸಿದ್ದ. ಮರುಕ್ಷಣ ಅವಳು ಅವನೆದೆಯಲ್ಲಿ ಅಡಗಿದ್ದಳು. ಆಕೆ ಒಂದೇ ಸಮನೆ ಅಳುತ್ತ, ಬಿಕ್ಕುತ್ತ ಬಡಬಡಿಸುತ್ತಿದ್ದಳು.

"ಮೇಷ್ಟ್ರ ನಿನ್ನೆ ಅದ್ಯಾರೋ ಮೇಡಂ ಮನ್ಯಾಗೆ ನನ್ನೊಬ್ಳನ್ನೆ ಬಿಟ್ಟು ಇಲ್ಲಿರು ಈಗ ಬರ್ತೀನಿ ಅಂತ್ಹೇಳಿ ಬರ್ಲೆ ಇಲ್ಲ.. ನಾನು ರಾತ್ರಿಯೆಲ್ಲ ಒಂದೆಸಮ್ನಾಗಿ ಅಳಾದ್ನೋಡಿ ಆ ಮೇಡಮ್ಮು ಪಸ್ಟ್ ಬಸ್ಸಿಗೆ ಹತ್ಸಿ ಕಳ್ಸಿದ್ರು..... ನಾನಿನ್ಯಾಕೆ ಎಲ್ಲೂ ಓಗಲ್ಲ. ನನ್ನೆಲ್ಲೂ ಕಳುಸ್ಟ್ಯಾಡ....."

ಆದರೆ ಮರಿಯ ಏನನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ದೇವೀರಿ...... ತನ್ನ ದೇವೀರಿ...... ಇಲ್ಲೇ ತನ್ನೆದುರಿಗೇ..... ತನ್ನತ್ತಿರವೇ..... ತನ್ನ ತೆಕ್ಕೆಯಲ್ಲೇ ಇರುವಳು. ಅವಳೆಲ್ಲೂ ಹೋಗಿಲ್ಲ. ಆಕೆ ಕಳೆದುಹೋಗಿಲ್ಲ ಎಂಬ ಸತ್ಯವನ್ನು ಅರಗಿಸಿಕೊಳ್ಳುವುದು ಸುಲಭದ ಮಾತಾಗಿರಲಿಲ್ಲ. ಆಕೆಯನ್ನು ಇನ್ನಷ್ಟು ಗಾಢವಾಗಿ ತಬ್ಬಿಕೊಂಡ. ಬಿಟ್ಟರೆಲ್ಲಿ ಮತ್ತೆ ಕಳೆಯುವಳೋ ಎಂಬಂತೆ ತನ್ನ ಬಾಹುಗಳಲ್ಲಿ ಅವಳನ್ನು ಅಡಗಿಸಿಕೊಂಡ. ಕಣ್ಣಲ್ಲಿ ಕಣ್ಣು ಬೆರಸಿ ಪಿಸು ನುಡಿದ

"ಇನ್ನೊಂದ್ಸಾರಿ...... ಇನ್ನೊಂದ್ಸಾರ ನೀನಿಂಗೆ ನನ್ನಿಂದ ದೂರ ಹೋದ್ರೆ ನಾನು ಬದುಕಲ್ಲ ದೇವಿ..... ನಾನು ಬದುಕಿರಲ್ಲ......"

ಮತ್ತೆ ಅವಳಿಗೆ ಮಾತಾಡಲು ಅವಕಾಶ ಕೊಡಲಿಲ್ಲ. ಅಷ್ಟು ಕಾಲದ ಅಗಲಿಕೆಯ ನೋವು, ವಿರಹದ ತಾಪವೆಲ್ಲ, ಆ ಕ್ಷಣವೇ ಶಮನಗೊಳಿಸುವಂತೆ ಪರಸ್ಪರ ಬೆರೆತರು. ಎಲ್ಲರನ್ನು, ಎಲ್ಲವನ್ನು ಮರೆತರು. ನಿಜವಾಗಿಯೂ ನಡೆದದ್ದೇನು? ಏನಾಯಿತು? ಎಂದು ಮಾತನಾಡಿಕೊಳ್ಳಲು ವ್ಯವಧಾನವೆ ಇರಲಿಲ್ಲ ಅವರಿಗೆ. ಅವರು ಹೀಗೆ ಮೈಮರೆತಿದ್ದಾಗಲೇ ಶನಿದೇವಯ್ಯ, ಮಾದೇವ, ಮೇಷ್ಟ್ರು ಅವರ ಗುಂಪಿನೊಂದಿಗೆ ತೋಟಕ್ಕೆ ದಾಳಿಯಿಟ್ಟರು.

"ಕರೀರೋ ಆ ಲೌಡಿನ ರಾತ್ರಿಯೆಲ್ಲಾ ಯಾವನ ಜತೆಲೋ ಇದ್ದಂದು ಈಗ ನನ್ನ ಮಗುನ್ನ ವೊಲುಸೆಬ್ಬಿಸಾಕೆ ಬಂದಾಳೆ....." ಶನಿದೇವಯ್ಯ ಅಬ್ಬರಿಸಿದಾಗ ಮರಿಯ

"ಅಪ್ಪಾ...." ಎಂದು ಚೀರಿದ. ದೇವೀರಿ ಓಡಿದವಳೇ ಮೇಷ್ಟರ ಕಾಲಿಗೆ ಬಿದ್ದಳು.

"ನೀವೇ ಯೇಳ್ರಿ ಮೇಷ್ಟ್ರೆ ನಾನೆಲ್ಲಿದ್ದೆ ಅಂತ. ನೀವೇ ನಮ್ಮನ್ನ ಕಾಪಾಡ್ರಿ...."

ಕಾಲು ಕೊಡವಿಕೊಂಡು ಹಿಂದಕ್ಕೆ ಸರಿದರು ಮೇಷ್ಟ್ರು

"ಥೂ ಏನ್ ಹೆಂಗ್ಸಮ್ಮ ನೀನೂ.....? ರಾತ್ರಿ ಆ ಮೇಷ್ಟ್ರು ಶ್ರೀನಿವಾಸನ ಜತೇಲಿದ್ದಾಗ, ನಾನು ಬಂದು ನಿನಗೆ ಚೀಮಾರಿ ಹಾಕಿದಾಗ ಎಲ್ಲೋಗಿತ್ತು ನಿನ್ನೀ ಬುದ್ಧೀ.....?"

"ಮೇಷ್ಟ್ರೇ.....? ಮೇಷ್ಟ್ರೇ ಏನೇಳ್ತಿರಿ.....? ಯಾವ ಶ್ರೀನಿವಾಸ ಮೇಷ್ಟ್ರೂ.....? ನನ್ನ ನೀವೇ ಕಾಪಾಡಬೇಕು ಮೇಷ್ಟ್ರೆ........" ಯಾಚಿಸಿದಳು ದೇವೀರಿ.

"ಥೂ ನಾಚಿಕೆಗೆಟ್ಟ ಹೆಂಗ್ಸೆ. ಮರಿಯನಿಗೆ ಮೋಸ ಮಾಡ್ತಿದ್ದೀಯಾ. ಇದೊಳ್ಳೆದಲ್ಲ ಅಂದಾಗ ಏನಂದೆ ನೀನು? ಹೋಗಲೋ ನೀನ್ಯಾರು ನನ್ನ ಕೇಳಾಕೆ..... ಅವ್ನು ಯಾವ ಘನಂದಾರಿ ಅಂಥ ಅವ್ನಿಗೊಬ್ನಿಗೆ ಜೋತಾಡ್ಲಿ.....? ಮತ್ತೆ..... ಮತ್ತೆ....." ತಡವರಿಸುತ್ತ ನಿಲ್ಲಿಸಿದ ಮೇಷ್ಟ್ರಿಗೆ ಮಾದೇವ ಧೈರ್ಯಕೊಟ್ಟ.

"ನೀವು ಹೇಳ್ರಿ ಮೇಷ್ಟ್ರೆ ಹೆದರ್ಬೇಡಿ ಹೇಳ್ರಿ....."

ತಡವರಿಸುತ್ತಲೇ ಮುಂದುವರಿಸಿದರು ಮೇಷ್ಟ್ರು

"ಅದೇ ಅದೇ..... ನಮ್ಮಾವ ಶನಿದೇವಯ್ಯನ್ನೆ ಬಿಟ್ಟೋಳಲ್ಲ ನಾನೂ...."

ಅವ್ನ ಮಾತುಗಳು ಇನ್ನೂ ಮುಗಿದಿರಲಿಲ್ಲ ಮರಿಯ

"ದೇವೀರಿ..... ದೇವೀ....." ಎಂದು ಚೀರುತ್ತ, ಎದೆಯಿಡಿದುಕೊಂಡು ಕೆಳಕ್ಕೆ ಕುಸಿದಿದ್ದ.

ಮೇಷ್ಟ್ರು ಅವರಿಗೆ ಪ್ರತ್ಯಕ್ಷ ದೈವ. ಅವರ ಒಂದೊಂದು ಮಾತೂ ಕಟುಸತ್ಯವಾಗಿ, ಬಾಣದಂತೆ ಚುಚ್ಚಿ, ಎದೆಯಾಳದಲ್ಲಿ ಉಕ್ಕಿದ ನೋವು ದೇಹವಿಡೀ ವ್ಯಾಪಿಸಿ, ಜರ್ಜರಿತಗೊಂಡಿದ್ದ ಮರಿಯ. ಇತ್ತ ಇವರ ಮಾತು ಕೇಳಿ ತಲೆಯೊಮ್ಮೆ ಗಿರ್ರನೆ ತಿರುಗಿ, ಎಲ್ಲವೂ ಶೂನ್ಯವಾಗಿ ಕಣ್ಣಗಲಿಸಿ, ಕಂಬದಂತೆ ನಿಂತಿದ್ದ ದೇವೀರಿ ಎಷ್ಟು ಆಘಾತ ಗೊಂಡಿದ್ದಳೆಂದರೆ ಮರಿಯ ತನ್ನನ್ನು ಕೂಗಿ, ಕುಸಿದಾಗಲು ಚಲಿಸಲು, ಕೂಗಲು ಶಕ್ತಿಯಿಲ್ಲದೆ ನಿಶ್ಚೇಷ್ಟಳಾಗಿ ನಿಂತಿದ್ದಳು. ಸದ್ದುಗದ್ದಲವಿಲ್ಲದೆ ರಾಘವಯ್ಯ ತನ್ನ ಕೆಲಸ ಸಾಧಿಸಿದ್ದ.

ಅವರು ಕೊಟ್ಟ ಆಘಾತದ ಜೊತೆಗೆ ಮರಿಯನ ಸಾವು ದೇವೀರಿಯನ್ನು ಮಲಗಿಸಿಬಿಟ್ಟಿತು. ಸಾಂತ್ವಾನ ಹೇಳುವ ನೆಪದಲ್ಲಿ ಪರಶಿವಗೌಡ ದಿನವೂ ಬರತೊಡಗಿದ. ಹಟ್ಟಿಯ ಗೂಢಾಚಾರರಿಂದ ವಿಷಯ ತಿಳಿದ ಶನಿದೇವಯ್ಯ ಶಾಂತವ್ವನನ್ನು ಕರೆಸಿ

"ಈ ಸಾರಿ ಏನಾರ ಯಚ್ಚುಕಮ್ಮಿ ಆಯ್ತೋ ನೀವ್ಯಾರು ಜೀವಸಹಿತ ಉಳಿಯಲ್ಲ. ಇನ್ನೊಂದು ವಾರದಗೆ ನಿನ್ಮಗ್ಳನ್ನ ಸಿದ್ಧಮಾಡಿ ಕಳಿಸ್ದಿದ್ರೆ ನೋಡು ಮುಂದೇನಾಗ್ತೈತೆ....." ಎಂದು ಬೆದರಿಸಿದ.

ಇತ್ತ ಅಣ್ಣನ ಸಾವಿಗೆ ನೀವೇ ಕಾರಣ ಎಂಬ ಭಯವೊಡ್ಡಿ ಇಡೀ ಹಟ್ಟಿಯನ್ನು ತಲ್ಲಣಗೊಳಿಸಿದ ಮಾದೇವ. ಜನ ಕೆಮ್ಮಲು, ಕ್ಯಾಕರಿಸಲೂ ಹೆದರಿದರು. ಮರಿಯನ ಸಾವಿನ ಪೆಟ್ಟು ಒಂದೆಡೆ, ಇನ್ನೊಂದೆಡೆ ತನ್ನ ದೇಹವನ್ನು ಹರಿದು ತಿನ್ನಲು ಹೊಂಚುತ್ತಿರುವ ನಾಯಿಗಳ ಕಾಟ. ಹಗಲು ರಾತ್ರಿಯೆನ್ನದೆ, ಹೊತ್ತು ಗೊತ್ತಿಲ್ಲದೆ, ಊಟ ನಿದ್ದೆಯಿಲ್ಲದೆ ಯೋಚಿಸಿದಳು ದೇವೀರಿ. ತಲೆಯ ನರಗಳೆಲ್ಲಾ ಹರಿದು ಹೋಗುವವೋ ಎಂಬಂತೆ... ಮೆದುಳು ಸಿಡಿದು ಹೊರಬರುವುದೋ ಎಂಬಂತೆ...

ಆದರೆ ಕಾಲಕ್ರಮೇಣ ಎಲ್ಲವು ಮಾಸುತ್ತ ಬಂತು. ಮರಿಯನ ಸಾವು, ಮೇಷ್ತ್ರ ಮೋಸ ಎಲ್ಲವೂ ಮಾಸಿತು. ದೇವೀರಿ ಮೊದಲಿಗಿಂತಲೂ ಹೆಚ್ಚಿನ ಲವಲವಿಕೆಯಿಂದ, ಒನಪು ವಯ್ಯಾರದಿಂದ ಓಡಾಡುತ್ತಿದ್ದಳು. ಪರಶಿವಯ್ಯನನ್ನು ನೋಡುವುದೇ ತಡ ಲಜ್ಜೆಯಿಂದ ಕೆಂಪಾಗಿ, ನಿಂತಲ್ಲೆ ನುಲಿಯುವಳು. ಶನಿದೇವಯ್ಯ ಎದುರು ಬಂದರೇ ಸಾಕು ಸೆರಗು ಸರಿಪಡಿಸಿಕೊಳ್ಳುತ್ತ ಓರೆನೋಟ ಬೀರಿ, ಕಾಲಿನ ಬೆರಳಿನಿಂದ ನೆಲ ಗೀರುತ್ತ ನಿಲ್ಲುತ್ತಿದ್ದಳು. ಮಾದೇವನತ್ತ ಕೊಂಕು ನೋಟ ಎಸೆದು ಮಾದಕವಾಗಿ ನಗುತ್ತಿದ್ದಳು. ಇದೀಗ ಊರಿಗೇ ಹೊಸ ಕಳೆ.

ಎಲ್ಲರಿಗೂ ದೇವೀರಿ ತಮಗೇ ಒಲಿದಿರುವಳೆಂಬ ಭ್ರಮೆ. ಆದರೂ ಶನಿದೇವಯ್ಯ ಮುಂಜಾಗ್ರತೆ ಎಂದು ರಾಘವಯ್ಯನನ್ನು ಮಾದೇವನ ಮೇಲೆ ಕಣ್ಣಿಡಲು, ಹಟ್ಟಿಯ ಕೆಲ ಹುಡುಗರಿಗೆ ಪರಶಿವಗೌಡನ ಮೇಲೆ ಕಣ್ಣಿಡಲು ಆದೇಶಿಸಿದ. ಪರಶಿವಗೌಡನ ಚೇಲಾಗಳು ಶನಿದೇವಯ್ಯನ ಮೇಲೆ ಕಣ್ಣಿಟ್ಟರೆ, ಮಾದೇವ ಪರಶಿವಗೌಡನ ಮೇಲೆ ಕಣ್ಣಿಟ್ಟ. ಈ ಗೂಢಚಾರಿಕೆ ಪರಸ್ಪರ ಗೊತ್ತಾಗದಂತೆ ನಡೆಯುತ್ತಿತ್ತು.

ಅಂದು ಅಮಾವಾಸ್ಯೆ. ಪರಶಿವಗೌಡ ತೋಪಿನಲ್ಲಿ ದೇವೀರಿಗಾಗಿ ಕಾಯುತ್ತಿದ್ದ. ಆಗಲೇ ರಾತ್ರಿ ಹತ್ತಾಗಿತ್ತು. ಕೆರೆಯ ಪಕ್ಕದ ಮರಗಳ ಗುಂಪು ದಾಟಿ ಮುಂದಕ್ಕೆ ತೋಪು. ಕೆರೆಯವರೆಗೂ ಬಂದ ಮಾವನನ್ನು ಹಿಂದಕ್ಕೆ ಕಳುಹಿಸಿದಳು ದೇವೀರಿ. ಮರಗಳ ಸಾಲಿನಗುಂಟ ನಡೆದವಳನ್ನು ಹಿಂದಿನಿಂದ ಹಠಾತ್ತನೆ ಮೇಲೆರಗಿ ಬಾಯ್ಮುಚ್ಚಿ ಎಳೆದೊಯ್ಯಿತು ಮುಸುಕಿನ ವ್ಯಕ್ತಿಯೊಂದು. ಉಸಿರಾಡಲು ಆಗದೆ ಒದ್ದಾಡುತ್ತಿದ್ದವಳ ಉಡಿಗೆ ಕೈ ಹಾಕಿತು.

ಆಗಲೇ ಯಾರೋ ನಡೆದು ಬರುವ ಸರಸರ ಸಪ್ಪಳ. ಭಯದಿಂದ ಅವಳನ್ನು ಹಾಗೆ ಬಿಟ್ಟು ಕ್ಷಣಮಾತ್ರದಲ್ಲಿ ಮರೆಯಾಯಿತು ಆ ಮುಸುಕಿನ ಆಕೃತಿ. ತಡಬಡಿಸಿ ಎದ್ದು ಓಡಲು ತೊಡಗಿದ ದೇವೀರಿ ನೇರವಾಗಿ ಎದುರಿಗೆ ಬಂದ ಮಾದೇವನಿಗೆ ಡಿಕ್ಕಿ ಹೊಡೆದು ಚೀರಲು ಬಾಯ್ತೆರೆದವಳು ಅವನನ್ನು ಗುರುತಿಸಿ, ಹಾಗೆ ಅವನಿಗೆ ಆತುಕೊಂಡಳು. ನಡುಗುವ ಸ್ವರದಲ್ಲಿ ನಡೆದ ವಿಷಯ, ತಾನೆಲ್ಲಿಗೆ ಹೊರಟಿದ್ದಳೆಂಬ ವಿಷಯ ತಿಳಿಸಿದಾಗ ಅವಳನ್ನು ಮತ್ತಷ್ಟು ಹತ್ತಿರಕ್ಕೆಳೆದುಕೊಂಡು ಹೇಳಿದ

"ನೀನು, ಲಕ್ಷ್ಮಿ ಮಧ್ಯಾಹ್ನ ಮಾತಾಡ್ಕೆಂಡಿದ್ದು ನನಿಗೆ ಕೇಳ್‌ಲಿಲ್ಲ ಅಂದ್ಕಂಡ್ಯಾ......? ಇನ್ಮುಂದೆ ಯಾವನೂ ನಿನ್ ತಂಟೆಗೆ ಬರದಂಗೆ ನೋಡ್ಕೆಳ ಜವುಬ್ದಾರಿ ನಂದು. ನೀನು ಧೈರ್ಯವಾಗಿರು. ಅವ್ನ್ಯಾರಂತ ಗೊತ್ತಾಗ್ಲಿಲ್ಲೇನು.....?

"ನಾನು ಸರ್‍ಯಾಗಿ ನೋಡ್ಲಿಲ್ಲ. ಆದ್ರೂ ಸ್ವರ ಮೇಷ್ಟ್ರುದು ಇದ್ದಂಗಿತ್ತು. ಅದೆಂಗಾನ ಹೋಗ್ಲಿ ಆದ್ರೆ, ನಾಳಿಕೆ ಗೌಡ್ರು ನನ್ನೇನ್ಮಾಡ್ತಾರೋ ಏನೋ....." ಸ್ವರದಲ್ಲಿ ಭಯವಿತ್ತು.

ಒಮ್ಮೆಗೆ ಅವಳನ್ನು ದೂರತಳ್ಳಿ ಸಿಡಿದು ನಿಂತ ಮಾದೇವ

"ನಿನ್ನ ಮ್ಯಾಗೆ ಕೈ ಮಾಡೋ ಗಂಡ್ಸು ಅವ್ನು ಯಾವನು ಈ ಹಳ್ಯಾಗೆ ನಾನು ನೋಡೇಬಿಡ್ತೀನಿ. ಒಬ್ಬೊಬ್ಬಿಗೂ ಪಾಠ ಕಲ್ಸೇ ನಿನ್ನತ್ರಕ್ಕೆ ಬರ್ತೀನಿ......" ಎಂದು ಸರಸರ ಹೊರಟ.

ಮೌನವಾಗಿ ಅವನನ್ನು ಹಿಂಬಾಲಿಸಿದಳು ದೇವೀರಿ.

ಮರುದಿನ ಸಿಟ್ಟಿನಿಂದ ಕೆಂಡಾಮಂಡಲವಾಗಿದ್ದ ಪರಶಿವಯ್ಯನ ಮುಂದೆ ಅಳುತ್ತ, ಹೆದರಿದ ಹುಲ್ಲೆಯಾಗಿ ರಾತ್ರಿ ನಡೆದುದ್ದೆಲ್ಲ ಚಾಚೂ ತಪ್ಪದೆ ವಿವರಿಸಿದಳು. ಉರಿದುರಿದು ಬಿದ್ದ ಗೌಡ

"ಆ ಬೋಳಿಮಗನ್ಗೆ ಆಟೊಂದು ಕೊಬ್ಬಾ.....? ನನ್ನೇನು ಅವ್ನು ನೋಡ್ಕೆಳಾದು ತಿರುಬೋಕಿ....... ಅವ್ನೂ ಅವನಪ್ಪನ್ನೂ ಯೆಂಗೆ ನೋಡ್ಕಾಳದು ನನಿಗೂ ಚನ್ನಾಗೊತ್ತೈತೆ.... ಈಗ್ನೀನು ಹೋಗು. ನಾನು ಮತ್ತೆ ಯೇಳಿ ಕಳುಸ್ತೀನಿ......" ಅಂದ.

ಗೌಡನ ಪ್ರತಿಯೊಂದು ಚಲನವಲನದ ಮೇಲೆ ನಿಗಾ ಇಟ್ಟ ಹಟ್ಟಿಯ ಹುಡುಗರಿಂದ ಅಂದು ಸಾಯಂಕಾಲವೇ ಶನಿದೇವಯ್ಯನಿಗೆ ಸುದ್ದಿ ಮುಟ್ಟಿ, ತಾನೆ ಹೊರಟ ದೇವೀರಿಯ ಬಳಿಗೆ. ಮನೆಮಂದಿಯೆಲ್ಲಾ ಅವನಿಗೆ ಉದ್ದ ಅಡ್ಡಬಿದ್ದರು. ಎಲ್ಲರೂ ಎದ್ದರೂ ದೇವೀರಿ ಮಾತ್ರ ಅವನ ಕಾಲ್ಗಳನ್ನು ಬಿಡಲೇ ಇಲ್ಲ. ದುಃಖತಪ್ತಳಾದ ಅವಳಿಗೆ ಸೆರಗು ಪೂರ್ಣ ಜಾರಿದ್ದರ ಅರಿವೇ ಇರಲಿಲ್ಲ

"ನನ್ನ ನೀವೇ ಕಾಪಾಡಿ ಧಣಿ....... ನೀವಲದೆ ನಮಗ್ಯಾರು ದಿಕ್ಕೂ....?" ಎನ್ನುತ್ತ ಅದುವರೆಗಿನ ಎಲ್ಲ ವಿದ್ಯಮಾನಗಳನ್ನ ತಿಳಿಸಿ ಅವನ ಕಾಲ್ಗಳನ್ನು ಮತ್ತಷ್ಟು ಬಿಗಿಯಾಗಿ ಅದುಮಿದಳು. ಸ್ಮೃತಿ ತಪ್ಪಿದಂತಾಯ್ತು ಅರೆಕ್ಷಣ ಶನಿದೇವಯ್ಯನಿಗೆ. ಸಾವರಿಸಿಕೊಂಡು, ಅವಳಿಗೆ ಧೈರ್ಯ ನೀಡಿ ಯುದ್ಧಕ್ಕೆ ಹೊರಡುವ ಸಿಪಾಯಿಯಂತೆ ಹೊರಟ ಅವಳ ಮನೆಯಿಂದ. ಯಾರನ್ನು ನಂಬಲಿ, ಯಾರನ್ನು ಬಿಡಲಿ ಎಂಬ ಸ್ಥಿತಿ ಅವನದು.

ಮುಂದಿನ ಒಂದೇ ವಾರದಲ್ಲಿ ತಂದೆ ಮಗನಿಗೆ ಜಗಳವಾಗಿ, ಮಾದೇವ ಮನೆಬಿಟ್ಟು ಹೊರಬಂದು ಹೆಂಡತಿಯನ್ನು ತವರಿಗಟ್ಟಿದ. ಅಪ್ಪ, ಮಗ ಇಬ್ಬರ ಕೋಪಕ್ಕೂ ಗುರಿಯಾಗಿ ರಾಘವಯ್ಯ ತತ್ತರಿಸಿ ಊರು ಬಿಡುವ ಹವಣಿಕೆಯಲ್ಲಿದ್ದು, ಗೌಡ ಮೇಲೆ ಬೀಳಲು ಸಮಯ ಹೊಂಚುತ್ತಿದ್ದುದನ್ನು ಅರಿತು ಮೆಲ್ಲನೆ ಅವನತ್ತ ವಾಲಿದ. ರಾಘವಯ್ಯನಂತಹ ಚಾಣಾಕ್ಷನನ್ನು ಬಿಟ್ಟು ಕೊಡುವಷ್ಟು ಮೂಢನಲ್ಲ ಗೌಡ.

ಶಿವರಾತ್ರಿಯ ದಿನದಂದು ಕಾಯುತ್ತಿದ್ದ ಸಮಯ ತಾನಾಗಿ ಒದಗಿ ಬಂತು. ಜಾಗರಣೆಯ ಮರುದಿನ ಬೆಳಗ್ಗೆಯೇ ಪರಶಿವಗೌಡನ ತೋಟದಲ್ಲಿ ಚಲ್ಲಾಪಿಲ್ಲಿಯಾಗಿ ಬಿದ್ದಿದ್ದ ಮಾವಿನ ಕಾಯಿಗಳನ್ನು, ಕೆಳಗುರುಳಿದ್ದ ಎಳನೀರುಗಳನ್ನು ನೋಡಿದ ಆಳು ಒಡನೆ ಗೌಡರಿಗೆ ಸುದ್ದಿ ಮುಟ್ಟಿಸಿದ. ಅಲ್ಲಿಯೇ ಗೌಡರ ಪಕ್ಕದಲ್ಲಿದ್ದ ರಾಘವಯ್ಯ ಬುದ್ಧಿ ಉಪಯೋಗಿಸಿದ

"ಗೌಡ್ರೆ, ಇದೆಲ್ಲ ಅ ಹಟ್ಟಿ ಹುಡುಗರನ್ನ ಕಟ್ಕಂಡು ಮಾದೇವ ಮಾಡಿರೋ ಕೆಲ್ಸ ಅನ್ನದ್ರಲ್ಲಿ ಯಾವ ಅನುಮಾನವೂ ಇಲ್ಲ. ಪಾಪ! ಆ ಹುಡ್ಗಿ ದೇವೀರಿನ್ನ ಕಾಡಕಂತ ತೋಪಿನ ಸುತ್ತಮುತ್ತ ಓಡಾಡೋನು ಅವನಲ್ದೆ ಬ್ಯಾರೆ ಯಾರೂ ಇಲ್ಲ ಬಿಡ್ರಿ....."

ಅಂದಿದ್ದೆ ತಡ ಸೂರೇನಳ್ಳಿ ಹತ್ತಿಕೊಂಡು ಉರಿಯತೊಡಗಿತು. ಅದರಲ್ಲಿ ನೊಂದವರು ಬೆಂದವರು ಎಷ್ಟು ಎಂದು ಲೆಕ್ಕವೇ ಸಿಗದಾಯ್ತು. ಶನಿದೇವಯ್ಯ, ಗೌಡರು ಆಸ್ಪತ್ರೆಯಲ್ಲಿ ಸಾವಿನೊಡನೆ ಸೆಣಸಾಡುತ್ತಿದ್ದರೆ ಮಾದೇವ ರಾಘವಯ್ಯನ ಕೊಲೆಯ

ಆಪಾದನೆಯ ಮೇಲೆ ದಸ್ತಗಿರಿಯಾದ. ಹಲವಾರು ಕುಟುಂಬಗಳು ಊರನ್ನು ತೊರೆದಿದ್ದವು. ಹಬ್ಬದ ಸಡಗರದಲ್ಲಿದ್ದ ಊರು ಎರಡೇ ದಿನದಲ್ಲಿ ಮಸಣವಾಗಿ ಬಿಕೋ ಎನ್ನುತ್ತಿತ್ತು.

ಜಾಗರಣೆಯ ದಿನ ಇಡೀ ಊರೇ ಶಿವಪೂಜೆಯಲ್ಲಿ ನಿರತವಾಗಿದ್ದ ಸಮಯದಲ್ಲಿ ತೋಪನ್ನು, ತೋಟವನ್ನು ಕಾಯುತ್ತಿದ್ದ ಆಳಿಗೆ ಕೆನ್ನೆಗೆ ಮುತ್ತಿಕ್ಕಿ ಮಲಗಿಸಿದ್ದು, ಅಮಾವಾಸ್ಯೆಯ ದಿನದಂದು ಕೆರೆಯ ಪಕ್ಕದ ಮರಗಳ ಸಾಲಿನಲ್ಲಿ ಹಿಂದಿನಿಂದ ಬಂದು ದೇವೀರಿಯನ್ನು ಆಕ್ರಮಣ ಮಾಡಿದ ಮುಸುಕಿನ ಆಕೃತಿಯು ದ್ಯಾಮಯ್ಯನ ಮಗಳು ಲಕ್ಷ್ಮಿಯೆಂಬ ರಹಸ್ಯವೂ ಅವರೊಡನೆ ಸೂರೇನಳ್ಳಿಯನ್ನು ತೊರೆದಿತ್ತು.

✦ ✦

ದೇವಾರ್ ಬಂದಾವ್ ಬನ್ನಿರೋ

ನೀವು ಮಾಡ್ತಿರಾದು ಸರಿಯಿಲ್ಲ. ಎಲ್ಲಾ ಸೇರಿ, ಆಕಿ ಒಂಟಿ ಹೆಂಗ್ಸು ಸಿಕ್ಕಾಳಂತ ಗೋಳು ಹೊಯ್ಕಳಾಕತ್ತೀರಿ... ಅಲ್ಲಾ, ಚಿಕ್ಕಪ್ಪ ಖಾಯ್ಲೆ ಬಿದ್ದು ಸತ್ರೆ ಈಕಿದೇನ್ ತಪ್ಪಂತೀನಿ....? ಚಿಕ್ಕಮ್ಮನ್ಯಾಕೆ ಹಿಂಗೆ ಉರಿಸ್ಕೆಂಡು ತಿನ್ನಾಕತ್ತೀರಿ...? ನಾಯಿಗಿಂತ ಕಡೀ ಮಾಡಿಟ್ಟರಿ ಆಕಿ ಪಾಡು. ಅಲ್ಲಾ, ಮನ್ಯಾಗೆ ಕೆಲ್ಸ ಮಾಡ್ಕೆಂಡಿರ ಆಳುಮಕ್ಳಿಗಿಂತ ಕಡಿಯಾಗೇತಿ ಅವ್ಳ ಬಾಳು. ಹಿಂಗ್ಯಾಕ ಮಾಡ್ತೀರೇ....?"

ಚೀರಿ, ಚೀರಿ ಕೇಳಿದ್ದಳು ರೇಣುಕೆ ತನ್ನವ್ವ, ಅಪ್ಪ, ಅಜ್ಜ ಅಜ್ಜಿ ಎಲ್ಲರನ್ನ ಕೂಡಿಸಿ.

ಅವರೂ ಎಲ್ಲರೂ ಒಮ್ಮೆಗೇ "ಏಯ್ ಬಾಯ್ಮುಂಚ್ಗೆಂಡಿರೆ ನಿಂಗ್ಯಾತದ್ದು ತಿಳಿತೇತಿ...." ಅಂತ ಗದರಿಕೊಂಡಿದ್ದರು. ಮುಖ ಚಿಕ್ಕಾದದ್ದು ಕಂಡು ಅಜ್ಜಿ

"ಅಲ್ಕಣೇ ರೇಣ್ಕಾ, ಆಕಿಗೇನೂ ಬರಂಗಿಲ್ಲ. ಹೊಲಮನಿ ಕೆಲ್ಸ ಕೇಳ್ಲೇಬ್ಯಾಡ. ನಿಮ್ಮ ಚಿಕ್ಕಪ್ಪಿದ್ದಾಗ ಏನೊ ನೆಡ್ಕಂಡೋತು. ಅವ್ನು ಯಾವ್ದುಕ್ಕು ಹಚ್ಗೆರ್ಲಿಲ್ಲ ಆಳಿಟ್ಟು ಮಾಡ್ಸನು ಬೇಕಂದ್ರೆ. ಈಗ್ಲೂ ಅಂಗೇಯಂದ್ರೆ ನಡೀಬೇಕಲ್ಲೇ...? ಹೊಲ್ದಾಗ್ ಮಾಡಕಾಗಂಗಿಲ್ಲ ಅಂದ್ರೆ ಮನ್ಯಾಗರ ಮಾಡ್ಬೇಕ.. ಈಗೂ ಮಾರಾಣಿಯಂಗೆ ಮಾಡಿಟ್ಟಿದ್ದು ಉಣ್ತೆನಿ ಅಂದ್ರೆ ಯಾರ್ಕೇಳ್ತಾರೇ.....?"

ಅಂತ ತಮ್ಮ ವರ್ತನೆಗೆ ಸಮಜಾಯಿಷಿ ನೀಡಿದ್ದಳು.

"ಅಲ್ಲಜ್ಜಿ ಕೆಲ್ಸ ಮಾಡ್ಸು ಬ್ಯಾಡನ್ನಂಗಿಲ್ಲ. ಆದ್ರೆ ಅದಕ್ಕೊಂದು ರೀತಿ ನೀತಿ ಬ್ಯಾಡೇನೂ....? ತಿವಿಯಾದು, ಚುಚ್ಚು ಮಾತು,

ಹಂಗಿಸೋದು, ಮಾತ್ಮಾತಿಗೂ ರಂಡಿ ರಂಡಿ ಅಂತೇಳಿ ನಿನ್ನ ಗಂಡಿಲ್ಲ ಅನ್ನೋದನ್ನ ಆಕಿಗೆ ಎಲ್ರೂ ಜ್ಞಾಪಿಸ್ತನೇ ಇರ್ತೀರಲ್ಲ.....? ಆಕಿ ಪರಿಸ್ಥಿತಿ ಏನೈತಂತ ಅಕೀಗೆ ತಿಳಿದಿಲ್ಲೇನೂ.....? ಏನೇ ಹೇಳ್ರವ್ವಾ ನೀವಾಕಿನ ಮನುಷ್ಯಳಂಗೆ ನಡಿಸ್ಕೆಂತಿಲ್ಲ ಅಷ್ಟೆ" ರೇಣುಕೆ ತನ್ನ ವಾದವನ್ನೆ ಮುಂದುವರಿಸಿದ್ದಳು.

"ನಿನ್ನಂಗೆ ಗಿಲೀಟನ್ಮಾತು ನಮ್ಗೆ ಬರಂಗಿಲ್ಲವ್ವ, ನಮ್ದೇನಿದ್ರೂ ಹಿಂಗೆ ಒರ್ಬು ಮಾತು. ಇದ್ದದ್ದು ಇದ್ದಂಗೇ ಹೇಳೋರ್ ನಾವು. ನಿನಿಗೆ ಏನ್ ತಿಳೀತೇತೆ ಸಣ್ಣಾಕಿದಿ.....? ಆಕಿ ಇನ್ನ ಪ್ರಾಯದಕಿ. ಮಕ್ಳಿಲ್ಲ ಮರಿಯಿಲ್ಲ. ನಾಳೀಕೇನರ ಹೆಚ್ಚು ಕಮ್ಮಿ ಆತಂದ್ರೆ ಏನ್ಗತಿ....? ಈಗ್ಲಿಂದ್ಲೇ ಬಿಗಿ ಮಾಡಿದ್ರೆ ಒಂದ್ ಹದ್‌ಬಸ್ತಿನ್ಯಾಗ ಇರ್ತಾಳಕಿ....'

ಅವ್ವ ಹೇಳಿದ ಮಾತು ಕೇಳಿ ಮೈಯಲ್ಲಾ ಉರಿದೋಗಿತ್ತು ರೇಣುಕೆಗೆ. ಎಂತಹ ಕೊಳಕು ಮನಸ್ಸಿನ ಜನರಿವರು. ಇವರುಗಳ ಪ್ರೀತಿಯ ಮಾತುಗಳು.. ಆ ನಗು ಮುಖಗಳು... ಇವುಗಳ ಹಿಂದೆ ಇಂಥದ್ದೊಂದು ಗಟಾರ ಅಡಗಿದ್ದು ಅನುಮಾನ ಸಹಿತ ಬಂದಿರಲಿಲ್ಲ ಆ ಬಗ್ಗೆ ಅವಳಿಗೆ.

ಚಿಕ್ಕಪ್ಪ ಬದುಕಿದ್ದಾಗ ಚಿಕ್ಕಮ್ಮ ಸುರಿದುಕೊಳ್ಳುತ್ತಿದ್ದ ಸುಖ, ಸಂತೋಷ ಕಂಡು ಕರುಬುತ್ತಿದ್ದಿರಬೇಕು ಈ ಹೆಂಗಸರು. ಇದೂವರೆಗೂ ಇವರ ಗರ್ಭದಲ್ಲೇ ಕುದಿಯುತ್ತಿದ್ದ ಮತ್ಸರ ಇದೀಗ ಸ್ಫೋಟಗೊಂಡಿದೆ ಅದಕ್ಕೆ ಚಿಕ್ಕಮ್ಮನಿಗೆ ಈ ಅವಸ್ಥೆ. ಇವರೆಲ್ಲರ ಉಪೇಕ್ಷೆ, ತಿರಸ್ಕಾರ, ಆಕೇನ ಕುಗ್ಗಿಸಿ ಕಂಗೆಡಿಸಿದೆ. ಆಕೆ ಬೇರಾವ ಮನುಷ್ಯರ ಎದುರು ಬರಲೇ ಆಗದಂತಹ ವಾತಾವರಣ ನಿರ್ಮಾಣಗೊಂಡು, ನಡುಮನೆಯ ಹಿಂದಕ್ಕೆ ಹೊರತು ಮುಂದಕ್ಕೆ ಆಕೆಯ ನೆರಳೂ ಬೀಳುವಂತಿರಲಿಲ್ಲ. ಚಿಕ್ಕಮ್ಮನ ಅವಸ್ಥೆ ನೋಡಿ ರೇಣುಕೆಯೇ ನೋವಿನಿಂದ ಚಡಪಡಿಸುತ್ತಿದ್ದಳು. ಎಲ್ಲರನ್ನು ತಿದ್ದಲು ತಾನು ಕಲಿತ ವಿದ್ಯೆಯನ್ನೆಲ್ಲ ಖರ್ಚು ಮಾಡಿ, ಕಡೆಗೆ ಲಾಭವಿಲ್ಲದೆ ಬರಿಗೈಯಲ್ಲಿ ಬೇಸರದಿಂದ ಕಾಲೇಜಿಗೆ ಮರಳಿದ್ದಳು.

ಎರಡು ವರ್ಷ ದೀರ್ಘ ಅವಧಿಯ ನಂತರ ವಿದ್ಯಾಭ್ಯಾಸ ಪೂರ್ಣಗೊಳಿಸಿ ಊರಿನತ್ತ ಪಯಣಿಸುತ್ತಿದ್ದ ರೇಣುಕೆಯ ಮನದಲ್ಲಿ ಏನೋ ಅವ್ಯಕ್ತ ಆತಂಕ. ಹಿಂದಿನಂತೆ ಮುಂದೆ, ಮನೆಯ ಯಾವುದೇ ಕಿರಿಕಿರಿಗೆ ಬೆನ್ನೊಡ್ಡಿ, ಓದಿನ ನೆಪವೊಡ್ಡಿ ಓಡಿ ಹೋಗುವಂತಿರಲಿಲ್ಲ. ಕಟ್ಟಿ ಹಾಕಿದಂತೆ ಆಗಿತ್ತು. ಕಣ್ಣುಮುಚ್ಚಿ ಎಷ್ಟು ತಲೆ ಕೊಡವಿದರೂ ಚಿಕ್ಕಮ್ಮನ ಮುಖವೇ ಎದುರಿಗೆ ಬಂದಂತಾಗಿ ಬೆಚ್ಚಿ ಬೀಳುವಂತಾಗುತ್ತಿತ್ತು.

ನಿಜ ಹೇಳುವುದಾದರೆ ಇಡೀ ಮನೆತನದಾಗೆ ಚಿಕ್ಕಮ್ಮನಂತಹ ಚೆಲುವಿ ಇನ್ನೊಬ್ಬಾಕಿ ಇಲ್ಲ. ನಸುಗಪ್ಪು ಬಣ್ಣವಾದರೂ ಮುಖದ ಮೇಲಿನ ಕಳೆ, ಕಣ್ಣಲ್ಲಿನ ಹೊಳಪು, ಆ ನಗೆಯಲ್ಲಿನ ಜೀವ ಮೈಮನ ತಣಿಸುವಂತಹದ್ದು. ಮುಡಿ ತುಂಬಾ ತೋಟದ ಚೆಂಡು ಹೂ, ಕೈತುಂಬಾ ಬಳೆ, ಹಣೆಮ್ಯಾಗೆ ದುಂಡನೆಯ ಚಂದ್ರ ಭಂಡಾರ ಅವಳ ಚೆಲುವಿಗೆ ಇನ್ನಷ್ಟು ಮೆರುಗು ಕೊಟ್ಟಿದ್ದವು.

ಸದಾ ಗಂಡನ ಮರೆಯಲ್ಲೇ ಇರಬಯಸುತ್ತಿದ್ದ ಆಕೆಗೆ ಮನೆದೇವರು ಹುಚ್ಚೆಂಗೆಮ್ಮನ ಮೇಲೆ ಎಷ್ಟೊಂದು ಭಯ ಭಕ್ತಿಯೊ ಗಂಡನ ಮೇಲೂ ಹಾಗೇ. ಚಿಕ್ಕಪ್ಪನೂ ಹೆಂಡತಿ ಜೋರಾಗಿ ನಡೆದರಲ್ಲಿ ಸವೆದಾಳೋ ಅನ್ನುವ ಹಾಗೆಯೇ ನೋಡಿಕೊಳ್ಳುತ್ತಿದ್ದ. ಶ್ರಮಜೀವಿ

ಚಿಕ್ಕಪ್ಪ ಈ ಮನೆಯನ್ನು ಒಂದು ಮಟ್ಟಕ್ಕೆ ತಂದಿದ್ದ. ಈ ಮನೆ ಕಾಳುಕಡಿ ದುಡ್ಡುಕಾಸು ಕಂಡಿದ್ದೇ ಚಿಕ್ಕಪ್ಪನ ಶ್ರಮದಿಂದ. ಹಿಂಗಾಗಿ ಅವನು ಚಿಕ್ಕಮ್ಮನನ್ನ ಹೆಂಗೇ ಮೆರೆಸಿದರು ಉಳಿದವರ್‍ಯಾರು ಆಗ ತುಟಿಪಿಟಕೆನ್ನದೆ ಅವನ ತಾಳಕ್ಕೆ ಇವರು ಮೇಳ ನಡೆಸಿದ್ದರೆಲ್ಲ. ಚಿಕ್ಕಪ್ಪ ಸತ್ತನೋ ಸತ್ತ ತಾಳ, ಮೇಳ ಕೂಡೇ ಛಿದ್ರವಾಗಿದ್ದವು.

ಊರು ಸಮೀಪಿಸುತ್ತಿರುವಂತೆ ತಳಮಳಗೊಳ್ಳುತ್ತಿದ್ದಳು ರೇಣುಕೆ. ಇನ್ನೇನು ಊರಿನ ಸ್ಟಾಪು ಮೂರ್‍ನಾಲ್ಕು ಫರ್ಲಾಂಗಷ್ಟೇ ಬಸ್ಸು ಕೆರೆ ಏರಿಯ ಬಳಸು ದಾರಿಯಲ್ಲಿ ಸಾಗಿತ್ತು. ತಲೆ ಹೊರಕ್ಹಾಕಿದಳು. ಇನ್ನೊಂದು ಪಕ್ಕಕ್ಕೇ ದೊಡ್ಡಜ್ಜನ ಮಗ ಶಿವು ದೊಡ್ಡಪ್ಪನ ತೋಟ. ತೋಟ ನೋಡಿ ಮನ ಕ್ಷಣ ಆತಂಕ ಮರೆತು ಮುದಗೊಂಡಿತು. ದೊಡ್ಡಪ್ಪನ ತೋಟದೊಳಗೆ ಹಾಯುವ ಹಳ್ಳ ತುಂಬಿತ್ತು. ತಲೆಯನ್ನ ಇನ್ನಷ್ಟು ಹೊರಚಾಚಿ, ಕಣ್ಣಗಲಿಸಿ ನೋಡುತ್ತಿದ್ದವಳಿಗೆ ಹಳ್ಳಕ್ಕೆ ಕಟ್ಟಿದ್ದ ಮರದ ಸೇತುವೆ ಮೇಲೆ ಚಿಕ್ಕಮ್ಮನನ್ನು ಕಂಡಂತಾಗಿ ಬೆಚ್ಚಿ ಮೈ ಕೊಡವಿದಳು. ಇದೆಲ್ಲಾದರೂ ಸಾಧ್ಯವೇ.....? ಎಂದುಕೊಂಡು ಇಳಿಯಲು ಸಜ್ಜಾದಳು.

ತಿರುಗಿ ಬಂದಾಗಿನಿಂದಲೂ ರೇಣುಕೆಗೆ ಮನೆಯಲ್ಲಿನ ಬದಲಾದ ವಾತಾವರಣ ಕಂಡು ಅಚ್ಚರಿಯೋ ಅಚ್ಚರಿ. ಪ್ರಾಣಿಗಳಿಗಿಂತ ಕಡೆಯಾಗಿ ವರ್ತಿಸುತ್ತಿದ್ದ ಈ ಮನುಷ್ಯರಲ್ಲಿ ಇಷ್ಟೊಂದು ಪರಿವರ್ತನೆಗೆ ಹೇಗೆ ಸಾಧ್ಯವಾಯಿತೆಂಬ ವಿಸ್ಮಯ. ಅಬ್ಬಾ! ಅದೆಷ್ಟು ಮರ್ಯಾದೆ ಚಿಕ್ಕಮ್ಮನಿಗೆ. ಆಕೆಯುಂಡ ತಟ್ಟೆಯನ್ನೂ ಎತ್ತಲು ಬಿಡುತ್ತಿರಲಿಲ್ಲ ಈಗ. ಮನೆಯಲ್ಲೀಗ ಶಾಂತಿ ನೆಲೆಸಿದಂತೆ ತೋರುತ್ತಿತ್ತು.

ಚಿಕ್ಕಮ್ಮನಲ್ಲೂ ಅಷ್ಟೇ ಪರಿವರ್ತನೆ. ಮತ್ತೆ ಕೈ ತುಂಬಾ ಬಳೆ, ಹಣೆಯಲ್ಲಿ ಚಂದ್ರ ಭಂಡಾರ. ಮುಡಿಯಲ್ಲಿ ಚೆಂಡು ಹೂ. ಎಲೆ ಅಡಿಕೆ ಮೆದ್ದು ಕೆಂಪಾದ ತುಟಿಗಳಲ್ಲಿ ಮಂದಹಾಸ. ಮುಖದಲ್ಲೇನೋ ಹೊಸ ಕಳೆ, ಸುಖದ ಸೆಲೆ! ಯಾವುದೋ ಮತ್ತಿನಲ್ಲಿರುವಳಂತೆ ಅಮಲಿನಲಿ ಮೈ ಮರೆತವಳಂತೆ ಕಂಗಳಲ್ಲೇನೋ ಮಾದಕತೆ! ಏನೀ ವಿಪರೀತದ ಬದಲಾವಣೆ....? ತನಗೆ ತಾನೇ ನೂರು ಬಾರಿ ಕೇಳಿಕೊಂಡಳು ರೇಣುಕೆ. ಯಾರನ್ನೇ ಕೇಳಿದರೂ ಒಡನೆ ಕೈಯ ಮುಗಿದು

"ಎಲ್ಲಾ ಆಕಿ ಮಹಿಮಾ....." ಎನ್ನುತ್ತ ಆಕೆಯನ್ನು ಮತ್ತಷ್ಟು ಗೊಂದಲದಲ್ಲಿ ಕೆಡವಿದರು.

ಆ ಸಮಯಕ್ಕೆ ಸರಿಯಾಗಿ ಊರಿಂದ ಬಂದಿಳಿದಳು ಸಣ್ಣಜ್ಜಿ. ಆಕೆಯನ್ನ ಒಬ್ಬಾಕೀನೆ ತೋಟಕ್ಕೆ ಎಳೆದೊಯ್ದು ಪಟ್ಟು ಹಿಡಿದು ಕೂತಳು ರೇಣುಕೆ

"ಚಿಕ್ಕಮ್ಮಂದು ಏನ್ ಸಮಾಚಾರ ಹೇಳು.....?" ಎಂದು.

ಸಣ್ಣಜ್ಜಿ ಸೋತು

"ಯವ್ವಾ ಯೇನಂತ ಯೇಳ್ಳೆ ತಾಯಿ....? ಯಲ್ಲಾ ಆಕಿ ಮಹಿಮಾ.... ವೊಂದೊಂದಾಟ ಆಡಿಸ್ಲಿಲ್ಲ ಬಿಡಾಕಿ. ಏನ್ ಮ್ಯಾಗಿಂದ್ ಮ್ಯಾಗೆ ನಿಮ್ ಚಿಕ್ಕಮ್ಮಗೆ ನವ್ವು ಕೊಟ್ಲಂತಿ....? ವಾರಕ್ಕೊಮ್ಮಿಗೆ, ವಾರಕೊಮ್ಮಿಗೆ ವಟ್ಯಾಗೆ ಮುರಿಯಾದು, ಭೇದಿವೋಗದು. ಮೈಯಲ್ಲಾ ನವ್ವಾಗಿ, ಗೋಣು ಲಟಲಟಾಂತ ಮುರ್‍ಕಂತಿದ್ಲು! ಉರಿ.... ಉರಿ.... ಅಂತ

ಬಾವಿಗೋಗಿ ನೀರ್ ಸೆದ್ಕಂಡು, ಮೈಮ್ಯಾಗೆ ಸುರ್ವಿಕೆಂಡು ದೇವ್ರ ಮನಿಯಾಗೊಗಿ ರಪ್ಪಂತ ಗ್ಯಾನತಪ್ಪಿ ಬೀಳಕಿ...."

ಮಾತಾಡುತ್ತಿದ್ದ ಸಣ್ಣಜ್ಜಿ ಅತ್ತ ಹೊರಟು ಬಂದ ದೊಡ್ಡಪ್ಪನ ನೋಡಿ ಮಾತು ನಿಲ್ಲಿಸಿದಳು. ಅವ ಇವರನ್ನು ಕಂಡು ನಿಂತು, ನಕ್ಕು ಮಾತಾಡಿಸಿ, ಸಣ್ಣಜ್ಜಿಗೆ

"ಬಂದು ನೋಡು....." ಅಂತ ಹೇಳಿ ತನ್ನ ತೋಟದ ಕಡೆಗೆ ಹೊರಟ.

ಸಣ್ಣಜ್ಜಿ ಸೊಟ್ಟಗೆ ನಗುತ್ತ ಪಿಸುನುಡಿದಳು

"ನಿಮ್ ಚಿಕ್ಕಮ್ಮನ ಇಟ್ಗಂತಾನಂಥೆ ಶಿವು...." ಅಂತ.

"ಏಯ್ ಏನಿಟ್ಗಂತಾನವ? ಏನ್ ಮಾತಾಡಕತ್ತಿದೀ....?" ರೇಗಿಬಿಟ್ಟಳು ರೇಣುಕೆ.

"ಸಿಟ್ಯಾಕಾಕ್ತಿ ಇದೆಲ್ಲ ನಡೀತೈತೆ....ಶಿವು ನಿಮ್ ಚಿಕ್ಕಮ್ಮನ ಇಟ್ಗಬಹುದೀಗ..." ಅಷ್ಟೇ ಶಾಂತಳಾಗಿ ಸಣ್ಣಜ್ಜಿ ಉತ್ತರಿಸಿದಳು.

ರೇಣುಕೆಗೆ ಹೇಸಿಗೆಯೆನಿಸಿತು. ಇಟ್ಟುಕೊಳ್ಳುವ ಪದವೇ ಅಸಹ್ಯವೆನಿಸಿ

"ಇದೆಲ್ಲ ಏನ್ ನಾಟ್ಕ....? ಏನ್ ನೆಡಸೀರಿ ನೀವೆಲ್ಲ ಸೇರಿ....? ಇವತ್ತು ನಾ ಬಿಡಾಕ್ಯೆಲ್ಲ...."
ಎಂದು ಒಂದೇ ಉಸಿರಿಗೆ ಒದರಿ ಮನಿಯತ್ತ ಬಿರಬಿರನೆ ಹೊಂಟಳು ರೇಣುಕೆ. ಸಣ್ಣಜ್ಜಿ ಹಿಂದಿನಿಂದ ಕೂಗುತ್ತಲೇ ಇದ್ದಳು

"ಯವ್ವಾ ರೇಣ್ಕಾ ನಿಲ್ಲೇ..... ಅದಂಗಲ್ಕಣೇ ತಾಯಿ...." ಎಂದು.

ಏದುಸಿರು ಬಿಡುತ್ತ ಬಂದ ರೇಣುಕೆ ಮನೆಯೊಳಗಿನ ದೃಶ್ಯ ಕಂಡು ಅವಾಕ್ಕಾಗಿ ನಿಂತಳು. ಅವ್ವ ಕೊಡಪಾನದಾಗೆ ನೀರು ತುಂಬಿ ಹಿಡಿದು ನಿಂತಿದ್ದಳು. ಉಳಿದವರೆಲ್ಲ ಸುತ್ತಲೂ ಭಯಭಕ್ತಿ ತೋರಿ ಕೈಮುಗಿದು ನಿಂತಿದ್ದರು. ಮಧ್ಯದಲ್ಲಿ ಚಿಕ್ಕಮ್ಮ ಸ್ನಾನ ಮಾಡಿದ್ದ ಕೂದಲನ್ನ ಹಾಗೆ ಬಿಚ್ಚಿ ಕೂತು, ಹಣೆ ತುಂಬಾ ಭಂಡಾರ ಬಳಿದುಕೊಂಡು, ಮುಂದಿದ್ದ ಊದುಬತ್ತಿ, ಲೋಬಾನದ ವಾಸನೆ ಆಘ್ರಾಣಿಸುತ್ತ, ಕಣ್ಮುಚ್ಚಿ ಉನ್ಮತ್ತಳಂತೆ ಅತ್ತಿತ್ತ ವಾಲಾಡುತ್ತಿದ್ದಳು. ಮಧ್ಯ ಮಧ್ಯ ಜೋರಾಗಿ 'ಉಧೋ.... ಉಧೋ...' ಎಂದು ಕೂಗುತ್ತಿದ್ದಳು. ಮೈಮರೆತು ಎಲ್ಲವನ್ನ ವೀಕ್ಷಿಸುತ್ತಿದ್ದವಳನ್ನ ಸಣ್ಣಜ್ಜಿ ಎಚ್ಚರಿಸಿದಳು.

"ರೇಣ್ಕಾ ನಿಮ್ ಚಿಕ್ಕಮ್ಮ ದೇವ್ರ ಮನುಷ್ಯಳು ಈಗ. ಮ್ಯಾಲಿಂದ್ಮಾಲೆ ಆಕಿ ಆಡ ಆಟ ನೋಡಿ ಹುಚ್ಚಂಗಿದುರ್ಗಕ್ಕೆ ಕರ್ಕಂಡೋದ್ರು ಎಲ್ಲಾ ಸೇರ್ಕೆಂಡು. ಅಲ್ಲೇ ಆ ಮಾತಾಯಿ, ತನ್ನ ಸನ್ನಿಧ್ಯಾಗೆ ಈಕಿ ಮೈಮ್ಯಾಗೆ ಬಂದು ಈಕಿ ನನೀಗೆ ಸೇರ್ಬೇಕಾದಕಿ.... ಈಕಿನ ನನ್ ವುಡ್ಯಾಗಾಕ್ರಿ..... ಮುತ್ತು ಕಟ್ಟುಸ್ರೀ.. ಅಂತ ಯೇಳ್ಕೆ ಕೊಟ್ಲಂತೆ. ಆಕಿ ಮಾತ್ನ ಮೀರಾದುಂಟೇನೇ ತಾಯಿ....? ತಿರ್ಗ ವುಣ್ಣಿಮೇಗೆ ಮುತ್ತು ಕಟ್ಸೇಬಿಟ್ರು. ಆವತ್ತಿಂದ ಅಮ್ಮ ಆಕಿ ಮ್ಯಾಲೆ ಬಂದೇ ಬರ್ತಾಳೆ. ಆಕಿಯೆಲ್ಲಾ ಕಸ್ಟಗುಳೂ ತೀರಿದ್ವು, ಆ ಮಾತಾಯಿಯಲ್ಲಾ ಪರಿಹಾರ ಮಾಡಿದ್ಲು. ಯಲ್ಲಾ ಅಕೀ ಮಹಿಮಾ....."

ಸಣ್ಣಜ್ಜಿ ಮತು ಕೇಳಿ ರೇಣುಕೆ ಹೌಹಾರಿದಳು.

"ಅಯ್ಯಯ್ಯೋ ಇದೇನಾಗಿ ಹೋತು....? ಯಾಕಿಂಗಾತು....? ಇದಕ್ಯಾರು ಹೊಣೆ...?"

ರೇಣುಕೆ ಅರ್ಧರಾತ್ರಿಯಲ್ಲಿ ಹಾಸಿಗೆಯಲ್ಲಿ ಒಂದೇ ಸಮನೆ ಚಡಪಡಿಸುತ್ತಿದ್ದಳು. ಆಕಿ

ಹೊಂಟಿರ ಹಾದಿಯ ಅಂತ್ಯ ಅಗ್ನಿ ಗೋಲ. ಪತಂಗದಂಗೆ ಆಕಿ ಅದಕ್ಕೆ ಸಮೀಪ ಆಗ್ತಿದಾಳೆ. ಅದರಾಗ್ಬಿದ್ದು ಸುಟ್ಟು ಬೂದಿ ತಾನಾಗಲಿದ್ದೀನಿ ಎಂಬ ಕಟುಸತ್ಯ ಆಕೀಗೆ ತಿಳಿದಿಲ್ಲೇನು.....? ಒಮ್ಮೆಂದೊಮ್ಮೆಗೆ ಆಕಿ ಬಯಸಿದ್ರೂ ಬಿಡುಗಡೆ ಸಾಧ್ಯವೇ...? ಒಂದೇ ಸಮನೆ ಯೋಚಿಸುತ್ತಲೆ ತಲೆ ಸಿಡಿದಂತಾಗಿ, ಇನ್ನು ಸಾಧ್ಯವಿಲ್ಲ ನೇರ ಆಕೀನೇ ಕೇಳಿಬಿಡೋದು... ಎಂದು ನಿರ್ಧಾರ ಮಾಡಿ ಚಿಕ್ಕಮ್ಮನ ಕೋಣೆ ಬಾಗಿಲಿಗೆ ಬಂದರೆ ಒಳಗಿಂದ ಕರುಳು ಕಿತ್ತು ಬರುವಂತಹ ಅಳು! ಜತೆಯಾಗೆ ಯಾರದೋ ಅಸ್ಪಷ್ಟ ದನಿಯೂ ಕೂಡ. ಬಾಗಿಲಿಗೆ ಕಿವಿ ಹಚ್ಚಿ ಧ್ಯಾನಿಸಿ ಕೇಳಿಸಿಕೊಂಡಾಗ ಆ ಅಸ್ಪಷ್ಟ ಸ್ವರ ಸ್ಪಷ್ಟವಾಗಿ ಸಣ್ಣಜ್ಜಿದೇ ಎಂಬುದು ತಿಳಿಯಿತು.

"ಸುಮ್ನೆ ಒಪ್ಕಳೇ ತಾಯಿ. ಶಿವು ನಿನ್ನ ರಾಣಿಯಂಗೆ ಇಟ್ಗಂತಾನೆ. ಅವಗೆ ಏನ್ ಕಮ್ಮಿ ಆಗೈತಂತ ನೀ ಹಿಂಗೆ ನಕರ ಮಾಡ್ಲಿಕತ್ತಿಯೇ.....?" ಸಣ್ಣಜ್ಜಿ ಗಟ್ಟಿಸಿ ಕೇಳುತ್ತಿದ್ದಳು.

"ನೀನ್ಯಾಕೆ ನನ್ ಪ್ರಾಣ ತಿನ್ನಕತ್ತಿ ಅತ್ತಿ....? ಅವ್ನೇನ್ ನನ್ನ ರಾಣಿಯಂಗೆ ಇಟ್ಕಳಾದ ಬ್ಯಾಡ ರಾಣಿಯಂಗೆ ಲಗ್ನ ಆಗ್ತಾನೇನ್ ಕೇಳಿ ಬಾ..." ಚಿಕ್ಕಮ್ಮ ಅಳುತ್ತಲೇ ಜೋರು ಮಾಡಿದಂತಿತ್ತು. '

'ಮುಚ್ಕೆಂಡು ಕುಂದ್ರೆ ಸಾಕು. ಅವ್ನಿಗೇನ್ ಹೆಂಡ್ತಿ ಮಕ್ಳು ಇಲ್ಲೇನ್ ನಿನ್ ಲಗ್ನ ಆಗಾಕೆ....? ಯಾವನ್ ಲಗ್ನ ಆಗ್ತಾನ್ ನಿನ್ನಾ...?" ಸಣ್ಣಜ್ಜಿ ಮುಂದೆ ಮಾತನಾಡಲು ಅವಕಾಶ ಕೊಡದಂಗೆ ಚಿಕ್ಕಮ್ಮನ ಜೋರು ದನಿ ಕೇಳಿಸಿತು.

"ಅದಾನೆ ನನ್ನ ಲಗ್ನ ಆಗಾನು ಅದಾನೆ. ಅವ್ನಿಗೇ ಲಗ್ನ ಆಗಿ ತೋರುಸ್ತೀನಿ ನಿಮ್ಗೆಲ್ಲ. ಹೊಂಟೋಗಿಲ್ಲಿಂದ ನನ್ನ ತಲೀ ಕೆಡಿಸ್ಬ್ಯಾಡ..." ದೃಢವಾಗಿತ್ತು ಚಿಕ್ಕಮ್ಮನ ಮಾತು.

ಸಣ್ಣಜ್ಜಿ ಏನೇನೋ ಗೊಣಗುತ್ತ ಬಾಗಿಲತ್ತಲೇ ಹೊಂಟು ಬಂದಂತಾಗಿ, ರೇಣುಕೆ ತನ್ನ ಕೋಣೆಗೆ ಓಡುತ್ತ ಹಿಂದಿರುಗಿದಳು. ಚಿಕ್ಕಮ್ಮನನ್ನ ಲಗ್ನ ಆಗಲು ತಯಾರಿರುವ ದೊಡ್ಡ ಮನಸ್ಸಿನ ವ್ಯಕ್ತಿ ಯಾರಿರಬಹುದು....? ಎಂದು ಯೋಚಿಸಿ, ಯೋಚಿಸಿ ನಿದ್ದೆಗೆಟ್ಟಳು.

ಮಟಮಟ ಮಧ್ಯಾಹ್ನ ದೊಡ್ಡಪ್ಪ ಮನಿಗೆ ಬಂದ. ಅದೇ ಸಮಯಕ್ಕೆ ಹಿತ್ತಲ ಬಾಗಿಲಿಂದ ಹೊರಟಳು ಚಿಕ್ಕಮ್ಮ. ಆಕೆ ಮುಂದೆ, ರೇಣುಕೆ ಹಿಂದೆ. ಬಳಸುದಾರಿ ಹಿಡಿದು ಸೀದ ದೊಡ್ಡಪ್ಪನ ತೋಟಕ್ಕೆ ನಡೆದು, ಹಳ್ಳದ ಸೇತುವೆ ದಾಟಿ, ಪಕ್ಕಕ್ಕಿದ್ದ ತೋಟ ಕಾಯುವ ಕನ್ನನ ಗುಡಿಸಿಲಿನೊಳಕ್ಕೆ ಚಿಕ್ಕಮ್ಮ ಹೋದಾಗ ರೇಣುಕೆ ಅವಕ್ಕಾದಳು. ಸಾವರಿಸಿಕೊಂಡು ಬಾಗಿಲತ್ತ ಹೊರಟವಳನ್ನು ಒಳಗಿನ ಮಾತುಗಳು ತಡೆದು ನಿಲ್ಲಿಸಿದವು.

"ಇನ್ನು ನನ್ನಿಂದ ತಡಿಯಾಕಾಗಂಗಿಲ್ಲ ಕನ್ನ.... ಶಿವು ಮಾಮ ನನ್ಮೇಲೆ ಕಣ್ಣಿಟ್ಟಾನೆ... ನಾನವಗೆ ಸೂಳೆಯಾಗಿ ಬದುಕಾಕೆ ಒಲ್ಲೆ... ನೀನು ಧೈರ್ಯತಗ... ಮನ್ಸು ಮಾಡು ಕನ್ನ... ನಾವಿಬ್ರು ಎಲ್ಲನ ದೂರ ಹೊಂಟೋಗಿ ಲಗ್ನಾಗಿ ಬಾಳ್ವೆ ಮಾಡನ....'

ಚಿಕ್ಕಮ್ಮನ ಮಾತಿಗೆ ಕನ್ನನ ನಿಟುಸಿರೇ ಪ್ರತಿಕ್ರಿಯೆ ಇದ್ದಂಗಿತ್ತು. ಸ್ವಲ್ಪ ಹೊತ್ತು ಮೌನದ ನಂತರ ಆಳದಿಂದ ಬಂದವು ಕನ್ನನ ಭಾರವಾದ ನುಡಿಗಳು

"ಇದೆಲ್ಲ ಆಗಾ ಮಾತೇ...? ಪಡ್ಲಿಗೆ ಬಿಟ್ಟು ಬರಾದಾದೀತೆ...?"

ಹಿಂದೆಯೇ ಚಿಕ್ಕಮ್ಮನ ಆತುರದ ಮಾತುಗಳು. "ನನಿಗೇನೂ ಬ್ಯಾಡ. ಈ ಊರು,

ಪಡ್ಲಿಗೆ, ಅಮ್ಮ ಊಹೂಂ ಇದ್ಯಾವುದೂ ಒಲ್ಲೆ ನಾನು. ನನಗೆ ನೀನ್ ಬೇಕು ಕನ್ನ.... ನನಗೆ ನೀನ್ ಬೇಕು, ಒಂದು ಬಾಳು ಬೇಕು..." ಭಾವೋದ್ವೇಗ ಅಳು ನಿಟ್ಟುಸಿರು ಸಾಂತ್ವನ ಹೀಗೆ ಸಾಗಿ ಕೊನೆಗೂ ಕನ್ನ ಅಂದು ರಾತ್ರಿ ಕೆರೆಯ ಏರಿ ಮೇಲೆ ಚಿಕ್ಕಮ್ಮನಿಗಾಗಿ ಕಾಯುವ ಭರವಸೆ ಕೊಟ್ಟ

"ನೀನು ಬಂದೇ ತೀರ್ತಿಯಲ್ಲಾ....?" ಎಂದು ಮತ್ತೆ ಮತ್ತೆ ಕೇಳಿ ಖಾತ್ರಿಪಡಿಸಿಕೊಂಡ ಮೇಲೆ ಚಿಕ್ಕಮ್ಮ ಗುಡಿಸಲಿಂದ ಹೊರಬಿದ್ದಳು.

ಇನ್ನೂ ಮುಸ್ಸಂಜೆಗೇ ಏನೋ ಆತಂಕ. ತಳಮಳ ರೇಣುಕೆಯನ್ನ ಒಂದೆಡೆ ಕೂರಲು, ನಿಲ್ಲಲು ಬಿಡದೆ ಕಾಡುತ್ತಿತ್ತು. ರಾತ್ರಿಯಾದಂತೆ ಹೆಚ್ಚಾದ ಕುತೂಹಲದಿಂದ ತನ್ನ ಕೋಣೆಯ ಬಾಗಿಲನ್ನು ಸ್ವಲ್ಪವೇ ತೆರೆದು, ಚಿಕ್ಕಮ್ಮನ ಕೋಣೆಯತ್ತ ನೋಟ ನೆಟ್ಟು ಕೂತಳು. 'ಚಿಕ್ಕಮ್ಮ ಹೊರಡಲು ತಯಾರಿ ನಡೆಸಿರಬೇಕು....' ಎಂದು ಯೋಚಿಸುತ್ತ 'ನಾನೇನಾದರೂ ಸಹಾಯ ಮಾಡಲೇ' ಎಂದುಕೊಂಡಳು. ಆದರೆ ಅದರಿಂದ ಎಡವಟ್ಟುಗಳೇ ಜಾಸ್ತಿ ಎನಿಸಿ, ತನಗೇನು ಗೊತ್ತಿಲ್ಲದಂಗೆ ಇರುವುದೇ ಲೇಸೆಂದುಕೊಂಡಳು.

ಹನ್ನೆರಡು ಹೊಡೆದು, ಊರೇ ಸತ್ತಂಗಿತ್ತು. ಇನ್ನೇನು ಚಿಕ್ಕಮ್ಮ ಪಲಾಯನಗೊಳ್ಳುವ ಆತಂಕದ ಕ್ಷಣಗಳು..... ಉಸಿರು ಬಿಗಿಹಿಡಿದು, ಕತ್ತಲಲ್ಲಿ ಕಣ್ಣಗ್ಗಿಸಿ ನಿಂತವಳು ಒಮ್ಮೆಗೆ ದಢದಢ ಜೋರಾದ ಸದ್ದು ಕೇಳಿ ಬೆಚ್ಚಿ ಬೆವರಿದಳು. ಉಹೂಂ ಚಿಕ್ಕಮ್ಮನ ಕೋಣೆಯ ಬಾಗಿಲಲ್ಲ. ಯಾರೋ ಹೊರಬಾಗಿಲು ತಟ್ಟುತ್ತಿದ್ದರು ಈ ಹೊತ್ತಿನಲ್ಲಿ. ಹಿಂದೆಯೇ ಯಾರೋ ಕೂಗುವ ಸದ್ದು. ಎದುರಿನ ಕೋಣೆಯ ಬಾಗಿಲು, ಹೊರಬಾಗಿಲು ಒಮ್ಮೆಗೆ ತೆರೆದುಕೊಂಡವು. ಮುಂಬಾಗಿಲ ತೆರೆದು ನಿಂತಿದ್ದ ಅಜ್ಜನ ಕಾಲ ಮೇಲೆ ನಾಲ್ಕು ವರ್ಷದ ಜ್ಞಾನವಿಲ್ಲದ ಮಗುವನ್ನು ಹಾಕಿ

"ಯಪ್ಪಾ ನನ್ನ ಮಗೀನ ಪ್ರಾಣ ನಿಮ್ಮ ಕೈಯಾಗೈತೆ.... ಆ ಮಾತಾಯೀನ ಕರಿಯಪ್ಪ...." ಆ ಹುಡುಗನ ತಾಯಿಯ ರೋದನ ಎದೆ ಕರಗಿಸುವಂತಿತ್ತು.

ಕತ್ತಲಲ್ಲಿ ಕಲ್ಲಿನಂತೆ ನಿಂತಿದ್ದ ಚಿಕ್ಕಮ್ಮನನ್ನು ಸಣ್ಣಜ್ಜಿ ಎಳೆದುಕೊಂಡು ಹೋದಂತಿತ್ತು. ರೇಣುಕೆಯೂ ಹಿಂದೇನೆ ನಡುಮನೆಗೆ ನಡೆದಳು. ಹೊರಗೆ ದೊಡ್ಡಪ್ಪನ ದನಿ ಕೇಳಿಸುತ್ತಿತ್ತು

"ನಮ್ ಕನ್ನನ ನೆಂಟರ ಪೈಕಿಯಂತೆ. ಬೆಳಗ್ನಿಂದ ಏನೇನೋ ಮಾಡಿದ್ರಂತೆ ಆದ್ರೂ ಗುಣ ಕಾಣ್ಲಿಲ್ಲಂತೆ. ಪಾಪ, ನಮ್ ಕನ್ನ ಓಡ್ಬಂದು ಏನ್ಮಾಡನಣ್ಣಾ..? ಅಂದ. ನಾನ್ ಸೀದಾ ಇಲ್ಲಿಗೆ ಕರ್ಕಂಡು ಬಂದೆ..."

ಮಾತಾಡುತ್ತಲೇ ದೊಡ್ಡಪ್ಪ, ಕನ್ನ, ಅಪ್ಪ, ಅಜ್ಜ ಅವರೊಡನೆ ಇನ್ನೂ ನಾಲ್ಕೈದು ಮಂದಿ ಒಳಗೆ ಬಂದು ನಿಂತರು.

ಕೈಕಟ್ಟಿ ಗೋಡೆಗೊರಗಿ ನಿಂತಿದ್ದ ಕನ್ನ ಬಗ್ಗಿಸಿದ ತಲೆಯೆತ್ತಲಿಲ್ಲ. ಚಿಕ್ಕಮ್ಮನ ತೀಕ್ಷ್ಣ ನೋಟ ಅವನನ್ನೇ ದಿಟ್ಟಿಸುತ್ತಿತ್ತು. ಎಲ್ಲರೂ ಆಕೆಯ ಸುತ್ತ ಕೈಮುಗಿದು ನಿಂತರು. ಇದ್ದಕ್ಕಿದ್ದಂತೆ ಕಟಕಟನೆ ಹಲ್ಲು ಕಡಿಯುತ್ತ ಚಿಕ್ಕಮ್ಮ ಮುನ್ನುಗ್ಗಿದ್ದವಳೇ ಕನ್ನನತ್ತ ಸಾಗಿ, ಅವನ ಕೆನ್ನೆಗೆ ರಪ್ಪನೆ ಬಾರಿಸಿದಳು. ರೋಷದಿಂದ ಕಂಪಿಸುತ್ತಿದ್ದಳಾಕೆ. ಕನ್ನ ತತ್ತರಿಸಿ, ಚಿಕ್ಕಮ್ಮನ ಕಾಲ ಬಳಿ ಕುಸಿದ. ಎರಡೂ ಕೈಯೆತ್ತಿ ಜೋಡಿಸಿ,

"ನನ್ನ ಮನ್ನಿಸಮ್ಮ ತಾಯೀ.... ನನ್ನಿಂದ ಅಪಚಾರ ಆತು. ನಂದು ತೆಪ್ಪಾತವ್ವ ಮಾತಾಯೀ.... ನಮ್ಮವ್ವ...." ಎಂದು ಅಂಗಲಾಚತೊಡಗಿದ.

ಅದುವರೆಗು ಸಿಟ್ಟಿನಿಂದ ಕಣ್ಣು ಕೆಕ್ಕರಿಸಿ ನಿಂತಿದ್ದ ಚಿಕ್ಕಮ್ಮ ಒಮ್ಮೆಲೆ ಬಳಲಿದವಳಂತೆ ಕಂಡಳು. ಕಣ್ಣು ಮುಚ್ಚಿದವು. ಮುಚ್ಚಿದ್ದ ರೆಪ್ಪೆಯಾಗಿನಿಂದ ನೀರು ಸುರಿಯತೊಡಗಿತು. ಮೈ ಜೋರಾಗಿ ಅದುರತೊಡಗಿತು.

"ಬಂದ್ಲು ಅಮ್ಮ..."

ಎಂದರು ಯಾರೊ ಯಾರೋ ಕಡ್ಡಿ ಹಚ್ಚಿಟ್ಟರು. ಮತ್ತಾರೊ ಲೋಬಾನ ಹಾಕಿದರು. ಚಿಕ್ಕಮ್ಮನ ದನಿ ತಾರಕಕ್ಕೇರಿತ್ತು.

"ಉಧೋ.... ಉಧೋ..." ಕೂಗುತ್ತ ಒಂದೇ ಸಮನೆ ಮೈದೂಗಿದಳು.

ಹೊರಗಿಂದ ಮತ್ತಾರೋ ಒಳಬರುತ್ತ

"ಬರ್ರಿ, ಬರ್ರಿ, ದೇವ್ರು ಬಂದಾವ್ ಬರ್ರೀ..." ಎನ್ನುತ್ತಿದ್ದರು.

ಇದ್ದಕ್ಕಿದ್ದಂತೆ ರಪ್ಪನೆ ನೆಲಕ್ಕೆ ಕೂತು ಮೈದೂಗುತ್ತಲೇ ಅಳತೊಡಗಿದಳು ಚಿಕ್ಕಮ್ಮ. ಅಳುತ್ತಳುತ್ತಲೇ ನಗತೊಡಗಿದಳು. ಬಂದವರೆಲ್ಲ ಕೈ ಮುಗಿಯುತ್ತ ಇನ್ನಷ್ಟು ಭಯಭಕ್ತಿ ತುಂಬಿಸಿಕೊಳ್ಳತೊಡಗಿದರು.

ರಾತ್ರಿ ಕರಗಿ ಬೆಳಗು ಮೂಡಿದರೂ ಪೂಜೆ ನಡದೇ ಇತ್ತು. ಅಮ್ಮನೂ ಇದ್ದಳು ಚಿಕ್ಕಮ್ಮನೊಳಗೆ. ಆಕೆಯ ಒಳಗೀಕೆ. ಈಕೆಯ ಒಳಗಾಕೆ. ಒಬ್ಬರೊಳಗೊಬ್ಬರು ಸೇರಿ ಬೆರಕೆ ಆದ ಸತ್ಯ ಇಷ್ಟಿಷ್ಟೇ ಬಿಚ್ಚಿಕೊಳ್ಳುತ್ತ ಬೆತ್ತಲಾಗುತ್ತಿತ್ತು.

✦ ✦

ಅವ್ವಯ್ಯನ ಹಂಡೇವು

ಹುಣಸೆಹಣ್ಣು, ಉಪ್ಪು, ಇಟ್ಟಿಗೆ ಪುಡಿ ಸೇರಿಸಿ, ನಾರಿನಿಂದ ಉಜ್ಜಿ ಉಜ್ಜಿ ತಿಕ್ಕಿ, ತೊಳೆದಿಟ್ಟ ನಿಗಿನಿಗಿ ಹೊಳೆಯುವ ತಾಮ್ರದ ಹಂಡೇವು ಆ ಮನೇಗೇ ಒಂದು ಕಳೆ. ಅದರೊಳಗೆ ತಣ್ಣಗೆ ತುಂಬಿರುವುದು ಜನುಮಕ್ಕೆ ತಂಪು ಕೊಡುವ ಜೀವಜಲ. ಎಂದೂ ಖಾಲಿಯಾಗದ ದೊಡ್ಡ ಹಂಡೇವು ಶಿವಮ್ಮನಿಗೆ ತವರಿನಿಂದ ಸಿಕ್ಕ ಅಮೂಲ್ಯ ಆಸ್ತಿ. ಹೆತ್ತ ಮಕ್ಕಳನ್ನು ಜೋಪಾನ ಮಾಡುವಂತೆ ಆ ಹಂಡೆಯನ್ನು ಜೋಪಾನ ಮಾಡುತ್ತಾಳೆ. ಅದರ ಮೇಲೆ ಒಂದು ಕಲೆಯಾಗಲಿ, ರವಷ್ಟು ಧೂಳಾಗಲಿ ಇರಲು ಬಿಡುತ್ತಿರಲಿಲ್ಲ.

ತನ್ನ ಬಾಲ್ಯ, ಯೌವನ, ತನ್ನ ತವರೇ ಅದರಲ್ಲಿ ತುಂಬಿಕೊಂಡಿದ್ದು ಶಿವನ ಪಾದ ಸೇರಿರುವ ಅವಳ ಅಪ್ಪಯ್ಯ, ಅವ್ವಯ್ಯನ ಜೀವ ಅದರಲ್ಲಿ ಮಿಡುಕುತ್ತಿದೆ ಎಂದೇ ಅವಳ ಭಾವನೆ. ಅದರೊಳಗಿಂದ ನೀರು ತುಂಬಿಕೊಳ್ಳುವಾಗೊಮ್ಮೆ ತನ್ನ ತವರಿನ ಒಂದೊಂದು ನೆನಪನ್ನು ಮೊಗೆಮೊಗೆದು ಹೊರಚೆಲ್ಲುತ್ತಿದ್ದಳು. ಈ ಹಂಡೇವು ಇವಳ ಪಾಲಿಗೆ ಬಂದದ್ದೇ ಒಂದು ಮನಕಲಕುವ ಕಥೆ.

ಮುತ್ತೇನಟ್ಟಿಯ ಭರಮಪ್ಪ ಮತ್ತು ಗೌರಮ್ಮನ ಏಕೈಕ ಕುಡಿ ಶಿವಮ್ಮ. ಅವಳ ಹಿಂದೆ ಹುಟ್ಟಿದ ಮೂವರು ಕಾಲರಾದಿಂದ ತೀರಿ ಹೋಗಿ ಉಳಿದವಳೊಬ್ಬಳೇ ಶಿವಮ್ಮ. ಅಂತೆಯೇ ತಂದೆ ತಾಯಿಯ ಕಣ್ಮಣಿ. ಅವಳೇನೇ ಆಸೆಪಟ್ಟರೂ ಅದನ್ನು ತಂದು ಕೊಡಲು ಜೀವ ತೇಯುವ ಭರಮಪ್ಪ, ಗೌಡರ ಮನೆಯಲ್ಲಿ ಹೊಲದಲ್ಲಿ ಕೂಲಿ ಮಾಡುತ್ತಿದ್ದ. ದಿನವೂ ಹೊಲಕ್ಕೆ ಶಿವಮ್ಮನೇ ಬುತ್ತಿ ತರುತ್ತಿದ್ದಳು.

ಅಪ್ಪಯ್ಯ ಬುತ್ತಿ ತೆಗೆದು ಉಣ್ಣುವವರೆಗು ಶಿವಮ್ಮ ಹಳ್ಳದಲ್ಲಿ ಸಾಕಾಗುವತನಕ ಈಜಾಡಿ, ಪಕ್ಕದ ಕಲ್ಲು ಬಂಡೆಯ ಮೇಲೆ ಕುಂತು ಬಟ್ಟೆ ಆರಿಸಿಕೊಳ್ಳುವ ಹೊತ್ತಿಗೆ ಸರಿಯಾಗಿ ಭರಮಪ್ಪನ ತಂಗಿಯ ಮಗ ಗರುಡ ಅಲ್ಲಿಗೆ ದನ ಬಿಟ್ಟುಕೊಂಡು ಬರುತ್ತಿದ್ದ. ಬಂದವನೇ ಬಂಡೆಯೇರಿ ತನ್ನ ಬುತ್ತಿ ಗಂಟು ಬಿಚ್ಚುತ್ತಿದ್ದ.

ರಾಗಿ ಮುದ್ದೆ, ಕೆಂಪಿಂಡಿ, ಬೇಯಿಸಿದ ತತ್ತಿ ಇಬ್ಬರೂ ಹಂಚಿ ಉಂಡ ಮೇಲೆ ಶುರುವಾಗುತ್ತಿತ್ತು ಆಟ, ಕಿತ್ತಾಟ. ಆನೆಕಲ್ಲು, ಚೌಕಾಬಾರ ಆಡುತ್ತಾಡುತ್ತಾ ಕಿತ್ತಾಟ ಶುರುವಾಗುತ್ತಿತ್ತು. ಮೋಸದಿಂದಾದರೂ ಸೈ ಶಿವಮ್ಮನೇ ಗೆಲ್ಲಬೇಕು. ಗರುಡ ಎಷ್ಟು ಹೊಡೆದಾಡಿದ್ರೂ ಈ ಮೋಸಗಾತಿಯನ್ನು ಸೋಲಿಸಲು ಸಾಧ್ಯವಿಲ್ಲ ಎಂಬ ಸತ್ಯ ತಿಳಿದಿದ್ದು 'ನೀನು ಗೆದ್ದುದ್ದೇನು ಲೆಕ್ಕುಕ್ಕಿಲ್ಲವೋಗೆ.....' ಅಂದು ಮತ್ತೆ ದನ ಹೊಡೆದುಕೊಂಡು ಹಟ್ಟಿಯತ್ತ ಹೊರಡುತ್ತಿದ್ದ. ಅವನ ಹಣೆಚುಕ್ಕಿ ಎಮ್ಮೆ ಗಂಗಿಯ ಮೇಲೆ ಕೂತು ಶಿವಮ್ಮನ ಸವಾರಿಯೂ ಮನೆಕಡೀಗೆ ಹೊರಡುತ್ತಿತ್ತು. ಇದು ನಿತ್ಯದ ಸಂಗತಿ.

ಗರುಡ ದನ ಬಿಟ್ಟುಕೊಂಡು ಬರದೇ ಇದ್ದ ಒಂದು ದಿವಸ ಶಿವಮ್ಮ ಹಟ ಮಾಡಿ "ಅಪ್ಪಯ್ಯ ಗೌಡ್ರು ಮನೆತಾವ್ಕೆ ನಾನೂ ಬತೀನಿ...." ಎಂದು ಹಿಂದೇನೆ ಹೊರಟಳು.

ಗೌಡರ ಮನೆ ಹಿತ್ತಲಲ್ಲಿ ಗೌಡ್ತಿಯ ದೂರದ ಸಂಬಂಧಿ ನಿಂಗಿ ಪಾತ್ರೆ ಪಡುಗಗಳ ರಾಶಿ ಮುಂದೆ ಕೂತಿದ್ದಳು. ಅವನ್ನೆಲ್ಲಾ ತಿಕ್ಕುತ್ತಾ, ತೊಳೆಯುತ್ತಾ, ಆಗ ತಾನೇ ತಾಮ್ರದ ಹಂಡೇವನ್ನು ತಿಕ್ಕಿ, ತೊಳೆದು ಬಿಸಿಲಿಗೆ ಒಣಗಲು ದಬ್ಬಾಕಿದ್ದಳು. ಆ ಹಂಡೇವಿನ ಬಣ್ಣ, ಹೊಳಪು ಆಟವಾಡಿಕೊಂಡಿದ್ದ ಶಿವಮ್ಮನನ್ನು ಗಾಢವಾಗಿ ಸೆಳೆದು, ಆಕೆ ಓಡಿದವಳೇ ತನ್ನ ಪುಟ್ಟ ಕೈಗಳೆರಡನ್ನೂ ಚಾಚಿ, ಹಂಡೇವನ್ನು ಬಾಚಿಕೊಂಡಳು. ತನ್ನ ತೆಕ್ಕೆಗದು ನಿಲುಕುತ್ತಿರಲಿಲ್ಲ. ಆದರೂ ಬಿಡದೆ ಪ್ರಯತ್ನ ಮಾಡುತ್ತಲೇ ಇದ್ಲು. ಇದನ್ನು ಕಂಡದ್ದೇ ನಿಂಗಿ ಬೊಬ್ಬೆಯಿಟ್ಟಳು. ಅದನ್ನು ಕೇಳಿ ಧಾವಿಸಿದ ಗೌಡ್ತಿ ದೊಡ್ಡ ರಂಪವೇ ಮಾಡಿದಳು.

"ಲೇ ಭರಮ, ನಿನ್ ಮಗ್ಳು ಮುಟ್ಟಿದ ಆ ಹಂಡೇವು ನಮ್ಮನಿವಳಾಕೆ ಬರಂಗಿಲ್ಲಯಿನ್ನ. ನೋಡು, ನಿನದುನ್ನಾ ವೈಯ್ಯಿ. ಪುಗುಸಟ್ಟೆ ಅಲ್ಲಲೇ ಅದುಕ್ಕೆ ಇನ್ನೂರು ರೂಪೈ ಅಕ್ಕತಿ ಯಂಗೆ ಮಾಡ್ತಿ ನೋಡು? ರುಪೈ ಕ್ವಡು ಇಲ್ಲ ಆ ದುಡ್ಡು ತೀರಗಂಟ ಮನ್ಯಾಗೆ ಜೀತ ಮಾಡು..." ಎಂದು ಗೌಡ್ತಿಯಿಂದ ತಾಕೀತಾಯಿತು.

ಇನ್ನೂರು ರುಪೈ ಹೊಂಚಲಾರದವ ಜೀತಕ್ಕೆ ಒಪ್ಪಿಕೊಂಡ. ಅವ್ನಿಗೆ ಬಲು ಸಂತೋಷವಾಗಿತ್ತು. ಮಗಳು ಆಸೆ ಪಟ್ಟ ಹಂಡೇವು ಸಿಕ್ಕಿದ್ದು ನಿಧಿ ಸಿಕ್ಕಂಗಾಗಿತ್ತು. ಅದಕ್ಕೋಸುಗ ಏನು ಮಾಡಲೂ ಅವ ಸಿದ್ಧನಿದ್ದ. ಮುಖ ಬತ್ತಿಸಿ ನಿಂತಿದ್ದ ಹೆಂಡತಿ, ಮಗಳಿಗೆ ತಾನೇ ಸಮಾಧಾನ ಹೇಳಿದ.

"ಮಗ ಆಸೆಪಟ್ಟುದ್ದು ಸಿಕ್ಕಿ ಬಿಡುತಲ್ಲ ಬಿಡಮ್ಮಿ.... ನನಿಗೇನು ಈ ಗೌಡ್ರು ಮನಿ ಬದ್ಕು ವಸ್ದಲ್ಲ. ನಮ್ಮಿಂದೆಲ್ಲನ ಮಗೀನಾಸೆ ತೀರ್‍ಸಕಾಗ್ತಿತಾ....? ಯಂಗೋ ಯಾವ್ದೋ ರೂಪ್ದಾಗೆ ಆ ದ್ಯಾವ್ರೆ ಕ್ವಟ್ಟದನೆ. ಮಗ ಆಸೆ ಪಟ್ಟಿರದದು.. ಅದ್ನಾ ಮಗೀನಂಗೆ ಜ್ವಾಪಾನ ಮಾಡ್ಬಕು...."

ಅಂದು ಹೀಗೆ ಹೇಳಿ ಹೋಗಿದ್ದ ಭರಮಪ್ಪ ಮತ್ತೆ ಮನೆಗೆ ಹಿಂದಿರುಗಿದ್ದು ಹೆಣವಾಗಿ. ಹುಣಸೆ ಮರದಲ್ಲಿ ಚಿಗುರು ಕೀಳಲಿಕ್ಕೆ ಹತ್ತಿದವ ಆದೇಗೋ ಆಯತಪ್ಪಿ ಕೆಳಕ್ಕೆ ಬಿದ್ದಿದ್ದ.

ಬೀಳುವಾಗ ಮರದ ಕೆಳಗಿದ್ದ ಸೈಜುಗಲ್ಲಿಗೆ ಅವನ ತಲೆ ಬಿದ್ದು ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದ. ಹಂಡೇವಿಗೋಸ್ಕರ ಪ್ರಾಣ ತೆತ್ತ ಅಪ್ಪಯ್ಯನ ಆತ್ಮವೂ ಆ ಹಂಡೇವಿನಲ್ಲಿ ಲೀನವಾಗಿದೆ ಎಂದುಕೊಂಡೇ ಅದನ್ನ ಬಲು ಪ್ರೇಮದಿಂದ ಜತನದಿಂದ ಕಾಪಾಡುತ್ತಿದ್ದಳು ಶಿವಮ್ಮ. ಅಪ್ಪಯ್ಯನ ನೆನಪಾಗಿ ಎದೆ ಭಾರವಾದಾಗಲೆಲ್ಲಾ ಹಂಡೇವನ್ನು ಬಾಚಿ ತಬ್ಬಿ ಕೆನ್ನೆಯೂರಿ ಕಣ್ಣೀರಿಡುತ್ತಿದ್ದಳು.

ಭರಮಪ್ಪ ತೀರಿದ ಆರು ತಿಂಗಳಿಗೆ ಗೌರಮ್ಮನೂ ಕಣ್ಮುಚ್ಚಿದಾಗ ಒಂಟಿಯಾದಳು ಶಿವಮ್ಮ. ಆದರೆ ಗರುಡ ಅವಳ ಕೈಬಿಡಲಿಲ್ಲ. ಅವನು ಶಿವಮ್ಮನ ಜವಾಬ್ದಾರಿ ಹೊತ್ತುಕೊಂಡ. ತನ್ನ ದೂರದ ನೆಂಟರೊಬ್ಬರ ಮಗನಿಗೆ ಆಕೆಯನ್ನು ಕೊಟ್ಟು ಲಗ್ನವೂ ಮಾಡಿದ. ಹುಡುಗ ಕೂಲಿ ಮಾಡಿದರೂ ಇರಲು ಸ್ವಂತ ಮನೆಯಿತ್ತು. ಶಿವಮ್ಮನ ಗಂಡ ಬಸಪ್ಪ ಬಲು ಶೋಕಿ ಮನುಷ್ಯ. ಮೈ ಬಗ್ಗಿಸಿ ದುಡಿಯುವುದೂ ಅವನಿಂದಾಗುತ್ತಿರಲಿಲ್ಲ. ಅವನ ಶೋಕಿಯೆಂದರೆ ಹೆಣ್ಣುಗಳು. ಸದಾ ಕೂಲಿಗೆ ಬರುವ ಹೆಣ್ಣುಗಳನ್ನು ತನ್ನತ್ತ ಒಲಿಸಿಕೊಳ್ಳುವ ಹುನ್ನಾರ. ತನ್ನ ಬುದ್ಧಿ, ಶಕ್ತಿ, ಸಮಯವನ್ನೆಲ್ಲ ಅದಕ್ಕೆ ಕಳೆಯುತ್ತಿದ್ದ. ಮೊದಲೇ ಮೆತ್ತನೆಯ ಶಿವಮ್ಮ ಗಂಡನ ಈ ಸ್ವಭಾವ ತಿಳಿದು ಕಂಗೆಟ್ಟಳು.

ಇಬ್ಬರು ಮಕ್ಕಳು ಬೇರೆ. ಮೊದಲನೆಯವ ಸಂಜೀವ ಅವನ ಹಿಂದೆ ಗಂಗಮ್ಮ. ಸಂಜೀವ ಬೇರೆಲ್ಲ ಮಕ್ಕಳಂತಿರಲಿಲ್ಲ, ವಯಸ್ಸಿಗೆ ಮೀರಿದ ಗಾಂಭೀರ್ಯ, ಬುದ್ಧಿವಂತಿಕೆ. ಓರಗೆಯ ಹುಡುಗರೆಲ್ಲ ಆಡುತ್ತಿದ್ದರೆ ಇವ ಪಾಟಿ ಚೀಲ ಹಿಡಿದು ಕೂರುತ್ತಿದ್ದ. ಇದನ್ನು ಗಮನಿಸಿದ ಶಿವಮ್ಮ ಅವನನ್ನು ಶಾಲೆಗೆ ಸೇರಿಸಿದ್ದಳು. ಅಲ್ಲಿ ಹೊಟ್ಟೆಪ್ಪನಹಳ್ಳಿ ಸಿದ್ದಪ್ಪ ಎಂಬ ಮಾಸ್ತರು. ಅವರ ಕಣ್ಣಿಗೆ ಆ ಹುಡುಗ ಬಿದ್ದು, ಅವನ ಭವ್ಯ ಭವಿಷ್ಯವನ್ನು ಅವರು ಅಂದೇ ಕಂಡಂತೆ ಶಿವಮ್ಮನನ್ನು ಕರೆಸಿ

"ಯಾವ ಕಾರಣಕ್ಕೂ ಇವನ ಓದು ಬಿಡಿಸಬೇಡ ಮುಂದೆ ಇವನೊಬ್ಬ ದೊಡ್ಡ ವ್ಯಕ್ತಿಯಾಗುತ್ತಾನೆ" ಎಂದರು. ಅಂದೇ ಆಕೆ ಮನದಲ್ಲೇ ನಿರ್ಧರಿಸಿದಳು. ಜೀವನದಲ್ಲಿ ಯಾವುದಕ್ಕೂ ಹೆದರಿ ಕುಗ್ಗಬಾರದು. ಏನೇ ಆಗಲಿ ನಾನೇ ದುಡಿದು ಮಗನನ್ನು ವಿದ್ಯಾವಂತನನ್ನಾಗಿ ಮಾಡಬೇಕೆಂದು.

ತನ್ನ ಬಳಿಯೇ ಇದ್ದರೆ ಗಂಡನ ದೆಸೆಯಿಂದಾಗಿ ಮಗನ ಓದಿಗೆ ತೊಂದರೆ ಆಗಬಹುದೆಂದು ಭಾವಿಸಿ ಗರುಡನನ್ನು ಕರೆಸಿಕೊಂಡಳು. ತಾನು ಹೇಗಾದರೂ ದುಡ್ಡನ್ನು ಹೊಂಚಿ ಕಳುಹಿಸುವುದಾಗಿಯೂ, ಮಗನನ್ನು ಒಳ್ಳೆಯ ಶಾಲೆಗೆ ಸೇರಿಸಬೇಕೆಂದು ಬೇಡಿಕೊಂಡಳು. ಅವಳಾಸೆಯಂತೆಯೇ ಗರುಡ ಸಂಜೀವನನ್ನು ಕರೆದುಕೊಂಡು ಹೋದ. ಶಿವಮ್ಮ ಹಗಲೆನ್ನದೆ, ರಾತ್ರಿಯೆನ್ನದೆ ದುಡಿದಳು. ಊರಿನಲ್ಲಿ ಯಾರು ಏನೇ ಕೆಲಸಕ್ಕೆ ಕರೆದರೂ ಧಾವಿಸಿ ನಾಲ್ಕು ಕಾಸು ಸಂಪಾದಿಸುತ್ತಿದ್ದಳು. ಮಗನ ಓದಿಗೆ ಯಾವುದೇ ಕಾರಣಕ್ಕೂ ಅಡಚಣೆಯಾಗಬಾರದೆಂಬ ಛಲ. ಜೊತೆಗೆ ಮಗಳ ಲಗ್ನಕ್ಕೂ ಹಣ ಹೊಂಚಬೇಕಿತ್ತು.

ಮಗಳು ಓದಲು ಒಲ್ಲೆ ಎಂದು ಮನೆಯಲ್ಲೇ ಉಳಿದಿದ್ದು ಅವಳಿಗೊಂದು ರೀತಿ ಸಂಕಟಕ್ಕಿಟ್ಟುಕೊಂಡಿತ್ತು. ಗಂಡನ ಕಿರಿಕಿರಿ, ತನ್ನ ಪಡಿಪಾಟಲಿಂದ ದೂರವಿಡಬೇಕು

ಅವಳನ್ನು ಎಂದು ಪರಿಪರಿಯಾಗಿ ಹೇಳಿ ನೋಡಿದಳು ಅಣ್ಣನ ಕೂಡ ನೀನು ಮಾವನೊಂದಿಗಿರು ಎಂದು. ಆದರೆ ಗಂಗಾ ರಚ್ಚು ಹಿಡಿದು ಒಲ್ಲೆ ಎಂದುಬಿಟ್ಟಳು. ಎಷ್ಟೇ ಕಷ್ಟ ಬಿದ್ದರೂ ಮಗಳನ್ನೆಂದು ಹೊರಕ್ಕೆ ದುಡಿಯಲು ಕಳಿಸಲಿಲ್ಲ. ಮನೆಯ ಒಳಗಿನದೆಲ್ಲಾ ಅವಳಿಗೆ ಬಿಟ್ಟು ತಾನು ಹೊರಗಿನದನ್ನು ನಿಭಾಯಿಸುತ್ತಿದ್ದಳು. ಎಷ್ಟೇ ರೋಸಿ ಬಂದಿದ್ದರೂ ಎಂದೂ ಮಗಳಿಗೆ ದನಿಯೇರಿಸಿ ಮಾತಾಡಿದವಳಲ್ಲ. ಆಕೆಗೆ ಸಿಟ್ಟು ಬರುತ್ತಿದ್ದುದೇ ಬಹಳ ಅಪರೂಪ. ಅದೂ ಹಂಡೇವು ನಿರ್ಲಕ್ಷ್ಯ ಮಾಡಿದರೆ ಮಾತ್ರ.

ಹಂಡೇವು ಅದು ಕೊಳೆಯಾಗಿರ್ಲಿ, ಬಿಟ್ಟಿರ್ಲಿ ದಿನಾಲು ಅದನ್ನು ತೊಳ್ದು ಹೊಸ ನೀರು ತುಂಬಿಸಿಡಬೇಕಿತ್ತು. ಕೆಲವೊಮ್ಮೆ ಗಂಗಾ ಬೇಸರಿಸಿ

"ಅಲ್ಲವ್ವ ಮೂರ್ದಿನಕ್ಕೊಮ್ಮೆ ತೊಳದ್ರಾಗಲ್ಲೇ.." ಅಂದರೆ

"ಹಂಡೇವು ತೊಳಿತಿನಿ ಅನ್ಕಬ್ಯಾಡೆ ನನ್ ತಾಯಿ ನಿಮ್ಮವ್ವನ್ನೈ ತೊಳಿತಿನಿ ಅನ್ಕ.. ಬ್ಯಾಸರ್ದಿಲಿ ಮಾಡ ಬದುಕಲ್ಲವ್ವ ಅದು ಭಕ್ತಿಯಿಂದ ಮಾಡದು.." ಅನ್ನುತ್ತಿದ್ದಳು.

ಒಮ್ಮೆ ಗಂಗ ಹಂಡೇವು ತಿಕ್ಕದೇನೆ ಸಿಕ್ಕಿಬಿದ್ದು, ಇಲ್ಲ ತಿಕ್ಕಿದಿನಿ ಅಂತ ವಾದ ಮಾಡಿದ್ದಾಗ ಶಿವಮ್ಮ ಎಷ್ಟು ಬೇಸರವಾಗಿದ್ದಳೆಂದರೆ ಒಂದು ವಾರ ಉಣ್ಣುವುದನ್ನೇ ಬಿಟ್ಟಿದ್ದಳು. ಗಂಗಳಿಗೆ ಅವ್ವನ ಈ ವರ್ತನೆ ಹುಚ್ಚಾಟ ಅನಿಸುತ್ತಿತ್ತು ಒಮ್ಮೊಮ್ಮೆ. ಅದ್ರಾಗಂತದ್ದು ಏನೈತವ್ವ ಅಂತ ಕೇಳಬೇಕೆಂದು ಅಂದುಕೊಂಡರೂ ಆಕೆಗೆದುರು ಈ ವಿಷಯದಲ್ಲಿ ಏನೇ ಮಾತಾಡಲು ಹೆದರಿಕೆಯಾಗುತ್ತಿತ್ತು. ಶಿವಮ್ಮನಿಗೂ ಯಾಕೋ ಮಗಳಿಗೆ ಅದರ ಕಥೆ ಹೇಳಬೇಕಂತ ಅನಿಸಿರಲೇ ಇಲ್ಲ.

ಈ ಮಧ್ಯೆ ಗಂಡನಿಗೆ ಕುಡಿತದ ಚಟವೂ ಸೇರಿ ದಿನವೂ ಈಕೆಯನ್ನು ದುಡ್ಡಿಗಾಗಿ ಪೀಡಿಸತೊಡಗಿದ ಮುಗಿಲೇ ಕವಚಿಬಿದ್ದಂಗೆ ಆಗಿತ್ತು ತಲೆ ಮೇಲೆ.

"ಬ್ಯಾಡ ಕಣಯ್ಯ ಈ ಹಾಳು ಕುಡ್ತ ಒಳ್ಳದಲ್ಲ. ಬುದ್ದಿ ಹಾಳ್ಮಾಡ್ತೈತೆ,, ಮರ್ವಾದೆ ಕಳೀತ್ತೈತೆ.. ಆರೋಗ್ಯ ಕೆಡಿಸ್ತೈತೆ.. ನೀನು ದುಡ್ಕಂಡು ಬರಾದು ಬ್ಯಾಡ ಕಸ್ಟ ಬೀಳಾದು ಬ್ಯಾಡ ಮಾರಾಯ.. ನೀನು ಬದುಕಿರವರಿಗೂ ನಾನೇ ನಿನಿಗೆ ದುಡ್ದಾಕ್ತಿನಿ.. ಈಗಳಪ ನೀನು ಈಟೂ ಮೈ ನೋಯಿಸ್ಕಬ್ಯಾಡ ತಣ್ಣಗ ಮನ್ಯಾಗಿರು ಸಾಕು.."

ಶಿವಮ್ಮ ಅಂಗಲಾಚಿಕೊಂಡಳು. ಅತ್ತು ಕರೆದು ನೋಡಿದಳು. ಉಹೂಂ ಅವನು ಯಾವುದಕ್ಕೂ ಬಗ್ಗಲಿಲ್ಲ. ಆಕೆ ಹೇಳಿದಷ್ಟೂ ಅವನದು ಜೋರಾದಾಗ ಒಂದು ಮಾತೂ ಎದುರಾಡದೆ, ಮಗಳೆದುರು ರಂಪ ಮಾಡಬಾರದೆಂದು ತನ್ನ ಕೈಲಾದಷ್ಟು ಕೊಟ್ಟು ಕಳಿಸತೊಡಗಿದಳು. ಇಲ್ಲವೆಂದರೆ ಅವನೂ ಸುಮ್ಮನಾಗುತ್ತಿರಲಿಲ್ಲ.

"ಆಟು ದೊಡ್ ಹಂಡೇವು ನಮ್ಗ್ಯಾತ್ಕೆ? ಅದುನ್ನ ಮಾರು...." ಎಂದು ಪೀಡಿಸುತ್ತಿದ್ದ.

ಅದನ್ನು ತಪ್ಪಿಸಲು ಶಿವಮ್ಮ ತಾನು ಉಪವಾಸವಿದ್ದು ಅವನಿಗೆ ದುಡ್ಡು ಕೊಡುತ್ತಿದ್ದಳು. ಬರೀ ನೀರು ಕುಡಿದೇ ಕಳೆದ ದಿನಗಳೆಷ್ಟೊ ಅವಳ ಲೆಕ್ಕಕ್ಕೆ.

ಈ ಮಧ್ಯೆ ಮುತ್ತೇನಟ್ಟಿಯಾಗಿದ್ದ ಮಗನಿಗೆ ಆವಾಗವಾಗ ತಂಬಿಟ್ಟುಂಡೆ, ರೊಟ್ಟಿ, ಕುಟ್ಟಿದ ಖಾರದಿಂಡಿ ಕೊಟ್ಟು ಬರುತ್ತಿದ್ದಳು. ಅವಳ ಶ್ರಮಕ್ಕೆ ತಕ್ಕ ಫಲ ಎಂಬಂತೆ ಮಗ

ಎಲ್ಲಿಯೂ ಫೇಲಾಗದೆ ಓದುತ್ತಿದ್ದುದು ಅವಳಿಗೆ ಆನೆ ಬಲ! ಒಂದರೆಕ್ಷಣ ಸುಮ್ಮನೆ ಕೂರಲಾಗುತ್ತಿರಲಿಲ್ಲ ಅವಳಿಗೆ. ಹುಡುಕುಡುಕಿ ಮಾಡಿದಳು ಕೆಲಸ.

ಗಾಣದೆತ್ತಿನ ದುಡಿತ ಅವಳ ಮನಸ್ಸು ಸಹಿಸಿಕೊಂಡರೂ ದೇಹ ಸೋತು ಒಂದು ವಾರ ಮೇಲೇಳದಂತೆ ಮಲಗಿಬಿಟ್ಟಳೊಮ್ಮೆ. ಗಂಡನೇನು ಕ್ಯಾರೆ ಅನ್ನಲಿಲ್ಲ. ಮಗಳು ಅವ್ವನ ಬದಲು ಒಂದೆರಡು ಕಡೆ ಹೇಗೋ ಹಾಗೆ ಕೂಲಿ ಮಾಡಿ ದುಡ್ಡು ತಂದರೂ ಅದು ಯಾವುದಕ್ಕೂ ಸಾಕಾಗುತ್ತಿರಲಿಲ್ಲ. ದುಡ್ಡಿಗೆ ಸದಾ ಪೀಡಿಸುವ ಗಂಡನ ಕಾಟ ಹೆಚ್ಚಾಯಿತು.. ತಾನು ಹೀಗೆ ಮಲಗಿದರೆ ಆಗದೆಂದು ರೋಸಿ ಎದ್ದು

"ವತ್ಕಾರ್ಕೆ ಕೂಲಿ ವೋಗಿ ದುಡ್ಡು ತರ್ತೀನಿ ಇವತ್ತೊಂದಿನ ತಡ್ಕ ಮಾರಾಯ...."

ಎಂದು ಎಷ್ಟು ಪರಿಪರಿಯಾಗಿ ಹೇಳಿದರೂ ಕೇಳದೆ ಮೂಲೆಯಲ್ಲಿದ್ದ ಹಂಡೆಯ ನೀರೆಲ್ಲಾ ಬಗ್ಗಿಸಿ ಅದನ್ನೆತ್ತಿಕೊಂಡು ಹೊರಟೇಬಿಟ್ಟ. ಕೆಂಡಾಮಂಡಲವಾಗಿಬಿಟ್ಟಳು ಶಿವಮ್ಮ. ಅದೆಲ್ಲಿ ಅಷ್ಟೊಂದು ರೋಷ ಅಡಗಿಸಿಟ್ಟಿದ್ದಳೋ ಒಮ್ಮೆ ಜೋರಾಗಿ 'ಏಯ್...' ಎಂದು ಅಬ್ಬರಿಸಿದವಳೆ ನೆರಕೆಯಲ್ಲಿದ್ದ ಮಚ್ಚು ಎತ್ತಿಕೊಂಡು ಓಡಿ ಅವನ ದಾರಿಗಡ್ಡ ನಿಂತಳು. ಬಸಪ್ಪ ಬೆದರಿ ಹಿಮ್ಮೆಟ್ಟಿ ನಿಂತ.

ಹೆಂಡತಿಯ ಈ ರೂಪ ಅವನಿಗೆ ಹೊಸದು. ಸದಾ ಸೌಮ್ಯಮೂರ್ತಿಯಾಗಿ ಎಂದೂ ದನಿಯೇರಿಸಿ ಯಾರಿಗೂ ಮಾತಾಡದ ಅವಳು ಇಂದು ರಣಚಂಡಿಯಂತೆ ಉರಿಗಣ್ಣು ಬಿಡುತ್ತಾ 'ನೀನೇನರ ಒಂದೆಜ್ಜೆ ಮುಂದುಕ್ಕಿಟ್ರೆ ಸಿಗ್ದು ಹಾಕ್ಬಿಡ್ತೀನಿ.... ಆ ಹಂಡೇವ್ನ ಕೈನಾಗೆ ಮುಟ್ಟೋ ಯೋಗ್ಯತೇನೂ ನಿನಗಿಲ್ಲ.... ಅಂತಾದ್ರಗ್ಮುಟ್ಟಿ ಮೈಲ್ಗೆ ಮಾಡ್ಬಿಟ್ಯಲ್ಲೊ ಚಂಡಾಳ.... ಮರ್ವಾದೆಗೆ ಅದೆಲ್ಲಿತ್ತೋ, ಯಂಗಿತ್ತೋ ಹಂಗಿಟ್ಯೋ ಸರೋತು ಇಲ್ದಿದ್ರೇ.....' ಎಂದು ಕಟಕಟನೆ ಹಲ್ಲು ಕಡಿದಳು.

ಮೊದಲೇ ಹುಷಾರಿಲ್ಲದೆ ಕಪ್ಪಿಟ್ಟ ಮುಖ, ಕೆದರಿದ ಕೂದಲು, ನಡುಗುವ ಶರೀರ, ಕಣ್ಣಲ್ಲಿ ಆಕ್ರೋಶ ಅವಳ ಆಕೃತಿ ವಿಕಾರವಾಗಿ ಕಾಣುತ್ತಿತ್ತು. ತುಟಿಪಿಟಿಕನ್ನದೆ ಹಿಂದಕ್ಕೋಡಿದವನೆ ಹಂಡೇವೆಲ್ಲಿತ್ತೋ ಅಲ್ಲಿಟ್ಟು ಹೊರಬಂದ. ಆದರೂ ಶಿವಮ್ಮ ಶಾಂತಳಾಗದೆ ಅದೇ ಭಂಗಿಯಲ್ಲಿ ಅವನತ್ತ ಕೆಕ್ಕರಿಸಿಕೊಂಡು ನೋಡುತ್ತಿದ್ದಳು. ನೋಟ ಎದುರಿಸಲಾರದವನಂತೆ ಪಕ್ಕಕ್ಕೆ ಸರಿಯುತ್ತಾ ಸರಿಯುತ್ತ ಹಾಗೆಯೇ ಹೋಗಿಬಿಟ್ಟ ಬಸವ ಮತ್ತೆಂದೂ ಶಿವಮ್ಮನ ಕಣ್ಣಿಗೆ ಬೀಳಲೇ ಇಲ್ಲ. ಆಕೆ ಪರಿತಪಿಸಲೂ ಇಲ್ಲ. ಋಣ ತೀರಿತೆಂದು ತಣ್ಣಗಿದ್ದುಬಿಟ್ಟಳು.

ಎಲ್ಲವನ್ನೂ ಮರೇಲಿದ್ದು ಗಮನಿಸಿ, ಭಯಾಶ್ಚರ್ಯದಿಂದ ತಲ್ಲಣಿಸಿದ ಗಂಗ ಕುತೂಹಲ ತಡೆಯಲಾರದೆ ಸಮಯ ನೋಡಿ ಕೇಳುವ ಧೈರ್ಯ ಮಾಡಿದಳು.

"ಅವ್ವಯ್ಯ ಆ ಹಂಡೇವ್ನಾಗೆ ಅಂತಾದೇನೈತಿ....?"

ಮಗಳನ್ನು ಮೆಲ್ಲಗೆ ತಬ್ಬಿ ಎದೆಗೊತ್ತಿಕೊಂಡು

"ಗಂಗವ್ವ ನಾ ನಿನ್ನ ಅವಚ್ಕೆಂಡಿದಿನಲ್ಲ ಹಂಗೆ ಒಂದಪ ಆ ಹಂಡೇವ್ನ ಅವುಚ್ಕೆ. ನೀನೆಂಗೆ ಉಸುರಾಡ್ತಿಯೋ ಹಂಗದೂ ಉಸುರಾಡ್ತೈತೆ. ನಿನ್ನೆದೆಯಂಗೆ ಡಬಡಬ ಬಡ್ಕಂತತೋ ಹಂಗದೂ ಡಬಡಬ ಅನ್ತೈತಿ. ನಾನು ನಿನ್ನ ತಲಿಮ್ಯಾಗೆ ಕೈಯಿಟ್ಟು

ಆಶೀರ್ವಾದ ಮಾಡಂಗೆ ಅದೂ ಆಶೀರ್ವಾದ ಮಾಡ್ತೈತೆ. ಕಣ್ಣೀರಾಕಿದ್ರೆ ಕಣ್ಣೊರ್ಸಿ ಸಮಾಧಾನ ಮಾಡ್ತೈತೆ...." ಎಂದು ಪರವಶತೆಯಿಂದ ಹೇಳುತ್ತಿದ್ದರೆ ಗಂಗನಿಗೆ ಅವ್ವಯ್ಯನಿಗೆ ನಿಜಕ್ಕೂ ಹುಚ್ಚು ನೆತ್ತಿಗೇರೈತೆ ಅನ್ನಿಸಿ ಅವಳ ತೆಕ್ಕೆಯಿಂದ ಬಿಡಿಸಿಕೊಂಡು

'ಹೇ ಬಿಡವ್ವ ನೀನೊಬ್ಳು ಮಕ್ಳಂಗೆ ಮಾತಾಡ್ತಿಯಲ್ಲಾ.... ಯೇಳ್ಯಾಕೆ ಉಂಡು ಮಕ್ಕಳಂತೆ...'

ಎಂದು ಬಿಟ್ಟಾಗ ಭರಿಸಲಾರದ ನೋವೊಂದು ಅವಳನ್ನು ತುಂಬಿ, ಇಡಿಯಾಗಿ ಅಲ್ಲಾಡಿಸಿ ಎತ್ತಿ ಬಿಸಾಡಿದಂತಾಗಿತ್ತು ಶಿವಮ್ಮನಿಗೆ.

ಅಂದು ಒಂದು ಹನಿ ನೀರೂ ಆಕೆಯ ಗಂಟಲಲ್ಲಿಳಿಯಲಿಲ್ಲ. ಅವಳ ಭಾವನೆ ಯಾರಿಗೂ ಅರ್ಥವಾಗೇ ಇರಲಿಲ್ಲ. ಮತ್ತೆಂದೂ ಅವರಿಬ್ಬರು ಹಂಡೆಯ ವಿಷಯ ಮಾತಾಡಲ್ಲಿಲ್ಲ. ಹಾಗೆಯೇ ಮಗಳನ್ನು ಧಾರೆ ಎರೆದು ಕಳುಹಿಸಿಕೊಡುವಾಗಲೂ ಹಂಡೆಯ ವಿಷಯವನ್ನೇ ಎತ್ತಲಿಲ್ಲ. ತನ್ನ ನಂತರ ತನ್ನ ಮಗಳಿಗೇ ಅದನ್ನು ಕೊಡಬೇಕು, ನನ್ನಂತೆಯೇ ಆಕೆಯೂ ಅದನ್ನು ಜೋಪಾನ ಮಾಡಬೇಕೆಂಬ ಆಸೆಯಿತ್ತು ಈ ಮೊದಲು ಅವಳ ಮನಸ್ಸಲ್ಲಿ. ಆದರೆ ಆ ಆಸೆಯಂದೇ ಬತ್ತಿ ಹೋಗಿತ್ತು. ಮಗಳನ್ನು ಕಳುಹಿಸಿದ ಮೇಲೂ ಕುಂತು ಯೋಚಿಸಿದಾಗ ಅವಳಿಗೊಂದು ರೀತಿಯ ಸಮಾಧಾನವೇ ಆಗಿತ್ತು. ಕಾರಣ ಆ ಹಂಡೇವನ್ನ ಬಿಟ್ಟು ಬದುಕುವ ಶಕ್ತಿ ಎಲ್ಲಿಯದು ಆಕೆಗೆ....?

ಅವಳು ಲಗ್ನವಾದ ಕ್ಷಣದಿಂದ ಬದುಕಲ್ಲಿ ತುಂಬಿಕೊಂಡಿದ್ದ ಒಂಟಿತನಕ್ಕೆ, ಬದುಕಲು ನಡೆಸಿದ ಹೋರಾಟಕ್ಕೆ ಒಗ್ಗಿಕೊಳ್ಳಲು, ಅದನ್ನು ನೀಗಿಕೊಂಡು ಬದುಕಲು ಬೇಕಾದ ಮನೋಸ್ಥೈರ್ಯ, ಆತ್ಮವಿಶ್ವಾಸಕ್ಕೆ ಹಂಡೇವಿನೊಳಗೆ ಮಿಡುಕುತ್ತಿರುವ ಅಪ್ಪಯ್ಯ, ಅವ್ವಯ್ಯನ ಉಸಿರೇ ಕಾರಣವಾಗಿತ್ತು. ಮಗಳನ್ನು ಗಂಡನ ಮನೆಗೆ ಕಳುಹುವಾಗಲೂ ಆಕೆಯ ಮುಖದಲ್ಲಿ ತನ್ನ ಕರ್ತವ್ಯ ಪೂರೈಸಿದ ಧನ್ಯತೆ ಇತ್ತೇ ಹೊರತು ಅಗಲಿಕೆಯ ನೋವಾಗಲಿ, ದುಃಖವಾಗಲಿ ಕಿಂಚಿತ್ತೂ ಇರಲಿಲ್ಲ. ಕಷ್ಟಗಳು ಆಕೆಯನ್ನ ಕಲ್ಲು ಮಾಡಿಬಿಟ್ಟಿದ್ದವು. ಅಂತೆಯೇ ಮಗ ಓದು ಮುಗಿಸಿ, ನೌಕರಿ ಹಿಡಿದು, ಪಟ್ಟಣ ಸೇರಿ ಕೊನೆಗೆ ಪಟ್ಟಣದ ಹುಡುಗಿಯನ್ನು ಲಗ್ನವಾಗಿ ಮಾವನ ಮನೆ ಅಳಿಯನಾಗಿ ಹೋದಾಗಲೂ ಅದೇ ಭಾವನೆಯಿತ್ತು!

'ನೀನೆಲ್ಲಿರ್ತಿಯೋ ಅಲ್ಲೇ ವಂದ್ಕಂಡು, ಅವ್ರೇ ಎಲ್ಲಾ ಅಂದ್ಗಂಡು ಇರಪ್ಪ...' ಅಂತ ತುಂಬು ಮನಸ್ಸಿಂದ ಹರಸಿದಾಗ ಮಗ ಒಂದು ರೀತಿಯ ತಪ್ಪಿತಸ್ಥ ಭಾವನೆಯಿಂದ ಕುಗ್ಗಿ ನುಡಿದಿದ್ದ.

'ನೀನೂ ಅಲ್ಲೇ ಬಂದ್ಬಿಡವ್ವ, ಎಲ್ಲರೂ ಒಟ್ಟಾಗಿರೋಣ....' ಅಂತ.

ಆದ್ರೆ ಪಕ್ಕದಲ್ಲಿದ್ದ ಹೆಂಡತಿ ಜಯಶ್ರೀ ಸುಮ್ಮನೆ ತಲೆಯಾಡಿಸಿ ನಕ್ಕಿದ್ದಳಷ್ಟೇ. ಆ ನಗುವಿಗೆ ತಾನೂ ನಗು ಸೇರಿಸಿ, ಅವಳ ತಲೆ ಸವರಿ

'ಸುಖವಾಗಿರ್ರಿ...' ಅಂದಿದ್ದಳು ಶಿವಮ್ಮ.

'ಇನ್ಮೇಲೆ ಕೂಲಿ ಗೀಲಿ ಅಂತೆಲ್ಲೂ ಹೋಗ್ಬೇಡ. ನಾನು ತಿಂಗ್ಳಾ ನಿನಗೆ ದುಡ್ಡು ಕಳುಸ್ತೀನಿ' ಅಂದು ಹೋದ ಮಗ ಹಾಗೇ ನಡೆದುಕೊಂಡಿದ್ದ.

ಆದರೆ ಅವಳದೇನೂ ಖರ್ಚಿರಲಿಲ್ಲ. ಅದೂ ಅಲ್ದೆ ಮುತ್ತೇನಟ್ಟಿಯಿಂದ ಗರುಡನೂ ಸಂಸಾರ ಸಮೇತ ಬಂದು ಶಿವಮ್ಮನ ಜೊತೇಲಿ ನೆಲೆಸಿದ್ದ. ಎಷ್ಟು ಹೇಳಿದರೂ ಕೇಳದ ಮಗ ಹಣ ಕಳಿಸುತ್ತಲೇ ಇದ್ದ. ಅದು ಹಾಗೇ ಶಿವಮ್ಮನ ಸ್ವಾರೆಯ ತಳ ಸೇರುತ್ತಿತ್ತು. ಅವನ ಒಂದು ಬಿಡಿಗಾಸೂ ಅವಳು ಸ್ವಂತಕ್ಕೆ ಬಳಸಿಕೊಳ್ಳಲಿಲ್ಲ. ಕೈಯತ್ತಿ ಕೊಟ್ಟ ಜೀವವೇ ಹೊರತು ಕೈ ನೀಡಿ ಇಸಿದುಕೊಂಡಿದ್ದಲ್ಲ!

ಅವಳಗ್ಯಾವ ಆಸೆಯೂ ಇರಲಿಲ್ಲ. ಯಾರಿಗಾಗಿ ಜೀವ ತೇಯ್ದಿದ್ದಳೋ ಆ ಮಕ್ಕಳಿಬ್ಬರೂ ಅವರವರ ಬದುಕು ಕಟ್ಟಿಕೊಂಡು ಬವಣೆಯಿಲ್ಲದೆ ಬಾಳುತ್ತಿದ್ದರು. ತನ್ನ ಊರುಕೇರಿ ಬಿಟ್ಟು ಎಲ್ಲಿಯೂ ಹೋಗ ಬಯಸಳು. ಮಗಳು ಅಳಿಯ, ಮಗ ಸೊಸೆ, ಮೊಮ್ಮಕ್ಕಳು ಎಷ್ಟು ಕರೆದರೂ ಎಲ್ಲಿಯೂ ಹೋದವಳಲ್ಲ. ಅವರನ್ನೇ ಇಲ್ಲಿಗೆ ಕರೆಸಿಕೊಂಡು, ಉಣ್ಣಿಸಿ ತಿನ್ನಿಸಿ ಕಳಿಸುತ್ತಿದ್ದಳು.

ಆಕೆಯ ಒಂದೇ ಆಸೆಯೆಂದರೆ ಅವ್ವಯ್ಯನ ಹಂಡೇವು! ಆಕೆಯೋರ್ವ ಮನುಷ್ಯಳು, ಅವಳಲ್ಲಿ ಇನ್ನೂ ಜೀವವಿದೆ ಎಂಬುದಕ್ಕೆ ಸಾಕ್ಷಿ ಆ ಹಂಡೇವು! ಏಕೆಂದರೆ ಅವಳ ತುಡಿತ, ಮಿಡಿತಗಳೆಲ್ಲಾ ಅದಕ್ಕೇ ಮೀಸಲು! ಅವಳ ರಾಗಭಾವಗಳನ್ನು ಇನ್ನೂ ಅವಳಲ್ಲಿ ಮಿಗಿಸಿ ಉಳಿಸಿಕೊಂಡು ಹೋಗುತ್ತಿದ್ದುದೂ ಅದೇ ಅವಯ್ಯನ ಹಂಡೇವು! ಈಗ ನೋಡಿದವರಿಗೆ ಶಿವಮ್ಮನ ತಪಸ್ಸು ಫಲ ಕೊಟ್ಟಿದೆ, ಕಷ್ಟ ಕಳೆದು ನೆಮ್ಮದಿಯ ಪರ್ವ ತೆರೆದಿದೆ, ಎಲ್ಲಾ ಸುಖಾಂತಗೊಂಡಿದೆ ಎನಿಸಿ, ಅವರೂ ನೆಮ್ಮದಿಯ ಉಸಿರು ಬಿಡುತ್ತಿದ್ದರು ಅಷ್ಟರಲ್ಲಿ ಶುರುವಾಯಿತು ಈ ಹೊಟ್ಟೆನೋವು.

ಅದೆಂತಹ ಹೊಟ್ಟೆನೋವೆಂದರೆ ಯಾವ ಮದ್ದಿಗೂ ಶಮನವಾಗದಂಥದ್ದು. ತೀರಾ ಹಣ್ಣಾದಳು ಶಿವಮ್ಮ. ರಾತ್ರೋರಾತ್ರಿ ಮಗ, ಮಗಳು ತಮ್ಮ ಸಂಸಾರ ಸಮೇತ ಬಂದರು. ಶಿವಮ್ಮನನ್ನು ನಗರಕ್ಕೆ ಕರೆದೊಯ್ಯುವ ಎಲ್ಲಾ ತಯಾರಿಗಳೂ ನಡೆದವು. ಸಂಜೀವ ಕಾರು ಮಾಡಿದ. ಮರುದಿನ ಬೆಳಗ್ಗೆಯೇ ಹೊರಡುವುದೆಂದು ತೀರ್ಮಾನವಾಯ್ತು. ಪಡಸಾಲೆಯಲ್ಲಿ ನೋವಿನಿಂದ ಸುಸ್ತಾದ ಶಿವಮ್ಮ ಮಲಗಿ ಕಣ್ಮುಚ್ಚಿದ್ದಳು. ಅಂಗಳದಲ್ಲಿ ಕೂತು ಸಂಜೀವ, ಅವನ ಹೆಂಡತಿ ಜಯಶ್ರೀ, ಗಂಗವ್ವ ಅವಳ ಗಂಡ ಮಹಾದೇವ ಮಾತಾಡುತ್ತಾ ಕೂತರು.

'ಅವ್ವಯ್ಯನ ಈ ಸ್ಥಿತಿಯಲ್ಲಿ ನೋಡಕೇ ಆಗ್ತಿಲ್ಲ ನನಿಗೆ..' ಸಂಜೀವನೆಂದ.

'ಹೂಂನಣ್ಣ ತನ್ನ ಇಡೀ ಜೀವಮಾನದಾಗೆ ಒಂದರಗಳಿಗೆ ಒಂದು ಕಡೆ ಕುಂತಳಲ್ಲ ಅವ್ವಯ್ಯ..' ಗಂಗ ಕಣ್ಣೊರೆಸಿಕೊಂಡಳು.

'ಅಷ್ಟೇ ಅಲ್ಲ ನಿಮ್ಮವಗೆ ಯಾವ ಆಸೇನೂ ಇಲ್ಲ ನೋಡು..' ಮಹಾದೇವ ಸೋಜಿಗ ವ್ಯಕ್ತಪಡಿಸಿದ.

'ಇಲ್ಲ ಐತೆ.. ಒಂದೇ ಒಂದು ಅದು ಹಂಡೇವು..' ಗಂಗ ಮಾತು ಮುಗಿಸುತ್ತಿದ್ದಂತೆ

'ಹೇ ಐ ಲವ್ ಇಟ್ ಯಾರ್! ಮೊದಲ ಬಾರಿ ಅದನ್ನ ಕಂಡಾಗಿನಿಂದಲೂ ಅದರ ಮೇಲೆ ನನಗೆ ಒಂದು ಕಣ್ಣಿದೆ. ಈಗಿಲ್ಲಿ ಮಮ್ಮಿನೇ ಇರಲ್ಲ ಅಂದ್ಮೇಲೆ ಅದು ಯಾಕಿಲ್ಲಿರ್ಬೇಕು

ಅಲ್ಲವಾ? ಮನೆಯಲ್ಲೀರೋ ಆಂಟಿಕ್ಸ್ ಜೊತೇಲಿ ಶೋಪೀಸಾಗಿಡಕೆ ತುಂಬಾ ಚೆನ್ನಾಗಿರುತ್ತೆ. ಇಟ್ಸ್ ಸಮ್ತಿಂಗ್ ರೇರ್ ಯೂ ನೊ..' ಜಯಶ್ರೀ ಶುರು ಮಾಡಿದಳು.

ಒಡನೆ ಸಂಜೀವ, ಗಂಗವ್ವ ಇಬ್ಬರೂ ಆಕೇನ ತಡೆದು ಅದರ ಬಗ್ಗೆ ಮಾತನಾಡದೆ ಇರುವುದೇ ಒಳ್ಳೆಯದೆಂದು ಎಷ್ಟು ಹೇಳಿದರು ಆಕೆ ವಾದಿಸುತ್ತಲೇ ಹೋದಳು.

'ಇನ್ನ ಅದರ ಉಪಯೋಗ ಅತ್ತೆಗೆಲ್ಲಿದೆ ಸಂಜೂ..? ಇಲ್ಲಿ ಸುಮ್ನೆ ವೇಸ್ಟಾಗಿದೆ. ಅಲ್ಲಾದರೆ ನಾಲ್ಕು ಜನ ನೋಡ್ತಾರೆ, ಅಪ್ರಿಷಿಯೇಟ್ ಮಾಡ್ತಾರೆ ಅಂತ ನನ್ನ ಅನಿಸಿಕೆ..' ಬಿಡಲಿಲ್ಲ ಜಯಶ್ರೀ.

ಕೊನೆಗೆ ಗಂಗವ್ವನೂ ಅತ್ತಿಗೆಯ ಮಾತನ್ನೇ ಒಪ್ಪಿಕೊಂಡಳು.

'ಹೂಂನಣ್ಣ ಈಗಿನ್ಯಾರು ಅದರಲ್ಲಿ ನೀರು ತುಂಬಿಟ್ಕಂಡು ಕುಡಿತಾರೇಳು? ಅವ್ವಯ್ಯಗಂತು ಮಾಡಾಕ್ಯಾರೆ ಕೆಲ್ಸಯಿರ್ಲಿಲ್ಲ. ದಿನಾ ಅದುನ್ನ ತಿಕ್ಕಂಡು ಕುಂತಿರ್ತಿದ್ಲು. ಹೌದತ್ತಿಗೆ, ಅದನ್ನು ದಿನಾ ತಿಕ್ಕಿದರಷ್ಟೇ ಫಳಫಳ ಅಂತ ಕಾಣೋದು. ನೀವದನ್ನೆಲ್ಲಾ ಮಾಡ್ತೀರಾ....?' ಅಂತ ಕೇಳಿದಳು.

'ಅಯ್ಯಪ್ಪ ಅದೆಲ್ಲ ನನ್ಕೈಲಿ ಸಾಧ್ಯವೇ ಇಲ್ಲ. ಅದಕ್ಕೇ ಒಂದು ಉಪಾಯ ಮಾಡಿದ್ದೀನಿ. ಅದರ್ಮೇಲೆ ಪೇಂಟ್ ಮಾಡಿಸಿದ್ರೆ ಹೇಗೆ....?' ಜಯಶ್ರೀ ಕೇಳಿದಳು.

'ಒಳ್ಳೆ ಉಪಾಯ ಅತ್ಗೆ ತುಂಬಾ ಚೆನ್ನಾಗಿರುತ್ತೆ. ನಿಮ್ಮ ಹಾಲ್‌ನಲ್ಲಿಟ್ರೆ ಮನೇಗೇ ಒಂದು ಕಳೆ ಬರುತ್ತೆ...' ಗಂಗವ್ವನೂ ಅಷ್ಟೇ ಹುರುಪಿನಿಂದ ಹೇಳಿದಳು. ಆದರೆ ಸಂಜೀವ ಒಪ್ಪಲಿಲ್ಲ.

'ನೋಡು ಅವ್ವಯ್ಯ ಆ ಹಂಡೇವ್ನ ಕೊಡೋಕೆ ಸುತರಾಂ ಒಪ್ಪೊಲ್ಲ. ಆಕೆಗದು ತುಂಬಾ ಪ್ರೆಷಿಯಸ್...' ಎಂದವನ ಮಾತಿಗೆ ಹೆಂಡತಿ ಕೆರಳಿಯೇಬಿಟ್ಟಳು.

'ನೋಡಿ afterall ಆ ಹಳೇದೊಂದು ಹಂಡೆಗೆ ಇಷ್ಟೆಲ್ಲಾ ರಂಪನಾ....? ಎಷ್ಟು ಪ್ರೆಷಿಯಸ್ ಅದು.... ಹಾಂ....? ನಿಮ್ಮಮ್ಮ ಏನೂ ಪುಕ್ಕಟ್ಟೆ ಕೊಡೋದು ಬೇಡ ಬಿಡಿ. ತಿಂಗ್ಳಾ ನೀವು ಕಳಿಸ್ತೀರಲ್ಲಾ ದುಡ್ಡು ಅದಕ್ಕೆ ಇನ್ನೊಂದು ನೂರು ಹೆಚ್ಚು ಸೇರಿಸಿದ್ರೆ ಆಯ್ತು..'

ಅವಳ ದನಿಯೇರಿದ್ದು ಗಮನಿಸಿ ಸಂಜೀವ ತಡೆದ.

'ಆಯ್ತು ಮಾರಾಯ್ತಿ ನಿನಗೆ ಆ ಹಂಡೆ ತಾನೆ ಬೇಕು? ಗರುಡ ಮಾಮಂಗೆ ಹೇಳಿದ್ರೆ ನಾಳೆ ಕಾರಿನ ಟಾಪ್ ಮೇಲೆ ಕಟ್ತಾನೇಳು. ಅದೇನಾದ್ರು ಆಗ್ಲಿ ತಗೊಂಡೇ ಹೋಗೋಣ. ಈಗ ನಡೀರಿ ಮಲ್ಗಿ. ಬೆಳಗ್ಗೆ ಬೇಗ ಏಳ್ಬೇಕು....' ಎಂದು ಎಲ್ಲರನ್ನೂ ಎಬ್ಬಿಸಿಕೊಂಡು ಹೊರಟ.

ಬೆಳಗ್ಗೆ ಇವರೆಲ್ಲ ಎದ್ದು ಬಂದಾಗ ಶಿವಮ್ಮನ ಹಾಸಿಗೆ ಖಾಲಿಯಾಗಿತ್ತು. ಕಾರು ಬಂದು ನಿಂತಿತ್ತು. ಎದ್ದು ನಿಲ್ಲಲೇ ಶಕಿಯಿಲ್ಲದವಳು ಎಲ್ಲಿ ಹೋಗಿರಬಹುದು ಎಂದು ಗಾಬರಿಗೊಂಡರು ಎಲ್ಲಾ. ಆದರೆ ಶಿವಮ್ಮ ಅಡುಗೆ ಮನೆಯಲ್ಲಿ ಹಂಡೇವನ್ನ ತಬ್ಬಿ ಅದಕ್ಕೆ ಕೆನ್ನೆಯೂರಿ ಕಣ್ಮುಚ್ಚಿ ಕೂತಿದ್ದಳು. ಅವಳ ಪಕ್ಕದಲ್ಲೇ ಕಪ್ಪನೆಯ ಸ್ವಾರೆ ಇತ್ತು.

ಸಂಜೀವ ಅವ್ವನನ್ನು ಎಬ್ಬಿಸಲು ಹೋದರೆ ಆಕೆ ನಿಶ್ಚಲವಾಗಿದ್ದಳು. ಶಾಂತವಾಗಿದ್ದಳು. ಎಲ್ಲಾ ಬಾಧೆಗಳಿಂದಲೂ, ಬಂಧನಗಳಿಂದಲೂ ಮುಕ್ತವಾಗಿದ್ದಳು. ಮುಖದಲ್ಲಿ ಮಗುವಿನ ಕಳೆಯಿತ್ತು. ಅವಳ ಪಕ್ಕದಲ್ಲೇ ಇದ್ದ ಸ್ವಾರೆಯಲ್ಲಿ ನೋಟುಗಳಿದ್ದವು. ಜೊತೆಗೆ ಕೆಲವು

ಪತ್ರಗಳು. ಸಂಜೀವ ಪ್ರತಿ ತಿಂಗಳು ಅವ್ವನಿಗೆ ಕಳುಹಿಸುತ್ತಿದ್ದ ದುಡ್ಡು! ಬರೆಯುತ್ತಿದ್ದ ಪತ್ರಗಳು!

ಗರುಡಮಾಮ ಅಳುತ್ತಾ ಹೇಳಿದ.

'ಸಂಜೀವ ನೀನು ಕಳಿಸಿದ ದುಡ್ನಾಗೆ ಒಂದು ಪೈಸನೂ ಅಕ್ಕಯ್ಯ ಬಳಸ್ಕಂಡಿಲ್ಲ. ನೀನೆಂಗೆಂಗೆ ಕಳುಸ್ತಿದ್ಯೋ ಹಂಗಂಗೆ ಇದ್ರಾಗೆ ಇಟ್ಟಿದ್ಲು. ನಾನು ಸತ್ತ ದಿನ ಅವ್ನಿಗೇ ಯಲ್ಲಾ ಕ್ವಡು ಅಂದಿದ್ಲು. ಮತ್ತೆ ಅವ್ಳ ದಿವುಸಕ್ಕೆ, ಕರ್ಮಕ್ಕೆ ಅಂಥ್ಲೂ ವಂದಷ್ಟು ದುಡ್ಡು ಇಟ್ಟವ್ಳೆ...' ಎಂದವನೇ ಬಟ್ಟೆಯ ಗಂಟು ಬಿಚ್ಚಿ ತೋರಿಸಿದ.

ಅಲ್ಲಿದ್ದವರೆಲ್ಲ ಅಳಲೂ ಬಾರದಷ್ಟು ಆಘಾತಗೊಂಡಿದ್ದರು. ಮುಖಗಳೆಲ್ಲಾ ಕಪ್ಪಿಟ್ಟು ಹೋಗಿದ್ದವು. ರಾತ್ರಿ ತಾವಾಡಿದ ಮಾತುಗಳೆಲ್ಲಾ ಅವ್ವನ ಕಿವಿಗೆ ಬಿದ್ದಿವೆ ಎಂಬುದಕ್ಕೆ ಅವೆಲ್ಲಾ ಸಾಕ್ಷಿಯಾಗಿದ್ದವು. ಸಂಜೀವನಿಗೆ ಅಸಹ್ಯವಾಗತೊಡಗಿತು.

ಇನ್ನೆಂದೂ ನಾನು ನನ್ನ ಮುಖವನ್ನು ನೋಡಿಕೊಳ್ಳಲಾರೆ ಎನಿಸಿತು. ಅಂಗೈಗಳಿಂದ ಮುಖ ಮುಚ್ಚಿಕೊಂಡು 'ಅವ್ವಾ....' ಎಂದು ಕೂಗಿ ಕೆಳಕ್ಕೆ ಕುಸಿದ.

✦ ✦



ಅನಿವಾರ್ಯ

ಬೆಳಗಿನ ಎಳೆಬಿಸಿಲಿಗೆ ಮೈಯೊಡ್ಡಿ, ನಮ್ಮ ಕಾಂಪೌಂಡಿನ ಮಾಮರದಲ್ಲಿ ಹಾಡುತ್ತಿದ್ದ ಕೋಗಿಲೆಯತ್ತ ಕಿವಿ ನೆಟ್ಟು ಕೂತಿದ್ದ ನನ್ನನ್ನ

'ಏಯ್ ಸುಮಾ..... ಸುಮೀ....' ಎಂದು ಕೂಗುತ್ತ ಬಂದ ಪರಿ ಹಿಡಿದು ಅಲ್ಲಾಡಿಸಿಬಿಟ್ಲು.

ಅವ್ಳ ಕಂಗಳಲ್ಲಿದ್ದ ಹೊಳಪು, ಮುಖದಲ್ಲಿನ ನಗು, ಸಂಭ್ರಮ ಆಕೆ ಹೇಳಬೇಕಾದ ವಿಚಾರವನ್ನ ಸಾರಿ ಹೇಳುತ್ತಿದ್ರೂ ಏನೂ ಗೊತ್ತಾಗದವಳಂತೆ

'ಏನಿಷ್ಟು ಎಕ್ಸೈಟ್‌ಮೆಂಟೂ....?' ಎಂದು ಕೇಳಿದೆ. ಸುಮ್ನೆ ನಕ್ಕಳಷ್ಟೆ ಎಂತಹ ಲೈವ್ಲೀ ನಗುವದು! ಅದೂ ಎಷ್ಟೋ ದಿವಸಗಳ ನಂತರ ಪರಿಯ ಮುಖದ್ಮೇಲೆ....

'ಏಯ್ ಪರಿ ಅಲ್ಲಲ್ಲ ಪಾರೂ ಏನಿಷ್ಟು ಸಂಭ್ರಮ' ರಾಗವಾಗಿ ಕೇಳ್ದೆ.

'ಉಹೂಂ ನಿನ್ ಬಾಯ್ನಲ್ಲಿ ಪರೀನೆ ಸರಿ. ಪಾರೂ... ಊಹೂಂ.....' ಚಿಕ್ಕ ಹುಡುಗಿಯಂತೆ ತಲೆ ಅಡ್ಡಡ್ಡ ಆಡಿಸುತ್ತ ಹೇಳಿ ನಕ್ಕು

'ಫೋನ್ ಬಂದಿತ್ತು ಹಿ ಇಸ್ ಕಮ್ಮಿಂಗ್...' ಅಂದ್ಲು ಪಿಸುದನೀಲಿ.

'ಹೂ ಇಸ್ ಕಮ್ಮಿಂಗ್....?' ಬೇಕೆಂದೇ ಕಾಡಿದೆ.

'ಡಾಕ್ಟ್ರು....'

'ಯಾವ ಡಾಕ್ಟ್ರು....?' ನನ್ನ ಪ್ರಶ್ನೆಗೆ ಕತ್ತು ಕೊಂಕಿಸಿ

'ಹೃದಯ ತಜ್ಞರು...' ಅಂದ್ಲು.

ಅವ್ಳ ಮಾತಿಗೆ ನಾನು ಚುರುಕಾಗಿ ಹೇಳ್ಬಿಟ್ಟೆ 'ಹೃದಯ ತಜ್ಞರಾ...? ಅಂದ್ರೇ.... ಹೃದಯ್ದ ಖಾಯ್ಲೆ ವಾಸಿಮಾಡೋ ತಜ್ಞರೋ ಅಥ್ವಾ ಹೃದಯಾಘಾತ ಮಾಡ್ಸೋ ತಜ್ಞರೋ....?'

ಪರಿ ಒಮ್ಮೆಗೆ ಸೀರಿಯಸ್ಸಾಗಿ ಬಿಟ್ಲು.

'ಸ್ಸಾರಿ ಪರಿ, ಸ್ಸಾರೀಮಾ ಸುಮ್ನೆ ತಮಾಷೆ ಮಾಡ್ದೆ ಅಷ್ಟೆ.....'

ಆಕೇನ ಮತ್ತೆ ಮೂಡಿಗೆ ತರಲು ಏನೇನೋ ರೇಗಿಸತೊಡಗಿದೆ. ಮೆಲ್ಲಗೆ ಮೊದಲಿನಂತಾದ್ಲು ಪರಿ.

'ಸುಮ ವಿವೇಕ್ ಫೋನ್ ಮಾಡಿದ್ದ ಅಮೇರಿಕದಿಂದ. ನನ್ನ, ಮಗಳ್ನ ತುಂಬಾ ವಿಚಾರಿಸ್ದ ಫೋನಲ್ಲೇ. ಹಣ ಸಾಕಷ್ಟು ಕಳ್ಸಿದಾನಂತೆ. ಮತ್ತೆ ಬೇಕಾದ್ರೆ ಕೇಳ್ಬೇಕಂತೆ etc.....etc....."

ಪರಿ ತುಂಬಾ ಕೂಲಾಗಿ ಹೇಳಿದ್ನೋಡಿ ನಂಗೆ ಆಶ್ಚರ್ಯ ಆಯ್ತು.

'ಎಷ್ಟು ನಿರ್ಲಿಪ್ತವಾಗಿ ಹೇಳ್ತಿಯಲ್ಲೆ....? ಅಲ್ಲ, ಫೋನ್ ಮಾಡಿರೋದು ನಿನ್ ಗಂಡ, ನಿನ್ನ ಮಗಳ ಅಪ್ಪಾ. ಆ ಸಂಬಂಧ....'

ನನ್ನ ಮಾತ್ನ ಪೂರ್ತಿಯಾಗ್ಲಿಕ್ಕೆ ಬಿಡ್ಲಿಲ್ಲ ಪರಿ.

'ದಯವಿಟ್ಟು ಸುಮ್ನಿರೆ ಸುಮಿ. ಈ ಸಂಬಂಧ, ಅದರ ಅನಿವಾರ್ಯತೆ ಸಾಕಾಗೋಗ್ಬಿಟ್ಟಿದೆ ನಂಗೆ. ಮನಸ್ಸುಗಳು ಸರಿ ಇರುತ್ವೋ ಇಲ್ವೋ ಕೇವಲ ಸಂಬಂಧ ಅನ್ನೋ ಅನಿವಾರ್ಯದಿಂದ ಒಟ್ಟಿಗೆ ಇರೋದು, ಬದುಕೋದು ಆ ಅನಿವಾರ್ಯ ಸೃಷ್ಟಿಸೋ ಗೊಂದಲ, ಆ ಗೊಂದಲದಿಂದ ಏಳೋ ಒತ್ತಡ ಟೋಟಲಿ ಇದೆಲ್ಲ ರೇಜಿಗೆ ಕಣೆ....'

ಆಕೆ ಮಾತುಗಳ್ನ ಪೂರ್ತಿಯಾಗಿ ಕೇಳಿಸ್ಕೊಂಡು

'ಹಾಗಾದ್ರೆ ನಿನ್ನ ಮತ್ತು ಡಾಕ್ಟರ್ ನಡುವಿನ ಸಂಬಂಧ ಅನಿವಾರ್ಯ ಅಲ್ಲ ಅಂತೀಯಾ....?'

ಅಂತ ಕೇಳ್ದೆ.

'ಹೌದು ಸುಮ ನಮಗ್ಯಾವ ಅನಿವಾರ್ಯತೆ ಇದೆ ಹೇಳು....? ಯಾವ್ದೇ ಕಟ್ಟುಪಾಡು, ಸಂಪ್ರದಾಯ ಅನ್ನೋ ಮಣ್ಣುಮಸಿ ಇಲ್ಲ. ಸಾವಿರಾರು ಜನರೆದ್ರು ತಾಳಿ ಕಟ್ಟಿಸ್ಕೊಂಡು, ಅದಕ್ಕೆ ಅವರ್ನೆಲ್ಲ ಸಾಕ್ಷಿಯಾಗಿಟ್ಕೊಂಡು, ಮಾನಮರ್ಯಾದೆ, ಪ್ರತಿಷ್ಠೆ ಅಂತೆಲ್ಲ ಒದ್ದಾಡ್ಕೊಂಡು ಇಬ್ಬರ ನಡುವಿನ ಸಂಬಂಧ ಹಳಿಸಿಹೋಗಿರ್ಲಿ, ಹೇಸಿ ಹೋಗಿರ್ಲಿ ತಾಳಿ ಕಟ್ಟಿರೋ ಅಥ್ವಾ ಕಟ್ಟಿಸಿಕೊಂಡಿರೋ ಅನಿವಾರ್ಯತೆಗೆ ಜೀವ್ನಪೂರ ಒಟ್ಟಿಗಿದ್ಕೊಂಡು ಹೆಣಗೋದಿದ್ಯಲ್ಲ ಇದಕ್ಕಿಂತ್ಲೂ ನರಕ ಮತ್ಯಾವ್ದಿದೆ ಹೇಳು......'

'ನೀನೇಳೋದು ಸರಿ ಅಂತಿಟ್ಕೊ. ನಿಮ್ಮಿಬ್ರ ಮಧ್ಯೆ ಅನಿವಾರ್ಯತೆಯ ಒತ್ತಡ ಇಲ್ದೆ ಹೋದ್ರೂ ಮಾನಸಿಕವಾದ, ದೈಹಿಕವಾದ ಬಂಧನ ಅಂತೂ ಇದ್ಯಲ್ಲ....?'

ನನ್ನ ಪ್ರಶ್ನೆಗೆ 'ಹಾಂ! ಇದೆ ಅಲ್ವಾ.....? ಅದಕ್ಕೆ ಈ ಸಂಪ್ರದಾಯ ಸಾಕ್ಷಿಗಳು ಬೇಕಾಗಿಲ್ಲ. ಪರಸ್ಪರ ಪ್ರೀತಿ, ನಂಬುಗೆ ಅಷ್ಟು ಸಾಕು ಏನಂತೀ....?' ಎಂದು ಮರುಪ್ರಶ್ನೆ ಎಸೆದ್ಲು ಪರಿ.

'ಅಂದ್ರೇ ನಂಬ್ಕೆ, ಪ್ರೀತಿ ಇಲ್ಲವಾದ ಕ್ಷಣ ಪರಸ್ಪರ ದೂರ ಆಗ್ಬಿಡೋದು ಸುಲಭ ಅಂತಿಯಾ....?' ಕುತೂಹಲದಿಂದ ಕೇಳ್ದೆ ನಾನು.

'ಖಂಡಿತನೆ, ಸುಲಭನೂ ಹೌದು. ಸೂಕ್ತನೂ ಹೌದು. ಮನುಷ್ಯ ಮನುಷ್ಯ ನಡುವಿನ ಸಂಬಂಧಕ್ಕೆ ಆ ಬಾಂಧವ್ಯಕ್ಕೆ ಪೂರಕ ಅಲ್ವೇನೆ ಪ್ರೀತಿ, ವಿಶ್ವಾಸ....? ಅದೇ ಇಲ್ಲಾಂತದ್ಮೇಲೆ ನಮ್ಮ ನಡುವಿನ ಭಾವನೆಗಳಲ್ಲಿ ಜೀವಂತಿಕೆ ಇರೋಕ್ಹೇಗೆ ಸಾಧ್ಯ? ಟೋಟಲಿ ಮೀನಿಂಗ್ ಲೆಸ್ ಎಲ್ಲಾ. ಆನಂತರದ್ದು ಕೇವಲ ತೋರಿಕೆ, ಪರಸ್ಪರ ಹೇರಿಕೆ ಅಷ್ಟೆ. ಜೀವ್ನನೇ ಹೇರಿಕೆ ಅಂತಾಗ್ಬಿಟ್ರೆ ಬದುಕು ಹೇಗೆ ಸಹ್ಯವಾಗುತ್ತೆ....?'

ಮನಸ್ನಲ್ಲೆ ಡಾಕ್ಟರ್‌ಗೆ ಶಾಭಾಷ್ ಹೇಳ್ದೆ ನಾನು. ತಮ್ಮ ಎಲ್ಲಾ ವಿಚಾರಗಳ್ನ ಪರಿಯಲ್ಲಿ ಬಿತ್ತಿ, ಬೆಳೆಸಿರುವ ರೀತಿಗೆ ಅಚ್ಚರಿಗೊಂಡೆ. ಅಚ್ಚರಿಗೊಳ್ಳುತ್ತಲೇ ಕಾಫಿ ಸಿದ್ಧಗೊಳಿಸಿ, ಆಕೆಗೊಂದು ಕಪ್ ಕೊಟ್ಟು, ಅದು ಖಾಲಿ ಆಗುವತನಕ ಕಾದು

'ಸೋ ಪರಿ, ನೀನು ಹೇಳೋ ಹಾಗೆ ಮದ್ವೆಯಿಂದ ಹೊರತಾದ ಅಥ್ವಾ ಅನಿವಾರ್ಯದಿಂದ ಹೊರತಾದ ನಿನ್ನ ಮತ್ತು ಡಾಕ್ಟರ್ ಸಂಬಂಧ ಎರಡ್ವರ್ಷದ್ದಲ್ವಾ? ಈ ಎರ್ಡು ವರ್ಷದ ನಿಮ್ಮ ಸಂಬಂಧದ ಗತಿ ಒಂದೇ ಸಮ ಇದ್ಯಾ? ಅಂದ್ರೆ ಶುರುನಲ್ಲಿದ್ದ ಅದೇ ಗಾಢತೆ, ಆಪ್ತತೇ ಅಷ್ಟೇ ಅಟ್ಯಾಚ್‌ಮೆಂಟ್ ಇಗ್ಲೂ ಇದ್ಯಾ....?' ಕೇಳ್ದೆ.

'ಖಂಡಿತ ಇದೆ....' ದೃಢವಾಗಿ ಹೇಳಿದ್ಲು ಪರಿ. ಹಾಸಿಗೆಯ ಮೇಲಿದ್ದ ದಿಂಬನ್ನೆತ್ತಿ ತೊಡೆಯ ಮೇಲಿಟ್ಟುಕೊಂಡ್ಲು.

'ಆ ತೀವ್ರತೇನೂ ಇದ್ಯಾ...? ನಾನ್ಯಾಕೇಳ್ದೆ ಅಂದ್ರೆ ಯೂಶ್ಯುವಲೀ ಮದ್ವೆಯಾದ ಮೂರ್ನಾಲ್ಕು ವರ್ಷದ ನಂತರದ ಬದುಕು ತನ್ನೆಲ್ಲ ರಂಗು, ತೀವ್ರತೆ ಕಳ್ಕೊಂಡು ನೀರಸವಾಗಿ ಕೇವಲ ಹೊಂದಾಣ್ಕೆ ಮೇಲೆ ಅವಲಂಬಿಸಿರುತ್ತೆ ಅಂತಾರೆ. ನಿನ್ನ ಪ್ರಕಾರ ಈ ಹೊಂದಾಣಿಕೇನೆ ಅನಿವಾರ್ಯ ಅಂತ ಅಲ್ವಾ....? ಇವನ್ ಡಾಕ್ಟ್ರು ಕೂಡ ತಮ್ಮ ಹೆಂಡ್ತಿ ಜತೇಲಿದ್ದ ಹಾಗೆ ಮೂರೊತ್ತು ನಿನ್ ಜತೆ ಇರಲ್ಲ. ನೀವಿಬ್ರು ಪರಸ್ಪರ ನೋಡೋದು, ಸೇರೋದು ತಿಂಗ್ಳಿಗೋ, ಎರಡ್ತಿಂಗ್ಳಿಗೋ ಒಮ್ಮೆ. ಬಹುಶಃ ಇದ್ರಿಂದಾಗಿ ಭಾವನೆಗಳ ತೀವ್ರತೆ ಅಷ್ಟೇ ಗಾಢವಾಗಿ ನಿಮ್ಮಿಬ್ಬರಲ್ಲಿ ಉಳಿದಿರ್ಲೇಬೇಕು....?'

ತೊಡೆಯ ಮೇಲಿದ್ದ ದಿಂಬನ್ನೆತ್ತಿ ಮುಖಕ್ಕೆ ಅಡ್ಡ ಹಿಡಿದು, ತಲೆಯನ್ನ ಅದಕ್ಕೊತ್ತಿ ಹಿಡಿದ್ಲು ಪರಿ. ದಿಂಬಿನ ಮರೆಯಿಂದಲೇ

'ಹೌದು....' ಅಂದ್ಲು. ನಾನಷ್ಟಕ್ಕೆ ಬಿಡಲಿಲ್ಲ

'ಆರ್ ಯೂ ಶೂರ್ ಪರಿ?' ಎಂದೆ.

ತಟ್ಟಂತ ತಲೆಯೆತ್ತಿದ್ಲು 'ಯಾಕ್ ಪರೀಕ್ಷೆ ಮಾಡ್ತಿದಿಯಾ ನನ್ನಾ.....? ನಮ್ ಸಂಬಂಧದ ಬಗ್ಗೆ ನಿಂಗ್ ಅನುಮಾನನ?'

'ತಪ್ಪು ತಿಳೀಬೇಡ. ಹೋದ್ವಾರ ನಿನ್ ಮಗ್ಳು ಬರ್ತಡೇಲಿ ರಾತ್ರಿ ನಿಮ್ಮನೇಲೆ ಉಳುದ್ನಲ್ಲಾ ಅವತ್ತು ರಾತ್ರಿ ನೀನು ಫೋನ್ ಮುಂದೆ ಕೂತು ಅಳ್ತಿದ್ದ ರೀತಿ ಈಗ್ಲೂ ಕಣ್ಮುಂದೇನೆ ಇದೆ. ನಂಗೇ ಸಂಕ್ಟ ಕಿತ್ತು ಬರುತ್ತೆ. ನಿನ್ ದನಿ ಕೇಳಿ ಯಾರ್ಜತೆ ಮಾತಾಡ್ತಾಳಿವ್ಳು

ಅಂತ ಕುತೂಹಲ ತಡೀಲಾರ್ದೆ ನಿನ್ ಕೋಣೆಗ್ಬಂದೆ. ನಿನ್ ಮುಂದೆ ನಿರ್ಜೀವವಾಗಿ ಬಿದ್ದಿದ್ದ ಫೋನ್‌ಗೆ ಗೋಗರಿತಿದ್ದೆ ನೀನು.

'ಹತ್ಗಂಟೆ ಯಾಕಾದ್ರೂ ಬರುತ್ತೋ ಅನ್ಸುತ್ತೆ ನಂಗೆ. ರೀ ಹನ್ನೊಂದಾಯ್ತಲ್ರೀ.... ಎರಡ್ವಾರ್ದಿಂದ ಹೀಗೇ ಸತಾಯಿಸ್ತಿದ್ದಿರಾ.... ಯಾಕಂಗ್ಮಾಡ್ತಿರೀ...? ನೀವು ತುಂಬ ಬ್ಯುಸಿ ಅಂತ ಗೊತ್ತುರಿ. ಜಾಸ್ತಿ ಮಾತು ಬೇಡ. ಒಂದೇ ಒಂದ್ಸಾರಿ ಪಾರು ಅಂದ್ಬಿಡ್ರಿ ಸಾಕು.... ಸಾಕು ರೀ ಪ್ಲೀಸ್..... ಪ್ಲೀಸ್ ರೀ..... ಪ್ಲೀ....'

ಶಬ್ದ ಆದಂತಾಗಿ ಮಾತು ನಿಲ್ಸಿದೆ. ದಿಂಬಿಗೆ ತಲೆಯೊತ್ತಿ ಪರಿ ಬಿಕ್ಕುತ್ತಿದ್ಲು. ಆಕೆಯ ತಲೆ ನೇವರಿಸಿ ಹೇಳ್ದೆ

'ಸಂಕ್ಟ ನಂಗರ್ಥ ಆಗುತ್ತೆ ಪರಿ. ಆತನೇ ಫೋನ್ ಮಾಡ್ಬೇಕು ನೀನು ಮಾಡೋ ಹಾಗಿಲ್ಲ ಆತನ ಹೆಂಡ್ತಿ ಇರ್ತಾಳೇಂತ. ಸದಾ ಕಾನ್‌ಫರೆನ್ಸು ಲೆಕ್ಚರು ಅಂತ ಬ್ಯುಸಿ ಹಾಗಾಗಿ ಮೊಬೈಲ್‌ಗೆ ಮಾಡಿದ್ರೂ ರಿಸೀವ್ ಮಾಡ್ಕೊಳಲ್ಲ. ಮಾಡ್ತಿನಿ ಅಂದಾಗ ಆತನೇ ಮಾಡ್ಬೇಕು ಅಷ್ಟೆ.

ಆದ್ರೆ ಪರಿ ನಂಗಿನ್ನೂ ನೆನಪಿದೆ ಕಣೆ. ಶುರುನಲ್ಲಿ ಆತನ ಫೋನ್ ಕೇಳಿಸ್ಕಂಡು ನಾನು ವಾಚ್ ಸೆಟ್ ಮಾಡ್ಕೊಳ್ತಿದ್ದೆ. ನಮ್ ಅಲರಾಂ ಮತ್ತೆ ನಿನ್ ಫೋನ್ ಒಟ್ಗೆ ರಿಂಗಾಗ್ತಿದ್ವು ಅಷ್ಟೊಂದು ಅಕ್ಯುರೆಸ್ಸಿ! ನೀನ್ಯಾಕೆ ದಬಾಯ್ಸಿ ಕೇಳಲ್ವೆ..?'

ಕಣ್ಣೊರಸಿಕೊಳ್ತ 'ಸ್ವಲ್ಪ ಮೆಚ್ಯುರ್ಡ್ ಆಗಿ ಬಿಹೇವ್ ಮಾಡು ಅಂತ ಬೈದ್ಬಿಡ್ತಾರೆ ಕಣೆ.....' ಅಂದ್ಲು ಪರಿ.

'ಮೆಚ್ಯೂರ್ಡ್ ಅಂದ್ರೆ ಏನರ್ಥ? ಶುರುನಲ್ಲಿ ದಿನಕ್ಕೊಮ್ಮೆ ಮಾಡ್ತಿರ್ಲಿಲ್ವಾ ಅವ್ರು ಫೋನು? ನೀನೇ ಬೈತಿದ್ದೆ ಹಣ ಜಾಸ್ತಿನಾ ಅಂತ. ಆಗ್ಲೂ ಇಷ್ಟೇ ಬ್ಯುಸಿ ಇರ್ಲಿಲ್ವಾ ಅವ್ರು...? ಆಗ ಅವ್ರು ಮೆಚ್ಯೂರ್ಡ್ ಆಗಿರ್ಲಿಲ್ವಾ.....? ಯಾವ್ದೆ ಸಂಪರ್ಕ ಇಲ್ದೆ ಇದ್ದಾಗ್ಯೂ ನಿರ್ಲಿಪ್ತವಾಗಿದ್ದು ಭಾವನೆಗಳನ್ನ ತುಡಿತನ ಅದುಮಿ ಇಟ್ಕೊಳ್ಳೋದು, ಕ್ರಮೇಣ ಕಳ್ಕೊಳ್ತಾ ಹೋಗೋದು ಇದೇನ ಮೆಚ್ಯೂರಿಟಿ? ಅಲ್ವೆ ಪರಿ, ದಾಂಪತ್ಯದಲ್ಲಿ ಕಡೇಪಕ್ಷ ಮೂರ್ನಾಲ್ಕು ವರ್ಷಗಳಾದ್ರು ತೀವ್ರತೆ ಉಳ್ದಿರತ್ತೆ. ಆದ್ರೆ ಅನಿವಾರ್ಯ ಅಲ್ಲ ಅಂತ ಅನ್ನಿಸಿಯೂ ಕೂಡ ನಿಮ್ಮಿಬ್ಬರಲ್ಲಿ ಆ ತೀವ್ರತೆ ಎರ್ಡೇ ವರ್ಷಕ್ಕೆ ಸೊರಗ್ತಿದೆ ಯಾಕೆ? ಇದೆನಾ ಮೆಚ್ಯೂರಿಟಿ?'

ಆದ್ರೂ ಬಿಡಲಿಲ್ಲ ಪರಿ ಡಾಕ್ಟ್ರ ಪರವಹಿಸಿಯೇ ಮಾತಾಡಿದ್ಲು.

'ಯಾವ್ದು ಅಲ್ಲ. ಸಮಯ, ಸಂದರ್ಭಕ್ಕೆ ತಕ್ಕ ಹಾಗೆ ವಿವೇಚನೆಯಿಂದ ನಡ್ಕೊಳೋದೇ ಮೆಚ್ಯುರಿಟಿ ಅಷ್ಟೆ ಅಲ್ವೆ ಸಣ್ ವಿಷ್ಯಕ್ಕೆಲ್ಲ ಅರ್ಥ ಹುಡುಕ್ತಾ ಇದ್ಬಿಟ್ರೆ ಬದುಕೋದೆ ದುರ್ಭರ ಆಗ್ಬಿಡುತ್ತಷ್ಟೆ. ಕೆಲ್ಸದ ಒತ್ತಡದಲ್ಲಿ ಯಾವಾಗ್ಲು ಒಂದೆ ಸಮ ಇರೋಕಾಗತ್ತ....?'

ಏನಂದ್ರೂ ಆ ಮನುಷ್ಯನ್ನ ಬಿಟ್ಟು ಕೊಡಲ್ವಲ್ಲ ಅಂತ ನಂಗೂ ಮೈಯಲ್ಲ ಉರಿಯೋಕೆ ಶುರುವಾಯ್ತು. ಬಿಡಲಿಲ್ಲ ನಾನು ಮತ್ತೆ ಕೆಣಕ್ದೆ.

'ಇದೇನೋ ಸಣ್ಣ ವಿಷ್ಯ ಸರಿ. ಆದ್ರೆ ಕೆಮ್ಮಣ್ಣುಗುಂಡೀಲಿ ನಡೆದದ್ದು....?'

ಅಸಹನೆಯಿಂದ ನನ್ನೇ ನೋಡ್ತಿದ್ದ ಅವಳ ಕಣ್ಣುಗಳಲ್ಲಿ ಕೆಮ್ಮಣ್ಣ ಗುಂಡಿ ಅಂದಾಕ್ಷಣ ಬಳಕ್ಕನೆ ನೋವು ತುಂಬಿಕೊಳ್ತು.

'ಅವತ್ತು, ಮರುದಿನ ಬೆಳಗ್ಗೆನೆ ಆತನ ಹೆಂಡ್ತಿ ಮಕ್ಳು ಬರ್ತಾರೆಂತ ಗೊತ್ತಾದ್ಮೇಲೆ ನೀನು ಹೊರ್ಟು ನಿಂತೆ. ಆದ್ರೆ ಆತ ಪಾರು ಇರು..... ಪ್ಲೀಸ್ ಪಾರು.... ಅಂತ ಗೋಗರಿತಿದ್ದ. ನೀನು ಉಳ್ಕೊಂಡ್ಬಿಟ್ಟೆ. ಆದ್ರೆ ಮರುದಿನ ನೀನು ಹೇಗ್ಬಂದೆ? ಹೇಗಿದ್ದೆ....? ನೆನಪಿದ್ಯಾ.....? ರಾತ್ರಿಯೆಲ್ಲ ವೀಸಿಂಗಿಂದ ನಿದ್ದೆಯಿಲ್ದೆ ಸುಸ್ತಾಗಿ, ಬೆಳಗಿನ ಜಾವ ಕಣ್ಮುಚ್ಚಿದ್ರಿಂದ ನೀನೇಳೋದು ನಿಧಾನ ಮಾಡ್ದಾಗ 'ನೋಡು ನೀನೀಕ್ಷಣ ಎದ್ದು ಹೊರಟ್ರೆ ಸರಿ ನಾನ್ಬಂದು ಬಸ್ಸು ಹತ್ತಿಸ್ತಿನಿ. ಇಲ್ಲಾಂದ್ರೆ ನಾನಂತು ಹೊರಟೆ. ನಿಂಗೆ ಬೇಕಾದಾಗ ಎದ್ದು ಕಾಟೇಜ್ ಖಾಲಿ ಮಾಡ್ಕೊಂಡು ಹೋಗು....' ಅಂತ ಅಂದ್ರು ಅಂತೇಳಿ ಎಷ್ಟು ನೊಂದ್ಕೊಂಡಿದ್ದೆ?

ಏಯ್ ಪರಿ ಈ ಅನಿವಾರ್ಯದ ಸಂಬಂಧ, ಅನಿವಾರ್ಯ ಅಲ್ಲದ ಸಂಬಂಧ ಇದೆಲ್ಲ ಬಾಷ್ಣ ಮಾಡೋಕ್ಸರಿ. ಆದ್ರೆ ಜೀವ್ನನೇ ಬೇರೆ. ಇದೆಲ್ಲ ಆಯಾ ಮನುಷ್ಯನ್ಮೇಲೆ, ಆಯಾ ಮನಸ್ಥಿತಿ ಮೇಲೆ, ಭಾವನೆಗಳ್ಮೇಲೆ, ಆಯಾ ಸಮಯ ಸಂದರ್ಭಗಳ ಮೇಲೆ ಅವಲಂಬಿಸಿರೋ ಆ ಕ್ಷಣದ ಮನಸ್ಥಿತಿ ಮೇಲೆ ಸತ್ಯಗಳಷ್ಟೆ. ಎಲ್ಲ ಕಾಲಕ್ಕು ಸತ್ಯ ಅಂತ ನಂಬ್ಕೊಂಡ್ರೆ ನೀನು ಮೂರ್ಖಳಾಗ್ತಿ. ಈ ಸೈಕೋಲಜಿ, ಫಿಲಾಸಫಿ ಮಾತಾಡೋದು, ಲೆಕ್ಚರ್ ಕೊಡೋದು ಆತನ ಪ್ರೊಫೆಷನ್ನು. ಆದ್ರೆ ಬದುಕು ಬೇರೆ ಅಲ್ವೇನೆ ಪರಿ?

ಆತನೋ ಟೋಟಲಿ ಕ್ಯಾಲ್ಕುಲೇಟಿವ್, ತುಂಬಾ ಪ್ರಾಕ್ಟಿಕಲ್ ಮನುಷ್ಯ. ನೀನೋ ಟೋಟಲಿ ಇಮೋಷನಲ್. ಅದ್ಯಾಗೆ ನಿಮ್ಮಿಬ್ರಿಗೆ ಹೊಂದಾಣ್ಕೆ ಸಾಧ್ಯ?'

ನನ್ನ ಮಾತು ಮುಗಿಯುವ ಹೊತ್ಗೆ ಪರಿ ನಗ್ತಿದ್ಲು. ನಾನಾಕೇನ ವಿಚಿತ್ರ ಪ್ರಾಣಿಯೆಂಬಂತೆ ನೋಡ್ದೆ. ನಗ್ತಾನೇ ಹೇಳಿದ್ಲು.

'ಭಲೇ ನೀನೂ ಚೆನ್ನಾಗಿ ಬಾಷ್ಣ ಮಾಡ್ತಿ ಸುಮಿ. ನೀನು ಹೇಳೋದೆಲ್ಲ ಸತ್ಯ, ವಾಸ್ತವ ಇರ್ಬಹ್ದು. ನಂಗೆದೆಲ್ಲ ಅರ್ಥ ಆಗೊಲ್ಲ. ನಂಗೆ ಗೊತ್ತಿರೋದಿಷ್ಟೆ ನಾನು ರಾಜುನ ಪ್ರೀತಿಸ್ತಿನಿ. ಅವ್ರು ನಂಗೆ ಬೇಕು. ಆತನ ಒಳ್ಳೆತನ, ಕೆಟ್ಟತನ ವಿತ್ ಆಲ್ ಹಿಸ್ ವೀಕ್‌ನೆಸ್ ನಾನವುರನ್ನ ಒಪ್ಕೊಂಡ್ಬಿಟ್ಟಿದೀನಿ...'

ಆಕೆ ಮಾತ್ನ ಅರ್ಧಕ್ಕೆ ತಡ್ದು ನಾನು ವ್ಯಂಗವಾಗಿ ಹೇಳ್ದೆ

'ನಿನ್ ತಪ್ಪಲ್ಲ. ಏನೇ ಆದ್ರೂ ಈ ಕದ್ದುಮುಚ್ಚಿ ಅನುಭವಿಸೋ ಸುಖದಲ್ಲಿ, ಈ ಹಾದರದಲ್ಲಿ ಒಂಥರ ಥ್ರಿಲ್ ಇರುತ್ತೆ. ಹಾದರನ ದೊಡ್ಡ ದೊಡ್ಡ ಪದಪುಂಜಗಳಿಂದ ಅಲಂಕರ್ಸಿ, ತನ್ನ ವೃತ್ತಿಯ ಟಾಕ್ಟಿಸ್ ಎಲ್ಲಾ ಬಳಸ್ಕೊಂಡು ನಿನ್ನಂತಹ ಗೊಡ್ಡುಗಳ್ನ ತಯಾರ್ಮಾಡಿ, ದಾಂಪತ್ಯದಲ್ಲಿನ ಏಕತಾನತೆ ಬೇಸರ ಮೂಡಿಸ್ದಾಗ ಥ್ರಿಲ್ ಬೇಕು ಚೇಂಜ್ ಬೇಕು ಅಂತನ್ನಿಸ್ದಾಗ ಅನುಭವಿಸ್ಲಿಕ್ಕೆ....'

ಮಾತು ಮುಂದುವರಿಸೋ ಮೊದ್ಲೆ ನನ್ನ ಕೆನ್ನೆಗೆ ರಪ್ಪನೆ ಬಾರಿಸಿದ್ಲು ಪರಿ. ಸಣ್ಣಗೆ ನಡುಗ್ತಿದ್ಲು. ಗಾಯಗೊಂಡವಳಂತೆ ವಿಲವಿಲನೆ ಒದ್ದಾಡ್ತಿದ್ಲು.

'ನಮ್ಮ ಸಂಬಂಧದ ಬಗ್ಗೆ ಪ್ರೀತಿ ಬಗ್ಗೆ ಸುಮಿ ನೀನು ಹೀಗೆಲ್ಲ ಮಾತಾಡ್ತಿದ್ದಿಯಾ....?'

ಅವ್ಳ ಮಾತುಗಳು ನನ್ನ ಇರಿದ್ವು. ಆಕೇನ ಘಾಸಿಗೊಳಿಸಿದ್ದೆ.

'ನಮ್ಮ ಪ್ರೀತೀನ ಗೌರವಿಸ್ದೆ ಹೋದ್ರೂ ಪರ್ವಾಯಿಲ್ಲ. ಆದ್ರೆ ಹಾದರ ಅಂತ ಕರ್ದು ಅವಮಾನ ಮಾಡ್ಬೇಡ್ವೆ.....' ಅಂತ ಕೈಜೋಡಿಸಿ ಹೊರಟೋದ್ಲು ಪರಿ.

ಬಹುಶಃ ನನ್ನೆಂದೂ ಕ್ಷಮಿಸಲಾರ್ಳು ಅವ್ಳು ಅನ್ನಿಸ್ತು. ರಾಜುನ ಬರೀ ಒಪ್ಕೊಳದಲ್ಲ ಪೂರ್ಣ ಜೀರ್ಣಿಸಿಕೊಂಡು ಬಿಟ್ಟಿದ್ದಳವ್ಳು. ಆತ ಇವ್ಳ ನರನಾಡಿಯಲಿ, ಮಾಂಸ ಖಂಡಗಳಲ್ಲಿ ಸೇರಿ ಹೋಗ್ಬಿಟ್ಟಿದ್ದ. ಆದ್ರೆ ನನಗ್ಯಾಕೋ ರಾಜು ಮೊದಲಿನಂತಿಲ್ಲ. ಬದಲಾಗ್ತಿದ್ದಾರೆ ಅನ್ನಿಸ್ತಿತ್ತು. ಏನೇ ಆಗ್ಲಿ ಆತ ಇತ್ತ ಬಂದಾಗ ಬೇಕಾಗೋ ಥ್ರಿಲ್ಲಿಗೆ ಪರಿ ಅನಿವಾರ್ಯ ಆಗ್ದೆ ಇದ್ರೆ ಸಾಕು ಅಂದ್ಕೊಂಡೆ.

ಅವ್ಳು ಫೋನ್ ಮಾಡಿ ಕರಿಯದೆ ಇದ್ರೂ ನಾನು ಡಾಕ್ಟ್ರು ಲೆಕ್ಚರ್ ಇದ್ದ ದಿನ ಆಡಿಟೋರಿಯಂಗೆ ಹೋದೆ. ಪರಿನ ಹುಡ್ಕಿ ಅವ್ಳ ಪಕ್ಕದಲ್ಲೇ ಕೂತೇ. ನನ್ನತ್ತ ನೋಡ್ಲೂ ಇಲ್ಲ ಮಾತೂ ಆಡ್ಲಿಲ್ಲ ಪರಿ. ನಾನೇ ಮಾತಾಡ್ದೆ

'ನೀನು ಬಂದು ತುಂಬ ಹೊತ್ತಾಯ್ತಾ?' ಅಂತ. 'ಇಲ್ಲ' ಅನ್ನುವಂತೆ ತಲೆಯಲ್ಲಾಡಿಸಿದ್ಲು ಅಷ್ಟೆ. ಡಾಕ್ಟ್ರು ಅಲ್ಲಿಂದಲೇ ಹಾಯ್ ಹೇಳಿದ್ರು.

ಆ ದಿನದ ಲೆಕ್ಚರ್ ತುಂಬಾ ಚೆನ್ನಾಗಿತ್ತು. ನಾನು ಆತನಿಗೆ ವಿಷ್ ಮಾಡಲು ಹುಡುಕಿ ಹೊರಟರೆ ಪರಿ ಎಂದಿನ ಹಾಗೆ ದೂರವೆ ಉಳಿದ್ಲು. ನಾನು ವಿಷ್ ಮಾಡಿದ್ಮೇಲೆ

'ಸುಮ, ಪಾರುಗೆ ಗೆಸ್ಟ್‌ಹೌಸ್ ಹತ್ರ ವೇಟ್ ಮಾಡ್ಲಿಕ್ಕೇಳಿ. ನಾನಿವ್ರನ್ನೆಲ್ಲ ಕಳ್ಸಿ ಹತ್ತಿಮಿಷದಲ್ಲಿ ಬಂದ್ಬಿಡ್ತೀನಿ....' ಅಂತೇಳಿ ಗುಂಪಿನಲ್ಲಿ ಕರಗಿ ಹೋದನಾತ.

ಗೆಸ್ಟ್‌ಹೌಸ್ನಲ್ಲಿ ಆತನಿಗಾಗಿ ನಾವು ಕಾದದ್ದು ಎರಡು ಗಂಟೆಗಳ ಕಾಲ. ಬಂದವನೇ 'ಸ್ಸಾರಿ ಪಾರು ಲೇಟಾಯ್ತು ಮತ್ತೆ....?' ಎಂದು ಫ್ರೆಷ್ ಆಗಿ ಬರಲು ಮತ್ತರ್ಧ ಗಂಟೆ.

'ಊಟ ಮಾಡೋಣ ಹೊಟ್ಟೆ ಹಸೀತಿದೆ....' ಎಂದೊಡನೆ ಊಟ ಬಂತು. ಊಟ ಮಾಡುತ್ತ ಆತ ತನ್ನ ಪ್ರೋಗ್ರಾಂಗಳ ಅನುಭವ, ತನ್ನ ಫ್ಯಾನ್ಸ್‌ಗಳ ಬಗ್ಗೆ ಕೊರೆಯುತ್ತ ಹೋದ.

ಪರಿ ಅದನ್ನೆಲ್ಲ ತುಂಬ ಆಸಕ್ತಿಯಿಂದ ಆಲಿಸುತ್ತಿದ್ದಳು. ನಾನು ಮಾತ್ರ ಬೆಪ್ಪಳಂತೆ ಇಬ್ಬರನ್ನ ನೋಡ್ತಾ ಕೂತೆ. ಊಟ ಮುಗಿಯುತ್ತಿದ್ದಂತೆ ಮೇಟಿ ಕರ್ದು

'ನೋಡು ಡ್ರೈವರ್‌ಗೆ ಕಾರ್ ತಂದು ನಿಲ್ಸು ಅಂತೇಳು. ಹತ್ತಕ್ಕೆಲ್ಲ ಹೊರಟ್ಬಿಡ್ಬೇಕು...' ಅಂತೇಳಿದ್ರು ಡಾಕ್ಟ್ರು.

ಪರಿ ಎಗರಿಬಿದ್ದು 'ರೀ ನೀವೀಗ್ಲೆ ಹೊರಟ್ರಾ....? ಉಳಿಯಲ್ಲಾ....?

ಆ ಮಾತಿನಲ್ಲಿ ತುಳುಕುತ್ತಿದ್ದ ನೋವು, ನಿರಾಶೆ ಗುರುತಿಸುವ ಮನಸ್ಥಿತಿ ಆತನಿಗೆ ಇದ್ದಂತಿರಲಿಲ್ಲ. ನಾನೇ ತಡೀಲಾರ್ದೆ

'ಯಾಕೀಗ್ಲೆ....? ನೀವು ಬೆಳ್ಗೆ ಒಂಬತ್ತಕ್ಕೆ ಹೊರಟ್ರೂ ಪ್ರೋಗ್ರಾಂ ಹೊತ್ಗೆ ಬೆಂಗ್ಳೂರ್ ರೀಚ್ ಆಗ್ಬಹುದಲ್ಲಾ....' ಅಂದೆ.

'ನೋ, ನೋ, ಸಾಧ್ಯವೇ ಇಲ್ಲ. ಬೆಳಗ್ಗೆನೆ ಸುಧಾ, ಮಕ್ಳು ಬಂದ್ಬಿಡ್ತಾರೆ ಬೆಂಗ್ಳೂರ್ಗೆ. ಸುಮ್ನೆ ನನ್ನ ಕಾಯೋದಾಗತ್ತೆ ಅವ್ರಿಗೆ ಅಷ್ಟೆ....'

ಆತನ ಮಾತು ಮುಗಿಯುತ್ತಿದ್ದ ಹಾಗೆ ಕಾರ್ ಬಂದು ನಿಲ್ತು. ನಾನು ಪರಿಯತ್ತ ನೋಡ್ದೆ. ಪರಿ ಕಾರನ್ನೇ ನೋಡ್ತಿದ್ಲು.

ಡಾಕ್ಟ್ರು ಹೊರಡುವ ತಯಾರಿ ನಡೆಸ್ತಿದ್ರು. ನನಗೆ ರೇಗುತ್ತಿತ್ತು. ಬಗ್ಗಿ ಪರಿಯ ಕಿವಿಯಲ್ಲಿ

'ಯಾಕೆ ಸುಮ್ನಿದ್ದಿ? ನೀನ್ ಕಾದಿಲ್ವಾ ತಿಂಗ್ಳಿಂದ..... ಇದ್ಕೋಗಿ ಅಂಥ ಜೋರ್‍ಮಾಡೆ...' ಅಂದೆ.

ಡಾಕ್ಟರು ಸೂಟ್‌ಕೇಸ್ ಮುಚ್ಚುತ್ತ

'ಏನದೂ...' ಅಂತ ಕೇಳಿದ್ರು. ತಕ್ಷಣ ಪರಿ 'ಕಾರ್‍ನಲ್ಲಿ ಇನ್ಯಾರೊ ಇರೋ ಹಾಗಿದೆ..... ಅವ್ರು ನಿಮ್ ಪ್ರೊಫೆಸರ್ ಕಿರಣ್ ಅಲ್ವಾ..? ಆಕೆ ಯಾರು ಅವ್ರ ಪಕ್ಕ ಇರೋಳು...? ಷಿ ಇಸ್ ಸೋ ಬ್ಯುಟಿಫುಲ್ ರೀ ಕಿರಣ್ ಹೆಂಡ್ತಿನಾ....?'

ಎಂದು ಒಂದೇ ಉಸುರಿಗೆ ಕೇಳಿದ್ಲು. ಸೂಟ್‌ಕೇಸ್ ತಗೊಂಡು ಹೊರಡುತ್ತ ಡಾಕ್ಟರು

'ಯಾರು ಅವ್ಳಾ....? ಸ್ಯಾ ಅವ್ನ ಕೀಪೂ...'

ಎನ್ನುತ್ತ ಸರಸರನೆ ಹೊರ ನಡೆದ್ರು. ಪರಿ ಅವರೊಡನೆ ಹೋಗುತ್ತಿದ್ದವ್ಳು ಗಕ್ಕನೆ ನಿಂತುಬಿಟ್ಲು.

ನಾವು ಮನೆ ತಲುಪಿದ ಹತ್ತೇ ನಿಮಿಷಕ್ಕೆ ಫೋನ್ಬಂತು. ಪರಿ ಆಗಿನಿಂದ್ಲೂ ಒಂದೇ ಒಂದು ಮಾತಾಡಿರ್‍ಲಿಲ್ಲ. ಆಕೇನ ಒಂಟಿಯಾಗಿ ಬಿಟ್ಹೋಗಲು ಭಯವಾಗಿ, ಮಾತನಾಡದೇ ಹೋದ್ರು ಜತೇಲೇ ಉಳ್ದೆ. ಬಹಳ ಹೊತ್ತು ರಿಂಗಾದ್ಮೇಲೆ ಫೋನೆತ್ಕೊಂಡ್ಲು. ಡಾಕ್ಟ್ರದ್ದೆ ಅದರಲ್ಲಿ ಸಂಶಯವಿಲ್ಲ. ಈಕೆ ಕಾರಿನವರೆಗು ಬೀಳ್ಕೊಡಲು ಹೋಗಲಿಲ್ಲ. ಅದಕ್ಕೆ ವಿಚಾರಿಸಿರ್‍ಬೇಕು. ಪರಿ ರಿಸಿವರ್ ಕಿವಿಯ ಬಳಿ ಇಟ್ಕೊಂಡು ಸುಮ್ನೆ ನಿಂತಿದ್ಲು. ಆಕೆಯ ಭಾವನೆಗಳು ತಿಳಿಯಲಾಗಲಿಲ್ಲ ನನಗೆ ಬೆನ್ನು ಮಾಡಿದ್ಲು. ಕೊನೆಗೂ ಬಾಯ್ಬಿಟ್ಲು.

'ನಿಮ್ಮ ಬಾಯ್ನಲ್ಲಿ ನೋವು, ಬೇಸರ ಅನ್ನೋ ಪದಗಳು ಒಳ್ಳೆ ಜೋಕ್ ತರಹ ಕೇಳಿಸ್ತಿವೆ.... ಎಂಥದ್ದೂ ಇಲ್ಲ. ನೀವೀಗ ಹೋಗ್ಬೇಕಾದ್ದೆ ಸೂಕ್ತ. ಖಂಡಿತ. ನಮಸ್ಕಾರ.' ರಿಸೀವರಿಟ್ಲು.

ನಾನು ತಡೀಲಾರ್‍ದೆ ಅವಳತ್ತ ಓಡಿ, ಹಿಂದಿನಿಂದ ಆಕೇನ ತಬ್ಬಿಹಿಡ್ದು ಬಿಕ್ಕಿದೆ.

'ಎಷ್ಟು ಸುಲಭವಾಗಿ ಹೇಳ್ತಿಯಲ್ಲೆ ಹೋಗೋದೆ ಸೂಕ್ತ ಅಂತ. ಅಷ್ಟು ಸುಲಭನಾ....'

ಪರಿ ನನ್ನತ್ತ ತಿರುಗಿದ್ಲು.

'ಸುಲಭವಾ....'

ಅವ್ಳ ದನಿ ನಡುಗ್ತಾ ಇತ್ತು. ಮುಖ ಕಣ್ಣೀರಿನಿಂದ ಒದ್ದೆಯಾಗಿತ್ತು.

'ಸುಲಭ ಅಲ್ವೇ ಅಲ್ಲ ಸುಮ.. ಆದ್ರೆ ಅಸಾಧ್ಯನೂ ಅಲ್ಲ.. ನೀನೇ ಹೇಳ್ದಾಗೆ ಎಲ್ಲಾ ನಮ್ಮ ನಮ್ಮ ಮನಸ್ಥಿತಿಯನ್ನ ಅವಲಂಬಿಸಿದೆ. ಇದು ಈ ಕ್ಷಣದ ಸತ್ಯ....!'

'ಪರೀ, ಪರೀ....' ಎಂದು ನಾನಾಕೇನ ಗಾಢವಾಗಿ ತಬ್ಬಿಕೊಂಡೆ. ಸಣ್ಣ ಮಗುವಿನಂತೆ ಬಿಕ್ಕುತ್ತ ಪರಿ ನನ್ನೆದೆಯಲ್ಲಿ ಹುದುಗಿದಳು.

✦ ✦

ಹುಡುಕಾಟ

ಅಪ್ಪ ಯಾಕ್ಹಿಂಗೆ? ಹೆಚ್ಚು ಮಾತಿಲ್ಲ ಕತೆಯಿಲ್ಲ. ನಗುವಂತು ಕಂಡೇ ಇಲ್ಲ. ಯಾರೊಂದಿಗೂ ಸಲಿಗೆಯಿಂದ ಇದ್ದಿದ್ದನ್ನ ನೋಡಿಲ್ಲ. ಗಂಭೀರ ಮುಖಭಾವ. ಯಾವೊಂದು ಭಾವನೆಗಳೂ ಸುಳಿವುದಿಲ್ಲ. ನೆಂಟರು, ಸ್ನೇಹಿತರು ಅಂತ ನಮ್ಮನೆಗೆ ಬಂದು ಹೋಗುವವರೂ ಒಬ್ಬರು ಇಬ್ಬರಷ್ಟೆ. ಬರುವುದಾದರೂ ಹೇಗೆ? ಮನ ಬಿಚ್ಚುವುದೇ ತಿಳಿಯದ ಶ್ರೀಮಂತಿಕೆಯ ಹಮ್ಮು ತುಳುಕಿದ ಈ ಮನೆಗೆ?

ಅಪ್ಪನಿಗಿಂತಲೂ ಸೋಜಿಗ ಈ ಅಮ್ಮ. ಅವನಿಗೆ ತಕ್ಕ ಮಡದಿ. ಬಾಯಿಬಿಟ್ಟು ಅಪ್ಪನೆದುರು ಏನೂ ಕೇಳಿದವಳಲ್ಲ, ಹೇಳಿದವಳಲ್ಲ. ಆದರೂ ಅವನ ಊಟ, ರುಚಿ, ಹದ ಬಲ್ಲವಳು. ಬೇಕು, ಬೇಡ



ತಿಳಿದವಳು. ಬೆರೆತು, ಕಲೆತು ಇರುವುದು ಆಕೆಗೂ ಬಂದಿಲ್ಲ. ಅದೇನು ಭಯವೋ, ಭಕ್ತಿಯೋ ಅರ್ಥವೇ ಆಗುವುದಿಲ್ಲ.

ನಮ್ಮ ಮನೆಯೋ ಘನಗಾಂಭೀರ್ಯದ ಬಂಗಲೆ. ಮೌನ, ನಿಶ್ಶಬ್ದ ಪ್ರಧಾನ. ನಗು, ಮಾತು, ಆಸೆಗಳು ಪ್ರಕಟವೇ ಆಗದ ಹಾಗೆ ಅವುಗಳನ್ನು ಆವರಿಸಿ ಹೊಸಕಿತ್ತು ಗಾಂಭೀರ್ಯ. ಯಾರಾದರು ಜೋರಾಗಿ ನಕ್ಕಾಗ, ಸಂತಸದಿಂದ ಸಲಿಗೆಯಿಂದ ಮಾತಾಡಿದಾಗ, ಮೃಷ್ಟಾನ್ನದ ಮುಂದೆ ನಿಂತ ಭಿಕಾರಿ ಮನಸ್ಥಿತಿ ನಮ್ಮದು. ಆಗೆಲ್ಲ ನಮ್ಮ ಬಗ್ಗೆ, ಮನೆ ಬಗ್ಗೆ ಜಿಗುಪ್ಸೆ ಹುಟ್ಟುತ್ತಿತ್ತು. ಇದೂ ಒಂದು ಜೀವನವೆ ಎನಿಸುತ್ತಿತ್ತು.

ನಾನು ಪಿ.ಯು.ಸಿ ಮುಗಿಸಿ, ಡಿಗ್ರಿ ಪ್ರವೇಶಿಸಿದಾಗ ಒಮ್ಮೆ ಅಮ್ಮನನ್ನು ಕೇಳುವ ಧೈರ್ಯ ಮಾಡಿದೆ. 'ಇದ್ಯಾಕೆ ಹೀಗೆ? ನಿನಗೇನೂ ಅನ್ನಿಸೋಲ್ವೆ? ಈ ಮನುಷ್ಯನ್ಯಾಕೆ ಹೀಗೆ? ಅದ್ಯಾಕೆ ಈತ ಎಲ್ಲರಂತಿಲ್ಲ....?'

'ಎಲ್ಲರ ಹಾಗಿದ್ದು ಬಿಟ್ಟರೆ ಈ ಮನುಷ್ಯ ಈ ಮನುಷ್ಯನಾಗಿರೋಲ್ಲ. ತನ್ನ ವ್ಯಕ್ತಿತ್ವ ಮೀರಿ ನಡ್ಕೊಂಡ್ರೆ ಅದರಲ್ಲಿ ಜೀವಂತಿಕೆ ಇರಲ್ಲ. ಯಾರು ಯಾರಾಗಿ ಇರ್ಬೇಕೋ ಹಾಗಿದ್ರೇನೆ ಸರಿ. ಇನ್ಯಾರೋ ಆಗುವ ಪ್ರಯತ್ನ ಸಲ್ಲ' ಎಂದುಬಿಟ್ಟಳು ಅಮ್ಮ. ಆಕೆ ಇಷ್ಟೊಂದು ಮಾತಾಡಬಲ್ಲಳು ಅಂತ ತಿಳಿದಿದ್ದೇ ಅಂದು.

'ಯಾರೊಡನೆಯೂ ಮಾತಾಡ್ದೆ, ನಗ್ದೆ ಕಲ್ಲಿನ ಹಾಗಿರೋದ್ರಲ್ಲಿ ಜೀವಂತಿಕೆ ಇದೆ ಅಂತಿಯಾ....?'

ನಾನು ಬಿಡಲಿಲ್ಲ.

'ಕಲ್ಲನ್ನ ಬರೀ ಕಲ್ಲು ಅಂತ ಭಾವಿಸಿದ್ರೆ ನಿನ್ನನಿಸಿಕೆ ಸರಿ. ನೋಡು, ಕಲ್ಲನ್ನ ಮುಟ್ಟಿದಾಕ್ಷಣ ಕರಗಿ ಹೋಗ್ಬಿಟ್ರೆ, ಇಲ್ಲ ಕೈಗೆಲ್ಲ ಮೆತ್ಕೊಂಡ್ರೆ ನೀನು ಅದನ್ನ ಏನಂತಿ?' ಕೇಳಿದ್ಲು ಅಮ್ಮ.

'ಏನಂತೀವಿ, ಅದು ಕಲ್ಲಲ್ಲ ಬೇರೆ ಅಂತ' ಅಂದೆ. 'ಯಾಕೆ?' ಅಂದ್ಲು.

"ಅಲ್ಲಮ್ಮ, ಕಲ್ಲು ಕರಗೋದಾಗ್ಲಿ, ಮೆತ್ಕೊಳ್ಳೋದಾಗ್ಲಿ ಸಾಧ್ಯವೇ ಇಲ್ವಲ್ಲ. ತನ್ನ ಗುಣಾನ ಕಳ್ಕೊಂಡ್ಮೇಲೆ ಅದು ಕಲ್ಲಾಗಿ ಉಳಿಯೋದಿಲ್ಲ ಅಲ್ವಾ....?"

'ಯಾಕೆ? ಯಾಕಿಲ್ಲ....?' ಅಮ್ಮನೂ ಬಿಡಲಿಲ್ಲ.

'ಯಾಕೆಂದ್ರೆ ಅದು ತನ್ನ ನೈಜತೇನ ಕಳ್ಕೊಂಡ್ಬಿಡುತ್ತೆ. ಪ್ರತಿಯೊಂದು ವಸ್ತುಗೂ ಅದರದೇ ಆದ ಗುಣ, ಸ್ವರೂಪ, ಮೌಲ್ಯ ಇರುತ್ತೆ. ಅದನ್ನ ಹೊರತುಪಡಿಸಿದ್ರೆ ಜೀವಂತ ಅನ್ನಿಸೋಲ್ವೆ...' ನಾನಂದೆ.

'ಹಾಗೇನಮ್ಮ, ನನ್ನ ಗಂಡನ ನೈಜತೆ ಇರೋದು ಅವರ ಗಾಂಭೀರ್ಯದಲ್ಲಿ.

ನೀವುಗಳೆಲ್ಲ ಇದೆ ಅಂತ ಭಾವಿಸಿರುವ ಆ ಅಹಂನಲ್ಲಿ....'

ನಾನು ಮುಖ ಸೊಟ್ಟಗೆ ಮಾಡಿದೆ. ನಿಮ್ಮಪ್ಪ ಅನ್ನಬಹುದಿತ್ತು ಅಮ್ಮ. ನನ್ನ ಗಂಡ ಅಂತ ಒತ್ತಿ ಹೇಳಿದ್ದಳು. ಇನ್ನು ಈಕೆಯೊಡನೆ ಅಕ್ಕರಾಸ್ಥೆಯಿಂದ ಇದ್ದಿದ್ದರೆ ಹೇಗೋ....? ಎನಿಸಿತು. ಆಕೆಗದು ತಿಳಿಯಿತೋ ಎಂಬಂತೆ.

'ಕೆಲವು ಸಂಬಂಧಗಳೇ ಹಾಗೆ. ನೋಟಕ್ಕೆ ನಿಲುಕುವುದೇ ಬೇರೆ ನಿಲುಕದ್ದು ಬೇರೆ. ಸಂಬಂಧಿಸಿದವರಿಗೆ ಮಾತ್ರ ಅರ್ಥ ಆಗುವಂಥದ್ದು....' ಅಂದು ಸುಮ್ಮನಾಗಿಬಿಟ್ಟಳು.

ಎಷ್ಟಾದರೂ ಗಂಡನನ್ನು ಬಿಟ್ಟುಕೊಡುವವಳಲ್ಲ. ಅವನ ಆಶ್ರಯವೇ ಗತಿ ಅಂದ ಮೇಲೆ ಅವನನ್ನು ಎದುರಿಸುವ ಶಕ್ತಿ ಎಲ್ಲಿಯದು? ಪಾಲಿಗೆ ಬಂದದ್ದು ಪಂಚಾಮೃತ ಎಂಬಂತೆ ಇನ್ನಿಲ್ಲದ ಗೌರವಾದರಗಳು. ಈಕೆಗೆ ಸ್ವಂತಿಕೆಯೇ ಇಲ್ಲ, ವ್ಯಕ್ತಿತ್ವವೇ ಇಲ್ಲ ಎನಿಸಿ ಕೆಲವೊಮ್ಮೆ ಬೇಸರ ಉಂಟಾಗುತ್ತಿತ್ತು. ಆಕೆ ಸ್ವಲ್ಪ ಜೋರಿದ್ದಿದ್ದರೆ, ಮಾತನಾಡುತ್ತಿದ್ದರೆ ನಾವೂ ಹೀಗಿರುತ್ತಿರಲಿಲ್ಲ. ಹೇಳಿದ್ದಕ್ಕೆಲ್ಲ ಗೋಣು ಹಾಕುವುದಷ್ಟೆ ಸೀಮಿತರಾಗಿ, ಅಪ್ಪನೆದುರು ಮಾತೇಬಾರದು. ಧೈರ್ಯಕ್ಕೆ ಅವನೆದುರು ಜಾಗವೇ ಇಲ್ಲ. ಅದಕ್ಕೆಂದೆ ನನಗೂ ಸ್ನೇಹಿತರೇ ಇಲ್ಲ. ಆಸೆಯಿದ್ದೂ ಬೆರೆಯುವುದಿಲ್ಲ. ನಾನಾಯ್ತು ಓದಾಯ್ತು. ಶ್ರೀಮಂತಿಕೆಯ ಸೊಕ್ಕೆಂದು ಎಲ್ಲರೂ ಮೂಗು ಮುರಿಯುತ್ತಿದ್ದರು. ಎಷ್ಟೇ ಪ್ರಯತ್ನಿಸಿದ್ರೂ ನನ್ನ ಆಸೆಗಳು, ಭಾವನೆಗಳು ಅಪ್ಪನ ಗಾಂಭೀರ್ಯದ ಮುಷ್ಟಿಯಿಂದ ಈಚೆಗೆ ನುಸುಳಲಾರವು.

ಆದರೆ ನನ್ನ ಜೀವನಕ್ಕೆ ಹೊಸ ತಿರುವು ಬಂದಿದ್ದು, ನನ್ನ ಆಸೆಗಳೆಲ್ಲ ಗರಿಗೆದರಿದ್ದು ಷಣ್ಮುಖಪ್ಪ ನಮ್ಮ ಕಾಲೇಜಿಗೆ ಹೊಸ ಉಪನ್ಯಾಸಕನಾಗಿ ನೇಮಕಗೊಂಡಾಗ. ಅವನೋರ್ವ ಸಂಘಜೀವಿ, ಸ್ನೇಹಜೀವಿ. ಬರೀ ಪಠ್ಯಕ್ಕೆ ಪಾಠಕ್ಕಷ್ಟೆ ತನ್ನನ್ನ ಮಿತಿಗೊಳಿಸಿರಲಿಲ್ಲ. ಎಲ್ಲರ ಸಮಸ್ಯೆಗಳನ್ನ, ಕಷ್ಟನಷ್ಟಗಳನ್ನ ಕೇಳಿಸಿಕೊಳ್ಳುವುದು, ವಿಚಾರಿಸುವುದು ತನ್ನ ಕೈಲಾದ ಉಪಶಮನ ನೀಡುವುದು ಇತ್ತು. ನನ್ನ ಸುತ್ತ ನಾನೇ ಹೆಣೆದುಕೊಂಡಿದ್ದ ಬಲೆಯಿಂದ ನನ್ನ ಬಿಡಿಸಿ, ಹೊರತಂದ. ನಾವಿಬ್ಬರು ಪರಸ್ಪರ ಆಕರ್ಷಿತರಾಗಿ, ನಮ್ಮ ವೈಯಕ್ತಿಕ ವಿಷಯಗಳನ್ನೆಲ್ಲ ಚರ್ಚಿಸುವಂತಾದಾಗ ಹೇಳಿದ್ದ.

"ನೋಡಮ್ಮ ಹಸಿವು ಅಂದ್ರ ನಿನ್ಗೆ ಗೊತ್ತಾ? ಕಷ್ಟ ಅಂದ್ರೆ ಗೊತ್ತಾ? ಕೂಲಿಯವರು ಬೇಯಿಸಿದ್ದನ್ನ ಹೊತ್ತೊತ್ತಿಗೆ ತಿನ್ನೋ ನಿಮ್ಗೆ ಅದರ ಕಲ್ಪನೆಯೂ ಇರಲಾರ್ದು. ಆದರೆ ನಾವು, ಹಸಿವಲ್ಲೆ ಹುಟ್ಟಿ, ಹಸಿವನ್ನೆ ಉಣ್ಣುತ್ತ ಬೆಳೆದವರು. ಎಂಟು ಮಕ್ಕಳನ್ನ ಹುಟ್ಟಿಸಿ ಅಷ್ಟಕ್ಕೇ ಸತ್ತ ಅಪ್ಪ. ಅಮ್ಮ ಜೀತ ಮಾಡಿದ್ಲು. ಹಸಿವು ತಾಳಲಾರದೆ ಕೆಲವೊಮ್ಮೆ ಕೂಸನ್ನೆತ್ಕೊಂಡು ಭಿಕ್ಷೆಗೆ ಹೋಗ್ತಿದ್ದೆ ನಾನು. ಸಿಕ್ಕಿದ್ದನ್ನು ಎಲ್ರೂ ಹಂಚಿ ತಿಂದರೆ ಅಷ್ಟೆ ಖುಷಿ. ಕೂಲಿ ಮಾಡೋದು, ಭಿಕ್ಷೆ ಎತ್ತೋದು, ತಮ್ಮ ತಂಗಿಯರನ್ನ ನೋಡಿಕೊಳ್ಳುವುದು, ಹಸಿವಾದಾಗ ಅನ್ನ ಹೊಂಚುವುದು.

ಇದೆಲ್ಲದರ ನಡುವೆಯೂ ಓದಬೇಕೆಂಬ ಅದಮ್ಯ ಆಸೆ. ನಮ್ಮೂರ ಮೇಷ್ಟ್ರು ಮನಸ್ಸು ಮಾಡಿದಕ್ಕೆ ಅಕ್ಷರ ಕಲಿಯತೊಡಗಿದೆ. ಅದೂ ಎಲ್ಲಾ ಮುಗಿದು ವೇಳೆ, ಎನರ್ಜಿ ಮಿಕ್ಕಿದ್ದರೆ ಮಾತ್ರ. ಮೇಷ್ಟ್ರ ಸಹಾಯಕ್ಕೆ ಬದಲಾಗಿ ಅವರ ಮನೆ ಕೆಲಸ ಮಾಡಿಕೊಟ್ಟೆ. ನನ್ನ ಶ್ರದ್ಧೆ, ಸ್ವಾಭಿಮಾನ ಮೆಚ್ಚಿದ ಮೇಷ್ಟ್ರು ನನ್ನ ಕೈಬಿಡಲಿಲ್ಲ. ಈ ಜಂಜಾಟದ ನಡುವೆಯೂ ನಾನೋರ್ವ ಉಪನ್ಯಾಸಕನಾಗಿ ರೂಪುಗೊಂಡಿದ್ದು ರೋಚಕ ಅನುಭವ. ನನ್ನ ಕಾಲಮೇಲೆ ನಾನು ನಿಲ್ಲುವುದು, ನನ್ನ ಕುಟುಂಬಕ್ಕೆ ರಕ್ಷಣೆ ನೀಡುವುದು ಜೀವನದ ಮುಖ್ಯ ಉದ್ದೇಶ. ಹುಟ್ಟಿನಿಂದ ಇಂದಿನವರೆಗೂ ಬದುಕಿನೊಂದಿಗೆ ನನ್ನದು ನಿರಂತರ ಹೋರಾಟ....".

ನನ್ನ ಬದುಕಿಗೂ, ಅವನ ಬದುಕಿಗೂ ಹೋಲಿಸಲಾಗದ ಅಂತರ. ಆದರೂ ಇಬ್ಬರೂ ಒಂದಾಗಲು ತೀರ್ಮಾನಿಸಿದೆವು. ನನ್ನ ಈವರೆಗಿನ ಹುಡುಕಾಟಕ್ಕೆ ಅಂತ್ಯ ಷಣ್ಮುಖಪ್ಪ. ಬದುಕಿನ ಎಲ್ಲ ಸ್ತರಗಳನ್ನು ಬಲ್ಲ ಅವನೇ ನನ್ನ ಬದುಕಿನ ಅರ್ಥ ಅನಿಸಿದಾಗ ಮದುವೆ ಬಗ್ಗೆ ಯೋಚಿಸಿದೆವು. ಅಪ್ಪನಿಗೆ ನನ್ನ ನಿರ್ಧಾರ ಅನುಮಾನಿಸುತ್ತಲೇ ತಿಳಿಸಿದೆ. ಅನಾಹುತಗಳೇ ಜರುಗಬಹುದೆಂಬ ಆತಂಕವೂ ಇತ್ತು. ಆದರೆ ಅಪ್ಪ ತಣ್ಣಗೇ ಹೇಳಿದ್ದ.

'ನೋಡು, ಅತಿ ಬಡತನದಿಂದ ಮೇಲೆ ಬಂದ ಬಹಳ ಮಂದಿ ಆ ಸ್ಥಿತಿಯಿಂದ ಹೊರಬಂದರೂ ಅವರೊಳಗೆ ಕಾಂಪ್ಲೆಕ್ಸ್ ಉಳ್ಕೊಂಡ್ಬಿಟ್ಟಿರುತ್ತೆ. ಅತಿಯಾದ ಇನ್‌ಫಿರಿಯಾರಿಟಿ ಅಥ್ವಾ ಸುಪೀರಿಯಾರಿಟಿ. ಇಲ್ಲ ಎರಡು ಇಟ್ಕೊಂಡು ಒದ್ದಾಡ್ತಿರ್ತಾರೆ. ಬಡತನ ಕಂಡು, ಉಂಡವರಿಗೆ ಹಣ, ಅಧಿಕಾರ ಬಂದರೆ ಬೇಗನೆ ಅದರ ಪ್ರಭಾವಕ್ಕೆ ಒಳಗಾಗ್ತಾರೆ. ಎಲ್ಲವನ್ನ ಮರ್ತು ಬಿಡುವ ಅವಕಾಶವೇ ಹೆಚ್ಚು. ಹಾಗಾಗದ ಹಾಗೆ ನೋಡ್ಕೋ. ಏನೋ ಆದರ್ಶಯಿಟ್ಕೊಂಡು ಮದ್ವೆ ಆಗ್ತಿದ್ದಿ ಒಳ್ಳೇದಾಗ್ಲಿ...."

ಜ್ವಾಲಾಮುಖಿ ಬಾಯ್ತೆರೆದು ಬರ್ಫನ್ನ ಉಗುಳಿದಂತೆ ಪಿಚ್ಚೆನಿಸಿತ್ತು ಒಂದು ಕ್ಷಣ. ನನ್ನೊಳಗಿನ ಕಹಿಯನ್ನೆಲ್ಲ ಕಾರಲು, ಪ್ರತಿಭಟಿಸಲು ಕಾತರಳಾಗಿ ಕಾದಿದ್ದೆ ಅವನ ಪ್ರತಿರೋಧಕ್ಕೆ. ಸಂಬಂಧ ಪೂರ್ಣ ತೊರೆಯಬೇಕೆಂದಿದ್ದೆ. ಆದರೆ ತಕರಾರೇ ಮಾಡದೆ ಮತ್ತೆ ಅಪ್ಪ ತನ್ನ ಗೆಲುವು ಸಾಧಿಸಿದ್ದ. ವಿಷ್ಯ ಕೇಳಿ ಷಣ್ಮುಖಪ್ಪನೂ ಸಂಭ್ರಮಪಟ್ಟ.

ಆದರದು ಕ್ಷಣಿಕ. ಮದುವೆಯ ದಿನದಂದೆ ಶುರುವಾಯ್ತು ತಿಕ್ಕಾಟ. ಷಣ್ಮುಖಪ್ಪ ನಮ್ಮವರ ಪ್ರತಿಯೊಂದು ನಡೆ, ನುಡಿಯಲ್ಲೂ ತಪ್ಪೆಣಿಸತೊಡಗಿದ. ತನ್ನ ಬಳಗವನ್ನ ನಿರ್ಲಕ್ಷಿಸುತ್ತಿರುವ ಆರೋಪ ಹೊರಿಸಿದ. ಅಪ್ಪನ ಸ್ವಭಾವ ತಿಳಿದಿದ್ದೆ. ಆದರೆ ಅಮ್ಮ ನನ್ನ ನಿರೀಕ್ಷೆಗೆ ಮೀರಿ ಅವರೊಡನೆ ನಕ್ಕು, ಮಾತಾಡಿ ಉಪಚರಿಸುತ್ತಿದ್ದಳು. ಅವನನ್ನು ಸಮಾಧಾನಪಡಿಸುವಲ್ಲಿ ಸಾಕಾಗಿಹೋಯ್ತು. ಮದುವೆ ಮುಗಿಯುತ್ತಿದ್ದಂತೆ ಭಾ.ಆ.ಸೇ.ಯ. ಪರೀಕ್ಷೆಗಳು ಪ್ರಕಟಗೊಂಡವು. ಅವನ ಓದಿಗೆ ಅಡ್ಡಿಯಾಗಬಾರದು, ಭಂಗಬರಬಾರದೆಂಬ ಉದ್ದೇಶಕ್ಕೆ ನಾನು ಅಪ್ಪನ ಮನೆಯಲ್ಲೆ ಉಳಿದೆ. ಮತ್ತೆ ತಿಕ್ಕಾಟ. ಅಪ್ಪ ಷಣ್ಮುಖಪ್ಪನೊಡನೆಯೂ ಅದೇ ಬಿಗು. ಮಾತಿಲ್ಲ ಉಪಚಾರವಿಲ್ಲ. ನನಗದು ಅಭ್ಯಾಸ. ಆದರೆ ಇವನು ಅಸಹನೆಯಿಂದ ಕುದಿಯಹತ್ತಿದ.

'ನಾನು ಬಡವನೆಂದು ತಿರಸ್ಕಾರ ನಿಮ್ಮಪ್ಪನಿಗೆ...' ಎನ್ನುತ್ತಿದ್ದ.

'ಅವನು ಹಾಗೇರಿ. ಅವನನ್ನ ಹಾಗೆ ಒಪ್ಕೊಂಡ್ಬಿಡಿ....', ನನ್ನ ಗೋಗರೆತ.

'ಏನು ಒಪ್ಪಿಕೊಳ್ಳುವುದು, ಅವನೇನು ಪಾಳೇಗಾರ್ನೋ..... ಹಣದ ಮದ. ಸೌಜನ್ಯ ಗೊತ್ತಿಲ್ಲದ ದುರಹಂಕಾರಿ. ಕಾರು, ಬಂಗಲೆ ಇರದೆ ಇರಬಹುದು. ಆದರೆ ನಮ್ಮಲ್ಲಿ ನೆಮ್ಮದಿ ಇದೆ. ಆತ್ಮಗೌರವ ಇದೆ. ಕಾಲ ಒಂದೇ ಸಮ ಇರೋಲಮ್ಮ. ನಿಮ್ಮಪ್ಪನಿಗೆ ಹೇಳು...' ಇದು ದಿನನಿತ್ಯದ ಗೋಳಾಟವಾಯ್ತು.

ನನ್ನ ಒಂಟಿ ಜೀವನದ ಮುಂದುವರಿದ ಭಾಗ ಈ ವೈವಾಹಿಕ ಜೀವನ ಅಂತ ತಿಳಿದಾಗ ತಡವಾಗಿತ್ತು. ಷಣ್ಮುಖಪ್ಪ ಜಿಲ್ಲಾಧಿಕಾರಿಯಾಗಿದ್ದ. ಅಧಿಕಾರದ ದಾಹ, ಮದಕ್ಕೆ ಸಿಕ್ಕು ಮನುಷ್ಯತ್ವ ಕಳ್ಕೊಂಡಿದ್ದ. ಅಧಿಕಾರ ಅವನನ್ನ ಎಷ್ಟರಮಟ್ಟಿಗೆ ಆವರಿಸಿತ್ತೆಂದರೆ ನಗು

ಮರೆತ. ಮಾತು ಮರೆತ. ನಾನು ನಗುವುದನ್ನು, ಮಾತನಾಡುವುದನ್ನೂ ಸಹಿಸದಾದ. ಎಲ್ಲರೊಡನೆ ನಕ್ಕು ಬೆರೆಯುವುದು ತನ್ನ ಘನತೆಗೆ ಕುಂದೆಂದೆಣಿಸಿದ. ಸ್ನೇಹ ಸಂಪರ್ಕ ತನ್ನ ಸರಿಸಮಾನರೊಡನೆ ಮಾತ್ರ. ದುರಂತವೆಂದರೆ ತನ್ನ ಮೂಲವನ್ನೆ ಮರೆತದ್ದು. ಯಾವ ಸ್ಥಿತಿಯಿಂದ ಮೇಲೆ ಬಂದಿದ್ದನೋ ಅದನ್ನು ಅವನೇ ಅವಮಾನಿಸಿದ್ದು. ತನ್ನ ಹುಟ್ಟಿನ ಬಗ್ಗೆ ಹೋರಾಟದ ಬಗ್ಗೆ ಗೌರವ ಕಳೆದುಕೊಂಡದ್ದು.

ಒಂದು ಬೆಳಗು, ಎಂದಿನಂತೆ ಆಫೀಸಿಗೆ ಹೊರಟು ನಿಂತವನನ್ನು ಚಿಕ್ಕ ಕೂಸೊಂದನ್ನು ಎತ್ತಿಕೊಂಡು ಓಡಿಬಂದ ಬಾಲಕನೊಬ್ಬ ಅಡ್ಡಗಟ್ಟಿ ಕಾಲ್ಹಿಡಿದು, ಹಣಕ್ಕೆ ಪೀಡಿಸಿದ.

'ಥೂ ದರಿದ್ರವೇ! ನನ್ನ ಮುಟ್ಟುವಷ್ಟು ಸೊಕ್ಕ ನಿಂಗೆ...? ಬಿಟ್ಟಿ ಸಿಗುತ್ತೇಂತ ಭಿಕ್ಷೆ ಬೇಡ್ತಿಯೇನ್ಲೆ? ಪೊಲೀಸ್ ಕರ್‍ಸಿ ಒಳಗಾಕಿಸ್ತಿನಿ, ದರಿದ್ರ ನನ್ಮಕ್ಳು' ಎಂದವನೇ ಕಾಲಲ್ಲಿ ಅವರನ್ನ ಜಾಡಿಸಿಬಿಟ್ಟ.

ಎರಡು ಮಕ್ಕಳು ಹಾರಿಬಿದ್ದು ಅಳತೊಡಗಿದವು. ಕಾರು ಮುಂದೆ ಹೋಯ್ತು. ಅಪ್ಪ ಮದುವೆಗು ಮುನ್ನ ಹೇಳಿದ ಮಾತು ಸಾಕ್ಷಾತ್ಕರಿಸಿತ್ತು.

ನಾನು ಫೋನೆತ್ತಿಕೊಂಡು ಡಯಲ್ ಮಾಡಿದೆ. ಅತ್ತಲಿಂದ ಜಿಲ್ಲಾಧಿಕಾರಿಗಳ ಧ್ವನಿ ಕೇಳಿಸಿತು.

'ಆಫೀಸಿಗೆ ಫೋನ್ ಮಾಡಿ ಮಾತಾಡುವ ಅಗತ್ಯವೇನಿತ್ತು?' ಎಂದವ ಸ್ವಲ್ಪ ಹೊತ್ತು ಹಾರಾಡಿದ.

ನಾನು ತಣ್ಣಗೆ ಹೇಳಿದೆ,

'ಸುಮ್ಮನೆ ಕೇಳಿಸಿಕೋ ನಾನು ಹೇಳುವುದನ್ನ. ಬೆಳಗಿನ ಘಟನೆ ನನ್ನ ನೋಯಿಸಿದೆ. ನನ್ನ ಕಣ್ತೆರೆಸಿದೆ. ಇಷ್ಟೇ ಅಲ್ಲ ನನ್ನ ಬದುಕಿನ ಗತಿ ಈ ತಿರುವು ತಗೊಂಡಿದ್ದೆ ನನಗೆ ಆಘಾತ. ಸಹಿಸಿದ್ದೆ ಇಷ್ಟರವರೆಗೆ, ಏನೋ ನಿರೀಕ್ಷೆಯಿಂದ. ಆ ಮಕ್ಕಳು ಒಂದೇ ಒಂದು ಕ್ಷಣವಾದರೂ ನಿನ್ನ, ನಿನ್ನ ತಂಗಿಯ, ತಮ್ಮನ ಪ್ರತಿರೂಪವಾಗಿ ನಿನಗೆ ಕಾಡದೇ ಹೋದ್ದು ವಿಪರ್ಯಾಸ. ಮೇಷ್ಟ್ರಾಗಿ ಸ್ನೇಹಜೀವಿ ಆದ ಷಣ್ಮುಖಪ್ಪ, ಎಲ್ಲಾ ನವುರು ಕಳಕೊಂಡು ಅಧಿಕಾರ ಗರ ಬಡಿದ ಜಿಲ್ಲಾಧಿಕಾರಿ ಷಣ್ಮುಖಪ್ಪ ಒಂದೇ ವ್ಯಕ್ತಿಯ ಎರಡು ವಿಭಿನ್ನ ವ್ಯಕ್ತಿತ್ವ.

ಹೀಗೂ ಉಂಟೇ? ಯಾರು ನೀನು? ಯಾವುದು ಸತ್ಯ? ಇದರರ್ಥ ನೀನೂ ಸ್ಥಿರವಲ್ಲ. ಷಣ್ಮುಖಪ್ಪ, ನಾನು ಹಣ ಕಾಣದವಳಲ್ಲ. ದರ್ಪ, ದಬ್ಬಾಳಿಕೆಯೂ ಬಲ್ಲೆ. ನನ್ನಪ್ಪನಲ್ಲಿ ಈ ಎಲ್ಲವೂ ಇವೆ. ಆದರವು ಹುಟ್ಟಿನಿಂದಲೇ ಬಂದಂಥವು. ಆದ್ದರಿಂದಲೇ ನಿನ್ನ ಹಾಗೆ ಅಪ್ಪ ಢೋಂಗಿ ಎನಿಸುವುದಿಲ್ಲ. ಅವನನ್ನು ಹೆಜ್ಜೆಜ್ಜೆಗೂ ಟೀಕಿಸುತ್ತಿದ್ದ ನೀನು ಏನಾಗಿ ಹೋಗಿದ್ದಿ ಈಗ....?

ಅಧಿಕಾರದ, ಐಶ್ವರ್ಯದ ಪೊರೆ ಬಂದು ನಿನ್ನತನ ಕಳ್ಕೊಂಡಿದ್ದಿ ಅದು ನಿನ್ನ ಗೋರಿ ತಿಳ್ಕೊ. ಅದರಲ್ಲೆ ಕೊಳೆಯುತ್ತಿ ನೀನು. ಆದರೆ ನನಗೆ ಹಾಗಾಗಲು ಇಷ್ಟವಿಲ್ಲ. ಹುಟ್ಟಂತು ನನ್ನ ಕೈಲಿ ಇರಲಿಲ್ಲ. ಆದರೆ ಬದುಕು ನನ್ನದು. ನನಗೆ ಬೇಕಾದ ಹಾಗೆ ರೂಪಿಸಿಕೊಳ್ಳುವ ಸ್ವಾತಂತ್ರ್ಯ, ಹಕ್ಕು ನನಗಿದೆ.

ಹುಟ್ಟಿನಿಂದ ಕಂಡ ಬದುಕಿಗಿಂತ ಭಿನ್ನವಾದ ಬದುಕನ್ನ ಬಯಸಿ ನಿನ್ನ ಸಂಗಾತಿಯಾದೆ. ಷಣ್ಮುಖಪ್ಪ ನನಗೆ ಅನ್ನಿಸಿದಾಗ ಕೇಕೆ ಹಾಕಬೇಕು; ಅಳಬೇಕು. ನಿನ್ನೊಡನೆ ಪ್ರೀತಿ ಸಮರ ಬೇಕು, ಅನುಭವಗಳು ಬೇಕು. ಜಿಲ್ಲಾಧಿಕಾರಿಗಳಿಗೆ ಷಣ್ಮುಖಪ್ಪನನ್ನು ಜೀವಂತವಾಗಿಡಲು ಸಾಧ್ಯವಾಗಿದ್ದಿದ್ದರೆ....? ಹುಂ.., ಹೋಗಲಿ ಬಿಡು..

ಷಣ್ಮುಖಪ್ಪ ನಿನ್ನ ಬದುಕು ನಿರಂತರ ಹೋರಾಟವಾಗಿದ್ದರೆ ನನ್ನದು ಹುಡುಕಾಟ. ಇದೋ ಹೊರಟೆ....' ಅಂದು ಫೋನ್ ಬಂದ್ ಮಾಡಿದೆ.

✦ ✦

ಕನಸು

ಸೀಗೆಮಠಕ್ಕೆ ಅಂಟಿಕೊಂಡಂತೆಯೇ ಇರುವ ಕದರಟ್ಟಿಯೆಂಬ ಕುಗ್ರಾಮದಲ್ಲಿ ಅಂದು ಸಂಭ್ರಮವೋ ಸಂಭ್ರಮ. ಇತ್ತೀಚೆಗಷ್ಟೇ ನೀರು, ಬೆಳಕು ಕಂಡಿರುವ ಗ್ರಾಮ. ವಿದ್ಯೆಯ ಗಂಧವೇ ತಿಳಿಯದ ಈ ಕುಗ್ರಾಮದಲ್ಲಿ ಎಲ್ಲಾ ಅಡೆತಡೆಗಳನ್ನು ದಾಟಿ, ತುಂಬಾ ಕಷ್ಟಪಟ್ಟು ಓದಿ ಮುಂದೆ ಬಂದು, ಇಡೀ ತಾಲ್ಲೂಕಿನಲ್ಲೇ ಬುದ್ಧಿವಂತ ಎಂದು ಇದೀಗ ಹೆಸರುವಾಸಿಯಾಗಿರುವ ಒಬ್ಬನೇ ಒಬ್ಬ ಇಂಜಿನಿಯರು ಅಣ್ಣಯ್ಯ ಅಂದು ಕದರಟ್ಟಿಗೆ ಬರುವನಿದ್ದ. ಅವನನ್ನು ಎದುರುಗೊಳ್ಳಲು ಗ್ರಾಮದ ಮಂದಿಯೆಲ್ಲ ಊರ ಮುಂದಿನ ಬೇವಿನ ಮರದ ಕಟ್ಟೆಯ ಸುತ್ತ ನೆರದಿದ್ದರು. ಇಡೀ ತಾಲ್ಲೂಕಿನ ದೊಡ್ಡ ಮನುಷ್ಯರೂ ಸೀಗೇಮಠದಾಗೆ ಸ್ಕೂಲು ಮುಂದಿನ ಆವರಣದಲ್ಲಿ ಕಾದು ನಿಂತಿದ್ದರು.

ಕೇವಲ ಹತ್ತೇ ಕುಟುಂಬಗಳು ವಾಸಿಸುವ, ಹತ್ತು ಗುಡಿಸಲುಗಳಿರುವ ಕುಗ್ರಾಮ ಕದರಟ್ಟಿ. ಎಲ್ಲಾ ಒಂದೇ ಮನೆತನಕ್ಕೆ, ಒಂದೇ ಬೆಡಗಿಗೆ ಸೇರಿದ್ದ ಹತ್ತು ಕುಟುಂಬಗಳು. ಕಡುಬಡತನ ಎಲ್ಲೆಲ್ಲು. ಎಲ್ಲರೂ ಕೂಲಿನಾಲಿ ಮಾಡಿ ಜೀವಿಸುತ್ತಿದ್ದರು. ದೊಡ್ಡವರೆಲ್ಲ ಸೀಗೆಮಠಕ್ಕೆ ಕೂಲಿಗೆ ಹೋದರೆ, ಸಣ್ಣ ಹುಡುಗರು ಸೀಗೆಮಠದ ದನಗಳನ್ನು ಕರಡಿ ಗುಡ್ಡಕ್ಕೆ ಹೊಡೆದುಕೊಂಡು ಬೆಳಗ್ಗೆ ಹೋದರೆ ಸೂರ್ಯ ಮುಳುಗುವ ಹೊತ್ತಿಗೆ ಮತ್ತೆ ಗುಡಿಸಲು ಮುಖ ಕಾಣುತ್ತಿದ್ರು.

ದನಗಳನ್ನು ಹೊಡೆದುಕೊಂಡು ಹೋಗುವ ಹುಡುಗರ ಹಿಂದೆ ಹೋಗುತ್ತಿದ್ದ ನಾಲ್ಕು ವರ್ಷದ ಅಣ್ಣಯ್ಯ ಮಾತ್ರ ಇವರೆಲ್ಲರಿಗಿಂತ ಭಿನ್ನವಾಗಿದ್ದ. ಹುಡುಗರೆಲ್ಲಾ ಊರಿನ ದನಗಳನ್ನು ಒಟ್ಟು ಮಾಡಿಕೊಂಡು ಬರಲು ಹೋದರೆ ಇವನು ಮಾತ್ರ ಸೀಗೆಮಠದ ಪಾಠ ಶಾಲೆಯ ಬಳಿ ಮರದ ಕೆಳಗೆ ನಿಂತುಬಿಡುತ್ತಿದ್ದನಂತೆ. ಕಣ್ಣು ಬಾಯಿ ತೆರೆದು ಶಾಲೆಯತ್ತ ನೋಟ ನೆಟ್ಟು ನಿಲ್ಲುವ ಅವನನ್ನು ಅಲ್ಲಿಂದ ಅಲುಗಾಡಿಸುವ ಹೊತ್ತಿಗೆ ಉಳಿದ ಹುಡುಗರಿಗೆ ಸಾಕಾಗಿ, ಕೆಲವೊಮ್ಮೆ ದೊಡ್ಡ ಹುಡುಗರ ಕೈಲಿ ಒದೆ ತಿನ್ನುತ್ತಿದ್ದನಂತೆ.

ಇದನ್ನೆಲ್ಲ ದಿನವೂ ಗಮನಿಸುತ್ತಿದ್ದ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಬಸಪ್ಪನವರು ಹುಡುಗನಲ್ಲಿದ್ದ ಕುತೂಹಲ, ಆಸಕ್ತಿ ಗುರುತಿಸಿ ಅವನ ಅಪ್ಪ ಅವ್ವರೊಡನೆ ಮಾತಾಡಿ ಎಲ್ಲಾ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡು ಅವನನ್ನು ಶಾಲೆಗೆ ಸೇರಿಸಿಕೊಂಡರಂತೆ. ಆಸಕ್ತಿ ಇದ್ದರೂ ಗ್ರಹಿಕೆ ಸ್ವಲ್ಪ ನಿಧಾನವಾದ್ದರಿಂದ ಏಳುತ್ತ ಬೀಳುತ್ತ ಹತ್ತನೇ ತರಗತಿ ದಾಟುವ ಹೊತ್ತಿಗೆ ಹದಿನೇಳಾದರೂ ಬಸಪ್ಪನವರು ಅವನ ಕೈಬಿಡದೆ, ಮುಂದಿನ ಕಾಲೇಜು ಅಭ್ಯಾಸಕ್ಕೆ ಅವನನ್ನು ಸರ್ಕಾರಿ ಕಾಲೇಜಿಗೆ ಸೇರಿಸಿದರಂತೆ. ಅಲ್ಲಿಂದ ಮುಂದೆ ಅಣ್ಣಯ್ಯ ನಿಜಕ್ಕೂ ಶ್ರಮಪಟ್ಟು ಎಲ್ಲಿಯೂ ಕೂರದೆ ಮುಂದೆ ಸಾಗಿ, ಡಿಗ್ರಿ ಮುಗಿಸಿ ಮತ್ತೆ ಬಸಪ್ಪನವರ ಆದೇಶದಂತೆ ಬಿ.ಇ.ಗೆ ಸೇರಿದನಂತೆ. ಈಗವನು ದೊಡ್ಡ ಇಂಜಿನಿಯರು. ಅದಕ್ಕೆ ತಕ್ಕಂತೆ ಗತ್ತು, ಘನತೆ, ದೊಡ್ಡಸ್ತಿಕೆಯೂ ಮೈಗೂಡಿ ಎಲ್ಲರೂ ಮರ್ಯಾದೆ ಕೊಡುವ ಮಟ್ಟಿಗೆ ಬೆಳೆದು ನಿಂತಿದ್ದಾನೆ. ಅವನಿಂದಾಗಿ ಈಗ ಗ್ರಾಮದ ಕೆಲ ಮಕ್ಕಳು ಶಾಲೆಯ ಮುಖ ಕಾಣುತ್ತಿದ್ದಾರೆ.

ಗ್ರಾಮದ ಎಲ್ಲರೂ ತಮ್ಮ ತಮ್ಮ ಮಕ್ಕಳು ಅಣ್ಣಯ್ಯನಂಗೆ ದೊಡ್ಡ ಮನುಷ್ಯರಾಗಬೇಕು ಅಂತ ಕನಸುಗಳನ್ನು ಹೊತ್ತವರು ಇಂದು. ಆದರ್‍ಯಾಕೋ ಒಬ್ಬರೂ ಕಾಲೇಜು ಮೆಟ್ಟಲು ಹತ್ತವಲ್ರು. ಒಂದ್ಮೂರು ಮಂದಿ ಹೈಸ್ಕೂಲು ಓದುತ್ತ ಅಣ್ಣಯ್ಯನ ಜತೇಲೇ ಇದ್ದಾರೆ. ಇನ್ನೂ ಮದುವೆ ಆಗದ ಅಣ್ಣಯ್ಯನಿಗೆ ಸಹಾಯಕರು, ಅಡಿಗೆಯವರು, ವಾಚ್‌ಮನಗಳು ಎಲ್ಲಾ ಅವರೇ. ಇನ್ನೂ ಕೆಲವರು ಕಾಲೇಜು ಓದುವ ಆಸೆಯಿದ್ದರೂ ಸಹ ಅವರ ಮನೆಗಳಲ್ಲಿನ ಕಡುಬಡತನ ಕಂಡು, ಅವರನ್ನು ಕೆಲಸಕ್ಕೆ ಸೇರಿಸಿಬಿಟ್ಟಿದ್ದ ಅಣ್ಣಯ್ಯ. ಹೀಗಾಗಿ ಅನೇಕರು ಇಂದು ಕದರಟ್ಟೆಯಿಂದ ಪ್ಯೂನ್‌ಗಳು, ಅಟೆಂಡರ್‌ಗಳು, ಗಾರ್ಡ್ಸ್‌ಗಳಾಗಿದ್ದರು. ತಮ್ಮ ಗ್ರಾಮದ ಮಕ್ಕಳಿಗೆ ಸರ್ಕಾರಿ ನೌಕರಿ ಕೊಡಿಸಿ, ಜೀವನ ಮಾರ್ಗ ತೋರಿಸಿದ ಅಣ್ಣಯ್ಯ ಇಂದು ಗ್ರಾಮದ ದೇವರಿಗೆ ಸಮಾನ.

ಅಣ್ಣಯ್ಯ ಬಂದು ಜೀಪು ಇಳಿತಿದ್ದಂಗ್ಲೆ ಎಲ್ಲಾ ಜನ ಮುತ್ತಿಕೊಂಡ್ರು, ಅವನ ಸುತ್ತಲೂ ಸಣ್ಣ ಹುಡುಗರು, ಯುವಕರು, ದೊಡ್ಡವರು, ಹೆಣ್ಮಕ್ಕಳು, ಮುದುಕರಾದಿಯಾಗಿ ಎಲ್ಲರೂ ನೆರೆದರು. ಕಷ್ಟಸುಖಗಳನ್ನೆಲ್ಲ ಹಂಚಿಕೊಂಡ ಬಳಿಕ ಅಣ್ಣಯ್ಯ ಎಂದಿನಂತೆ ಆವೇಶದಿಂದ ಹೇಳಿದ. 'ನೀವೇನೆ ಹೇಳ್ರಿ ನನಗಂತು ತೃಪ್ತಿಯಿಲ್ಲ. ನೀವೆಲ್ಲ ನನ್ನೂ ಮೀರ್ಸಂಗೆ ಓದಿ, ಮುಂದೆ ಬಂದಾಗ್ಲೆ ನನ್ನ ಜನ್ಮ ಸಾರ್ಥಕ....' ಹಿರಿಯರೆಲ್ಲ ಆ ಮಾತಿಗೆ ತಲೆದೂಗಿದರು. ಎಲ್ಲರಿಗಿಂತ ಹಿರಿಯ ಯಂಕ್ಟಜ್ಜ 'ಅಯ್ಯ ಎಲ್ಲಾ ಸುಖ ಪುರುಷ್ರಪ್ಪ..... ನಿನ್ನಂಗೆ ಕಸ್ಟ ಪಡಾದು ಈಗ್ನೇರಿಗೆಲ್ಯದು....? ಎಲ್ಲಾ ಮೈಯುಂಡರೇ.....' ಅಂದ.

ತಟ್ಟನೆ ಈಗ್ತಾನೆ ತುಮಕೂರಿನಲ್ಲಿ ಯಾವುದೋ ಖಾಸಗಿ ಶಾಲೆಯಲ್ಲಿ ಜವಾನ ಆಗಿ ಸೇರಿದ್ದ ಕರಿಬಸ್ಯ 'ಸುಮ್ಕಿರಜ್ಜ ಸಾಕು. ಅಲ್ಕಣಜ್ಜೊ ನಂಗೆ ಕೆಲ್ಸ ಬ್ಯಾಡ, ನಾ ಮುಂದುಕೋದ್ತೀನಿ ಅಂತ ಅಪ್ಪಯ್ಯಗೂ, ಅಣ್ಣಯ್ಯಗೂ ಯಷ್ಟು ಯೇಳ್ದೆ ಕೇಳ್ಲೂ.... ಈಗ್ಬ್ಯಾಡ, ಮೊದ್ಲು ಮನ್ಯಾಗಿನ ಕಸ್ಟ ತೀರ್ಲಿ, ಆಮ್ಯಾಕೆ ನೋಡನಂತೆ, ಮೊದ್ಲು ಕೆಲ್ಸಕ್ಕೇ ಸೇರ್ಕ ಅಂತ ಅಣ್ಣಯ್ಯ, ಅಪ್ಪಯ್ಯ ಒಂದಾಗೆ ಸೇರ್ಸಿದ್ರಪ್ಪಾ.... ಈಗ್ನೋಡ್ರಿ ನಮ್ಮಪ್ಪಯ್ಯ, ಅವ್ವ ಆಗ್ಲೆ ಯಣ್ಣು ಗೊತ್ಮಾಡಿ, ಲಗ್ನ ಕಟ್ಟಿಸ್ಕೆಂಡು ಬಂದಾರೆ. ಇನ್ನೆಲ್ಲೆ ವೋದಜ್ಜ...?' ಅಂದುಬಿಟ್ಟ.

ಒಂದು ಕ್ಷಣ ಅಣ್ಣಯ್ಯನೂ ದಂಗಾಗಿ ಹೋದ. ಒಡನೇ ಕರಿಬಸ್ಯನ ಅಪ್ಪ ಮೋಟಪ್ಪ ಗಟ್ಟನೆ ಗದರಿದ ಮಗನ್ನ. 'ಮುಚ್ಕೆಳಲೇ ಬಾಯ್ನ. ಅಲ್ಲಲೇ ಏನ್ ಅಣ್ಣಯ್ಯ ನಿನ್ಗೆ ಕೆಲ್ಸ ಕೊಡ್ಸಿದ್ದೆ ತೆಪ್ಪಾತು ಅನ್ನಂಗ್ಮಾತಾಡ್ತಿ ಯಾಕಲೇ....? ಒಂದೀಟರ ಉಪ್ಕಾರ ಇಲ್ದಾರ್ಕಣ್ರಲೇ ನೀವೂ..... ಯಿರಿಯೂರಿನ ಬೀಗ್ರು ನಿನ್ ಮಕ ನೋಡಿ ಯೆಣ್ಣು ಕೊಡಾಕೆ ಬಂದಿಲ್ಲಪ್ಪಾ.... ಯೇನೋ ನಮ್ಮಣ್ಣಯ್ಯನ್ ಮಕ ನೋಡಿ ಒಪ್ಗಂಡರೆ, ಆ ಪಾಪಿನೋ ವಳ್ಳೆ ಕೈ ತೊಳದು ಮುಟ್ಟಂಗ್ಯೆತೆ. ಅಣ್ಣಯ್ಯ ಮನ್ಸು ಮಾಡ್ದಿದ್ರೆ ನಿನ್ ಬಾಗ್ಯವುದಾಗೆಲ್ಲಿತ್ತಲೇ....? ವೋಗಲೇ ಮುಚ್ಕೆಂಡು ಮುಕ್ಕಿನ....' ಅಂದ.

ಏನೋ ಅಲ್ಪಸ್ವಲ್ಪ ಧೈರ್ಯ ತೋರಿದ ಕರಿಬಸ್ಯ ಇನ್ನೆಂದು ಬಾಯಿ ಬಿಡದಂಗೆ ಮಾಡಿದ ಮೋಟಪ್ಪ. ಪಾಪ ಅಣ್ಣಯ್ಯನಿಗೆ ಓದುವ ಹುಡುಗರಂದ್ರೆ ಇಷ್ಟವೇ. ಅವರಿಗಾಗಿ ಏನೂ ಮಾಡಲು ಸಿದ್ಧ. ಆದರೇನು ಮನೆ ಕಡೆಯ ತೊಂದ್ರೆ ತಾಪತ್ರಯಗಳು, ಕಡುಬಡತನಗಳಿಗೆ ಮರುಗಿ ಅವರಿಗೆಲ್ಲ ಎಲ್ಲೊ ಅಲ್ಲಿ, ಎಂಥದೋ ಒಂದು ನೌಕರಿ ಕೊಡ್ಸಿ ಉಪಕಾರ ಮಾಡುತ್ತಿದ್ದ; ತಮ್ಮ ಪೈಕಿ ಇಡೀ ಜಿಲ್ಲೆಗೆ ತಾನೇ ಒಬ್ಬ ಇಂಜಿನಿಯರಲ್ಲಾ ಅಂತ ಮರುಗುತ್ತಲೂ ಇದ್ದ.

ಆದರೆ ಕದರಟ್ಟಿಯ ಒಂಟಿ ಹೆಣ್ಣು ಸಾಕಮ್ಮನ ಮಗ ಚಂದ್ರ ಹಾಗಾಗ್ಲಿಲ್ಲ. ಅವನ ಪುಣ್ಯವೋ ಎಂಬಂತೆ ಚಂದ್ರ ಹೈಸ್ಕೂಲು ಮುಗಿಸುವ ಹೊತ್ತಿಗೆ ಸೀಗೆಮಠಕ್ಕೆ ಪದವಿ ಕಾಲೇಜು ಬಂದು, ಅವನು ಅಲ್ಲಿಯೇ ಕಾಲೇಜಿಗೆ ಸೇರಿಬಿಟ್ಟ. ಹೀಗಾಗಿ ಅಣ್ಣಯ್ಯನ ಕೃಪಾದೃಷ್ಟಿಯಿಂದ ತಪ್ಪಿಸಿಕೊಂಡ. ಚಂದ್ರನ ಸಹಪಾಠಿ ಪಾರು. ತುಂಬಾ ಒಳ್ಳೆಯ ಆದರೆ ಬಲೇ ಕೀಟಲೆಯ ಹುಡುಗಿ. ಆಕೆಯ ಅಪ್ಪ ರಂಗನಾಥ ಸರ್ಕಾರಿ ಪ್ರೌಢಶಾಲೆಯಲ್ಲಿ ದೈಹಿಕ ಶಿಕ್ಷಕರಾಗಿದ್ದರು. ಇಬ್ಬರೂ ಒಂದೇ ಶಾಲೆ. ಒಂದೇ ಕಾಲೇಜು ಸೇರಿದರು. ಓದಿನಲ್ಲಿ ಸೋಮಾರಿತನ ತೋರುತ್ತಿದ್ದ ಪಾರುಗೆ ಚಂದ್ರನೇ ನೀಟಾಗಿ ನೋಟ್ಸ್ ಮಾಡಿಕೊಡುತ್ತಿದ್ದ. ಆಕೆಗೆ ಅರ್ಥವಾಗದ್ದನ್ನು ಬಗೆಹರಿಸುತ್ತಿದ್ದ.

ರಂಗನಾಥ್‌ರಿಗೆ ಚಂದ್ರನ ವಿಷ್ಯದಲ್ಲಿ ತುಂಬಾ ಅಭಿಮಾನ, ಪ್ರೀತಿ. ಅವನನ್ನು ತುಂಬಾ ಹುರಿದುಂಬಿಸುತ್ತಿದ್ದರು. 'ಬಿ.ಎ.ಮಾಡಿ ಕೆ.ಎ.ಎಸ್. ಪರೀಕ್ಷೆ ತಗಳ್ಳೊ ನೀನು....' ಎಂದು ಸಣ್ಣವನಿಂದಲೇ ಅವನಿಗೆ ಹೇಳುತ್ತ ಬಂದಿದ್ದರು. ಅದು ಅವನ ತಲೆಯನ್ನು ಎಷ್ಟರಮಟ್ಟಿಗೆ ಹೊಕ್ಕಿತೆಂದರೆ ಅವನಿಗೆ ಓದು ಬರಹದ ಹೊರತು ಬೇರೇನೂ ಗೊತ್ತಿರಲಿಲ್ಲ. ಬೇರ್‍ಯಾವ ಪ್ರಪಂಚದ ಪರಿವೆಯೂ ಇರಲಿಲ್ಲ. ಓದಿನಲ್ಲಿ ಎಷ್ಟು ಚುರುಕೋ, ಮಿಕ್ಕ ವಿಷಯಗಳಲ್ಲಿ ಅಷ್ಟೇ ಮಂದ.

ನೋಡಲೂ ಅಷ್ಟೆ ಪೆದ್ದುಪೆದ್ದಾಗಿ, ಮುಗ್ಧನಂತಿದ್ದ. ನರಪೇತಲ ಆಸಾಮಿ. ತೆಳ್ಳಗಿನ ದೇಹಕ್ಕೆ ವಿಪರೀತ ಎತ್ತರದಿಂದಾಗಿ ಬಾಗಿ, ಬಳಕುತ್ತಿದ್ದ. ಇದ್ದ ಎರಡೇ ಜತೆ ಬಟ್ಟೇನೇ ಅವನ ಉಡುಗೆ. ಕಾಲಿಗೊಂದು ಹಳೆಯ ಹವಾಯಿ ಚಪ್ಪಲಿ. ಸದಾ ಎಣ್ಣೆ ಬಡಿದುಕೊಂಡು ತಿದ್ದಿ ತೀಡಿರುತ್ತಿದ್ದ ಕೂದಲನ್ನ. ಅವನು ಮಾತಾಡಿದರೆ ತೀರ ಸನಿಹ ಇದ್ದವರಿಗೆ ಮಾತ್ರ ಕೇಳಿಸುತ್ತಿತ್ತು.. ಎಣ್ಣೆಯೂ, ಬೆವರು ಸೇರಿ ಒಂದು ರೀತಿ ಕಮಟು ವಾಸನೆ ಹೊಡೆಯುತ್ತಿತ್ತು. ದಿನವೂ ಸ್ನಾನ ಮಾಡಬೇಕೆಂದು ಎಷ್ಟೆ ಅಂದುಕೊಂಡರೂ ಸಹ ನಾಲ್ಕು ದಿನಕ್ಕೊ, ವಾರಕ್ಕೊಮ್ಮೆಯೋ ಮೈತೊಳೆಯಲು ಸಾಧ್ಯವಾಗುತ್ತಿತ್ತು. ಇದೇನು ತೊಂದ್ರೆ, ತಾಪತ್ರಯದ ಸಮಸ್ಯೆಯಲ್ಲ ಅಭ್ಯಾಸ ಬಲವಷ್ಟೆ. ಮನಸ್ಸಿದ್ದರೆ ಸೀಗೆಮಠದ ಕೆರೆಯಲ್ಲಿ ಒಂದು ಕಲ್ಲಿಂದ ಮೈಯುಜ್ಜಿಕೊಂಡು ನಾಲ್ಕೈದು ಸಲ ಮುಳುಗೆದ್ದರೂ ಮುಗಿಯುತ್ತಿತ್ತು ಸ್ನಾನ.

ಪಾರು ಚಂದ್ರನಿಗೆ ಪೂರ್ಣ ವ್ಯತಿರಿಕ್ತ. ಅವನನ್ನ ರೇಗಿಸಿ, ಗೋಳಾಡಿಸುವುದೇ ಅವಳಿಗೆಲ್ಲಿಲ್ಲದ ಖುಷಿ. ಆಕೆಗೆ ಸದಾ ಹೊರಗೆ ಸುತ್ತುವ ಆಸೆ. ಆಕಳನ್ನು ಹಿಂಡುತ್ತ, ಇಂಪಾಗಿ ಹಾಡುತ್ತ ಕಳೆ ಕಿತ್ತು, ನಾಟಿ ಹಚ್ಚುವ ಆಸೆ. ರಂಗನಾಥ್‌ರಿಗೆ ಅವಳನ್ನು ತುಂಬಾ ಓದಿಸಬೇಕೆಂಬ ಬಯಕೆ. ಆದರೆ ಪಾರು ಅದೊಂದು ಬಿಟ್ಟು ಬೇರೆಲ್ಲ ವಿಷಯಗಳಲ್ಲಿ ಅತಿ ಚುರುಕು. ಅದ್ಹೇಗೋ ಚಂದ್ರನ ಜತೆ ಸೇರಿ ಓದುತ್ತಿದ್ದಳಷ್ಟೆ.

ರಂಗನಾಥ್‌ರವರು ಚಂದ್ರನಿಗೆ ತಮ್ಮ ಕೈಲಿಂದಾಗುವ ಎಲ್ಲಾ ನೆರವು ನೀಡುತ್ತಿದ್ದರು. ಕೆ.ಎ.ಎಸ್. ಪರೀಕ್ಷೆಗೆ ಬೇಕಾಗುವ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿ ಕೊಡುತ್ತಿದ್ದರು. ತಮ್ಮಿಂದ ಆದಷ್ಟು ಪುಸ್ತಕ ಸಾಮಗ್ರಿಗಳನ್ನು ಒದಗಿಸುತ್ತಿದ್ದರು. ನಿತ್ಯ ದಿನಪತ್ರಿಕೆ ಓದುವ ಅಭ್ಯಾಸ ಅವನಲ್ಲಿ ಬೆಳೆಸಿದ್ದರು. ತಮ್ಮ ಮನೆಗೆ ಬರುವ ಎಲ್ಲಾ ದಿನಪತ್ರಿಕೆಗಳನ್ನು ಓದಿದ ನಂತರ ಅವನಿಗೇ ಕೊಡುತ್ತಿದ್ದರು. ಹಾಗೊಮ್ಮೆ ಯಾವುದಾದರೂ ಪತ್ರಿಕೆಯ ಮುಖ್ಯ ಘಟನೆಗಳ ವಿವರ ಬೇಕಾದರೆ ಚಂದ್ರನೇ ಎಲ್ಲವನ್ನೂ ಸಮಯ, ತಾರೀಖುಗಳೊಡನೆ ವಿವರಿಸಿಬಿಡುತ್ತಿದ್ದ. ಪತ್ರಿಕೆಯ ಅವಶ್ಯಕತೆಯೇ ಬೀಳುತ್ತಿರಲಿಲ್ಲ. ರಜಾ ದಿನಗಳೆಂದರೆ ತೀರಿತು. ಎಲ್ಲಾ ಹಳೆ ಪುಸ್ತಕಗಳನ್ನು ಹಳೇ ಪತ್ರಿಕೆಗಳನ್ನು ರಾಶಿ ಹಾಕಿಕೊಂಡು ಅವುಗಳಲ್ಲೇ ಮುಳುಗಿಬಿಡುತ್ತಿದ್ದ. ಪಾರು ಅವನನ್ನು ಆಗಾಗ ರೇಗಿಸುತ್ತಿದ್ದಳು.

'ಚಂದ್ರ ನೀನು ಹಿಂಗೆ ಸದಾ ಪುಸ್ತಕ ಮತ್ತೆ ಹಳೆ ಪೇಪರ್ ಜತ್ಯಾಗಿದ್ರೆ ಒಂದಿನ ಆ ಪೇಪರ್ ಜತೀಗೆ ನಿನ್ನೂ ರದ್ದಿಗೆ ಹಾಕ್ಬಿಡ್ತಾರೆ ಯಾರನ ಕನ್‌ಫ್ಯೂಸ್ ಮಾಡ್ಕೆಂಡು....' ಎಂದು. ಅದಕ್ಕವನು ಅಷ್ಟೇ ಗಭೀರವಾಗಿ

'ಪಾರು ನೀನೂ ನನ್ ಜತೀಗೆ ಓದಿದ್ರೆ ಎಷ್ಟು ಚಂದಾಗಿರ್ತೈತೆ....' ಅನ್ನುತ್ತಿದ್ದ.

ನೋಡಲು ಪೆದ್ದುಪೆದ್ದಾಗಿ ಕಾಣುತ್ತಿದ್ದ ಚಂದ್ರ ಒಂದೇ ಬಾರಿಗೆ ಬಿ.ಎ. ಪ್ರಥಮ ದರ್ಜೆಯಲ್ಲಿ ಪಾಸಾಗಿ ಕದರಟ್ಟಿಯ ಹೆಮ್ಮೆಯ ಚಂದ್ರಣ್ಣನಾಗಿ; ಇಡೀ ತಾಲ್ಲೂಕಿನ ಅಭಿಮಾನಕ್ಕೆ, ಮೆಚ್ಚುಗೆಗೆ ಪಾತ್ರನಾದ. ಅಣ್ಣಯ್ಯಗೂ ಸುದ್ದಿ ಮುಟ್ಟಿತು. ಮೂರು ವರ್ಷದ ಹಿಂದೆ ಮದ್ವೆಯಾಗಿದ್ದ ಅಣ್ಣಯ್ಯ. ಈ ಮುಂಚಿನಂತೆ ಮೇಲಿಂದ ಮೇಲೆ ಬರುತ್ತಿರಲಿಲ್ಲ ಊರ ಕಡೀಗೆ. ಅವನು ಬಂದಾಗಲೇ ವರುಷದ ಮೇಲಾಗಿತ್ತು. ಬಂದಾಗ ಸಾಕಮ್ಮನ ಮನಿ ಕಡೀಗೆ ಹೋಗಿದ್ದ. ಆಕೆಯನ್ನು ನೋಡಿ ತುಂಬಾ ಮರುಗಿದ್ದ.

'ಇದೇನ್ ಸಾಕಮ್ಮ ಈ ವಯಸ್ಸಾಗೆ ಇನ್ನೂ ಕೂಲಿ ಮಾಡ್ತಿ? ಸಾಕಿನ್ನ ನಿನ್ ಮಗನ್ನ ಕೆಲ್ಸಕ್ಕೆ ಹಚ್ಚು. ಬಿ.ಎ. ಮುಗಿದ್ಮೇಲೆ ನಾನೂ ಪ್ರಯತ್ನಿಸ್ತೀನಿ....' ಅಂದಿದ್ದ.

ಸಾಕಮ್ಮ ಬಲು ಆದರದಿಂದ ಅಣ್ಣಯ್ಯನ ಕೈಹಿಡಿದು ಹೇಳಿದ್ದಳು 'ಅಣ್ಣಯ್ಯ ನನಗಿರದು ಒಂದೇ ಮಗ, ಒಂದೇ ಕನಸು. ಅವ್ನು ನಿನ್ನಂಗೆ ದೊಡ್ಡ ಮನ್ಸ ಆಗ್ಬೇಕು. ಅದ್ಕೆ ನನ್ ಜೀವ ಬೇಕರ ಕೊಟ್ಟೇನು....' ಚಂದ್ರನೂ ತಾನು ಕೆ.ಎ.ಎಸ್. ಪರೀಕ್ಷೆ ತೆಗೆದುಕೊಳ್ಳುವ ಅಭಿಲಾಷೆ ವ್ಯಕ್ತಪಡಿಸಿದಾಗ ಸುಮ್ಮನೆ ಹಿಂದಿರುಗಿದ್ದ ಅಣ್ಣಯ್ಯ.

ಆದರೆ ಈ ಬಾರಿ ಬಂದ ಅಣ್ಣಯ್ಯ ಸುಮ್ಮನೆ ಹೋಗಲಿಲ್ಲ.

'ಹಳೇ ಪೇಪರ್ ಹರಡ್ಕಂಡು, ಒಂದ್ನಾಕು ಜಿ.ಕೆ. ಪುಸ್ತಕ ಓದಿದ್ರೆ ಕೆ.ಎ.ಎಸ್. ಪಾಸಾಗತ್ತೇನೋ....? ಅದಕ್ಕೆಲ್ಲ ಕೋಚಿಂಗ್ ಬೇಕು. ಒಳ್ಳೊಳ್ಳೆ ಬುಕ್ಸ್ ಬೇಕು. ಸುಮ್ನೆ ಅಲ್ಲ ಅವೆಲ್ಲ. ನಡೀ ನನ್ ಜತೆ ಅಲ್ಲೇ ಓದ್ಕೊಂಡು, ಅಪ್ಲೈ ಮಾಡೋವಂತೆ......'

ಎಂದು ಹೇಳಿ, ತಾಯಿಯಿಂದ ಮಗನಿಗೆ ಹೇಳಿಸಿ, ಒಪ್ಪಿಸಿ ಚಂದ್ರನನ್ನು ತನ್ನೊಡನೆ ಬೆಂಗಳೂರಿಗೆ ಕರಕೊಂಡು ಹೊರಟೇಬಿಟ್ಟ. ಸಾಕಮ್ಮ ಕಣ್ಣೊರಿಸಿಕೊಳ್ಳುತ್ತ

'ಅಣ್ಣಯ್ಯ ನನ್ ಮಗನ್ನ ನಿನ್ ಮಡ್ಲಿಗೆ ಹಾಕೀನೋಡು. ದೊಡ್ ಪಟ್ಟಣದಾಗೆ ಕೆಟ್ಟು ಕೆರ ಯಿಡಿಬಾರ್ದು ಮತ್ತೆ..... ಅವ್ನು ನಿನ್ನೂ ಮೀರ್ಸಿ ಬೆಳೀಬೇಕು. ದೊಡ್ಡ ಮನ್ಸ ಆಗಬೇಕು....' ಎಂದಳು.

ಚಂದ್ರ ಬೆಂಗಳೂರಿಗೆ ಪಯಣಿಸಿದ. ಸ್ವಲ್ಪ ದಿನಗಳಲ್ಲೇ ಕನ್ನಡ ಎಂ.ಎ. ಮಾಡಲು ಪಾರು ಧಾರವಾಡಕ್ಕೆ ಹೊರಟಳು.

ಮೂರು ವರ್ಷಗಳ ನಂತರ ಅಣ್ಣಯ್ಯ, ಅವನ ಹೆಂಡತಿ ಜತೆ ಕದರಟ್ಟಿಗೆ ಬಂದ ಚಂದ್ರ ಪೂರ್ತಿ ಬದಲಾಯಿಸಿದ್ದ. ಪೂರ ಪಟ್ಟಣದ ಸೊಗಡು ತುಂಬಿ ತಮ್ಮೆದುರು ನಿಂತಿದ್ದ ಅವನನ್ನು ನೋಡಿ ಪಾರು, ರಂಗನಾಥ್ ದಂಗಾದರು. ಆಗ ತಾನೇ ಅರಳಿದ ಮಲ್ಲಿಗೆಯನ್ನ ಮೂಸುವಂತೆ ಪಾರು ಚಂದ್ರನನ್ನ ಮೆಲ್ಲನೆ ಮೂಸಿದಳು. ಘಮ್ಮೆನ್ನುತ್ತಿದ್ದ ಅವನು ಎರಡೆರಡು ಸುತ್ತು ದಪ್ಪಗಾಗಿದ್ದ. ಅವನ ಮೈದಡವಿ, ಬೆನ್ನು ತಟ್ಟಿದರು ರಂಗನಾಥ್ ಖುಷಿಯಿಂದ. ಚಂದ್ರನೂ ಪಾರುವನ್ನು ಮೇಲಿಂದ ಕೆಳಕ್ಕೆ ನೋಡಿ

'ಮುಗೀತ ಕನ್ನಡ ಎಮ್ಮೆ....? ಏನ್ ಚೂರು ಬದಲಾಯಿಸಿಲ್ಲ ಯಂಗಿದ್ದವ್ಳು ಅಂಗೇ ಇದೀಯಾ....?' ಅಂದ. ಅವನ ಮಾತಲ್ಲಿ ವ್ಯಂಗ್ಯ ಇಣುಕಿದಂತೆ ಭಾಸವಾಗಿ ಗಲಿಬಿಲಿಗೊಂಡು ಮಾತು ತೋಚದೆ ಸುಮ್ಮನೆ ತಲೆಯಾಡಿಸಿ ನಿಂತಳು ಪಾರು.

ಊಟ, ಉಪಚಾರ ಎಲ್ಲಾ ಮುಗಿದ ನಂತರ

'ಏನಪ್ಪ ಅಲ್ಲಿ ಸಮಾಚಾರ....? ಹೇಗೆ ನಡೀತಿದೆ ಅಭ್ಯಾಸ? ಬೆಂಗ್ಳೂರ್ ವಾತಾವರಣ ಚೆನ್ನಾಗಿ ಒಗ್ಗಿದಂಗಿದೆ.... ಏನೇನ್ ಮಾಡ್ತಿ ಅಲ್ಲಿ....? ನಿನ್ನ ದಿನಚರಿ ಏನು?' ಎಂದು ಕೇಳಿದರು ರಂಗನಾಥ್,

'ಏನಂತ ಯೇಳ್ಲಿ ಸಾರ್..... ಬೆಳಗ್ನಿಂದ ಮಲ್ಗತನ್ಕ ಬಿಸಿ. ಟೈಮು ವೋಗಾದೆ ಗೊತ್ತಾಗಲ್ಲ....'.

ರಂಗನಾಥ್ ಒಡನೆ ಮಧ್ಯದಲ್ಲಿ

"ಹೌದೌದು ಹಾಗೇ ಇರ್ಬೇಕು. ಏನಾದ್ರು ಸಾಧಿಸ್ಬೇಕಂದ್ರೆ ಸುಮ್ನೆ ಏನಪ್ಪಾ.... ಸಾಧನೆ ಮಾಡ್ಬೇಕು ಸಾಧನೆ.....' ಅಂದು 'ಹೇಳು, ಹೇಳು ನಿನ್ನ ದಿನಚರಿ ಹೇಳು....' ಅಂದರು.

'ಸಾರ್, ಬೆಳಿಗ್ಗೆ ಎದ್ದು ಮಿಲ್ಕ್ ಶಾಪ್‌ನಿಂದ ಮಿಲ್ಕು ತರೋದು, ತಂದು ಬ್ರೌನಿ ಮತ್ತೆ ಶೀಬಾನ ವಾಕಿಂಗ್ ಮಾಡಸದು..... ಎಂಟೂವರೆಗೆ ನಮ್ ಮೀನಕ್ಕನ ಅಕ್ಕನ ಮಗ್ಳನ್ನ ಸ್ಕೂಲಿಗೆ ಬಿಟ್ಟು ಬರಾದು. ಹನ್ನೆರಡೂವರೆ ವತ್ಗೆ ಮೀನಕ್ಕ ಪೇಯ್ಟಿಂಗ್‌ಗೆ ವೋಗ್ತಾರೆ ಕರ್ಕಂಡೋಗಿ ಕರ್ಕಂಡು ಬರೋದು. ಸಾಯಂಕಾಲ ಮತ್ತೆ ಸ್ಕೂಲಿನಿಂದ ಪಾಪುನ ಕರ್ಕಂಡ್ಬಂದು, ಮೀನಕ್ಕನ್ನ ಒಂದು ರೌಂಡು ಒರೆಗೆ ಕರ್ಕಂಡೋಗದು....'

ಪಾರು ಅವನನ್ನ ಮಧ್ಯೆದಲ್ಲೇ ತಡೆದು

'ನೀನೇ ಯಾಕೆ....?' ಅಂತ ಕೇಳಿದಳು.

'ಅಣ್ಣಯ್ಯ ಬೆಳಗ್ಗೆ ಹೋದ್ರೆ ರಾತ್ರಿಕೇ ಬರಾದು. ಕಾರ್ ಡ್ರೈವರ್ ಬೇರೆ ಕೆಲ್ಸ ಬಿಟ್ಟಿದಾನೆ. ಇನ್ನೇನು ನಾನೇ ಓಡಿಸ್ತಿನಲ್ಲ ಅಣ್ಣಯ್ಯ ಮತ್ತೆ ಅದರ ಬಗ್ಗೆ ಯೋಚ್ನೆನೆ ಮಾಡಿಲ್ಲ. ಮತ್ತೆ ನನ್ನ ಡ್ರೈವಿಂಗೇ ಭಾಳ ಸೇಪಂತ ಬೇರೆ ಯಾರ್ ಕೈಗು ಕಾರ್ ಕೊಡಲ್ಲ ಅಣ್ಣಯ್ಯ....' ಅವನ ಮಾತಲ್ಲಿ ತುಂಬಾ ಹೆಮ್ಮೆಯಿತ್ತು.

'ಅರೆರೆ! ಕಾರ್ ಡ್ರೈವಿಂಗೆಲ್ಲಾ ಕಲ್ತಿದ್ದಿಯಾ....? ವೆರಿಗುಡ್, ವೆರಿಗುಡ್.....' ಎಂದು ರಂಗನಾಥ್ 'ಮತ್ತೆ ಬೇರೆ ಆಕ್ಟಿವಿಟೀಸ್...' ಎಂದು ಅಷ್ಟಕ್ಕೆ ನಿಲ್ಲಿಸಿದ್ರು.

'ಅಯ್ಯೊ ಸಾರ್, ಮಧ್ಯ ಸಿಗೋ ಟೈಮಲ್ಲಿ ಇಂಗ್ಲೀಸ್ ಮೂಸಿಕ್ಕು, ಇಂಗ್ಲೀಸ್ ಲಿಟರೇಚರ್ರು ಎಲ್ಲಾ ಕೇಳ್ತೀನಿ, ಓದ್ತೀನಿ. ನಮ್ ಮೀನಕ್ಕ ನೀನು ಕನ್ನಡ ಮೀಡಿಯಮ್ಮು ಮೊದ್ಲು ಲಾಂಗ್ವೇಜ್ ಇಂಪ್ರೂ ಮಾಡ್ಕ ಅಂತ ಬರೀ ಇಂಗ್ಲಿಸ್ ಲಿಟರೇಚರ್ರು ಓದಂತ ಯೇಳೆತೆ....' ಅಂದ.

'ಹೌದಾ.... ಏನು ಓದಿದೆ?' ಎಂದು ಕೇಳಿದರು ರಂಗನಾಥ್.

'ಸಾರ್ ನಮ್ಮಕ್ಕನ್ನ ಬಿಡಾಕೋದಾಗ ಅಲ್ಲೇ ಒಂದು ಲೈಬ್ರರಿ ಐತೆ. ಅಲ್ಲಿ ದಿನಾ ವೀಕು, ಟುಡೇ, ಫ್ರಂಟ್‌ಲೈನು, ಉಮನ್ಸ್ ಎರ್‍ರಾ, ಫೆಮಿನಾ, ಫಿಲಂಪೇರು, ಸ್ಟಾರ್‌ಡಸ್ಟು? ಸಾರ್ ಮತ್ತೆ, ಇಂಗ್ಲೀಸ್ ಮೂಸಿಕ್ಕು ಅಷ್ಟೆ ಆಲಿಸಾ, ಕಲೋನಿ ಕಸಿನ್ನು, ಬಾಬ ಸೈಗಲ್ಲು ಅಯ್ಯೋ ಇನ್ನು ಭಾಳ ಅದಾವ್ ಸಾರ್ ಯಲ್ಲ ವೆಸ್‌ಟರ್ನೂ....'

ಎಂದವನು ಹೋಗಲು ಏಳುತ್ತ

'ಓಟ್ನಲ್ಲಿ ತುಂಬಾ ಚನ್ನಾಗಿದೀನಿ ಸಾರ್ ನನಗೇನು ಕೊರ್ತೆ ಇಲ್ಲ. ಅಣ್ಣಯ್ಯ, ಅಕ್ಕ ಚನ್ನಾಗೆ ನೋಡ್ಕೆಂತರೆ. ಬಟ್ಟೆ ಬರೆ, ದುಡ್ಡು ಯಾವ್ದುಕ್ಕು ಕಡಿಮೆ ಮಾಡಿಲ್ಲ....' ಅಂದ.

ರಂಗನಾಥ್, ಪಾರು ಮುಖ ಮುಖ ನೋಡಿಕೊಂಡರು. ಅವ ಹೊರಟೇಬಿಟ್ಟನೆಂದು ಪಾರು ಅವಸರದಲ್ಲಿ

'ಎಲ್ಲಾ ಸರಿ ಚಂದ್ರ ಆದ್ರೆ ನಿನ್ನ ಕೋಚಿಂಗ್ ಕ್ಲಾಸು...? ಕೆ.ಎ.ಎಸ್ಸೂ...?' ಎಂದು ಕೇಳಿದಳು.

'ಅಯ್ಯೋ ಅದನ್ನೇನು ಮರ್ತಿಲ್ಲಮ್ಮ. ವಾರಕ್ಕೆರಡು ದಿನ ಅಲ್ಲೇ ಮನೆಹತ್ರ ಒಬ್ರು ಯೇಳ್ತಾರೆ ಅವ್ರತ್ತ ವೋಗ್ತೀನಿ. ಅಣ್ಣಯ್ಯನೂ ಒಂದ್ಸಲ್ಪ ಪುಸ್ತಕ ತಂದುಕೊಟ್ಟಾನೆ. ಅವ್ನೂ ವೋದ್ತೀನಿ ದಿನಾ ರಾತ್ರಿ ಒಂದ್ಗಂಟೆ....'

ಎಂದವ 'ಬರ್ತೀನಿ ಸಾರ್ ಅಣ್ಣ, ಅಕ್ಕ ವೇಟ್ ಮಾಡ್ತಾರೆ ಮತ್ತೆ. ವೋಗಿ ನಿಮ್ಗೆ ಪತ್ರ ಬರೀತೀನಿ....' ಎಂದು ಹೊರಟವನು

'ಬಾ ಪಾರು ಅಲ್ಲಿತನ್ಕ....' ಎಂದು ಪಾರುನ ಕರೆದ.

ಕದರಟ್ಟಿಗೆ ಬಸ್ಸು ಹತ್ತೊ ಮುನ್ನ 'ಮೀನಕ್ಕನ ತಂಗಿ, ಅಂದ್ರೆ ಅವರ ದೂರದ ಸಂಬಂಧ ರತ್ನ ಅಂತ ಈಗೊಂದ್ ಮೂರ್ತಿಂಗ್ಳಿಂದ ಅಲ್ಲೇ ಮನೇಲೆ ಇದಾಳೆ... ತುಂಬಾ ಚೆನ್ನಾಗಿದಾಳೆ ನಿನ್ ತರಾನೇ...' ಅಂದ.

ಬಸ್ಸೇರಿ ಕೈಬೀಸಿ ಹೊರಟು ಹೋದ.

ಪಾರು ಪೆಚ್ಚಾಗಿ ಮನೆಗೆ ಬಂದಳು. 'ಅಪ್ಪ ಚಂದ್ರ ನಮ್ಮನ್ನ ಗುಗ್ಗುಗಳ್ನ ಮಾಡ್ತಿದ್ನೋ ಅಥ್ವಾ ತಾನಿನ್ನು ಗುಗ್ಗುನೇ ಅಂತ ಸಾಬೀತು ಪಡಿಸ್ತಿದ್ನೋ ಅರ್ಥವಾಗ್ತಿಲ್ಲ. ಅವ್ನ ದೊಡ್ಡ ಆಫೀಸರ್ ಆಗ್ಬೇಕನ್ನೊ ಅವರಮ್ಮನ ಕನಸು, ಅವನ ಕನಸು....'

'ಎಲ್ಲಾ ಕನಸು...' ಅಂದರು ನಡುವೆಯೇ ರಂಗನಾಥ್.

'ಅವನು ಯಾವತ್ತು ಅಣ್ಣಯ್ಯನ ಜತೇಲಿ ಬೆಂಗ್ಳೂರಿಗೆ ಹೊಂಟ್ನೋ ಅವತ್ತೇ ನಂಗೆ ಮನವರಿಕೆ ಆಯ್ತು ಅವನು ಕೆಟ್ಟ ಅಂತ. ಸಾಕಮ್ಮ ಅಣ್ಣಯ್ಯನಂಗೇ ನನ್ ಮಗ ಆಗ್ಲಿ ಅಂತೇಳ್ಕೊಬೇಕಿತ್ತೆ ಹೊರ್ತು ಅವನನ್ನ ಮೀರ್‍ಸಂಗೆ ಆಗ್ಬೇಕು ಅಂತ ಹೇಳ್ಕಬಾರ್ದಿತ್ತು. ಈ ವ್ಯಕ್ತಿ ಪೂಜೆ, ನೀನೇ ನೀನೇ ಅನ್ನೊ ಖ್ಯಾತಿ, ಪ್ರಾಮುಖ್ಯತೆ, ಅಧಿಕಾರ ಇವುಗಳ್ನೆಲ್ಲ ಹಂಚಿಕೊಳ್ಳೋಕೆ ಆಗ್ಲಿ, ಬಿಟ್ಟು ಕೊಡೋಕೆ ಆಗ್ಲಿ ತುಂಬಾ ದೊಡ್ಡತನ ಬೇಕು. ಕದರಟ್ಟಿಯಲ್ಲಿ ಅಣ್ಣಯ್ಯನ ಹಾಗೆ ಬೇರಾರು ಇಲ್ಲಾಂದ್ರೆ ಅಣ್ಣಯ್ಯಂದು ಅಸಾಮಾನ್ಯ ಬುದ್ಧಿವಂತಿಕೆ, ಉಳಿದವರು ಕಳಪೆ ಅಂತ ಖಂಡಿತ ಅಲ್ಲ. ಉಳಿದವರ್ನ ಮೇಲೆತ್ತುವ ಉದಾರತೆಯ ಕೊರತೆ ಅಷ್ಟೆ..' ನಿಟ್ಟುಸಿರಿಟ್ಟರು ರಂಗನಾಥ್.

'ಚಂದ್ರ ಮೂರು ವರ್ಷದಲ್ಲಿ ಒಮ್ಮೆಯೂ ಪರೀಕ್ಷೆಗೆ ಅಪ್ಪಿಯರೇ ಆಗಿಲ್ಲಾಂದ್ರೆ ಅಷ್ಟೆ ಮುಗೀತು. ಅವನು ಮುಂದಿನ ಸಾರಿ ಬರೋವಾಗ ಜೊತೇಲಿ ಹೆಂಡತಿ, ಮಗೂನ ಕರ್ಕೊಂಡು ಬಂದ್ರೂ ಆಶ್ಚರ್ಯವಿಲ್ಲ...' ಎಂದರು ರಂಗನಾಥ್ ಅತೀವ ನಿರಾಶೆಯಿಂದ.

ಹಾಗೇ ಆಯ್ತು. ಅವನು ಹೋದ ಆರೇ ತಿಂಗಳಿಗೆ ಅವನ ಮದುವೆಯ ಕರಯೋಲೆ ಬಂತು. ಅವನ ಮತ್ತು ರತ್ನಳ ಮದುವೆಯ ಕರೆಯೋಲೆ. ರತ್ನಳನ್ನು ಮನೆ ತುಂಬಿಸಿಕೊಳ್ಳಲು ಕದರಟ್ಟಿಗೆ ಬಂದಿಳಿದರು ಎಲ್ಲರು. ಆರತಿ ಸಮಾರಂಭವೂ ಮಾಡಿದರು. ಸಾಕಮ್ಮನದಂತೂ ಹೇಳತೀರದ ಸಂಭ್ರಮ. ಮಗ ಇಂಗ್ಲೀಷ್ ಮಾತಾಡುವುದನ್ನು, ಕಾರು ಬಿಡುವುದನ್ನು 'ಯಾವ ಆಫೀಸರಿಗೆ ಕಮ್ಮಿ....' ಅಂತ ಹೇಳಿಕೊಳ್ಳುವುದೇ ಸಂಭ್ರಮವಾಯ್ತು. ಆಕೆಗಿದ್ದ ಒಬ್ಬನೇ ಮಗನ ಒಂದೇ ಕನಸು ಮರೆತೇ ಹೋಗಿತ್ತು. ಆದರೆ, ಚಂದ್ರ ಸಂಪೂರ್ಣ ಡಲ್ಲಾಗಿದ್ದ ಮದುಮಗನಿಗಿರಬೇಕಾದ ಸಡಗರ, ಸಂಭ್ರಮ ಒಂದೂ ಕಾಣದೆ ಸೋತವನಂತಿದ್ದ.

'ಏನಪ್ಪಾ ನೀನೊಬ್ಬ ಅಫೀಸರಾಗಿ ಬರ್ತಿಯಾ ಅಂದ್ರೆ ಹೆಣ್ತಿನ ಕರ್ಕಂಡು ಬಂದ್ಬಿಟ್ಟೆ....' ಎಂದು ಬಂದವರೆಲ್ಲ ತಮಾಷೆ ಮಾಡುತ್ತಿದ್ದರೆ ಚಂದ್ರ ಸಂಕೋಚದಿಂದ ಮುದುಡಿ ಹೋಗುತ್ತಿದ್ದ. ಅತ್ತ ಹೊರಗೆ ತನ್ನ ಸುತ್ತ ನೆರೆದಿದ್ದವರಿಗೆ ಅಣ್ಣಯ್ಯ ನಮ್ಮ ಹುಡುಗರಿಗೆ

ಏನೆಲ್ಲಾ ಸೌಕರ್ಯ ಒದಗಿಸಿದ್ರೂ ನಿಷ್ಪ್ರಯೋಜಕ, ಕಷ್ಟಪಡುವ ಮನೋಭಾವವೇ ಇರುವುದಿಲ್ಲ ಎಂಬಂತೆ ಮಾತಾಡುತ್ತಿದ್ದ

'ಕಾರು, ಊಟ, ಬಟ್ಟೆ ಹಣಕಾಸು ಎಲ್ಲಾ ಇದ್ದು ಅವ್ನು ಕಷ್ಟಪಟ್ಟು ಓದ್ಲಿಲ್ಲಾಂದ್ರೆ ನಾನೇನ್ ಮಾಡ್ಲಿ? ನೋಡಪ್ಪ ನನಗೇನ್ ಸೌಕರ್ಯ ಇತ್ತು? ಯಾರ ಸಪೋರ್ಟಿತ್ತು....? ಏನೇನೂ ಇರ್ಲಿಲ್ಲ ಆದ್ರೆ, ನನಗೆ ಛಲ ಇತ್ತು....'

'ಅಯ್ಯೊ ನಿನ್ ಸಮಾಚಾರನೇ ಬ್ಯಾರೆ ಬಿಡು ಅಣ್ಣಯ್ಯ..... ಈ ನನ್ ಮಕ್ಳಿಂದ ಯಲ್ಲಾದೀತು...' ಹಿರಿಯಜ್ಜ ಹೇಳುತ್ತಿದ್ದ. ರಂಗನಾಥ್, ಪಾರು ಎಲ್ಲಾ ನೋಡುತ್ತ ಕೇಳುತ್ತ ಅಸಹಾಯಕರಾಗಿ ಒಂದು ಕಡೆ ಕೂತಿದ್ದರು.

ಬೆಂಗಳೂರಿಗೆ ಹಿಂದಿರುಗುವ ಮುನ್ನಾ ದಿನ ಚಂದ್ರ, ಪಾರು ಕರಡಿಗುಡ್ಡದಲ್ಲಿ ಭೇಟಿಯಾದರು. ಪಾರುವಿನ ಕೈಹಿಡಿದು ಚಂದ್ರ ಗಳಗಳನೆ ಅತ್ತ.

'ನನ್ನ ಕ್ಷಮಿಸಿಬಿಡು ಪಾರು. ನಿಮ್ಮಾಸೆ, ಪ್ರಯತ್ನ, ಶ್ರಮ ಎಲ್ಲಾ ಮಣ್ಣು ಪಾಲು ಮಾಡಿದೆ. ಈ ಮದುವೆ ನಾನು ಇಷ್ಟಪಟ್ಟಿದ್ದಲ್ಲ ನಿನ್ನಾಣೆಗು. ಅಣ್ಣಯ್ಯನ್ನ, ಅಕ್ಕನ್ನ ಕಾಲಿಡ್ದು ಕೇಳ್ದೆ ನಂಗಿನ್ನು ಮೂರ್‍ವರ್ಷ ಮದ್ವೆ ಬ್ಯಾಡಂತ. ನಾನು ಆಕೀನ ಯಾವತ್ತು ಆ ದೃಷ್ಟಿಯಿಂದ ನೋಡ್ಲಿಲ್ಲ ಅಂತ. ಆದ್ರೂ, ಏನೇನೋ ಅನುಮಾನ ಪಟ್ಟು ದುಡುಕ್ಬಿಟ್ರು. ನನ್ನ ಕನಸು ನುಚ್ಚು ನೂರಾತು. ನೋಡು, ಇಲ್ಲಿಂದ ವೋದ್ಮೇಲೆ ವಿಧಾನಸೌಧದಲ್ಲಿ ಕೆಲ್ಸಕ್ಕೆ ಸೇರ್‍ಕಬೇಕು..... ಡೂಟಿ ರಿಪೋರ್ಟ್ ಮಾಡ್ಕೆಬೇಕು.....'

'ಏನ್ ಕೆಲ್ಸ....?' ಪಾರುವಿನ ದನಿ ನಡುಗುತ್ತಿತ್ತು.

'ಹಿರಿಯ ಸಹಾಯಕ ಪಾರು ಹಿರಿಯ ಸಹಾಯಕ. ನೀನೇಳ್ತಿದ್ದಿದ್ದು ನಿಜ ಪಾರು ಸುಮ್ನೆ ಪುಸ್ತಕ ಓದಿದ್ರೆ ಏನ್ಬಂತು ಸ್ವಲ್ಪನಾದ್ರ ವ್ಯವಹಾರ ಜ್ಞಾನ, ಪ್ರಪಂಚ ಜ್ಞಾನ ಇಲ್ಲ ನಿಂಗೆ.... ಅಂತ. ನಿಜ ಪಾರು ನೀನೇಳ್ದಂಗೆ ಬರೀ ಹಳೇ ಪೇಪರ್‍ರು, ಹಳೇ ಪುಸ್ತಕದಾಗೇ ಮುಳುಗಿ ಕೊನೆಗೂ ರದ್ದೀಗೇ ಬಿದ್ಬಿಟ್ಟೆ. ಅದರಿಂದ ಒರಗೆ ಬರಾಕೆ ಆಗ್ಲೇ ಇಲ್ನೋಡು.....' ಅಂದ.

ಪಾರು ಮಾತಾಡಲು ಆಗದೆ ಸುಮ್ನೆ ಅವನ ಕೈಯನ್ನು ಒತ್ತಿದಳು. ಅಷ್ಟರಲ್ಲಿ ಚಂದ್ರನನ್ನು ಹುಡುಕಿಕೊಂಡು ಕಾರು ಅಲ್ಲಿಗೇ ಬಂದುಬಿಡ್ತು. ತಟ್ಟನೆ ಪಾರು ಕೈಬಿಟ್ಟು ಓಡಿದ ಚಂದ್ರ.

'ಎಲ್ಲಿ ಹಾಳಾಗೋಗಿದ್ದೆ ನೀನು....? ಇಲ್ಲೇನ್ ಮಾಡ್ತಿದ್ದೆ....? ಸ್ವಲ್ಪನಾದ್ರು ಬುದ್ಧಿ ಬೇಡಾ....? ಆ ಹುಡ್ಗಿನ ಈ ಕೊಂಪೇಲಿ ಒಬ್ಳನ್ನೆ ಬಿಟ್ಟು ಬಂದಿದ್ದಿಯಲ್ಲಾ....?' ಕಾರು ಹೊರಟರೂ ಮೀನಕ್ಕನ ಕೀರಲು ದನಿ ಪಾರುಗೆ ಕೇಳಿಸುತ್ತಲೇ ಇತ್ತು.

✦ ✦

ಜೀರ್ಣ

ಏನಿದು ಮಿಸಸ್ ಶ್ರೀಧರ್? ಏನೋ ಬಿಡಿ ಸಂಬಂಧ, ಸರೀಕ ಅಂದ್ರೆ ಸರೀನಪ್ಪ. ಯಾವನೋ ಮನೇಲಿ ಕೆಲಸ ಮಾಡೋನ ಸಲುವಾಗಿ ಹೀಗೆ ತಲೆ ಕೆಡಿಸಿಕೊಳ್ಳೋದಾ?' ಮಹಿಳಾ ಸಂಘದ ಭಾವಿ ಅಧ್ಯಕ್ಷೆಯನ್ನು ಸಂತೈಸಲು ಸದಸ್ಯನಿಯರ ದಂಡೇ ಅಲ್ಲಿ ನೆರೆದಿತ್ತು. ಅಷ್ಟೇ ಅಲ್ಲ ಅದಕ್ಕಾಗಿ ಅವರಲ್ಲಿ ತೀವ್ರ ಪೈಪೋಟಿ.

'ಶುರೂಲೆ ಹೇಳ್ಲಿಲ್ವಾ ನಿಮ್ಗೆ ಹೆಚ್ಚು ಸಲುಗೆ ಒಳ್ಳೇದಲ್ಲ ಅಂತ. ಅವ್ನ ಬೇರೆ ಅನ್ನೋ ಭಾವನೇನೆ ಇಲ್ಲ ಅಂದ್ಬಿಟ್ರಿ. ಈಗ್ನೋಡಿ ಹೇಳ್ದೆ ಕೇಳ್ದೆ ಓಡಿಹೋದ...'

"ಯಾವಾಗ್ನೋಡಿದ್ರೂ ಪುಸ್ತಕ ಹಿಡಿದು ಕೂತಿರೋನಪ್ಪ ಟೂಮಚ್ ಬಿಡಿ..."

"ಯಾರ್ನಾರ್ನ ಎಲ್ಲಿಟ್ಟಿರ್ಬೇಕೊ ಅಲ್ಲಿಟ್ರೆ ಒಳ್ಳೇದು ಅಂದಿದ್ಕೆ ಹೇಗೆ ರೇಗ್ತಿದ್ರಿ ಮೊದ್ಲೂ..."

"ಮಾತ್ಮಾತಿಗೂ ಮುತ್ತ ಮುತ್ತ ಅಂತ ಕನವರಿಸ್ತಿದ್ರಿ ಮನೆ ಮಂದಿಯೆಲ್ಲ. ಅವ್ನ ಮೇಲೆ ಹೆಚ್ಚು ಡಿಪೆಂಡ್ ಆಗ್ಬೇಡೀಂತ ಐ ಹ್ಯಾಡ್ ವಾರ್ನ್ಡ್ ಯು ದಟ್ ಡೇ ಇಟ್‌ಸೆಲ್ಫ್."

"ಬ್ಲೈಂಡ್ ಬೀಲೀವಿಂಗ್ ರಿ ನಿಮ್ದು.... ಯು ನೋ, ಇತ್ತೀಚೆಗೆ ಅವ ಬೀಡಿಗೀಡಿ ಎಳೀತಿದ್ದಾಗಿತ್ತಪ್ಪ...."

'ಅಷ್ಟೇ ಅಲ್ಲಾರಿ ಆ ಕೊನೆ ಮನೆ ಕೆಲ್ಸ ಮಾಡ್ತಿತ್ತಲ್ಲ ಶಿರೀನ್ ಅಂತ. ಅದುರ್ಜತೆ ಹರಟೆ ಹೊಡೀತ ನಿಂತಿರೋದನ್ನ ನಾಲ್ಕೈದು ಸಾರಿ ನಾನೇ ನೋಡಿದ್ದೀನಿ..... ಅಂಡ್ ನವಡೇಸ್ ಸರಸ,

ಯಾವಾಗ್ಲು ಮುಖ ಊದಿಸ್ಕೊಂಡೇ ಇರ್ತಿದ್ದ ಮಾರಾಯ. ಏನಾದ್ರು ಹೇಳಿದ್ರೆ ಮುಖ ನೋಡೋನೂ.... ಏನೇ ಹೇಳ್ರಿ ಈ ಕೆಲಸದೋರ್ನ ಎಲ್ಲಿಡ್ಬೇಕೋ ಅಲ್ಲಿಟ್ರೆ ಸರಿ. ನಂಬಿಕೆ, ಪ್ರೀತಿ, ವಿಶ್ವಾಸಕ್ಕೆ ಖಂಡಿತ ಅರ್ಹರಲ್ಲ ಅವ್ರು. ನೋಡಿ ನಿಮ್ಮ ಒಳ್ಳೇತನ ಹ್ಯಾಗೆ ಉಪಯೋಗಿಸ್ಕಂಡ್ರು ತಂದೆ ಮಗ....'

'ಹೂಂರೀ ಬಂದೊಸ್ದರಾಗೆ ಹೊಟ್ಟೆ ಅರ್ಧಂಬರ್ಧಯಿದ್ದಾಗ ಎಲ್ರೂ ಹೇಳ್ದಂಗೆ ಕೇಳ್ಕಂಡೇ ಇರ್ತಾರೆ. ಯಾವಾಗ ಹೊಟ್ತುಂಬ ಬೀಳಾಕತ್ತಲ್ಲ ಅವರ ಶೇಪು, ಸೈಜು, ಲಕ್ಷಣ ಎಲ್ಲಾ ಒಮ್ಮೆಗೆ ಚೇಂಜ್ ಆಗ್ಬಿಡ್ತಾವ. ನೀವೇ ನೆನಪು ಮಾಡ್ಕೋರಿ ಅವ ಬಂದೊಸ್ದರಾಗ ಯಂಗಿದ್ದಂತ.....'

ಕ್ಷೋಭೆಗೊಂಡಿದ್ದ ಸರಸಳ ಮನಸ್ಥಿತಿಯನ್ನ ಮತ್ತಷ್ಟು ಉದ್ರೇಕಿಸುತ್ತಿದ್ದವು ಈ ಮಾತುಗಳು. 'ಹೌದು, ಬಂದಾಗ ಹೇಗಿದ್ದನವ....?' ಹಲ್ಲು ಕಡಿದಳು ಸರಸ.

ಸಬ್ಜೆಕ್ಟ್ ಇನ್ಸ್‌ಪೆಕ್ಟರ್ ಆಗಿದ್ದ ಶ್ರೀಧರ ಇನ್ಸ್‌ಪೆಕ್ಷನ್‌ಗೆಂದು ಪುರ್ಲಟ್ಟಿಯ ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ಕೊಟ್ಟ ದಿನ ಅಲ್ಲಿನ ಮುಖ್ಯೋಪಾಧ್ಯಾಯಿನಿ ಶಾರದಮ್ಮನವರ ಮನೆಯಲ್ಲಿ ನೋಡಿದ್ದ ಈ ಹುಡುಗ ಮುತ್ತಯ್ಯನನ್ನು. ತೆಳ್ಳಗೆ ಬೆಳ್ಳಗಿದ್ದ ಹುಡುಗನ ಸೂಜಿಗಲ್ಲಿನಂತಹ ಕಣ್ಣುಗಳು ಸೆಳೆದಿದ್ದವು. ಅದಕ್ಕನುಗುಣವಾಗಿ ಮೇಡಮ್ಮೂ ಅವನ ಬಗ್ಗೆ ತಿಳಿಸಿದರು.

ಪುರ್ಲಟ್ಟಿಯ ಪಾಲಯ್ಯನ ಮಗ ಮುತ್ತಯ್ಯ. ಕೂಲಿನಾಲಿ ಮಾಡಿ ಜೀವನ. ಎಂಟು ಮಕ್ಕಳ ನಿರ್ವಹಣೆ ಪಾಲಯ್ಯನಿಗೆ. ಮುತ್ತಯ್ಯನೇ ಚಿಕ್ಕವ. ಹೇಗೋ ಊರಲ್ಲಿಯೇ ಇದ್ದ ಶಾಲೆಗೆ ಎಲ್ಲರ ಜತೆ ಹೋಗಿ ಬರುತ್ತಿದ್ದ. ಆದರವ ಏಳನೇ ಕ್ಲಾಸು ಪಾಸು ಮಾಡಿಬಿಡ ಬಹುದೆಂಬ ಕಲ್ಪನೆ ಯಾರಿಗೂ ಇರಲಿಲ್ಲ. ಮುಂದಿನ ವಿದ್ಯಾಭ್ಯಾಸಕ್ಕೆ ಪರವೂರಿಗೆ ಹೋಗಬೇಕಿತ್ತು. ಮುತ್ತಯ್ಯ ಹಟ ಹಿಡಿದ. ಪಾಲಯ್ಯ ಅಸಹಾಯಕನಾಗಿ ಕೈಚಲ್ಲಿ ಕೂತ. ನಿರಾಶನಾದ ಮುತ್ತಯ್ಯನ ಸಂಕಟ ಹೇಳತೀರದು. ಅನ್ನ ನೀರು ಬಿಟ್ಟು ಕೊರಗಿದ. ಹೇಗಾದರೂ ಓದಲೇಬೇಕೆಂಬ ಹಟ. ಶಾರದ ಮೇಡಂ ಕೈಕಾಲಿಡಿದ.

'ಟೀಚರ್ ಅಪ್ಪಯ್ಯನಿಗೇಳ್ರಿ ಟೀಚರ್.... ನಾನೆಂಗನ ವೋದ್ಲೆಬೇಕು ಟೀಚರ್.... ಬೇಕರೆ ಯಾರ್ಮನೆಗನ ಸಂಬ್ಳಿದ್ದು ವೋದಕು ಸೈ ಟೀಚರ್...'

ಅಂತ ಗೋಗರೆಯುತ್ತ ಆಕೆ ಏನೂ ಹೇಳದಿದ್ದರೂ ತಾನೆ ಅವರ ಮನೆಯ ಕೆಲಸವನ್ನೆಲ್ಲ ಮಾಡಿಕೊಡುತ್ತ ಆಕೆ ಪ್ರಸನ್ನಳಾದ್ರೇ ಏನಾದರೂ ಸಹಾಯ ದಕ್ಕಿತೊ ಎಂಬ ಆಶಾಭಾವದಿಂದ ಕಣ್ಣಾಯಿಸುತ್ತ ಸದಾ ಅವರ ಹಿಂದೆ ಮುಂದೆಯೇ ಸುತ್ತುತ್ತ ಶಾರದಮ್ಮನನ್ನು ಸಂದಿಗ್ಧತೆಯಲ್ಲಿ, ತೊಳಲಾಟದಲ್ಲಿ ಸಿಕ್ಕಿಸಿಬಿಟ್ಟಿದ್ದನವ. ಆ ಹೊತ್ತಿಗೇ ಸರಿಯಾಗಿ ಬಂದಿದ್ದ ಶ್ರೀಧರನೆದುರು ಅವನನ್ನು ನಿಲ್ಲಿಸಿದ್ದಳು ಮೇಡಂ.

ದಿನವೂ ಆರರಿಂದ ಒಂಬತ್ತರ ಪೀಕ್ ಹವರ್ನಲ್ಲಿ ಮನೆಕೆಲಸದೊಡನೆ, ತನ್ನೊಡನೆ ಮಕ್ಕಳೊಡನೆ ಸರಸಳ ಗುದ್ದಾಟ, ಗೊಣಗಾಟ; ಆ ಸಮಯದಲ್ಲಿ ನಿತ್ಯವೂ ರಿಪೀಟ್ ಆಗ್ತಿದ್ದ ಅವಳ 'ಯಾರಾದ್ರು ಒಬ್ಬ ಚಿಕ್ಕ ಹುಡುಗನನ್ನೋ, ಹುಡುಗಿನೋ ನೋಡಿಂದ್ರೆ ಮೇಲಿನ

ಕೆಲಸಕ್ಕಾದ್ರೂ ಅಷ್ಟು ಸಹಾಯಕವಾಗುತ್ತೆ ನಂಗೇ....' ಎಂಬ ಮಾತುಗಳು ಮತ್ತೊಮ್ಮೆ ಕಿವಿಯಲ್ಲಿ ರಿಂಗುಣಿಸಿ ಆಗಲೇ ಪಾಲಯ್ಯನನ್ನು ಬರಹೇಳಿದ ಶ್ರೀಧರ.

ತುಂಬಿ ಬಂದ ಸಂತಸದಲ್ಲಿ ಕಣ್ತುಂಬಿ ಪಾಲಯ್ಯ ಶ್ರೀಧರನ ಕಾಲ ಮೇಲೆ ಬಿದ್ದು

'ಸಾಯೇಬ್ರೆ ಯಿಂಗಂಬ್ತಿನಿ ಅಂಬ್ತ ತ್ಯಪ್ಪು ತಿಳ್ಕಬ್ಯಾಡ್ರಿ.... ನನ್ ಮಗುನ್ನ ಹ್ವಟ್ಟೆಗಿಲ್ಲ ಅಂಬ್ತ ಕಳುಸ್ತಿಲ್ಲ. ವೋದ್ತೇನಿ ಅಂಬ್ತ ಜೀವನೆ ಬಿಡ್ತತೆ. ಇತ್ನೋಡ್ರಿ ಸಾಯೇಬ್ರೆ ನೀವೇಟನ ದುಡಿಸ್ಕಳ್ರಿ ಅಂಗೆಯ ಒಂತಾಸೊತ್ತು ವೋದಕು ಅವುಕಾಸ ಮಾಡಕ್ವಟ್ರೆ ಸಾಕು ನಮ್ಮಪ್ಪ....' ಅಂದ.

ಅವನ ಬೆನ್ನು ತಟ್ಟಿದ ಶ್ರೀಧರ 'ಅವನ ಚಿಂತೆ ಬಿಡು ಪಾಲಯ್ಯ' ಅಂತ ಭರವಸೆ ಕೊಟ್ಟ.

ನಿಧಿ ಸಿಕ್ಕವಳಂತೆ ಸಂಭ್ರಮಿಸಿದಳು ಸರಸ ಮುತ್ತಯ್ಯನನ್ನು ನೋಡಿ. ಆದರೆ ಶ್ರೀಧರ ಆಗಲೇ ಬ್ರೇಕ್ ಹಾಕಿದ

'ಮೇಡಂ ಓದಲೇಬೇಕೆಂಬ ಆಸೆಯಿಂದ, ಆ ಛಲಕ್ಕೆ ಮನೆಗೆಲಸಕ್ಕೆ ಬಂದಿರೋ ಹುಡುಗನೇ ಹೊರತು ತಿನ್ನೋಕೆ ಗತಿಯಿಲ್ಲ. ಬಡತನ ಅಂತಲ್ಲ. ನಿನ್ನ ಸಹಾಯಕನಾಗುವ ಜತೆಯಲ್ಲೇ ಅವನ ಓದೂ ಸಾಗಬೇಕಿದೆ. ಮನೆಗೆಲಸ ಪಾರ್ಟ್‌ಟೈಮೇ ಹೊರತು ನಾಟ್ ಫುಲ್ ಟೈಮು ನೆನಪಿರ್ಲಿ....'

ಮಾತಿನವರಸೆ ಕೀಟಲೆಯಂತಿದ್ದರೂ ಅದರೊಳಗೆ ಇದ್ದ ಗಂಭೀರತೆ ಅರಿವಾಗಿತ್ತು ಸರಸಳಿಗೆ.

'ಡೋಂಟ್ ವರಿ ಸಾರ್.....'

ಎಂದವಳೇ ತಾನೇ ಮುಂದಾಗಿ ತನ್ನ ಚಿಕ್ಕಪ್ಪನ ಖಾಸಗಿ ಶಾಲೆಯಲ್ಲಿ ಎಂಟನೇ ತರಗತಿಗೆ ಅವನಿಗೆ ಪ್ರವೇಶ ಕೊಡಿಸಿ ಓದಲಿಕ್ಕೆ ಎಲ್ಲಾ ಅನುವು ಮಾಡಿಕೊಟ್ಟಳು. ಮೂರೇ ತಿಂಗಳಲ್ಲಿ ಪುರ್ಲಟ್ಟಿಯ ಮುತ್ತಯ್ಯ ಎಲ್ಲರ ಮೆಚ್ಚಿನ ಮುತ್ತನಾದ. ಮನೆಯ ಪ್ರತಿ ಕೆಲಸಕ್ಕೂ ನೆರವಾಗಿ, ನೆರಳಾದ. ಮಕ್ಕಳನ್ನು ಆಡಿಸುವುದು, ಉಣ್ಣಿಸುವುದು, ತಾನು ಶಾಲೆಗೆ ಹೋಗುವಾಗ ಅವರನ್ನೂ ಕರೆದೊಯ್ದು ಬಿಡುವುದು. ಬರುವಾಗ ತನ್ನೊಟ್ಟಿಗೆ ಕರೆತರುವುದು. ಇದರೊಟ್ಟಿಗೆ ಅಡುಗೆಯನ್ನೂ ಮೆಲ್ಲಗೆ ಕಲಿತು ಅದಕ್ಕೂ ಒಗ್ಗಿಕೊಂಡ.

ಅವನು ಮನೆಯಲ್ಲಿ ಇರುವಷ್ಟು ಹೊತ್ತು ಸರಸಿಗೆ ಏನೂ ಮಾಡಲು ಬಿಡುತ್ತಿರಲಿಲ್ಲ. ಎಲ್ಲಕ್ಕೂ ತಾನೇ ಮುಂದಾಗುತ್ತಿದ್ದ. ಶ್ರೀಧರನ ಸಾಮಾನೆಲ್ಲ ಮುತ್ತನಿಗಲ್ಲದೆ ಬೇರಾರಿಗೂ ಕಾಣುತ್ತಲೂ ಇರಲಿಲ್ಲ. ಸಿಗುತ್ತಲೂ ಇರಲಿಲ್ಲ. ಮುತ್ತಣ್ಣನಿಲ್ಲದೆ ಮಕ್ಕಳು ಉಣ್ಣುತ್ತಲೇ ಇರಲಿಲ್ಲ. ಬೆಳಗಿನ ಕಾಫಿಯಿಂದ ರಾತ್ರಿ ಮಲಗುವ ಮುನ್ನಿನ ಹಾಲಿನವರೆಗೆ ಎಲ್ಲವನ್ನೂ ಚೊಕ್ಕವಾಗಿ ಮಾಡುತ್ತ ಶಾಲೆಗೂ ಹೋಗುತ್ತ, ಅದರಲ್ಲೆ ಬಿಡುವು ಮಾಡಿಕೊಂಡು ಓದುತ್ತ ಸರಸಳ ಮಕ್ಕಳಿಗೂ ಕನ್ನಡ ಕಲಿಸುತ್ತಿದ್ದ ಮುತ್ತ.

ಅವನು ಕೆಲಸ ಮಾಡುವ ಪರಿ, ಕಾಳಜಿ, ಮನೆಯವರ ಬಗೆಗಿನ ಕಳಕಳಿ ಅವನು ಬೇರೆ ಎಂಬ ಭಾವನೆ ಹುಟ್ಟಲೇ ಅವಕಾಶ ಕೊಡಲಿಲ್ಲ. ಆ ವಯಸ್ಸಿಗೆ ಅವನಲ್ಲಿದ್ದ ಅಗಾಧಶಕ್ತಿ, ಕೆಲಸದಲ್ಲೂ ಓದಿನಲ್ಲು ತೋರುತ್ತಿದ್ದ ಶ್ರದ್ಧೆ, ಅಮ್ಮನ ಸಾಂತ್ವನದಂತಹ ಕಾಳಜಿ, ಕಳಕಳಿ ಸರಸಳನ್ನು ಭಾವುಕಗೊಳಿಸುತ್ತಿದ್ದವು. ತುಂಬಿ ಬರುತ್ತಿದ್ದ ಅವಳ ಭಾವನೆಗಳನ್ನು ಅಡಗಿಸಿಡದೆ ಸರಸ

'ಮುತ್ತ ನೀನು ನಮ್ಮಮ್ಮ ಕಣೋ..... ಅದ್ಕೆ ದೇವ್ರು ನಿನ್ನ ಇಲ್ಲಿಗೇ ಕಳಿಸಿರೋದು....'

ಅಂದರೆ ಮುತ್ತ ಸಂಕೋಚಗೊಳ್ಳುತ್ತಿದ್ದ.

'ಎಂಥಾ ಮಾತಾಡ್ತಿ ಬಿಡಕ್ಕ.... ನೀನು ನಮ್ಮವ್ವ, ನಿನ್ಮುಂದೆ ನಾನೆಷ್ಟರವ್ನು....? ನಿನ್ನ ನೋಡ್ಕೆಂತ ನಾನು ನಮ್ಮೋರ್ನೆಲ್ಲ ಮರ್ತೆಬಿಟ್ಟೇನಿ...' ಎನ್ನುತ್ತಿದ್ದ.

ಈ ಬಾಂಧವ್ಯ ಒಡನಾಟ ನೋಡುವವರ ಕಣ್ಣುರಿಸುವಂತೆ ಇತ್ತು. 'ಮುತ್ತ ಇಲ್ದಿದ್ರೆ ಇವರ ಮನೇಲಿ ಬೆಳಕರಿಯೋದೇ ಇಲ್ಲ....' ಎಂದು ಮಾತ್ರ ಎಲ್ಲರೂ ಹೇಳುತ್ತಿದ್ದರು. ಯಾವುದೋ ಜನ್ಮದ ಅನುಬಂಧ ಮುತ್ತನನ್ನು ಈ ಕುಟುಂಬಕ್ಕೆ ಬೆಸದಿದೆ ಎಂಬಂತಿತ್ತು ಕೆಲಸವಿಲ್ಲದೆ ಮನೆಯಲ್ಲಿ ಸುಮ್ಮನೆ ಕೂತು ಬೋರ್ ಹೊಡೆಯುತ್ತಿದೆ ಎಂಬ ತಹತಹ ಕ್ರಮೇಣ ಸರಸಳಲ್ಲಿ ಹುಟ್ಟುವತನಕ.

ಸಮಯ ಸಿಕ್ಕುವುದೇ ಕಷ್ಟ ಎಂದು ಕೊರಗುತ್ತಿದ್ದ ಸರಸಗೆ ಸಮಯ ಕಳೆವುದು ಹೇಗೆ ಎಂಬ ಚಿಂತೆ ಬಾಧಿಸತೊಡಗಿತು. ಮಕ್ಕು, ಗಂಡ, ಮನೆ ಎಂದೇ ಸದಾ ಯೋಚಿಸುತ್ತ ಕಾಲ ಹಾಕುತ್ತಿದ್ದವಳಿಗೆ ಇತರ ಹವ್ಯಾಸಗಳೂ ಇರಲಿಲ್ಲ. ಈಕೆಯ ಸ್ನೇಹಿತೆಯರೆಲ್ಲ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಏನೆಲ್ಲ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಓಡಾಡುತ್ತಿದ್ದರೆ ತನಗದರಲ್ಲಿ ಆಸಕ್ತಿಯಿಲ್ಲ, ಸಮಯವಿಲ್ಲ ಎಂದು ಎಲ್ಲರನ್ನು ದೂರವೇ ಇಟ್ಟಿದ್ದಳು.

ದೂರ ಇದ್ದೇ ಸದಾ ಸರಸಳ ಮೇಲೊಂದು ಕಣ್ಣಿಟ್ಟಿದ್ದ ನೆರೆಮನೆಯ ಸವಿತ ಮಾತ್ರ ಇತ್ತೀಚಿನ ಅವಳ ನಿರಾಳತೆ, ಸದಾ ಆಕಳಿಸಿ ಮೈಮುರಿಯುತ್ತ ಓಡಾಡುವ ಸೋಮಾರಿತನ, ಸಿಕ್ಕಾಗ ಮೊದಲಿನಂತೆ ತಪ್ಪಿಸಿಕೊಳ್ಳದೆ ನಿಂತು ಮಾತನಾಡುವ ಬಿಡುವು, ಇದಕ್ಕೆಲ್ಲ ಕಾರಣನಾದ ಮುತ್ತ ಎಲ್ಲವನ್ನೂ ಗಮನಿಸಿ ಒಮ್ಮೆ ತನ್ನ ಬಳಗದೊಡನೆ ದಾಳಿಯಿಟ್ಟೇ ಬಿಟ್ಟಳು. ಒಬ್ಬ ಬಡ ಹುಡುಗನನ್ನು ಸಾಕುತ್ತ ವಿದ್ಯೆ ನೀಡುತ್ತಿರುವಂತಹ ಶ್ರೇಷ್ಠ ಕೆಲಸವನ್ನು ಎಲ್ಲರೂ ಒಕ್ಕೊರಲಿನಿಂದ ಹಾಡಿ ಹೊಗಳಿ ಈ ಬಾರಿಯ ಮಹಿಳಾ ಸಂಘದ ವಾರ್ಷಿಕೋತ್ಸವದ ಸಮಾರಂಭದಲ್ಲಿ ಅವರ ಕುಟುಂಬವನ್ನು ಸನ್ಮಾನಿಸುವುದಾಗಿ ಘೋಷಿಸಿದರು. ಮೊದಲಿಗೆ ಇದೆಲ್ಲಾ ಸಂಕೋಚವೆನಿಸಿದರೂ ಕ್ರಮೇಣ ಅವರ ಮಾತು, ಹೊಗಳಿಕೆ ಪರಿಣಾಮ ಬೀರದಿರಲಿಲ್ಲ ಸರಸಳ ಮೇಲೆ.

ಬೀಗುತ್ತಿದ್ದ ಸರಸಳನ್ನು ನೋಡಿ ನಕ್ಕ ಶೀಧರ್

'ಅಲೆ ಇವ್ಳ ಲೇ ನೀನೇನು ಅವ್ನಿಗೆ ಬಿಟ್ಟಿ ಸಹಾಯ ಮಾಡ್ತಿದ್ದಿಯಾ...? ಅದಕ್ಕೆ ಬದಲಾಗಿ ಅವ್ನು ಈ ಮನೆಗೆ ಎಷ್ಟು ದುಡೀತನೇಳೂ? ನಮ್ಮ ಸಮಾಜ ಸೇವೆಗೆ ನಮ್ಮ ಸ್ವಾರ್ಥ ಮುಖ್ಯ ಉದ್ದೇಶ. ನಿಜವಾದ ಸಮಾಜ ಸೇವೆಗೆ ಯಾವ ಸ್ವಾರ್ಥ, ಯಾವ ಉದ್ದೇಶವೂ ಇರಬಾರದು......' ಎಂದ.

'ಇರ್ಬಹೂದ್ರಿ ಆದ್ರೆ ನಾವೂನು ನೋಡಪ್ಪ ನಿನ್ನ ಕೆಲ್ಸಕ್ಕೆ ಇಷ್ಟು ದುಡ್ಡು. ಅದರಲ್ಲಿ ಏನಾದ್ರು ಮಾಡ್ಕೋ ಅಂದು ಬಿಡ್ಬಹುದಿತ್ತಲ್ಲಾ....' ಎಂದು ಸರಸ ಪ್ರತಿ ನುಡಿದಾಗ ಮಾತ್ರ ಬೆಚ್ಚಿದ. ಮಾತು ಮುಂದುವರಿದರೆ ಆಕೆಯ ಧಾಟಿ ಸಂಪೂರ್ಣ ದಿಕ್ಕುತಪ್ಪಿ ಹೋಗುವ ಎಲ್ಲ ಲಕ್ಷಣಗಳು ಕಂಡು ಮಾತಾಡದೆ ಸನ್ಮಾನಕ್ಕೆ ಸಮ್ಮತಿಸಿದ.

ಅಲ್ಲಾಕೆ ತಾನೋರ್ವ ಮಹಾನ್ ಮಹಿಳೆಯಂತ ಬೀಗುತ್ತಿದ್ದನ್ನು, ಎಲ್ಲರೆದುರು ಮುತ್ತನನ್ನು ಬಿಗಿದಪ್ಪಿಕೊಳ್ಳುತ್ತಿದ್ದನ್ನು, ಅವ ಆಕೆಯ ಅಪ್ಪುಗೆಯಲ್ಲಿ ಚಡಪಡಿಸಿದನ್ನು ಕಂಡು ಕಳವಳಪಟ್ಟ. ಆಗಲೇ ಆಕೆ ಆ ಸಂಘಕ್ಕೆ ಹೊಸ ಸದಸ್ಯೆಯಾಗಿ ಸೇರ್ಪಡೆಯಾದ ಘೋಷಣೆಯೂ ಆಯ್ತು.

ಘೋಷಣೆಯೊಂದಿಗೆ ಆ ಕ್ಷೇತ್ರಕ್ಕೆ ಕಾಲಿಸಿರಿದ ಸರಸ ಅಲ್ಲಿ ಸಿಕ್ಕ ಖ್ಯಾತಿಗೆ ತಾನೇ ದಂಗಾಗಿ ಮೈಮರೆತಳು. ಮನೆಯಲ್ಲಿ ಅತಿಥಿಗಳ ಸಂಖ್ಯೆ ಹೆಚ್ಚಾಗಿ, ಮೀಟಿಂಗ್‌ಗಳು ಸಿಕ್ಕಾಪಟ್ಟೆಯಾಗಿ ಸರಸ ಮನೆಯಲ್ಲಿರುವುದೇ ವಿರಳವಾಗಿ ಮನೆಯ ಜವಬ್ದಾರಿಯೆಲ್ಲ ಮುತ್ತನ ಮೇಲೆ ಬಿದ್ದಂತಾಯ್ತು ಹೆಚ್ಚುಕಮ್ಮಿ.

ಇತ್ತ ದೈಹಿಕವಾಗಿ, ಮಾನಸಿಕವಾಗಿ ಬೆಳವಣಿಗೆ ಹೊಂದುತ್ತಿದ್ದ ಮುತ್ತ ಮೊದಲಿನ ಹುಡುಗಾಟಿಕೆ, ಮುಗ್ಧತನ ಕಳಕೊಂಡು ಹೆಚ್ಚೆಚ್ಚು ಗಂಭೀರನಾಗುತ್ತಿದ್ದ. ಎಸ್.ಎಸ್.ಎಲ್.ಸಿ.ಯಲ್ಲಿ ಕಷ್ಟಪಟ್ಟು ಓದಿ, ಪ್ರಥಮ ದರ್ಜೆಯಲ್ಲಿ ಪಾಸಾಗಲೇಬೇಕೆಂಬ ಹಟ. ಅತ್ತಲೇ ಹೆಚ್ಚು ಗಮನ. ಒಮ್ಮೆ ಓದಿನಲ್ಲಿ ಮಗ್ನನಾದರೆ ಬೇರೇನೂ ಕಾಣಿಸದ, ಕೇಳಿಸದ ಏಕಾಗ್ರತೆ, ಮೈಮರೆವು. ಹಿಂದಿನಂತೆ ಅಕ್ಕನ ಒಂದು ಕೂಗಿಗೆ ಹಾರಿ ಹೋಗುತ್ತಿರಲಿಲ್ಲ ಈಗ. ನಾಲ್ಕೈದು ಬಾರಿ ಕೂಗಿದಾಗಲೇ ಎಚ್ಚರ.

'ಆಕ್ಟಿವ್ ಮೆಂಬರ್ ಆಫ್ ದಿ ಇಯರ್....' ಪ್ರಶಸ್ತಿ ಪಡೆದ ಸರಸಳ ಆಕ್ಟಿವ್‌ನೆಸ್‌ಗೆ ಅದೇಕೋ ಮುತ್ತನ ಈ ಗಾಂಭೀರ್ಯ ಅಡಚಣೆ ಅನ್ನಿಸಿದ್ದಲ್ಲದೆ ಅದು ಸೊಕ್ಕು, ಧಿಮಾಕಾಗಿ ತೋರತೊಡಗಿತು. 'ಸೀಮೆಗಿಲ್ಲದ ಓದಾಯ್ತು ಇವನ್ದು....' ಎಂಬ ಅನಿಸಿಕೆ. ಮಕ್ಕಳು ತಪ್ಪಿದಾಗ ಮೊದಲಿನ ಹಾಗೆ ತಿದ್ದಿದರೆ ಅಧಿಕ ಪ್ರಸಂಗ ಎಂಬ ಭಾವನೆ. ಸರಸ ದಿನೇದಿನೇ ಅಸಹನೆ, ಅಶಾಂತಿಯಿಂದ ಒಳಗೇ ಬೇಯತೊಡಗಿ ಜ್ವಾಲಾಮುಖಿಯಂತಾದಳು. ಮಗಳು ಸೃಷ್ಟಿಯ ಹುಟ್ಟುಹಬ್ಬ ಆಕೆ ಸ್ಫೋಟಗೊಳ್ಳಲು ಅವಕಾಶವನ್ನೂ ಕಲ್ಪಿಸಿತು.

ಮಗಳ ಮೂರನೆ ಹುಟ್ಟುಹಬ್ಬದ ಸಡಗರ ಸರಸಳಿಗಾದರೆ ಕೇವಲ ಒಂದು ವಾರವಿದ್ದ ಪ್ರಿಪರೇಟರಿ ಪರೀಕ್ಷೆಯ ಆತಂಕ ಮುತ್ತನಿಗೆ. ಆದರೂ ತೋರಿಸಿಕೊಳ್ಳದೆ ಎರಡು ದಿನ ಮೊದಲೇ ನಡೆಯುತ್ತಿದ್ದ ಸಮಾರಂಭದ ತಯಾರಿಗೆ ತಾನೂ ಕೈ ಜೋಡಿಸಿದ್ದ. ಇಡೀ ಮನೆಯನ್ನು ಗುಡಿಸಿ, ಸಾರಿಸಿ ಓರಣ ಮಾಡಿ ಅಣಿಗೊಳಿಸುವಲ್ಲಿ ಸಾಕಾಗಿಹೋಗಿತ್ತು. ಏನೋ ಹೇಳಿದರೆ ಇನ್ನೇನೊ ಮಾಡಿ ಬೈಸಿಕೊಳ್ಳುತ್ತಲೂ ಇದ್ದ.

ಶ್ರೀಧರ್ ಎಷ್ಟೋ ಸೂಕ್ಷ್ಮವಾಗಿ ಮುತ್ತನ ಮನಸ್ಥಿತಿಯ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರೂ ಅದನ್ನು ಅರ್ಥಮಾಡಿಕೊಳ್ಳುವ ತಾಳ್ಮೆ, ಮನಸ್ಥಿತಿ ಇರಲಿಲ್ಲ ಸರಸಗೆ. ಜತೆಯಲ್ಲಂದು ಅವ ಗೆಲುವಾಗಿರದೆ ಮುಖ ಊದಿಸಿಕೊಂಡಿದ್ದ ಎಂಬ ಬಲವಾದ ನಂಬಿಕೆ.

ಎಷ್ಟೇ ಪ್ರಯತ್ನಪಟ್ಟರೂ ತನ್ನ ಆತಂಕದಿಂದ ಹೊರಬರದಾದ ಮುತ್ತ. ಕಳೆದ ಮೂರು ದಿನಗಳಿಂದ ಪುಸ್ತಕ ತೆರೆಯಲೂ ಆಗಿರಲಿಲ್ಲ. ಹೆಚ್ಚಿನ ಅಂಕೆಯಲ್ಲಿ ತೇರ್ಗಡೆ ಹೊಂದುವ ಕನಸೊಂದೆಡೆ, ಮನೆಯಲ್ಲಿನ ಕೆಲಸ, ಉದ್ವಿಗ್ನ ವಾತಾವರಣ ಒಂದೆಡೆ. ನಡುವೆ ಸಿಕ್ಕು ನಲುಗಿಹೋಗುತ್ತಿದ್ದ.

ಎಲ್ಲಕ್ಕಿಂತಲೂ ಮಿಗಿಲಾಗಿ ಸರಸಳ ಬದಲಾದ ವರ್ತನೆ ಅವನಿಗೊಂದು ಆಘಾತ; ಅರಗಿಸಿಕೊಳ್ಳದಾಗಿದ್ದ. ಅವಳ ಬದಲಾದ ವರ್ತನೆಯಲ್ಲಿ ತನ್ನಾಸೆ, ಗುರಿ, ಕನಸೆಲ್ಲಾ ಮಣ್ಣಾಗುವ ಸೂಚನೆ ಕಂಡು ಭೀತನಾಗಿದ್ದ. ಶ್ರೀಧರನೋ ತನ್ನ ಕೆಲಸದಲ್ಲಿ ಮುಳುಗಿದರೆ ತೀರಿತು. ಈ ಎಲ್ಲಾ ಕಾರಣದಿಂದ ಅವ ಮತ್ತಷ್ಟು ಅಂತರ್ಮುಖಿಯಾಗಿ ಪಾರ್ಟಿಯ ಸಂಭ್ರಮವನ್ನು ಮರೆತಂತಿದ್ದ ಎಲ್ಲರೂ ಹೋದ ಮರುಘಳಿಗೆ ತನ್ನ ಪುಸ್ತಕ ತೆರೆದು ಕೂತೇಬಿಟ್ಟ. ಅಷ್ಟೇ ಸರಸ ಹುಚ್ಚಿಯಂತಾದಳು. ಮನೆಯೆಲ್ಲಾ ಚೆಲ್ಲಾಪಿಲ್ಲಿ, ಮುಸುರೆ ಮುಸುರೆ ಎನಿಸುತ್ತಿತ್ತು. ಓದುತ್ತಿದ್ದವನ ಪುಸ್ತಕವನ್ನು ಕಿತ್ತು, ಚೆಲ್ಲಾಡಿ ಕಿರುಚಿದಾಕೆ

'ಸೂಳೆಮಗನೆ ಎಷ್ಟೋ ಕೊಬ್ಬು ನಿಂಗೆ....? ಹೋಗ್ಲಿ ಪಾಪ ಅಂದ್ರೆ ತಲೆ ಮೇಲೆ ಕೂತಿದ್ದಿಯಾ....? ಹತ್ನೆ ಕ್ಲಾಸಿಗೆ ಬಂದ ತಕ್ಷಣ ನಿನಗಿಷ್ಟು ತಲೆತಿರುಗು ಅಂದ್ರೆ ಮುಂದೆ ಏನಾದೀಯ ನೀನು....? ನಮ್ಮನೆ ಅನ್ನ ತಿಂದು ನಮ್ಮನ್ನೆ ನಿರ್ಲಕ್ಷ್ಯ ಮಾಡ್ತಿಯಾ? ಕೂಗಿದ್ರೆ ಕೇಳಿಸ್ದೋನ ಹಂಗಿರ್ತಿಯ? ಬೋಳಿಮಗ್ನೆ ನಿನ್ಗೆ ಇನ್ನು ಸಲುಗೆ ಕೊಟ್ರೆ ಒಂದಿನ ನಮ್ಮನ್ನೆ ಏನಾದ್ರು ಮಾಡ್ಬಿಡ್ತಿಯ....'

ಶ್ರೀಧರನಿಗೂ ಸರಸಳ ಈ ರೂಪ ಹೊಸದು. ಬೇರೇನು ಮಾತನಾಡದೆ ಆಕೇನ ಸಮಾಧಾನಪಡಿಸಿ ರೂಮಿಗೆ ಕರೆದೊಯ್ದ. ಆದರೆ ಮುತ್ತ ತಲ್ಲಣಿಸಿ ಹೋಗಿದ್ದ. ರಾತ್ರೋ ರಾತ್ರಿ ಎಲ್ಲಾ ಬಿಟ್ಟು ಮನೆ ಸ್ವಚ್ಛಗೊಳಿಸಿದ. ಬೆಳಿಗ್ಗೆ ಅವರೆಲ್ಲ ಏಳುವ ಹೊತ್ತಿಗೆ ಮನೆ ಓರಣವಾಗಿತ್ತು. ಎಲ್ಲವೂ ನಿಚ್ಚಳವಾಗಿ, ನಿಶ್ಶಬ್ದವಾಗಿತ್ತು. ನೀರಿನ ಜುಳು ಜುಳು ಸದ್ದು, ಕಾಫಿಯ ಘಮಘಮ.... ಶಾರದೆಯ ಗುನುಗು..... ಊಹೂಂ ಏನೇನೂ ಎಲ್ಲ. ಸ್ಮಶಾನ ಮೌನ!

ಎಲ್ಲವೂ ಸರಸಳ ಕಣ್ಮುಂದೆ ಹಾಯಿತು..

ಬಾಯ್ಬಿಟ್ಟು ಏನೂ ಅನ್ನದೆ ಹೋದರೂ ತನ್ನ ಬೇಸರವನ್ನು ಮುಖದಲ್ಲಿ, ವರ್ತನೆಯಲ್ಲಿ ಅಡಗಿಸಿಡದಾದ ಶ್ರೀಧರ್, ಉಣ್ಣುವಾಗಲೆಲ್ಲಾ ಒಮ್ಮೆ ಮುತ್ತಣ್ಣನನ್ನು ಸ್ಮರಿಸುವ ಮಕ್ಕಳು, ಎಲ್ಲರ ದೃಷ್ಟಿಯಲ್ಲಿ ತನ್ನನ್ನವ ಕೇವಲ ಮಾಡಿದ ಎನಿಸಿ ಮತ್ತಷ್ಟು ವ್ಯಗ್ರಳಾಗಿ 'ಅವನಿಗೊಂದು ಗತಿ ಕಾಣಿಸದೆ ಬಿಡುವುದಿಲ್ಲ...' ಎಂದು ಮನದಲ್ಲೇ ಶಪಥ ಮಾಡಿದಳು.

ದುಡ್ಡು ಬಿಸಾಕಿದರೆ ಕೆಲಸದವರಿಗೇನು ಕೊರತೆ ಎಂದು ಬೇರೆ ಪ್ರಯತ್ನ ನಡೆಸಿದಳು. ಈ ಎಲ್ಲದರ ನಡುವೆ ಮಹಿಳಾ ಸಂಘದ ಅಧ್ಯಕ್ಷೆಯ ಸ್ಥಾನಕ್ಕೆ ಸ್ಪರ್ಧಿಸಿ ಗೆದ್ದಳು. ಆ ಸಂಭ್ರಮದಲ್ಲಿ ಓಡಾಟದಲ್ಲಿ ಮುತ್ತನನ್ನು ಮರೆಯಲು ಪ್ರಯತ್ನಿಸಿದರೂ ಮನೆಗೊಮ್ಮೆ ಕಾಲಿಟ್ಟರೆ ರಪ್ಪನೆ ರಾಚುವ ಖಾಲಿತನ, ಒಳಗೂ ಹೊರಗೂ ಏಗುವ ಕಷ್ಟ ಪೇಚಾಟ, ಶ್ರೀಧರನ ಅಪರೂಪದ ಮೌನ ಅವಳನ್ನು ಬಳಲಿಸುತ್ತಿದ್ದವು.

ಈ ಮಧ್ಯೆ ಅವಳ ಸ್ನೇಹಿತೆ ಮಿಸಸ್ ರಮಣನ್ ತುಸು ಗೆಲುವಿನ ವಿಚಾರ ತಿಳಿಸಿ 'ನಿಮ್ಗೆ ಹುಡುಗಿ ಆಯ್ತೂ ಅಂದ್ರೆ ನಮ್ಮೂರಲ್ಲಿ ಸಣ್ಣ ಹುಡುಗಿ ಕೆಲಸಕ್ಕಿದ್ದಾಳೆ ಕರ್‍ಕೊಂಡ್ಬರ್ತೀನಿ.....' ಅಂದಾಗ ಒಡನೆ ಒಪ್ಪಿದಳು. ಮುತ್ತನ ಜಾಗಕ್ಕೆ ಬೇರೊಬ್ಬರು ಬಂದರೆ ಶ್ರೀಧರ್ ಮೊದಲಿನಂತಾಗುವನು ಎಂಬ ನಂಬಿಕೆ, ನಿರಾಳ.

ಆದರೆ ಮಾತುಮಾತಿಗೂ ನಗುತ್ತ, ಮುದ್ದಾಗಿದ್ದ ಹತ್ತು ವರ್ಷದ ಪುಟ್ಟಮ್ಮ, ಅವಳ ತಂದೆಯನ್ನು ನೋಡಿದವನೆ ರೇಗಿಬಿಟ್ಟ ಶ್ರೀಧರ್.

'ಸ್ವಾಮಿ ಹ್ವಟ್ಟೆಪಾಡು.....' ಅಂತ ಆತ ಎಷ್ಟು ಬೇಡಿಕೊಂಡರೂ ಇವ ಅಲ್ಲಾಡಲಿಲ್ಲ. ಬದಲಿಗೆ ಅವನ ಕೈಗೆ ಐನೂರರ ನೋಟೊಂದನ್ನು ತುರುಕಿ

'ನಿನ್ನ ಮಗಳು ಅರೆಹೊಟ್ಟೇಲೆ ಇಷ್ಟು ಚೆನ್ನಾಗಿದ್ದಾಳೆ. ನಾಳೆ ನಮ್ಮನೆ ಅನ್ನ ತಿಂದು ಇನ್ನಷ್ಟು ಚಂದಾಗಿ, ಚುರುಕಾದ್ರೆ ಅದನ್ನ ಸಹಿಸೋ ಮನಸ್ಥಿತಿ ಇಲ್ಲಿಲ್ಲ. ನನ್ನ ಮಗ್ಳಿಗಿಂತ ನಿನ್ನ ಮಗ್ಳು ಸುಂದರವಾಗಿ ಕಂಡ್ಬಿಟ್ಟರೆ ನಾಳೆ ಈ ಮನೆ ನರಕವಾಗಿ ಆಕೆ ರಾತ್ರೋರಾತ್ರಿ ಬೀದಿಪಾಲು ಆಗೋ ಗತಿ ಬಂಧ್ಬಿಡುತ್ತೆ. ಬಡತನ, ಉಪವಾಸ ಇದ್ರೂ ಚಿಂತಿಲ್ಲ. ನಿನ್ ಮಗ್ಳು ನಿನ್ನೆದುರು ಜೀವಂತವಾಗಿರ್ತಾಳೆ.....' ಎಂದವರನ್ನು ಮುಲಾಜಿಲ್ಲದೆ ಕಳುಹಿಸಿಯೇಬಿಟ್ಟ.

ಅವನ ನಡತೆಯಿಂದ ಮೊದಲೇ ಕಂಗೆಟ್ಟವಳಂತೆ ನಿಂತಿದ್ದ ಸರಸ ಅವನ ಮಾತುಗಳು ತನಗೇ ಗುರಿಯಿಟ್ಟು ಬಂದದ್ದು ಎಂದರಿವಾದಾಗ ತಾಳ್ಮೆಗೆಟ್ಟು ಕೂಗಾಡಿದಳು.

'ತಿಂದು ಹೆಚ್ಚಾಗಿ ಅವ ಮನೆ ಬಿಟ್ಹೋದ್ರೆ ಅದ್ಕೆ ನಾನು ಕಾರಣ ಏನೂ....? ನಾನೇನೋ ಅವ್ನ ಕೊಂದಾಕಿದೀನಿ ಅನ್ನಂಗೆ ಮಾತಾಡ್ತಿರಲ್ರಿ ಇದ್ಯಾವ ಸೀಮೆ ನ್ಯಾಯ ನಿಮ್ಮದು.....?'

ಆಕೆ ಮಾತು ಮುಗಿಸುವುದನ್ನೆ ಕಾದಿದ್ದವನಂತೆ ಅವಳ ಕೈಗೊಂದು ಪತ್ರ ಕೊಟ್ಟು

'ಓದು....' ಅಂದ. ಮುತ್ತನ ಕೈಬರಹ!

'ಅಕ್ಕ ನನಗೆ ಗೊತ್ತು ನಿನಗೆ ನನ್ನ ಮೇಲೆ ಬಾಳ ಸಿಟ್ಟು ಬಂದೈತೆ ಅಂತ. ಮನೆ ಬಿಟ್ಟು ಬರುವಾಗ ಪ್ರಾಣವನ್ನೆ ಬಿಡುತ್ತಿದ್ದೀನಿ ಅಂತ ಅನಿಸುತ್ತಿತ್ತು. ಆದರೆ ದೇವರಾಣೆಗೂ ನಿನ್ನ ಮೇಲಿನ ಪ್ರೀತಿ, ಗೌರವದಿಂದಲೇ ಮನೆ ಬಿಟ್ಟಿದ್ದು ನಾನು. ನೀನು ನನ್ನ ಅಮ್ಮ ಅಂತಿದ್ದೆ. ಆದರೆ ನಾನು ಅದನ್ನ ಉಳಿಸಿಕೊಳ್ಳಲಿಲ್ಲ ಕಣಕ್ಕ. ನೀನು ಅವತ್ತು ಯಾಪಾಟಿ ಗಲಾಟಿ ಮಾಡಿಬಿಟ್ಟೆ. ನಿನ್ನ ಹಂಗೆ ನಾನು ಯಾವತ್ತೂ ನೋಡಿರಲಿಲ್ಲ. ಭಾಳ ಹೆದ್ರಿಕೆ ಆತು. ಅದುಕ್ಕೆ ಮನೆ ಬಿಟ್ಟೆ. ಒಂದೇ ಸಲ ಎಸ್.ಎಸ್.ಎಲ್.ಸಿ.ನಾಗೆ ಫಸ್ಟ್‌ಕ್ಲಾಸು ತಗಂಡೇ ಬಂದು ನಿನ್ನ ಕಾಲಿಗೆ ಬಿದ್ದು ಕ್ಷಮಿಸಕ್ಕ ಅನ್ನನ ಅಂತಿದ್ದೆ. ಆದರೆ ಹೆಡ್‌ಮಾಸ್ಟರು ಹಾಲ್ ಟಿಕೆಟ್ಟು ಕೊಡಲ್ಲ ಅಂದ್ರು....'

ಮುಂದಕ್ಕೆ ಓದಲಿಲ್ಲ ಅವಳು. 'ಓಹೋ, ಹಾಲ್ ಟಿಕೆಟ್ ಕೊಡಿಸಿ ಅಂತ ಈ ಹೊಸ ನಾಟಕ. ನೋಡಿ ಆ ಸೂಳೆಮಗ ಸತ್ತು, ನೆಗ್ದು ಬೀಳ್ತೀನಿ ಅಂದ್ರೂ ಹಾಲ್ ಟಿಕೆಟ್ ಮಾತ್ರ ಕೊಡಸಲ್ಲ ಅವ್ನಿಗೆ....' ಅವುಡುಗಚ್ಚಿ ಹೇಳಿದಳು ಸರಸ.

'ಛೆಛೆ! ಮಹಾನ್ ಸಮಾಜ ಸೇವಕಿಗೆ ಶೋಭಿಸುವಂತಹ ಮಾತಲ್ಲಮ್ಮ ಇವು. ಅದು ಅಲ್ದೆ ಮುತ್ತ ನಿನ್ನ ತನ್ನವ್ವ ಅಂತಿದ್ದ. ಕೆಟ್ಟ ಶಬ್ದ ಬಳಸಿ ಯಾಕೆ ನಿನ್ನ ನೀನೇ ಸುಮಾರು ಮಾಡ್ಕೊತಿ? ಅವ್ನಿಗೆ ಹಾಲ್ ಟಿಕೆಟ್ ಕೊಡಿಸೋ ಕೃಪೆ, ಅಗತ್ಯ ಎರಡೂ ಇಲ್ಲ. ಪರೀಕ್ಷೆ ಮುಗ್ದು ಆಗಲೇ ಎರಡು ತಿಂಗ್ಳಾಯ್ತು. ಮುತ್ತ ಸತ್ತು ಎರಡು ತಿಂಗ್ಳು ಮೇಲಾಯ್ತು.....'

ಶ್ರೀಧರನ ಮಾತಿಗೆ ಬದಲು ಹೇಳಲು ಬಾಯ್ತೆರೆದ್ರೆ ಅವಳ ಕೊರಳನ್ನು ಅಮುಕಿ ಹಿಡಿದ ಮಾತುಗಳು ಹೊರಬರಲಾರದೆ ಅಲ್ಲೇ ಹೂತು ಹೋದವು. ಉಸಿರು ಸಿಕ್ಕಿಕೊಂಡಂತೆ ಬಾಯಗಲಿಸಿ, ಕಣ್ಣಗಲಿಸಿ ಅವನನ್ನೆ ನೋಡಿದಳು.

'ನಿನ್ನ ಮಾತಿನ ಪ್ರಕಾರ ನಿನ್ನ ಚಿಕ್ಕಪ್ಪ, ಅವನ ಚೇಲ ಹೆಡ್ ಮಾಸ್ಟರ್ ಇಬ್ರೂ ಸೇರಿ ಹಾಲ್ ಟಿಕೆಟ್ ಕೇಳೋಕೆ ಹೋದವ್ನ ಫೀಸು ಕಟ್ಟಿಲ್ಲ, ಪರೀಕ್ಷೆಗೆ ಕೂಡುಸಲ್ಲ ಅಂತ ಬೈದು, ಬೆದರಿಸಿ ಕಳುಹಿಸಿದ್ರಂತೆ.

ಅವ್ನು ಗಾಬರಿಯಾಗಿ ಅವರಪ್ಪನತ್ರ ಓಡಿ ಹೋದ್ರೆ ಅವ ಏನೂ ಮಾಡೋಕಾಗ್ದೆ ಸಾಹೇಬ್ರನ್ನೇ ಹೋಗಿ ಕೇಳು ಇಲ್ಲ ಎಲ್ಲಾ ಬಿಟ್ಟಂದು ಕೂಲಿ ಮಾಡು....' ಅಂದ್ಬಿಟ್ನಂತೆ. ಅದೇ ರಾತ್ರಿ ನೋವು, ನಿರಾಶೆ ತಾಳಲಾರದೆ ಹುಡುಗ ಅವರೂರಿನ ಹುಣಸೇಮರಕ್ಕೆ ನೇಣು ಹಾಕ್ಕೊಂಡಿದ್ದಾನೆ. ಸಾಯೋಕ್ಮುಂಚೆ ಅದು ನಿನ್ಗೆ ಬರ್ದಿರೋ ಪತ್ರ.

ಇನ್ನೊಂದು ಜನ್ಮ ಅಂತಿದ್ರೆ ನಿನ್ನ ಹೊಟ್ಟೇಲಿ ಹುಟ್ತಾನಂತೆ ಪಾಪ! ಏನಂತಹ ಅನ್ಯಾಯ ಮಾಡಿದ್ನೆ ಆ ಹುಡ್ಗ ನಿನ್ಗೆ....? ನಿನ್ನೊಳಗೆ ಇಂತಹ ಒಂದು ಪಾಷಾಣ ರೂಪ ಅಡಗಿದೆ ಅಂತ ಸ್ವಲ್ಪ ಸುಳಿವು ಸಿಕ್ಕಿದ್ರೂ ನಾನವ್ನ ಇಲ್ಲಿಗೆ ಕರ್‍ಕೊಂಡೇ ಬರ್ತಿರ್ಲಿಲ್ಲ. ನಿನ್ ವಿಷ್ಯದಲ್ಲಿ ಮೋಸ ಹೋಗ್ಬಿಟ್ಟು ಆ ಹುಡ್ಗನ ಸಾವಿಗೆ ನಾನೇ ಕಾರಣ ಆಗ್ಬಿಟ್ಟೆ. ಈಗಾಗ್ಲೆ ಆ ಪಾಪಪ್ರಜ್ಞೆ ನನ್ನ ಸುಡ್ತ ಇದೆ. ಮತ್ತೆ ಅಂತಹದೆ ತಪ್ಪಾಗೋಕೆ ನಾನು ಬಿಡಲ್ಲ.

ನೀನು ಅಧ್ಯಕ್ಷೆಯಾಗಿ ಗೆದ್ದು, ಪಾರ್ಟಿ ಮಾಡ್ತಿದ್ದ ದಿನವೇ ವಿಷಯ ಗೊತ್ತಾಯ್ತು. ಆದ್ರೆ ಅವನ ಸಾವಿನ ಸುದ್ದಿ ನಿಮ್ಮ ಪಾರ್ಟಿಗೆ ಇನ್ನಷ್ಟು ರಂಗು ತರಬಹುದಂತ ಭಯಬಿದ್ದು ತೆಪ್ಪಗಾದೆ. ಒಂದು ಎಳೆಮನಸ್ಸಿನ ಮಿಡಿತ, ತಾಕಲಾಟ, ಸೂಕ್ಷ್ಮ ಅರಿಯಲಾರದ ವಿದ್ಯಾವಂತ, ಬುದ್ಧಿವಂತೆಯ ಸಮಾಜಸೇವೆಯ ಮೋಜು ನೋಡುತ್ತ ಸುಮ್ಮನಾಗಿಬಿಟ್ಟೆ.

ನಮ್ಮ ತಿಕ್ಕಲುತನ, ತೆವಲು, ಅಧಿಕಾರ ಪ್ರತಿಷ್ಠೆ, ಸಿಟ್ಟು, ಸೇಡಿಗೆ ಯಾವತ್ತೂ ನಮ್ಮ ಸರಿ ಸಮಾನರನ್ನು ಆರಿಸ್ಕೊಬೇಕು. ಆಗಲೇ ಅವುಗಳಿಗೂ ಬೆಲೆ, ನಮಗೂ ಬೆಲೆ. ಇಲ್ಲದೆ ಹೋದಾಗ ಅದೊಂದು ವಿಕೃತತೆಯ ಪರಾಕಾಷ್ಠೆ ಅಂಡ್ ಇಟ್ ಸರ್ಟನ್ಲಿ ನೀಡ್ಸ್ ಟ್ರೀಟ್‌ಮೆಂಟ್...' ಅನ್ನುತ್ತ ಆಗಿನ ಆಕೆಯ ಮನಸ್ಥಿತಿಯ ಬಗ್ಗೆ ಸ್ವಲ್ಪವೂ ಯೋಚಿಸಿದೆ ಹೋಗಿಬಿಟ್ಟ. ಚಳಿ ಬಂದವಳಂತೆ ನಡುಗುತ್ತಿದ್ದರೂ ಝಿಲ್ಲನೆ ಬೆವತಿದ್ದ ಸರಸ ತಣ್ಣಗಾಗಿದ್ದಳು.

ಅವರ ವೈವಾಹಿಕ ಜೀವನದ ಹತ್ತು ವರ್ಷಗಳಲ್ಲಿ ಎಂದೆಂದೂ ಶ್ರೀಧರ್ ಒರಟಾಗಿ ಮಾತಾಡಿದವನಲ್ಲ. ಕ್ಷಣವೂ ಕಡೆಗಣಿಸಿದವನಲ್ಲ. ಸದಾ ಜತೆಯಾಗಿದ್ದು ಸಹಕರಿಸುತ್ತಿದ್ದವ. ಮೊಟ್ಟಮೊದಲ ಬಾರಿಗೆ ಸರಸಗೆ ಒಬ್ಬಂಟಿ, ತಬ್ಬಲಿ ಅನಿಸತೊಡಗಿ ಬರುಬರುತ್ತ ಕೇವಲ ಅನಿಸಿಕೆಯಲ್ಲ ಎಂಬುದು ಮನವರಿಕೆಯಾಗುತ್ತ ಹೋಯ್ತು. ಮುತ್ತನ ಸಾವಿನ ಗಳಿಗೆಯ ತೊಳಲಾಟಗಳೆಲ್ಲ ಅಲ್ಲಿಂದ ಬಿಡುಗಡೆ ಪಡೆದು ತನ್ನಲ್ಲಿ ಲೀನವಾದಂತೆ ಭಾಸವಾಗುತ್ತಿತ್ತು. ಖ್ಯಾತಿ, ಸಮಾಜಸೇವೆ ಎಲ್ಲಾ ಮರೆತುಹೋಯ್ತು.

ಮತ್ತೆ ಮುತ್ತನಿಗಾಗಿ, ಶ್ರೀಧರನಿಗಾಗಿ ಹಂಬಲಿಸಿದಳು. ಆದರೆ ಮುತ್ತ ತಿರುಗಿ ಬಾರದ ಲೋಕಕ್ಕೆ ಪಯಣಿಸಿದ್ದರೆ ಶ್ರೀಧರ ತಿರುಗಿ ನೋಡದ ಸ್ಥಿತಿ ತಲುಪಿದ್ದ. ಯಾತನೆ ಸಂಕಟ ತಾಳಲಾರದೆ ಸರಸ ಆತ್ಮಹತ್ಯೆಗೆ ಪ್ರಯತ್ನಿಸಿದಳು. ಬಿಡಲಿಲ್ಲ ಶ್ರೀಧರ. ಆಕೆಯನ್ನು ಬದುಕಿಸಿದ. ಅವಳು ಎಚ್ಚರಗೊಂಡಾಗ

'ಇನ್ನೊಮ್ಮೆ ಈ ಪ್ರಯತ್ನ ಮಾಡಬೇಡ; ವ್ಯರ್ಥ. ಇವತ್ತು ನಿನಗೇನಾದ್ರೂ ಸಾವು

ಸಂಭವಿಸಿದ್ದಿದ್ರೆ ನನಗೆ ಆ ದೇವರ ಮೇಲಿನ ವಿಶ್ವಾಸವೇ ಹೊರಟುಹೋಗ್ತಿತ್ತು. ನೀನು ಮಾಡಿರೋ ಅನ್ಯಾಯದಿಂದ, ಪಾಪದಿಂದ ಬಿಡುಗಡೆ ಇಷ್ಟು ಸುಲಭ ಆಗ್ಬಿಟ್ಟಿದ್ರೆ ಆ ದೇವ್ರನ್ನ ನಾನೆಂದೂ ಕ್ಷಮಿಸ್ತಿರ್ಲಿಲ್ಲ. ಆದ್ರೆ ನೋಡು, ಸಾವಿಗೂ ಕ್ರಿಯೆ ಇದೆ. ಆದ್ದರಿಂದಲೇ ನಿನ್ನ ತಿರಸ್ಕರಿಸಿದೆ. ಸರಸ, ಮಾಡಿದ್ದನ್ನ ಜೀರ್ಣಿಸಿಕೊಳ್ಳೋದು ಬಲು ಕಷ್ಟ. ಆದ್ರೆ ಜೀರ್ಣಗೊಂಡಾಗಲೇ ಜೀವಕ್ಕರ್ಥ....' ಎಂದು ಹೇಳಿದ ಶ್ರೀಧರನನ್ನು ಗಾಢವಾಗಿ ನೋಡಿದಳು ಸರಸ.

ಮುಖದಲ್ಲಿ ಯಾವ ಭಾವನೆಯೂ ಗುರುತಿಸದಾದಳು. ಆದರೆ ಮಾತುಗಳು ಮೊನಚಾಗಿದ್ದವು. ಅವು ತಪ್ಪಿಸಿಕೊಳ್ಳುವ ಎಲ್ಲಾ ದಾರಿಗಳು ಮುಚ್ಚಿರುವುದು ಮನವರಿಕೆ ಮಾಡಿಕೊಟ್ಟವು. ಹಾಗೆಯೇ ನಿರರ್ಥಕವೆಂದಾಕೆ ಭಾವಿಸಿದ್ದನ್ನು ಬದುಕಲೂ ಅನುವು ಮಾಡಿಕೊಟ್ಟವು. ಸರಸ ಕಣ್ಮುಚ್ಚಿ ನಿರಾಳವಾದಳು.

✦ ✦

ಹುಯ್ಯೋ ಹುಯ್ಯೋ ಮಳೆರಾಯ

ಮಹಡಿ ಮೇಲಿನ ಕೋಣೆಯ ಕಿಟಕಿಯ ಸರಳುಗಳನ್ನು ಹಿಡಿದು ಇಂದೂ ನಿಂತಿದ್ದಳಾಕೆ. ಬೆಳಗ್ಗಿನಿಂದ ಒಂದೇ ಸಮ ಸುರಿಯುತ್ತಿದ್ದ ಮಳೆ ಮನೆಯ ಎದುರಿನ ಚರ್ಚ್ ಅನ್ನು, ಆ ಚರ್ಚ್ ಎದುರಿನ ಮೇರಿಯಮ್ಮನ ಮೂರ್ತಿಯನ್ನು ತೋಯಿಸುತ್ತಿತ್ತು. ಮೇರಿಯಮ್ಮ ಆಕೆಯನ್ನು ಸೆಳೆದಿದ್ದಳು. ಮನಕ್ಕೆ ನೆಮ್ಮದಿ ನೀಡುತ್ತಿದ್ದಳು. ಆ ಪ್ರೇಮಮಯ ಮುಖ, ವಾತ್ಸಲ್ಯಭರಿತ ನೋಟ ನಿತ್ಯ ಸಾಂತ್ವನ ನೀಡಿ,



ಅವಳನ್ನು ಸಂತೈಸುತ್ತಿದ್ದವು. ಮಳೆಯಲ್ಲಿ ತೊಯ್ಯುತ್ತಾ ನಿಂತ ಮೇರಿಯಮ್ಮನನ್ನು ನೋಡುತ್ತಿದ್ದರೆ ತನ್ನ ತವರು, ಬಾಲ್ಯ ನೆನಪಾಗುತ್ತಿದ್ದವು ಆಕೆಗೆ.

ಸುರಿಯುವ ಮಳೆಗೆ ಮೈಯೊಡ್ಡಿ, ಕಣ್ಮುಚ್ಚಿ ಗಿರ್ರನೆ ತಿರುಗುತ್ತಾ 'ಹುಯ್ಯೊ ಹುಯ್ಯೊ ಮಳೆರಾಯ..... ಕಾಯುತಿದೆ ಈ ಸಮುದಾಯ....' ಎಂದು ಹಾಡುತ್ತ ಕುಣಿಯುತ್ತಿದ್ದ ನೆನಪು. ತನ್ನನ್ನು ಒಳಗೆ ಕರೆದೊಯ್ಯಲು ಬರುತ್ತಿದ್ದ ಅಮ್ಮನ ಕೈಗೆ ಸಿಗದೆ ಆಕೆಯನ್ನು ಜೂಜಾಟ ಆಡಿಸುತ್ತಿದ್ದ ನೆನಪು. ಹಸಿಗೂದಲನ್ನು ಹರಡಿ, ಒಲೆಯ ಮುಂದೆ ಒಣಗಿಸುತ್ತ ಕೂತು, ಸುಟ್ಟ ಖಾರದ ಹಪ್ಪಳವನ್ನು ತಿಂದು ನೆಚ್ಚಗಾಗುತ್ತಿದ್ದ ನೆನಪು. ಅಮ್ಮನ ಕಾವಲು ಕಣ್ಣುಗಳನ್ನು ತಪ್ಪಿಸಿ ಮರುದಿನ ಮತ್ತೆ ಸುರಿಯುವ ಮಳೆಯ ತೆಕ್ಕೆಗೆ ಸರಿಯುತ್ತಿದ್ದ ನೆನಪು.

ಕಣ್ಮುಚ್ಚಿ ನೆನಪುಗಳ ಆಳದಲ್ಲಿ ಹೂತು ಹೋದವಳನ್ನು ಗಾಳಿಯ ಹೊಡೆತಕ್ಕೆ ಸಿಕ್ಕಿ ಬಂದು ಅವಳ ಮುಖಕ್ಕೆ ರಾಚಿದ ಮಳೆಯ ಹನಿ ಬಾಹ್ಯಲೋಕಕ್ಕೆ ಮತ್ತೆ ಎಳೆತಂದಿತು. ಕಿಟಕಿಯ ಸರಳುಗಳ ಹಿಡಿತ ಬಿಗಿ ಮಾಡಿ, ಮುಖವನ್ನು ಒತ್ತಿ ಮೇರಿಯಮ್ಮನತ್ತ ನೋಟ ಹರಿಸಿದಳು. ಹೃದಯ ನೋವಿನಿಂದ ಚೀರಿತು

'ಅಮ್ಮ ನನಗೆ ಬಿಡುಗಡೆ....?'

ಚರ್ಚ್‌ನ ಒಳಗಿನಿಂದ ಬಿಳಿಯ ನಿಲುವಂಗಿ ತೊಟ್ಟ ವಯಸ್ಸಾದ ಫಾದರ್ ಮೋಂಬತ್ತಿ ಹಿಡಿದು ಬರುತ್ತಿದ್ದರು. ಅವರನ್ನು ನೋಡಿದರೆ ಆಕೆಗೆ ಎಲ್ಲಿಲ್ಲದ ಭಕ್ತಿ. ಒಮ್ಮೆ ಅವರ ಮಡಿಲಲ್ಲಿ ತಲೆಯಿಟ್ಟು ಬಿಕ್ಕಬೇಕು. ಕಂಠಮಟ್ಟ ತುಂಬಿ ಹೊರಬರಲು ನೆಪಕ್ಕೆ ಕಾದಿರುವ ಸಂಕಟವನ್ನೆಲ್ಲಾ ಕಾರಬೇಕು. ರಾಗ ದ್ವೇಷ ವ್ಯಾಮೋಹವನ್ನೆಲ್ಲ ತೊರೆದು ಬರಿದಾಗಬೇಕು. ಬರಿದಾದ ಒಡಲು ಆ ದೇಗುಲದ ಪ್ರಶಾಂತತೆ; ಆ ಪ್ರೇಮ, ನಿರಾಳತೆಯನ್ನು ತುಂಬಿಕೊಳ್ಳಬೇಕು. ಏನೇನೋ ಬಯಕೆಗಳು.

ದೂರದ ರಸ್ತೆಯ ತಿರುವಿನಿಂದ ಮುಖ್ಯ ರಸ್ತೆಗೆ ಬಂದ ಕೆಂಪು ಕಾರನ್ನು ಕಂಡದ್ದೇ ಅ ಕ್ಷಣ ಬೇರೆಲ್ಲಾ ಮರೆಯಿತು. ತಟ್ಟನೆ ಕಿಟಕಿಯನ್ನು ರಪ್ಪನೆ ಮುಚ್ಚಿ ಕೆಳಕ್ಕೆ ಓಡಿದಳು. ಹಾಲ್‌ನಲ್ಲಿ ನಿಂತು ಎಲ್ಲವೂ ಬೆಳಗಿನಂತೆಯೇ ಸರಿಯಾಗಿ ಯಥಾಸ್ಥಾನದಲ್ಲಿ ಇರುವುದೋ ಎಂದೊಮ್ಮೆ ಪರೀಕ್ಷಿಸಿ, ಅಡುಗೆ ಮನೆಯತ್ತ ಧಾವಿಸಿದಳು. ಗುರುತು ಮಾಡಿದ್ದ ಪಾತ್ರೆಗಳಲ್ಲಿ ಎಲ್ಲಾ ಪದಾರ್ಥಗಳು ಆ ಮಟ್ಟಕ್ಕೇ ಸರಿಯಾಗಿದ್ದವು. ಸಾರು, ಒಂದು ಲೋಟ ಅಕ್ಕಿಯ ಅನ್ನ, ನಾಲ್ಕು ಚಪಾತಿ, ಒಂದು ಸವತೆಯ ಪಚಡಿ, ಎರಡು ಲೋಟ ನೀರ್ಮಜ್ಜಿಗೆ.

ನಂತರ ತನ್ನನ್ನೊಮ್ಮೆ ನೋಡಿಕೊಂಡಳು. ಉಡುಪು ಸರಿಯಾಗಿಯೇ ಇತ್ತು. ಆಗುವುದಾದರೂ ಏನದಕ್ಕೆ? ಹೊರಗಿನ ಗಾಳಿ, ಬೆಳಕು ಕೂಡ ಸೋಂಕದಂತಿರುವ ಇದು ಯಾತರಿಂದ ಮಾಸಬೇಕು? ಈಗಷ್ಟೇ ಅಲಂಕಾರ ಮಾಡಿಕೊಂಡಂತಿದೆ. ಕನ್ನಡಿಯ ಮುಂದಿನಿಂದ ಸರಿದು ಬರುತ್ತಿರುವಂತೆಯೇ ಹೊರಗೆ ಕಾರು ನಿಂತ ಸದ್ದು. ಕ್ಷಣ ನಂತರ ಬೀಗ ತೆಗೆಯುತ್ತಿರುವ ಸದ್ದು. ತೆರೆದ ಬಾಗಿಲು ಮರುಕ್ಷಣ ಹಾಗೇ ಮುಚ್ಚಿತು. ಎಂದಿನಂತೆ ಈಕೆಯ ತುಟಿ ಹಿಗ್ಗಿದವು. ಅವನ ಕೈಯಲ್ಲಿದ್ದ ಬ್ರೀಫ್‌ಕೇಸ್ ಇವಳ ಕೈಗೆ.

ಒಮ್ಮೆಲೇ ಅ ಕ್ಷಣ ಗುಡುಗು.

'ಏನಿದು ಈ ಅವತಾರ...? ಯಾಕೆ ನೀಟಾಗಿ ತಲೆ ಬಾಚಿಲ್ಲಾ....? ಅಕಸ್ಮಾತ್

ಯಾರಾದರು ನೋಡಿದ್ರೆ ನನ್ನ ಬಗ್ಗೆ ಏನಂದ್ಕೊತಾರೆ...? ಒಂದ್ವೇಳೆ ಕಾರಿನ ಡ್ರೈವರ್ ಏನಾದರೂ ನಿನ್ನ ಈ ಅವತಾರದಲ್ಲಿ ಕಂಡಿದ್ರೆ ಖಂಡಿತ ನಾಳೆ ಅದೊಂದು ದೊಡ್ಡ ಪ್ರಚಾರ ಆಗೋಗುತ್ತೆ. ನಾನು ನಿನ್ನ ಸರಿಯಾಗಿ ನೋಡ್ಕೊಳ್ತಿಲ್ಲಾ ಅಂತ ಆಡ್ಕೊಳ್ಳೋಕೆ ಶುರು ಮಾಡ್ತಾರೆ. ಆಯಮ್ಮ ತಲೇನೂ ಬಾಚದೆ ಏನೋ ಬೇಸರದಲ್ಲಿ ಇದ್ಲು ಅಂತ ನಿನ್ ಬಗ್ಗೆ ಸಿಂಪಥಿ ತೋರಿಸ್ತಾರೆ....'

ಮಳೆಯ ಶಬ್ದದಲ್ಲಿ ಗಂಡನ ಬಡಬಡಿಕೆಯನ್ನು ನಿರ್ಲಕ್ಷ್ಯ ಮಾಡಲು ಪ್ರಯತ್ನಿಸಿದರೂ ಸಾಧ್ಯವಾಗದೇ ಹೋಯ್ತು. ಮೆದುಳೆಲ್ಲಾ ಕಲಸಿದಂತಾಗಿ, ತಲೆ ತಿರುಗತೊಡಗಿತು. ಹೌದು ಯಾಕೆ ಗಮನಿಸಲಿಲ್ಲ...? ಹೇಗೆ ಗಮನ ಹೋದೀತು ತಲೆ ಇರುವುದೇ ಮರೆತಿರುವಾಗ!

ಎರಡೇ ಕ್ಷಣದಲ್ಲಿ ತಲೆಬಾಚಿ ನಿಂತರೂ ಗೊಣಗಾಟ ನಿಲ್ಲಲಿಲ್ಲ. ಗೊಣಗುತ್ತಲೇ ಫೋನಿನ ಲಾಕ್ ತೆರೆದ. ಅವನಿಲ್ಲದ ಸಮಯದಲ್ಲಿ ಟಿ.ವಿ. ನೋಡಬಾರದೆಂದು ಮೇನ್ ಸ್ವಿಚ್ ಆಫ್ ಮಾಡಿ, ಆ ಬೋರ್ಡಿಗೆ ಜಡಿದಿದ್ದ ಬೀಗ ತೆರೆದು ಸ್ವಿಚ್ ಆನ್ ಮಾಡಿದ. ಟಿ.ವಿ. ಶಬ್ದ ಮಾಡಿತು.... ಫ್ಯಾನ್ ತಿರುಗಿತು....ಲೈಟುಗಳು ಹೊತ್ತಿದವು.... ಅಂತೆಯೇ ಇವಳೂ ಚಲಿಸಿದಳು.

ಕಾಫಿ ಮಾಡಿ, ಎರಡು ಲೋಟಕ್ಕೆ ಅರ್ಧರ್ಧ ಸುರಿದುಕೊಂಡು ತಂದು ಟಿ.ವಿಯ ಮುಂದಿದ್ದ ಗಂಡನಿಗೊಂದು ಕೊಟ್ಟು ತಾನೊಂದು ಹಿಡಿದು ನಿಂತಳು. ಕಪ್ಪು ಖಾಲಿಯಾದೊಡನೆ ಅವುಗಳನ್ನೆತ್ತಿ ಒಳ ಒಯ್ದು ತೊಳೆಯಲಿಟ್ಟು ಅಡುಗೆಯನ್ನು ಬಿಸಿ ಮಾಡಿದಳು. ಅಷ್ಟೊತ್ತಿಗೆ ಟಿ.ವಿ.ಯಲ್ಲಿ ವಾರ್ತೆ ಮುಗಿದು ಅದು ಬಂದಾಗಿತ್ತು.

ಊಟದ ಮೇಜಿನ ಮೇಲೆ ಎಲ್ಲವೂ ಸಿದ್ಧಗೊಳ್ಳುತ್ತಿದ್ದಂತೆ ಅವ ಹಾಜರು. ಎದುರು ಬದುರು ಕೂತು ಊಟ ಮಾಡಿದರೂ ಅಗಿಯುವ, ನುಂಗುವ ಸದ್ದಿನ ಹೊರತು ಮತ್ತೊಂದಿಲ್ಲ. ಊಟದ ನಡುವೆ ಮಾತನಾಡಕೂಡದೆಂಬ ಕಟ್ಟಾಜ್ಞೆ, ತಾಯಿಯ ಮನೆಯಲ್ಲಿ ಎಲ್ಲರೂ ಅಂಗಳದಲ್ಲಿ ಕೂತು, ಹರಟೆ ಹೊಡೆಯುತ್ತಾ, ಸುರಿಯುವ ಮಳೆಯ ರಾಗಕ್ಕೆ ತಾಳ ಹಾಕುತ್ತಾ ಉಂಡರೆ ಅದು ಊಟ. ಊಟ ಮಾಡಿದ ತೃಪ್ತಿ.

ಈಗಲೂ ಅಂಗಳವಿದೆ ಹೃದಯವಿಲ್ಲ. ಮಳೆಯಿದೆ ರಾಗವಿಲ್ಲ. ತಟ್ಟೆಯ ಮುಂದೆ ಹೆಚ್ಚು ಹೊತ್ತು ಕೂರುವಂತಿಲ್ಲ. ಹತ್ತು ನಿಮಿಷ ಊಟಕ್ಕೆ. ಹತ್ತು ನಿಮಿಷ ಎಲ್ಲಾ ಒರೆಸಿ, ಶುಚಿ ಮಾಡಲು. ಒಮ್ಮೆ ಲೈಟ್ ಕೆಡಿಸಿದರೆ ನಿದ್ದೆ ಬರಲಿ, ಬಿಡಲಿ ಮಲಗುವ ಕೋಣೆ ಸೇರಬೇಕು.

ಮದುವೆಯಾದ ಹೊಸದರಲ್ಲಿ ಒಂದು ದಿನ ಯಾಕೋ ನಿದ್ದೆ ಬಾರದೆ ತವರಿನಿಂದ ತಂದಿದ್ದ ಕಾದಂಬರಿಯೊಂದನ್ನು ಹಿಡಿದು ಕೂತಿದ್ದಕ್ಕೇ ಜ್ವಾಲಾಮುಖಿಯೇ ಸಿಡಿದಿತ್ತು. ಕಾದಂಬರಿಯನ್ನು ಕಿತ್ತುಕೊಂಡು ಹರಿದು, ಚೂರು ಮಾಡಿ

'ಇಂಥಾ ಹಾಳುಮೂಳು ಓದೋದಿಕ್ಕೆ ನನ್ನ ಮನೇಲಿ ಪರ್ಮಿಷನ್ ಇಲ್ಲ. ಮಲಗೋ ಹೊತ್ತಿನಲ್ಲಿ ಓದಿದ್ರೆ ಕಣ್ಣು ಹಾಳು, ಅದರಲ್ಲಿರೋ ಕೆಟ್ಟ ಕೊಳಕು ವಿಚಾರವನ್ನೆಲ್ಲಾ ಓದಿ ಮನಸ್ಸು ಹಾಳು, ನಿದ್ದೆಗೆಟ್ಟರೆ ಆರೋಗ್ಯ ಹಾಳು. ಅನಾವಶ್ಯ ಹಣ ಸಮಯ, ಆರೋಗ್ಯ ಎಲ್ಲಾ ಹಾಳು. ಹಾಗೆಲ್ಲಾ ಫಾಲ್ತು ವಿಷಯಗಳಿಗೆ ನನ್ನ ಸಮಯ, ಹಣ ವ್ಯಯ ಆಗೋದು ನನಗಿಷ್ಟವಾಗೊಲ್ಲ. ಮಲಗುವ ಸಮಯದಲ್ಲಿ ಸುಮ್ಮನೆ ಮಲ್ಕೋ ಅಷ್ಟೇ.....'

ಎಂದು ಒದರಾಡಿ ತವರ್ಮನೆಯಿಂದ ತಂದಿದ್ದ ಪುಸ್ತಕಗಳನ್ನೆಲ್ಲಾ ಹೊತ್ತು ಒಯ್ದಿದ್ದಷ್ಟೇ ಗೊತ್ತು.

ಮಲಗಲು ಸಿದ್ಧವಾಗುತ್ತಿದ್ದಳು. ಅಷ್ಟೊತ್ತಿಗೆ ಎರಡು ದೊಡ್ಡ ಪ್ಯಾಕ್ ಹಿಡಿದು ಒಳ ಬಂದನವ.

'ಸಾಯಂಕಾಲ ನಿಮ್ಮ ತಾಯಿ ಆಫೀಸಿಗೆ ಫೋನ್ ಮಾಡಿದ್ರು, ನಾಳೆ ಶುಕ್ರವಾರ ಪೂಜೆಯಂತೆ. ಅರಿಶಿಣ ಕುಂಕುಮಕ್ಕೆ ಬರ ಹೇಳಿದ್ದಾರೆ....' ಎಂದು ಪ್ಯಾಕ್ ಕೈಗಿತ್ತು.

ಅದನ್ನಾಕೆ ತೆರೆಯಲಿಲ್ಲ ಹಾಗೆಯೇ ಒಳಗಿಟ್ಟಳು. ಅವಳಿಗೆ ಗೊತ್ತು ಅದೇನೆಂದು. ಹೊಸ ಸೀರೆ, ಚಿನ್ನದ ಸೆಟ್ಟು. ಪ್ರತಿಸಾರಿ ಅಮ್ಮನ ಮನೆಗೆ ಹೋಗುವಾಗಲೆಲ್ಲಾ ಹೀಗೆ ಹೊಸ ಸೀರೆ, ಹೊಸ ಒಡವೆ ಬರುತ್ತದೆ.

'ಇದೆಲ್ಲಾ ಯಾಕೆ' ಎಂದವಳೊಮ್ಮೆ ಪ್ರಶ್ನಿಸಿದ್ದಕ್ಕೆ

'ಹೀಗೇ ಹೋಗಿ ನಾನು ಭಿಕಾರಿ ಅಂತ ನಿಮ್ಮನೆಯವರ ಎದುರು ಅವಮಾನ ಮಾಡಬೇಕಂತ ಇದ್ದೀಯಾ....? ನನ್ನ ಪ್ರತಿಷ್ಠೆಗೆ ಕುಂದು ತರುವ ಯೋಚನೆಯೇನೂ...? ನನ್ನ ಶ್ರೀಮಂತಿಕೆ, ಘನತೆ, ಗೌರವಕ್ಕೆ ತಕ್ಕನಾಗಿ ನೀನು ಇರಬೇಕು. ಹಾಗೆಯೇ ಉಂಡು ಉಡಬೇಕು. ಸಿಕ್ಕಸಿಕ್ಕವರೊಡನೆ ಮಾತು, ಹರಟೆ, ವೃಥಾ ನಗು ನನಗೆ ಸ್ವಲ್ಪವೂ ಸೇರುವುದಿಲ್ಲ. ಮನಸ್ಸು ಹಾಳು ಮಾಡುವಂತಹ ಕೆಟ್ಟ ವಿಚಾರಗಳು, ಆಸೆಗಳು ಹುಟ್ಟುವಂತಹ ಯಾವುದೇ ಮಾಧ್ಯಮ ನಿನ್ನವರೆಗೆ ತಲುಪಬಾರದು. ನೀನೇ ಯಾವುದಕ್ಕೂ ಆಸೆ ಪಡಬಾರದು. ನಿನಗೇನು ಬೇಕೆಂಬುದನ್ನು ನಾನೇ ನಿರ್ಧರಿಸುತ್ತೇನೆ...' ಎಂದಿದ್ದವನು ಹಾಗೆಯೇ ನಡೆದುಕೊಳ್ಳುತ್ತಿದ್ದ.

ಅವನಿಗೆ ಯಾರಲ್ಲೂ ವಿಶ್ವಾಸ, ನಂಬುಗೆ ಇರಲಿಲ್ಲ. ಮನೆಯಲ್ಲಿ ಕೆಲಸ ಮಾಡುವವರೂ ಸಹ ಇವನು ಮನೆ ಬಿಡುವ ಹೊತ್ತಿಗೇ ಎಲ್ಲಾ ಮುಗಿಸಿ ಹೊರಡಬೇಕು. ಇವಳಾದರೂ ಏನೂ ಕೆಲಸ ಮಾಡುವಂತಿರಲಿಲ್ಲ. ಅದವನ ಪ್ರತಿಷ್ಠೆಗೆ ಕುಂದು.

ಪ್ರತಿಬಾರಿ ಮನೆಗೆ ಬರುವಾಗಲೆಲ್ಲಾ ಮಗಳು ಧರಿಸುವ ಭಾರೀ ಸೀರೆ, ಬೆಲೆಬಾಳುವ ಆಭರಣಗಳು, ಕಾರು ಅವಳು ಸುರಿದುಕೊಳ್ಳುತ್ತಿದ್ದ ಸುಖ ಸಮೃದ್ಧಿಯ ಸಂಕೇತವೆಂಬ ಭಾವನೆ ಮನೆಯವರಿಗೆ. ಅವರಿಗೆಲ್ಲಾ ಅಳಿಯ ದೇವರು. ಅವನ ಗುಣಗಾನ ಮಾಡುವುದೇ ಒಂದು ಕೆಲಸ. ನಿಟ್ಟುಸಿರಿಟ್ಟು ಕಣ್ಮುಚ್ಚಿದಳು. ಅಂದು ಗಲಾಟೆಯಾದಾಗಿನಿಂದ ಹಾಗೆಯೇ ಹಾಸಿಗೆಯಲ್ಲಿ ತಲೆಯಿಟ್ಟೊಡನೆ ಕಣ್ಮುಚ್ಚುತ್ತವೆ. ಆದರೆ ಒಳಗಣ್ಣು ತೆರೆಯುತ್ತದೆ. ಅವಲೋಕನ ಪ್ರಾರಂಭಿಸುತ್ತದೆ.

ಏನಿದೆ ಇಲ್ಲಿ? ಪರಸ್ಪರ ಪ್ರೀತಿ, ವಿಶ್ವಾಸ, ಸ್ನೇಹ ಉಹೂಂ ಏನೂ ಇಲ್ಲ. ಮನಸ್ಸುಗಳು ಒಂದಾಗಿ ಗೌರವಾದರಗಳು ಹುಟ್ಟುತ್ತಿಲ್ಲ... ಅರ್ಥಪೂರ್ಣವಾದ ನಿಕಟತೆಯಾಗಲಿ ಅನ್ಯೋನ್ಯತೆಯಾಗಲಿ ಸಾಧ್ಯವೇ ಆಗುತ್ತಿಲ್ಲ... ಭಾವನೆಗಳ ಬಂಜೆತನ ಇಲ್ಲಿ! ಅವಳ ಭಾವ ಪ್ರಪಂಚದ, ಮಾನಸಿಕ ಸ್ಥಿತಿಯ ಗೊಡವೆಯೇ ಬೇಡವಾಗಿದೆ ಅವನಿಗೆ.

ತಮ್ಮಿಬ್ಬರ ಸಂಬಂಧ ಕೇವಲ ದೇಹ ಪ್ರಧಾನ. ಕೇವಲ ಶಾರೀರಿಕ ಸುಖದ ಹಂತಕ್ಕೆ ಸೀಮಿತವಾಗಿ ಹಾಗೆಯೇ ಕೊನೆಗೊಳ್ಳುವಂತಿದೆ. ಇಲ್ಲಿ ತಾನೊಂದು ಪ್ರತಿಷ್ಠೆಯ ವಸ್ತು.

ಅವನ ಶ್ರೀಮಂತಿಕೆ, ಪ್ರತಿಷ್ಠೆಗೆ ತಾನೊಂದು ಪ್ರದರ್ಶನದ ವಸ್ತು. ಮನೆಯಲ್ಲಿನ ಇತರೆ ಎಲ್ಲಾ ವಸ್ತುಗಳಂತೆ ತಾನೂ ಅಲಂಕಾರಿಕ ಅಷ್ಟೇ. ದೈಹಿಕ, ಮಾನಸಿಕ ಅಸ್ಪೃಶ್ಯತೆಗೆ ಒಳಗಾದ ಕೇವಲ ಒಂದು ಭೋಗವಸ್ತು.. ಹಾಗಾದಲ್ಲಿ ಇಲ್ಲಿ ಏನೂ ಇಲ್ಲವೆ...?

ಯಾಕಿಲ್ಲ ಇದೆ ಎಲ್ಲವೂ ಇದೆ. ಸಕಲವೂ ಇದೆ ಸ್ವಾತಂತ್ರ್ಯವೊಂದನುಳಿದು. ಇಲ್ಲಿ ಖೈದಿಯಾಗಿ ಬಿಡುಗಡೆ ಬಯಸುವ ಮನಸು ಇಲ್ಲಿ ಉಸಿರುಗಟ್ಟುತ್ತಿದೆ. ಜೋರಾಗಿ ಚೀರಬೇಕೆನಿಸಿದರೂ ಚೀರಲಾರಳು. ಏನೋ ಅಸಹಾಯಕತೆ, ಅಧೈರ್ಯ. ಮುಂದೆ ಜೀವನ ಹೇಗೆಂಬ ಪ್ರಶ್ನೆ ಭೂತಾಕಾರ ತಳೆದು ಹೆದರಿಸಿ ಗಪ್ಪಾಗಿಸುತ್ತದೆ. ಮಗದೊಮ್ಮೆ ಇದು ಆತ್ಮಗೌರವದ ಪ್ರಶ್ನೆಯಲ್ಲವೇ ಎನಿಸುತ್ತದೆ. ಆ ಪ್ರಶ್ನೆಗೆ ಉತ್ತರ ಹುಡುಕುವ, ಉತ್ತರ ದೊರಕಿಸಿಕೊಳ್ಳುವ ಧೈರ್ಯ ಮಾಡಲೇ ಆಗುತ್ತಿಲ್ಲ. ಅದಕ್ಕೆ ಎಲ್ಲವನ್ನೂ ಸಹಿಸಿಕೊಂಡು ಮೌನವಾಗಿ, ಆತ್ಮಗೌರವ ಮರೆತು ಹೊಂದಾಣಿಕೆ ಎಂಬ ಅನಿವಾರ್ಯದಲ್ಲಿ ಬಂಧಿಯಾಗಿದ್ದಾಳೆ ತಾನು.

ಅಂದು ಅಂಗಡಿಯ ಬೀಗವನ್ನು ರಾತ್ರಿ ಕಳ್ಳರು ಒಡೆದಿದ್ದಾರೆ ಎಂಬ ಸುದ್ದಿ ಕೇಳಿ ಇವ ಮನೆಗೆ ಬೀಗ ಹಾಕುವುದನ್ನು ಮರೆತು ಓಡಿದ್ದ. ಅವನತ್ತ ಹೋದದ್ದೇ ಈಕೆ ಎದುರಿನ ಚರ್ಚಿನತ್ತ ಧಾವಿಸಿ ಒಳಹೊಕ್ಕವಳೇ ಫಾದರ್ ಎದುರು ಕುಸಿದಿದ್ದಳು. ಎರಡು ವರ್ಷ ಅದುಮಿಟ್ಟಿದ್ದ ನೋವು, ಸಂಕಟ, ದುಃಖದ ಕಟ್ಟೆಯೊಡೆದಿತ್ತು. ಆಕೆಯ ತಲೆಯ ಮೇಲೆ ಕೈಯಿಟ್ಟು ಮೆಲ್ಲಗೆ ಹೇಳಿದರು ಫಾದರ್

'ಮಗೂ, ನೀನೊಂದು ಜೀವ. ಅದಕ್ಕೂ ನೋವಾಗುತ್ತದೆ, ನೋವಾದರೆ ಅಳುತ್ತದೆ, ಪ್ರತಿಭಟಿಸುತ್ತದೆ, ಸಿಡಿದೇಳುತ್ತದೆ ಎಂಬುದನ್ನ ನೀನೇ ತೋರಿಸಬೇಕು. ಅದನ್ನು ಬಿಟ್ಟು ಜಡವಸ್ತುವಿನ ಹಾಗೆ, ಎಲ್ಲದಕ್ಕೂ ಬೇಕೆಂದ ಹಾಗೆ ಬಳಕೆಯಾಗುವ ಯಾವುದೋ ಸರಕಿನಂತೆ ನೀನೇಕೆ ಆಗಿಹೋಗಿದ್ದಿ....? ಎಲ್ಲವು ನಿನ್ನಲ್ಲಿಯೇ ಇದೆ ಮಗು. ಎಲ್ಲವೂ ನಿನ್ನ ಕೈಯಲ್ಲೇ ಇದೆ. ಆದರೆ ಇದೆ ಎನ್ನುವುದನ್ನು ಮರೆತಿದ್ದೀಯಷ್ಟೇ..'

ಅವಳು ಒಳಬಂದು ಹಾಲ್‌ನ ಸೋಫಾದ ಮೇಲೆ ಕೂತಳು. ಮುಂಬಾಗಿಲು ತೆರೆದೇ ಇತ್ತು. ಇವತ್ತು ಆಗಸ ಶುಭ್ರವಾಗಿತ್ತು. ಗುಡುಗು, ಮಿಂಚು ಏನೂ ಇಲ್ಲದೆ ಪ್ರಶಾಂತ ವಾಗಿತ್ತು. ಆದರೆ ಮನೆಗೆ ಬೀಗ ಜಡಿಯದೇ ಹೋದವನ ಮನಸ್ಸು, ಅದು ನೆನಪಾದಾಗಿನಿಂದ ಅಶಾಂತಿಯ ಮಡುವಾಗಿತ್ತು. ಹುಚ್ಚನಂತೆ ಬಡಬಡಿಸುತ್ತ ಕಾರು ಹತ್ತಿ ಮನೆಯತ್ತ ಹೊರಟಿದ್ದ. ಮುಂಬಾಗಿಲು ತೆರೆದೇ ಇದ್ದದ್ದನ್ನು ನೋಡಿ ಹಲ್ಲು ಕಡಿಯುತ್ತ ಒಳನುಗ್ಗಿದ. ಹಾಲ್‌ನಲ್ಲಿ ಸೋಫಾದ ಮೇಲೆ ಶಾಂತವಾಗಿ ಕೂತಿದ್ದಳಾಕೆ. ಹಿಂದಿನ ಹೆದರಿಕೆ, ಚಡಪಡಿಕೆ ಇರಲಿಲ್ಲ. ಎದುರು ನಿಂತವನ ನೋಟಕ್ಕೆ ನೋಟ ನೆಟ್ಟು ನಿಂತಿದ್ದಳು. ಉಳಿದಂತೆ ಎಲ್ಲವೂ ಯಥಾಸ್ಥಿತಿ.

ಸ್ವಲ್ಪ ತಡವರಿಸಿದರೂ ಜೋರಾಗಿಯೇ ಕೇಳಿದ.

'ಬಾಗಿಲಿಗೆ ಯಾಕೆ ಬೀಗ ಹಾಕ್ಕೊಳ್ಳಿಲ್ಲಾ....?'

'ಬೀಗದ ಕೈ ನನ್ನ ಬಳಿಯೇ ಇರೋವಾಗ ವ್ಯತ್ಯಾಸವೇನು?'

ಅವಳ ಮುಖದಷ್ಟೇ ಮಾತೂ ಶಾಂತವಾಗಿದ್ದವು. ಅವನಿಗೇನು ಹೇಳಬೇಕೋ

ತೋಚದಾಯ್ತು. ಅವಳ ಕೈಯಲ್ಲಿದ್ದ ಬೀಗದ ಕೈಯನ್ನು ಕಿತ್ತುಕೊಂಡು ಮಹಡಿಯೇರಿ ತನ್ನ ಕೋಣೆ ಸೇರಿದ. ಊಟಕ್ಕೂ ಕೆಳಗಿಳಿಯಲಿಲ್ಲ. ಬಾಗಿಲು ತೆರೆಯಲೂ ಇಲ್ಲ.

ರಾತ್ರಿಯಿಡೀ ನಿದ್ದೆಯಿಲ್ಲದೇ ಬೆಳಗಿನ ಜಾವ ನಿದ್ದೆ ಹತ್ತದ್ದರಿಂದ ಆಕೆ ಎದ್ದಿದ್ದು ಸ್ವಲ್ಪ ತಡ. ದಡಬಡನೆ ಎದ್ದು ಹೊರಬಂದರೆ ಅವನ ಕೋಣೆ ಬರಿದಾಗಿತ್ತು. ಇಡೀ ಮನೆ ಹುಡುಕಿದರೂ ಅವನ ಸುಳಿವಿಲ್ಲ. ಓಡುತ್ತಾ ಹೊರ ಬಂದರೆ ಕಾರೂ ಇಲ್ಲ. ತೋಟದ ಮಾಲಿ ಮಾದೇವಯ್ಯ ಈಕೆಯನ್ನು ನೋಡಿ.

'ಅವ್ವಾ ಸಾಹೇಬ್ರು ಆಗಲೇ ತಿಂಡಿ ತಿಂದು ಹೊಂಟೋದ್ರು...' ಅಂದ.

ಮೈಮೇಲೆ ತಣ್ಣಗೆ ಏನೋ ಬಿದ್ದಂತಾಗಿ ಬೆಚ್ಚಿ ನೋಡಿದಳು. ಮಳೆ ಹನಿ! ಒಂದೊಂದಾಗಿ ಬಿದ್ದ ಹನಿ, ಧಾರಾಕಾರವಾಗಿ ಸುರಿದು ಅವಳನ್ನು ತೋಯಿಸಿದಾಗ ಆ ಸ್ಪರ್ಶಕ್ಕೆ ಮೈಮರೆತು ಕಣ್ಮುಚ್ಚಿದಳು. ಎಷ್ಟೋ ದಿನಗಳಿಂದ ಕಾತರಿಸಿದ್ದ ಘಳಿಗೆಯದು. ಬಾಲ್ಯಕ್ಕೆ ಜಾರಿದ ಮನ ಹುಯ್ಯೋ ಹುಯ್ಯೋ ಮಳೆರಾಯ ಹಾಡಿದರೆ ದೇಹ ಕುಪ್ಪಳಿಸುತ್ತಿತ್ತು. ಇದ್ದಕ್ಕಿದ್ದಂತೆ ಮಿಂಚು, ಜೋರು ಗುಡುಗು. ಸದ್ದಿಗೆ ಬೆಚ್ಚಿ ಕಣ್ತೆರೆದಾಗಲೇ ಆಕೆಗೆ ಅರಿವಾದದ್ದು ಮುಂಬಾಗಿಲು ತೆರೆದೇ ಇತ್ತು.

✦ ✦

ಬೋರಜ್ಜಿ, ಬಸವ, ಹಂದಿ ಹಿಂಡು

ತಿಂಗಳ ಹಿಂದೆ ತಲೆಸ್ನಾನ ಮಾಡಿ, ಬಿಸಿಲಿಗೆ ಕೂದಲು ಆರಿಸುತ್ತಾ ಜಗಲಿಯ ಮೇಲೆ ಕೂತಿದ್ದೆ ಬಂದಳೀ ಬೋರಜ್ಜಿ ಬಗಲಲ್ಲಿ ಜೋಳಿಗೆ, ತಲೆ ಮೇಲೆ ಪಡಲಿಗೆ ಹೊತ್ತು, ಎಂದಿನಂತೆಯೇ 'ಒಂದೀಸು ನೀರು ಕೊಡವ್ವ ಕುಡಿಯಾಕೆ...' ಅಂದು ನನ್ನ ಎದುರಿಗೆ 'ಉಸ್....' ಅನ್ನುತ್ತ ಕೂತಿದ್ದಳು.

ಜೋಳಿಗೆ ಒಳಗಿಂದ ತೀರಾ ಮಾಗಿ ಕಪ್ಪಾಗಿ ಹೋಗಿದ್ದ ಎರಡು ಬಾಳೆಹಣ್ಣು ಹೊರ ತೆಗೆದು 'ನಮ್ ಬೀದಿ ಬಸ್ವ ಯಾಕೆ ಇಟೊತ್ತಾದ್ರು ಬರ್‍ವಲ್ಲಾ...' ಅಂದಳು.



'ನೋಡಜ್ಜಿ ಮರ್ತೆಬಿಟ್ಟಿದ್ದೆ.. ನಿನ್ ಬಸ್ವ ಹೋದ ಮಂಗಳವಾರ ನೀನು ಬಂದಿದ್ದಾಗ ಬಂದೋಗಿದ್ದು ಮತ್ತೆ ಈ ಕಡೆ ತಲೆ ಹಾಕಿಲ್ಲ. ಮೂರು ದಿನದ ಹಿಂದೆ ನಮ್ಮ ಸುಮಾ ಕಾಲೇಜಿಂದ ಬರೋವಾಗ ಬಸ್ ಸ್ಟಾಪ್ನಲ್ಲಿ ಆ ಕಲ್ಲು ಕಟ್ಟೆ ಇದೆಯಲ್ಲಾ ಅಲ್ಲಿ ಮಲಗಿದ್ನಂತೆ...' ನನ್ನ ಮಾತು ಕೇಳಿದ್ದೆ ಅಜ್ಜಿ ಚಡಪಡಿಸತೊಡಗಿದ್ದಳು.

'ಮೂರೊತ್ತು ಬೀದ್ಬೀದಿ ಸುತ್ತನೂ. ಯಂದೂ ಮಲುಗ್ದನಲ್ಲಾ. ಯೇನನಾಗಿದ್ದೀತಾ....? ವಂದೆಜ್ಜೆ ವೋಗ್ಬರನೇನು...?'

ನಾನು ಉತ್ತರಿಸುವ ಮುನ್ನವೇ ದೂರದಲ್ಲಿ ಪ್ರತ್ಯಕ್ಷನಾದ ಬಸವ. ನಮ್ಮನೆಯತ್ತಲೇ ಬರುತ್ತಿದ್ದ. ಆದರೆ ಯಾಕೋ ಕುಂಟುತ್ತಾ ಹೆಜ್ಜೆ ಇಡಲಾರದೆ ಇಡುತ್ತಿದ್ದಾನೇನೋ ಅನ್ನಿಸ್ತು.

'ಅಯ್ಯೋ ನನ್ ಸಿವ್ನೆ ನಾನೇಳುಲ್ಲೇನವ್ವ ಅವ್ನಿಗೇನೋ ಆಗೈತೆ ಅಂತ...' ಅಂದವಳೇ ಅಜ್ಜಿ ಅವನತ್ತ ಓಡಿದಳೆನ್ನಬೇಕು. 'ಅಯ್ಯೋ ಬರ್ತನೆ ಬಾರಜ್ಜಿ...' ನನ್ನ ಕೂಗು ಎಲ್ಲೋ ಗಾಳಿಯಲ್ಲಿ ಹೊರಟುಹೋಯ್ತು.

ಬೋರಜ್ಜಿ ಅವನ ಮೈ ಸವರಿದ್ದು, ಲೊಚಲೊಚ ಮುತ್ತಿಟ್ಟಿದ್ದು, ಬಾಲ ನೀವಿ ಕಾಲ ಬಳಿ ಕೂತು ಏನೋ ಪರೀಕ್ಷಿಸುತ್ತಿರುವುದು ಕಂಡಿತು. ಬಸವ ಅಜ್ಜಿಯ ಆರೈಕೆಗೆ ಕರಗಿದವನಂತೆ 'ಅಂಬಾ....ಅಂಬಾ...' ಎಂದು ಕರೆಯುತ್ತಿದ್ದ. ಆಕೆ ಅವನ ತಬ್ಬಿ, ತಬ್ಬಿ ಸಂತೈಸುತ್ತಿದ್ದಂತಿತ್ತು. ಅಂತೂ ಹತ್ತು ನಿಮಿಷಗಳ ನಂತರ ಇಬ್ಬರೂ ಮೆಲ್ಲನೆ ನಮ್ಮನೆಯ ಬಳಿ ಬಂದು ನಿಂತರು. ಕಣ್ಣಲ್ಲಿ ನೀರು ತುಂಬಿಕೊಂಡು ಅಜ್ಜಿ ತಳಮಳಿಸುತ್ತಿದ್ದಳು.

'ಯಾಕಜ್ಜಿ ಏನಾಯ್ತು...?' ನಾನು ಗಾಬರಿಗೊಂಡಿದ್ದೆ.

'ಅಲ್ನೋಡೆ ಭಾಗ್ಯಮ್ಮ ಅವ್ನ ಇಂಗಾಲು ಯಂಗೆ ಊದ್ಕೆಂಡವೆ.... ಕಾಲುಜ್ವರ ಬಂದವ್ಕಣೆ ಅಮ್ಮಾ ಒಂತೊಟ್ಟು ಸೀಮೆಣ್ಣೆ ಇದ್ರೆ ಕೊಡವ್ವ...' ಅಂಗಲಾಚುತ್ತಿದ್ದಳು ಅಜ್ಜಿ. ಬಸವನ ಸ್ಥಿತಿಯೇಕೋ ತೀರಾ ಹದಗೆಟ್ಟಿರುವಂತೆ ಅನಿಸುತ್ತಿತ್ತು ನನಗೆ. ಏನು ಮಾಡುವುದೋ ತಿಳಿಯದಾಯಿತು.

ಸೀಮೆಎಣ್ಣೆ ಮನೆಯಲ್ಲಿ ಇರಲಿಲ್ಲ. ಈಗ್ಯಾರೂ ಸಾಮಾನ್ಯ ಮನೆಯಲ್ಲಿ ಸೀಮೆಎಣ್ಣೆ ಇಡುವುದೂ ಇಲ್ಲ. ಅಜ್ಜಿಯೋ ದುಃಖವೇ ಮೈವೆತ್ತು ನಿಂತಿದ್ದಾಳೆ. ಬಸವನೊಮ್ಮೆ ಕ್ಷೀಣವಾಗಿ 'ಅಂಬಾ...' ಎಂದು ನರಳಿದಾಗಲೆಲ್ಲಾ ಆಕೆಯ ತಳಮಳ ಇಮ್ಮಡಿಸುತ್ತಿತ್ತು. ಎದೆಯೊಳಗಿನ ದುಃಖ ಉಕ್ಕುಕ್ಕಿ ಬಂದಂತೆ ಕಣ್ಣಲ್ಲಿ ನೀರು ಚಿಮುಕುತ್ತಿತ್ತು.

ಬಸವ ನಾವು ನೋಡುತ್ತಿದ್ದಂತೆಯೇ ನಿಲ್ಲಲಾರದೆ ಕೆಳಕ್ಕೆ ಕುಸಿದು ಹಾಗೆಯೇ ನೆಲದ ಮೇಲೆ ಉರುಳಿದ. ಅಜ್ಜಿ ರೋದಿಸುತ್ತಾ ಅವನನ್ನು ತಬ್ಬಿ ಹಿಡಿದಿದ್ದಳು. ಹಣ್ಣಾದ ಜಬ್ಬಲು ಜೀವ ಜರ್ಜರಿಸುತ್ತಿತ್ತು. ಬಸವನೋ ಕ್ಷಣಕ್ಷಣಕ್ಕೂ ಮೆತ್ತಗಾಗುತ್ತಿದ್ದ. ದನಿ ಉಡುಗಿದಂತೆಯೇ ಆಗಿ ನೋಟ ಮಾತ್ರ ಬೋರಜ್ಜಿಯತ್ತಲೇ ನೆಟ್ಟು ಜ್ವರದ ತಾಪದಿಂದಲೋ, ಕಾಲಿನ ನೋವಿನಿಂದಲೋ ಒಂದೇ ಸಮನೆ ತೇಕುತ್ತಿದ್ದ.

ಅಜ್ಜಿಯ ದೈನ್ಯ ನೋಟ ನನ್ನನ್ನು ನಮ್ಮನೆಯ ಹಿಂದಿನ, ಮುಂದಿನ ಎಲ್ಲಾ ಸಾಲು ಓಡಿಯಾಡಿಸಿದರೂ ಅಜ್ಜಿ ಕೇಳಿದ ಒಂತೊಟ್ಟು ಸೀಮೆಎಣ್ಣೆ ಸಿಗದೆ ಹೋಯ್ತು. ನನ್ನ ಅಸಹಾಯಕತೆ ಅರ್ಥವಾಯಿತೋ ಎಂಬಂತೆ ಬೋರಜ್ಜಿ 'ನಮ್ಮನೆತಾವ್ಕೆ ಯಾರನ

ಇಟ್ಗಂಡಿದ್ದೇಯಿರ್ತಾರೆ ಕಣವ್ವ ನಾನು ಯಿಂಗೋಗಿ ಯಿಂಗ್ಬರ್ತಿನಿ ಇವನ್ಯಾಕೆ ಒಂಚೂರು ನಿಗಾ ಇಟ್ಟಿರು...' ಅಂದವಳೆ ತನ್ನ ಗುಡಾರದತ್ತ ಹೆಜ್ಜೆ ಹಾಕಿದ್ದಳು. ಆಕೆ ಹೋದ ಹಾದಿಯನ್ನೇ ನೋಡುತ್ತಾ ನಿಂತಿದ್ದೆ.

ಕಾಲ ಬಳಿ ಏನೋ ಮಿಸುಕಾಡಿದಂತಾಗಿ ನೋಡಿದರೆ ಕೆಳಗೆ ಉರುಳಿದ್ದ ಬಸವ ಎದ್ದು ನೆಟ್ಟಕೆ ಕೂರುತಿದ್ದಾನೆ. ಅಜ್ಜಿ ಹೋದ ದಿಕ್ಕನ್ನೇ ನೋಡುತ್ತಾ 'ಅಂಬಾ...' ಎಂದು ಕರೆಯುತ್ತಿದ್ದಾನೆ. ಅವನು ಆಕೆಯನ್ನು ಹಿಂದಕ್ಕೆ ಕರೆಯುತ್ತಿರುವನೇನೋ ಎನಿಸಿತು.

ನಾನು ಪಕ್ಕದಲ್ಲಿ ಕೂತು ಮೈದಡವಿದೆ. ಮತ್ತೊಮ್ಮೆ 'ಅಂಬಾ...' ಎಂದ. ಈ ಬಾರಿಯಂತೂ ಎಲ್ಲೋ ಆಳದಿಂದ ಬಂದಂತಿತ್ತು ಅವನ ದನಿ. ನಾನು ಅವನ ಹಣೆ ಸವರಿದೆ. ಕಣ್ಣಲ್ಲಿನ ನೀರು ಕೆಳಗೆ ಹರಿಯುತ್ತಿತ್ತು. ಸ್ವಲ್ಪ ಹೊತ್ತು ಅದೇ ಭಂಗಿಯಲ್ಲಿ ಕೂತಿದ್ದು ಮತ್ತೆ ನೆಲಕ್ಕೆ ಉರುಳಿದ. ಅಗಲವಾಗಿ ತೆರೆದಿದ್ದ ಅವನ ಕಣ್ಣುಗಳು ಮಾತ್ರ ಅಜ್ಜಿಯ ಹಾದಿಯತ್ತಲೇ ನೆಟ್ಟಿದ್ದವು. ನಾನೂ ಅತ್ತಲೇ ನೋಡುತ್ತಾ, ಅವನ ಮೈ ಸವರುತ್ತಾ ಎಷ್ಟು ಹೊತ್ತು ಹಾಗೇ ಕೂತಿದ್ದೇನೋ ಅಜ್ಜಿ ಬಂದಾಗಲೇ ಎದ್ದದ್ದು.

'ಬಟ್ಲು ಕೊಡವ್ವ..' ಅಜ್ಜಿ ಕೇಳಿದಾಗ ತರಲು ಒಳಹೋದೆ. ನನ್ನ ಹಿಂದೆಯೇ ಅಜ್ಜಿಯ ಚೀತ್ಕಾರ ಕೇಳಿಸಿ ಹಾಗೆಯೇ ಹಿಂದಕ್ಕೋಡಿ ಬಂದೆ. ಅಜ್ಜಿ ಬಸವನ ದೇಹಕ್ಕೆ ತನ್ನ ತಲೆ ಚಚ್ಚಿ ಅಳುತ್ತಿದ್ದಾಳೆ. ತನ್ನೆರಡು ಕೈಗಳಿಂದ ಅವನನ್ನ ಬಾಚಿ ತಬ್ಬಿದ್ದಾಳೆ.

'ನೀನೂ ನನ್ನ ಬಿಟ್ಟು ಹ್ವಂಟೋದೇನಪ್ಪ ಬಸ್ವಾ.... ನನ್ವಟ್ಟೆಗುಟ್ಟಿದ ಮಗಿದ್ದಂಗ ಇದ್ಯಲ್ಲೋ.... ನನ್ದನಿ ಕೇಳ್ತಿದ್ದಂಗೆ ವೊಡೋಡಿ ಬರ್ತಿದ್ಯಲ್ಲೊ ಬಸ್ವಾ.... ಇನ್ಯಾಕ ನಾನ್ಯಾರ್ನ ಕರೀಲಿ, ಯಾರ್ನ ಮಾತಾಡುಸ್ಲೀ.... ನಾನೇನನ್ಯಾಯ ಮಾಡುದ್ನೆಲಾ ನಿನಿಗೇ....' ರಾಗವಾಗಿ ಹಾಡಾಡಿಕೊಂಡು ಅಜ್ಜಿ ಅಳುತ್ತಿದ್ದರೆ ಕೆಲವರು ನಗುತ್ತಿದ್ದರು. ಕೆಲವರು ಅಚ್ಚರಿ ಪಡುತ್ತಿದ್ದರು. ನಾನೂ ಅಜ್ಜಿಯೊಡನೆ ಮನದಲ್ಲೇ ಅಳುತ್ತಿದ್ದೆ.

ಅಜ್ಜಿಯದು, ಬಸವನದು ಹೆಚ್ಚುಕಮ್ಮಿ ವರುಷದ ನಂಟು. ಅದುವರೆಗೂ ಬೀದಿ ದನವೆಂಬ ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾಗಿ ತನ್ನ ಪಾಡಿಗೆ ತಾನು ಅಡ್ಡಾಡಿಕೊಂಡಿದ್ದ ಗೂಳಿ ಬೋರಜ್ಜಿಯ ಕಣ್ಣಿಗೆ ಬಿದ್ದದೇ ಬೀದಿ ಬಸವ ಎಂದು ನಾಮಕರಣಗೊಂಡು ಪ್ರತಿ ಶುಕ್ರವಾರ, ಮಂಗಳವಾರ ಅಜ್ಜಿಯೊಡನೆ ಆಕೆ ಹೋಗುವ ಮನೆಗಳಿಗೆಲ್ಲಾ ತಾನೂ ಅತಿಥಿಯಾಗಿದ್ದ. ತನಗೇನಾದರೂ ನೀಡುತ್ತಾರೋ ಇಲ್ಲವೊ ಅವನಿಗೆ ಮಾತ್ರ ಅವನ ಪಾಲಿನದನ್ನು ಕೊಡಿಸದೆ ಬಿಡುತ್ತಿರಲಿಲ್ಲ ಬೋರಜ್ಜಿ. 'ಯಾವದೊ ಜಲುಮದಾಗೆ ಬಸ್ವ ನನ್ವಟ್ಟೆಗ ಮಗನಾಗಿ ವುಟ್ಟಿರ್ಬೆಕು......' ಮಕ್ಕಳಿಲ್ಲದ ಕೊರಗನ್ನು ಹೀಗೆಂದುಕೊಂಡು ಮರೆಯಲು ಪ್ರಯತ್ನಿಸುತ್ತಿದ್ದಳೇನೋ ಆಕೆ.

ಅಂದು ರಾತ್ರಿ ಎಂಟೂವರೆ ತನಕ ನಮ್ಮನೆ ಜಗುಲಿ ಮೇಲೆ ಅಳುತ್ತಲೇ ಕೂತಿದ್ದಾಕೆಯನ್ನು ಸಮಾಧಾನಪಡಿಸಿ ನಮ್ಮನೆಯಿಂದ ಎರಡು ಕಿಲೋಮೀಟರ್ ದೂರವಿರುವ ಅವಳ ಗುಡಾರಕ್ಕೆ ಕರೆದೊಯ್ದು ಬಿಟ್ಟು ಬರುವ ಹೊತ್ತಿಗೆ ಸಾಕಾಗಿಹೋಗಿತ್ತು. ಆಕೆಯ ಗುಡಾರದ ಪಕ್ಕದಲ್ಲಿ ಮನೆ ಕಾಯುತ್ತಿದ್ದ ವಾಚಮನ್ ಮಲ್ಲೇಶಿಯ ಹೆಂಡತಿ

ನಿಂಗವ್ವನ್ನು ಕರೆದು, ಅಜ್ಜಿಯನ್ನು ಆಕೆಯ ಜವಾಬ್ದಾರಿಗೊಪ್ಪಿಸಿ ಬಂದಿದ್ದರೂ ಸೈತ ಮನಸ್ಸಲ್ಲಿ ಏನೋ ಅಸಮಾಧಾನ. ಕೆಟ್ಟ ಬೇಸರ,

ನಿಂಗವ್ವಗೆ ಅಜ್ಜಿಯನ್ನು ಮರುದಿನ ಮನೆಗೆ ಕರೆತರಲು ಹೇಳಿದ್ದೆ. ಆದರೆ ಇಬ್ಬರೂ ಪತ್ತೆಯಿಲ್ಲ. ಮೂರು ದಿನಗಳಾದರೂ ಅವರಿಬ್ಬರ ಸುಳಿವಿಲ್ಲ. ತಡೀಲಾರದೆ ಸುಮಳನ್ನು ಕಳುಹಿಸಿದ್ದಕ್ಕೆ ತಿಳಿಯಿತು ಅಜ್ಜಿ ಮರುದಿನವೇ ತನ್ನ ಬಟ್ಟೆಗಂಟು ಹೊತ್ತುಕೊಂಡು ಊರಿಗೆ ಹೊರಟು ಹೋದಳೆಂದು. ಆಕೆಯ ಊರಿನಲ್ಲಿ ಮುಂದಿನ ವಾರ ಹಿರಿಯರ ಹಬ್ಬವಂತೆ.. ಹಬ್ಬಕ್ಕೆ ಅವಳ ಬಳಗವೆಲ್ಲಾ ಸೇರುವುದಂತೆ. ಆಕೆಯ ಗಂಡ, ಅವಳ ಸವತಿಯೂ ಹಬ್ಬ ಮಾಡಿಸಿಕೊಳ್ಳುವ ಹಿರಿಯರಲ್ಲಿ ಸೇರಿದ್ದಾರಂತೆ... ಸವತಿಯ ಮಕ್ಕಳೂ ಬರುತ್ತಾರಂತೆ. ಈಕೆ ಸಾಧ್ಯವಾದರೆ ಅವರೊಡನೆ ಹೋಗಿ ಅವರೊಂದಿಗೇ ಇರಲು ತೀರ್ಮಾನಿಸಿದ್ದಾಳಂತೆ..

ಸುಮ ಬಂದು ಇಷ್ಟೆಲ್ಲಾ ಅಂತೆಕಂತೆ ತಿಳಿಸಿದಾಗ ನಾನು ನಿಟ್ಟುಸಿರಿಟ್ಟೆ. ಆ ಅಜ್ಜಿಯ ಅಜ್ಞಾನಕ್ಕೆ ನಗೆಯೂ ಬಂತು. ಹೆತ್ತ ಮಕ್ಕಳೇ ಅಪ್ಪ ಅಮ್ಮಂದಿರನ್ನು ಕಡೆಗಾಲದಲ್ಲಿ ನೋಡಿಕೊಳ್ಳುವುದು ದುಸ್ತರವಾಗಿರುವ ಕಾಲದಲ್ಲಿ ಯಾರೋ ಹೆತ್ತ ಮಕ್ಕಳು ತನ್ನನ್ನು ನೋಡಿಕೊಳ್ಳಿ ಎಂದೇ ಆಕೆ ಸದಾ ಹಂಬಲಿಸುತ್ತಿದ್ದಳು. ಆಕೆ ನಮ್ಮ ಮನೆಗೆ ಪಡಲಿಗೆ ಹಿಡಿದು ಬರಲು ಶುರುಮಾಡಿ ಹೆಚ್ಚುಕಮ್ಮಿ ವರುಷ. ವಾರದ ಪ್ರತಿ ಮಂಗಳವಾರ ಮತ್ತು ಶುಕ್ರವಾರ ದೇವರು ಹೊತ್ತಿರುವ ಆಕೆ ಊರಾಡುವುದು ಕಡ್ಡಾಯವಂತೆ.

ಈ ಊರಿಗೆ ಬಂದ ಹೊಸದರಲ್ಲಿ, ಹೊಸದಾಗಿ ಕಟ್ಟುವ ಕಟ್ಟಡಗಳನ್ನು ಕಾಯುವ ಕಾಯಕ ಮಾಡುತ್ತಿದ್ದ ಬೋರಜ್ಜಿಯ ಊರಿನವನೇ ಆದ ಮಲ್ಲೇಶಿಯ ಮುದಿ ತಾಯಿ 'ನಮ್ಮ ಕಷ್ಟಗಳೆಲ್ಲಾ ತೀರಲು ದೇವಿಯ ಮುದ್ರೆ ಹೊರಬೇಕು, ಆಕೆಯನ್ನು ನಿತ್ಯ ಪೂಜಿಸಬೇಕು, ಜೋಗತಿಯಾಗಿ ಊರಾಡಬೇಕು' ಎಂದೆಲ್ಲಾ ಬೋಧಿಸಿದ್ದರ ಫಲ ಇಂದು ಬೋರಜ್ಜಿ ಜೋಗತಿಯಾಗಿರುವುದು.

ಊರಿನಲ್ಲಿ ಬೋರಜ್ಜಿಗೆ ಆಕೆಯ ಬಳಗ ನೀಡುತ್ತಿದ್ದ ಕಿರುಕುಳ, ಒಂಟಿ ಹೆಣ್ಣಿನ ಜವಾಬ್ದಾರಿ ಇಷ್ಟವಿಲ್ಲದೆ ಆಕೆಯನ್ನು ತೊಲಗಿಸಲು ಅವರು ಹೂಡುತ್ತಿದ್ದ ಹುನ್ನಾರ ಕಣ್ಣಾರೆ ಕಂಡಿದ್ದವ ಮಲ್ಲೇಶಿ. ಆಕೆಯೂ ಆಗಲೇ ರೋಸಿ ಹೋಗಿದ್ದಳು. ಸರಿಯಾಗಿ ಹೊಟ್ಟೆಗೆ ಊಟವಿಲ್ಲ. ಒಳ್ಳೆಯ ಮಾತುಗಳಿಲ್ಲ. ಅಷ್ಟೇ ಅಲ್ಲದೆ ಕುಡಿತದ ದಾಸರಾಗಿದ್ದ ಆ ಜನರು ಈಕೆಯನ್ನು ಹಿಡಿದು ಬಡಿದಿರುವುದೂ ಉಂಟಂತೆ.

ಹೀಗೆಯೇ ಒಮ್ಮೆ ಬಡಿಸಿಕೊಂಡು ನಗರಕ್ಕೆ ಹೊರಟಿದ್ದ ಮಲ್ಲೇಶಿಯ ಬೆನ್ನು ಹತ್ತಿ 'ನಾನು ಬಿಕ್ಸೆನನ ಯೆತ್ಕೆಂಡು ಬದುಕ್ತಿನಿ ನನ್ನಿಂದ ಇಲ್ಲಿರದಾಗಲ್ಲಪ್ಪ...” ಅನ್ನುತ್ತಾ ಓಡಿ ಬಂದಿದ್ದ ಆಕೆ ಜೋಗತಿಯಾದ ನಂತರ ಮನೆ ಮನೆಗೆ ಕಂತೆ ಭಿಕ್ಷೆ ಎತ್ತಿಯೇ ಹೊಟ್ಟೆ ತುಂಬಿಸಿಕೊಳ್ಳತೊಡಗಿದ್ದಳು. ಎಲ್ಲಾ ಮನೆಗಳು ಮುಗಿಸಿ ಕೊನೆಯಲ್ಲಿ ನಮ್ಮ ಮನೆಗೆ ಬರುತ್ತಿದ್ದಾಕೆ ಅಂದು ಸಂಗ್ರಹವಾದ ಹಣವೆಷ್ಟೆಂದು ಎಣಿಸಿ, ಜೋಳಿಗೆಯೊಳಗೆ ಅಕ್ಕಿ ಎಷ್ಟಿದೆಯೆಂದು ನೋಡಿ, ಅದರಲ್ಲಿ ಮಲ್ಲೇಶಿಗೆ ಎಷ್ಟು ಕೊಡಬೇಕು ಎಂದೆಲ್ಲಾ ಲೆಕ್ಕಾಚಾರ ಹಾಕುತ್ತ ಕೂರುತ್ತಿದ್ದಳು.

ನಮ್ಮ ಸುಮ 'ಅವ್ರಿಗೆ ಕೊಡ್ಲೇಬೇಕೇನಜ್ಜಿ.....?' ಅಂತ ಕೇಳಿದ್ರೆ

'ಊಂನವ್ವ... ನನ್ನಿಂದ ಮಾಡ್ಕೆಂಡುಂಬದು ಆಗಲ್ಲ. ಒಂದ್ಯೆದು ರುಪ್ಯೆ ಮಲ್ಲೇಸಿ ಯೆಣ್ತಿ ನಿಂಗಮ್ಮನ ಕೈಗಿಟ್ರೆ ನನ್ನೆಂಗೋ ಜ್ವಾಪಾನ ಮಾಡ್ತಳೆ. ದಿನಾಲು ಮುದ್ದೆ ಮಾಡಿ ಉಂಬಕಿಕ್ತಳೆ, ಯಲ್ಡು ದಿನಕ್ಕೊಂದಪ ನೀರ್ಕಾಯ್ಸಿ ವ್ಯೆತಾಳೆ, ಬೆನ್ನು ಮ್ಯೆಯ್ಯಿ ತಿಕ್ಕಿ ಸೀರೇನೂ ಕುಕ್ಕಿಕ್ವಡ್ತಳೆ. ನಾನು ಪಕ್ಕುಕ್ಕೆ ಬ್ಯಾರೆ ಗುಡಾರ ಆಕ್ಕೆಂಡು ಇದ್ರೂ ಸ್ಯೆತ ಯೇನು ಮಾಡಿದ್ರೂ ನನ್ಬಿಟ್ಟು ತಿನ್ನಲ್ಲಕಣೇ ಆ ವುಡ್ಗಿ.... ವಟ್ಯಾಗುಟ್ಟಿದ್ ಮಗ್ಳಿಗಿಂತ ಯೆಚ್ಚು ಮಾಡಿ ನೋಡ್ಕೆಂತಳೆ...' ಎಂದರೂ ತನ್ನ ಹೊಟ್ಟೆಯಲ್ಲಿ ಮಕ್ಕಳು ಹುಟ್ಟಿಲ್ಲ ಎಂಬುದು ಆಕೆಯನ್ನು ಬಿಡದ ಕೊರಗು.

'ಯೇನ್ಮಡನವ್ವ ನನ್ವಟ್ಯೆಗೂ ಒಂದು ಉಳ ವುಟ್ಟಿದ್ರೆ ಈ ಪಡಿಪಾಟ್ಲು ಇರ್ತಿರ್ಲಿಲ್ಲ...' ಎಂದು ಸದಾ ಪರಿತಪಿಸುತ್ತಿದ್ದ ಬೋರಜ್ಜಿ ನಿಜಕ್ಕೂ ಸಣ್ಣಪುಟ್ಟ ಹುಳುಹುಪ್ಪಡಿಗಳಲ್ಲೂ ತಾಯ್ತನದ ಖುಷಿ ಹುಡುಕುತ್ತಿದ್ದಳು.

ಬೋರಜ್ಜಿಗೆ ಮದುವೆಯಾದಾಗ ಸಣ್ಣ ವಯಸ್ಸಂತೆ. ದಪ್ಪ ಮೀಸೆಯ, ಉದ್ದನೆಯ ಆಳು ಪರಶುರಾಮ. ಅವನ್ನು ನೋಡಿದರೇ ಈಕೆಗೆ ಮೈನಡುಕ. ಹೊಂದಿಕೊಳ್ಳಲು ಸ್ವಲ್ಪ ತಡವಾಯ್ತು ಅಷ್ಟೇ. ಅವ ಡ್ಯೂಟಿ ಮೇಲೆ ಒಂದು ಮುಂಜಾನೆ ಮಲ್ಲೂರಿಗೆ ಹೋದವನು ಸಂಜೆ ಬರುವಾಗ ಜೊತೆಯಲ್ಲಿ ಬೆಳ್ಳನೆಯ ಚೆಂದುಳ್ಳಿ ಚೆಲುವೆಯೊಬ್ಬಳನ್ನು ಕರೆತಂದೇ ಬಿಟ್ಟ. ಅಂದೇ ಪ್ರಾರಂಭವಾಯ್ತು ಈಕೆಗೆ ಚಿತ್ರಹಿಂಸೆ.

'ಅಯ್ಯೋ ಸಿವ್ನೆ ಆ ವಡ್ತ ಯಂಗಿದ್ದು ಅಂತೀಯವ್ವ..... ಕಾಲಿಸ್ಕು ಅನ್ನನು. ನಾನು ಕಾಲಿಸ್ಕೆಂತ ಕುಂತು, ಕುಂತು ಸಾಕಾಗಿ ತೂಕುಡಿಸಿದ್ನೆ ನ್ಯೆಪ ಮಾಡ್ಕೆಂಡು ಕಾಲ್ನಗಂಗೆ ಜಾಡ್ಸಿ ವದಿಯಾನು.. ನಾನು ಉಲ್ಡುಕ್ಕೆಂಡೋಗಿ ವಸ್ಲುಕೊಲ್ದುತಾವ ಬೀಳ್ತಿದ್ದೆ. ಕಾಪಿ ಮಾಡು ಅಂಬನು. ಕಾಪಿ ಕೈಗೆ ಕ್ವಟ್ರೆ ಒಂದ್ಗುಟುಕು ಕುಡ್ದು ಮಕ್ಕಂಗೇ ವುಗುಳಾನು. ಮದ್ಲುಮದ್ಲಿಗೆ ಅಂಗುಯಿಂಗು ವಂದೀಟು ಅಂಜರು ಅಳುಕರು. ಬರ್ತಾಬರ್ತಾ ನನ್ನೆದುರ್ಗೆ ಇಬ್ಬರು ಮಂಚುದ್ಮ್ಯಾಗೆ ಮಕ್ಕಣರು. ವಡಿಸ್ಕೆಂಡು, ಬಡಿಸ್ಕೆಂಡು ನೋಡ್ಬಾರ್ದುದ್ನೆಲ್ಲಾ ನೋಡ್ಕೆಂಡು ಯೇಟು ದಿನ ಸುಮ್ಕಿರ್ಲೇಳು? ವಂದಿನ ಕಿತ್ಗಂಡದೇ ಬಂದ್ಬುಟ್ಟೆ. ಅದೇ ಕಡೆ ಮತ್ತಾಕಡಿಗೆ ತಲೆ ಹಾಕ್ಲಿಲ್ಲ. ನಾನ್ವಂಟಿಯಾದೆ. ನನ್ನ ಗಂಡುನಿಂದೆ ಓಡಿ ಬಂದ್ ಸೂಳಿಗೆ ಮೂವರು ಮಕ್ಳು. ಅವ್ನ ಆಸ್ತಿಪಾಸ್ತಿಯೆಲ್ಲಾ ಅವುಳ್ದೆಯಾ. ಓಡಿ ಬಂದೋಳ್ಗೆ ಸಿರಿಸಂಪತ್ತು. ತಾಳಿ ಕಟ್ಟಿಸ್ಕೆಂಡು ಲಗ್ನಾದಳ ಬಾಯಕೆ ಮಣ್ಣು, ಯಂಗೈತ್ನೋಡವ್ವ ಪರಪಂಚ.....' ಎಂದು ವಾರಕ್ಕೊಮ್ಮೆಯಾದ್ರೂ ಬೋರಜ್ಜಿ ಹಿಂದಿನದೆಲ್ಲಾ ನೆನಸಿಕೊಂಡು ಕಣ್ಣೀರಿಡುತ್ತಿದ್ದಳು.

ಈಕೆ ಅಲ್ಲಿಂದ ತವರು ಸೇರಿದವಳು ಗಂಡ ತೀರಿ ಹೋದಾಗ ಮತ್ತೆ ಗಂಡನೂರಿಗೆ ಹೋದಳಂತೆ. ಮುತ್ತೈದೆ ಭಾಗ್ಯ ತೆಗೆದು ಹಾಕಲು ಎಲ್ಲರೂ ಸೇರಿ ಆಕೆಯನ್ನು ಕರೆದುಕೊಂಡು ಹೋದರಂತೆ. ಹೋದವರು ಅಲ್ಲಿಯೇ ಬಿಟ್ಟು

'ನಿನಿಗಿದರಾಗೆ ಪಾಲ್ಯೆತೆ ಬಿಡುಬ್ಯಾಡ ಇಲ್ಲೇ ಇರು....' ಎಂದು ಹೇಳಿ ತಮ್ಮ ತಲೆ ತೊಳೆದುಕೊಂಡರಂತೆ.

ಎಂದೋ ಹೋದಾಕೆ ಗಂಡ ಸತ್ತಾಗ ಬಂದು ಆಸ್ತಿಗಾಗಿ ಪಾಲು ಕೇಳಿದರೆ ಯಾರು ಸುಮ್ಮನಿದ್ದಾರು. ಅವರು ಆಕೇನ ಮನೆಯ ಕೆಲಸದವಳಿಗಿಂತ ಕಡೆ ಮಾಡಿದ್ದರಂತೆ. ಸವತಿ

ಬದುಕಿರುವವರೆಗೂ ಪರ್ವಾಗಿಲ್ಲ ಅನಂತರ ಅವಳ ಸ್ಥಿತಿ ನಾಯಿಪಾಡು ಆಗಿ ಕೊನೆಗೂ ಅಲ್ಲಿಂದಲೂ ಪರಾರಿಯಾಗಿ ಇಲ್ಲಿ ಬಂದು ಸೇರಿದ್ದಳು. ಸವತಿಯ ಮಕ್ಕಳನ್ನೇ ತನ್ನ ಮಕ್ಕಳೆಂದು ಭಾವಿಸಿ ಅವರ ಪ್ರೀತಿ ವಿಶ್ವಾಸಕ್ಕೆ ಎಷ್ಟೇ ಹಂಬಲಿಸಿದರೂ, ಅದಕ್ಕಾಗಿ ಈಕೆ ಏನು ಮಾಡಿದರೂ ಅವರು ಆದರಿಸುವುದಿರಲಿ, ಈಕೆಯನ್ನು ಕಡೆಗಣ್ಣಿನಿಂದಲೂ ನೋಡುತ್ತಿರಲಿಲ್ಲವೆಂಬುದೇ ಬೋರಜ್ಜಿಗೆ ಅತ್ಯಂತ ನೋವಿನ ಸಂಗತಿ. ಈಗಾಕೆ ಮತ್ತೆ ಅಲ್ಲಿಗೇ ಹೋಗಿರುವುದೇ ನಮ್ಮೆಲ್ಲರಿಗೂ ಕಳವಳದ ಸ್ಥಿತಿ. ಈಗಾಗಲೇ ತಿಂಗಳು ಮೀರಿ ಹೋಗಿತ್ತು ಆಕೆ ಹೋಗಿ. ನನಗೋ ಏನೋ ಕಳೆದುಕೊಂಡಂತಾಗಿತ್ತು.

ಅದಾವುದೋ ತಿಳಿಯದು ನನ್ನ ಮತ್ತು ಬೋರಜ್ಜಿಯ ನಡುವಿನ ಬಂಧ. ನಮ್ಮ ಮನೆಯೆದುರು ನಿಂತು 'ಭಾಗ್ಯಮ್ಮಾ.... ಅಮ್ಮಾ.... ಮಗಳೇ...' ಎನ್ನುವ ಆಕೆಯ ಕರೆಯೇ ನನ್ನನ್ನು ಆಕೆಯತ್ತ ಸೆಳೆದು, ಆತ್ಮೀಯತೆಯಲ್ಲಿ ಬಂಧಿಸಿತ್ತು.

ನಮ್ಮ ಮನೆಯ ಮುಂದಿನ ತುಳಸಿ ಗಿಡವಿರಲಿ, ಬೀದಿನಾಯಿಗಳಿರಲಿ, ಮನೆ ಮನೆಗೂ ಹಾರಿ ಕಿಟಕಿಗಳಿಂದ ಹಾಲು ಕುಡಿಯಲು ಹೊಂಚು ಹಾಕುವ ತುಡುಗು ಬೆಕ್ಕುಗಳಿರಲಿ ಎಲ್ಲರೂ ಬೋರಜ್ಜಿಯ ಪ್ರೀತಿ ಪಾತ್ರರು. ಮಕ್ಕಳಿಲ್ಲದ ಆಕೆಗೆ ತನ್ನ ಸುತ್ತಲಿನ ಎಲ್ಲವೂ, ಎಲ್ಲರೂ ಮಮತೆಯ ರೂಪಗಳು. ಇಂಥಾಕೆ ಮಮತೆ, ಮಮಕಾರವನ್ನೇ ತಿಳಿಯದ ಕಟುಕರನ್ನರಸಿ ಹೋಗಿರುವುದು ಎದೆಯಲ್ಲಿ ಮುಳ್ಳಿನಂತೆ ಚುಚ್ಚುತ್ತಿತ್ತು.

ಹೋದವಾರ ಪೇಟೆಯಲ್ಲಿ ಸಿಕ್ಕಿದ್ದ ಮಲ್ಲೇಶಿಯೂ ಅದೇ ಮಾತನ್ನಾಡಿದ್ದ. ಅವಳು ಖಾಲಿ ಬಿಟ್ಟು ಹೋಗಿದ್ದ ಹರಕುಮುರುಕು ಗುಡಾರದಲ್ಲಿ ಗಬ್ಬಾದ ಹಂದಿಯೊಂದು ಸೇರಿಕೊಂಡಿದ್ದು, ಅದು ಐದಾರು ಮರಿಗಳನ್ನೂ ಹಾಕಿದೆಯಂತೆ.

'ಎನ್ಮಾಡನಕ್ಕ ಅದುನ್ನ ಓಡಿಸಾಕೂ ಮನಸಾಗ್ದು. ಈವಜ್ಜಿ ಬಂದಾನ ಬರುವಳ್ಳು....' ಅಂದಿದ್ದ.

'ಏನೋ ಬಿಡು ಮಲ್ಲೇಶಿ ಆ ಹುಡುಗರು ಮನಸ್ಸು ಕರಗಿ ಅವಜ್ಜಿಗೆ ಆಸರೆ ಕೊಟ್ಟಿರಬಹುದೇನೋ ಇಲ್ಲಾಂದಿದ್ರೆ ಇಷ್ಟೊತ್ಗೆ ಬಂದಿರೋಳು. ಎಲ್ಲೋ ಪಾಪ ಸುಖವಾಗಿದ್ರೆ ಸಾಕು.....' ಅಂದು ಬಂದವಳು ಬೋರಜ್ಜಿಯನ್ನು ಮರೆತಿದ್ದೆ.

ಇವತ್ತು ಸುಮಾಗೆ ಬೆಳಿಗ್ಗೆ 8-30ಕ್ಕೆ ಕ್ಲಾಸು ಇದ್ದುದರಿಂದ ನನ್ನ ಕೆಲಸವೂ ಬೇಗ ಮುಗಿದಿತ್ತು. ಅಂದಿನ ಪೇಪರನ್ನೆತ್ತಿಕೊಂಡು ಜಗುಲಿ ಮೇಲೆ ಕೂತೆ. ಎಳೆ ಬಿಸಿಲು ಮೈಗೆ ಹಿತವೆನಿಸುತ್ತಿತ್ತು. ಇದ್ದಕ್ಕಿದ್ದಂತೆ ಹೊರಗೆ ಬೀದಿಯಲ್ಲಿ ನಾಯಿಗಳು ಜೋರಾಗಿ ಒಂದೇ ಸಮನೆ ಬೊಗಳತೊಡಗಿದವು. ನಾನು ಕಲ್ಲೊಂದನ್ನು ಎತ್ತಿಕೊಂಡು ಗೇಟು ತೆರೆದು ಆ ನಾಯಿಗಳನ್ನು ಓಡಿಸಲು ಬೀಸಿ ಒಗೆದೆ. ಚಲ್ಲಾಪಿಲ್ಲಿಯಾಗಿ ಓಡಿದವು. ಯಾಕ್ಹೀಗೆ ಬೊಗಳಿದವು ಎಂದು ತಲೆಯೆತ್ತಿ ಪಕ್ಕಕ್ಕೆ ತಿರುಗಿದರೆ ನಮ್ಮನೆ ಸಾಲಿನ ಕೊನೆಯ ಮನೆ ಮುಂದೆ ಅದೇ ಪಡಲಿಗೆ ಹೊತ್ತು, ಜೋಳಿಗೆ ಇಳಿಬಿಟ್ಟು ನಿಂತಿದ್ದಾಳೆ ಬೋರಜ್ಜಿ! ಕೈಯಲ್ಲೊಂದು ಕೋಲು ಹಿಡಿದು ಅಲ್ಲಿದ್ದ ಒಂದೆರಡು ನಾಯಿಗಳನ್ನು ಅದರಿಂದ ಹೆದರಿಸಿ

ಓಡಿಸುತ್ತಿದ್ದಾಳೆ....! ಅರೆ ಇದ್ಯಾಕೆ ಎಂದುಕೊಂಡು ನಾನು ಮತ್ತಷ್ಟು ಮುಂದಕ್ಕೆ ಹೋಗಿ ನೋಡಿದೆ. ಅಲ್ಲಿತ್ತು ಎಲ್ಲಕ್ಕೂ ಉತ್ತರ.

ಅಜ್ಜಿಯ ಹಿಂದೆ ಹಂದಿಯ ಹಿಂಡು. ಆ ಮರಿಗಳಿಗೆ ಯಾರೂ ತೊಂದರೆ ಮಾಡದಿರಲೆಂದು ಕೈಯಲ್ಲಿ ಕೋಲು ಹಿಡಿದು ಬಂದಿದ್ದಾಳೆ ಅವುಗಳ ರಕ್ಷಣೆಗೆ. 'ಬೋರಜ್ಜೀ....' ನಿಂತಲ್ಲಿಂದಲೇ ಜೋರಾಗಿ ಕೂಗಿದೆ. ಆದರೆ ಆಕೆ ಕೇಳಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಆ ಮನೆಯವರು ಕೊಟ್ಟ ಯಾವುದೋ ಪದಾರ್ಥವನ್ನು ತನ್ನ ಹಿಂದಿದ್ದ ಹಂದಿ ಮರಿಗಳಿಗೆ ಹಂಚುತ್ತಿದ್ದಳು. ಮಧ್ಯೆ ಮಧ್ಯೆ ಕೋಲಿಡಿದು ಯಾರೂ ಇವರ ತಂಟೆಗೆ ಬಾರದಂತೆಯೂ ನೋಡಿಕೊಳ್ಳುತ್ತಿದ್ದಳು. ಅವಳದೇ ಪ್ರಪಂಚದಲ್ಲಿ ಸಂಪೂರ್ಣ ಮುಳುಗಿದ್ದ ಆಕೆಯನ್ನು ಗಾಢವಾಗಿ ನೋಡಿದೆ. ಬಸವನನ್ನು ಕಂಡ ಪ್ರಥಮದಲ್ಲಿ ಆಕೆಯಲ್ಲಿದ್ದ ಅದೇ ಹುರುಪು, ಜೀವನೋತ್ಸಾಹ ತುಂಬಿದ ಮಮತೆಯ ಸೆಲೆ ಪುಟಿಯುತ್ತಿತ್ತು. ಅದಕ್ಕೆ ಭಂಗ ತರಲು ಇಚ್ಛಿಸದೆ ಮೆಲ್ಲನೆ ಅಲ್ಲಿಂದ ಸರಿದುಕೊಂಡೆ.

✦ ✦

ದೂಪ್ದಳ್ಳಿ ಸೆಕ್ಸಿ ದುರುಗ

ರಾತ್ರಿಯೆಲ್ಲಾ ಲಕ್ಷ್ಮಿಯ ಅರಚಾಟವೇ ಅರಚಾಟ. ಆ ಅರಚಾಟ ಕೇಳಲಾರದೆ ಪರದೆ ಕಿತ್ತು ಹೊರಬಂದು

'ಥೂ, ಒಳ್ಳೆ ಮಧ್ಯರಾತ್ರೀಲಿ ಇದೊಳ್ಳೆ ದರಿದ್ರ ಗೋಳಾಟ..... ನೆಟ್ಟಗೆ ನಿದ್ದೆ ಮಾಡೋಕೂ ಬಿಡಂಗಿಲ್ಲ....'

ನನ್ನ ಗೊಣಗಾಟ ಕೇಳಿ ಅತ್ತ ಕಡೆ ಮಲಗಿದ್ದ ಸಣ್ಣಜ್ಜಿ ಅತ್ತಿತ್ತ ಹೊರಳಾಡಿ, ಮುಲುಕಾಡುತ್ತ

'ಅಯ್ಯೋ ನಮ್ಮವ್ನೆ ಬೆದಿಗ್ಬಂದೈತೆ ಕಣೆ ಅದಕ್ಕಿಂಗೆ ಅರುಸ್ತತೆ ಪಾಪ.... ಯಾರನ ಹೋಗಿ ಕಟ್ಟಿಸ್ಕೆಂಡು ಬರಾತನ ಇಂಗೆಯಾ....' ಅಂದ್ಲು.

'ಇನ್ನೊಂದಿನ ಹಿಂಗೆ ಇದು ಅರಚಾಡಿದ್ರೆ ಖಂಡಿತ ತಲೆಕೆಟ್ಟು ಮೊಸರ್ ಗಡಿಗೆಯಾಗತ್ತಷ್ಟೆ....' ಕಣ್ಣು ಮುಚ್ಚಲು ಪ್ರಯತ್ನಿಸುತ್ತ ಅಂದೆ.

'ನಾಳಿಕೆ ನಮ್ ಸಿಂಗ್ರಳ್ಳಿ ರಾಮ ಬರ್ಬದೇನೂ ಕಣೇ ನಿಮ್ಮವ್ವ ಹೇಳಿಕಳಸ್ಯಾಳೆ.... ಅವ್ನು ಬಂದ್ರೆ ವಡ್ಕಂಡೋಗ್ತನ್ ಬಿಡು....' ಅಂತಂದು 'ಸಿರ್..... ಸಿರ್....' ಅಂತ ಉಸಿರುದಬ್ಬುತ್ತ ಮತ್ತೆ ನಿದ್ರೆಗೆ ಜಾರಿದಳು ಸಣ್ಣಜ್ಜಿ.

ಲಕ್ಷ್ಮಿನ ನೋಡಿಕೊಳ್ಳಲು ಬಂದು ಹೋದ ಹುಡುಗರೆಷ್ಟೊ. ನಮ್ಮಮ್ಮನ ಅತಿಶಿಸ್ತು, ಅಪ್ಪನ ಕೋಪಾವೇಶಕ್ಕೆ ಬಂದವರ್ಯಾರು ಹದಿನೈದು ದಿನದ ಮೇಲಿರುತ್ತಿರಲಿಲ್ಲ. ಸಣ್ಣಜ್ಜಿ ಹೇಳಿದ ಸಿಂಗ್ರಳ್ಳಿ ರಾಮಪ್ಪನೂ ಸುಮ್ಮನೇ ಬರುವವನಲ್ಲ. ಯಾವುದಾದರೊಂದು

ಮಿಕನ ಹಿಡಿದೇ ತರಬೇಕಿತ್ತು. 'ದೇವ್ರೇ ನಾಳೆ ಆ ರಾಮಪ್ಪನ್ನ ಹೇಗಾದರೂ ನಮ್ಮನೆ ತಲುಪುವಂತೆ ಮಾಡು.....' ಎಂದು ಮನದಲ್ಲೇ ಕಾಣದ ದೇವರಿಗೆ ಮೊರೆಯಿಟ್ಟು, ಕಣ್ಣು ಬಿಗಿಯಾಗಿ ಮುಚ್ಚುತ್ತ ನಿದ್ರೆ ಮಾಡುವ ಪ್ರಯತ್ನ ಪಟ್ಟೆ.

ನನ್ನ ಮೊರೆ ಆ ದೇವರಿಗೆ ಖಂಡಿತ ಕೇಳಿಸಿರಬೇಕು, ಮರುದಿನ ಬೆಳಿಗ್ಗೆ ನಾ ಏಳುವ ಹೊತ್ತಿಗಾಗಲೇ ರಾಮಪ್ಪ ಬಂದು ಲಕ್ಷ್ಮಿಯನ್ನು ಹೊಡೆದುಕೊಂಡು ಹೋಗಿ ಮನೆ ಶಾಂತವಾಗಿತ್ತು. ನಾನು ಸೀದಾ ಅಡುಗೆಮನೆ ಹೊಕ್ಕೆ. ಅಮ್ಮ, ಸಣ್ಣಜ್ಜಿ ಲಕ್ಷ್ಮಿಯ ವಿಚಾರವೇ ಮಾತಾಡುತ್ತಿದ್ದರು.

'ಸದ್ಯ, ರಾಮಪ್ಪ ಬಂದ. ಇಲ್ಲಂದಿದ್ರೆ ಅಕೀ ಒದರಾಟ ಏನ್ಕೇಳ್ತಿ....?' ಎನ್ನುತ್ತಿದ್ದಳು ಸಣ್ಣಜ್ಜಿ. ಅಮ್ಮ ಕೊಟ್ಟ ಕಾಫಿ ಕುಡಿಯುತ್ತ ಅಲ್ಲಾ, ಲಕ್ಷ್ಮಿ ಬೆದಿಗೆ ಬಂದ್ರೆ ಇವ್ರಿಗೆಲ್ಲಾ ಎಷ್ಟೊಂದು ಕಾಳಜಿ? ಎಷ್ಟೊಂದು ಒದ್ದಾಟ? ಅದೆಷ್ಟು ಅಂಡರ್‌ಸ್ಟ್ಯಾಂಡಿಗೂ.... ಅಂದುಕೊಂಡೆ. ಹಿಂದೆಯೇ ಯೋಚನೆಯೊಂದು ಹೊರಳಿ ಬಂದು ನಗು ತಡೆಯದಾಯ್ತು. ಒಬ್ಬಳೇ ನಗತೊಡಗಿದೆ. ಅಮ್ಮ ಅದೇನೆಂದು ಹೇಳುವ ತನಕ ಬಿಡಲಿಲ್ಲ. ಗದರಿಸಿ, ಗದರಿಸಿ ಕೇಳತೊಡಗಿದಳು.

'ಹೇಳಿದ್ಮೇಲೆ ಮತ್ತೆ ಬೈಬಾರ್ದು ನೋಡೂ....' ಎನ್ನುತ್ತಲೇ ಮೆಲ್ಲನೆ ಹೇಳಿದೆ.

'ಅಲ್ಲಾ ದನಗಳು ಬೆದೆಗೆ ಬಂದು ಒದರ್ತಾವಲ್ಲಾ.... ಹಂಗೇ ಮನುಷ್ಯರೂ ಒದರಂಗಿದ್ದಿದ್ರೆ ಹೆಂಗಿರ್ತಿತ್ತೂಂತ' ಅಮ್ಮ ಪಕ್ಕದಲ್ಲಿ ಸಿಂಬೆ ಕೈಗೆತ್ತಿಕೊಂಡು

'ಎದ್ದೋಗ್ತಿಯಿಲ್ಲೆ ಗಬ್ಬುಮುಂಡೇ ಬೆಳಿಗ್ಗೆ ಬೆಳಿಗ್ಗೆ ಅದೇನ್ಮಾತು.....' ಎಂದು ನನ್ನತ್ತ ಬೀಸಿ ಒಗೆದಾಗ ನಾನು ಹೊರಕ್ಕೆ ನೆಗೆದು ತಪ್ಪಿಸಿಕೊಂಡೆ. ನನ್ನ ಹಿಂದೆ ಅಮ್ಮ, ಸಣ್ಣಜ್ಜಿ ಇಬ್ಬರೂ ಮುಸಿ ಮುಸಿ ನಗುತ್ತಿದ್ದುದು ಕಿವಿಗೆ ಬೀಳದಿರಲಿಲ್ಲ.

ಮುಖ ತೊಳೆಯಲು ಹಿತ್ತಲಿಗೆ ಹೊರಟ ನಾನು ಅಲ್ಲಿ ಕಂಡ ಅಪರಿಚಿತ ಹೊಸ ಆಕೃತಿಯನ್ನು ನೋಡಿ ಅರೆಕ್ಷಣ ಹಿಂಜರಿದು ನಿಂತೆ. ನನ್ನ ನೋಡಿದ್ದೆ ಓಡಿಹೋಗಿ ಮರೆಯಾಯ್ತು. ನನ್ನ ಹಿಂದೆಯೇ ಮುಸುರೆ ಪಾತ್ರೆಯಿಡಿದು ಬಂದ ಅಮ್ಮ ನನ್ನ ಮುಖ ನೋಡಿ, ಏನು ನಡೆದಿದೆಯೆಂದು ಊಹಿಸಿ

'ಅದೇ ಕಣೆ ರಾಮಪ್ಪಾವ ಕರ್ಕಂಡು ಬಂದಾನೆ. ದುರುಗ ಅಂತ ಹೆಸರು. ಅವರೂರ ಪಕ್ಕದಲ್ಲಿ ದೂಪ್ಪಳ್ಳಿ ಹಟ್ಟಿ ಹುಡುಗ್ನಂತೆ....' ಅಂತ ಡೀಟೇಲ್ಸ್ ಹೇಳಿ

'ದುರುಗಾ....' ಅಂತ ಕರೆದ್ಲು.

'ಏನಮ್ಮೇ....' ಎಂಬ ವಿಚಿತ್ರ ಶಬ್ದ ಮಾತ್ರ ಹೊರಬಂತು ಎಮ್ಮೆ ಮನೆಯಿಂದ.

'ಇದೇನಮ್ಮ ನೀನು ಕರದ್ರೆ ಅದೇನೋ ಮ್ಯೆ ಮ್ಯೆ ಅಂತಿದೆ ಒಳಗ್ನಿಂದ....' ಎಂದೆ ನಾನು ಕೀಟಲೆ ದನಿಯಲ್ಲಿ

'ಸುಮ್ನಿರೆ ಶುರು ಮಾಡ್ಬೇಡ ನಿನ್ನ ವರಸೇನ.....' ಎಂದು ಗದರಿ, ಅವನನ್ನು ಹೊರಕ್ಕೆಳೆದು ತಂದಳು ಅಮ್ಮ. ಗಳುವಿನಂತೆ ಗಳಗಳ ಅಲ್ಲಾಡುತ್ತಿದ್ದ ದುರುಗನ ಮೈಬಣ್ಣವೊ ಅಮವಾಸ್ಯೆಯ ಚಂದಿರನಂತೆ. ಆದರೇನು ಹಲ್ಲು ಬಿಟ್ಟಾಗಲೆಲ್ಲಾ ಹಾಲು

ಬೆಳದಿಂಗಳು. ದನದ ಮೈಯುಜ್ಜುವ ನಾರಿನಂತೆ ಬಿರುಸಾಗಿ, ಪೊದೆಯಂತಿದ್ದ ಮೀಸೆ ಅವನ ಮುಖಕ್ಕೊಂದು ಕಳೆ ಕೊಟ್ಟಿತ್ತು.

ಒಗೆದು ಇಮ್ಮರಿಸಿದ್ದ ಬಿಳಿ ಪಂಚೆ, ಬಿಳಿ ಅಂಗಿಯಲ್ಲಿ ನೋಡಲು ಲಕ್ಷಣ ಅಂತನ್ನಿಸಿದರೂ ಜನರನ್ನು ಮಿಕಿಮಿಕಿ ನೋಡುವ ರೀತಿ, ಕಣ್ಕಣ್ಣು ಬಿಡುವ ರೀತಿ ಅವನಿಗೊಂದು ತೆರನ ಪೆದ್ದುಕಳೆ ನೀಡಿದ್ದವು. ಬೇಕಂತಲೇ ಅವನನ್ನು ಮಾತನಾಡಿಸುವ ಸಲುವಾಗಿ 'ನಿನ್ನ ಹೆಸರೇನು....?' ಎಂದು ಕೇಳಿದೆ. ಒಂದು ಕೈ ಮುಖಕ್ಕೆ ಅಡ್ಡಯಿಡಿದು, ಮುಸಿ ಮುಸಿ ನಗುತ್ತ, ನುಲಿಯುತ್ತ.

'ದುರುಗಂತ...' ಅಂದ.

ಅಬ್ಬಾ, ಗಟ್ಟಿಯಾದ ಕಂಚಿನ ಕಂಠ. 'ಈ ಗಳುವಿಗೆಂತಹ ಗಟ್ಟಿ ದನಿ' ಎಂದುಕೊಂಡೆ.

ಲಕ್ಷ್ಮಿಯ ಕೆಲಸ ಪೂರ್ತಿ ಅವನ ಪಾಲಾಯ್ತು. ಅವನೂ ಸಹ ಅದೇಗೋ ಅಮ್ಮನಿಗೆ ಹೊಂದಿಕೊಂಡು ಲಕ್ಷ್ಮಿಯನ್ನು ಅಪ್ಪ, ಅಮ್ಮನಿಗಿಂತಲೂ ಚೆನ್ನಾಗಿ ಜೋಪಾನ ಮಾಡಹತ್ತಿದ. ಅಮ್ಮ ಅವನಿಗೆ ದಿನವೂ ಸ್ನಾನ ಮಾಡುವುದನ್ನೂ, ಶೌಚಕ್ಕೆ ಹೋಗಿ ಬಂದೊಡನೆ ಕೈ ಸೋಪಚ್ಚಿ ತಿಕ್ಕಿ ತಿಕ್ಕಿ ತೊಳೆಯುವುದು, ಕಾಲಿಗೆ ನೀರಾಕಿಕೊಳ್ಳುವುದು, ಉಗುರನ್ನು ಎರಡು ದಿನಕ್ಕೊಮ್ಮೆ ಕತ್ತರಿಸಿಕೊಳ್ಳುವುದು, ದಿನವೂ ಹಲ್ಲುಜ್ಜುವುದು ಪ್ರತಿಯೊಂದು ಅವನ ಬೆನ್ನತ್ತಿ ಹೇಳಿಕೊಟ್ಟಳು. ಇಷ್ಟಾದರೂ ಅವನಿಗೆ ಪ್ರವೇಶ ಮನೆಯ ಹಾಲ್‌ವರೆಗೆ ಮಾತ್ರ. ಮೊದಮೊದಲು ಅವನೂ ಕಳ್ಳಾಟ ಮಾಡಿದನಾದರೂ ಅಮ್ಮನ ಕೈಯಿಂದ ತಪ್ಪಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಇರುವ ಹಾಗಿದ್ದರೆ ಹೀಗಿರಬೆಕು ಎಂದು ಮುಲಾಜಿಲ್ಲದೆ ಹೇಳಿದಾಗ ಅವ ಬಗ್ಗಿದ.

ಏನು ಹೇಳಿದರೂ ವಿಷಯ ಆ ತಲೆಯೊಳಕ್ಕೆ ಸುಲಭವಾಗಿ ಹೋಗುತ್ತಿರಲಿಲ್ಲ. ಹೀಗಾಗಿ ಅಮ್ಮನಿಂದ, ಸಣ್ಣಜ್ಜಿಯಿಂದ ಸದಾ ಬೈಸಿಕೊಳ್ಳುತ್ತಿದ್ದನವ. ಆದರೂ ನಗುತ್ತಲೇ ಇರುತ್ತಿದ್ದ. ಮಾತುಮಾತಿಗೂ ನಗು. ಅಮ್ಮ ಕೆಲವೊಮ್ಮೆ ಆ ನಗುವನ್ನು ಸಕತ್ ಎಂಜಾಯ್ ಮಾಡಿದರೆ, ಕೆಲವೊಮ್ಮೆ ಕಿರಿಕಿರಿಯಿಂದ ಸಿಟ್ಟಿಗೆದ್ದು ಕೂಗಾಡಿ ಬಿಡುತ್ತಿದ್ದಳು.

ಅದು ಹೀಗಾಗುತ್ತಿತ್ತು. ಮುಂಬಾಗಿಲ ಬಳಿ ಹೊಸ್ತಿಲಿಗೆ ಹಾಕಲು ತಟ್ಟು ತಾರೋ ಎಂದು ಹೇಳಿದರೆ ಅವ ಸೀದಾ ತಟ್ಟೆಯಿಡಿದು ಬಂದು ಕೂತುಬಿಟ್ಟಾಗ,

ಇನ್ನೊಮ್ಮೆ ಅಪ್ಪನ ಸ್ನೇಹಿತರ ಹೊಸದಾಗಿ ಮದುವೆಯಾದ ಮಗ, ಸೊಸೆಯನ್ನು ನಮ್ಮನೆಗೆ ಊಟಕ್ಕೆ ಕರೆದಿದ್ದರು. ಊಟವೆಲ್ಲ ಆದಮೇಲೆ ಅದೇನು ರೂಢಿಯೋ ಆ ಹುಡುಗಿ ಬಾಯಲ್ಲಿ ಹಾಕಿಕೊಳ್ಳಲು ಏಲಕ್ಕಿ ಕೇಳಿದಳು. ಒಳಗೋ ಡಬ್ಬಿಯಲ್ಲಿ ಖಾಲಿ. ಸರಿ ಇವನ ಕೈಲಿ ದುಡ್ಡು ಕೊಟ್ಟು,

'ನೋಡು ಬೇಗ್ಬಾ. ಆ ಹುಡ್ಗಿಗೆ ತಿನ್ನಕ್ಕೆ ಏಲಕ್ಕಿ ಬೇಕಂತೆ ಒಂತೊಲ ತಗಂಡ್ಬಾ....' ಅಂತೇಳಿದಳು ಅಮ್ಮ.

'ಹೂ....' ಎಂದು ದುಡ್ಡು ಇಸಿದುಕೊಂಡವ ಸುಮ್ಮನ ತಲೆ ಕೆರೆಯುತ್ತ ಒಳಕ್ಕೆ ಹೊರಕ್ಕೆ ಓಡಾಡಿದ.

ಆ ಹುಡುಗಿಯೊಡನೆ ಮಾತನಾಡುತ್ತ ಕೂತಿದ್ದ ನಾನು ಅವನನ್ನು ಗಮನಿಸಿ.

'ಏಯ್ ಬಾರೋ ಇಲ್ಲಿ ಹೋಗ್ಲಿಲ್ವೇನೋ....?' ಎಂದು ಕೇಳಿದ್ದಕ್ಕೆ.

'ಅಲ್ಲೆಮ್ಮೆ ಅದೆಲ್ಲಿ ಸಿಕ್ತೈತಿ...? ಅದ್ನೆಂಗೆ ತರಾದೂ....?' ತಲೆ ಕೆರೆಯುತ್ತ ಕೇಳಿದಾಗ ಅಲ್ಲೆ ಕೂತಿದ್ದ ಅಮ್ಮ ತಾಳ್ಮೆಗೆಟ್ಟು,

'ಏನನ್ನಲೇ.....' ಎಂದಳು ಹಲ್ಲು ಕಡಿಯುತ್ತ,

'ಅದೇ ಕಣಮ್ಮೆ ಈಯಮ್ಮನಿಗೆ ತಿನ್ನಾಕೆ ಹ್ಯೇಲು, ಅಕ್ಕಿ...' ಎಂದುಬಿಟ್ಟ.

ಸ್ಸರಿ ಅದುವರೆಗೂ ತಿಂದಿದ್ದೆಲ್ಲಾ ಅಲ್ಲೇ ಕಕ್ಕಿಕೊಂಡ ಆ ಹುಡುಗಿ, ಮತ್ತೆ ಏಲಕ್ಕಿ ತರಿಸುವ ಹೊತ್ತಿಗೆ ಏನೂ ತಿನ್ನುವ ಸ್ಥಿತಿಯಲ್ಲಿರಲಿಲ್ಲ.

ಅಂದು ಅವನನ್ನು ಹೊಡೆಯುವುದೊಂದು ಬಾಕಿ. ಅಮ್ಮ ಸಿಟ್ಟಿಗೆದ್ದು ಸಿಕ್ಕಾಪಟ್ಟೆ ಬೈದಾಡಿದರೂ ಅವ ಮುಸಿಮುಸಿ ನಗುತ್ತಿದ್ದ. ಆ ದಿನ ಮಾತ್ರ ಅವನ ಆ ನಗು ಅಮ್ಮನಿಗೆ ಹುಚ್ಚಿಡಿಸದಿದ್ದುದೇ ಆಶ್ಚರ್ಯ. ಇಂತಹ ಅನರ್ಥಗಳು ಆಗಾಗ ಸಂಭವಿಸುತ್ತಲೇ ಇರುತ್ತಿದ್ದವು.... ಇವ ನಗುತ್ತಲೇ ಇರುತ್ತಿದ್ದ....

ಸಾಮಾನ್ಯವಾಗಿ ರಾತ್ರಿ ಊಟ ಮಾಡುತ್ತ ಎಲ್ಲರೂ ಟಿ.ವಿ.ಯ ಮುಂದೆ ಕೂರುತ್ತಿದ್ದೆವು. ಆದರೆ ಇವನು ಬಂದ ಮೇಲೆ ಟಿ.ವಿ.ಗಿಂತ ಇವನನ್ನು ನೋಡುವುದೇ ಹೆಚ್ಚಾಗಿತ್ತು. ಟಿ.ವಿಯಲ್ಲಿ ಯಾರಾದರೂ ಅತ್ತರೇ ತಾನೂ ಅವರೊಡನೆ ಅಳುತ್ತಿದ್ದ. ಪ್ರಣಯದ ದೃಶ್ಯಗಳು ಬಂದರಂತೂ.

'ಯಮ್ಮೇ.... ನಾ ವಲ್ನೆಯವ್ವ..... ನಾ ವಲ್ನೇ.....' ಎನ್ನುತ್ತ ಮುಖ ಮುಚ್ಚಿಕೊಂಡು ಹೊರಗೋಡುತ್ತಿದ್ದ.

ಸಂವಾದ, ಚರ್ಚೆಗಳಿದ್ದಾಗ ಏನೋ ಎಲ್ಲಾ ಅರ್ಥ ಆದವನಂತೆ ಗಂಭೀರವಾಗಿ ನಿಂತು ಕೇಳಿಸಿಕೊಳ್ಳುತ್ತ ಏನೋ ಗಹನವಾಗಿ ವಿಚಾರ ಮಾಡುವವನಂತೆ ಕಣ್ಣು ಕಿರಿದುಗೊಳಿಸಿ, ಮೂತಿ ಉದ್ದ ಮಾಡಿ ನಿಲ್ಲುತ್ತಿದ್ದ ಅವನ ಭಂಗಿ ಎಲ್ಲವೂ ನಮಗೆ ಮನೋರಂಜನೆ ನೀಡುತ್ತಿದ್ದವು. ಟಿ.ವಿ.ಯಲ್ಲಿ ಬರುವ ಪ್ರತಿ ವಿಷಯದಲ್ಲೂ ವಿಪರೀತ ಕುತೂಹಲ. ಎಲವನ್ನೂ ತಿಳಿದುಕೊಳ್ಳುವ ಕೆಟ್ಟ ಕಾತರ.

ಒಮ್ಮೆ ಯಾವುದೋ ಸಿನಿಮಾದಲ್ಲಿ ಯಾರೋ ಸತ್ತರೆಂದು ಗೋಳಾಡುತ್ತ.

'ಪಾಪ, ಆಟ್ನಣ್ಣೊಯ್ನು ಯಂಗೆ ತೀರ್ಕೆಂಡ್ನಲ್ಲಮ್ಮೆ....? ಏನಮ್ಮೆ ಅವ್ನಿಗೇನರ ಬ್ಯಾಂಡೀಜಾಗಿತ್ತೇನಮ್ಮೆ.....?' ಎಂದು ಕೇಳಿದ. ನಾನು ಹಣೆ ಚಚ್ಚಿಕೊಳ್ಳುತ್ತ.

'ಅದೇನಲೇ ಬ್ಯಾಂಡೀಜೂ.....?' ಎಂದು ಕೇಳಿದರೆ ಅದುವರೆಗೂ ಅಳುತಿದ್ದವ ಜೋರಾಗಿ ನಗತೊಡಗಿದ.

'ಬ್ಯಾಂಡೀಜಂದ್ರೆ ಗೊತ್ತಿಲ್ಲೇನಮ್ಮೆ..? ಮತ್ತೆ ನಮ್ಮೂರ್ ಡಾಟ್ರು ಯೇಳಿದ್ರು ಅದೊಂದು ದೊಡ್ರೋಗ ಅಂತೆ... ನಮ್ಮ ಸಣ್ಣಪ್ಪನ್ಮಗ ಇಂಗೆಯಾ ವೋದ್ವರ್ಸ ಬ್ಯಾಂಡೀಜಾಗಿ ತೀರ್ಕೆಂಡ. ಅಲ್ಲಮ್ಮೆ, ಪಾಡಾಗೇ ಇದ್ದ. ಒಮ್ಮೆಗೆ ಮೈಯಲ್ಲಾ ಅರುಸ್ನ.... ಕಣ್ಣೆಲ್ಲ ಅರುಸ್ನ....ಕ್ವನೀಗೆ ತಿರುವ್ಕೆಂಡು, ತಿರುವ್ಕೆಂಡು ತೀರ್ಕೆಂಡೇಬಿಟ್ನಮ್ಮೆ....' ದುರುಗ ಮತ್ತೆ ಅಳತೊಡಗಿದ.

ಅವ 'ಅರುಸ್ನ' ಅಂದಾಕ್ಷಣ ನಂಗೆ ಫ್ಲಾಷ್ ಆಗಿದ್ದು ಅವರೂರ ಡಾಟ್ರು ಹೇಳಿದ ದೊಡ್ಡ ರೋಗ ಬ್ಯಾಂಡೀಜಲ್ಲ ಜಾಂಡೀಸ್ ಅಂತ.

ಅವ ಅಳುತ್ತಿದ್ದು ನೋಡಿ ಕಷ್ಟಪಟ್ಟು ನಗು ನುಂಗಿದೆ.

'ಹೋಗ್ಲಿ ಬಿಡೊ....' ಎಂದರೂ ಕೇಳಲಿಲ್ಲ ಅವ.

'ಅಯ್ಯೋ ಈಗಿನ್ಕಾಲದಾಗೆ ಮಿಟ್ಗಿದ್ರೆ ಮಿಸ್ಗಿದ್ರೆ ಸಾಯ್ತರ್ಕಣಮ್ಮೆ ಮನುಸ್ರು... ಬ್ಯಾಂಡೀಜಂಗಿರ್ಲಿ ನಮ್ಮಟ್ಟಿ ಮಲ್ಲಪ್ಪಣ್ಣುನೇಣ್ತಿ ರತುನ ಸಾವ್ಕಾರ್ರು ಮನೆಯರ್ರೂಡೆ ಹಾಲಿಂಡಸ್ಟೂರು ಮಾಡಿ ತೀರ್ಕೆಂಡ್ ವೋದ್ಲು....' ನಾನವನನ್ನ ಅರ್ಧಕ್ಕೆ ತಡೆದು

'ಏನಂದೆ...? ಏನ್ಮಾಡಿದ್ಲು ಅಂದೆ....?' ಎಂದು ಒತ್ತಿಒತ್ತಿ ಕೇಳಿದೆ.

'ಅದೇ ಕಣಮ್ಮೆ ಹಾಲಿಂಡಸ್ಟೂರು ಮಾಡಿ, ದೆವ್ವ ಮೆಟ್ಕೆಂಡು ಮುರ್ಕಂಡದೇ ವೋತು ಆಕಿನ....' ಅಂದ.

'ಅಯ್ಯೋ ಮಾರಾಯ ಅದೇನ್ ಹಾಲಿಂಡಸ್ಟೂರು? ಅದೇನ್ ಮುರ್ಕಂತು....? ನನಗಂತು ಏನೇನು ತಿಳೀವಲ್ದು....' ಎಂದು 'ನೋಡೂ, ಬೇರೆ ಪುರಾಣ ಎಲ್ಲ ನಿಲ್ಸಿ ಮೊದ್ಲು ಹಾಲಿಂಡಸ್ಟೂರು ಅಂದ್ರೇನು ಹೇಳು....' ಅಂದೆ.

ಅವ ನನ್ನ ಮೇಲಿಂದ ಕೆಳಗ ನೋಡತೊಡಗಿದ. ನನ್ನ ಮಹಾ ಪೆದ್ದಳೆಂದು ಭಾವಿಸಿದನೋ ಅಥ್ವಾ ಅವನಿಗೇನು ಹೇಳಬೇಕೆಂದು ತೋಚಲಿಲ್ಲವೋ ಕಣ್ಣಣ್ಣು ಬಿಡತೊಡಿಗಿದಾಗ

'ಅಲ್ವೋ ದುರುಗ, ಹಾಲಿಂಡಸ್ಟೂರು ಅಂದ್ರೆ ಏನು....? ಅಲ್ಲ ಕಣೋ ಹಾಲ್ನ ಸ್ಟೋರ್ ಮಾಡೋದಾ.....? ಇಲ್ಲ ಹಾಲಿಗೆ ಸಂಬಂಧಪಟ್ಟ ಏನಾದ್ರು ಪದಾರ್ಥನ....? ಅಥ್ವಾ ಹಾಲಿನಿಂದ ಮಾಡೋ ತಿನಿಸಾ....? ಅಂದ್ರೆ ಪಾಯಸ, ಹುಗ್ಗಿ....?'

ನನ್ನ ಮಾತು ಕೇಳಿದ್ದೆ ಅವ ಹೊಟ್ಟೆಯಿಡಿದು ಉರುಳಾಡಿ ನಗತೊಡಗಿದ. ನಾನೊಂದು ಕ್ಷಣ ಪೆಚ್ಚಾದೆ. ಇವ ನನ್ನ ಲೇವಡಿ ಮಾಡಿ ನಗುವನಲ್ಲ ಎಂದು ಕೋಪವೂ ಬಂದು

'ನಗಬೇಡ....' ಅಂತ ಗದರಿದೆ.

ಅವ ಎದ್ದು ಕುಳಿತು ನಗುತ್ತಲೇ ಹೇಳಿದ

'ಅಲ್ಲಮ್ಮೆ ಹಾಲಿಂಡಸ್ಟೂರಂದ್ರೆ ಉಗ್ಗಿ ಅಂತೀಯಲ್ಲಾ....? ಅಂಗಂದ್ರೆ.... ನಮ್ ದೇಸನ ಆ ಮೂಲಿಂದ ಈ ಮೂಲಿತಂಕ ಬಿಡದಂಗೆ ಎಲ್ಲಾ ನೋಡ್ಕೆಂಡ್ಬರಾದೂ....' ಅಂದ.

'ನಮ್ ದೇಸಾ....?' ನಾನು ಯೋಚಿಸತೊಡಗಿದೆ. 'ನಮ್ ದೇಸ. ಹಾಲಿಂಡಸ್ಟೂರು, ಹಾಲಿಂಡಸ್ಟೂರು.... ನಮ್ ದೇಸ, ಅಂದ್ರೆ ಇಂಡಿಯಾ.... ಯೆಸ್ ಇಂಡಿಯಾನ ಆ ಮೂಲೆಯಿಂದ ಈ ಮೂಲೆತನ್ಕ ಅಂದ್ರೆ ಟೂರ್ ಮಾಡಿರ್ಬಹುದೇ...? ಅಂದ್ರೆ ಇಂಡಿಯಾ....ಓಹ್!' ನಾನೀಗ ಬಿದ್ದುಬಿದ್ದು ನಗತೊಡಗಿದೆ.

ಆಲ್ ಇಂಡಿಯಾ ಟೂರ್ ಇವನ ಬಾಯಲ್ಲಿ ಹಾಲಿಂಡಸ್ಟೂರಾಗಿತ್ತು. ನಕ್ಕು, ನಕ್ಕು ಸಾಕಾಗಿ ಆಮೇಲೆ ಕೇಳಿದೆ 'ಅಲ್ವೊ, ಸರಿಯಪ್ಪ ಹಾಲಿಂಡಸ್ಟೂರಿಗೂ, ದೆವ್ವಕ್ಕೂ ಏನೋ ಸಂಬಂಧ....?'

'ಅಯ್ಯೆ, ಅದೊಂದೊಡ್ಕತೆ ಕಣಮ್ಮೆ..' ಎಂದು ಹೇಳತೊಡಗಿದ.

ನಾನು ಮತ್ತೆ ನಗಲು ರೆಡಿಯಾಗಿ ಕೂತೆ.

'ನಮ್ಮೂರ್ನ ಸಾವ್ಕಾರ್ಮನ್ಯೇರೆಲ್ಲ ಸೆರ್ಕೆಂಡು ಹಾಲಿಂಡಸ್ಪೂರು ಮಾಡಕೊಂಟ್ರೇನಮ್ಮ. ಅಲ್ಲೋದ್ಬಳ್ಕೆ ಏನನ ಕೆಲ್ಸ ಪಲ್ಸಕ್ಕೆ ಬತ್ತಳಂತ ನಮ್ ಮಲ್ಲಪ್ಪನೇಣ್ತಿ ರತುನನ್ನು ಜತಿಗೆ ಕರ್ಕಂಡ್ರು. ಆಕೆ ಅಲ್ಲೇ ಅವರ್ಮನ್ಯೆಗೆ ಕೆಲ್ಸಕಿದ್ಲು. ಪಾಪ ಕಣಮ್ಮ ಎಂಟ್ತಿಂಗ್ಳು ಕೂಸಿತ್ತು. ಆಕಿ ವೋಗಂಗೇ ಇರ್ಲಿಲ್ಲ. ಗಂಡುನ್ನ ಮನಿಗೇ ಕರಸ್ಕಂಡ್ರು. ಒಂದೈನೂರ ಕೊಟ್ಟು ಬೆಳಗ್ಯೆ, ಸಂಜೀಗೆ ಮಗೀಗೆ ವಯ್ಯಾಲು ತಂದಾಕು ಅಂದ್ರು, ರತುನನ್ನು ಕರ್ಕಂಡದೇ ವೋದ್ರು. ಕೂಸ್ನ ಬಿಡಲಾರ್ದ ಬಿಟ್ಟೋದ್ಲು.

ತಿರ್ಗಿ ಬಂದ್ಯಾಕೆ ನೋಡ್ತೀವಿ.... ಮೈಯ್ಯಾಗೆ ಕಸುವೇ ಇಲ್ದಂಗೆ, ಜರ ಸುಟ್ಗಂಡೂ ಸೋತು ಸುಣ್ಣಾಗಿದ್ಲು ಕಣಮ್ಮ... ಎಟೊತ್ತಂದ್ರೆ ಆಟೋತ್ನಾಗೆದ್ದು ಜೋರಾಗಿ ಅರುಸ್ಸಳು.... ಬಿಡ್ರೋ ನನ್ಬಿಡ್ರಪ್ಪ ನಿಮ್ಮ ದಮ್ಮಯ್ಯ ನಿಮ್ಕಾಲಿಗ್ಬೀಳ್ತಿ ಬಿಡ್ರೋ ಅಂತ ಅರಸ್ಸುಳಂಗೆಯಾ....'

'ಡಾಕ್ಟರಿಗೆ ತೋರ್ಸಸರ್ದಲ್ವೇನೋ......' ಆಕಳಿಸುತ್ತ ಕೇಳ್ದೆ ನಾನು. ಕಣ್ಣೆಳೆಯುತ್ತಿದ್ವು.

'ಅಯ್ಯೋ ಸಿವ್ನೆ ಎಲ್ಲಾರುಂಟೇನಮ್ಮ? ಅಲ್ಲಿ ವೋದ್ಕಡಗೆ ಎಲ್ಲಂದ್ರಲ್ಲಿ, ಎಟೊತ್ನಾಗಂದ್ರೆ ಆಟೊತ್ನಾಗಿ ಸುತ್ತಿಬ್ಟಾರೆ. ಮೊದ್ಲೆ ಬಾಣ್ತಿ ಹಸಿ ಮೈಯಿ ಕೇಳ್ತಿಯೇನಮ್ಮ.. ಒಳ್ಗೆ ಗನವಾದ ದೆವ್ವ ಮೆಟ್ಕಂಡ್ಬಿಟ್ಟಿತ್ತು. ಒಂದ್ತಿಂಗ್ಳು ಗಂಟ ಅಂಗೆ ಅರುಸ್ತಿದ್ಲಾ....? ಅಮ್ಯಾಕೆ ತಿರುಸ್ಕೆಳಾಕತ್ತಿದ್ಲು. ಏಸ್ತಿಂದ್ರೂ ತಿರುಸ್ಕೆಳಾದೆ.... ಏಸ್ಕುಡುದ್ರೂ ತಿರುಸ್ಕೆಳಾದೆಯಾ.... ಕ್ವೊನಿಗೇ ಯಾತ್ರುದ್ದು ವಾಸ್ನೇನೂ ಆಗ್ಬರ್ದಂಗಾತೂ....'

ಇದುವರೆಗು ಅವ ಹೇಳದ್ದನ್ನೆಲ್ಲ ಹಗರುವಾಗಿ ತಗೊಂಡು ನಗುತ್ತಿದ್ದ ನಾನು ಒಮ್ಮೆಗೆ ಗಂಭೀರಳಾಗಿ

'ಅಲವೋ ಸಾವ್ಕಾರ್ರೂ.....' ನಾನು ಕೇಳಿದ ಕುತೂಹಲದಿಂದ.

'ಬಂದ್ರಮ್ಮ ರತುನ ತಿರುಸ್ಕಂತಳೆ ಅಂತ ಗೊತ್ತಾಗಿ ತಕ್ಷಣುಕೆ ಬಂದ್ರು. ನಿಂತ ನಿಲುವಿನ್ಯಾಗೆ ರತುನನ್ನ ಗಾಡಿಮ್ಯಾಕೆ ಆಕ್ಕೆಂಡು ತಗಂಡೋದ್ರು ಸಾವ್ಕಾರ್ರು ಮನಿತಾವ್ಕೇ. ಅಲ್ಲ್ಯಾರೋ ಪಂಡಿತ್ರು ಬಂದಿದ್ರಂತೆ. ಏನೇನ್ ಬಡುದಾಡಿದ್ರು ಉಹೂಂ ರತುನ ವುಳಿಲಿಲ್ಲ. ಕ್ವನಿಗೆ ಮೈಯಲ್ಲ ನೀಲ್ಯಾಗಿ, ಬಾಯ್ತುಂಬ ನೊರೆ ಕಕ್ಕಿ ಅಲ್ಲೇ ಸಾವ್ಕಾರ್ಮನಿತಾವೆ ಸತ್ತೋದ್ಲು. ದಿವುಸುಕ್ಕೆ, ಮಣ್ಣಿಗೆ ಪಾಪ ಎಲ್ಲಾ ಖರ್ಚು ಸಾವ್ಕಾರ್ರೆ ಕೊಟ್ರು ಕಣಮ್ಮ. ರತುನ ಸತ್ತು ಒಂದ್ವಾರ್ಕೆ ಕೂಸು ಹಾಲಿಲ್ದಂಗೆ, ನೋಡಾರಿಲ್ದಂಗೆ ವಯ್ಯಕೆಂಡು, ವಯ್ಯಕೆಂಡು ಅದೂ ತೀರ್ಕೆಂತು...'

ದುರುಗ ಅಳುತ್ತಿದ್ದ. ನನ್ನ ಹೊಟ್ಟೆಯಲ್ಲೂ ವಿಚಿತ್ರ ಸಂಕಟ, ತಳಮಳ ಆಗುತ್ತಿತ್ತು. ದುರುಗನಿಗೆ ನಿಜಸ್ಥಿತಿ ಏನೆಂದೇ ತಿಳಿದಿರಲಿಲ್ಲ. ರತುನಳನ್ನು ಮೆಟ್ಟಿದ್ದು ದೆವ್ವಕ್ಕಿಂತಲೂ ಭಯಂಕರವಾದ, ಮೃಗಕ್ಕಿಂತಲೂ ಕಡೆಯಾದ ನೀಚ ಮನುಷ್ಯರ ವಿಕೃತ ಕಾಮುಕತೆ ಎಂಬ ಸತ್ಯ ತಿಳಿದರೆ ಇವ ಏನಾದಾನು...? ಯೋಚಿಸಿ ನಿಟ್ಟುಸಿರಿಟ್ಟೆ. ನನ್ನ ನಿದ್ದೆ ಹಾರಿಹೋಗಿತ್ತು.

ದುರುಗ ಮತ್ತೆ ಹೇಳತೊಡಗಿದ. 'ಅದಾಗಿ ಸ್ಸರ್ಯಾಗಿ ಒಂದ್ತಿಂಗ್ಳಿಗೆ, ಅಮಾಸೆ ದಿನ ಸಾವ್ಕಾರ್ನೇಣ್ತಿನೂ ದೆವ್ವ ಮೆಟ್ಕಂಡು ಸತ್ತೇವೋದ್ಲು. ರತುನ ನಾನ್ ತೆಪ್ಮಾಡ್ದೆ. ನಾವೆಲ್ಲ ತ್ಯಪ್ಮಾಡಿದ್ವಿ ನಮ್ಮನ್ನ ಬಿಟ್ಬಿಡವ್ವ...' ಅಂತ ಅರುಸ್ಸಿ, ಅರುಸ್ಸಿ ಅವ್ಳೂ ಸತ್ಲಂತೆ. ರತುನ

ಅಕೀನೂ ಮೆಟ್ಗೆಂಡು, ಮುರ್ಕಂಡದೆ ವೋದ್ಲಮ್ಮೆ. ಆಮ್ಯಾಕೆ ಇಡೀ ಹಟ್ಟಿಗೇ ಮಂತ್ರುವಾದಿನ್ ಕರ್ಸಿ ಕಟ್ಟು ಮಾಡ್ಸಿದ್ವೆಮ್ಮೆ....'

ಅಯ್ಯೊ ಎಂತಹ ಮುಠ್ಠಾಳತನ! ಎಂತಹ ಅಮಾಯಕತೆ....! ಒಂದು ವೇಳೆ ನಿಜಸ್ಥಿತಿ ತಿಳಿದಿದ್ರೂ ಇವರು ಏನಾದರೂ ಮಾಡಲು ಸಾಧ್ಯವಿತ್ತೆ? ಇವರಿಗೆ ನ್ಯಾಯ ಸಿಗುತ್ತಿತ್ತೆ....? ರತುನಳ ಸಾವು, ಅವಳ ಕೂಸಿನ ಸಾವು ಕೇವಲ ಸಾವೇ? ಇಲ್ಲ ಕೊಲೆಯೇ....? ಇದೇ ಮುಂತಾದ ವಿಚಾರಗಳು ಕಣ್ಣೆವೆಯಲ್ಲಿ ನುಸಳಿ, ನುಸಳಿ ಮತ್ತೆ ಮತ್ತೆ ಕಾಡುವ ನೊರಜುಗಳಂತೆ ಇಡೀ ರಾತ್ರಿ ಕಾಡಿದವು.

ಇನ್ನೆರಡು ತಿಂಗಳಲ್ಲಿ ಫೈನಲ್ ಇಯರ್ ಪರೀಕ್ಷೆಗಳು ಶುರುವಾಗುವುದರಲ್ಲಿದ್ದವು. ಪಾರು, ಗೌರಿಯ ಜತೆಯಲ್ಲಿ ರೇಖಳೂ ಉಳಿದ ಸಬ್ಜೆಕ್ಟ್ ಕ್ಲಿಯರ್ ಮಾಡಿಕೊಳ್ಳಲು ಊರಿಂದ ಬಂದಿದ್ದಳು. ನಾವು ನಾಲ್ವರು ಒಟ್ಟಿಗೆ ಸೇರಿದೆವೆಂದರೆ ಮುಗೀತು ನಾವು ಮಾತನಾಡದ ವಿಷಯಗಳಿಲ್ಲ. ರಾಜಕೀಯ, ಭ್ರಷ್ಟಾಚಾರ, ಶೋಷಣೆ, ಕಲೆ, ಸಾಹಿತ್ಯ, ಅತ್ಯಾಚಾರ,. ವ್ಯಭಿಚಾರ, ಸೆಕ್ಸು ಈ ಎಲ್ಲವೂ ನಮ್ಮ ಚರ್ಚೆಗೆ ಒದಗುತ್ತಿದ್ದ ವಿಷಯಗಳು. ಅದರಲ್ಲೂ ರೇಖಳಿಗೆ ಸೆಕ್ಸ ತುಂಬಾ ಆಕರ್ಷಕವಾದ ಮತ್ತು ಆಸಕ್ತಿಯುಳ್ಳ ವಿಷಯ.

ಒಬ್ಬಳೇ ಮಗಳೆಂಬ ಅತಿಮುದ್ದಿನ ಫಲವಾಗಿ ತೀರ ಚೆಲ್ಲುಚೆಲ್ಲಾದ, ಎಗ್ಗುಸಿಗ್ಗಿಲ್ಲದ ಸ್ವಲ್ಪವೂ ಸೀರಿಯಸ್‌ನೆಸ್ ಇಲ್ಲದ ಖ್ಯಾತನಾಮಳು. ಆಕೆಯ ಸಿನಿಮಾದ ಹೀರೋಗಳಿರಲಿ, ಸ್ವಲ್ಪ ಸ್ಮಾರ್ಟಾದ ಬೀದಿ ಕಾಮಣ್ಣಗಳಿರಲಿ, ಕಸಗುಡಿಸುವವ ಆಗಲಿ, ತಿಪ್ಪೆ ಎತ್ತುವವನಾಗಲಿ ಎಲ್ಲರೂ ಆಕೆಗೆ ಸೆಕ್ಸಿಯೆ. ಅಷ್ಟೇ ಏಕೆ ಬೆಳಗ್ಗಿನ ಜಾಗಿಂಗ್ ಸಮಯದಲ್ಲಿ ಎದುರಿಗೆ ಸ್ವಲ್ಪ ಫಿಟ್ಟಾದ ಅಜ್ಜ ಬಂದರೂ ತೀರಿತು 'ಲುಕ್ ಯಾರ್.... ವ್ಹಾಟ್ ಎ ಸೆಕ್ಸೀ ಗ್ರಾಂಡ್ ಪಾ....!' ಎಂದವರ ಹಿಂದೆಯೇ ಓಡಲು ತೊಡಗುತ್ತಿದ್ದಳು. ನಾವು ಆಕೇನ ಹಿಡಿದು ಮುಂದಕ್ಕೆ ಎಳೆದೊಯ್ಯುತ್ತಿದ್ದೆವು. ಮಾತು ಮಾತಿಗೂ ಸೆಕ್ಸೀ ಎನ್ನವುದು ಆಕೆಗೆ ರೂಢಿಯಾಗಿ ಹೋಗಿತ್ತು. ಇಂತಹವಳ ಕೈಯಲ್ಲಿ ಸಿಕ್ಕಿಬಿದ್ದ ದುರುಗ.

ನಾಲ್ವರು ಕಂಬೈನ್ಡ್ ಸ್ಟಡಿ ಮಾಡಲು ನಮ್ಮನೆಯಲ್ಲೇ ಸೇರುತ್ತಿದ್ದೆವು. ದುರುಗನನ್ನು ನೋಡಿದ ಘಳಿಗೆಯಿಂದಲೇ 'ಟೈಂಪಾಸ್ ಮಾಡಲು ಇದಕ್ಕಿಂತಲೂ ಒಳ್ಳೆಯ ಸಾಧನ ಇನ್ನೇನು ಬೇಕು....' ಎನ್ನುತ್ತ ಅವನ ಎದುರು ಬಂದಾಗಲೆಲ್ಲ ಸಿಳ್ಳೆ ಹೊಡೆದು, ಕಣ್ಣೊಡೆದು,

'ಯೂ ಆರ್ ರಿಯಲೀ ಸೆಕ್ಸಿ ಕಣೋ ದುರುಗ....' ಎಂದೋ

'ನಿನ್ನ ಮೀಸೆ ಸೆಕ್ಸಿ....' ಎಂದು ಅವನ ಮೀಸೆಯಿಡಿದು ಜಗ್ಗುವುದೋ

'ನಿನ್ನಂಗಿ ಸೆಕ್ಸಿ...' ಎಂದು ಅವನ ಅಂಗಿ ಎಳೆಯುವುದೋ

'ನೀ ನಕ್ಕರೆ ಸೆಕ್ಸಿ....' ಎಂದು ಕೆನ್ನೆ ಹಿಂಡುವುದೋ ಇವೇ ಮುಂತಾದ ಚೇಷ್ಟೆಗಳಿಂದ ಅವನನ್ನು ಬಫೂನ್ ಮಾಡಿ, ತಾನು ಮಜ ತೆಗದುಕೊಳ್ಳುತ್ತಿದ್ದಳು. ಆಕೆಯೊಡನೆ ನಾವು ಸೇರಿ ನಗುತ್ತಿದ್ದೆವು.

ಅವಳ ಚೇಷ್ಟೆ ಜಾಸ್ತಿಯಾದ ಹಾಗೆ ಒಂದು ದಿನ ದುರುಗ ಬಂದವನೆ

'ಅಲ್ಲಮ್ಮೆ ನಮ್ಮೂರ್ನಗೆ ವೊಲ್ಸು ತುಳುದ್ರೆ, ಯೇಸ್ಗೆ ಮಾಡಿದ್ರೆ ಇಸ್ಸಿ ಇಸ್ಸಿ ಅಂತಾರೆ.

ಈಯಮ್ಮ ದಿನಾಲು ನನ್ನ ಮೈಯ್ಯಲ್ಲ ಮುಟ್ಮುಟ್ಟಿ ಇಸ್ಸಿ ಇಸ್ಸಿ ಅಂತಾಳಲ್ಲ....ಏನಮ್ಮೆ ನನ್ ಮೈಯಿ ಆಟೋಂದ್ ವೊಲ್ಲಾಸ್ಗೈತ್ಯೆ...?'

ಎಂದು ಕೇಳಿದಾಗ ಒಂದು ಕ್ಷಣ ಎಲ್ಲರೂ ಪೆಚ್ಚಾದೆವು.

ರೇಖಳಿಗೆ ಅವನ ಮೈಕೈ ಮುಟ್ಟಬೇಡ, ಅತಿ ಮಾಡಬೇಡ ಎಂದು ನಾನು ಆಗಾಗ ಹೇಳುತ್ತಿದ್ದೆ. ಆದರವಳು

'ಲೇ ನಾನ್ಮುಟ್ಟಿನಿ ಅನ್ನೋ ಫೀಲಿಂಗಾದ್ರೂ ಆ ಎಮ್ಮೆಗೆ ಆಗುತ್ತೊ ಇಲ್ವೋ ಸುಮ್ನಿರೆ ಬಿಟ್ಟಿ ಮನೋರಂಜನೆ ಯಾರಿಗುಂಟು ಯಾರಿಗಿಲ್ಲ.....' ಎಂದು ನನ್ನ ಬಾಯಿ ಮುಚ್ಚಿಸುತ್ತಿದ್ದಳು.

ಆದರಿಂದು ಅವನು ಆಡಿದ ಮಾತುಗಳಿಂದ ನಾವೆಂದುಕೊಂಡಷ್ಟು ಕೊರಡಲ್ಲ ಅವ ಎನಿಸಿತು ನನಗೆ.

'ನೋಡು ನಿನ್ನ ಹುಡಗಾಟ ಪೇಚಾಟಕ್ಕಿಟ್ಟುಕೊಂಡೀತೆ ಸಾಕು ಮಾರಾಯ್ತಿ ನೀನವ್ನ ಸುದ್ದಿಗಿನ್ನ ಹೋಗ್ಬೇಡ....' ಎಂದು ರೇಖಳನ್ನು ವಾರ್ನ್ ಮಾಡಿ ತಡೆಯುವ ಪ್ರಯತ್ನ ಮಾಡಿದೆ. ಆದರಾಕೆ ಎಲ್ಲಿ ಕೇಳಬೇಕು. ಬದಲಿಗೆ ದುರುಗನನ್ನೇ ಓಲೈಸತೊಡಗಿದಳು.

'ಅಯ್ಯೋ ದುರುಗಾ, ನಾನು ನಿನಗೆ ಇಸ್ಸಿ ಅಂತನೆನೋ....? ಅಲ್ವೋ ನಾನಂದದ್ದು ಸೆಕ್ಸೀ ಅಂತ. ಹಂಗಂದ್ರೆ ಹುಡುಗೀರು ಯಾರ್ನ ಭಾಳ ಪ್ರೀತಿ ಮಾಡ್ತರಲ್ಲ ಅವರ್ನ ಸೆಕ್ಸೀ ಅಂತಾರೆ..... ಗೊತ್ತಾಯ್ತೇನೋ ಸೆಕ್ಸೀ ದುರುಗಾ....' ಮತ್ತೆ ಅವನ ಕೆನ್ನೆ ಸವರಿದಳು. ಸ್ಸರಿ, ಅವ ನಾಚಿ ನೀರಾಗಿ, ಬೆವತು, ಗದಗದ ನಡುಗಿ, ಮೂರ್ಛೆ ಹೋಗುವುದೊಂದು ಬಾಕಿಯಷ್ಟೆ.

ಇದ್ದಕ್ಕಿದ್ದಂತೆ ಅವನಿಗೆ ತನ್ನ ಬಟ್ಟೆಬರೆ, ಕೂದಲು, ಮುಖ, ಚರ್ಮ ಎಲ್ಲದರಲ್ಲೂ ಹೊಸ ಆಸಕ್ತಿ ಮೂಡತೊಡಗಿತು. ಹಾಗೆಯೇ ಕೆಲಸ ಕಾರ್ಯ, ಊಟ, ತಿಂಡಿ, ಕೊನೆಗೆ ಲಕ್ಷ್ಮಿಯಲ್ಲೂ ಆಸಕ್ತಿ ಕಳೆದುಕೊಳ್ಳತೊಡಗಿದ. ರೇಖ ಹೇಳಿದ್ದೆಲ್ಲ ವೇದವಾಕ್ಯ ಆಗಿಹೋಯ್ತು ಅವನಿಗೆ. ಒಮ್ಮೆ ಆಕೆ

'ದುರುಗ ನೀನು ಮೀಸೆ ಬೋಳ್ಸು ನೋಡೂ ಎಷ್ಟು ಸೆಕ್ಸಿಯಾಗಿ ಕಾಣ್ತಿಯಾಂದ್ರೆ ನಿನ್ನಂಗೇ ಯಾರೂ ಇರಲ್ಲ ಬಿಡೋ....' ಎಂದುಬಿಟ್ಟಳು ಮೈಯೆಲ್ಲ ಕುಣಿಸುತ್ತ. ಅವ ಆ ಕ್ಷಣವೇ ಮೀಸೆ ಬೋಳಿಸಲು ತಯಾರಾದ.

ಮೈಯೆಲ್ಲ ಉರಿ ಎದ್ದ ನಾನು ಕೆಟ್ಟದಾಗಿ ಗದರಿಸಿ ನಿಲ್ಲಿಸಿದೆ ಅವನನ್ನ.

'ಲೇ ತೆಪ್ಪರ್ಮುಂಡೆದೇ ಮೀಸೆ ಬೋಳಿಸಿದ್ರೆ ಸೆಕ್ಸಿಯಾಗಿ ಕಾಣಲ್ಲ ನೀನು, ಬದ್ಲಿಗೆ ಗಂಡ್ಜೋಗ್ತಿ ತರಹ ಕಾಣ್ತೀಯ. ಇಲ್ನೋಡು ಇರೋ ಮೀಸೆನ ಬೋಳಿಸಿದ್ರೆ ಎಲ್ರೂ ಕಾಣದು ಹಾಗೇನೆ ಗೊತ್ತಾಯ್ತಾ....? ಹೋಗ್ ಕೆಲ್ಸ ನೋಡ್ ನಡಿ......' ಎಂದವನನ್ನು ಅಲ್ಲಿ ನಿಲ್ಲದೆ ಓಡಿಸಿದ್ದೆ.

ಇಷ್ಟಾದರೂ ರೇಖ ಬಿಡಲಿಲ್ಲ ಅವನಿಗೆ ಪ್ಯಾಂಟು ಟೀ ಶರ್ಟ್‌ನ ಹೊಸ ಐಲು ಹಿಡಿಸಿ ಕೈಬಿಟ್ಟಳು. ಅವನು ಒಮ್ಮೆಗೆ ಅಮ್ಮನಿಗೆ ಗಂಟುಬಿದ್ದು, ಒಪ್ಪಿಸಿ ಊರಿಗೆ ಹೊರಟ. ಅವನತ್ತ ಹೋಗುತ್ತಲು ನಾವು ಸಂಪೂರ್ಣ ಪರೀಕ್ಷೆಯ ಟೆನ್ಷನ್ನಲ್ಲಿ ಗಂಭೀರವಾಗಿ ಓದತೊಡಗಿದೆವು.

ಪರೀಕ್ಷೆ ಸ್ಸರಿಯಾಗಿ ಒಂದು ವಾರ ಉಳಿದಿತ್ತು. ನಾವು ಸೀರಿಯಸ್ ಡಿಸ್ಕಷನ್ನಲ್ಲಿ ತೊಡಗಿದ್ದೆವು. ದಿಢೀರನೆ ಪ್ಯಾಂಟು, ಟೀ ಶರ್ಟ್‌ನಲ್ಲಿ ನಮ್ಮೆದುರಿಗೆ ಪ್ರತ್ಯಕ್ಷನಾದ ದುರುಗ. ಮೀಸೆಯನ್ನೂ ಬೋಳಿಸಿದ್ದ. ಕಣ್ಣು ಬಾಯಿ ಬಿಟ್ಟುಕೊಂಡು ನಾಲ್ವರೂ ದಂಗಾಗಿ ಕುಳಿತೆವು.

ಅವ ಸೀದಾ ಹೋಗಿ ರೇಖಳ ಮುಂದೆ ನಿಂತು ಭುಜ ಕುಣಿಸಹತ್ತಿದ. ಶಿಳ್ಳಾಕುತ್ತಾ, ಆಕೆಯ ತರಹವೇ ಕಣ್ಣು ಮಿಟುಕಿಸುತ್ತ

'ಚೆಸ್ಸಿ ರೈಕಾ...' ಅಂದ.

ರೇಖ ಮಾತಾಡುವುದರಿಲಿ ಉಸಿರಾಡಲೂ ಆಗದಂತೆ ಸ್ಟಿಲ್ಲಾಗಿ ಕೂತಿದ್ದಳು. ಅವನನ್ನು ಆ ವೇಷದಲ್ಲಿ ನೋಡಿದ ಹಾಗೆಯೇ ಆಕೆ ಪೂರ್ಣ ತಣ್ಣಗಾಗಿ ಹೋಗಿದ್ದಳು. ಅವಳಿಂದ ಯಾವ ಪ್ರತಿಕ್ರಿಯೆಯೂ ಬಾರದಾಗ ಅವನೇ ಮುಂದುವರಿದ. ರೇಖಳ ಕೆನ್ನೆಗಳನ್ನು ಸವರಿ, ಎಳೆದು ಹಿಂಡಿಬಿಟ್ಟ, ಕಿಟಾರನೆ ಕಿರುಚಿದಳಾಕೆ. ಅವ ನಗಹತ್ತಿದ. ನಾನು ಗಾಬರಿಗೊಂಡು ಧಾವಿಸಿದವಳೆ ಅವನ ಕೆನ್ನೆಗೆ ನಾಲ್ಕು ಬಿಗಿದು, ಕೋಣೆಯಿಂದ ಆಚೆ ದಬ್ಬಿದೆ.

ಮೂವರು ಸೇರಿ ರೇಖಳನ್ನು ಎಷ್ಟು ಸಮಾಧಾನಗೊಳಿಸಿದರೂ ಕೇಳಲಿಲ್ಲಾಕೆ.

'ಥೂ ಅಸಹ್ಯ....!' ಎಂದು ಕೆನ್ನೆಗಳನ್ನು ಜೋರಾಗಿ ತಿಕ್ಕುತ್ತ ನಡುಗತೊಡಗಿದಳು.

ಗಲಾಟೆ ಕೇಳಿ ಅಮ್ಮ ಓಡಿ ಬಂದೇಬಿಟ್ಟಳು. ವಿಷಯ ತಿಳಿದು ಸೀದ ಅವನನ್ನರಸಿ ಎಮ್ಮೆ ಮನೆಗೆ ಓಡಿದಳು. ಅಪ್ಪ ಅದುವರೆಗೂ ಗೋಡೆಯಲ್ಲಿ ಷೋಗೆ ನೇತಾಡುತ್ತಿದ್ದ ಬಾರಕೋಲಿಗೆ ಕೈಹಾಕಿದ್ದೆ ಏನಾಗುತ್ತಿದೆ ಎಂದು ಅರಿವಾಗುವುದರಲ್ಲಿ ದುರುಗನನ್ನು ಸೆಳೆತ ಸೆಳೆದಿದ್ದ.

ಈ ಗಲಾಟೆಯಲ್ಲಿ ಅದ್ಯಾ ಮಾಯೆಯಲ್ಲೋ ಓಡಿಹೋದ ರೇಖ ತನ್ನ ಕಸಿನ್‌ಗಳನ್ನು ಕರೆತಂದಳು. ಮೈಲಿಗೆ ಆದವಳಂತೆ, ಮಲಿನಗೊಂಡವಳಂತೆ ಚಡಪಡಿಸುತ್ತ ಅಳುತ್ತಲೇ ಇದ್ದು. ಅಪ್ಪ ಅಮ್ಮ ತಾವು ಈಗಾಗಲೇ ಅವನನ್ನು ಸರಿಯಾಗಿ ಶಿಕ್ಷಿಸಿರುವುದಾಗಿ ಹೇಳಿದರೂ ಕೇಳದೆ ಎಲ್ಲರೂ ಸೀದ ಎಮ್ಮೆ ಮನೆಗೆ ನಡೆದರು.

ನಾನು ಅಸಹಾಯಕಳಾಗಿ ನಿಂತ ಅಮ್ಮನನ್ನು ಗಟ್ಟಿಯಾಗಿ ತಬ್ಬಿಕೊಂಡೆ. ದುರುಗನ ಚೀರಾಟ ಹೊಟ್ಟೆ ತೊಳೆಸತೊಡಗಿ, ಬಾಯ್ತುಂಬ ನೀರು ತುಂಬಿಕೊಳ್ಳುತ್ತಿತ್ತು. ಬಚ್ಚಲಿಗೆ ಓಡಿ ಕುಸಿದು ಬಿದ್ದೆ. ಎಷ್ಟೊ ಹೊತ್ತಿನ ಮೇಲೆ ಒಮ್ಮೆಗೆ ಮೌನ ಆವರಿಸಿ, ಅಪ್ಪ ಬಂದವರೇ ಅಮ್ಮನನ್ನು, ನನ್ನನ್ನು ಒಳಗಿನ ಕೋಣೆಗೆ ಹೋಗುವಂತೆ ಬಲಾತ್ಕರಿಸಿ ಬಾಗಿಲಾಕಿಕೊಂಡು ಹೊರಟು ಹೋದರು.

ಮತ್ತೆ ಅಪ್ಪ ಬಂದು ಬಾಗಿಲು ತೆಗೆದಾಗ ಹೊರಗೆ ಕಾರು ಹೋದ ಶಬ್ದವಾಯ್ತು. ಮಂಕಾಗಿ ಹೆದರಿದಂತೆ ಕಾಣುತ್ತಿದ್ದ ಅಪ್ಪ

'ಊರಿಗೆ ಬಿಟ್ಟು ಬರ್ತೀವಿ ಅಂತ ಕರ್ಕಂಡೋದ್ರು.....' ಎಂದೇಳಿ ಕುರ್ಚಿಯಲ್ಲಿ ಕುಸಿದ.

'ಸದ್ಯ, ಊರಿಗಾದ್ರೂ ಕರೆದೊಯ್ದರಲ್ಲ....' ಎಂದು ಸ್ವಲ್ಪ ಸಮಾಧಾನವಾಯ್ತು ನನ್ನ ಮನಸ್ಸಿಗೆ.

ಸಿಂಗ್ರಳ್ಳಿ ರಾಮಪ್ಪ ಬರಬಹುದು, ಅವನಿಂದ ದುರುಗನ ವಿಷಯ ತಿಳಿಯಬಹುದು ಎಂದು ಕಾಯುತ್ತಲೇ ಇದ್ದೆ ನಾನು. ದುರುಗ ಹೋಗಿ ಆಗಲೇ ಹದಿನೈದು

ದಿನಗಳಾಗಿದ್ದವು. ನಮ್ಮ ಮನೆಯಲ್ಲಿ ಸ್ಮಶಾನ ಮೌನ, ಸಣ್ಣಜ್ಜಿ ಮಾತ್ರ ಆಗಾಗ ಕದ್ದು ಕದ್ದು ಕಣ್ಣೀರು ಹಾಕುವುದನ್ನು ನೋಡಿ ಅಚ್ಚರಿಗೊಳ್ಳುತ್ತಿದ್ದೆ. ಪರೀಕ್ಷೆಗೆ ಬರುತ್ತಿದ್ದ ರೇಖಳನ್ನು ಈ ಹಿಂದೆ ಮಾತನಾಡಿಸಿದಂತೆ ಮಾತನಾಡಿಸುವುದು ನನ್ನಿಂದ ಆಗಲೇ ಇಲ್ಲ. ಇಷ್ಟರಲ್ಲೇ ಆಕೆಯ ಮದುವೆಯೂ ಸೆಟಲ್ ಆಗಿ, ನಿಶ್ಚಿತಾರ್ಥಕ್ಕೆ ಬರಬೇಕೆಂದು ಫೋನ್‌ನಲ್ಲಿ ನನ್ನ ಕರೆದಳು.

'ನನ್ ವುಡ್ ಬೀ ಬಂದು ನೋಡೇ..... ಹಿ ಇಸ್ ಸೋ ಸೆಕ್ಸಿ ಕಣೇ..... ಒಳ್ಳೆ ಸೆಕ್ಸ್ ಸಿಂಬಲ್ ತರಹ ಇದ್ದಾರೆ ಕಣೇ...'

ನಾನು ರಿಸೀವರ್ ಪಟ್ಟಂತ ಕುಕ್ಕಿಬಿಟ್ಟೆ ಆ ಪದವೇಕೋ ನನ್ನಲ್ಲಿ ನಡುಕ ಹುಟ್ಟಿಸಿತ್ತು. ಅಂದೇ ಸಂಜೆ ಬಂದ ರಾಮಪ್ಪ. ಅವನನ್ನು ಸೀದ ಕೋಣೆಗೆ ಕರೆದೊಯ್ದು ಬಾಗಿಲಿಕ್ಕಿಕೊಂಡರು ಅಪ್ಪ, ಅಮ್ಮ. ನಾನು ಅನುಮಾನದಿಂದ ಬಾಗಿಲಿಗೆ ಕಿವಿಯಾನಿಸಿ ನಿಂತೆ. ಅಪ್ಪ ಅಮ್ಮನ ದನಿಗಳೆಂದು ಗೊತ್ತಾಗುತ್ತಿತ್ತಷ್ಟೆ ಮಾತುಗಳು ಸ್ಪಷ್ಟವಾಗಿ ಕೇಳಿಸುತ್ತಿರ್ಲಿಲ್ಲ.

'ಅವಳತ್ರ ಮಾತಾಡ್ಬೇಡ....' 'ಅನುಮಾನ ಬಂತಾ....?' 'ದುಡ್ಡು ಕೊಟ್ಯಾ....?' 'ಏನಂದ್ರೂ....?' ಇದೇ ತುಣುಕುಗಳು ಕಿವಿಗೆ ಬಿದ್ದವು.

ಆದರೆ ರಾಮಪ್ಪನದು ತುಂಬ ದೊಡ್ಡ ದನಿ. ಅವನ ಮಾತುಗಳು ಸ್ಪಷ್ಟವಾಗಿ ಕೇಳಿಸಿದವು.

'ನೀವು ಕೊಟ್ಟ ಮೂರು ಸಾವ್ರ ಕೊಟ್ಟೆ ಇಸ್ಗಂಡ್ರು, ಮೊನ್ನಿನಾಗೆ ಊರಿಗ್ಬಂದಾನು ಪ್ಯಾಟೆರಿಗೆ ತಕ್ಕಂಗೆ ನಾನು ಇರ್ಬೇಕು, ಹೊಸ ಬಟ್ಟೆ ಬರೆ ಬೇಕು ಅಂತ ಅವರಪ್ಪ ಅಮ್ಮನ್ನೂಕಟೆ ಗುದ್ದಾಡಿ, ಪಾಪ ಅವ್ರು ವರ್ಸಪೂರ್ತಿ ಕಸ್ಟಪಟ್ಟು ಬೆಳೆಸಿದ್ದ ಒಂದು ಚೀಲ ಸೇಂಗ ಮಾರ್ಕೆಂಡು ದುಡ್ಡು ತಗಂಡದೇ ಬಂದಿದ್ನಂತೆ.

ಅದುಕ್ಸರ್‍ರ್ಯಾಗಿ ನಾನು 'ಇಲ್ಲ ಕಣಪ್ಪ ನಿಮ್ ದುರ್ಗ ಹೇಳ್ದೆ ಕೇಳ್ದೆ ಕೆಲ್ಸ ಬಿಟ್ಟು, ಮನಿ ಬಿಟ್ಟು ಆಯಮ್ಮ ಬೈದಾಡಿದ್ಕೆ ಸಿಟ್ಮಾಡ್ಕೆಂಡು ಅದೇ ವೋಗ್ತ್ಯಾನಂತ ಸ್ವಾಮೇರು ಬೈದಾಡಿದ್ರು. ಅವ್ನ ಸಾವಸನೇ ಬ್ಯಾಡಂತ ಲೆಕ್ಕ ಚುಕ್ತಾ ಮಾಡು ಅಂದ್ರು ತಗ ದುಡ್ಡು....' ಅಂತ ಮೂರು ಸಾವ್ರ ಕೊಟ್ಟು ಬಂದ್ಬುಟ್ಟೆ.

ಪಾಪ....., ಅವ್ನು ಮತ್ತೆ ತಿರುಗಿ ಬರಲ್ಲ ಅಂತ ಗೊತ್ತಿಲ್ಲ ಅವ್ರಿಗೆ. ಅವರವ್ವ ಭಾಳ ಗೋಳಾಡಿದ್ಲು ಕಣಮ್ಮ. 'ಎಲ್ಲೋಯ್ತು ಕಣಪ್ಪ ನನ್ನ ಕೂಸು....? ಪಾಪ, ಪುಣ್ಯೇವು, ಮೋಸವಂಚ್ನೆ ಒಂದು ತಿಳೀದದ್ಕೆ...., ಅಂತ ವಯ್ದಾಡ್ತಿದ್ಲು ಕಣಮ್ಮ...." ಅಂದ ರಾಮಪ್ಪ ಅಳುತ್ತಿದ್ದ!

ಅದುವರೆಗೂ ಒಳಗೇ ಸಿಕ್ಕು ಚಡಪಡಿಸುತ್ತಿದ್ದ ಕೋಪ, ಅಸಮಾಧಾನ, ದುಃಖ ಎಲ್ಲವೂ ಕಿತ್ತುಕೊಂಡು ಹೊರಬಂದವು. ರೇಖಳ ನಂಬರ್ ತಿರುಗಿಸಿದೆ.

'ಥೂ ಪಾಪಿ, ಕೊನೆಗೂ ಅವ್ನ ಪ್ರಾಣ ತಗೊಂಡೇಬಿಟ್ಟೆಲ್ಲೆ.... ಅಯ್ಯೊ ರಾಕ್ಷಸಿ, ಅವ್ನ ಪರಿಸ್ಥಿತೀನ ಉಪಯೋಗಿಸಿಕೊಂಡು ಅವ್ನ ಇನ್ನೊಸೆನ್ಸ್ ಜತೆ ಆಟ ಆಡಿ ಅವನ್ನ ಮುಗ್ಸೆ ಬಿಟ್ಯಲ್ಲೆ..... ನಿನ್ನ ಮುಟ್ಟೋಷ್ಟು ಧೈರ್ಯ ಅವ್ನಿಗೆ ಹೆಂಗೆ ಬಂತೂ....? ಅವನ್ನ

ಪ್ರೇರೇಪಿಸ್ಕೋರ್‍ಯಾರು....? ಅವನ ಮೈಕೈ ಎಲ್ಲಾ ಮುಟ್ಟಿ ಸವರಿ ಅವ್ನ ಉದ್ರೇಕಿಸಿ, ನೀನು ಬಿಟ್ಟಿ ಸುಖ ಅನುಭವಿಸ್ತಿದ್ದಲ್ಲ ಕಂತ್ರಿ ಆಗ ನಿಂಗೆ ಅಸಹ್ಯ ಆಗ್ತಿರ್ಲಿಲ್ಲಾ....? ಅವ್ನು ನಿನ್ನ ಮುಟ್ಟಿದಾಕ್ಷಣ ಏನೇ ನಿಂದು ಕೊಳ್ಳೆ ಹೋಗಿದ್ದು....?

ಅವ್ನ ಎಮ್ಮೆ ಅಂತಿದ್ಯಲ್ಲಾ ಯೂ ಫೂಲ್ ಎಮ್ಮೆನೂ ಒಂದ್ಸಾರಿ ಪ್ರೀತಿಯಿಂದ ಮೈ ನೇವರಿಸಿ ಇನ್ನೊಮ್ಮೆ ಎದುರಿಗೆ ಹೋದ್ರೆ 'ಅಂಬಾ...' ಅಂತ ನಮ್ಮನ್ನ ಹತ್ತಿರ ಕರೆಯುತ್ತೆ. ಅಂತಾದ್ರಲ್ಲಿ ಅವ ಮನುಷ್ಯ ಕಣೇ ನಿನ್ನ ಹಾಗೇ. ನೀನು ಮುಟ್ಟುತ್ತಿದ್ದಿಯಾ ಅಂತ ಅವ್ನಿಗೆ ಫೀಲ್ ಆಗ್ದೆ ಇದ್ದಿರ್ಬಹುದು ಆದ್ರೆ, ಅವನನ್ನು ಮುಟ್ಟುತ್ತಿದ್ದೀನಿ ಅನ್ನೋ ಭಾವನೆ ನಿಂಗೆ ಆಗ್ತಿರ್ಲಿಲ್ವಾ....? ಬೊಗ್ಳೆ ನೀನು ಆ ಸ್ಪರ್ಶನ ಫೀಲ್ ಮಾಡ್ತಿರ್ಲಿಲ್ವಾ...? ಯೂ ಬಿಚ್ ಅದನ್ನ ನೀನು ಎಂಜಾಯ್ ಮಾಡ್ತಿರ್ಲಿಲ್ವಾ....? ಆನ್ಸರ್ ಮೀ ಯೂ ಡರ್ಟಿ ಬಿಚ್....' ಅಪ್ಪ ಛಟೀರನೆ ನನ್ನ ಕೆನ್ನೆಗೆ ಬಾರಿಸಿದಾಗಲೇ ನನಗೆಚ್ಚರ ರಿಸೀವರ್ ಜಾರಿ ಕೆಳಗುರುಳಿತ್ತು.

ಸುಮ್ಮನೇ ಸೂರು ನೋಡುತ್ತ ಮಲಗಿದ್ದೆ. ರೇಖ ಪ್ರತ್ಯಕ್ಷವಾಗಿ ಕಾರಣಳಾದರೆ ನಾನು ಪರೋಕ್ಷವಾಗಿ ಕಾರಣಳಾಗಿದ್ದೆ ಎಲ್ಲ ಹಗರಣಕ್ಕೆ. ಆಕೆ ಮಾಡುತ್ತಿದ್ದ ಚೇಷ್ಟೆಗಳಿಗೆಲ್ಲ ನಕ್ಕು, ನಕ್ಕು ಕುಮ್ಮಕ್ಕು ಕೊಡುತ್ತಲಿದ್ದೆ. ಇಬ್ಬರೂ ಸಮಾನ ಹೊಣೆಗಾರರು.

ಇದೆಂತಹ ವಿಚಿತ್ರ ವ್ಯವಸ್ಥೆ? ಇದೆಂತಹ ವಿಚಿತ್ರ ಶಿಕ್ಷೆ...? ಶಿಕ್ಷೆ ಅನುಭವಿಸಬೇಕಾದವರು ನಾವು... ಹೌದು ಶಿಕ್ಷೆ ನಮಗೆ.... ಚೀರಿದೆನೇನೋ ಅಮ್ಮ ಓಡಿಬಂದಳು.

'ಸುಮ್ನೆ ಬಿದ್ಕೊಳೆ ಅತಿ ಆಡ್ಬೇಡ, ನೋಡು ಪಾಪ, ಆ ಹುಡ್ಗಿಗೆ ನಿನ್ನೆ ಏನೇನೋ ಅಂದ್ಯಲ್ಲ ಅವ್ಳಿಗೆ ರಾತ್ರಿ ಎಲ್ಲಾ ಜ್ವರ ಬಂದು, ಏನೇನೋ ಮಾತಾಡ್ತಿದ್ಲಂತೆ. ಪಾಪ ರಾತ್ರೋರಾತ್ರಿ ಆಸ್ಪತ್ರೆಗೆ ಸೇರ್‍ಸಿದ್ರಂಥೆ......' ಇನ್ನು ಏನೇನೋ ಒದರಿಹೋದ್ಲು ಅಮ್ಮ.

'ಇವರೆಲ್ಲ ಮನುಷ್ಯರೇ....? ಹೌದೆ....? ಹಾಗಿದ್ದರೆ ಎಂತಹ ಮನುಷ್ಯರಿವರೂ....?' ಗಲಿಬಿಲಿಗೊಳ್ಳುತ್ತ ಚಡಪಡಿಸತೊಡಗಿದೆ.

ನನ್ನ ಯಾರೋ ಹಿಡಿದು ಅಲ್ಲಾಡಿಸುತ್ತಿದ್ದರು. ಕಣ್ಣು ತಿರುಗಿಸಿದರೆ ದುರುಗ....! ಅರೆ, ಅದೇ ದೂಪ್ದಳ್ಳಿ ದುರುಗ....! ಅದೇ ಸೆಕ್ಸಿ ದುರುಗ....! 'ಅದೇ ಕಣಮ್ಮೆ ನಮ್ ಮಲ್ಲಪ್ಪಣ್ಣನೇಣ್ತಿ ರತುನ.... ಹಸಿಮೈ ಬಾಣ್ತಿ.... ದೆವ್ವ ಮೆಟ್ಕಂಡು, ಮೈಯೆಲ್ಲಾ ನೀಲ್ಗಟ್ಟಿ, ಬಾಯ್ತುಂಬ ನೊರೆ ಕಕ್ಕಿ ತೀರ್‍ಕೆಂಡೇ ಬಿಟ್ಲು. ಮತ್ತೊಂದ್ವಾರ್‍ಕೆಯ ರತುನ ದೆವ್ವಾಗಿ ನಮ್ಮೂರ್ ಸಾವ್ಕಾರ್‍ನೇಣ್ತಿನ ಮೆಟ್ಕಂಡು, ಮುರ್‍ಕಂಡದೇ ವೋದ್ಲು.....' ಹೇಳುತ್ತಲೇ ನಗತೊಡಗಿದ. ಹೊಟ್ಟೆ ಹಿಡಿದುಕೊಂಡು ಬಿದ್ದು, ಬಿದ್ದು ಉರುಳಾಡಿ ನಗತೊಡಗಿದ. ನನಗೂ ತಡೆಯದಾಯ್ತು. ನಗತೊಡಗಿದೆ ಜೋರಾಗಿ ನಾನೂ ಅವನಂತೆಯೇ, ಅವನೊಂದಿಗೆ ಬಿದ್ದು ಬಿದ್ದು ಉರುಳಾಡಿ......

✦ ✦

ಮನಸಿನಂತೆ ಮಹಾದೇವ

I am determined to be cheerful and happy in whatever situation I may find myself. For I have learned that the greater part of our misery or unhappiness is determined not by our circumstance but by our disposition....

ವಿನಾಯಕ ಜೋರಾಗಿ ಓದುತ್ತಿದ್ದ. ಅರೆ! ಇದ್ದಕ್ಕಿದ್ದಂತೆ ಅಳುವ ಸದ್ದು. ಹೌದು ವಿಶಾಲು ಅಳುತ್ತಿರುವಂತಿದೆ. ವಿನಾಯಕ ಓದುವುದನ್ನು ನಿಲ್ಲಿಸಿದ. ಅವನಿಗೂ ಕೇಳಿಸಿರಬೇಕು. ನಾನು ರೂಮಿನಿಂದ ಹೊರ ಬಂದೆ. ಹಾಲಿನ ಸೋಫಾದ ಮೇಲೆ ಅಂಗೈಗಳಲ್ಲಿ ಮುಖವುದುಗಿಸಿ ಅಳುತ್ತಿದ್ದಾಳೆ ವಿಶಾಲು.

'ಯಾಕೆ? ಏನಾಯ್ತು?' ವಿನಾಯಕ ಕೇಳುತ್ತಿದ್ದಾನೆ. ನನ್ನ ನೋಡಿದವನೇ

'ಅಮ್ಮಾ....' ಅಂತ ಏನೋ ಹೇಳೋಕೆ ಹೊರಟ. ನಾನು ಸುಮ್ಮನಿರುವಂತೆ ಕಣ್ಸನ್ನೆ ಮಾಡಿದೆ.

ನನ್ನ ಇರುವು ಗೊತ್ತಾದೊಡನೆ ತಟ್ಟನೆ ತಲೆಯೆತ್ತಿ, ದುರುದುರು ನೋಡುತ್ತಾ

'ಎಲ್ಲಾ ನಿನ್ನಿಂದಾನೆ, ನಿನ್ನ ಸಪೋರ್ಟಿನಿಂದನೇ ಇವ್ನು ಮಾತ್ಮಾತಿಗೂ ನನ್ನ ಆಡ್ಕೊಳ್ತಾನೆ. ಮಾತಿನ ನೆಪದಲ್ಲಿ, ಹಾಡೋ ನೆಪದಲ್ಲಿ, ಓದೋ ನೆಪದಲ್ಲಿ ನನ್ನ ಚುಚ್ತಾನೆ, ಹಂಗಿಸ್ತಾನೆ....'

ಅವಳ ಮಾತುಗಳಿನ್ನೂ ಮುಗಿದಿರಲಿಲ್ಲ ವಿನೂ ಧಾವಿಸಿದವನೇ ಆಕೆಯನ್ನು ಒರಟಾಗಿ ಹಿಡಿದು, ಮುಖವೆತ್ತಿ ಪುಸ್ತಕ ತೆರೆದಿಟ್ಟು

'ಬಿಡು ನಿನ್ನ ಕಣ್ಣು, ನೋಡಿಲ್ಲಿ ನಾನು ಇದುವರ್ಗೂ ಓದ್ಕೊಳ್ತ ಇದ್ದದ್ದು ಈ ಪುಸ್ತಕದಲ್ಲಿ ಇದ್ಯೋ ಇಲ್ವೋ ನೋಡು..... ನೀನು ಬಂದೇ ಬಂದೆ ನಮ್ಮನೆ ನರಕ ಆಗೋಯ್ತು. ನಾವ್ಯಾರೂ ಸಮಾಧಾನದಿಂದ ಬದುಕುವಂತೇ ಇಲ್ಲ. ಇಷ್ಟೊಂದು ನೀನು ಸೂಕ್ಷ್ಮವಾಗಿದ್ರೆ ಯಾಕಿನ್ನೂ ಇಲ್ಲೇ ಸಾಯ್ತಿಯಾ? ಎಲ್ಲಾದರೂ ಹಾಳಾಗಿ ಹೋಗ್ಬಾರ್ದೇನೂ.....'

ಬಡಬಡಿಸುತ್ತಲೇ ಇದ್ದ ವಿನಾಯಕ, ನಾನು ಧಾವಿಸಿ ಕೆನ್ನೆಗೆ ರಪ್ಪನೆ ಬಾರಿಸುವ ತನಕ.

ಒಂದೂ ಮಾತನಾಡದೆ ರೂಮು ಸೇರಿಬಿಟ್ಟ ಬಾಗಿಲು ಜಡಿದು. ನಾನು ವಿಶಾಲೂಗು ಏನೂ ಹೇಳಲಿಲ್ಲ. ಹಿತ್ತಲಿಗೆ ನಡೆದು ಕಟ್ಟೆಯ ಮೇಲೆ ಕೂತುಬಿಟ್ಟೆ. ಏನಂತ ಹೇಳೋದು, ಎಷ್ಟಂತ ಹೇಳೋದು.

ಗಂಡ ಕೆಟ್ಟ ಕುಡುಕ. ತಾನೇ ಮೆಚ್ಚಿ ಮಾಡಿಕೊಂಡವ. ಬಿಟ್ಟು ಬಂದು ಆಗಲೇ ಎರಡು ವರ್ಷ. ಅವನೂ ಬರುತ್ತಿಲ್ಲ ಈಕೆಯೂ ಹೋಗುತ್ತಿಲ್ಲ. ಆಗಿನಿಂದಲೂ ಇದೇ ಗೋಳು. ಮಾತಿಗೊಂದು, ನಡೆಗೊಂದು, ನಗುವಿಗೊಂದು ಅಪಾರ್ಥ. ಇದರಿಂದ ಗೆಳತಿಯರೂ ದೂರ. ಖಾಲಿ ಕೂರುವ ಬದಲು ಏನಾದರೂ ಮಾಡೆಂದರೆ ಅದಕ್ಕೆ ನೂರಾರು ಸಿದ್ಧ ಕಾರಣಗಳು.

ಟ್ಯೂಷನ್ ಹೇಳು ಎಂದರೆ 'ಅಯ್ಯೋ, ಮಕ್ಕಳೆಂದರೆ ಅಲರ್ಜಿ, ಇನ್ನು ಮ್ಯಾತ್ಸು, ಸೈನ್ಸು ನಂಗೇ ಗೊತ್ತಿಲ್ಲ' ಎಂಬ ಕಾರಣ.

ಕಂಪ್ಯೂಟರ್ ಎಂದರೆ 'ತಲೆನೋವು..'

ಬಿ.ಎ. ಆಗಿದೆಯಲ್ಲಾ ಎಂ.ಎ. ಮಾಡು ಎಂದರೆ 'ನೋ ಕಾನ್ಸೆನ್‌ಟ್ರೇಷನ್..'

ಹೋಗಲಿ ಕಸೂತಿ, ಪೇಂಟಿಂಗ್, ಟೈಲರಿಂಗ್ ಅಂದ್ರೆ 'ಕಣ್ಣು ನೋವು..'

ನನ್ನೊಬ್ಬಳದೇ ದುಡಿಮೆ. ಇವರು ಸತ್ತ ನಂತರ ಬಂದ ಹಣದಲ್ಲೇ ಇವಳ ಮದುವೆ ಮಾಡಿದ್ದು. ಉಳಿದದ್ದು ವಿನಾಯಕನ ವಿದ್ಯಾಭ್ಯಾಸಕ್ಕೆ. ಇವರೇ ಇವಳು ಹೀಗಾಗಲು ಕಾರಣ.

ಬದುಕಿರುವವರೆಗೆ ಕೂತರೆ ಕಷ್ಟ, ನಿಂತರೇ ಕಷ್ಟ. ಒಬ್ಬಳೇ ಹೊರ ಹೋದರೆಂಗೋ ಬಂದರೆಂಗೋ. ಒಂದು ಚೂರು ಮೈ ನೋಯುವಂಗಿಲ್ಲ ಎಲ್ಲಾ ಕೂತ ಕಡೆಯಲ್ಲೇ. ಕಷ್ಟದ ಅರಿವೆ ಇಲ್ಲದಂತೆ ಅಬ್ಬಾ! ಓವರ್ ಪ್ರೊಟೆಕ್ಟಿವ್.

ಇವತ್ತಿಗೂ ಅದನ್ನೆ ಸಾಧಿಸುತ್ತಾಳೆ. ಆಯ್ತು ಅದೂ ನಡೆಯಲಿ ಅಂದರೆ ಎಲ್ಲದರಲ್ಲೂ ಕೊಂಕು, ಇಲ್ಲಸಲ್ಲದ ಹುಡುಕಾಟ. ಅವನಿಗೆ ವಿಚ್ಛೇದನ ಕೊಟ್ಟು ಕೈತೊಳೆದುಕೊ ಹೊಸ ಜೀವನ ಪ್ರಾರಂಭಿಸು ಅಂದರೂ ಆಗದು. ಹೋಗಲಿ ಆದದ್ದಾಯ್ತು ಅನುಸರಿಸಿಕೊಂಡು ಹೋಗು ಅವನೊಡನೆ ಬದುಕು ಅಂದರು ಆಗದು.

ಮೊನ್ನೆ ಬ್ಯುಟಿಷಿಯನ್ ಕೋರ್ಸಿಗೆ ಅರ್ಜಿ ಹಾಕು ಅಂದ್ರೆ ಅವಳ ಗಂಡನಿಗದು ಇಷ್ಟವಾಗುವುದಿಲ್ಲವಂತೆ. ಅವನೋ ಇವಳು ಸತ್ತಿರುವಳೋ ಬದುಕಿರುವಳೋ ಅಂತಲೂ ತಿರುಗಿ ನೋಡಿಲ್ಲ ಅಂದಿನಿಂದ. ಇದಕ್ಕೇನು ಪರಿಹಾರ ಅಂತ ಯೋಚಿಸಿದರೆ ಉತ್ತರ ಸೊನ್ನೆ.

ಶಬ್ದವಾಯ್ತು ತಿರುಗಿದರೆ ವಿನಾಯಕ.

'ತಪ್ಪಾಯ್ತಮ್ಮಾ....' ಅನ್ನುತ್ತ ಪಕ್ಕಕ್ಕೇ ಕುಳಿತು ಭುಜಕ್ಕೆ ತಲೆಯೊರಗಿಸಿದ. ಅವನ ಕೆನ್ನೆ ಸವರಿ.

'ಪೆಟ್ಟಾಯ್ತೇನೊ....' ಅಂದೆ. 'ಇಲ್ಲಪ್ಪಾ ಮುತ್ತು ಕೊಟ್ಟಂಗಾಯ್ತು...' ಅಂದು ನಕ್ಕ.

'ಅಮ್ಮಾ ಇನ್ನು ಎಷ್ಟು ದಿನ ಹೀಗೇ....' ಅವನ ಪ್ರಶ್ನೆಗೆ ಬರಿಯ ನಿಟ್ಟುಸಿರು ಉತ್ತರ. ಕಣ್ಮುಚ್ಚಿ ಕೂತೆ.

'ಅಮ್ಮ ಅಮ್ಮಾ ಅಲ್ನೋಡು....' ತಿವಿಯುತ್ತ ಹೇಳಿದ ವಿನಾಯಕನ ದನಿಯಲ್ಲಿ ಕುತೂಹಲ. ಕಣ್ಬಿಟ್ಟು ಮನೆಯ ಹಿಂದಿನ ಜಾಲಿಯತ್ತ ಕಣ್ಣಾಯಿಸಿದೆ. ಜಾಲಿಯ ನಡುವಿನ ಕಾಲುದಾರಿಗುಂಟ ಇತ್ತಲೇ ನಡೆದು ಬರುತ್ತಿದ್ದಾಳೆ ಹಣ್ಣು ಹಣ್ಣು ಮುದುಕಿ.

ಮೈಯ ಚರ್ಮವೆಲ್ಲಾ ನೆರಿಗೆಗಟ್ಟಿ ಜೋತುಬಿದ್ದು ಇಡೀ ದೇಹವೇ ಸುಕ್ಕುಗಟ್ಟಿದಂತಿದೆ. ಎಡ ಕಂಕುಳಲ್ಲಿ ಬಟ್ಟೆಯ ಗಂಟು, ಬಲಗೈಯಲ್ಲಿ ಕೋಲೂರಿಕೊಂಡು ಇತ್ತಲೇ ಬರುತ್ತಿದ್ದಾಳೆ. ದೇಹ ಪೂರ್ತಿ ಬಾಗಿದೆ. ಬಾಯನ್ನು ಒಂದೇ ಸಮನೆ ತೆರೆದು ಮುಚ್ಚುತ್ತಿದ್ದಳು. ಮನೆ ಹತ್ತಿರ ಬಂದಂತೆ ಇದ್ದಬದ್ದ ಕಸುವೆಲ್ಲಾ ಕೂಡಿಸಿ, ನಡುಗುವ ಕಂಠದಲ್ಲಿ ಕೂಗಿದಳು 'ಒಣಮೀನಮ್ಮ...' ದೇಹ ಬಾಗಿ ಬೆಂಡಾಗಿದ್ರೂ ಕಂಠ ಘಂಟೆ ಹೊಡೆದಂತಿತ್ತು. ವಯಸ್ಸಿನ ಪ್ರಭಾವ ಕಂಪನದಲ್ಲಿ ಮಾತ್ರ.

ಮತ್ತೊಮ್ಮೆ ಅದೇ ಕೂಗು. 'ಅಮ್ಮಾ ಕರೆಯೋಣ ಅಜ್ಜೀನ. ಅಪ್ಪ ಇದ್ದಾಗ ಮಾಡ್ತಿದ್ಯಲ್ಲ ಬದನೆಕಾಯಿ, ನೀರುಳ್ಳಿ, ಹಸಿಮೆಣಸಿನಕಾಯಿ, ಟೊಮೆಟೊ ಎಲ್ಲಾ ಸುಟ್ಟು ಅದಕ್ಕೆ ಉಪ್ಪು, ಕೊತ್ತುಂಬರಿ, ಬೆಳ್ಳುಳ್ಳಿ ಸೇರಿಸಿ, ಒಣಮೀನು ಹುರ್ದು ಅದರೊಳಗೆ ಕಿವುಚಿ ಅಹಾ! ಅಮ್ಮಾ ಕರಿಯಮ್ಮಾ.....' ಅಂದು ಕರದೇ ಬಿಟ್ಟ.

ಅಜ್ಜಿಯ ಗಂಟಿನಲ್ಲಿ ಒಣಗಿದ ಸೀಗಡಿ, ಬಂಗುಡೆ, ಸಣ್ಣ ಮೀನು ಇದ್ದವು. ಎಲ್ಲಾ ಖಾಲಿಯಾಯಿತು. ಖುಷಿಗೊಂಡು ಅಜ್ಜಿ 'ನೀರ್ಕೊಡವ್ವ ಕುಡಿಯಕೆ....' ಅಂದ್ಲು. ನೀರು ಕುಡಿದ ಮೇಲೆ.

'ಏನಾದ್ರು ತಿನ್ನೋಕೆ ಕೊಡ್ಲೇನಜ್ಜಿ....' ಅಂದೆ.

'ನಾನು ದುಡ್ಕಂಡು ತಿಂಬಳೆ ವರ್ತು ತಿರ್ಕಂಡು ತಿಂಬಳಲ್ಲ ಕಣೇ ತಾಯಿ' ಅಂದಾಗ ರಪ್ಪನೆ ಬಾರಿಸಿದಂತಾಯ್ತು.

"ತಪ್ಪು ತಿಳಿಬೇಡಜ್ಜಿ ನಿನ್ನ ವಯಸ್ಸು, ಈ ಬಿಸಿಲು ನೋಡಿ ಅಯ್ಯೊ ಅನ್ನಿಸ್ತು...'ಎಂದೆ.

'ಜೋತ್ಬಿದ್ದಿರ ಈ ತೊಗಲ್ನೋಡಿ ವಯಸ್ಸಾತು ಅಂಬ್ತಿಯಾ? ಇಲ್ಲಿ ಗಟ್ಟಿದನಿ ಇಲ್ಲಿ....'

ಎದೆಮುಟ್ಟಿ ತೋರಿಸಿತು ಅಜ್ಜಿ. ಅವಳ ಸೆಡವು, ಗಟ್ಟಿತನ ಮತ್ತಷ್ಟು ಕುತೂಹಲ ಹುಟ್ಟಿಸಿ

'ಯಾರಜ್ಜಿ ನೀನು? ಎಲ್ಲಿಂದ ಬಂದೆ? ನಿನಗ್ಯಾರು ಇಲ್ವಾ?' ಒಂದೇಟಿಗೆ ಕೇಳ್ದೆ.

'ನಮ್ಮನಿ ಇಲ್ಲೇ ಬಂದೂರು ಕ್ಯಾಂಪು. ಐದ್ಮಂದಿ ಮಕ್ಳು. ಯಲ್ಡು ಯಣ್ಣು, ಮೂರ್ಗಂಡು. ಯಲ್ಲಾರ್ದೂ ಲಗ್ನ ಆಗೇತಿ. ಗಂಡ ಸತ್ತು ಭಾಳ ವರ್ಸಾತು. ಮಕ್ಳಿಲ್ಲೆ ಕಟುಕರಂಗ್ಡಿ ಇಟ್ಗಂಡರೆ...'

'ಕಟುಕರಂಗ್ಡಿ...' ವಿನಾಯಕ ಆಶ್ಚರ್ಯದಿಂದ ಕೇಳಿದ.

'ಹುಂನಪ್ಪ ಮಾಂಸ ಮಾರಾಟ ಮಾಡ್ತರೆ....' ಅಂದ್ಲು.

'ಹಂಗಾದ್ರೆ ಒಳ್ಳೆ ಆದಾಯನೇ ಇರುತ್ತೆ. ನಿನಗೇನು ಧಾಡಿ ಮನೇಲಿ ಕುಂತು ತಿನ್ಬಾರ್ದಾ....?' ಎಲ್ಲರಂತೆ ಹೇಳಿದೆ.

'ಇನ್ನ ಹರೇವು ಇರ ನಿನ್ ಬಾಯ್ನಾಗೆ ಈ ಮಾತು ಬರ್ಬಾರ್ದು....' ನಡುಗುವ ದನಿಯಲ್ಲೂ ಹಮ್ಮು.

'ಮೀನು ವತ್ಗಂಡು ಬರ್ತಿ್ನ ಅಂದ್ಬುಟ್ರೆ ಮಕ್ಳು ಉಂಬಕಾಕಲ್ಲ ಅಂಬ್ತೇನು? ಕುಂತು ತಿನ್ನ ಚಾಳಿಯಲ್ಲ ನಂದು. ಒಂದನಿ ನೀರೂ ಗಂಟ್ಲಾಗಿಳಿಯಲ್ಲ. ಒಬ್ರು ರಿಣ ಒಬ್ರು ಹಂಗು ನನಿಗ್ಬ್ಯಾಡ...' ತಲೆ ಗಿಮ್ಮಂತು.

ಈ ಅಜ್ಜಿ ಉಲ್ಟಾ ಹೊಡೀತಾಳಲ್ಲ ಎನಿಸಿ 'ಅಲ್ಲಜ್ಜಿ, ಈ ವಯಸ್ನಲ್ಲಿ ನಿನ್ನ ನೋಡ್ಕೊಬೇಕಾದ್ದು ಅವರ ಕರ್ತವ್ಯ. ನಿನ್ನ ಕೂರಿಸಿ ಊಟಕ್ಹಾಕ್ಬೇಕು....' ಅಂದ್ರೆ

'ತಿರ್ಗ ಅದುನ್ನೆ ಯೇಳಿಯಲ್ಲವ್ವ ಕೈಲಾಗ್ದರು ಯೇಳೋ ಮಾತು.... ನೀನಿಂಗಂತಿ ನಾನೇನರ ಮನ್ಯಾಗೆ ವಂತಾಸು ಸುಮ್ನೆ ಕುಂತ್ರೆ ಯಾಕವ್ವ ಪಾಡಿಲ್ಲೇನು? ಯೇನಾತು? ಅಂತ ಮಕ್ಳು ಯಾದಾರ ಪಡ್ತಾರೆ, ಬೈದಾಡ್ತರೆ. ನಾನು ಓಡಾಡ್ಕೆಂಡು ಇದ್ರೆ ನಮ್ಮವ್ವ ಗಟ್ಯದಳೆ ಅಂತ ಖುಸಿ ಪಡ್ತಾರೆ..'

'ಆಯ್ತು ಒಪ್ಕೊಳ್ಳೋಣ ಅಜ್ಜಿ. ಆದ್ರೆ ನೀನು ಅದಕ್ಕೋಸ್ಕರ ಇಷ್ಟು ದೂರ ಯಾಕೆ ಬರ್ತಿ? ಮನೆಯ ಹತ್ರಾನೇ ಕೂತು ವ್ಯಾಪಾರ ಮಾಡು ಏನಾದ್ರು ಯೆಚ್ಚುಕಮ್ಮಿ ಆದ್ರೇ....' ನನ್ನ ವಾದ.

'ಖರೇವ್ವ ನೀನ್ಯೇಳದು. ಅದುನ್ಯಾರು ಕಂಡಾರೇಳೂ....? ಹೆಚ್ಚುಕಮ್ಮಿ ಕುಂತಾವೇ ಆದಾತು. ನಮ್ ನೆಳ್ಳಿನಂಗೆ ವೊದ್ತಾವೆಲ್ಲ ಬರ್ತೈತದು. ಟೇಮು ಬಂದಾಗ ಕುಂತ್ರೂ ಬಿಡಲ್ಲ, ನಿಂತ್ರೂ ಬಿಡಲ್ಲ. ಅದೋ ಅಲ್ನೋಡು....' ನಮ್ಮ ಮನೆ ಹಿಂದೆ ಜಾಲಿಯ ಅತ್ತ ಕಡೆಯಿರುವ ಬಡಾವಣೆಯತ್ತ ಕೈ ತೋರಿ ಹೇಳಿದಳು.

'ಅಲ್ಲಿ ಐದು ಖಾಯಂ ಮನೆ ಅದಾವೆ. ಐವತ್ತು ರುಪಾಯಿ ಸಿಗ್ತೈತೆ. ಅದು ಕುಂತ್ರೆ ಬರತ್ತೇನವ್ವ ಮೈ ಬಗ್ಗುಸ್ಬೇಕು. ನಾಳೀಕೆ ದೀಪಾವಳಿ ಅಂತೆ. ಎಲ್ಲಾ ಮಡಿ ಮಾಡೀವಿ ಇವತ್ತು ಬ್ಯಾಡ ಮೀನು ಅಂದ್ರು, ಹೌದೂ.... ನೀವ್ಯಾ ಜನ ಸಾಬ್ರೇನೂ?'

ಹುಬ್ಬಿಗೆ ಅಡ್ಡ ಕೈ ಹಚ್ಚಿ ಪರೀಕ್ಷಿಸುವವಳಂತೆ ನಮ್ಮತ್ತ ನೋಡುತ್ತಿದ್ದ ಅಜ್ಜಿಯನ್ನು ನೋಡಿ ನಗುತ್ತ

'ಇಲ್ಲ ಕಣಜ್ಜಿ ಹಂಗ್ಯಾಕೇಳ್ದೆ....?' ಎಂದ ವಿನಾಯಕ.

'ಅಲ್ಕಣಪ್ಪಾ ನಿಮ್ಗೆ ಅಂಟು ಮುಂಟು ಇಲ್ಲೇನು? ನಾಳೀಕೆ ಹಬ್ಬ......' ಅಜ್ಜಿ ಮಾತಿಗೆ

'ಉಹೂಂ ಮೀನಿಗೆಲ್ಲಾ ಅಂಟುಮುಂಟು ಇಲ್ಲ. ಇನ್ನು ಪಾಯಸ ಹೋಳಿಗೆ ಅಂದ್ರೇನೆ ನಮ್ಗೆ ಅಂಟು ಮುಂಟು....' ಅಂದ ಅವನ ಮಾತು ಕೇಳಿ ಬೊಚ್ಚು ಬಾಯಗಲಿಸಿ ಪಕಪಕನೆ ನಕ್ಕಳಾಕೆ. ಮಗುವಿನ ಮುದ್ದು ನಗು!

ಖಾಲಿಯಾದ ಬುಟ್ಟಿಯನ್ನೆತ್ತಿಕೊಂಡು, ಸಿಂಬೆ ಸುತ್ತಿದ್ದ ಚಾದರವನ್ನು ಕೊಡವಿ ತಲೆ ಮೇಲೆ ಹೊದಿಯುತ್ತಾ 'ಮನಸ್ನಂತೇ ಮಾದೇವ....' ಅಂದ್ಲು.

'ಅಜ್ಜಿ, ಅಜ್ಜಿ ನಾಳೆ ನಮ್ಮನೆ ಪೂಜೆಗೆ ಬರ್ತಿಯಾ....?' ವಿನೂವಿನ ಹುಡುಗಾಟ.

'ಮಾಡ್ರಪ್ಪ ಮಾಡ್ರಿ, ಮಾಡ್ಬೇಕು ಪೂಜೆ. ಪೂಜೆ ಪುನುಸ್ಕಾರ ವಳ್ಳೆದೆಯಾ. ನನಿಗೆ ನನ್ ದುಡಿಮೇನೆ ಪೂಜೆ. ಅದರಾಗಿಂದ ಬರೋ ರೊಕ್ಕನೇ ಪ್ರಸಾದ.....' ಎಂತಹ ಮಾತು! ಅಜ್ಜಿಯ ವ್ಯಕ್ತಿತ್ವವೇ ವ್ಯಕ್ತವಾಗುತ್ತಿತ್ತು ಆ ಮಾತುಗಳಲ್ಲಿ.

'ನಿನ್ನೊಟ್ಟೆ ತಣ್ಣಗಿರ್ಲವ್ವ ತಾಯಿ....' ಎಂದು ಕೋಲೂರಿಕೊಂಡು ಇಡೀ ದೇಹವನ್ನೇ ಅಲ್ಲಾಡಿಸುತ್ತ ಟಕಟಕ ಹೊರಟಳಜ್ಜಿ.

'ಅಮ್ಮಾ ಹೌ ಇಸ್ ಇಟ್ ಪಾಸಿಬಲ್? ಈ ವಯಸ್ನಲ್ಲಿ ಇಷ್ಟು ದೂರ ನಡೆದು ಬಂದು.....' ವಿನಾಯಕ ಮರೆಯಾಗುತ್ತಿದ್ದ ಅಜ್ಜಿಯನ್ನೇ ಕಣ್ಣಗಲಿಸಿ ನೋಡುತ್ತಿದ್ದ.

'ಆಕೆ ಮಾತು ಕೇಳಿದ್ಯಲ್ಲ ದುಡಿಮೇನೆ ದೇವರು ಆದಾಯವೇ ಪ್ರಸಾದ ಅಂತ.... ಎಲ್ಲಾ ಅದರಲ್ಲೇ ಇದೆ. ದೇಹದಲ್ಲಿ ನಿಶ್ಶಕ್ತಿ ಆದರೆ ಮಾನಸಿಕವಾಗಿ ಬಲುಶಕ್ತಳು ಆಕೆ. ಆದರೆ ನಾವುಗಳು ಮಾನಸಿಕವಾಗಿಯೇ ಅಶಕ್ತರು ಅದಕ್ಕೇ ನಮ್ಮ ಕೈನಲ್ಲಿ· ಏನೂ ಮಾಡೋಕಾಗೊಲ್ಲ. ಅದಕ್ಕೆ ಆ ಅಜ್ಜಿಯೂ ನಮಗೊಂದು ಸೋಜಿಗ.....'
ಎಂದು ಬಗ್ಗಿ ಮೀನೆತ್ತಿಕೊಂಡು ಒಳಹೋಗಲು ತಿರುಗಿದೆ. ವಿಶಾಲೂ! ನನ್ನಿಂದೆ ತಾನೂ ಒಳಬರಲು ತಿರುಗಿದ ವಿನಾಯಕನೂ ಗಾಬರಿಗೊಂಡು ನನ್ನ ಅವುಚಿ ಹಿಡಿದ ಹಿಂದಿನಿಂದ. ಮುಂದೇನು ಕಾದಿದೆಯೋ ಎಂಬ ಆತಂಕ ಅವನ ಹಿಡಿತದಲ್ಲಿ ಸ್ಪಷ್ಟವಾಗಿತ್ತು. ಒಂದೇ ಕ್ಷಣ ನೆಟ್ಟ ನೋಟ ತಟ್ಟನೆ ತಿರುಗಿ ನಡೆದುಬಿಟ್ಟಳು.

'ಅಮ್ಮಾ, ಅಮ್ಮಾ....' ಅಂತ ವಿನಾಯಕ ಅವಳ ಹಿಂದೆ ಓಡಲು ಹೋದ ನಾನು ತಡೆದೆ.

'ಅಲ್ಲಮ್ಮ ಆ ಅಜ್ಜೀನ ಇವ್ಳೇನಾದ್ರು ಅಂದ್ರೆ ಪಾಪ.....' ಅವನ ಗಾಬರಿ ನೋಡಿ ನನಗೆ ನಗು ಬಂತು.

'ಆ ಅಜ್ಜೀನ ಇವ್ಳು ಒಂದು ಪಕ್ಷ ಮಾತಾಡಿಸಿದ್ರೆ ಒಳ್ಳೇದೇ ಆಗುತ್ತೆ ಸುಮ್ನೆ ಇರು....' ಎನ್ನುತ್ತಾ ಅವನೊಡನೆ ಮುಂಬಾಗಿಲಿಗೆ ಬಂದೆ. ಮನೆಯೆದುರಿನ ಬೂತ್‌ನಲ್ಲಿ ಯಾರೊಡನೆಯೋ ಮಾತಾಡುತ್ತಿದ್ದಳು ವಿಶಾಲು ಫೋನ್ನಲ್ಲಿ.

'ಮನೇಲೇ ಫೋನಿತ್ತು..... ಹೆಂಗೋ ಸದ್ಯ ಅಜ್ಜಿ ಬಚಾವು.'

ವಿನೂ ಮಾತಿಗೆ ಅವನ ಜೊತೆ ನಾನೂ ನಕ್ಕೆ. ಬಂದವಳು ವಿಶಾಲು ಮಾತಾಡದೆ ರೂಮು ಸೇರಿದಳು. ರಾತ್ರಿಯಾದರೂ ಹೊರಬರಲಿಲ್ಲ. ಒಳಗಡೆ ಸಪ್ಪಳವೂ ಇಲ್ಲ. ಏನೋ ತಳಮಳ ಊಟಕ್ಕೆಂದು ಬಾಗಿಲು ಬಡಿದಾಗ

'ಬೇಡಾ....' ಎಂಬ ಉತ್ತರ ಕೇಳಿ ಮತ್ತೆ ಜೀವ ಸಂಚಾರ.

ಆಕೆಯ ರೂಮಿನ ಎದುರು ಸೋಫಾದ ಮೇಲೆ ಕೂತು ಹಾಗೇ ನಿದ್ದೆ ಹೋಗಿದ್ದೆವು. ಯಾವಾಗಲೋ ಇಬ್ಬರೂ. ಬೆಳಗ್ಗೆ ಕಣ್ತೆರೆದಾಗ ಆಗಲೇ ಗಂಟೆ ಎಂಟು. ರೂಮಿನ ಬಾಗಿಲು ತೆರೆದಿತ್ತು. ವಿಶಾಲು ಇರಲಿಲ್ಲ. ಮನೆಯಲ್ಲೆಲ್ಲೂ ಸುಳಿವಿಲ್ಲ. ಮತ್ತೆ ಗಾಬರಿ, ಆತಂಕ, ಹುಡುಕಾಟ. ಅಕ್ಕಪಕ್ಕ ಎದುರು ಬದುರು ಎಲ್ಲಾ ನೋಡಿ·ಬಂದ ವಿನಾಯಕ

'ಅಮ್ಮಾ....' ಅಂತ ಬಿಕ್ಕಿದ.

ನನಗೂ ಅಳು ಒತ್ತರಿಸಿಕೊಂಡು ಬಂತು. ಸೆರಗಿನಿಂದ ಕಣ್ಣೊತ್ತಿಕೊಂಡು ಅವಳ ಗಂಡನಿಗಾದರೂ ಕೇಳಿ ನೋಡೋಣ ಎಂದು ಫೋನೆತ್ತುವಷ್ಟರಲ್ಲಿ ನಗು ಮಕ್ಕಳ ಮಾತು. ವಿಶಾಲು ಜೊತೆಗೆ ಗೆಳತಿ ಅಂಬುಜಾ ಮತ್ತು ನಾಲ್ವರು ಮಕ್ಕಳಿದ್ದರು. ಅವರೊಡನೆ ತನ್ನ ರೂಮಿಗೆ ಹೋಗಿ ಕದವಿಕ್ಕಿಕೊಂಡಳು. ನಮ್ಮ ಅಚ್ಚರಿಯ ಮುಖಗಳನ್ನು ನೋಡಿ ಅಂಬುಜಾ ಮೆಲ್ಲನುಸುರಿದಳು

'ಆಂಟಿ ಆ ಮಕ್ಳಿಗೆ ಪಾಠ ಹೇಳ್ತಾಳಂತೆ. ಒಬ್ಬರಿಗೆ ನೂರು. ದಿನವೂ ಬೆಳಗ್ಗೆ, ಸಾಯಂಕಾಲ ಒಂದೊಂದು ಗಂಟೆ ಸಾಕಲ್ವಾ....?'

ವಿನಾಯಕ ಒಮ್ಮೆ ಗಾಳಿಯಲ್ಲಿ ಜಿಗಿದು, ಹಾರಿ 'ಯಾಹೂಂ ಅಜ್ಜೀ ಯೂ ಆರ್ ಗ್ರೇಟ್!' ಅಂದು ಹಿಂದಿನಿಂದ ನನ್ನ ಬಳಸಿ ಹಿಡಿದು ಭುಜಕ್ಕೆ ತಲೆಯೊತ್ತಿದ.

ನಾನೂ ಹಗುರಾದೆ. ಮಕ್ಕಳಿಗೆ ಪಾಠ ಮುಗಿಸಿ ಹೊರಬಂದವಳು ಮತ್ತೆಲ್ಲಿಗೋ ಹೊರಟು ನಿಂತಳು. ನಮ್ಮೊಂದಿಗೆ ಮಾತನಾಡಬಹುದೇನೋ ಎಂಬ ಕಾತರ ನಮ್ಮಿಬ್ಬರಿಗೆ. ಚಪ್ಪಲಿ ಮೆಟ್ಟಿಕೊಳ್ಳುತ್ತ

'ಅಂಬೂ ನಾನು ಕಂಪ್ಯೂಟರ್ ಕ್ಲಾಸ್‌ಗೆ ಹೋಗ್ತಿದೀನಿ. ಬರೋದು ಲೇಟಾಗುತ್ತೆ....'

ಅಂಬುಜಾಗೆ ಹೇಳಿ, ಪಕ್ಕದಲ್ಲಿಯೇ ಕಣ್ಣಗಲಿಸಿ ನಿಂತಿದ್ದ ವಿನಾಯಕನನ್ನು ಒಂದು ಕ್ಷಣ ದುರುದುರು ನೋಡಿ

'ಯಾಕೋ ನನ್ ಹಂಗ್ನೋಡ್ತಿ? ನಾನೇನು ದೆವ್ವ ಭೂತಾನ....' ಹೂಂಕರಿಸಿ ಮುಖ ತಿರುವಿ ಸರಕ್ಕನೆ ಹೊರಟಳು.

'ಮನಸ್ಸಿನಂತೇ ಮಾದೇವ....' ವಿನಾಯಕ ಅಜ್ಜಿಯ ಸ್ಟೈಲಿನಲ್ಲಿ ಸ್ವರ ನಡುಗಿಸಿ ಹೇಳಿದಾಗ ಅದುವರೆಗೂ ತಡೆದಿದ್ದ ನಗುವಿನ ಕಟ್ಟೆಯೊಡೆಯಿತು.

✦ ✦

ನೆಪ

ಸೂರ್ಯ ಅಸ್ತಮಿಸುತ್ತಿದ್ದ. ಮೇಯಲು ಹೋಗಿದ್ದ ದನಗಳೆಲ್ಲ ಹಟ್ಟಿಗೆ ಹಿಂದಿರುಗುತ್ತಿದ್ದವು. ಬಾಲ್ಯದಳ್ಳಿಗೆ ಬರುವ ಕೊನೆಯ ಬಸ್ಸು ವೆಂಕಟೇಶ ಮೋಟಾರ್ ಸರ್ವೀಸ್ಸು ಬರುವ ಹೊತ್ತು. 'ಹೊಯ್ ಕಲ್ಡೀ... ಹೊಯ್ ಲಕ್ಷ್ಮೀ...' ಅಂತ ದನಗಳನ್ನು ಬೆದರಿಸುತ್ತ ಬರುತ್ತಿದ್ದ ಮೈದುನ ಸೂರಪ್ಪನ ದನಿ ಕೇಳಿದ್ದೆ 'ವೆಂಕಟೇಸ ಬರೋ ವೊತ್ತಾತು...' ಅಂತ ತನ್ನ ಕೆಲಸದ ಗತಿ ಹೆಚ್ಚಿಸಿದಳು ಮಸ್ತಿ. ಒಲೆ ಮೇಲಿದ್ದ ಸಾರನ್ನು ಕೆಳಗಿಳಿಸಿ, ಮುದ್ದೆಗೆ ಎಸರಿಟ್ಟು ಕೊಳ್ಳಿ ದಬ್ಬಿ ಉರಿ ಮಾಡಿದಳು. ಬಸ್ಸಿನ ಹಾರನ್ ಕೇಳಿಸಿಯೇಬಿಡ್ತು. ತಡಬಡಾಯಿಸುತ್ತ ಹೊರಕ್ಕೋಡಿ ಬಂದ್ಲು. ಆ ಬಸ್ಸಿನ ವೇಗಕ್ಕೆದ್ದ ದೂಳೇ ಎಲ್ಲೆಡೆ ಕಾಣಸಿತೆ ಹೊರತು ಅವಳ ಮನೆಯತ್ತ ಯಾರೂ ಬರಲಿಲ್ಲ.

ಬಸ್ಸು ಹಾಗೆ ಹೊರಟು ಹೋಯ್ತು. ನಿಟ್ಟುಸಿರಿಡುತ್ತ ಬಂದಳು ಮಸ್ತಿ ತಿರುಗಿ. ಒಲೆಯ ಮೇಲಿನ ಎಸರು ಕುದಿಯುತ್ತಿತ್ತು. ಇಂದಿಗೆ ಸರಿಯಾಗಿ ಅವಳ ಗಂಡ ಮುತ್ತ, ತನ್ನ ಸಂಬಂಧಿ ಪರುಸಪ್ಪನೊಟ್ಟಿಗೆ ನೌಕರಿ ಸಲುವಾಗಿ ಬೆಂಗಳೂರಿಗೆ ಹೋಗಿ ಎರಡು ತಿಂಗಳು. ಕಣ್ಣೀರು ಸುರಿಸಿದ ಮಸ್ತಿಯನ್ನು ಗಮನಿಸಿದ ಅತ್ತೆ ಸುರಿಗೆವ್ವನ ಕರುಳು ಚುರ್ರಂತು. ಅವಳ ಮುಂದೆ ಕುಂತು ತಲೆಸವರಿ ಸಮಾಧಾನ ಮಾಡಿದಳು.

ಬ್ಯಾಲದಳ್ಳಿ ಸುಂಕಪ್ಪ, ಸುರಿಗೆವ್ವ ಇವರ ಹಿರಿಮಗನೇ ಮುತ್ತ. ಸುಂಕಪ್ಪನ ಸೋದರತ್ತೆ ಮಗಳೇ ಸುರಿಗೆವ್ವ. ಸಿದ್ದವ್ವನಳ್ಳಿ ತಿಪ್ಪಯ್ಯನ ಮಗಳು ಸುರಿಗೆವ್ವ ಹರೆಯದಲ್ಲಿ ಭಲೇ ಜೋರಿನ ಹೆಣ್ಣು. ಮೇಲಿನ

ಕೆಲಸಕ್ಕೆಂದು ಯಾವಾಗಲೂ ಗೌಡರ ಮನೆಯಲ್ಲೇ ಓಡಾಡಿಕೊಂಡಿದ್ದವಳು. ಮನೆಗೆಲಸವಾಗಲಿ, ಹೊಲದ ಕೆಲಸವೇ ಆಗಲಿ ಎಲ್ಲಕ್ಕೂ ಸೈ. ನೋಡಲು ಮಾತ್ರ ಕಂಚಿಕಡ್ಡಿಯಷ್ಟೇ ಗಾತ್ರ. ಆದರೆ ಅಷ್ಟೇ ಘಾಟಿ. ಗಂಡಾಳುಗಳಿಗೆ ಸಮನಾದ ಚುರುಕು, ಗಟ್ಟಿತನ. ಆದ್ದರಿಂದಲೇ ಗೌಡತಿಗೆ ಅವಳೆಂದರೆ ಅಚ್ಚುಮೆಚ್ಚು. ಆಕೆಯೊಬ್ಬಳಿದ್ದರೆ ಹತ್ತಾಳು ಇದ್ದಷ್ಟು ಧೈರ್ಯ. ಅವಳ ಗಟ್ಟಿತನಕ್ಕೆ ಸೋಜಿಗ ಪಡುತ್ತಲೇ ಮೇಲೆ ಅವಳನ್ನ ತಮಾಷೆ ಮಾಡುತ್ತಿದ್ದಳಾಕೆ.

'ಅಲ್ಕಣೆ ವುಡ್ಗಿ ನಿನ್ನಡಿಯಾಗಿ ಕ್ವಯ್ದಾಕಿದ್ರೂ ಕೆಜ್ಯೋಟು ಮಾಂಸವುಟ್ಟಲ್ಲ ಏಟೊಂದು ಜೋರು ನಿಂದೂ....? ಬಜಾರಿ ಅಂತ ನಾಳೆವತಾರೆ ಯಾವೊನು ಮಾಡ್ಕೆಂಡೋಗ್ದಿದ್ರೆ ಯೇನ್ಮಾಡ್ತಿ....?'

'ವೋಗ್ಲಿಬಿಡು ದೊಡ್ಡವ್ವ... ಅಂಗೆದ್ರಿ ವೋಗನಿನ್ನ್ಯಾವ ಸೀಮೆ ಗಂಡ್ಸು? ಅಂಥನ್ನ ಕಟ್ಕೆಳ ಬದ್ಲು ಅಂಗೆಯಿದ್ರಾತು....' ಅನ್ನೋಳು ಸುರಿಗೆವ್ವ.

'ನೋಡನಿರು ಈ ಧಿಮಾಕು ಅದೇಟ್ದಿನಿದ್ದಾತು...' ಅನ್ನುತ್ತಿದ್ದಳು ಗೌಡ್ತಿ.

ಹಾಗೇ ಆಯ್ತು. ಸುಗಮವಾಗಿ ಸಾಗುತ್ತಿದ್ದ ಸುರಿಗೆವ್ವನ ಬದುಕು ದಿಢೀರನೆ ಆಘಾತದ ತಿರುವು ಪಡೆದು ಆಕೆ ದಿಕ್ಕೆಟ್ಟು ಕೂತಳು. ಒಂದು ಮಟಮಟ ಮಧ್ಯಾಹ್ನ ಹೊಲಕ್ಕೆ ಬುತ್ತಿ ಒಯ್ಯುತ್ತಿದ್ದಳು. ತಡವಾದ್ದರಿಂದ ಮೊದಲೇ ಹುಷಾರಿಲ್ಲದ ಅಪ್ಪಯ್ಯ ಹಸಿದು ಸಂಕಟಪಡುತ್ತಿರಬಹುದು ಅಂತ ರಭಸವಾಗಿ ಹೊಲದತ್ತ ಹೊರಟಿದ್ದಳು. ಆಗಿನ್ನೂ ನಾಟಿಯಾಗಿತ್ತು. ಬದುವಿನ ಮೇಲೇ ಹುಷಾರಾಗಿ ಹೋಗುತ್ತಿದ್ದವಳು ಎದುರಿಗೆ ಬರುತ್ತಿದ್ದ ಸುಬ್ಬಾಜೋಯಿಸರನ್ನ ನೋಡಲಿಲ್ಲ. ಆತ ರಭಸವಾಗಿ ಬರುತ್ತಿದ್ದವಳನ್ನು ನೋಡಿ ಪಕ್ಕಕ್ಕೆ ಸರಿಯಲು ಹೆಣಗುತ್ತಿರುವಾಗಲೇ ಸುರಿಗೆವ್ವ ಅವನಿಗೆ ನೇರವಾಗಿ ಡಿಕ್ಕಿ ಹೊಡೆದಿದ್ದಳು.

ಬಾಯಿ ಬಡಿದುಕೊಳ್ಳುತ್ತಲೇ ಕೆಸರಿಗೆ ಬಿದ್ದು ಒದ್ದಾಡುತ್ತಿದ್ದವನನ್ನು ಈಕೆಯೇ ಎತ್ತಿ ನಿಲ್ಲಿಸಿದಳು. ಆದರೂ ಅವನು ತನ್ನ ಮಡಿ, ಆಚಾರವೆಲ್ಲ ಹಾಳಾಯಿತೆಂದು ಕೋಪದಲ್ಲಿ ಒದರುತ್ತಿದ್ದ.

'ನಿಮ್ಮನ್ನ ಬಹಿಷ್ಕಾರ ಹಾಕುಸ್ತಿನಿ, ನೀರು ಬೆಂಕಿ ಸಿಗದಂಗೆ ಮಾಡುಸ್ತಿನಿ.... ಅದೆಷ್ಟೇ ಪೊಗರು ನಿನಿಗೆ.....? ಬ್ರಾಹ್ಮಣನ ಮೈಮೇಲೆ ಬೀಳುವಷ್ಟು ಸೊಕ್ಕೆ ನಿನಿಗೆ....? ನೋಡ್ತಿರು ತಕ್ಕ ಶಾಸ್ತಿ ಮಾಡುಸ್ತಿನಿ....'

ಅಂತ ಕೋಪದಲ್ಲಿ ಮುಂದಕ್ಕೆ ಹೊರಟನವ. ಆದರೆ ಬಹಿಷ್ಕಾರ ಅಂತ ಕೇಳಿದ್ದೇ ನಡುಗಿಬಿಟ್ಟಳು ಸುರಿಗೆವ್ವ, ಅವನನ್ನು ತರುಬಿ, ಕಾಲಿಡಿದು ಕೂತಳು.

'ಬ್ಯಾಡ ಅಯ್ಯ ನನಿಗ್ಬೇಕರೆ ಏಟನ ಸಿಕ್ಸೆ ಕೊಡ್ರಿ ನಾನನುಬೈಸ್ತಿನಿ. ಆದ್ರೆ, ಬಹಿಸ್ಕಾರ ಬ್ಯಾಡಿ ಅಯ್ಯ....' ಅಂತ ಅಂಗಲಾಚಿದಳು.

ಜೋಯಿಸನ ವರಸೆಯೇ ಬದಲಾಯಿತು. 'ಸ್ಸರಿ, ನಾನೇಳ್ದಂಗೆ ಕೇಳ್ತಿಯಾ....?' ಅಂದವ ಅಕೆ ಹೂಂ ಅನ್ನಲೂ ಕಾಯದೆ ಬಗ್ಗಿ ಅವಳ ಭುಜವಿಡಿದು ಎಬ್ಬಿಸಿದ. ಅವಳನ್ನೊಮ್ಮೆ ಮೇಲಿಂದ ಕೆಳಕ್ಕೆ ನೋಡಿ ಸೊಟ್ಟಗೆ ನಕ್ಕ.

ಇದ್ದಕ್ಕಿದ್ದಂಗೆ ಮಂಕಾಗಿ, ಕಕ್ಕಿಕೊಳ್ಳತೊಡಗಿದ ಸುರಿಗೆವ್ವನ ನೋಡಿ ಗೌಡತಿಗೆ ಅನುಮಾನ ಬಂದೇ ಬಂತು.

'ಅದ್ಯಕಂಗೆ ತಿರುವಿಸ್ಕಂತಿ? ಏನಾತೇಳು....?' ಅಂದು ಗದರಿಸಿದಾ ಸುರಿಗೆವ್ವ ನಡೆದದ್ದೆಲ್ಲ ತಿಳಿಸಿದಳು.

'ಮೊದಲೇ ದಡುಕುದುಡುಕಿನಕಿ ನೀನು ಎದುರಿಗೆ ಬರ್ತಿದ್ದೋನು ಕಾಣ್ಲಿಲ್ಲೇನು....? ಮೈಮ್ಯಾಲ ಗ್ಯಾನಿಲ್ದೆ ವೋದ್ರೆ ಯಿಂಗೇಯ.... ನೋಡು, ಈ ವಿಸ್ಯ ಯಾರ್ತಾವೂ ಉಸುರ್ಬ್ಯಾಡ. ಅವ್ನು ಕೆಸರಿಗ್ಬಿದ್ದುದೇ ನ್ಯಪ ಮಾಡ್ಕೆಂಡು ತನ್ನ ಚಟ ತೀರಿಸ್ಕೆಂಡನೆ....' ಅಂದೋಳೆ ಗೌಡನಿಗೆ ವಿಷಯ ಅರುಹಿದಳು.

ಗೌಡ ಬೆಚ್ಚಿದ. ಬರುವ ತಿಂಗಳು ಎಲೆಕ್ಷನ್ನು ಬೇರೆ. ಈ ವಿಷಯ ಊರಲ್ಲಿ ಗುಲ್ಲಾದರೆ ಊರಿಗೆ ಊರೇ ಹೊತ್ತಿ ಉರಿಯುವುದು ಖಂಡಿತ. ಇದನ್ನ ಎಲ್ಲರು ತಮ್ಮ ರಾಜಕೀಯಕ್ಕೆ ಬಳಸಿಕೊಂಡು ಹುಡುಗಿ ಜೀವ್ನನ ಹಾಳಾಗುತ್ತೆ ಅಂದುಕೊಂಡು ಗುಟ್ಟಾಗಿ ಅವಳ ಅಪ್ಪ, ಅವ್ವನ ಕರೆಸಿ ಹಣಕಾಸಿನ, ಕಾಳುಕಡಿಯ ವ್ಯವಸ್ಥೆ ಮಾಡಿ ಸುರಿಗೆವ್ವನ ಸೋದರತ್ತೆ ಮಗನಿಗೆ ಎಂಟೇ ದಿನದಲ್ಲಿ ಮದುವೆ ಮಾಡಿ ಕಳುಹಿಸಿಕೊಟ್ಟುಬಿಟ್ಟರು.

ಗಂಡನ ಮನೆಯೋರು ಕಡುಬಡವರು. ಹೊಲಮನೆ ಏನೂ ಇಲ್ಲ. ಕೂಲಿಯೇ ಜೀವನಾಧಾರಕ್ಕೆ. ಮದುವೆಯಾಗಿ ಒಂಬತ್ತು ತಿಂಗಳಿಗೆ ಹುಟ್ಟಿದ ಮುತ್ತ. ಬೆಳ್ಳಗೆ ಕಳಕಳೆ ಯಾಗಿದ್ದ. ಅವನ ಹಿಂದೆಯೇ ಮತ್ತೆ ಮೂರು ಹಡೆದಳು. ಒಂದು ಹೆಣ್ಣು, ಎರಡು ಗಂಡು.

ಬಾಲ್ಯದಿಂದಲೂ ಮುತ್ತ ಬಲು ಚುರುಕು. ಸದಾ ಓದುವ ಹಂಬಲ. ಮಗನನ್ನು ನೋಡುತ್ತ, ನೋಡುತ್ತ ಅವಳ ಮನದಲ್ಲೂ ಒಂದು ಛಲ ಹುಟ್ಟಿತು. ಅವನ ಹುಟ್ಟಿಗೆ ಆದ ಅಪಮಾನ, ಅನ್ಯಾಯವನ್ನ ಅವನನ್ನ ದೊಡ್ಡ ವಿದ್ಯಾವಂತನನ್ನು ಮಾಡಿ, ದೊಡ್ಡ ಕೆಲಸಕ್ಕೆ ಸೇರಿಸಿ ಸರಿಪಡಿಸಬೆಕು ಎಂದು ನಿರ್ಧರಿಸಿದಳು. ಹಗಲು ರಾತ್ರಿ ಗಾಣದೆತ್ತಿನಂಗೆ ದುಡಿದಳು. ಗಂಡುಮಕ್ಕಳಿಬ್ಬರನ್ನು ಸಂಬಳಕ್ಕಿಟ್ಟು ಮಗಳನ್ನ ತವರ್ಮನೆಯ ಗೌಡರ ಮನೆಯಲ್ಲಿ ಬಿಟ್ಟಳು.

ಮುತ್ತಯ್ಯನ ವಿದ್ಯಾಭ್ಯಾಸವೆ ಅವಳ ಕನಸು. ಮುತ್ತಯ್ಯ ಎಂದೂ ಮೈ ಬಗ್ಗಿಸಿ ದುಡಿಯದಿದ್ದರೂ ಆ ಶ್ರಮದ ಅರಿವಿತ್ತು, ಅದರ ಬಗ್ಗೆ ಗೌರವವಿತ್ತು. ಆ ಶ್ರಮದ ಸಾರ್ಥಕತೆ ಇರುವುದೇ ತನ್ನ ಏಳಿಗೆಯಲ್ಲಿ, ವಿದ್ಯಾಭ್ಯಾಸದಲ್ಲಿ ಎಂಬ ಅರಿವಿದ್ದುದ್ದರಿಂದಲೇ ಅವನೂ ಛಲದಿಂದ ಓದಿ ಎಲ್ಲೂ ಫೇಲಾಗದೆ ಬಿ.ಎ. ಮುಗಿಸಿಬಿಟ್ಟ, ಮುಂದೆ ಓದುವ ಹಂಬಲವಿದ್ದರೂ ಸಧ್ಯಕ್ಕೆ ನೌಕರಿ ಬಲು ಮುಖ್ಯವಾಗಿತ್ತು. ವಯಸ್ಸಾದ ಹೆತ್ತವರು, ವಯಸ್ಸಿಗೆ ಬಂದ ತಂಗಿ, ತಮ್ಮಂದಿರಿಗೆ ಅವನು ನೆರವಾಗಲೇಬೇಕಿತ್ತು. ಅವರನ್ನೆಲ್ಲ ಶ್ರಮದಿಂದ ಮುಕ್ತಗೊಳಿಸಬೇಕಿತ್ತು.

ಆದರೆ ಬಿ.ಎ. ಮುಗಿಸಿ ಊರಿಗೆ ಹಿಂದಿರುಗುತ್ತಿದ್ದಂತೆ ಸುರಿಗೆವ್ವ ನೆಲಕಚ್ಚಿ ಸಾಯುತ್ತೇನೆಂದು ಎಲ್ಲರನ್ನೂ ಹೆದರಿಸಿಬಿಟ್ಟಳು. ತನ್ನ ನಂತರ ಮನೆ ನೋಡಿಕೊಳ್ಳಲು ಒಂದು ಹೆಣ್ಣು ಬೇಕೆಂದು ಅದಕ್ಕಾಗಿ ಮದುವೆ ಆಗುವಂತೆ ಮುತ್ತನಿಗೆ ದುಂಬಾಲು ಬಿದ್ದಳು. ದುಡಿದುಡಿದು ಹಣ್ಣಾದಕಿಗೆ ತನ್ನಂತೆ ದುಡಿಯುವ, ತನ್ನ ಮಗನಿಗೆ ಆಸರೆಯಾಗುವ

ಮತ್ತೆರಡು ಕೈಗಳು ಬೇಕೆನಿಸಿ ಅದಕ್ಕಾಗಿ ಕಾಯಿಲೆಯ ನೆಪವೊಡ್ಡಿ ಕೂತಿದ್ದಳು. ನೌಕರಿ ಸಿಗುವವರೆಗೆ ಮದುವೆ ಬೇಡವೆಂದು ಮುತ್ತ ಎಷ್ಟೇ ಪರಿಪರಿಯಾಗಿ ಬೇಡಿಕೊಂಡರೂ ಸಾಯುತ್ತೇನೆಂದು ಹೆದರಿಸಿ ಕೊನೆಗೆ ಮೈದುನನ ಮಗ ಸಿದ್ದೀರನ ಹೆಂಡತಿಯ ದೂರದ ನೆಂಟರೊಬ್ಬರ ಮಗಳು ಮಾಸ್ತಿಯವ್ವನನ್ನು ಮನೆ ತುಂಬಿಸಿಕೊಂಡಳು.

ಓಬಳಾಪುರದ ಮಾಸ್ತಿಯವ್ವ ಎಲ್ಲರ ಪ್ರೀತಿಯ ಮಸ್ತಿ. ತನ್ನ ಓರಗೆಯ ಮೇಗಳಟ್ಟಿಯ ಮಕ್ಕಳು ಶಾಲೆಗೆ ಹೋಗುವುದನ್ನು ನೋಡುತ್ತ, ನೋಡುತ್ತ ಅದಕ್ಕಾಗಿ ಕನವರಿಸಿ, ಕನಸುತ್ತ ಬೆಳೆದವಳು. ಬೆಳೆದಂತೆ ಶಾಲೆಯ ಬಗ್ಗೆ, ವಿದ್ಯೆ ಬಗ್ಗೆ ಮೋಹ, ಆಸೆ ಬಿಟ್ಟಿದ್ದಳೇ ಹೊರತು ಅದರ ಬಗ್ಗೆ ಇದ್ದ ಭಕ್ತಿ ಹಾಗೇ ಇತ್ತು. ಓದಿದವರು, ಓದುವವರು ಎಂದರೆ ಅವರೇನು ದೇವತೆಗಳೋ, ಯಕ್ಷ ಗಂಧರ್ವರೋ ಎಂಬಂತೆ ಅವರನ್ನು ಸ್ಪರ್ಶಿಸಿ, ಕಣ್ಣಿಗೊತ್ತಿ ಕೊಳ್ಳುವಷ್ಟು ಭಕ್ತಿ, ಗೌರವ ಅವಳಿಗೆ. ಬಿ.ಎ. ಪಾಸು ಮಾಡಿದ ಮುತ್ತ, ಅದಕ್ಕಾಗಿ ಬೆವರು ಹರಿಸಿದ ಅವನ ಮನೆಮಂದಿ ಅವಳ ಕಣ್ಣಲ್ಲಿ ದೇವರ ಸಮಾನ. ತಾನೇತಾನಾಗಿ ಅವರ ಬಗ್ಗೆ ಪ್ರೀತಿ, ಗೌರವಾದರಗಳು ಹುಟ್ಟಿದವು. ತನ್ನ ಜನ್ಮ ಸಾರ್ಥಕವಾಯಿತೆಂಬಂತೆ ಭಾವಿಸಿದಳು.

ಶೋಭನದ ರಾತ್ರಿ ಅವನನ್ನು ಸ್ಪರ್ಶಿಸಿ, ಸ್ಪರ್ಶಿಸಿ ಆನಂದಿಸುತ್ತಿದ್ದ ಮಸ್ತಿ ಮುತ್ತನ ಮುಖವನ್ನ ಅಂಗೈಲಿಡಿದು

'ಮುತ್ತ ಇನ್ಮ್ಯಾಕೆ ಈ ಮನಿಮಠ ಚಿಂತ್ಯೆಲ್ಲ ನನಗ್ಬಿಡು. ನಿನಗೋಸ್ಕರ ದುಡುದಿರೋ ಅವರ ಸೇವೆ ಮಾಡದು ನನ್ನ ಕರ್ತವ್ಯ. ಇನ್ಮ್ಯಾಕೆ ನಾನು ಅವರಿಗೋಸ್ಕರ ದುಡೀತೀನಿ. ನಿಮ್ಮ ಕಷ್ಟಗಳೆಲ್ಲ ಇನ್ಮ್ಯಾಕೆ ನನ್ನವು. ನೀನು ಸಾಯಗಂಟ ಬೇಕರೆ ವೋದು. ನನ್ ಮೈಯಾಗೆ ಜೀವಿರತನ ದುಡೀತಿನಿ. ನೀನು ದೊಡ್ಡಮನ್ಸ ಆಗು. ನಿಮ್ಮವ್ವನ ಆಸೆ ತೀರ್ಸು. ದುಡ್ಡಿನ್ಯೋಚ್ನೆ ಬಿಡು. ನಾನು ಸಂಪಾಳ್ಸಿ ಕೊಡ್ತೀನಿ. ಇನ್ಮ್ಯಾಕೆ ಈ ಜೀವ ನಿಮ್ಗೇ ಮೀಸಲು.....'

ಅಂದಾಗ ಅವಳ ಈ ಪ್ರೀತಿ, ಆರಾಧನೆಯಿಂದ ಧೈರ್ಯವುಕ್ಕಿ, ನಿರುಮ್ಮಳ ಎನಿಸಿ

'ನೀನೊಬ್ಳು ಹಿಂಗೆ ನನ್ನ ಜತೆಯಾಗಿದ್ಬಿಡು ಮಸ್ತಿ ಸಾಕು ನನಗಿನ್ನೇನು ಬ್ಯಾಡ....' ಅಂತ ಅವಳ ತಲೆ ನೇವರಿಸಿ, ಗಾಢವಾಗಿ ತಬ್ಬಿ, ಪ್ರೀತಿ ಮಾಡಿದ್ದ.

ಎಲ್ಲರೂ ಕೂಡಿ ಎಷ್ಟೇ ಹೇಳಿದರೂ ಕೇಳದೆ ಮುತ್ತ ಓದು ಮುಂದುವರಿಸದೆ ಕೆಲಸಕ್ಕೆ ಪ್ರಯತ್ನಿಸತೊಡಗಿದ. ಈ ಮಧ್ಯೆ ಅಷ್ಟಿಷ್ಟು ಸಾಲ ಮಾಡಿ ತಂಗಿಗೂ ಲಗ್ನ ಮಾಡಿ ಮುಗಿಸಿದ. ಆ ಸಾಲ ತೀರಿಸಬೇಕಿತ್ತು. ತಮ್ಮಂದಿರಿಬ್ಬರು ದುಡಿಯುತ್ತಲೇ ಇದ್ದರು. ಅವರನ್ನು ಮುಕ್ತಗೊಳಿಸಬೇಕಿತ್ತು.

ಪ್ರತಿಸಾರಿ ಅವನು ಊರಿಂದ ಹೊರಡುವಾಗ ಎಷ್ಟೊಂದು ಆಸೆ, ಕನಸು, ನಿರೀಕ್ಷೆ ಇಟ್ಟು ಹೊರಡುತ್ತಿದ್ದ. ಆದರೆ ಅತ್ತಲಿಂದ ಬರುವಾಗೊಮ್ಮೆ ಎಲ್ಲಾ ಖಾಲಿ! ಆದರೆ ಮಸ್ತಿ ಸುಲಭಕ್ಕೆ ಬಿಟ್ಟು ಕೊಡದೆ ಅವನಿಗಾಸರೆಯಾಗಿ, ಧೈರ್ಯ ಕೊಡುತ್ತಲೇ ಬಂದಳು.

ಅವಳೂ ಸುಮ್ಮನೆ ಕೂರಲಿಲ್ಲ, ಕೂಲಿ ಮಾಡುವುದರ ಜತೆಗೆ ಮಾವನ ಅಣ್ಣನ ಮಗ ಸಿದ್ದೀರನ ಹೊಲದಲ್ಲಿ ಬೀಳುಬಿಟ್ಟಿದ್ದ ಎರಡು ಗುಂಟೆ ನೆಲದಲ್ಲಿ ಹೂವು ಬೆಳೆಯಲು

ನಿರ್ಧರಿಸಿದಳು. ಎಲ್ಲರನ್ನ ಒಪ್ಪಿಸಿ, ಸಿದ್ದೀರನ್ನೂ ಒಪ್ಪಿಸಿ ಸರಿಪಾಲಿಗೆಂಬಂತೆ ಭೂಮಿ ಹಸನು ಮಾಡಿ, ಅತ್ತೆ ಮಾವ, ಮೈದುನರೊಟ್ಟಿಗೆ ದುಡಿದೇ ದುಡಿದಳು. ಅಷ್ಟಿಷ್ಟು ಹಣ ಒಟ್ಟು ಮಾಡತೊಡಗಿದಳು. ಸಿದ್ದೀರನೂ ಯಾವೊಂದು ತಕರಾರಿಲ್ಲದೆ ಇವರೊಟ್ಟಿಗೆ ಕೈ ಜೋಡಿಸಿದ.

ಎಲ್ಲರ ಉತ್ಸಾಹ ನೋಡಿ ತಾನೂ ಮೊದಮೊದಲಿಗೆ ಉತ್ಸಾಹದಿಂದಲೇ ಅಡ್ಡಾಡಿದರೂ ಬರುಬರುತ್ತ ಸೋಲತೊಡಗಿದ ಮುತ್ತ. ಎರಡು ವರ್ಷ ಕಳೆದರೂ ನೌಕರಿ ಸಿಗುವ ಲಕ್ಷಣಗಳೇ ಕಾಣದೆ, ತನ್ನ ಜಾಣ್ಮೆ ವಿದ್ಯೆಗೆ ಬೆಲೆಯೇ ಇಲ್ಲ ಹಣ, ಅಧಿಕಾರದ ಮುಂದೆ ಎಂಬ ಸತ್ಯ ನಿಚ್ಚಳವಾಗತೊಡಗುತ್ತಿದ್ದಂತೆ ಕಂಗೆಟ್ಟ. ಅದೇ ನೋವಿನಲ್ಲಿ, ಬೇಗುದಿಯಲ್ಲಿ ಊರಿಗೆ ಮರಳಿದವ ಒಂದು ದಿನ ತನ್ನ ಪುಸ್ತಕಗಳನ್ನ, ಅಂಕಪಟ್ಟಿಗಳನ್ನೆಲ್ಲ ಸುಡಲು ಹೋದ. ತಡೆಯಲು ಬಂದ ಮಸ್ತಿಯೆದುರು ಕುಸಿದು ಬಿಕ್ಕಿಬಿಕ್ಕಿ ಅತ್ತಿದ್ದ.

'ಇನ್ನಾಗಲ್ಲ ಮಸ್ತಿ..... ನಾನು ಊರಿಂದ ಬಂದ ಸರ್ತಿಗೆಲ್ಲ ಆಸೆ ಹೊತ್ತ ನಿಮ್ಮ ಆ ನೋಟಗಳು, ಆ ಹುಡುಕಾಟ ಎದುರಿಸೋ ಶಕ್ತಿ ನನಗಿಲ್ಲ. ಮಸ್ತಿ ನನ್ನ ವಿದ್ಯಾಗ್ಯಾವ ಬೆಲೇನು ಇಲ್ಲ ಕಣೆ ಬರೇ ದುಡ್ಡು, ವಶೀಲಿ. ನಾನೆಲ್ಲಿಂದ ತರನ ಅವುನ್ನ....? ಈ ಜನುಮದಾಗಂತು ನಿಮ್ಮೆಲ್ಲರ ಋಣ ತೀರಿಸದು ನನ್ನಿಂದಾಗ್ದು. ನನ್ನ ಬದುಕೇ ವ್ಯರ್ಥ. ಇತ್ತ ನೌಕರಿಯೂ ಇಲ್ಲ ಅತ್ತ ಹೊಲಮನೆ ಕೆಲಸವೂ ಗೊತ್ತಿಲ್ಲ. ಕೆಲಸಕ್ಕೆ ಬಾರದವ್ನೆ ಮಸ್ತಿ ನಾನು.... ನೋಡು, ನಿಮ್ಮನ್ನೆಲ್ಲ ಕುಂದ್ರಿಸಿ ನಾನು ದುಡ್ಡು ಹಾಕ್ಬೇಕಿತ್ತು. ಆದ್ರೆ ಕುಂತು ನಿಮ್ಕೈಲಿ ದುಡಿಸ್ಕೆಂಡು ತಿನ್ತ ಇದೀನಿ. ಈ ಜನುಮದ ಬಗ್ಗೆ ಹೇಸ್ಗೆ ಬಂದೈತೆ ಮಸ್ತಿ..... ಇನ್ನು ನನ್ನಿಂದಾಗ್ದು. ನನ್ ಪಾಡಿಗೆ ನನ್ ಸಾಯಾಕೆ ಬಿಟ್ಬಿಡ್ರಿ ನೀವಾದ್ರೂ ಸುಖವಾಗಿರ್ರಿ...' ಅಂದ ಅಳುತ್ತಲೇ.

ಈ ಮಾತು ಕೇಳಿದ್ದೆ ಸುರಿಗೆವ್ವ ಎದೆ ಎದೆ ಬಡಿದುಕೊಂಡು ರೋದಿಸಿದಳು.

'ಎಂತಹ ಮಾತಾಡ್ತಿಯೋ ಮುತ್ತಾ? ಇಂಥಾ ಕೆಲ್ಸ ಮಾಡಿ ನಾವ್ ಪಟ್ಟ ಪಾಡ್ನೆಲ್ಲ ನಗೆಪಾಟ್ಲು ಆಗಂಗ್ಮಾಡ್ತಿಯೇನೊ? ಸುಧಾರ್ಸ್ಕೊ ಕಂದ ಸುಧಾರುಸುಪ್ಪಾ ವಳ್ಳೆ ದಿನುಗುಳು ಬಂದೇ ಬತ್ತವೆ. ನನ್ನ ಮೈಯ್ಯಾಗಿನ ರಕುತನೆಲ್ಲ ನಿನಗೋಸ್ಕರ ಬಸ್ದು ಕೊಟ್ಟೇನು. ಇನ್ನೆಂದೂ ಯಿಂಗೆಲ್ಲ ಮಾತಾಡ್ಬ್ಯಾಡ.....'

ಅಂತ ಅಳುತ್ತಿದ್ದ ಮಗನನ್ನು ಬಾಚಿ ತಬ್ಬಿದಳು.

ಮನೆಮಂದಿಯಲ್ಲ ಹೀಗೆ ಗೋಳಾಡುತ್ತ ಇರುವಾಗಲೇ ಸುರಿಗೆವ್ವನ ಸೋದರ ಮಾವನ ಮಗ ಪರುಸಪ್ಪ ಅಪರೂಪಕ್ಕೆ ಅಲ್ಲಿಗೆ ಆಗಮಿಸಿದ್ದ. ಸದಾ ಊರೂರು ಅಲೆಯುವ ಅಲೆಮಾರಿ ಪೋಕರಿ ಎಂದೇ ಹೆಸರಾದವ. ಇವರ ಗೋಳಾಟ ನೋಡಿ, ವಿಷಯ ತಿಳಿದು

'ನೋಡಯ್ಯ ಮುತ್ತ ನನ್ನ ದೂರದ ನೆಂಟ ಶರಣಪ್ಪ ಅಂತ ಬೆಂಗ್ಳೂರಗೆ ಸಬ್ ರಿಜಿಸ್ಟಾರ್ ಆಫೀಸ್ನಗೆ ಅವ್ನೆ. ಹಣಕ್ಕೇನು ಕೊರ್ತೆ ಇಲ್ಲ. ಜನಬಳಕೆ ಮನುಷ್ಯ. ಇಪ್ಪತ್ತು ವರ್ಷದಿಂದ ಬೆಂಗ್ಳೂರು ನೀರು, ಗಾಳಿ ಕುಡ್ದದನೆ. ಅವ್ನ ಹಿಡುದ್ರೆ ಏನನ ಗಿಟ್ಬಹ್ದು. ಪ್ರಯತ್ನ ಮಾಡನ ನಡೀ....' ಅಂತ ಬಿಡದೆ ಆ ಕ್ಷಣವೇ ಅವನನ್ನ ಹೊರಡಿಸಿಕೊಂಡು ಬೆಂಗಳೂರಿನತ್ತ ಪಯಣಿಸಿದ್ದ ಪರುಸಪ್ಪ.

ಕಡೆಗೂ ಮುತ್ತ ಶ್ರೀಲಕ್ಷ್ಮಿ ಮೋಟಾರ್ ಸರ್ವೀಸ್ಸಿಂದ ಕೆಳಗಿಳಿದಾಗ ಮನೆ ಮಂದಿಯಲ್ಲ

ಅತ್ತ ದೌಡಾಯಿಸಿದರು. ಆದರೆ ಅವನು ಸುಸ್ತಾದಂತಿದ್ದ. ತುಂಬಾ ಗಂಭೀರವಾಗಿದ್ದ. ಮಾತಿಲ್ಲ ಕತೆಯಿಲ್ಲ ಬರೀ ಮೌನ. ಮಸ್ತಿ ಎಷ್ಟೇ ಪ್ರಯತ್ನಿಸಿದರೂ 'ಹಾಂ' 'ಹೂಂ' ಬಿಟ್ಟರೆ ಬೇರೆ ಮಾತಿಲ್ಲ.

ರಾತ್ರಿ ಇಬ್ಬರೆ ಉಳಿದಾಗಲು ಮೌನ, ನಿರ್ಲಿಪ್ತತೆ. ರಾತ್ರಿ ನಿದ್ದೆಯೂ ಸರಿಯಾಗಿ ಮಾಡಲಿಲ್ಲ. ಒಂದೇ ಸಮ ಮಗ್ಗಲು ಬದಲಾಯಿಸುತ್ತಿದ್ದ. ಏನೋ ಚಡಪಡಿಕೆ; ಬರಿ ನಿಟ್ಟುಸಿರು. ನೌಕರಿ ಸಿಗದಿರುವ ಬೇಸರ ಇನ್ನೂ ಇರಬೇಕೆಂದು ಮೊದಲಿಗೆ ಭಾವಿಸಿದರೂ ಬರಬರುತ್ತ ಮಸ್ತಿಗೆ ಮುತ್ತ ತನಗೆ ಮುಖ ಕೊಟ್ಟು ಮಾತಾಡುತ್ತಿಲ್ಲ. ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾನೆ ಎನಿಸತೊಡಗಿತು. ಆಕೆ ಎದುರಾದರೆ ಸಾಕು ತಪ್ಪು ಮಾಡಿ ಸಿಕ್ಕಿ ಬಿದ್ದವನಂತೆ ಒದ್ದಾಡುತ್ತಿದ್ದ. ಇತ್ತಿತ್ಲಾಗ ಮನೆಗೂ ಬಾರದೆ ರಾತ್ರಿ ಯಾರದೋ ಕಣಗಳಲ್ಲಿ ಕಳೆಯತೊಡಗಿದ.

ಆದರೆ ಅತ್ತೆ, ಮಾವನೂ ಒಂದು ನಮೂನಿಯಾಗಿ ಆಡತೊಡಗಿದಾಗ ಮಸ್ತಿಗೆ ದಿಗಿಲಾಯಿತು. ಎಂದೂ ಸೊಸೆಗೆ ದನಿಯೆತ್ತರಿಸಿಯೇ ಮಾತಾಡದ ಸುರಿಗೆವ್ವ ಮಾತು ಮಾತಿಗೂ ಸಿಡುಕತೊಡಗಿದಳು. ಹೆಜ್ಜೆಜ್ಜೆಗೂ ತಪ್ಪು ಹುಡುಕತೊಡಗಿದಳು. ಸದಾ ಒಂಟಿಯಾಗಿ ಎಲ್ಲೊ ನೋಟ, ಎಲ್ಲೊ ಜ್ಞಾನವಿಟ್ಟು ಕೂರುವ ಮಗನೆದುರು ತಾನೂ ಕಲ್ಲಾಗಿ ಕೂರುತ್ತಿದ್ದಳು. ಏನೋ ಆಗಬಾರದ್ದು ಆಗುತ್ತಿದೆ ಎಂದು ಈಗೀಗ ಅವಳಿಗೆ ಖಾತ್ರಿಯಾಗತೊಡಗಿತು.

ತನ್ನ ಕಷ್ಟ ಸುಖ ತೋಡಿಕೊಳ್ಳಲು ಕೊನೆಗೆ ಮಸ್ತಿಗೆ ಉಳಿದದ್ದು ಸಿದ್ದೀರ ಒಬ್ಬನೆ. ಸಂಕಟ ತಡಿಯಲಾರ್ದೆ ಒಂದು ದಿನ ಅವನೆದುರು ಅತ್ತಾಗ ಅವನಿಗು ಇವಳ ಸಂಕಟ ನೋಡಲಾರದೆ ತನ್ನ ದೊಡ್ಡಪ್ಪನ್ನ ಒಂದು ದಿನ ತರಾಟೆಗೆ ತೆಗೆದುಕೊಂಡ ಹೊಲದಲ್ಲಿ. ಮಸ್ತಿಯೂ ಇದ್ದಳು. ಬಾಯಿಬಿಟ್ಟ ಸುಂಕಪ್ಪ.

'ಎನ್ಮಡನಪ್ಪ ಯಲ್ಲಾ ನಮ್ ಗಾಚಾರ. ಬೆಂಗ್ಳೂರ್ನಗೆ ಪರುಸಪ್ಪನ ನೆಂಟ ಅವ್ನಲ್ಲಾ..... ಅವುನೇನೋ ಮುತ್ತಂಗೆ ಸಹಾಯ ಮಾಡಾಕೆ ತಯಾರಾದನಂತೆ. ಅವ್ನು ಮನಸು ಮಾಡ್ಬುಟ್ರೆ ನಾಳೆವತಾರ್ಕೆ ಕೆಲಸನೂ ಗ್ಯಾರಂಟ್ಯೆಂತೆ. ಆದ್ರೆ ಬಡ್ಡಿ ಮಗ ಒಂದು ಸರ್ತು ಇಟ್ಟವ್ನಂತೆ. ಕೆಲ್ಸಬೇಕು ಅನ್ನಂಗಿದ್ರೆ ಅವ್ನ ಮಗ್ಳುನ್ನ ಇವ್ನು ಲಗ್ನ ಆಗಬೇಕಂತೆ....!'

ಮಸ್ತಿ ಜೀವ ಹೊಯ್ದಾಡಿತು.

ಸಿದ್ದೀರ 'ಅಲ್ಕಣಪ್ಪ ಇವ್ನು ಯೇಳ್ಬೇಕಿತ್ತು ಲಗ್ನಾಗ್ಯೆತೆ ಅಂತ.....' ಅಂದ.

'ಯೋಳಿದ್ನಂತೆ ಕಣಲಾ ಆದ್ರೇ ಅವ್ನೇನು ಕೇಳಸ್ಥಿತಿಯಾಗೇ ಇಲ್ಲಂತೇ.... ಅದುನ್ನ ಬಿಟ್ಟು ಬಾ ಮುಂದಿಂದು ನಾನು ನೋಡ್ಕಂತ್ನಿ.. ನಿನಿಗೆ ಯೇಣ್ತಿ ಮುಖ್ಯನೊ ಕೆಲ್ಸ ಮುಖ್ಯನೋ ಒಂದು ನಿರ್ಧಾರ ಮಾಡ್ಕೆಂಡೇ ಬಾ ತಿರುಗಿ ಬರ್ಬೇಕರೆ ಅಂಥ ಖಡಾಖಂಡುತ್ವಾಗಿ ಯೇಳ್ಬಿಟ್ನಂತೆ..' ಅಂತ ಹೇಳಿದವನೆ.

'ಯಾರ್‍ಯಾರ ಹಣೆಬರ್ಹ ಹೆಂಗ್ಯೆತೋ ಅಂಗಾತದೆ ಬಿಡು. ನಾನಾಗ್ಲೆ ಬಡ್ಕಂಡಿದ್ದೆ ಮದ್ವಿಗೇನ್ ಅವುಸುರ ಮೊದ್ಲು ಕೆಲ್ಸಪಲ್ಸ ಆಗ್ಲಿ ಅಂತ. ಈಗ ಬಾಯಿ ಬಡ್ಕಂಡ್ರೇನ್ಬಂತು ಭಾಗ್ಯೇವು.....'

ಅನ್ನುತ್ತ ಕೋಲೂರಿಕೊಂಡು ಹೊರಟ ಮನೆ ಕಡೆಗೆ. ಮಸ್ತಿ ಹಲ್ಲು ಕಡಿಯುತ್ತ ಎದ್ದು ನಿಂತಳು.

'ಏನಾದ್ರೂ ಆಗ್ಲಿ ನನ್ ಮುತ್ತನ್ನ ಬಿಟ್ಕೊಡಲ್ಲ. ನೀವ್ಯಾರು ಏನ್ ಬೇಕನ ಮಾಡ್ಕೆಳ್ರಿ... ನಾನೇ ದುಡೀತಿನಿ, ಹೂ ಬೆಳೀತಿನಿ, ಹಣ ಸಂಪಾಳ್ಸಿ ನನ್ನ ಮುತ್ತನಿಗೆ ನಾನೇ ನೌಕ್ರಿ ಕೊಡುಸ್ತಿನಿ. ಯಾವನ ಹಂಗೂ ಬ್ಯಾಡ.....,

ಅಂದವಳೆ ಹಗಲು ರಾತ್ರಿ ಹೊಲದಲ್ಲಿ ಕೆಲಸ ಮಾಡಹತ್ತಿದಳು.

ತಾನೇ ದುಡಿದು, ಕೆಲಸ ಕೊಡಿಸಿಯೇ ಕೊಡಿಸುತ್ತೇನೆಂಬ ಭ್ರಮೆಯಲ್ಲಿ ಇದ್ದವಳಿಗೆ ಬೇರಾರ ಯೋಚನೆಯೂ ಇರಲಿಲ್ಲ. ಸಿದ್ದೀರ ಅವಳಿಗೆ ಸಹಕಾರ ನೀಡುತ್ತಿದ್ದ. ಆದರೆ ಅವಳ ಭ್ರಮೆಯೆಲ್ಲ ಹರಿದು ನಿಚ್ಚಳವಾಗುವಂತೆ ಮುತ್ತ ಒಂದು ದಿನ ಅವಳನ್ನ ತಡವಿಕೊಂಡ.

'ನಿನಿಗೇನು ಹೇಳೋರು ಕೇಳೋರ್ಯಾರು ಇಲ್ಲೇನು? ನಿನ್ನಿಷ್ಟ ಬಂದಾಗ ಬರೋದು, ಇಷ್ಟ ಬಂದಾಗ ಹೋಗೋದು ಇದುನ್ನ ಏನಂದ್ಕಂಡಿಯಾ....? ಆ ಸಿದ್ದೀರಂಗು ನಿಂಗೂ ಏನ್ ಸಂಬಂಧ? ಎಷ್ಟು ದಿನದಿಂದ ನಡೀತೈತೆ ಈ ಆಟ....? ನನಿಗೇನೋ ಉಪಕಾರ ಮಾಡೋ ನೆಪ ಮಾಡ್ಕೆಂಡು ನೀನು ಚಲ್ಲಾಟ ಆಡ್ಬೇಡ. ನನಗೂ ನೋಡಿ, ನೋಡಿ ಸಾಕಾಗೈತೆ. ಇತ್ತಿತ್ಲಾಗೆ ನಿನ್ ಮುಖ ನೋಡಕು ಹೇಸ್ಗೆ ಬರ್ತೈತೆ....'

ಅಂದು ಮುಂದೆ ಒಂದು ಕ್ಷಣವೂ ಅವಳ ಎದುರು ನಿಲ್ಲಲಾರದೆ ಹೊರ ನಡೆದುಬಿಟ್ಟ.

ಸೊಸೆ ಮೇಲೆ ಅಸಮಾಧಾನಗೊಂಡಿದ್ದ ಸುರಿಗೆವ್ವನೂ ಅರೆಕ್ಷಣ ಅಲ್ಲಾಡಿಬಿಟ್ಲು. ಅಂದು ಕೆಸರಲ್ಲಿ ಬಿದ್ದ ನೆಪವೊಡ್ಡಿ ಜೋಯಿಸ ಅವಳನ್ನ ಹಾಳು ಮಾಡಿದ್ದ. ವಯಸ್ಸಾದ ತನಗೆ ಮೊದಲಿನ ತಾಕತ್ತಿಲ್ಲ, ಮಗನಿಗೆ ತೊಂದ್ರೆ ಆದಾತೆಂಬ ಭಯದಲ್ಲಿ ಸಾವಿನ ನೆಪವೊಡ್ಡಿ ಮಗನಿಗೆ ಮದ್ವೆ ಮಾಡಿ, ತನ್ನ ಹೊರೆ ಕಡಿಮೆ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಪಟ್ಟು, ಅದು ತನಿಗೇ ಕುತ್ತಾಗಿ ಸಿಟ್ಟೆಲ್ಲ ಏನೂ ಅರೀದ ಮಸ್ತಿ ಮೇಲೆ ತೋರಿಸುತ್ತಿದ್ದಳು ತಾನು. ಈಗ್ನೋಡಿದ್ರೆ ಮಗ ದುಡಿಯುತ್ತಿರುವ ಸೊಸೆಯ ಶ್ರಮವನ್ನೆ ನೆಪ ಎನ್ನುತ್ತ ಆಕೇನ ಅನುಮಾನಿಸಿ ತನ್ನ ಬೇಳೆ ಬೇಯಿಸಿಕೊಳ್ಳುವ ಕಾತರದಲ್ಲಿದ್ದಾನೆ. ಸುರಿಗೆವ್ವನಿಗೆ ನಗು ಅಳು ಒಟ್ಟೊಟ್ಟಿಗೆ ಬಂದ್ವು.

'ಹೌದಲೇ ಮುತ್ತ ನೆಪ! ಯಲ್ಲಾವೂ ನೆಪ! ಈ ನೆಪಗುಳೇ ಯಿಂಗೆ. ಸುಲಭಕ್ಕೆ, ಯಂಗೆ ಬೇಕಂದ್ರಂಗೆ ಸಿಕ್ಕುಬಿಡ್ತವೆ. ಮನ್ಸುಗುಳ್ನ ಒಂದು ಮಾಡಕೆ ಇಲ್ಲ ಅಗಲ್ಸಕೆ....; ಪಿರಿತಿ ಪ್ರೇಮಕ್ಕೆ ಇಲ್ಲ ಹಗೇವಿಗೆ...; ಕೆಡುಸಕೆ, ಬಿಡುಸಕೆ, ಸೇರ್ಸಕೆ..., ನಮ್ ಬ್ಯಾಳೆ ಬೇಯಿಸ್ಕೆಳಕೆ, ನಮ್ ತೀಟಿಗೆ ತೈವಲಿಗೆ ಯಲ್ಲದುಕ್ಕೂ ಈ ನೆಪುಗಳ ನೈಟ್ಪನ ದಾರಿ ತೋರ್ಸಿಬಿಡ್ತವೆ. ಯಾವ ರೂಪ್ದಾಗೋ, ಯಾರ ರೂಪ್ದಾಗೋ ತಟ್ಟಂತ ಬಂದು ಯದುರು ನಿಂತುಬಿಡ್ತವೆ..

ಸಿದ್ದೀರ ನಮ್ಮನೆ ವುಡ್ಗ. ಮಸ್ತಿ ಈ ಮನಿಗೆ ಸೊಸಿಯಾಗೆ ಬಂದುದ್ದೇ ಅವ್ನಿಂದ. ಅವ್ನು ಅವ್ಳ ಜತಿಗೆ ಕೈ ಜೋಡ್ಸವೊತ್ಗೆ ಹೂ ಬೆಳ್ದು ನಾಕ್ಕಾಸು ಕೂಡ್ಸಿದ್ಲು ಆ ವುಡ್ಗಿ. ಆವಾಗದು ನಿನಿಗೆ ಬೇಕಾಗಿತ್ತು ಯಾಕಂದ್ರೆ ಬ್ಯಾರೆ ಯಾವ ಉದ್ದೇಸನು ಇರ್ಲಿಲ್ಲ. ಆದ್ರೀಗ ಸಿದ್ದೀರ್ನ ನೆಪವಾಗಿಟ್ಕಂಡು ನಿನ್ನುದ್ದೇಸನ ಈಡೇರಿಸ್ಕೆಳಕೆ ವೊಂಟದಿ....'

ಅಂತ ಹೀಗೆ ಒಬ್ಬಳೆ ಮಾತಾಡಿಕೊಳ್ಳುತ್ತಿರುವಾಗಲೇ ಮುತ್ತ ಪರುಸಪ್ಪನೊಟ್ಟಿಗೆ ಬಂದ. ಇಷ್ಟು ದಿವಸಗಳ ನಂತರ ನಗುತ್ತಿದ್ದ, ಗೆಲುವಾಗಿ ಖುಷೀಲೆ ಮಾತಾಡುತ್ತಿದ್ದ. ಪರುಸಪ್ಪನ ನೋಡುತ್ಲೆ ವಿಷಯ ಏನಂತ ಸುರಿಗೆವ್ವಗೆ ತಿಳಿದುಹೋಗಿತ್ತು. ಇಷ್ಟು ದಿನ ತಲೀಮ್ಯಲೆ ಬಂಡ್ಗಿಗಲ್ಲು ಹೊತ್ತು ಓಡಾಡುತ್ತಿದ್ದ ಮುತ್ತ. ಆದರೊಂದು ನೆಪ ತಾಸೊತ್ತಿಗೆ ಅದನ್ನು ಉರುಳಿಸಿ ಎಸೆದುಬಿಟ್ಟಿತ್ತು!

ಏನೂ ಮಾಡಲು ತೋರದೆ ಸೋಜಿಗ ಪಡುತ್ತಲೇ ಕುಂತಿದ್ದಳು ಸುರಿಗೆವ್ವ. ಸಿದ್ದೀರ ಒಂದೇ ಸಮ ಏದುಸಿರುಬಿಡುತ್ತ 'ಮಸ್ತಿಯಕ್ಕ....' ಅಂತ ಕೂಗುತ್ತ ಬಂದವನು

'ದೊಡ್ಡವ್ವ ಅಕ್ಕಲ್ಲಿ ಯಾರೋ ಹೂವಿನ ತೋಟಕ್ಕೆ ನುಗ್ಗಿ ಒಂಧ್ಗಿಡನೂ ಬಿಡ್ದಂಗೆ ಕೊಚ್ಚಾಕುಬುಟ್ಟವ್ರೆ.....' ಅಂದ.

ಸುರಿಗೆವ್ವನ ಎದೆ ಧಸ್ಸಂತು.

'ಅವ್ವ ಆವಕ್ಕುನ ಗತಿಯಂಗೇ....? ಹೂ ಬೆಳಿತೀನಿ, ಹಣ ಸಂಪಾಳ್ಸಿ ನನ್ನ ಮುತ್ತನ್ನ ಉಳುಸ್ಕಂತಿನಿ ಯಾವನ ಹಂಗೂ ಬ್ಯಾಡ ಅಂಥ ವಯ್ದಾಡ್ತಿದ್ದು ಪಾಪ! ಆವಕ್ಕುನ ಗತಿಯಂಗೆ....? ನಾನು ಬೆಳಿಗ್ಗೆ ಮೆದ್ಕೆಪುರಕ್ಕೆ ಹೋದನು ಈಗ ಬರ್ತದಿನಿ ಅವಕ್ಕುನ ಗತಿಯಂಗೆ....?'

ಬಡಬಡಿಸುತ್ತಲೇ ಇದ್ದ ಸಿದ್ದೀರ. ಮನೆಮಂದಿಯೆಲ್ಲ ಒಂದಾಗಿ ಸುತ್ತಿದರೂ ಮಸ್ತಿ ಮತ್ತೆ ಕಾಣಲೇ ಇಲ್ಲ.

✦ ✦

ಒಬ್ರು ಸುದ್ದ್ಯಾSSಕೆ.... ಒಬ್ರು ಗದ್ಲ್ಯಾSSಕೆ...

ಚಿನ್ನ ತೂಗುತ್ತಿದ್ದ ಅಕ್ಕಸಾಲಿ ಬಿಟ್ಟ ಕಣ್ಣು ಬಿಟ್ಟಂಗೆ, ಬಿಟ್ಟ ಬಾಯಿ ಬಿಟ್ಟಂಗೆ ನಿಂತ. ಬೀಡಿ ಸೇದುತ್ತ ಅವನೊಡನೆ ಮಾತಾಡ್ತಿದ್ದ ಕಮ್ಮಾರ ಮಾತು ನಿಂತಿದ್ದ ಗಮನಿಸಿ ತಲೆಯೆತ್ತಿ 'ಅದ್ಯಾಕೋ ಗರಬಡ್ದಂಗೆ ನಿಂತೆ...?' ಅನ್ನುತ್ತ ಅಕ್ಕಸಾಲಿಯ ದೃಷ್ಟಿ ಅನುಸರಿಸಿದವ ತಾನೂ ಗಪ್ಪನೆ ನಿಂತ.

ಎದುರಿಗೆ ಬರುತ್ತಿದ್ದ ಇಬ್ಬರೂ ಊರಿಗೆ ಹೊಸಬರಿದ್ದಂಗಿತ್ತು. ಅವನು ಇಪ್ಪತ್ತು ಇಪ್ಪತ್ತೆರಡರ ತರುಣ. ಅವನ ಪಕ್ಕಕ್ಕಿದ್ದವಳೆ ಇವರಿಬ್ಬರಿಗೂ ಹೀಗೆ ಗಪ್ಪಾಗಲು ಕಾರಣಳಾದವಳು ಕಂದುಬಣ್ಣದ, ಹದಿನೆಂಟರ ಚೆಲುವೆ. ಎಣ್ಣೆ ಮೆತ್ತಿ ಬಿಗಿದು ಹೆಣೆದಿದ್ದ ಜಡೆ, ಜಡೆ ತುಂಬಾ ಸೇವಂತಿಗೆ, ಕೆಂಪು ಸೀರೆ, ಹಳದಿ ಕುಪ್ಪಸ, ಕಾಲಲ್ಲಿ ಕಾಲಂದಿಗೆ, ಕೈತುಂಬಾ ಹಸಿರು ಬಳೆ, ಅವರ ಸಂಕೋಚದ ನೋಟ, ನಡಿಗೆಯಿಂದ ಹೊಸಬರೆಂದು ಸಾಬೀತಾಗುತ್ತಿತ್ತು.

ಇಬ್ಬರು ತಮ್ಮ ಅಂಗಡಿಯ ಮುಂದೆ ಬರುತ್ತಲು ಅವರನ್ನ ತರುಬಿದರು ಕಮ್ಮಾರ, ಅಕ್ಕಸಾಲಿ.

'ಯಾವೂರಮ್ಮ...? ಯಾರ್ಮನಿಗೆ....?' ಹಲ್ಲು ಬಿಡುತ್ತ ಕಮ್ಮಾರ ತರುಣಿಯನ್ನ ವಿಚಾರಿಸಿದ. ಪಕ್ಕದಲ್ಲಿದ್ದ ಯುವಕನೊಮ್ಮೆ ಅವನನ್ನ ಮೇಲಿನಿಂದ ಕೆಳಕ್ಕೇ ನೋಡಿ ಗುರಾಯಿಸಿ

'ಯಾಕಣ್ಣಾ....?' ಅಂದೊಡನೆ

'ಅಯ್ಯೊಯ್ಯೊ ನೀನದೀಯಲ್ವಾ ಪಕ್ಕದಗೆ....? ವಯಸ್ಸಾತ್ನೋಡೂ ಸ್ವಲ್ಪ ಕಣ್ಣು ಐಬು....'

ಕಮ್ಮಾರ ಮಾತು ಮುಗಿಸುವ ಮೊದಲೇ ಅಕ್ಕಸಾಲಿ ಗತ್ತು ತೋರಿಸಿದ.

'ಯಾವೂರಯ್ಯಾ? ಊರಿಗ ಹ್ವಸುಬ್ರೇನೂ....?'

'ಹೌದು, ಕೆಳಗ್ಗಟ್ಟಿ ಮಾಳ್ಗೆಮನಿ ಸಿವರುದ್ರಣ್ಣನ ಸ್ವಾದರಳಿಯ ನಾನು. ಇವ್ಳು ನನ್ನೆಂಡ್ರು..' ಅಂದ ತರುಣ.

ಕಮ್ಮಾರ ಮತ್ತೆ ಹಲ್ಕಿರಿದ.

'ಓಹೊಹೊಹೊ.... ನಮ್ ಸಿವರುದ್ರಣ್ಣನ ಸ್ವಾದರಳಿಯನೋ.....? ನೀನೇನು ಬ್ಯಾರೆ ಅಲ್ಲಣಪ್ಪ. ಸಿವರುದ್ರ ನಾವೆಲ್ಲ ಭಾಳ ಸ್ನೇತ್ರು, ಹೌದು...., ನಿನ್ನ ಹೆಸರೇನಪ್ಪ?' ಅಂತ ಕೇಳುತ್ತ.

'ನನ್ ಹೆಸ್ರು ನುಂಕಪ್ಪ. ನನ್ನೆಂಡ್ರು ಕಲ್ಯಾಣಿ ಬತ್ತೀವಿ...' ಅಂದವನೆ ಹೆಂಡತಿ ಕರ್‍ಕೊಂಡು ಮುಂದಕ್ಕೆ ಹೊರಟ ನುಂಕಣ್ಣ.

'ವಳ್ಳೆ ತೊಲೆ ತುಂಡಾಗ್ಯೆಳಲ್ಲೊ....' ಕಮ್ಮಾರ ಅವರು ಹೋದ ದಿಕ್ಕನ್ನೆ ಮೂಸುತ್ತ ಹೇಳಿದ.

'ಬಾ, ಬಾ ಆ ಗಾಳಿನ್ಯಾಕೆ ತಟ್ರುಸಾಡ್ತಿ ಸಂಜೀಕಡಿಗೆ ಹೋಗಿ ಸಿವರುದ್ರನ್ನ ಒಂದು ರವಂಡು ಮಾತಾಡ್ಸಿ ಬರನ....' ಅಂದ ಅಕ್ಕಸಾಲಿ.

ಸಂಜೆ ಮೂವರು ಕಲೆತಾಗ ಸಿವರುದ್ರ ವಿಷಯ ತಿಳಿಸಿದ. ತನಗೆ ಮಕ್ಕಳಿಲ್ಲದ ಕಾರಣ ತಮ್ಮನ ಮಗ್ಳು ಕಲ್ಯಾಣಿನ, ತಂಗಿ ಮಗ ನುಂಕಪ್ಪನ್ನ ತನ್ನ ಜತೇಲೆ ಇಟ್ಟುಕೊಂಡು, ಹೊಲದಾಗೆ ಅವರಿಬ್ಬರಿಗೆ ಬೇರೆ ಗುಡಿಸಲು ಹಾಕಿಕೊಟ್ಟು, ಹೊಲದ ಉಸ್ತುವಾರಿ ವಹಿಸಿಬಿಡಲು ತೀರ್ಮಾನಿಸಿದ್ದು.

'ಊರಿಗಂತೂ ಬಂದಾತು ಹೆಣ್ಣು ನೀರಿಗ್ಬರ್‍ದಂಗಿದ್ದೀತೆ...?' ಪಿಸುನುಡಿದ ಕಮ್ಮಾರ ಅಕ್ಕಸಾಲಿಯ ಕಿವಿಯಲ್ಲಿ.

ಆದರೆ ಆ ದಿನ ನೋಡಿದ್ದೆ ಮತ್ತೆ ಆಕೆ ಇವರ ಕಣ್ಣಿಗೆ ಬೀಳಲಿಲ್ಲ. ದಿನಾಲು ನೀರಿಗೆ ಕೊಡ ಹೊತ್ತು ನುಂಕಪ್ಪ ಬರುತ್ತಿದ್ದ. ನೋಡಿ, ನೋಡಿ, ಒಂದು ದಿನ ಕೇಳಿಯೇಬಿಟ್ಟ ಕಮ್ಮಾರ.

'ಅಯ್ಯಯ್ಯೋಯ್ಯೊಯ್ಯೋ ಇದೇನ್ ನುಂಕಣ್ಣ ನಿನ್ ಕಥೆ...? ನೀರಿಗೆ ಕ್ವಡ ವತ್ಗಂಡು ನೀನ್ ಬತ್ತಿಯಲ್ಲಾ...? ಯಣ್ಮಕ್ಳು ಮಾಡ ಕೆಲ್ಸನಪ್ಪ ಇದೂ....'

'ಹೂಂ ನೀನೇಳದೇನೋ ಸರಿ ಐತೆ ಕಣ್ಣಣ ಆದ್ರೆ, ಕಲ್ಯಾಣಿ ಊರಿಗೆ ಹ್ವಸುಬ್ಳು ಸಲುಪ ಹಿಂಜರ್‍ಕೆ ಆಟೆ....' ಅಂದ ನುಂಕಣ್ಣ.

'ಹ್ವಸಬ್ರು ಅಂತ ಮನಿವಳ್ಗೆ ಕುಂತ್ರೆ ಹಳುಬ್ರಾಗದೆಂಗ್ಯೆ...? ಹ್ವರಗೇ ಬರ್‌ಬಕು ಅಡ್ಡಾಡ್ಬಕೂ ನಾಕ್ಜನ ಪರಿಚಯ ಆಗ್ತರೆ....' ಅಕ್ಕಸಾಲಿ ಸಲಹೆ ನೀಡಿದ.

'ಹೂಂಕಣಣ್ಣ ನೀನೇಳದು ಸರೀನೆಯ. ಇನ್ನ್ಯಾಕೆ ಆಕಿನೆ ಕಳುಸ್ತಿನಿ ನೀರಿಗೆ.....' ಅಂದು ಕೊಡ ಹೊತ್ತು ಹೊರಟ ನುಂಕಪ್ಪನ್ನ ನೋಡಿ ಹಿಂದಿನಿಂದ ಇಬ್ಬರು ಕಿಸಿಕಿಸಿ ನಕ್ಕರು.

ಈ ಇಬ್ಬರ ಜೋಡಿ ಸುತ್ತಳ್ಳಿಗೆ ಹೆಸರು ವಾಸಿ. ಅಕ್ಕಸಾಲಿಯಂತೂ ಸುತ್ತ ಏಳೆಂಟು ಹಳ್ಳಿಗೆ ಒಬ್ಬನೆ. ಚಿನ್ನ, ಬೆಳ್ಳಿ ವ್ಯಾಪಾರ ಮಾಡುವವರು, ವಡವೆ ಮಾಡಿಸುವವರು ಇವನ ಹತ್ತಿರಕ್ಕೇ ಬರಬೇಕು. ಈ ಕಸುಬಿನ ಜತೆಯಲ್ಲಿ ಬಡ್ಡಿ ವ್ಯವಹಾರವೂ ಇತ್ತು. ಇವನ ಬಳಿ

ಅಡವಿಟ್ಟ ಯಾವುದೇ ವಸ್ತು ಹಿಂದಕ್ಕೋಗಿಲ್ಲ ಇದುವರೆಗೂ. ಬಡ್ಡೀ ಕಟ್ಟೇ ಸುಸ್ತಾಗಬೇಕು ಹಾಗೆ ವ್ಯವಹಾರ. ಆದರೂ ಕೇಳಿದಾಕ್ಷಣ ಇಲ್ಲವೆನ್ನದೆ ದುಡ್ಡು ಕೊಡುತ್ತಿದ್ದನಾದ್ದರಿಂದ ಜನ ಇವನ ಹತ್ತಿರವೆ ಬರುತ್ತಿದ್ದರು. ಇಬ್ಬರು ಹೆಂಡರು. ಇಬ್ಬರಿಂದ ಒಟ್ಟು ಹತ್ತು ಮಕ್ಕಳು. ಸುಮಾರು ನಲವತ್ತೈದಕ್ಕೂ ಹೆಚ್ಚು ವಯಸ್ಸು. ತೀರದ ಚಪಲ. ತನ್ನ ಬಳಿ ಬರುವ ಹೆಣ್ಣುಮಕ್ಕಳನ್ನು ನಕ್ಕು, ಮಾತಾಡಿಸಿ, ಉಪಚಾರ ಮಾಡದೆ ಎಂದೂ ಕಳುಹಿಸದವನಲ್ಲ.

ಇವನಿಗೆ ತಕ್ಕ ಜೋಡಿ ಕಮ್ಮಾರ. ಇವನಿಗಿಂತಲೂ ಒಂದು ಕೈಯ ಮೇಲು. ಕಚ್ಚೆಹರುಕ ಅಂತಲೇ ಹೆಸರುವಾಸಿ. ಹೆಣ್ಣುಗಳ ವಿಷ್ಯದಲ್ಲಿ ನಿಪುಣ. 'ಆ ಕರ್ಮಕ್ಕೆ ಅವ್ನಿಗೆ ಆಟೊಂದು ಹೆಣ್ಣು.....' ಅಂತ ಎಲ್ಲರೂ ಅವನ ಆರು ಮಂದಿ ಹೆಣ್ಣಮಕ್ಕಳ್ಳನ್ನು ನೋಡಿ ಆಡಿಕೊಳ್ಳುತ್ತಿದ್ದರು. ಕೊನೆಯ ಇಬ್ಬರು ಗಂಡು ಹುಡುಗರು. ಒಟ್ಟು ಎಂಟು ಮಕ್ಕಳು.

ಹಿರಿಯಾಕೆ ಧನಲಕ್ಷ್ಮಿಗೆ ಈಗಾಗಲೇ ಹತ್ತತ್ತರ ಮೂವತ್ತು ವರ್ಷ. ಆರು ಹೆಣ್ಣು ಇದ್ದರೂ ಆರೂ ಒಂದೊಂದು ರೀತಿ. ಒಂದು ವಂಡರ್ಗಣ್ಣು, ಇನ್ನೊಂದು ಕಡುಕಪ್ಪು, ಮತ್ತೊಂದಕ್ಕೆ ಹಲ್ಲುಬ್ಬು, ಇನ್ನುಳಿದವು ಮೈಯೆಲ್ಲ ಉಬ್ಬುಬ್ಬು ಇದ್ದದರಲ್ಲಿ ಧನಲಕ್ಷ್ಮಿ ತೆಳ್ಳಗೆ, ಬೆಳ್ಳಗೆ ಇದ್ದರೂ ವಿಪರೀತ ಹಲ್ಲುಬ್ಬು ಜತೇಲಿ ಮೆಳ್ಳೆಗಣ್ಣು. ಕಮ್ಮಾರನ ನಿರಂತರ ಪ್ರಯತ್ನದ ನಡುವೆಯೂ ಈ ಅಂಶಗಳು ಆಕೇನ ಇನ್ನೂ ಕುಮಾರಿಯಾಗಿಡಲು ಯಶಸ್ವಿಯಾಗಿದ್ದುವು.

ಒಂದು ಗಂಡು ಅಂತಾಗ್ಬಿಟ್ರೆ ಸಾಕು ಯಾವನನಾಗ್ಲಿ ಗಂಟಾಕೇನು ಅಂತ ಕಮ್ಮಾರ ಎಷ್ಟೇ ಪ್ರಯತ್ನಿಸಿದರೂ ಬಂದವರೆಲ್ಲ ತಿಂದು ತೇಗಿ ಹೋಗುತ್ತಿದ್ದರಷ್ಟೆ. ಇತ್ತಿತ್ಲಾಗೆ ಸಾಕಾಗಿ ಅವನೂ ತಣ್ಣಗೆ ಕೂತಿದ್ದ.

ಆದರೆ ಧನಲಕ್ಷ್ಮಿ ಬೆಂಕಿಯಾಗಿದ್ದಳು. ಓರಗೆಯವರೆಲ್ಲ ಉಗಾದಿಗೋ ಮಾರ್ನೋಮಿಗೋ ತವರಿಗೆ ಬಂದಾಗ ತಮ್ಮ ಅನುಭವಗಳನ್ನೆಲ್ಲ ಈಕೆಯ ಕಿವಿಯಲ್ಲಿ ಉಸುರಿ, ಪಿಸು ಮಾತಿನಲ್ಲಿ ಹುಸಿನಕ್ಕು 'ಇದ್ನೆಲ್ಲ ನೀನ್ಯಾವಗ್ಲೆ ಅನುಬೈಸದೂ....? ಹರೇವೆಲ್ಲ ಹ್ವಾದ್ಮ್ಯಾಕೆ ಏನ್ಬಂತು ಭಾಗ್ಯೇವು....' ಅಂದು ಅವಳ ಒಡಲಲ್ಲಿ ಕೆಂಡ ಸುರುವಿ ಹೋಗುತ್ತಿದ್ದರು. ಇಷ್ಟೆಲ್ಲ ರಂಪಾಟ, ರಾಮಾಯಣಗಳಿದ್ದರೂ ಹೆಣ್ಣೆಂದರೆ ಸಾಕು ಇಬ್ಬರೂ ಎಲ್ಲಾ ಮರೆತು ಬಿಡುತ್ತಿದ್ದರು.

ಊರಿಗೆ ಚೆನ್ನಾಗಿ ಮಳೆಯಾಗಿ, ಭೂಮಿ ತೊಯ್ದು ನುಂಕಣ್ಣಗೆ ಹೊಲದಲ್ಲಿ ಕೆಲಸ ಬಿದ್ದಾಗ ಬಂದಳು ಕಲ್ಯಾಣಿ ಕೊಡ ಹೊತ್ತು ಅಂತೂ. ಆಕೇನ ನೋಡಿದ್ದೇ ತಡ ಇಬ್ಬರು ಒಂದೇಟಿಗೆ ಅಂಗಡಿ ಬಿಟ್ಟು ಅವಳೆದುರಿಗೆ ಬಂದು ನಿಂತರು. ಕಲ್ಯಾಣಿಗೆ ಮೊದಲ ದಿನವೇ ಅವರ ಚರಿತ್ರೆ ತಿಳಿದುಹೋಗಿತ್ತು. 'ವಕ್ಕರಿಸಿದ್ವು ಪೀಡೆಗಳು....' ಅಂತ ಬೈದುಕೊಂಡೆ ನಿಂತಳು.

'ಎಲ್ಲೋಗಿದ್ದೆ ಕಲ್ಯಾಣಿ? ಎಟ್ದಿನಾತು ಕಣ್ಣಿಗ ಬೀಳ್ಲೆ ಇಲ್ಲಾ....?' ನಗುತ್ತ ಕೇಳಿದ ಅಕ್ಕಸಾಲಿ.

ಕ್ಯಾಕರಿಸಿ ಉಗಿವ ಮನಸ್ಸಾದರೂ ತಡೆದು, ಬಿಗುವಾಗಿ ಹೇಳಿದಳು 'ನಾನು ಕಣ್ಣಿಗೆ ಭಾಳ ಬಿದ್ರೆ ವಳ್ಳೇದಲ್ಲ ಕಣಣ್ಣ ಮತ್ತೆ ಕಣ್ಣೇ ಕಾಣ್ದಂಗಾದಾತು...' ಅಂತ.

ಅಯ್ಯೊ ಮಾತೇ ಇಟೊಂದು ಬಿಗು...' ಮೈಯಲ್ಲ ಕುಣಿಸಿದ ಕಮ್ಮಾರ. ಮುಂದೆ ಹೆಜ್ಜೆಯಿಟ್ಟವಳನ್ನ ಮತ್ತೆ ತಡೆದು.

'ಹೌದೂ ಉಂಡ್ಯಾ ಕಲ್ಯಾಣಿ....' ಅಂದ ಅಕ್ಕಸಾಲಿ.

'ಇಲ್ಕಣಣ್ಣ ಇನ್ನ್ಯಾಕೆ...' ಅಂದು ಮತ್ತೆ ಹೊರಟಳು. ಅವಳ ಜತೆಯಲ್ಲೆ ಕಾಲಾಕಿದರು.

'ಅಲ್ಲಾ, ನಮ್ಮನ್ನ ಉಣ್ಣಾಕೆ ಕರಿಯಲ್ಲೇನು....?' ಅನ್ನುತ್ತ.

'ಅಯ್ಯ ಬರ್ರಣ್ಣ ಒಂದಿನ ಬರ್ರಿ...' ಅಂದಳು ಮನಸಲ್ಲೆ ಹಲ್ಲು ಕಡಿಯುತ್ತ.

'ಯಂದ್ಬರನ ಹೇಳ್ಬಿಡು ಮತ್ತೆ....' ಅಂತ ಅಕ್ಕಸಾಲಿ ಅಂದರೆ.

'ಇವತ್ತ ಬಂದ್ಬಿಡ್ತಿವಿ ಬಿಡೂ...' ಅಂದ ಕಮ್ಮಾರ.

'ಬರ್ರಿ, ಬರ್ರಿ ಸ್ಸರಿಯಾಗಿ ಮಾಡಿಡ್ತಿನಿ....' ಅಂತ ಗೊಣಗಿಕೊಂಡ 'ಇವತ್ತು ಬ್ಯಾಡ ಕಣಣ್ಣ ಅಂಥ ವಿಸೇಸ್ವಾದ್ದೇನೂ ಇಲ್ಲ...' ಅಂದಳು.

'ಅಂಗರೆ ವಿಸೇಸ್ವಾದು ಮಾಡಿ ನಮ್ಮುನ್ನ ಉಣ್ಣಕರೀತಿ ಏನೂ....?!' ಇಬ್ಬರಿಗೂ ಅಚ್ಚರಿ, ಸಂಭ್ರಮ.

'ಮತ್ತೆ ನೀವು ಬರ್ತೀರಂದ್ಮ್ಯಾಕೆ ವಿಸೇಸ್ವಾದ್ದೆ ಆಗ್ಬೇಕಲ್ಲಣ್ಣ...' ಕಲ್ಯಾಣಿಯೂ ಉತ್ಸಾಹ ತೋರಿಸಿದಳು. ಅವಳ ಉತ್ಸಾಹ ನೋಡಿ ಗುಂಗಾದ ಇಬ್ಬರೂ.

'ಅಂಥಾ ವಿಸೇಸ್ವಾದ್ದು ಏನ್ಮಾಡ್ತಿ ಕಲ್ಯಾಣಿ....?' ಅಂದಾಗ ನಿಂತಳು ಕಲ್ಯಾಣಿ.

'ನೋಡ್ರಣ್ಣ ನೀವಿಲ್ಲಿತನ್ಕ ಉಂಡಿರಬಾರ್ದು ಅಂಥದ್ದು ಇಲ್ಡುಗ್ಗಿಬೆಲ್ಡಾಲು! ಆಯ್ತೇನ್ರಣ್ಣ ನಾನೀಗ ಹೋಬೇಕು ಬತ್ತೀನಿ.....' ಅಂದು ಸರಾಸರ ನಡೆದಳು.

ಅತ್ತ ಕಡೆಯಿಂದ ತಲೆ ಮೇಲೊಂದು, ಸೊಂಟದಲ್ಲೊಂದು ಕೊಡ ಹೊತ್ತು ಬಂದವಳನ್ನು ನೋಡಿ ಮತ್ತಷ್ಟು ಹುಚ್ಚೆದ್ದು ಅಂಗಡಿಯಿಂದಲೇ 'ಕಲ್ಯಾಣಿ ಇಲ್ಡುಗ್ಗಿ ಬೆಲ್ಡಾಲು....' ಅಂದ ಕಮ್ಮಾರ.

'ಹೂಂ, ಹೂಂ ಇಲ್ಡುಗ್ಗಿ ಬೆಲ್ಡಾಲೇ....' ಅನ್ನುತ್ತ ನಕ್ಕು ಮುಂದಕ್ಕೆ ಹೊರಟಳು ಕಲ್ಯಾಣಿ.

ಅವಳತ್ತ ಹೋಗುತ್ತಿದ್ದಾಗೆ ಬಂದ ನುಂಕಣ್ಣ. ಅವನನ್ನೂ ಬಿಡದೆ ತಡೆದರವರು.

'ಏನ್ ನುಂಕಣ್ಣ ಕೆಲ್ಸ ಜೋರೇನೂ....? ನಿನ್ನೇಣ್ತಿ ಬಂದಿದ್ಲು ನೀರೀಗೆ...?' ಅಂದ ಅಕ್ಕಸಾಲಿ. ಮೊದಲೇ ಸುಸ್ತಾಗಿದ್ದ ನುಂಕಣ್ಣ ಕೆರಳಿದ

'ಯಾಕ್ರಣ್ಣ ನಿಮಗೇನನ ಕಷ್ಟಾತ....?'

'ಅಯ್ಯೋ ಎಲ್ಲಾನುಂಟೇನಪ್ಪ ಅಲ್ಲಾ, ನಿನ್ನೇಣ್ತೀನ ನೋಡಿದ್ವಿ, ಮಾತಾಡಿದ್ವಿ ಭಾಳ ಒಳ್ಳೆ ಹೆಣ್ಮುಗ್ಳು ಕಣಪ್ಪ.... ನಮ್ಮಿಬ್ರುನ್ನ ಉಣ್ಣಕೆ ಕರುದ್ಲು....' ಅಂತ ಕಮ್ಮಾರ ಹೇಳಿದ.

ಒಡನೆ ಅಕ್ಕಸಾಲಿ 'ಅದೇನೋ ವಿಸೇಸ್ವಾದ್ದು ಮಾಡ್ತೀನಂದ್ಲು ಕಣ್ ನುಂಕಣ್ಣ ಇಲ್ಡುಗ್ಗಿ ಬೆಲ್ಡಾಲಂತೆ...' ಅಂದ. ಆ ಮಾತು ಕೇಳಿದ್ದೆ ಕೆರಳಿದ್ದ ನುಂಕಣ್ಣ ಜೋರಾಗಿ ನಗತೊಡಗಿದ. ಪೆಚ್ಚಾದರು ಇಬ್ಬರು.

'ಯಾಕಂಗೆ ನಗ್ತಿಯಪ್ಪಾ......' ಅಂದರು.

'ಅಣ್ಣಾ ನೀವುಂಡಂಗೇಯ...' ನಗುತ್ತಲೇ ಇದ್ದ ನುಂಕಣ್ಣ

'ಅದ್ಯಾಕಂಗಂತಿ ಮಾರಾಯ? ಹುಗ್ಗಿ ಬೆಲ್ಡಾಲು ಕೇಳಿದ್ರೇ ಬಾಯ್‌ಗೆ ನೀರು ಬರ್ತವೆ.....' ಕಮ್ಮಾರ ಅವನ ನಗುವಿನಿಂದ ಸಿಟ್ಟಾದ.

'ಅಯ್ಯೊ ಹುಗ್ಗಿ ಅಲ್ರಪ್ಪ ಅದು ಇಲ್ಬುಗ್ಗಿ ಬೆಲ್ಡಾಲು.....' ನಗುತ್ತಲೇ ಇದ್ದನವ.

ಅಕ್ಕಸಾಲಿ 'ಅದುನ್ನೆ ಕನಲೇ ನಾನೂ ಹೇಳಿದ್ದೂ....' ಅಂತ ಗುರುಗುಟ್ಟಿದ.

'ಅದ್ಯಾಕಂಗೆ ಗುರುಗುಟ್ತಿ ಆಚಾರಣ್ಣಾ? ವಳ್ಳೆ ಬುದ್ವಂತರಂಗೆ ಕಾಣ್ತೀರಿ ಇಲ್ಬುಗ್ಗಿ ಬೆಲ್ಡಾಲಂದ್ರೆ ತಿಳೀಲಿಲ್ಲಾ.....? ಅಲ್ರಣ್ಣ ಇಲ್ದಿರ ಹುಗ್ಗಿಗೆ ಹಾಲೆಲ್ಲೇದೂ.....? ಅದುನ್ನ ಉಂಬದೆಂಗೆ ಉಂಬ್ತೀರಿ....?' ತೆಪರುಗಳೇ ಎಂಬಂತೆ ಹಣೆ ಚಚ್ಚಿಕೊಂಡು ನಗುತ್ತಲೇ ಹೊರಟು ಹೋದ.

ಈಗ ಅವರ ತಲೆ ಕೆಲಸ ಮಾಡಿತು. ಕಲ್ಯಾಣಿ ಬೆಪ್ಪರನ್ನ ಮಾಡಿದ್ದಳು ಅವರನ್ನ. ನಿಗರಾಡಿದ ಅಕ್ಕಸಾಲಿ

'ಅದೇಟಲೆ ಆ ಚಿನಾಲಿಗೆ ಕೊಬ್ಬು.....? ಏನನ ಆಗ್ಲಿ ಕಮ್ಮಾರ ಈ ಅಂಗ್ಡಿನ ಹರಾಜಾಕಿದ್ರೂ ವೋಟೇವೋತು ಅವ್ಳನ್ನ ಮಾತ್ರ ಬಿಡ್ಬಾರ್ದು....' ಅಂದು ಶಪಥ ಮಾಡಿದ.

ಮರುದಿನ ಆಕೆ ನೀರಿಗೆ ಬರುವ ಹೊತ್ತಿಗೆ ಸರಿಯಾಗಿ ಕೈಯಲ್ಲಿ ನೋಟಿನ ಕಂತೆಯೊಂದು ಹಿಡಿದು ಕೂತ ಅವನೆದುರು ರಸ್ತೆಗೆ ಕಣ್ಣು ನೆಟ್ಟು ಕಮ್ಮಾರ. ಬಂದಳು ಕಲ್ಯಾಣಿ ಕೊಡ ಹೊತ್ತು.

ಕಂತೆಯಿಂದ ಒಂದೊಂದೆ ನೋಟನ್ನು ಎಳೆದೆಳೆದು ಹಾಕುತ್ತ, ಎತ್ತಿ ಹಿಡಿಯುತ್ತ ಆಕೆ ಅಂಗಡಿ ಮುಂದಕ್ಕೆ ಬಂದೊಡನೆ ಸರಿಯಾಗಿ ಹೇಳಿದ ಅಕ್ಕಸಾಲಿ

'ನೂರು ಹ್ವೋದ್ರೇನು.... ನೂರು ಬಿಟ್ರೇನು......' ಹಿಂದೆಯೇ ಕಮ್ಮಾರನು

'ಹೌದುದು ಆಚಾರಿ, 'ನೂರು ಹ್ವೋದ್ರೇನು.... ನೂರು ಬಿಟ್ರೇನು......' ಅಂದಾಗ ಕ್ಯಾಕರಿಸಿ ಉಗಿದು ಕಲ್ಯಾಣಿ

'ಬೇವರ್ಸಿಗುಳು.....' ಎಂದು ಬೈದುಕೊಂಡು ಮುಂದಕ್ಕೋದ್ಲು. ಅತ್ತಲಿಂದ ಬರುವಾಗಲು ಅದೇ ರಾಗ. ಮರುದಿನ

'ನಗವೇನು ನಾಣ್ಯೆನು' ಅಂದರೆ ಮತ್ತೊಂದು ದಿನ ಕೈತುಂಬಾ ಚಿನ್ನದ ಒಡವೆ ಹಿಡಿದುಕೊಂಡು

'ಚಿನ್ನೇನು ಬೆಳ್ಳೇನೂs? ಮುತ್ತೇನು.... ಹವಳೇsನು.....' ಅಂತ ರಾಗ.

ವಾರ ಹದಿನೈದು ದಿನಗಳಾದರೂ ರಾಗಗಳು ನಿಲ್ಲದೆ ದಿನದಿನ ಜಾಸ್ತಿಯಾದವು. ಕಲ್ಯಾಣಿಗೂ ಸಾಕಾಗಿ ಇಬ್ಬರಿಗೂ ಸರಿಯಾಗಿ ಪಾಠ ಕಲಿಸಬೇಕು, ಇನ್ಯಾವ ಹೆಣ್ಣಿನ ತಂಟೆಗೂ ಹೋಗದಂಗೆ ಮಾಡಬೇಕು ಅಂತ ಮನದಲ್ಲೆ ನಿರ್ಧರಿಸಿದಳು. ಗಂಡನಿಗೆ ಏನೂ ಹೇಳಲಿಲ್ಲ. ಮೊದಲೇ ದುಡುಕು, ಹಿಡಿದು ತದುಕಿದ್ರೆ ಬಗೆಹರಿವ ವಿಚಾರವಲ್ಲ ಎಂದುಕೊಂಡು ತಾನೇ ಒಳ್ಳೆ ಸಮಯಕ್ಕೆ ಕಾದಳು.

ಅಷ್ಟೊತ್ತಿಗಾಗಲೇ ಕಲ್ಯಾಣಿಗೆ ಊರಿನ ತುಂಬ ಗೆಳತಿಯರು. ತನ್ನ ಸರಳ, ಸ್ನೇಹ ಸ್ವಭಾವದಿಂದ ಹಿರಿಯರಿಗೂ, ಕಿರಿಯರಿಗೆಲ್ಲರಿಗೂ ಬೇಗನೆ ಆತ್ಮೀಯಳಾದಳು. ಆಕೆಗೆ ನಿಕಟವೆಂದರೆ ಕಮ್ಮಾರನ ಹಿರಿಮಗಳು ಧನಲಕ್ಷ್ಮಿ. ಸೇದುವ ಬಾವಿ ಬಳಿ ದಿನವೂ ಇಬ್ಬರು ಸೇರುತ್ತಿದ್ದರು. ಆಕೆ ಮೂಲಕ ಕಮ್ಮಾರನ ಹೆಂಡತಿಯ ಪರಿಚಯವೂ ಆಗಿ, ಆಕೆಗೂ

ಹತ್ತಿರವಾದಳು. ಧನಲಕ್ಷ್ಮಿ ತನ್ನ ಮನಸ್ಸಿನ ನೋವು, ಸಂಕಟ ಇವಳ ಮುಂದೆ ಯಾವ ಸಂಕೋಚವಿಲ್ಲದೆ ತೋಡಿಕೊಳ್ಳುತ್ತಿದ್ದಳು.

'ಯಂಥದ್ದೊ ಒಂದು ಕಲ್ಯಾಣಿ, ಗಂಡು ಅಂಬ ಪ್ರಾಣಿ ಆದ್ರಾತು.....' ಅನ್ನುತ್ತ ಸದಾ ಕಣ್ಣೀರಾಕುವುದೇ ಅವಳ ಕೆಲಸ.. ಇವಳದು ಸಮಧಾನಗೊಳಿಸುವುದು.. ಅಷ್ಟಕ್ಕೇ ಬಿಡದೆ ಕಲ್ಯಾಣಿ ಅಕ್ಕಸಾಲಿಯ ಹೆಂಡತಿಯ ರತ್ನನ್ನೂ ಮಾತಾಡಿಸಿ ಗೆದ್ದಳು. ಹೀಗೆ ಊರಿನ ಹೆಂಗಸರ ವಿಶ್ವಾಸ ಗೆದ್ದ ಮೇಲೆ ಒಂದು ದಿನ ನೀರಿಗೊಂಟ ಕಲ್ಯಾಣಿ ಅಕ್ಕಸಾಲಿ ಅಂಗಡಿ ಮುಂದೆ ನಿಂತು ಅವನತ್ತ ಓರೆನೋಟ ಬೀರಿ, ನಸುನಕ್ಕು ಮುಂದಕ್ಕೋದಳು.

ಅವ ಹಾರಿದವನೆ ಮುಂದಿದ್ದ ಕಮ್ಮಾರನನ್ನು ಬಿಗಿದಪ್ಪಿ

'ಇಟ್ದಿನುಕ್ಕೆ ಇವತ್ತು ನಮ್ ಮ್ಯಾಲೆ ಕರ್ಣೆ ತೋರ್ಸಿದ್ಲಲ್ಲೊ ಕಲ್ಯಾಣೀ....' ಅಂತ ಬಡಬಡಿಸಿದಾಗ ಕಮ್ಮಾರ ಅವನನ್ನೆತ್ತಿ ಅತ್ತ ಒಗೆದು

'ಥೂ ನಿನ್ನ ಯಿಂಗ ಯಾಮಾರಿದ್ರೆಂಗೆ? ಅದೇನು ಸುಮ್ಕೆ ಬೀಳ ಮಿಕ ಅಲ್ಲ ಅನ್ನುಸ್ತೈತೆ. ಸರ್ಯಾಗೇ ಬೆಚ್ಚಗೆ ಮಾಡ್ಬೇಕಣ್ಣಾ.....' ಅಂದಾಗ

'ಮಾಡನ ಬಿಡೋ. ವಡವೆ, ದುಡ್ಡು ಹ್ವಾದ್ರೆ ಮತ್ತೆ ಸಂಪಾಳಿಸ್ಬಹ್ದು ಆದ್ರೆ ಈ ಯೆಣ್ಣು ಬಿಟ್ರೆ ಮತ್ತೆ ಸಿಗಾದುಂಟೆ.....?'

ಎಂದು ಅಕ್ಕಸಾಲಿ ಎಲ್ಲಕ್ಕೂ ತಯಾರಾದ. ಮರುದಿನ ಕಲ್ಯಾಣಿಯನ್ನು ನಿಲ್ಲಿಸಿ ಹಣ ಕೊಡಲು ಹೋದ.

'ತಗಿ ಮಾರಾಯ ದುಡ್ ತಗಂಡು ನಾನೇನ್ ಮಾಡನ.....' ಅಂತ ಕೊಡವಿ ಹೋಗಿಬಿಟ್ಟಳಾಕೆ.

'ಎಲಾ ಇವ್ಳ ದುಡ್ಡು ಕ್ವಟ್ರೆ ತಿರುವ್ಕೆಂಡು ವೋಗ್ತಳಲ್ಲೊ....' ಅಂತ ತಿರುಗ್ದಿನ ಮುತ್ತಿನ ಸರವಿಡಿದು ನಿಂತ.

'ಕಲ್ಯಾಣಿ ಇತ್ನೋಡು ಮುತ್ತು, ಮುತ್ತು! ಮುತ್ತಿನ ಸರ....! ಅಂದಾಗ ಆಕೆ ನಾಚಿ, ನೀರಾಗಿ ನಿಂತಲ್ಲೆ ನುಲಿದು

'ನೀನೇ ಹಾಕು ಕ್ವಳ್ಳಗೆ.' ಅಂದಾಗ ಅಕ್ಕಸಾಲಿ ನಚ್ಚಗಾದ. ಒಡನೆ ಕಮ್ಮಾರ

'ಇಲ್ಲಿ ಓಡಾಡೋ ಜನುಕ್ಕೆ ನಮ್ಯಾಲೇ ಕಣ್ಣು. ಈಗ ಅದೆಲ್ಲ ಬ್ಯಾಡ ಸುಮ್ಕೆ ಮರೇಲಿ ತಗಂಡೋಗು....'

ಅಂದ. ಸರ ಇಸಿದುಕೊಳ್ಳುವ ನೆಪದಲ್ಲಿ ಅವನ ಕೈಯನ್ನೊಮ್ಮೆ ಮೆಲ್ಲಗೆ ಕಲ್ಯಾಣಿ ಸವರಿದಾಗ ಪೂರ ಜ್ಞಾನ ತಪ್ಪಿದ ಅಕ್ಕಸಾಲಿ

'ಇನ್ನ ಭಾಳದಿನ ತಡಿಯಾಕಾಗ್ದು ಕಮ್ಮಾರ ಇದುಕ್ಕೇನನ ಯವಸ್ಥೆ ಆಗ್ಲೇಬೇಕು....' ಅಂತ ಪಟ್ಟಿಡಿದು ಕುಂತ. ಹೇಳುತ್ತೇಳುತ್ತಲೇ ನಾಲ್ಕೈದು ಸರ ಕಳಕೊಂಡ.

ಇತ್ತ ಕಲ್ಯಾಣಿ ನೀರಿಗೆ ಹೋದಾಗೊಮ್ಮೆ, ನೀರ್ಕಡಿಗೆ ಹೋದಾಗೊಮ್ಮೆ ತನ್ನ ಬಳಿಯಿದ್ದ ಸರಗಳನ್ನು ಧನಲಕ್ಷ್ಮಿಗೆ ತೋರಿಸಿದಳು. ಆಕೆ ಅವುಗಳ ಬಗ್ಗೆ ಆಸೆ ತೋರಿದಾಗ

'ನೀನೇ ಇಟ್ಕ.....' ಅಂತ ಎಲ್ಲವೂ ಅವಳಿಗೆ ಕೊಟ್ಟಳು.

'ಯಲ್ಲಾ ನಿನ್ನವೆಯೇನೂ....?' ಅಂತ ನಂಬಲಾರದೆ ಕಣ್ಣಣ್ಣು ಬಿಟ್ಟವಳ ಬೆನ್ನು ತಟ್ಟಿ

'ಅಲ್ಲ ಯಲ್ಲ ನಿನ್ನವು.... ನೀನೇ ಇಟ್ಗ.....' ಅಂದುಬಿಟ್ಟಳು ಕಲ್ಯಾಣಿ.

ಎಗರಿಬಿದ್ದಳು ಧನಲಕ್ಷ್ಮಿ

'ಅಲೆ ಇವ್ಳ ನನ್ನವೆಂಗಾದಾವೂ? ನಿನ್ಗಂಡೇನಂದಾನೂ?'

'ಅಯ್ಯೊ ನನ್ಗಂಡ ಮಾಡ್ಸಿ ಕ್ವಟ್ಟವಲ್ಲ ಕಣೇ ಆ ಅಕ್ಕಸಲಿ ಕ್ವಟ್ಟ....'

ಕಲ್ಯಾಣಿ ಮಾತಿನ್ನೂ ಮುಗಿದಿರಲಿಲ್ಲ ಒಡನೆ ಧನಲಕ್ಷ್ಮಿ

'ನನಿಗೆ ಕ್ವಡು ಅಂತ ಕ್ವಟ್ನಾ....?' ಅಂತ ಕೇಳಿದಾಗ ಎಗರಿಬೀಳುವ ಸರದಿ ಕಲ್ಯಾಣಿದಾಯ್ತು. ಆದರೂ ತಲೆ ಓಡಿತು ಚುರುಕಾಗಿ.

'ಹೂಂ ನಿನ್ಗೆಯ ಇಟ್ಗ.....' ಅಂದ ಕಲ್ಯಾಣಿ ಮಾತಿಗೆ

'ಸ್ವಲುಪ ವಯ್ಸು ಯಚ್ಚು ಅನ್ನದ್ಬಿಟ್ರೆ ಅವ್ನು ಗಟ್ಟಿಮುಟ್ಟಾಗೇ ಅದಾನಲ್ಲ ಕಲ್ಯಾಣಿ....?'

ಯಾವುದೋ ಗುಂಗಿನಲ್ಲಿದ್ದ ಕಲ್ಯಾಣಿ ಸುಮ್ಮನೆ ತಲೆಹಾಕಿದಾಗ

'ಅಂಗಾರೆ ಅವ್ನಿಗೆ ನನ್‌ಮ್ಯಾಲೆ ಆಸೆ ಇರವೊತ್ಗೆಯ ಇವುನೆಲ್ಲ ಕಳ್ಸಿದಾನೆ.... ನಾಳೀಕೆ ಸಿಕ್ರೆ ಕೇಳ್ಬಿಡ್ತಿನಿ....' ಅಂದಳು ಧನಲಕ್ಷ್ಮಿ.

ಕಲ್ಯಾಣಿ ತಲೆಯೆಲ್ಲ ಅದುರಿದಂಗಾಗಿ

'ಅಂಗೆಲ್ಲನ ಮಾಡ್ಬಿಟ್ಯೆ ನಮ್ಮವ್ವ ನಮ್ತಾಯಿ ಒಂದ್ನಾಕು ದಿನ ಸುಮ್ಕಿರು. ಮೊದ್ಲು ಆ ವಡ್ವೆ ನಿಮ್ಮವುನ ಕಣ್ಣಿಗೆ ಬಿದ್ರೆ ಯೇನೇಳ್ತಿ ಯೇಳು.....?' ಕೇಳಿದಳು ಕಲ್ಯಾಣಿ.

'ಅಯ್ಯ ನಾನೆಲ್ಲ ಬಚ್ಚಿಟ್ಕಂತ್ನಿ ಬಿಡೂ.... ಅಂಗೂ ಆಕಿ ಬಯಲು ಮಾಡಿದ್ಲು ಅಂತಿಟ್ಕ ಇರ ವಿಸ್ಯ ಯೇಳದಟೆ.....'

ಕಲ್ಯಾಣಿ ಒಳಗೆ ನಡುಗಿದಳು. ನಡುಗುತ್ತಲೇ

'ಏನಂತೇಳ್ತಿ? ನನ್ ಕೈಯಗೆ ಕ್ವಟ್ಟಂತನ...? ಅಂತ ಕೇಳಿದಳು.

'ಯಲ್ಲನುಂಟೇನೆ ಕಲ್ಯಾಣಿ.... ನಿನೊಬ್ಬಕೆ ನನ್ ನಿಜವಾದ ಗೆಣೆಕಾತಿ ನನಿಗೇಟು ಸಹಾಯ ಮಾಡ್ತಿ, ಧೈರ್ಯ ಯೇಳ್ತಿ. ನಿನ್ನೆಂಗ ಬಿಟ್ಟುಕ್ವಟ್ಟೇನೂ ನನಿಗೇ ಕ್ವಟ್ಟ ಅಂತೇಳ್ತಿನಿ....' ಅಂತ ಹೇಳಿದಾಗ ಸಮಾಧಾನಿಲೆ ಉಸಿರಾಡಿದಳು.

'ಗೆದ್ದೆ...!' ಅಂತ ಮನಸ್ಸು ಕೇಕೆ ಹಾಕುತ್ತಿತ್ತು. ಧನಲಕ್ಷ್ಮಿ ಏನೇ ಆದ್ರೂ ಮಾತಿಗೆ ತಪ್ಪೋಳಲ್ಲಂತ ಗ್ಯಾರಂಟಿ.

ಸರ ಹಾಕಿಕೊಂಡ ಮೇಲೆ ಧನಲಕ್ಷ್ಮಿ ಅಕ್ಕಸಾಲಿನ ನೋಡೋ ರೀತಿಯೇ ಬದಲಾಯ್ತು. ಈಗಾಗ್ಲೆ ಮೂವತ್ತು ತುಂಬಿದ್ದ ಅವಳಿಗೆ ಲಗ್ನ ಕನಸು ಅನ್ನೋದು ಖಚಿತವಾಗಿತ್ತು. ಅವಳಿಂದಾಗಿ ಹಿಂದಿನವೂ ಹಾಗೆ ಕೂತಿದ್ದವು.

ಬಹಳ ಯೋಚಿಸಿ ಕಲ್ಯಾಣಿ ಒಂದು ನಿರ್ಧಾರಕ್ಕೆ ಬಂದಳು. ಈ ಮಧ್ಯೆ ಆಕಿ ಬಸುರಿ ಬೇರೆ. ಆ ಹೊತ್ತಿಗೆ ಅಂಗೂ ಹಿಂಗೂ ಮಾಡಿ ಕಮ್ಮಾರ ತನ್ನ ತೋಟದ ಮನೆ ರಿಪೇರಿ ಮಾಡಿಸಿದ. ಅಕ್ಕಸಾಲಿಯೂ ಬಲು ಸಹಾಯ ಮಾಡಿದ. ಹೊಸ ಮಂಚ, ಹಾಸಿಗೆ, ದಿಂಬು ಎಲ್ಲವೂ ಬಂದವು. ಕಲ್ಯಾಣಿ, ಅಕ್ಕಸಾಲಿಯ ಪ್ರೇಮ ಸಮ್ಮಿಲನಕ್ಕೆ

ಅಮವಾಸ್ಯೆಯ ದಿನವೊಂದು ನಿಗದಿಯಾಯ್ತು. ಒಳಗಿಂದೊಳ್ಗೆ ಅಕ್ಕಸಾಲಿಯನ್ನ ಭೇಟಿಯಾಗಿ ಆ ದಿನ ಕಮ್ಮಾರ ಅಲ್ಲೆಲ್ಲು ಸುಳಿಯಕೂಡದು ಅಂತ ಅವನಿಂದ ಭಾಷೆ

ತಗೊಂಡಿದ್ದಳು ಕಲ್ಯಾಣಿ. ಆ ದಿನ ಸೂರ್ಯ ಮುಳುಗುವ ಮುನ್ನ ತಾನು ಆ ಮನೆ ಸೇರುವುದಾಗಿ, ಸೂರ್ಯ ಮುಳುಗುತ್ತುಲ್ಲ ಅವನಲ್ಲಿಗೆ ಬರಬೇಕು ಎಂಬುದಾಗ ತಾನೇ ನಿರ್ಧರಿಸಿದಳು. ಆಕೆಗೆ ಹೊಸ ಸೀರೆ, ರವಿಕೆ, ಮುತ್ತಿನ ಸರ ಬಂದವು. ಅವಳ ಮೂಲಕ ಅವು ಧನಲಕ್ಷ್ಮಿಯ ದೇಹವನ್ನಲಂಕರಿಸಿದವು. ಸೂರ್ಯ ಮುಳುಗುವ ಮುನ್ನ ಧನಲಕ್ಷ್ಮಿ ತಮ್ಮ ತೋಟದ ಮನೆ ಸೇರಿದಳು. ಪಡುವಣ ಕೆಂಪೇರುತ್ತ, ಏರುತ್ತ ಹೋದಂತೆ ತೋಟದ ಮನೆ ಕಂಪಾಯ್ತು. ಕಾದ ಮೈಗಳಿಗೆ ವಶವಾಗಿದ್ದ ಮನಸ್ಸುಗಳು ಯೋಚಿಸುವ ವ್ಯವಧಾನವೇ ಕಳೆದುಕೊಂಡಿದ್ದವು.

ಹೊರಗೆ ದೂರದಲ್ಲಿ ಕುಳಿತು ಒಳಗಾಗುತ್ತಿರುವುದನ್ನು ಕಲ್ಪಿಸಿಕೊಂಡು ತಳಮಳಿಸಿ ಹೋಗುತ್ತಿದ್ದ ಕಮ್ಮಾರ. ಯಾವುದೋ ಗುಂಗು, ಎಲ್ಲಿಯೋ ನೋಟ, ಏನೋ ಮಂಥನ. ಒಮ್ಮೆಗೆ ಹೆಣ್ಣುಮಕ್ಕಳ ದನಿಗಳು, ನಗುವು ಕೇಳಿಸಿ ನಿಟ್ಟುಬಿದ್ದು ಎದ್ದು ಕುಳಿತ ಸುತ್ತಾ ನೋಡಿದ. ಅವನಿಗೆ ಬೆನ್ನು ಮಾಡಿ ಹತ್ತೆಂಟು ಹೆಣ್ಣುಗಳ ಸಣ್ಣಗುಂಪು ತಮ್ಮ ತೋಟದ ಮನೆಯತ್ತಲೇ ಹೋಗುತ್ತಿತ್ತು. ಅದರಲ್ಲಿ ಪ್ರಧಾನವಾಗಿ ತನ್ನ ಹೆಂಡತಿಯ ದನಿಯೇ ಕೇಳಿಸುತ್ತಿತ್ತು. ಅನುಮಾನವೇ ಇಲ್ಲ. ಕೆಲವರ ಕೈಗಳಲ್ಲಿ ಲಾಟೀನು ಗದಗದ ನಡುಗಿದ ಕಮ್ಮಾರ ಕದಲಲೂ ಆಗದೆ ನೆಲದೊಳಕ್ಕೆ ಕಾಲುಗಳು ಹೂತು ಹೋದ ಹಾಗಾಗಿ ಅಲ್ಲೇ ಕುಸಿದ.

ಹದಿನೈದು ದಿನಕ್ಕೊಮ್ಮೆ ತಾಲ್ಲೂಕಿನ ಹೆಲ್ತ್ ಸೆಂಟರ್‌ಗೆ ತಪಾಸಣೆಗೆಂದು ಹೋಗುತ್ತಿದ್ದ ಕಲ್ಯಾಣಿಗೆ ಅಲ್ಲಿ ಮಿಡ್‌ವೈಫ್ ಆಗಿದ್ದ ಭಾಗ್ಯಮ್ಮ ಪರಿಚಯ ಆಗಿದ್ದಳು. ಅವಳು ಕುಟುಂಬ ಯೋಜನೆ ಬಗ್ಗೆ, ಮಕ್ಕಳ ಬಗ್ಗೆ, ಹೆಣ್ಣುಮಕ್ಕಳ ಆರೋಗ್ಯದ ಬಗ್ಗೆ ಈಕೆಗೆ ತಿಳಿಸಿ ಹೇಳುತ್ತಿದ್ದಳಲ್ಲದೆ

'ನಿಮ್ಮೂರಿನ ಹೆಂಗಸರನ್ನ ಒಟ್ಟಾಗಿ ಸೇರಿಸು, ನಾನೊಮ್ಮೆ ಬಂದು ಅವರಿಗೆ ಎಲ್ಲಾ ವಿಷಯಗಳ ಬಗ್ಗೆ ಮಾಹಿತಿ ನೀಡುತ್ತೀನಿ.....' ಅಂತೇಳುತ್ತಿದ್ದಳು.

'ಭಾಗ್ಯಕ್ಕ ಮನ್ಯಾಗೆ ಗಂಡ್ಮಕ್ಳಿಗೆ ಗೊತ್ತಾಗ್ಬಾರ್ದು. ಬ್ಯಾರೆ ಯಣ್ಮಕ್ಳುನ್ನೆಲ್ಲ ಕೇಳಿ ನಾನೊಂದಿನ ಯೇಳ್ತೀನಿ ಅವತ್ತು ಬಾ....' ಅಂತೇಳಿ ಬಂದಿದ್ದಳು.

ಅಲ್ಲಿಂದ ಬಂದ್ಮೇಲೆ ತನ್ನ ಆಪ್ತರೊಡನೆ ಸಮಾಲೋಚಿಸಿ, ಎಲ್ಲರನ್ನೂ ಒಪ್ಪಿಸಿ, ಕಮ್ಮಾರನ ಹೆಂಡತಿ ಮನವೊಲಿಸಿ ಅಮವಾಸ್ಯೆಯಂದು ಅವರ ತೋಟದ ಮನೆಯಲ್ಲಿ ಆ ಕಾರ್ಯಕ್ರಮವನ್ನೂ ನಿಗದಿಪಡಿಸಿ ಧನಲಕ್ಷ್ಮಿಗೆ ಇದರ ಸುಳಿವು ಸಿಗದಂತೆ ಎಚ್ಚರ ವಹಿಸಿದ್ದಳು.

ಕಮ್ಮಾರ ಬಾಯಿ ಸತ್ತಂಗಾಗಿದ್ದ. ಅವನ ಹೆಂಡತಿ ತೋಟದ ಮನೆ ಬಾಗಿಲು ಬಡಿಯುತ್ತಿದ್ದಳು. ಬಾಗಿಲು ತೆರೆಯವಲ್ಲದು. ಒಳಗೆ 'ಈ ಕೆಲ್ಸ ಆ ಹ್ವಟ್ಟುರಿನನ್ಮ ಗುಂದೆಯು........' ಅಂತ ಕಮ್ಮಾರನ್ನ ಬೈದುಕೊಂಡು, ಗಡಿಬಿಡಿಯಲ್ಲಿ ಬಟ್ಟೆ ತೊಟ್ಟ ಅಕ್ಕಸಾಲಿ ಕಡ್ಡಿಗೀರಿದ. ಮುಂದಿದ್ದವಳನ್ನು ನೋಡಿ ಚೀರಲು ಬಾಯ್ತೆರೆದರೆ ಶಬ್ದ ಬರಲೊಲ್ಲದು. ಹುಚ್ಚಚ್ಚರ ಹಾರಿ, ಎಗರಿ ಬಾಗಿಲು ತೆರೆದು ಹೊರಬಂದರೆ ಸುತ್ತಲು ಹೆಣ್ಮಕ್ಕಳು!

ಎಲ್ಲರೂ ದಂಗುಬಡಿದು ನೋಡುತ್ತಿರುವಾಗಲೇ ಹಿಂದೆಯೇ ಧನಲಕ್ಷ್ಮಿ ಹೊರ ಬಂದಾಗ ಮರೇಲಿಂದ ಎಲ್ಲವನ್ನೂ ನೋಡುತ್ತಿದ್ದ ಕಮ್ಮಾರ ಅಲ್ಲೇ ಮೂರ್ಛೆ ಹೋದ.

ಗುಂಪಿನಲ್ಲಿದ್ದ ಅವನ ಹೆಂಡತಿ ಬಾಯಿ ಬಡಿದುಕೊಂಡು ಅಳತೊಡಗಿದಾಗ ಜತೇಲಿದ್ದ ಅಕ್ಕಸಾಲಿಯ ಚಿಕ್ಕ ಹೆಣ್ತಿಯೂ ಅದಕ್ಕೆ ದನಿಗೂಡಿಸಿದಳು. ನೋಡು ನೋಡುತ್ತಿದ್ದಂಗೆ ಜನ ಸೇರಿಯೇಬಿಟ್ಟರು. ಧನಲಕ್ಷ್ಮಿ ಎಲ್ಲಾ ಒಪ್ಪಿಕೊಂಡಳು.

ಕಲ್ಯಾಣಿಯ ಮಾತೆಲ್ಲೂ ಬರಲಿಲ್ಲ. ಇಷ್ಟೆಲ್ಲ ನಡೆಯುವಾಗ ಅವಳ ಸುಳಿವೇ ಇರಲಿಲ್ಲ. ತನ್ನನ್ನ ತವರಿಗೆ ಕರೆದೊಯ್ಯಲು ಬಂದಿದ್ದ ಅಪ್ಪ, ಅವ್ವನೊಡನೆ ಆಕೆಯಾಗಲೇ ಬಸ್ಸತ್ತಿ ಕುಂತಿದ್ದಳು. ತನ್ನನ್ನು ನೋಡಲು ಆಗಾಗ ಊರಿಗೆ ಬರುತ್ತಿದ್ದ ನುಂಕಪ್ಪ ವಿಷಯ ತಿಳಿಸುತ್ತಿದ್ದ. ಅಕ್ಕಸಾಲಿಗೆ ತಪ್ಪಿಸಿಕೊಳ್ಳಲು ಆಗಲೇ ಇಲ್ಲವೆಂದೂ, ಎಲ್ಲರೆದುರು ತಪ್ಪು ಒಪ್ಪಿಕೊಂಡು, ಊರ ಮುಂದಲ ಹನುಮಂತ ಗುಡಿಯಲ್ಲಿ ಊರಿನ ಸಮಕ್ಷಮ ಧನಲಕ್ಷ್ಮಿಗೆ ತಾಳಿ ಕಟ್ಟಿದನೆಂದೂ, ಧನಲಕ್ಷ್ಮಿ ಬಸುರಿಯಂತ ಅವನ ಸೋದರತ್ತೆ ತಿಳಿಸಿದುದಾಗಿಯೂ ಎಲ್ಲ ವಿವರ ತಿಳಿಯಿತು.

'ಇನ್ನ್ಯಾಕೆ ಮಾವ ಅಳಿಮಯ್ಯ ಇನ್ನ್ಯಾವ ಯಣ್ಮಕ್ಳು ತಂಟೆಗೂ ಹ್ವಾಗಲ್ಲ ಬಿಡು....'

ಅಂತ ಕಲ್ಯಾಣಿ ತನ್ನ ಉಪಾಯ ಫಲಿಸಿದ್ದಕ್ಕೆ ಸಂಭ್ರಮಪಡುತ್ತಿದ್ದರೆ ಅತ್ತ ಕಮ್ಮಾರ ಒಬ್ಬನೆ ಸಿಕ್ಕಾಗ ಅಕ್ಕಸಾಲಿ ಅವನ ಕಾಲಮೇಲೆ ಬಿದ್ದು

'ಚಿನಾಲಿ ಮುಂಡೆ ಹಿಂಗೆ ಮೋಸ ಮಾಡ್ತಳಂತ ಕನ್ಸುಮನ್ಸುನಗೂ ತಿಳಿಲಿಲ್ಲ. ನಿನ್ಮಗ್ಳು ಅಂತ ಗೊತ್ತೆ ಆಗ್ಲಿಲ್ಲ....'

ಅಂತ ಕಣ್ಣೀರಾಕುತ್ತಿದ್ದರೆ ಕಮ್ಮಾರ ಅಳಬೇಕೊ ನಗಬೇಕೊ ತಿಳಿಯದೆ ಕಂಗಾಲಾಗಿದ್ದ. ಅವನು ಪ್ರತಿಸಾರಿಗೊಮ್ಮೆ 'ಅವತ್ತು ನಾನೆನರ ಯಾಮಾರಿ ಅಕ್ಕಸಾಲಿ ಬದ್ಲು....' ಅಂದುಕೊಂಡಂತೆಲ್ಲ ಎದೆ ನಡುಗಿ ಚೀರಿಕೊಳ್ಳುತ್ತಿದ್ದ. ಸಾಧ್ಯ, ಅಸಾಧ್ಯಗಳನ್ನು ನೆನೆನೆನೆದು ಬೆಚ್ಚುತ್ತಿದ್ದ. ಹುಚ್ಚೆಲ್ಲ ಕೊಚ್ಚ್ಹೋಗಿತ್ತು.

ಅಕ್ಕಸಾಲಿಗೆ ಮೂವರು ಹೆಂಡಿರು. ಹತ್ತು ಮಕ್ಕಳ ಜತೆಯಲ್ಲಿ ಹನ್ನೊಂದಕ್ಕೇ ಆಗಲೇ ಅಣಿ ಮಾಡಿದ್ದ. ನಗುವಿಲ್ಲ, ನಲಿವಿಲ್ಲ; ಮುಖದಲ್ಲಿ ಚೂರೂ ಗೆಲುವಿಲ್ಲ. ಯಾವಾಗ್ನೋಡಿದರೂ ತಲೆಮೇಲೆ ಕೈಹೊತ್ತು ಕೂತಿರುತ್ತಿದ್ದ.

ಬಾಣಂತನ ಮುಗಿಸಿಕೊಂಡು, ಏಳು ತಿಂಗಳ ಕೂಸೆತ್ತಿಕೊಂಡು ಬಂದಳು ತಿರುಗಿ ಕಲ್ಯಾಣಿ. ಒಂದ್ವಾರ ಬಿಟ್ಟು ಮತ್ತೆ ಹೊರಟಳಾಕೆ ನೀರಿಗೆ ಯಥಾ ಪ್ರಕಾರ. ಅಂಗಡಿಯಲಿ ಕೂತಿದ್ದ ಇಬ್ಬರೂ ಇವಳನ್ನ ನೋಡಿದ್ದೆ ದೆವ್ವ ಮೆಟ್ಟಿದವರಂತೆ ಸೆಟೆದು ಕೂತರು. ಅರೆಕ್ಷಣ ಅಂಗಡಿ ಮುಂದೆ ನಿಂತು, ಅತ್ತ ತಿರುಗಿ

'ಏನ್ರಣ್ಣಾ ಚನ್ನಾಗದೀರಾ....?' ಅಂದಳು ಕಲ್ಯಾಣಿ. ಉಹೂಂ ಮುಖ ಎತ್ತಲಿಲ್ಲ, ಉಸಿರೇ ಇಲ್ಲ.

'ವೋಗ್ಲಿಬಿಡ್ರಣ್ಣಾ ನೀವ್ಯಾಕೋ ಮಾತಾಡಂಗಿಲ್ಲ....' ಅಂದು ನಗುತ್ತ ಮುಂದ ಕ್ಕೊರಟಳು. ಅತ್ತಲಿಂದ ಕೊಡ ಹೊತ್ತು ಬಂದಾಕೆ ಮತ್ತೆ ನಿಂತು ಅಂಗಡಿಯತ್ತ ತಿರುಗಬೇಕು ಅಷ್ಟರಲ್ಲಿ ಕಮ್ಮಾರ.

'ಒಬ್ರು ಸುದ್ದ್ಯಾಕೆ.... ಒಬ್ರು ಗದ್ದ್ಯಾಕೆ...?' ಅಂದ. ಹಿಂದೆಯೇ ಅಕ್ಕಸಾಲಿಯೂ.

'ಹೂಂಕಣ್ಮಾವ 'ಒಬ್ರು ಸುದ್ದ್ಯಾsssಕೆ.... ಒಬ್ರು ಗದ್ದ್ಯಾsssಕೆ...?'

ಅಂದಾಗ ಕಲ್ಯಾಣಿ ಉಕ್ಕಿಬರುತ್ತಿದ್ದ ನಗುವನ್ನ ತಡೆದುಕೊಂಡು 'ಆಯ್ತು ಬಿಡ್ರಣ್ಣ......' ಎನ್ನುತ್ತ ಮುಂದಡಿಯಿಟ್ಟಳು. ಅವರ ಸ್ಥಿತಿ ನೋಡಿ ಅಯ್ಯೋ ಅಂತಲೂ ಅನ್ನಿಸುತ್ತಿತ್ತು. ತಿರುಗಿ ನೋಡದೆ ಆಕೆ ಹೊರಟರೂ 'ಒಬ್ರು ಸುದ್ದ್ಯಾssskೆ.... ಒಬ್ರು ಗದ್ಲ್ಯಾssskೆ...?' ಎಂದು ಮಂತ್ರದಂತೆ ಉಚ್ಚರಿಸುತ್ತಿದ್ದ ಅವರಿಬ್ಬರ ಈ ರಾಗ ಆಕೇನ ಹಿಂಬಾಲಿಸುತ್ತಲೇ ಇತ್ತು...


✦ ✦

ನೆಲಬಾನಿನ ಗೆಳೆತನ

ಪ್ರಿಯಳ ಮಗನ ಹುಟ್ಟುಹಬ್ಬ. ಆಕೆಯ ಸಹದ್ಯೋಗಿಗಳೂ ಸ್ನೇಹಿತರೂ ಆದ ಪ್ರಭಾ, ಸುಷ್ಮಾ ಇಬ್ರೂ ಮೊದಲೇ ಬಂದು ಅವಳಿಗೆ ನೆರವಾಗುತ್ತಿದ್ದರು.

'ಎಲ್ಲೇ ಪ್ರಿಯ ಆ ಪಾರ್ವತಿ ನಿನ್ನ ಪೆಟ್ ಫ್ರೆಂಡೂ...?' ವ್ಯಂಗ್ಯವಾಗಿ ಕೇಳಿದ್ಲು ಸುಷ್ಮಾ.

'ನಂಗೇನೂ ಫ್ರೆಂಡಲ್ವೆ ಶ್ರೀರಾಮ್ ಕಲೀಗಲ್ವಾ ಅವ್ಳು... ಮನೇನು ಇಲ್ಲೇ ಹತ್ರ ಬಂದು ಹೋಗಿ ಮಾಡ್ತಾಳಷ್ಟೆ....' ಪ್ರಿಯ ಹೇಳ್ದಾಗ



'ನೀನೇನು ಹೇಳಿದ್ರು ಅದನ್ನ ಕಂಡ್ರೆ ನನಗಾಗಲ್ಲವ್ವ, ಅದೊಂದು ಸ್ಪೆಸಿಮನ್ನೂ. ನೀಟಾಗೊಂದು ಡ್ರೆಸ್ ಮಾಡ್ಕೊಳ್ಳೋಕು ಬರಲ್ಲ ಅದ್ಕೆ.....'

'ಸುಮ್ನಿರೆ ಸಾಕು.....' ಅಂದ್ಲು ಪ್ರಭಾ ಸುಷ್ಮಾಳಿಗೆ. 'ಅಲ್ವೆ ಎದುರಿಗೆ ಸಿಕ್ರೆ ಬಿಟ್ಟೇ ಇರಲ್ಲಾ ಅನ್ನೊ ಹಾಗಾಡ್ತಿಯಾ.... ಏನೆಲ್ಲ ಕೆಲ್ಸ ಮಾಡಿಸ್ಕೋತಿಯಾ....' ರಾಗವಾಗಿ ಹೇಳಿ ಅವಳನ್ನ ಕೆಣಕಿದಳು.

ಸುಷ್ಮಾಳು ಬಿಡಲಿಲ್ಲ. 'ಕುತ್ಕೊಳ್ಳೆ ಸಾಕು ನೀನೇನ್ ಕಮ್ಮಿ. ಅದು ಪರಿಚಯ ಆಗಿ ಇನ್ನೂ ತಿಂಗ್ಳಾಗಿಲ್ಲ ಅದ್ನ ಕಾರ್ನಲ್ಲಿ ಓಡಾಡ್ಸಿ, ಯಾಮಾರ್ಸಿ ಅದ್ರ ಕೈಲಿ ಪೇಂಟಿಂಗ್ ಮಾಡಿಸ್ಕೊಳ್ಳಿಲ್ವಾ.....'

ಪ್ರಿಯಳಿಗಂತು ಇವರ ಮಾತು ಅಚ್ಚರಿ.

'ಮತ್ತೆ ನೀನೇನು ಮಾಡಿಸ್ಕೊಂಡೆ ಸುಷ್ಮಾ?' ಅಂತ ಕೇಳಿದ್ಲು.

'ಅದೇನೋ ಬರೆಯುತ್ತೆ ಕಣೆ ಒಂಚೂರು ತಲೆ ಐತೆ ನೋಡೋಕೆ ಗುಗ್ಗು ತರಹ ಇದ್ರೂ. ನಾಲ್ಕು ಸರ್ತಿ ಮನೆಗೆ ಕರ್ದು ಊಟಕ್ಕೆ ಹಾಕ್ದೆ ನೋಡು ಮೊನ್ನೆ ನಮ್ ಕ್ಲಬ್‌ನ ವಾರ್ಷಿಕೋತ್ಸವಕ್ಕೆ ಅಧ್ಯಕ್ಷರ ನುಡಿ, ಪ್ರಾಸ್ತಾವಿಕ ನುಡಿ, ಸ್ವಾಗತ, ವಂದನಾರ್ಪಣೆ ಎಲ್ಲಾ ಅದರ್ದೆ. ಕೇಳಿದ್ ತಕ್ಷಣ ಬರ್ದು ಕೊಡ್ತು....'

'ಹೌದೂ ಇಷ್ಟೆಲ್ಲ ಮಾಡಿಸ್ಕೊಂಡು ಅವ್ನ ಬಗ್ಗೆ ಎಷ್ಟು ಕೇವಲವಾಗಿ ಮಾತಾಡ್ತಿರಲ್ಲಾ....' ಪ್ರಿಯಳಿಗೆ ಅವರ ಮಾತು ವಿಚಿತ್ರ ಅನ್ನಿಸ್ತಿತ್ತು.

'ಹೂಂನೇ ಅದೊಂದ್ ತರಹ ವಿಚಿತ್ರವಾಗೈತವ.. ಒಂದೊಂದ್ಸಾರಿ ಮಾತಾಡುತ್ತೆ. ಒಂದೊಂದ್ಸಾರಿ ಮಾತೇ ಬರಲ್ಲ ಅನ್ನಂಗಾಡುತ್ತೆ. ಏನೋ ನಾನು ಎಲ್ಲರಿಗಿಂತ ಭಿನ್ನ ಅಂತ ತೋರಿಸ್ಕೊಳುತ್ತೆ.....' ಪ್ರಭಾ ತಮ್ಮ ನಡತೆಯನ್ನು ಸಮರ್ಥಿಸಿಕೊಂಡ್ಲು.

'ಮತ್ಯಾಕೆ ಮಾತಾಡಿಸ್ತೀರಿ....?' ಪ್ರಿಯಳ ಪಟ್ಟು ಬಿಡದ ಪ್ರಶ್ನೆ. 'ಹೀಗೇ ಯಾವಾಗ್ಲಾದ್ರೂ ಕೆಲ್ಸಕ್ಕೆ ಬರುತ್ತೇಂತ. ಅದನ್ನ ಪೂರ್ತಿ ಇಟ್ಕೊಂಡೂ ಇಲ್ಲ ಬಿಟ್ಟೂ ಇಲ್ಲ. ಹಾಗೆ ಒಂದು ಡಿಸ್ಟೆನ್ಸ್‌ನಲ್ಲಿ ಇದೆ.....' ಸುಷ್ಮಾ ಹೇಳ್ದಾಗ ಪ್ರಭಾ ಕಣ್ಣು ಮಿಟುಕಿಸಿದಳು.

ಇವರೆಲ್ಲ ಹೀಗೆ ಮಾತಾಡುತ್ತಿರುವಾಗಲೇ ಎಲ್ಲರೂ ಬಂದರು.

ಗುಂಪಿನಲ್ಲಿ ಸುಧಾಕರನ ದನಿ ಕೇಳಿದ್ದೆ ಪ್ರಭಾ ಬೆಚ್ಚಗಾಗಿ 'ಸುಷ್ಮಾ ಬಂದ....' ಅಂತ ಪಿಸುಗುಟ್ಟಿದ್ಲು.

ಶ್ರೀರಾಮನ ಸಹೋದ್ಯೋಗಿ ಸುಧಾಕರ. ಸಾಹಿತ್ಯ ಕ್ಷೇತ್ರದಲ್ಲಿ ಅವನ ಹೆಸರು ಇತ್ತೀಚೆಗೆ ತುಂಬಾ ಜನಪ್ರಿಯ. ಬ್ಯಾಂಕ್‌ನ ಉದ್ಯೋಗಿಗೆ ಕವನ ಬರೆಯುವ ಹವ್ಯಾಸ. ತನ್ನ ಕವನಗಳ ಮೂಲಕ ಚಿರಪರಿಚಿತ ಸಾಹಿತ್ಯಾಸಕ್ತರಿಗೆ. ಅಷ್ಟೇ ಆಕರ್ಷಕ ವ್ಯಕ್ತಿತ್ವ, ಮಾತಾಡಿದರಂತೂ ಉಕ್ಕುವ ನಗೆಬುಗ್ಗೆ ಎಂತಹವರನ್ನೂ ಅವನತ್ತ ಆಕರ್ಷಿಸುತ್ತಿತ್ತು.

ಪ್ರಿಯ ಅವನನ್ನು ತನ್ನ ಸ್ನೇಹಿತೆಯರಿಗೆ ವಾರದ ಹಿಂದೆಯಷ್ಟೇ ಪರಿಚಯಿಸಿದ್ಲು. ಮೊದಲ ನೋಟಕ್ಕೆ ಪರಸ್ಪರ ಆಕರ್ಷಿತರಾಗಿದ್ದರು ಪ್ರಭಾ, ಸುಧಾಕರ. ಪ್ರಭಾಳದು ತುಂಬಾ ಮೋಹಕ ವ್ಯಕ್ತಿತ್ವ, ಚಿಗರೆಯ ಹಾಗಿದ್ದವಳು. ಅವರಿಬ್ಬರ ನೋಟದಲ್ಲಿನ ಮಿಂಚು,

ಮಾದಕತೆ ಸುಷ್ಮಾ ಗುರುತಿಸಿದ್ದಳು. ಅವರಿಬ್ಬರಿಗೆ ಸಾಹಿತ್ಯದ ಗಂಧವೇ ತಿಳಿಯದಿದ್ದರೂ ಸುಧಾಕರನಿಗಾಗಿ ಒಲವು ಬೆಳೆಸಿಕೊಳ್ಳುವ ಹವಣಿಕೆಯಲ್ಲಿದ್ದರು.

ಪ್ರಿಯ ತುಂಬಾ ಮುಗ್ಧೆ. ಆಕೆಗಿದೊಂದು ತಿಳಿಯುತ್ತಿರಲಿಲ್ಲ. ಆಕೆಗೆ ಎಲ್ಲವೂ ತಮಾಷೆ. ಎಲ್ಲರೂ ಸ್ನೇಹಿತರೆ. ಹಾಗಾಗಿ ಪಾರ್ವತಿಯೊಡನೆಯು ಅಷ್ಟೇ ಆತ್ಮೀಯತೆಯಿಂದ ಇದ್ದಳು. ಅವಳಿಗೆಂದೂ ಪಾರ್ವತಿ ವಿಚಿತ್ರ ಎನಿಸಿರಲೇ ಇಲ್ಲ. ಆಕೆಯಾದರೂ ಈ ಊರಿಗೆ ಬಂದು ಆರು ತಿಂಗಳಷ್ಟೆ. ತಂದೆ ಮಾತ್ರ ಇದ್ದದ್ದು. ಮಾತು ಕಮ್ಮಿಯೇ. ತಾನಾಗಿ ಯಾರನ್ನೂ ಮಾತಾಡಿಸುವವಳಲ್ಲ. ಮಾತನಾಡಿದರೆ ಚೆನ್ನಾಗಿಯೇ ಮಾತಾಡುತ್ತಿದ್ದಳು.

ಎಲ್ಲರೂ ಊಟಕ್ಕೆ ಒಟ್ಟಿಗೆ ಕೂತರು. ಪ್ರಭಾ ಸುಧಾಕರನ ಎದುರೇ. ಊಟ ರಂಗೇರಿತ್ತು. ಶ್ರೀರಾಮ್.

'ಎಲ್ಲಿ ಪಾರ್ವತಿಯವ್ರು ಬರ್ಲೇ ಇಲ್ಲ....' ಅಂತ ವಿಚಾರಿಸಿದ.

'ಹೌದು ಕಾಣ್ತ ಇಲ್ವಲ್ಲಾ....' ಅಂತ ಸುಧಾಕರನೆಂದೊಡನೆ ಎದುರು ಕೂತಿದ್ದ ಇಬ್ಬರಿಗೂ ಒಮ್ಮೆಗೇ ನೆತ್ತಿಗೇರಿತು. ಅಷ್ಟೊತ್ತಿಗೆ ಪಾರ್ವತಿ ಬಂದೇಬಿಟ್ಟಳು.

'ಬಂತ್ನೋಡು ಮುಂಡೇದು. ಅದ್ಸರಿ ಇವ್ನ್ಯಾಕೆ ಅದರ್ಬಗ್ಗೆ ವಿಚಾರಿಸ್ತಿದಾನೆ....?'

ಸುಷ್ಮಾ ಪಿಸಿಪಿಸಿ ಎಂದಾಗ ಶ್ರೀರಾಮ್ ತಮ್ಮನ್ನೆ ಗಮನಿಸುತ್ತಿರುವುದನ್ನು ಅರಿತು.

'ಸುಮ್ನಿರು ಆಮೇಲೆ ಮಾತಾಡೋಣ.....' ಅಂದು ತುಟಿಯಿಗ್ಗಿಸಿ ಪಾರ್ವತಿಯನ್ನು ತನ್ನ ಪಕ್ಕಕ್ಕೆ ಕರೆದು ಕೂರಿಸಿಕೊಂಡಳು ಪ್ರಭಾ.

'ಯಾಕೆ ಲೇಟೂ....?' ಶ್ರೀರಾಮ್ ಸುಧಾಕರ ಒಟ್ಟಿಗೆ ಕೇಳಿದ್ರು.

'ಅಪ್ಪಂಗೆ ಮೈಲಿ ಹುಷಾರಿರ್ಲಿಲ್ಲ ಹಾಗಾಗಿ ತಡವಾಯ್ತು....' ಪಾರ್ವತಿ ಹೇಳ್ದಾಗ.

'ಸದ್ಯ ಈಗ್ಲಾದ್ರು ಬಂದ್ರಲ್ಲ ಇವರಿಬ್ರು ನಿಮ್ಮನ್ನ ನೆನಸ್ಕೊಂಡು ನೆತ್ತಿಗೇರಿಸಿಕೊಳ್ಳುತ್ತಿದ್ರು....'

ಸುಧಾಕರ ಹೇಳ್ದಾಗ ಪ್ರಭಾ, ಸುಷ್ಮಾ ಹೊರತು ಎಲ್ಲಾ ನಕ್ಕರು. ಊಟ ಮುಗಿಸಿ ಎಲ್ಲರೂ ಎಲೆ ಅಡಿಕೆ ಅಗಿಯುತ್ತ ಕೂತಾಗ ಶ್ರೀರಾಮ್ ಎದ್ದು ನಿಂತು.

'ಒಂದು ಅನೌನ್ಸ್‌ಮೆಂಟ್...' ಅಂದ.

'ನಾಳೆ ಸಂಜೆ 6 ಗಂಟೆಗೆ ಟೌನ್‌ಹಾಲಲ್ಲಿ ಸುಧಾಕರನ ಹೊಸ ಕವನ ಸಂಕಲನ ಬಿಡುಗಡೆ ಇದೆ. ಸಣ್ಣ ಸಮಾರಂಭ ದಯಮಾಡಿ ಆಸಕ್ತರೆಲ್ಲ ಬನ್ನಿ.....'

ಅವನು ಮಾತು ನಿಲ್ಲಿಸಿದ್ದೆ ತಡ ಸುಷ್ಮಾ ಎದ್ದು ನಿಂತು.

'ಹಾರ್ಟಿ ಕಂಗ್ರಾಟ್ಸ್ ಮಿ.ಸುಧಾಕರ್....!' ಎಂದು ಸಂತೋಷ ತಾಳಲಾರದೆ ಸುಧಾಕರನ ಕೈಯನ್ನ ಗಟ್ಟಿಯಾಗಿ ಅದುಮಿ ಹಿಡಿದು.

'ಆ ಕುವೆಂಪು ಗಿವೆಂಪು ಅವ್ನೆಲ್ಲ ನಿಮ್ಮುಂದೆ ನೀವಾಳ್ಸಿ ಎಸೀಬೇಕು ಹಾಗ್ ಬೆಳೀರಿ....' ಅಂದುಬಿಟ್ಟಳು. ಸುಧಾಕರ ಅವಳ ಕೈ ಕೊಡವಿ ಪೆಚ್ಚಾಗಿ ನಿಂತ.

ಶ್ರೀರಾಮ್ 'ಕುವೆಂಪು ಬಗ್ಗೆ ಹಾಗೆಲ್ಲ ಮಾತಾಡ್ಬೇಡಿ. ಸುಧಾಕರ್ ಎತ್ತರ ಬೆಳೆದಷ್ಟು ನಮ್ಗೆಲ್ಲ ಸಂತೋಷನೆ....' ಅಂದ. ಸುಷ್ಮಾ ಬಿಡಲಿಲ್ಲ.

'ಯಾಕ್ ಮತಾಡ್ಬಾರ್ದು? ನಾನೇನ್ ತಪ್ಪು ಹೇಳಿಲ್ಲ....' ವಾದಿಸಿದಳು.

'ಖಂಡಿತ ತಪ್ಪು ಸುಷ್ಮಾ...' ಪಾರ್ವತಿ ಖಾರವಾಗಿ ಹೇಳಿದಳು. 'ತಪ್ಪು ಖಂಡಿತ ತಪ್ಪು. ಕುವೆಂಪು ಅಂದ್ರೆ ಹುಡುಗಾಟ ಅಲ್ಲ. ಅವರೊಂದು ಮಹಾನ್ ಚೇತನ. ಅಂಥವರ ಬಗ್ಗೆ ಕೇವಲವಾಗಿ ಮಾತಾಡಿ ನೀವು ಸುಧಾಕರನ್ನೂ ಅವಮಾನ ಮಾಡ್ತ ಇದ್ದೀರ...'

ಸುಷ್ಮ ಹಲ್ಲು ಕಡಿಯುತ್ತ ಅವಳತ್ತ ತಿರುಗಿದಾಗ ಸುಧಾಕರ್.

'ಇನ್ನೇನು ಮಾತಾಡ್ಬೇಡಿ. ನಿಮ್ಗೆ ಕಾವ್ಯ, ಕವಿ ಬಗ್ಗೆ ಏನೇನು ಗೊತ್ತಿಲ್ಲ. ಕೈ ಮುಗಿತೀನಿ ಇನ್ನೆಂದೂ ಕುವೆಂಪು ಬಗ್ಗೆಯಾಗ್ಲಿ, ಯಾರ್ದೆ ವಿಷ್ಯವಾಗ್ಲಿ ಹೀಗೆ ಹಗುರವಾಗಿ ಮಾತಾಡ್ಬೇಡಿ...' ಎಂದೇಳಿ ಅಲ್ಲಿಂದ ಹೊರಟುಬಿಟ್ಟ.

'ಏನೇನೋ ಮಾತಾಡ್ತಿ ಕಣೇ ಒಂದೊಂದ್ಸಾರಿ ನೀನಂತು. ....' ಪ್ರಭಾ ರೇಗಿದಾಗ ಅದನ್ನ ಕಿವಿ ಮೇಲೆ ಹಾಕ್ಕೊಳ್ದೆ.

'ನೋಡು ಆ ದರಿದ್ರದ್ದು ಅವ್ನೆದುರ್ಗೆ ಎಷ್ಟು ಸ್ಕೋಪ್ ತಗೋಳುತ್ತೆ.... ಸುಷ್ಮಾ ನೋಡೋಕೆ ಗುಗ್ಗು ತರಹ ಇದ್ರೂ ಭಾಳ ಚಾಲೂ ಇದೆ ಕಣೇ. ಇನ್ನೊಂದೆರಡು ಸರ್ತಿ ಇದೆನಾದ್ರು ಹೀಗೆ ಸುಧಾಕರನೆದುರು ಮಾತಾಡಿದ್ರೆ ಖಂಡಿತ ಅವ್ನು ಇಂಪ್ರೆಸ್ ಆಗೇ ಆಗ್ತಾನೆ..

ನೋಡು ನಿಂಗಿದೊಳ್ಳೆ ಅವಕಾಶ. ನನ್ನ ಪರವಾಗಿ ಕ್ಷಮೆ ಕೇಳೋ ಹಾಗೆ ಹೋಗಿ ಅವ್ನಿಗೆ ಮತ್ತಷ್ಟು ಹತ್ತಿರದವಳಾಗು. ಆ ಮುಂಡೇದನ್ನ ಅತ್ತಿತ್ತ ಸುಳಿಯಕೂ ಬಿಡ್ಬಾರ್ದು ನೋಡು....' ಸುಷ್ಮಾ ಕುದೀತಲೇ ಹೇಳಿದಾಗ ಪ್ರಭಾ ಅವಳ ಐಡಿಯಾಕೆ ಮೆಚ್ಚುಗೆ ಸೂಸಲು ಬಗ್ಗಿ ಅವಳ ಕೆನ್ನೆ ಮೇಲೆ ಮುತ್ತಿಟ್ಟು ಸುಧಾಕರನ್ನ ಅರಸುತ್ತ ಹೊರಟಳು.

ಸುಧಾಕರ ಪ್ರಭಾಳನ್ನ ನೋಡಿಯೆ ಎಲ್ಲಾ ಮರೆತ. ಪ್ರಭಾಳೆ ಮಾತಾಡುತ್ತಿದ್ದಳು. ಸುಧಾಕರ ಮೌನವಾಗಿ ಕೂತು ಅವಳನ್ನ ನೋಡುತ್ತಿದ್ದ. ಮೌನ ನೆಪಕ್ಕೆ ಅವನ ಕಣ್ಣುಗಳೇ ಮಾತಾಡುತ್ತಿದ್ದವು. ಜೀವರಸ ಭೋರ್ಗರೆವ ಜಲಪಾತದಂತಿದ್ದವು. ಅವುಗಳಲ್ಲಿ ಎಂತಹ ಮೋಡಿ! ಅರೆಕ್ಷಣ ದಿಟ್ಟಿಸಿದರೂ ಸಾಕು ಅವು ಮಾತಿಗೇ ತೊಡಗಿ, ಎದೆಯಾಳವನ್ನು ಬಗೆದು ಎದುರಾಳಿಯನ್ನು ಬತ್ತಲೆಗೊಳಿಸುವಂತಹ ತೀಕ್ಷ್ಣತೆ. ತುಟಿ ಬಿಗಿದು ಕೂತಿದ್ದರೂ ಅವ ಮಾತಾಡುತ್ತಿರುವಂತೆ, ಏನೋ ಹೇಳುತ್ತಿರುವಂತೆ ಅನಿಸುತ್ತಿತ್ತು. ಅವನ ಮಾತಿಗಿಂತ ಮೌನವೇ ಹೆಚ್ಚು ಅರ್ಥಪೂರ್ಣವಾಗಿತ್ತು.

ಪ್ರಭಾಳೂ ತನ್ನ ಭಾವನೆಗಳನ್ನು ಸುಲಭಕ್ಕೆ ತೋರ್ಪಡಿಸುವವಳಲ್ಲ. ಆದರಿಲ್ಲಿ ಸುಧಾಕರನೆದುರು ಸೋತು ಹೋಗಿದ್ದಳು. ಯಾವತ್ತೂ ಸೋಲುವುದಕ್ಕಿಂತ ಸೋಲಿಸುವುದನ್ನು ಇಷ್ಟಪಡುವ ಪ್ರಭಾಳಿಗೆ ತನ್ನ ಸೋಲನ್ನು ಒಪ್ಪಿಕೊಳ್ಳಲು ಅಹಂ ಅಡ್ಡ ಬರುತ್ತಿತ್ತು. ಅದು ಅವಳಲ್ಲಿ ಸುಧಾಕರನಂತಹ ಜನಪ್ರಿಯ ವ್ಯಕ್ತಿ ತನಗೆ ಸೋತಿದ್ದಾನೆ ಎಂಬ ಜಂಭವನ್ನು, ಪ್ರತಿಷ್ಠೆಯನ್ನು ಹುಟ್ಟು ಹಾಕುತ್ತಿತ್ತು. ಸುಧಾಕರ ತನ್ನನ್ನೆ ಕನವರಿಸಬೇಕು, ತನಗಾಗಿ ಹುಚ್ಚನಾಗಬೇಕು. ಹಾಗೆ ತನ್ನತ್ತ ಅವನನ್ನು ಆಕರ್ಷಿಸುವತ್ತಲೇ ಅವಳ ಗಮನವೆಲ್ಲ. ನಡುವೆ ಬರಲು ಯಾರಿಂದಲೂ ಸಾಧ್ಯವಿಲ್ಲ ಎಂಬ ಆತ್ಮವಿಶ್ವಾಸ ಇದ್ದಾಗ್ಯೂ ಪಾರ್ವತಿ ಎಲ್ಲಿಂದಲೋ ನುಸುಳುತ್ತ ಅವಳಿಗೆದುರಾಗಿ ಕಿರಿಕಿರಿಯುಂಟು ಮಾಡುತ್ತಿದ್ದಳು.

ಅದ್ಯಾಕೋ ಪಾರ್ವತಿ ಸುಧಾಕರನ್ನ ಮಾತಾಡಿಸುವುದು, ಅವನತ್ತ ನೋಡುವುದನ್ನೂ

ಇವಳಿಗೆ ಸಹಿಸಲಾಗುತ್ತಿರಲಿಲ್ಲ. ಸುಧಾಕರನ ಅಭಿಮಾನಿ. ಬಹುಶಃ ಸುಧಾಕರನಿಗೂ ಪಾರ್ವತಿ ಪ್ರಿಯಳಿಂದ ಪರಿಚಯವಿರಬೇಕು ಎಂದುಕೊಂಡಿದ್ದಳು.

ಪ್ರಿಯಳ ಮೇಲೇ ಒಮ್ಮೊಮ್ಮೆ ಸಿಟ್ಟು ಬರುತ್ತಲಿತ್ತು. ಬರೀ ಪರಿಚಯ, ಅಭಿಮಾನ ಎಂದಷ್ಟೇ ಹೇಳಿಕೊಂಡರು ಅದು ಮನಸ್ಸಿಗೆ ನಾಟದೆ, ನೆಮ್ಮದಿ ಕೊಡದೆ ಹೋಗುತ್ತಿತ್ತು. ಮಗದೊಮ್ಮೆ ಪಾರ್ವತಿಗೆ ತನ್ನೊಡನೆ ಸ್ಪರ್ಧಿಸುವ, ತನ್ನ ಸಮಕ್ಕೆ ಬರುವ ಅರ್ಹತೆಯೇ ಇಲ್ಲ, ಅವಳೊಡನೆ ಪೈಪೋಟಿಯೇ ಹಾಸ್ಯಾಸ್ಪದ ಎನಿಸಿ ನಿರಾಳವೂ ಆಗುತ್ತಿತ್ತು. ಆದರದು ಕ್ಷಣಿಕ. ಜತೆಗೆ ತನ್ನ ಹೊಯ್ದಾಟ, ತುಯ್ದಾಟಗಳನ್ನು ಹೊರಗೆಡವದಂತೆ ಹಿಡಿದಿಟ್ಟು ಕೊಳ್ಳುವ, ಅದುಮಿಡುವ ಹವಣಿಕೆ ಬೇರೆ.

ಪ್ರಭಾ ಹತಾಶೆಗೊಂಡಿದ್ದಳು. ಹಾಗಾಗಿಯೇ ಪಾರ್ವತಿಯ ನೆರಳನ್ನೂ ದ್ವೇಷಿಸುವ ಅವಳು ಆಕೆಯನ್ನು ಉಪೇಕ್ಷಿಸಿ ದೂರ ಮಾಡಿಕೊಂಡರೆ ತಪ್ಪಾದೀತು ಅಂತ ಆಕೆಗೆ ಹತ್ತಿರವಾದವಳಾಗಿಯೇ ಅವಳನ್ನ ನಿವಾರಿಸಿಕೊಳ್ಳುವ ಸಂಚು ಮಾಡುತ್ತಿದ್ದಳು. ಆದ್ದರಿಂದಲೇ ಅವಳು, ಸುಷ್ಮಾ ಇಬ್ಬರೂ ಆತ್ಮೀಯರಂತೆ, ಸ್ನೇಹಿತರಂತೆ ಸೋಗು ಹಾಕುತ್ತಿದ್ದರು ಅವಳೆದುರು.

ಅದುವರೆಗು ಎಲ್ಲಾ ಮುಸುಕಿನಲ್ಲಿ ನಡೆಯುತ್ತಿತ್ತು. ಆದರೆ ಸ್ಫೋಟಗೊಂಡದ್ದು ಸುಧಾಕರ ತನ್ನ ಪುಸ್ತಕ ಬಿಡುಗಡೆಯಾಗಿದ್ದಕ್ಕೆ ಕನಿಷ್ಕಾದಲ್ಲಿ ಪಾರ್ಟಿ ಕೊಟ್ಟಾಗ, ಅಂದು ಪಾರ್ವತಿ ಇವರಿಂದ ದೂರವೇ ಉಳಿದಿದ್ದಳು. ಇವರೂ ಅದನ್ನ ಲಕ್ಷ್ಯಕ್ಕೇ ತೆಗೆದು ಕೊಳ್ಳಲಿಲ್ಲ. ಆದರೆ ಅವಳೊಡನೆ ಗ್ಲಾಸ್ಹಿಡಿದು ಸುಧಾಕರ ಕೂತಾಗ ತಡೆಯಲಾಗಲಿಲ್ಲ. ಇವರೇ ಎಲ್ಲಾ ಅತ್ತ ಹೋದರು. ಸುಷ್ಮಾಳಿಗೆ ಕುವೆಂಪು ಘಟನೆ ಇನ್ನೂ ಕುಟುಕುತ್ತಿತ್ತು. ಬೇಕೆಂದೇ ಕಟುಕಿದಳು

'ಅದ್ಯಾಕ್ರಿ ನೀವು ಜನರೊಡನೆ ಬೆರಿಯೋದೆ ಇಲ್ಲ. ಒಳ್ಳೆ ಒಂಟಿ ಪಿಶಾಚಿ ತರಹ ಒಬ್ಬೊಬ್ರೆ ಕೂತಿರ್ತಿರಾ ಎಲ್ಲೆಲ್ಲೊ.....'

ಸುಧಾಕರನಿಗೆ ಇದು ವಿಲಕ್ಷಣ ಎನಿಸಿತು. ಆದರೆ ಪಾರ್ವತಿ ಶಾಂತವಾಗೇ ಉತ್ತರಿಸಿದಳು. 'ನಂಗೆ ಏಕಾಂತ ತುಂಬಾ ಇಷ್ಟರೀ....'

'ಅದರಲ್ಲೇನು ಅರ್ಥ ಇದೆ? ಏನು ಸುಖ ಇದೆ? ನಾಲ್ಕು ಜನರೊಡನೆ ಬೆರೆತು ಇರೋದೆ ಜೀವನ. ಆಗಲೇ ಅದು ಸಾರ್ಥಕ....' ಬಿಡಲಿಲ್ಲ ಸುಷ್ಮಾ.

'ಇರ್ಬಹ್ದು. ಇದು ನಿಮ್ಮ ಅಭಿಪ್ರಾಯ. ಜೀವನದ ಸಾರ್ಥಕತೆ ನಾನು ಕಂಡ್ಕೊಳ್ಳೋ ರೀತಿಯೇ ಬೇರೆ. ಒಂದೇ ಆಗೋಕೆ ಸಾಧ್ಯ ಇಲ್ಲ.....'

'ಸರೀನೆ ಆದ್ರೂ ಎಲ್ಲರೂ ಬಯಸೋದು ಪರಸ್ಪರ ಸ್ನೇಹ, ಪ್ರೀತಿ, ವಿಶ್ವಾಸವನ್ನ.....' ಸುಷ್ಮಾ ವಾದಕ್ಕೆ ನಿಂತಳು.

'ಇರ್ಲಿಬಿಡಿ ಅದೆಲ್ಲ ಅಷ್ಟೊಂದು ಸುಲಭ ಇಲ್ಲ....' ಪಾರ್ವತಿ ಮಾತು ಮುಗಿಸಲು ನೋಡಿದಳು. ಆದರೆ ಸುಷ್ಮಾ ಪಟ್ಟುಹಿಡಿದು ಕೂತಿದ್ದಳು.

'ಯಾಕೆ.....? ಯಾಕ್ ಸುಲಭ ಅಲ್ಲ....? ನಮ್ಮ ಮನಸ್ಸು ಸರಿ ಇದ್ರೆ, ಮನದಲ್ಲಿ ಪ್ರೀತಿ ಇದ್ರೆ ಎಲ್ಲಾ ಸಾಧ್ಯ......?'

ಪಾರ್ವತಿ ನಕ್ಕಳು 'ನಿಜವಾದ ಪ್ರೀತಿ ಅತ್ಯಂತ ದುಬಾರೀರಿ....'

'ಇರಬಹುದೇನೋ ತುಂಬಾ ಲೆಕ್ಕಾಚಾರದವರಿಗೆ ......'

ಸುಷ್ಮಾ ಕಹಿಯಾಗೇ ಮಾತಾಡುತ್ತಿದ್ದಳು.

'ಊಹೂಂ ಎಲ್ಲರಿಗೂ, ಯಾಕೆ ಗೊತ್ತಾ..... ಪ್ರೀತಿ ಅಂದ್ರೆ ಏನ್ಹೇಳಿ.....?'

'ನೀವೇ ಹೇಳ್ಬಿಡ್ರಿ......' ಪ್ರಭಾ ಮಧ್ಯದಲ್ಲಿ ವ್ಯಂಗವಾಗಿ ಹೇಳಿದಳು.

'ಗಿವ್ ಅಂಡ್ ಟೇಕ್ ಅಲ್ವಾ.....?' ಕೇಳಿದಳು ಪಾರ್ವತಿ.

'ಹೌದ್ಮತ್ತೆ ಪ್ರೀತಿಯಲ್ಲಿ ಕೊಟ್ಟು ತಗೋಳೋದು ಇಲ್ಲಾಂದ್ರೆ ಅರ್ಥನೇ ಇಲ್ಲ......'

ಸುಷ್ಮಾ ಇದೇನ್ ಮಹಾ ಅನ್ನುವಂತೆ ಹೇಳ್ದಾಗ

'ಮತ್ತೇನು ಅದು ಲೇವಾದೇವಿ ಆಗ್ಲಿಲ್ವಾ....?' ಪಾರ್ವತಿ ಕೇಳಿದಳು.

'ವಾಟ್ ಡು ಯೂ ಮೀನ್...!' ಸುಷ್ಮಾ ಕೆಟ್ಟದಾಗಿ ಕಿರುಚಿಯೇ ಬಿಟ್ಲು.

'ಐ ಮೀನ್ ಕೊಟ್ಟಿದ್ದನ್ನ ತಗೊಳ್ಳೇಬೇಕು. ತಗೊಂಡಿದ್ದನ್ನ ಕೊಡ್ಲೇಬೇಕು. ಕೊಟ್ಟಿದ್ದನ್ನ ತಗೊಳ್ಳಿಕ್ಕಾಗ್ದಿದ್ರೆ, ತಗೊಂಡಿದ್ದನ್ನ ಕೊಡ್ಲಿಕ್ಕಾಗ್ದಿದ್ರೆ ಅದಕ್ಕೆ ಬೆಲೇನೇ ಇಲ್ವಲ್ಲಾ.....'

ಪಾರ್ವತಿ ಹೇಳಿದಾಗ ಸುಧಾಕರ ಜೋರಾಗಿ ಚಪ್ಪಾಳೆ ತಟ್ಟಿ, ನಗುತ್ತ ಪಾರ್ವತಿ ಕೈಕುಲುಕಿ ಮೆಚ್ಚುಗೆ ಸೂಚಿಸಿದ. ಪ್ರಭಾ ಸರಕ್ಕನೆದ್ದು ನಿಂತು ಅವನತ್ತ ಕಿಡಿನೋಟ ಎಸೆದು 'ನಾವಿನ್ನು ಬರ್ತೀವಿ....' ಅಂತ ಹೊರಟೇಬಿಟ್ಟಳು. ಪಾರ್ವತಿ ಮನಸಲ್ಲೇ ನಗುತ್ತಲಿದ್ದಳು.

ಮನೆಗೆ ವಾಪಸ್ಸು ಬಂದ ಪ್ರಭಾಳಲ್ಲಿ ಒಂದೇ ತಳಮಳ ಚಡಪಡಿಕೆ, ಒಡಲೆಲ್ಲಾ ಬೆಂಕಿ. ಪಾರ್ವತಿಯೇ ಆ ಬೆಂಕಿ, ಅವಳು ಸ್ನೇಹಿತೆಯೋ ಶತ್ರುವೋ ಪ್ರತಿಸ್ಪರ್ಧಿಯೋ ನಿರ್ಧರಿಸದಾದಳು. ಹತ್ತಿರವಿದ್ದಾಗಲೂ ಕಿರಿಕಿರಿ, ದೂರ ಹೋದರು ಕಿರಿಕಿರಿ, ಅವಳದೂ ಅತಿರೇಕವೆ. ಇದ್ದರೆ ತೊಲಗಿದರೆ ಸಾಕಪ್ಪ ಎನಿಸುವಷ್ಟು ಹತ್ತಿರ. ಹೋದರೆ ಎಲ್ಲಿದ್ದಾಳೆಂದು ಹುಡುಕುವಷ್ಟು ದೂರ.

ಪ್ರಭಾಗಿದು ಸಹ್ಯವಲ್ಲ. ಅವಳಿಗೆ ಬೇಕಾದಾಗ ಸಿಗುವಂತೆ, ಬೇಡಾದಾಗ ಕಾಣದಂತೆ ಇರಬೇಕವಳು. ತಾನು ಬಯಸಿದ್ದು, ಚೆನ್ನಾಗಿರುವುದು ಎಲ್ಲಾ ತಾನೇ ಅನುಭವಿಸಬೇಕು. ತನ್ನ ಬಳಿ ಇಲ್ಲದಿರುವುದು ಯಾರಲ್ಲಿಯೂ ಇರಕೂಡದು. ಇದ್ದರದು ತನ್ನ ವಶವಾಗುವ ವರೆಗೆ ಬಿಡುವವಳಲ್ಲ. ಬೇಕೆನಿಸಿದ್ದನ್ನು ಗಬಕ್ಕನೆ ಹಿಡಿದು ಮುಷ್ಠಿಯಲ್ಲಿಟ್ಟು ಕೊಳ್ಳುವ ಹಾಗೆ ಬೇಡೆನಿಸಿದ ಕ್ಷಣ ಯಾವ ಮುಲಾಜಿಲ್ಲದ ಅದನ್ನ ಎತ್ತಿ ಒಗೆಯಬಲ್ಲ ಗಟ್ಟಿಗಳು. ಅವಳೆದುರು ಯಾರ ಸ್ನೇಹ, ಸಂಬಂಧ ಎಷ್ಟೇ ಗಾಢವಾಗಿದ್ದರೆ ತಡೆಯವು. ಆದರೆ ಈ ಪಾರ್ವತಿ ಎಲ್ಲವನ್ನೂ ಸುಳ್ಳು ಮಾಡುವ ಹಂತದಲ್ಲಿದ್ದಳು. ಆಕೆಯೆಷ್ಟೇ ಪ್ರಯತ್ನಿಸಿದರೂ ಅವಳ ಹಿಡಿತಕ್ಕೆ ಸಿಕ್ಕದೆ ಉಸುಕಿನಂತೆ ಜಾರಿ ಹೋಗುತ್ತಿದ್ದಳು.

ತನ್ನೊಡನೆ ಸುಧಾಕರನ್ನ ಎಳೆದೊಯ್ದರೆ...? ಯೋಚನೆ ಮಾತ್ರದಿಂದಲೇ ಕಂಪಿಸಿದಳು ಪ್ರಭಾ. ಸುಧಾಕರನ್ನ ನೇರವಾಗಿ ಪಾರ್ವತಿ ಬಗ್ಗೆ ಕೇಳಲು ಸಂಕೋಚ; ತನ್ನ ಬಗ್ಗೆ ಅವ ತಪ್ಪು ತಿಳಿದರೆ ಎಂಬ ಭಯ. ಏನೇ ಆಗಲಿ ಅವನು ಅವಳತ್ತ ಕಣ್ಣಾಯಿಸದ ಹಾಗೆ ತನ್ನ ಹಿಡಿತಕ್ಕೆ ಸಿಕ್ಕಲು ಏನು ಮಾಡುವುದು? ಯಾವ ರೀತಿ ಅವನನ್ನು ವಶಪಡಿಸಿಕೊಳ್ಳುವುದು? ಎಂದು ಯೋಚಿಸಿಯೇ ಯೋಚಿಸಿದಳು. ಅವಳಿಗೀಗ ಅದು

ಪ್ರತಿಷ್ಠೆಯೂ ಆಗಿತ್ತು. ಬಹಳಷ್ಟು ತಿಕ್ಕಾಟ, ತರ್ಕಗಳ ನಂತರ ಏನೇ ಆಗಲಿ ಅವನನ್ನ ಪಡೆದೆ ತೀರುವ ತೀರ್ಮಾನ ಮಾಡಿ ಒಂದು ನಿರ್ಧಾರಕ್ಕೆ ಬಂದಾಗ ಮನಸ್ಸು ಸ್ಥಿಮಿತಕ್ಕೆ ಬಂದು ಗೆಲುವಾದಳು.

ಆ ವರುಷದ ಕೊನೆಯ ರಾತ್ರಿ, ಸುಧಾಕರ ಪ್ರಭಾಳ ಬಾಳಲ್ಲಿ ಪ್ರವೇಶಿಸಿದ ಮೂವತ್ತನೆಯ ದಿನ. ಇದುವರೆಗಿನ ಹೊಯ್ದಾಟಕ್ಕೆ ತೆರೆ ಎಳೆಯಲು ಅಂದೇ ಮುಹೂರ್ತವಿಟ್ಟಳು ಔತಣವೇರ್ಪಡಿಸಿ. ಸುಧಾಕರ ಪ್ರಭಾಳ ಮನೆ ಮೊದಲ ಬಾರಿಗೆ ಪ್ರವೇಶಿಸಿದ. ನವಿರಾಗಿತ್ತು ಇಡೀ ವಾತಾವರಣ. ಇಬ್ಬರ ನೋಟ, ನಗುವಿನಲ್ಲೂ ಮಿಂಚು, ಕಾವು! ಮೋಹ ಮದ್ಯಗಳೆರಡೂ ಪರವಶಗೊಳಿಸಿ ಅವರನ್ನ ಬೆಸದಿದ್ದವು. ಪಕ್ಕದಲ್ಲಿಯೇ ರೇಡಿಯೋ,

'ಕಾಮ ಕಂಪಾಗಿ ಬರಲೂ ಕಾಯ ಕೆಂಪೇರುತೇರುತಿರಲೂ
ಉಬ್ಬುಡುಗಿ ನಿರಿಗೆ ಸಡಿಲಗೊಂಡವೂ ದೇವ ರಸದೋಕುಳಿ ರಂಗೇರಿ....
ರಾಸಾಟ ರಸದೂಟ ಮನದಾಗ ಮನದೂಟ ಕಾಮದ ಕೊನೆಯೂಟ
ಅನುರಾಗದ ರಸಕೂಟ..... ಅರಿಯದಲೆ ಇರುಳೆಲ್ಲ ಕಳೆದುಹೋದವು ಪೂರ
ತೋಳತೆಕ್ಕೆಯಲ್ಲಿ ಸೇರಿ.. ಸಗ್ಗದಾಗಸದಿ ತೇಲಿ ತೇಲಿ...
ಎಂದು ಹಾಡುತ್ತಿತ್ತು.

ಮೈಮನಸ್ಸಿಗೆ ಅಮಲೇರಿಸಿ, ಮಬ್ಬು ಹರಿಯುವ ಮುನ್ನ ಸುಧಾಕರ ಹೊರಟು ಹೋದ. ಪಡೆದುಕೊಂಡೆ, ದಕ್ಕಿಸಿಕೊಂಡೆ ಎಂದು ಖುಷಿಯಲ್ಲಿ ಪ್ರಭಾ ವಿಜೃಂಭಿಸುತ್ತಿದ್ದಳು. ಗಂಟೆ ಏಳಾದರೂ ಮೇಲೇಳಲಾಗದ ಮೈಮರವು. ಪಾರ್ವತಿ ನೆನಪಾದಳು. ಇನ್ನು ನಿನ್ನಾಟವೇನು ನಡೆಯದು. ಸುಧಾಕರನ್ನ ಕಣ್ಣೆತ್ತಿ ನೋಡಿದರೂ ಮುಗಿಸಿ ಬಿಡುವೆ.... ಮನದಲ್ಲೆ ಅವಳಿಗೆ ಎಚ್ಚರಿಸುತ್ತ ಹೇಗಾದರೂ ಅವಳಿಗೆ ಈ ವಿಷಯ ಗೊತ್ತಾಗುವಂತೆ ಮಾಡಿ ಇನ್ನಾದರೂ ತೆಪ್ಪಗಿರುವಂತೆ ಮಾಡಬೇಕು.... ಎಂದು ಯೋಚಿಸಿ ಹೊಸ ವರ್ಷದ ಶುಭಾಶಯ ತಿಳಿಸಲು ಆಕೆಗೆ ಫೋನ್ ಮಾಡಿದಳು.

ಅತ್ತ ಕಡೆಯಿಂದ 'ಹಲೋ....' ಎಂದೊಡನೆ ತಾನೂ 'ಹಲೋ...' ಎನ್ನಲು ಹೋದವಳು ತಕ್ಷಣ 'ಈ ದನಿ.....' ಎಂದುಕೊಂಡು ಯೋಚಿಸುತ್ತಿರುವಂತೆ ಮತ್ತೊಮ್ಮೆ ಅದೇ ದನಿ ಕೇಳಿಬಂತು. ಮೈಯೆಲ್ಲ ಕಂಪಿಸಿ ಜಿಲ್ಲನೆ ಬೆವೆತಳು ಪ್ರಭಾ. ಮಾತು ಮರೆತು ರಿಸೀವರ್ ಹಿಡಿದು ಕೂತಳು. ಅವಳ ಮೈಯೆಲ್ಲಾ ಕಿವಿಯಾಯ್ತು.

'ಏಯ್ ಪಾರು, ಪಾರೂ ನಿಂಗಿರ್ಬೇಕು ಬಾಮ್ಮಾ ಯಾರೋ ಮಾತಾಡ್ತಿಲ್ಲ....' ಮತ್ತದೇ ದನಿ. ರಿಸೀವರ್ ಕೈ ಬದಲಾದ ಸದ್ದಿನೊಂದಿಗೆ ಪಾರ್ವತಿ ದನಿ ಕೇಳಿಸಿತು.

'ನೀನ್ಯಾಕಿಷ್ಟು ಬೇಗ ಎದ್ಬಿಟ್ಟೆ ಸುಧಾ ಮಲ್ಕೋ ಆಮೇಲೆ ಎಬ್ಬಿಸ್ತೀನಿ. ಏನೂ ಕವಿಗಳು ಕಾವ್ಯಕ್ಕೆ ಸ್ಫೂರ್ತಿನ ಸೂರೆ ಹೊಡ್ದು ಬಂದ ಹಾಗೆ ಕಾಣ್ತೀರಿ....?'

ಪಾರ್ವತಿ ಅನ್ನುತ್ತಿದ್ದಂತೆ ಮತ್ತಾರದೋ ವಯಸ್ಸಾದ ಗಂಡಸರ ದನಿ

'ಅವ್ನ ಯಾಕ್ ಕಾಡ್ತಿಯಾ ಮೊದ್ಲು ಫೋನ್ ನೋಡು ಯಾರ್ದೂ....' ಅಷ್ಟೊತ್ತಿಗೆ ಪ್ರಭಾಳ ಕೈಯಿಂದ ರಿಸೀವರ್ ಜಾರಿತ್ತಾಗಲೇ.

ಅದೂವರೆಗಿನ ಅಮಲೆಲ್ಲಾ ಇಳಿದು, ನಿಚ್ಚಳವಾಗಿ, ಅಲ್ಲಾಡಿಸಿ ಎಸೆದಂತಾಗಿತ್ತು.

ಒಮ್ಮೆಗೆ ಎಲ್ಲವೂ ಸ್ತಬ್ಧವಾದ ಅನುಭವ. ಹಾಗಾದರೆ ಇಲ್ಲಿಂದ ಸುಧಾಕರ ಸೀದಾ ಪಾರ್ವತಿಯಲ್ಲಿಗೆ ಹೋದನೆ? ನನ್ನ ದನಿ ಗುರುತು ಸಿಕ್ಕಲಿಲ್ಲವೆ ಅವನಿಗೆ! ಕೆಲವೇ ಗಂಟೆಗಳಲ್ಲಿ ಇಷ್ಟೊಂದು ಬದಲಾವಣೆ ಸಾಧ್ಯವೆ! ಅವಳು ಇಷ್ಟರಮಟ್ಟಿಗೆ ಅವನನ್ನು ಹೇಗೆ ಯಾಮಾರಿಸಿರ್ಬಹುದೂ....? ಸುಧಾಕರ ತನ್ನನ್ನು ವಂಚಿಸಿದನೆ? ಪಾರ್ವತಿ ಅಲ್ಲಲ್ಲ ಪಾರು.... ಪಾರು....! ಅವ ಸುಧಾ....! ಇಲ್ಲ ಇನ್ನು ಸುಮ್ಮನಿದ್ದರೆ ಫಲವಿಲ್ಲ.... ಎದ್ದವಳೇ ಹೊರಟಳು ಪಾರ್ವತಿ ಮನೆಗೆ.

'ನಿಂಗೂ ಸುಧಾಕರ್‌ಗೂ ಏನ್ ಸಂಬಂಧ....? ಅವ್ರು ನಿಂಗೇನ್ ಆಗ್ಬೇಕು....?' ನೇರವಾಗಿ ವಿಷ್ಯಕ್ಕೆ ಬಂದಳು ಪ್ರಭಾ. ಇದನ್ನು ನಿರೀಕ್ಷಿಸಿದ್ದವಳ ಹಾಗೆ ಪಾರ್ವತಿ ತಣ್ಣಗೆ ಉತ್ತರಿಸಿದಳು.

'ಅವ ನನ್ನ ಸ್ನೇಹಿತ....'

'ದಯವಿಟ್ಟು ಈ ಸೋಗೆಲ್ಲ ಬಿಟ್ಟು ನೇರವಾಗಿ ಹೇಳು....' ಪ್ರಭಾ ಮುಖ ಕಿವುಚಿದಳು.

'ಸ್ನೇಹಿತ ಅನ್ನೋದು ನೇರ ಮಾತಿನಲ್ಲಿ ಇನ್‌ಕ್ಲೂಡ್ ಆಗೊಲ್ಲ ಅನ್ನೋದಾದ್ರೆ ನನ್ನ ಉತ್ತರ ಮೌನ' ಪಾರ್ವತಿಯದು ಅದೇ ತಣ್ಣನೆಯ ಉತ್ತರ.

'ನೋಡು ನಿಂದೇನೆ ಇರ್ಲಿ ನಮ್ ವಿಷ್ಯಕ್ಕೆ ಬರ್ಬೇಡ. ನಾನು ಸುಧಾಕರ ತುಂಬಾ ಕ್ಲೋಸು. ನಾವಿಬ್ರೂ ಒಬ್ಬರನ್ನೊಬ್ರು ತುಂಬಾ ಹಚ್ಕೊಂಡಿದ್ದೀವಿ. ನಮ್ಮ ಪರ್ಸನಲ್ ವಿಷ್ಯಕ್ಕೆ ತಲೆ ಹಾಕ್ಬೇಡ....' ಸಿಟ್ಟಿನಿಂದ ಕುದಿಯುತ್ತಿದ್ದಳು ಪ್ರಭಾ.

'ನೀವಿಬ್ರೂ ಹಚ್ಕೊಂಡಿರೋದು, ನಿಮ್ಮ ಕ್ಲೋಸ್ ನೆಸ್ಸೂ ಹೇಗೆ ನಿಮ್ಮ ಪರ್ಸನಲ್ಲೊ ಹಾಗೇನೆ ನಮ್ಮಿಬ್ಬರ ಸ್ನೇಹ ನಮ್ಮ ಪರ್ಸನಲ್ ಆಗೋಲ್ವಾ....?' ನಕ್ಕಳು ಪಾರ್ವತಿ.

'ಪ್ರೀತೀನೇ ಬೇರೆ ಸ್ನೇಹನೇ ಬೇರೆ....' ಒಡನೇ ಬಂತು ಉತ್ತರ.

'ಅಲ್ವಾ....? ಮತ್ಯಾಕೆ ನೀವದನ್ನ ಒಂದು ಮಾಡ್ಲಿಕ್ಕೆ ಹೊರಟಿದ್ದೀರಾ....?' ಅಷ್ಟೇ ತಣ್ಣನೆಯ ಪ್ರಶ್ನೆ.

'ಸ್ನೇಹ ಬರೀ ಸೋಗು. ನಮ್ಮೊಳಗಿನ ಸುಳ್ಳುಗಳಿಗೆ ಹಾಕ್ಕೋಳೋ ಮುಖವಾಡ.....' ಪ್ರಭಾ ಉರಿದಳು.

'ಹಾಗೇನೆ ನೀವೇಳೋ ಆ ಪ್ರೀತಿ ನಿಮ್ಮ ಕೀಳು ಕಾಮನೆಗಳಿಗೆ ನೀವು ಹಾಕ್ಕೊಂಡಿರೋ ಮುಖವಾಡ ಅಂತ ನಾನ್ ಹೇಳಿದ್ರೇ...' ಮತ್ತೆ ನಗು.

'ನೋಡು ದಯವಿಟ್ಟು ನಮ್ಮ ಪ್ರೀತಿ ಬಗ್ಗೆ ಹಗುರವಾಗಿ ಮಾತಾಡ್ಬೇಡ. ಬೇಕಾದ್ರೆ ಸುಧಾಕರನ್ನೇ ಕೇಳು....' ಪಾರ್ವತಿ ಈಗ ಜೋರಾಗಿ ನಕ್ಕಳು.

'ಅನುಮಾನ, ಅಪನಂಬಿಕೆಯಿಂದ ಕಂಗಟ್ಟಿರೋದು ನೀವು. ಅದನ್ನ ಕೇಳ್ಬೇಕಾದೋರು ನೀವೇ. ಹಾಗ್ನೋಡಿದ್ರೆ ನಿಮ್ಮ ಈ ಪ್ರಶ್ನೆಗೆ ಉತ್ತರಿಸಬೇಕಾದೋನು ಸುಧಾಕರ ನಾನಲ್ಲ. ನೀವೇನು ಅಪರಿಚಿತರಲ್ಲ ಅಂತ ನಿಮ್ಮತ್ರ ಇಷ್ಟು ಹೊತ್ತು ಮಾತಾಡಿದೆ....'

'ಆದರೂ ಒಬ್ಬ ಸ್ನೇಹಿತೆಯಾಗಿ....' ಅಂತ ಏನೋ ಹೇಳಲು ಹೊರಟ ಪ್ರಭಾಳನ್ನು ಅರ್ಧಕ್ಕೆ ತಡೆದು.

'ದಯವಿಟ್ಟು ಸ್ನೇಹಿತೆ ಅಂತ ಹೇಳ್ಬೇಡಿ. ಸ್ನೇಹಕ್ಕೆ ಯಾವ ಉದ್ದೇಶವೂ ಇರೋಲ್ಲ. ....' ಅಂದಳು ಪಾರ್ವತಿ.

'ಹಾಗಾದ್ರೆ ನೀನು ಸುಧಾಕರ್‌ನ ಹಿಂದೆ ಬಿದ್ದಿರೋದಕ್ಕೆ ಯಾವ ಉದ್ದೇಶನೂ ಇಲ್ಲಾಂತೀಯಾ....?' ವ್ಯಂಗವಾಗಿತ್ತು ಪ್ರಶ್ನೆ. ಪಾರ್ವತಿ ಮತ್ತೆ ನಕ್ಕಳು

'ಸುಧಾಕರನ ಕವನ, ನನ್ನ ವಿಚಾರಗಳು ನಮ್ಗೆ ಪರಸ್ಪರ ಇಷ್ಟ. ನಮ್ಮ ಆಸರಿಕೆ ಬೇಸರಿಕೆಗಂತ ತಿಂಗಳಲ್ಲಿ ಎರಡು ದಿನ ಮಾತ್ರ ಭೇಟಿಯಾಗ್ತಿವಿ..... ಒಂದಿನ ಶಾಪಿಂಗ್, ಔಟಿಂಗ್ ಅಂತ ಹೋಗ್ತೀವಿ. ಮತ್ತೊಂದಿನ ಅವನ ಬೈಕಲ್ಲಿ ಗುಡ್ಡ ಬೆಟ್ಟ ಕಾಡುಮೇಡು ಸುತ್ತೋದು ಹಾಗೆ. ಉಳಿದ ಸಮಯದಲ್ಲಿ ಊಟ, ಆಟ, ಸಂಗೀತ, ಸಾಹಿತ್ಯ ಅಂತ ಆಗೋಗತ್ತೆ. ಅನಂತರ ಉಳಿದ ದಿನಗಳು ನಮ್ಮ ಪಾಡಿಗೆ ನಾವು. ತುರ್ತಿದ್ರೆ ಫೋನು ಇಲ್ಲಾಂದ್ರೆ ಅದೂ ಇಲ್ಲ. ಪರಸ್ಪರ ಇಂಟರ್‌ಫಿಯರೆನ್ಸ್ ಟೋಟಲಿ ಇಲ್ಲ. ಹೀಗೇಳಿ ನಾನು ಹೇಗೆ ನಿಮ್ಮ ಪ್ರೀತಿಗೆ ಅಡ್ಡ ಅಂತ....'

ಪ್ರಭಾಳಿಗೆ ತನ್ನ ಕಾಲ ಕೆಳಗಿನ ಭೂಮಿ ಅಲ್ಲಾಡಿದಂತೆ ಭಾಸವಾಗುತ್ತಿತ್ತು. ಗಟ್ಟಿಯಾಗಿ ನೆಲಕ್ಕೆ ಕಾಲೂರಿ ನಿಲ್ಲುತ್ತ.

'ಅಲ್ಲಾ ಪರಿಚಯ ಆದ ತಿಂಗಳಲ್ಲೇ ಇಷ್ಟೆಲ್ಲಾ ಹೇಗೆ ಸಾಧ್ಯ.....?' ಅಂತ ಕೇಳಿದಳು.

'ತಿಂಗಳಾ! ಇಲ್ವಲ್ಲಾ ನಮ್ಮಿಬ್ಬರ ಸ್ನೇಹ ಮೂರು ವರ್ಷದ್ದು...' ಪಾರ್ವತಿ ಹೇಳಿದಾಗ ಪ್ರಭಾ ಕುಸಿದಳು. ಎಲ್ಲವೂ ತಲೆಕೆಳಗು.

'ಯಾಕೆ ಪ್ರಭಾ....? ಯಾಕಿಷ್ಟೊಂದು ಅಪ್‌ಸೆಟ್ಟಾಗಿದ್ದೀರಾ....?' ಪಾರ್ವತಿ ಗಾಬರಿಯಿಂದ ಕೇಳಿದಳು.

'ನೋ ನಿನ್ನ ಅನುಕಂಪ ಬೇಕಾಗಿಲ್ಲ. ನೋಡು ನೀನಿಷ್ಟು ಕ್ಲೋಸು ಅಂತಾದ್ರೆ ನಿನಗೆಲ್ಲ ವಿಷ್ಯ ಗೊತ್ತೆ ಇರುತ್ತೆ....' ಪ್ರಭಾ ಆವೇಶಗೊಂಡಿದ್ದಳು.

'ನೋಡಿ, ಸಾಮಾನ್ಯವಾಗಿ ನಾನಾಗಿ ಅವನ ಗರ್ಲ್‌ಫ್ರೆಂಡ್ಸ್ ಬಗ್ಗೆ ಕೇಳೊಲ್ಲ. ಅವ್ನಾಗಿ ಹೇಳಿದರಷ್ಟೇ.....' ಪಾರ್ವತಿಯ ಒಂದೊಂದು ಮಾತು ಒಂದೊಂದು ಪೆಟ್ಟಾಗಿ ಪ್ರಭಾಳನ್ನು ಘಾಸಿಗೊಳಿಸುತ್ತಿತ್ತು. ಈಗಂತ ಅದುರಿ ಹೋದಳು.

'ವಾಟ್ ಗರ್ಲ್‌ಫ್ರೆಂಡ್ಸಾ....?!' ಕಣ್ಣರಳಿಸಿ ಕೇಳಿದಳು.

'ಕಮಾನ್ ಪ್ರಭಾ ನಿಮ್ಗೆಲ್ಲ ಗೊತ್ತಿರ್ಲೆಬೇಕು. ವೆನ್ ಯು ಬೋತ್ ಆರ್ ಇನ್ ಲವ್ ಎಲ್ಲಾನು ಷೇರ್ ಮಾಡೇ ಇರ್ತೀರಿ.... ಏನ್ಮಾಡೋದೇಳಿ ಸುಧಾಕರ ರಸಿಕ, ಸೌಂದರ್ಯಾರಾಧಕ. ಸುಂದರವಾದ ಪ್ರತಿ ಹೆಣ್ಣನ್ನು ಅವ್ನು ಪ್ರೀತಿಸ್ತಾನೆ. ಅವಳ ಸಾಮೀಪ್ಯ, ಅವಳ ಒಡನಾಟ ಅವನಿಗೆ ತುಂಬಾ ಪ್ರಿಯವಾದ್ದು ಹಿತವಾದ್ದು. ಬಹುಶಃ ಅವನ ಕಾವ್ಯಕ್ಕೆ ಈ ಒಡನಾಟವೇ ಸ್ಫೂರ್ತಿ ಅಂದ್ರೂ ತಪ್ಪಾಗಲಾರ್ದು...' ಪಾರ್ವತಿಯ ಮಾತು ಕೇಳಿ ಕಣ್ಮುಚ್ಚಿದಳು ಪ್ರಭಾ.

'ವಿ ಆರ್ ಇನ್ ಲವ್' ಅಂತ ಸುಧಾಕರ್ ಆಗ್ಲಿ ನಾನಾಗ್ಲಿ ಪರಸ್ಪರ ಹೇಳಿಕೊಂಡಿದ್ದೇ ಇಲ್ಲ. ಒಂದು ತಿಂಗಳಲ್ಲಿ ನಾವಿಬ್ಬರು ಮಾಡಿದ್ದೇನು? ಪರಸ್ಪರ ಪ್ಲೀಸ್ ಮಾಡಲು, ಇಂಪ್ರೆಸ್ ಮಾಡಲು ಅಟ್ರ್ಯಾಕ್ಟ್ ಮಾಡಲು ಪ್ರಯತ್ನಿಸ್ತಿದ್ವಿ ಅಷ್ಟೇ. ನಮ್ಮಿಬ್ಬರ ಬಗ್ಗೆ ನಾವೇನು

ಮಾತಾಡ್ಕೊಂಡ್ವಿ? ಏನ್ ತಿಳ್ಕೊಂಡ್ವಿ...? ನಾನೇನು? ಅವನೇನು? ಉಹೂಂ ಏನೂ ಗೊತ್ತಿಲ್ಲ. ನಾವು ಷೇರ್ ಮಾಡಿದ್ದೇನು....? ದೇವರೆ! ಅಷ್ಟೇನೆ. ಅಷ್ಟಕ್ಕೆ ನಾನಿಷ್ಟೆಲ್ಲ ಬಡಿದಾಡಿದ್ನೆ...?

ಪಾರ್ವತಿ ತನ್ನ ಪ್ರತಿಸ್ಪರ್ಧಿ. ಆಕೇನ ತೊಲಗಿಸ್ಬೇಕೂಂತ ನಾನು ಹುಡ್ಕೊಂಡ ದಾರಿ ಯಾವ್ದು? ಅಷ್ಟಕ್ಕೆ ಎಲಾ ಸಿಕ್ಬಿಡ್ತು ಅನ್ನೊ ಭ್ರಮೆ ನಂಗ್ಯಾಕೆ? ನಾನು ಹುಡ್ಕೊಂಡ ದಾರಿ ಯಾವ್ದು? ಅವನನ್ನ ಪಡೆದುಕೊಳ್ಳೊ ಭ್ರಮೇಲಿ ವಿವೇಚನೆಯಿಲ್ದೆ ಎಲ್ಲಾ ಕಳಕೊಂಡ್ಬಿಟ್ನೆ....? ನಾನೇನು ಸಾಧಿಸಿದೆ....? ಪಾರ್ವತಿಯ ಒಂದು ಕೂದಲನ್ನೂ ಕೊಂಕಿಸಲಾಗಿಲ್ಲ. ಆಕೆಯಿದ್ದಲ್ಲಿಯೇ ಭದ್ರವಾಗಿದ್ದಾಳೆ.

ಹೌದು ಅವಳೆಷ್ಟು ನಿರುಮ್ಮಳವಾಗಿರುವಳು. ಅವಳಿಗ್ಯಾಕೆ ಈ ಅಸೂಯೆ, ಅನುಮಾನ, ಈ ತಳಮಳ ಒಂದೂ ಇಲ್ಲ. ಅವಳಿಗೆ ಸುಧಾಕರನ್ನ ಕಳೆದುಕೊಳ್ಳುವ ಭಯವೇ ಇಲ್ಲ. ಸುಧಾಕರ ತಿಂಗಳಲ್ಲಿ ಎರಡು ದಿನ ಬಂದೇ ಬರುತ್ತಾನೆಂದು ಎಷ್ಟೊಂದು ನಂಬಿಕೆ ಅವಳಿಗೆ. ಆದರೆ ಆ ನಂಬಿಕೆ ನನಗಿದ್ಯೆ? ಅವನು ಬರಬಹುದು ಬಾರದೆಯೂ ಇರಬಹುದು. ಬಂದರೂ ಏನೀಗ....? ಎಲ್ಲವೂ ಮುಗಿದುಹೋಯ್ತು. ಹೌದು ಮುಗಿದುಹೋದದ್ದೇನು....? ನನ್ನ ಪ್ರೀತಿಯೇ?

ಅದೇಕೋ ಪ್ರೀತಿ ಅಂತ ಹೇಳಿಕೊಳ್ಳೋಕೆ ಸಂಕೋಚವಾಗುತ್ತಿದೆ.... ಇದೇಕೆ ಇಷ್ಟೆಲ್ಲ ಪರಿತಾಪ....? ನಾನೇಕೆ ಹೀಗೆ ಬಡಬಡಿಸ್ತಾ ಇದ್ದೀನಿ...? ಎಲ್ಲೋ ನಾನು ಸೋಲನ್ನೊಪ್ಪಿಕೊಳ್ಳುತ್ತಿಲ್ಲ ತಾನೆ....? ಹಾಗೆನಿಸಿದೊಡನೆ ಧಿಗ್ಗನೆದ್ದು ಕುಳಿತಳು ಪ್ರಭಾ. 'ನೋ ನಾನೆಂದು ಸೋಲಲ್ಲ.....'

ಅದುವರೆಗೂ ಸುಮ್ಮನಿದ್ದು ಇದುವರೆಗೂ ನಡೆದದ್ದಕ್ಕೆಲ್ಲ ಕಾರಣವಾದ ಅವಳ ಪ್ರತಿಷ್ಠೆ ಮತ್ತೆ ಜಾಗೃತಗೊಂಡು ತನ್ನ ಕೆಲಸ ಮುಂದುವರೆಸಿತು. ಅಷ್ಟಕ್ಕೂ ಏನಾಗಿ ಹೋಯ್ತೆಂದು ನಾನ್ಹೀಗ ಕಂಗಾಲಾಗಿದ್ದೀನಿ.... ನನ್ನ ರೂಪಕ್ಕಂತೂ ಅವನು ಮರುಳಾಗೇ ಇದ್ದಾನೆ. ಸ್ನೇಹ ಸಂಪಾದಿಸಿಯೇ ತೀರುವೆ. ಇನ್ನು ಇವಳನ್ನು ಕಳೆದುಕೊಳ್ಳುವಂತೆಯೇ ಇಲ್ಲ. ಎಷ್ಟೇ ಕಿರಿಕಿರಿಯಾದರೂ ಈಕೆಯನ್ನು ಸಹಿಸಲೇಬೇಕು ಸುಧಾಕರ್‌ಗೋಸ್ಕರ. ಅವನ ಸ್ನೇಹ ಗಳಿಸಲು ಈಕೆಯೇ ಮೆಟ್ಟಿಲು. ಹಂತಹಂತವಾಗಿ ಇವಳ ಬಾಯ್ಬಿಡಿಸುವೆ.

ಪಾರ್ವತಿ ಅಲ್ಲಲ್ಲ ಪಾರು ನಿನಗೆ ಬೇಕೋ ಬೇಡವೋ ನನಗದು ಗೊತ್ತಿಲ್ಲ. ಆದರೆ ನಾನು ಬಿಡುವುದಿಲ್ಲ ದೃಢವಾಗಿತ್ತು ಅವಳ ನಿರ್ಧಾರ. ಪಾರ್ವತಿಯನ್ನೊಮ್ಮೆ ದೀರ್ಘವಾಗಿ ನೋಡಿದಳು.

ಮರುಕ್ಷಣ ಅವಳ ವರ್ತನೆ, ಮುಖಭಾವ ಸಂಪೂರ್ಣ ಬದಲಾಯ್ತು.

'ನನ್ನನ್ನು ಕ್ಷಮಿಸಿ ಪಾರ್ವತಿ. ನಿಮ್ಮನ್ನು ತುಂಬಾ ತಪ್ಪಾಗಿ ತಿಳ್ದು ಸಣ್ಣವಳಾದೆ. ನಾನು ಒಪ್ಕೋತಿನಿ. ನೀವು ಇವತ್ತು ನನ್ನ ಕಣ್ತೆರೆಸಿದ್ರಿ.. ನಿಮ್ಮಿಬ್ಬರ ಸ್ನೇಹ ನೋಡಿ ನಿಜಕ್ಕೂ ಖುಷಿ ಆಯ್ತು.. ಈ ರೀತಿ ಗೆಳೆತನ ನಿಭಾಯಿಸೋದು ತುಂಬಾ ಕಷ್ಟ ಅಲ್ವಾ...? ಯೂ ಆರ್ ರಿಯಲೀ ಗ್ರೇಟ್! ನೀವು ನನ್ನ ಸ್ನೇಹಿತೆಯಾದ್ದು ನನಗೂ ಹಾಗೇ ಅನ್ನಿಸ್ತಿದೆ. ನೀವೇನಾದರೂ ಅಂದ್ಕೊಳ್ಳಿ. ಒಪ್ಕೊಳ್ಳಿ ಇಲ್ಲ ಬಿಡಿ. ಆದರೆ ನಮ್ಮಿಬ್ಬರ ನಡುವೆ

ಯಾವುದೋ ಅನುಬಂಧವಿದೆ. ಏನೋ ಸೆಳೆತ ಇದೆ. ನಿಮ್ಮೊಡನೆ ಮಾತಾಡಿ ನನ್ನ ಮನಸ್ಸು ಹಗರವಾಗಿದೆ. ನಾನಂದೂ ನಿಮ್ಮನ್ನ ಸ್ನೇಹಿತೆ ಅಂತ್ಲೆ ಅಂದ್ಕೊಂಡಿದ್ದೆ ಮುಂದೆಯೂ ಅಷ್ಟೆ. ಹೋಗಿ ಬರ್ತಿನಿ. ಆದ್ರೆ ಆಗಾಗ ಬರ್ತಾ ಇರ್ತಿನಿ.....' ಎಂದು ಹೊರಟಳು.

'ಹೋಗ್ಬನ್ನಿ ಪ್ರಭಾ. ನಾವು ಏನೇನು ಅಂತ ನಮ್ಗೆ ಗೊತ್ತಾದ್ರೆ ಸಾಕು. ನಮ್ಮೇಲೆ ನಮ್ಗೆ ನಂಬಿಕೆ ಇದ್ರೆ ಆಯ್ತು. ವಿಶ್ವಾಸ ಮುಖ್ಯ. ಅದಿದ್ರೆ ಯಾರೂ ಯಾರ್ನೂ ಅಲ್ಲಾಡಿಸಕೆ ಆಗೊಲ್ಲ ಎಷ್ಟೇ ಪ್ರಯತ್ನಿಸಿದ್ರೂ, ಹೋಗ್ಬನ್ನಿ. ಖಂಡಿತ ಆಗಾಗ ಬನ್ನಿ. ಯೂ ಆರ್ ಆಲ್ವೇಸ್ ವೆಲ್ ಕಂ.....'

ಪಾರ್ವತಿ ಹೇಳಿದಾಗ ಪ್ರಭಾ ಗೆದ್ದವಳಂತೆ ಖುಷಿಯಲ್ಲಿ ಹೊರಟಳು. ಅದೇಕೋ ಪಾರ್ವತಿಗೆ ಅವಳ ಆ ಖುಷಿಯನ್ನು ಹಾಳು ಮಾಡಲು ಇಷ್ಟವಾಗದೆ ಏನೂ ಅರ್ಥವಾಗದವಳಂತೆ ನಕ್ಕು ಕೈ ಬೀಸಿದಳು.

✦ ✦

ನೆರೆ ಹಾವಳಿ

'ಹಾಯ್ ಡುಮ್ಸ್ ವೇರ್ ಆರ್ ಯೂ.....' ಅಂತ ಮನು ಮೆಸೇಜ್ ಬಂದಾಗ ನಾನು ಆಗ್ತಾನೆ ಕ್ಲಾಸ್ ಮುಗ್ಸಿ ಕಾಲೇಜಿಂದ ಹೊರಬರ್ತಿದ್ದೆ. ಅವ್ನ ಮೆಸೇಜ್ ನೋಡಿದ್ದೇ ನಿನ್ನೆ ಅವ್ನು ಹೇಳಿದ ವಿಷ್ಯ ನೆನಪಾಯ್ತು. ಅವನ ಸ್ನೇಹಿತ ಗೋಪಾಲ್ ಸರ್ಕಾರಿ ಜ್ಯೂನಿಯರ್ ಕಾಲೇಜಿನಲ್ಲಿ ಕನ್ನಡ ಲೆಕ್ಚರರ್ ಅಂತೆ. ವಾರದ ಹಿಂದೆ ಪಿ.ಯು.ಸಿ. ಮಕ್ಕಳಿಗೆ ನೆರೆ ಹಾವಳಿ ಬಗ್ಗೆ ಪ್ರಬಂಧ ಬರೆಯೋಕೆ ಕೊಟ್ಟಿದ್ನಂತೆ. ಅನಿತಾ ಅನ್ನೊ ಹುಡುಗಿಯೊಬ್ಳು 'ನೆರೆಹಾವಳಿ ಎಂದರೆ ನೆರೆಹೊರೆಯ ಹಾವಳಿ. ಅದು ಬಲಿಷ್ಠರ, ಶ್ರೀಮಂತರ ಹಾವಳಿ. ಅದು ಹಸಿವಿನ, ಆಸೆಗಳ ಹಾವಳಿ' ಅಂತ ಬರೆದಿದ್ದಳಂತೆ.

ಇಷ್ಟೇ ಎರಡೇ ಸಾಲು. ತುಂಬಾ ಕುತೂಹಲ ಹುಟ್ಟಿ ಗೋಪಾಲ್ ಆ ಪೇಪರನ್ನ ರೂಂಗೆ ತಂದು ಇವ್ನಿಗೂ ಹೋದಾಗ ತೋರಿಸಿದ್ನಂತೆ. ಅದನ್ನ ನೋಡಿದಾಗಿನಿಂದ ಡಿಸ್ಟರ್ಬ್ ಆಗ್ಬಿಟ್ಟಿದ್ದನೇನೋ ಓದಿದಾಕ್ಷಣ ಓಡಿ ಬಂದಿದ್ದ ನನ್ನ ಬಳಿಗೆ.

'ಸ್ವಲ್ಪ ಜಾಸ್ತಿ ತಲೆ ಓಡಿಸ್ತಿಯಲೇ ನೀನ್ಯಾವಾಗ್ಲು....' ಅಂತ ಬೈದಿದ್ದೆ ನಾನು ಅವ್ನ ಮಾತು ಕೇಳಿ.

ಅವನ ಪ್ರಕಾರ ಆ ಹುಡುಗಿಗೆ ಏನೋ ತೊಂದ್ರೆಯಿದೆ. ಯಾವ್ದೋ ಕಷ್ಟಕ್ಕೆ ಸಿಲುಕಿದ್ದಾಳೆ ಖಂಡಿತ. ಇದು ನೆರೆಯ ಅರ್ಥ ಗೊತ್ತಿಲ್ದೇ ಸುಮ್ನೆ ಏನೇನೋ ಬರ್ದಿದ್ದಾಳೆ ಅಂತ ಕಡೆಗಾಣಿಸೋ ಹಗುರವಾದ ಸಂಗತಿ ಅಲ್ಲ ಅನ್ನೋದೇ ಅವನ ವಾದ.

'ಅವಳ ಆ ಬರಹದಲ್ಲಿ ಇರೋ ಹಾಗೇ ನೆರೆಹೊರೆ, ಬಲಿಷ್ಠ, ಶ್ರೀಮಂತ, ಆಸೆ, ಹಸಿವು ಇವೆಲ್ಲಾ ತುಂಬಾ ಕಾಡ್ತಿದವ್ರಿ ಅವ್ಳನ್ನ ಯಾವ್ದೊ ರೀತಿ.....' ಅಂದಿದ್ದ.

ನಾನದನ್ನ ಅಷ್ಟು ಸೀರಿಯಸ್ಸಾಗಿ ತಗಂಡಿರ್ಲಿಲ್ಲ.

'ಈ ಹುಡುಗೀರು ಯಾವ್ದ್ಯಾವ್ದೊ ಕೆಟ್ಟ ಕೆಟ್ಟ ಸಿನಿಮಾ ನೋಡ್ತಾರೆ. ಪ್ರತಿದಿನ ಟಿವಿಯಲ್ಲಿ ಆ ದರಿದ್ರ, ಕೊಳೆತೋಗಿರೋ ಕೆಟ್ಟ ಸೀರಿಯಲ್‌ಗಳನ್ನು ನೋಡ್ತಿರ್ತಾರೆ. ಅಂತಹ ಯಾವುದೋ ಪ್ರಭಾವದಿಂದ್ಲೇ ಇಂತಹ ದೊಡ್ಡ ಪದಗಳನ್ನು ಜೋಡಿಸಿ, ಏನೋ ಒಂದು ಹೆಣೆಯೋಕೆ ಪ್ರಯತ್ನಿಸಿ ಕೈಬಿಟ್ಟಿದ್ದಾಳೆ.....' ಅಂದಿದ್ದೆ.

ಆದರವ್ನು ಅಷ್ಟು ಸುಲಭಕ್ಕೆ ಬಿಡೋ ಆಸಾಮಿಯಲ್ಲ. 'ಆಯ್ತಪ್ಪ ಬೆಟ್ಟೂ. ನಿಮ್ಮ ಮಾತಲ್ಲಿ ನಿಜ ಇತ್ತು ಅಂದ್ರೆ ನಾನು ನಿಮ್ಮನ್ನ ದುರ್ಗಕ್ಕೆ ಕರ್ಕೊಂಡೋಗಿ ನಿಮ್ಮ ಫೇವರೆಟ್ ಬಿರಿಯಾನಿ ಕೊಡಿಸ್ತೀನಿ. ನನ್ನ ಮಾತು ಸತ್ಯ ಅಂತಾದ್ರೆ ನೀವು ನನಗೆ ಗ್ರೀನ್ ಪಾರ್ಕ್‌ನಲ್ಲಿ ಟ್ರೀಟ್ ಕೊಡಿಸ್ಬೇಕು. ನಾನು ಗೋಪಾಲಂಗೆ ಹೇಳ್ತಿನಿ ನಾವೇ ಹೋಗಿ ಆ ಹುಡುಗೀನ ಮಾತಾಡ್ಸನ. ಏನಂತೀರಿ ಓ.ಕೆ.ನಾ....?'

ಅಂತ ಒಂದೇ ಪಟ್ಟು ಹಿಡಿದು ಲಂಚದ ಆಸೆ ತೋರಿಸಿಯಾದರೂ ನನ್ನ ಒಪ್ಪಿಸುವ ಹುನ್ನಾರ.

'ಹೇ ವೈ ಯಾ ನೋ ರಿಪ್ಲೈ......... ಹೊಟ್ಟೆ ಹಸೀತಿದೆ.....' ಅಂತ ಇನ್ನೊಂದು ಮೆಸೇಜು ಬಂದಾಗ್ಲೇ ನಂಗೆ ನೆನಪಾದ್ದು ಅವ್ನಿಗೆ ರಿಪ್ಲೈ ಮಾಡಿಲ್ಲಾಂತ. ಫೋನೇ ಮಾಡಿದೆ.

'ಯಾಕ್ಲೆ ಕೋತಿ ನಿಮ್ ಕಟ್ಟೆ ಕ್ಯಾಂಟೀನು ಇವತ್ತೇನು ಬಂದಾ....?' ಅಂದೆ. ಅತ್ಲಾಗಿಂದ ಧಮಕಿ

'ಯಾಕೆ..? ಏನು? ಏನ್ ಮಹಾ ಸಿಗುತ್ತಲ್ಲೀ...... ಮಾಮೂಲು ಒಂದು ಪ್ಯಾಕ್ ಬಿಸ್ಕತ್ತು, ನಾಲ್ಕು ಕೋಡುಬಳೆ, ಎರಡು ಚಕ್ಲಿ, ನಾಲ್ಕು ಬಾಳೆಹಣ್ಣು......'

ನಾನು ಮಧ್ಯಕ್ಕೆ ಬಾಯಿ ಹಾಕಿ 'ಎಷ್ಟೊತ್ತಾಯ್ತು ತಿಂದೂ.....' ಅಂದೆ

'ಹಹಹತ್ತು.....' ನಿಮಿಷ ಅಂತ ಏನೋ ಮಹಾ ಬಹಳ ಹೊತ್ತಾಗಿದೆ ಅನ್ನೊ ಹಾಗೆ ಹತ್ತನ್ನ ಎಳೆದೆಳೆದು ಒತ್ತೊತ್ತಿ ಅವ್ನು ಹೇಳ್ದಾಗ ನಾನೂ ಅದೇ ದಾಟೀಲಿ

'ಹೌದಾ ಹಹಹತ್ತು ನಿಮಿಷ ಆಯ್ತಾ....' ಅಂದು ನಗ್ತಾ

'ಅದೇನು ಹೊಟ್ಟೆನೋ ಏನೋ ಮಾರಾಯ ಒಂದು ಪ್ಯಾಕ್ ಬಿಸ್ಕತ್ ತಿಂದ್ರೆ ಹೊಟ್ಟೆ ಪ್ಯಾಕ್ ಆಗೋಗುತ್ತೆ. ನಿನಗಿನ್ನೂ ಜಾಗ ಉಳಿದೈತಲ್ಲಾ ಆಶ್ಚರ್ಯ.....' ಅಣಕಿಸಿದೆ.

'ಅಲಲಲ್ಲ ನೀವೇಳೋದೇನೋ ಸರೀನೆಪ. ಆದ್ರೆ ಒಂದು ಮಿಸ್ಟೇಕ್ ಮಾಡ್ಬಿಟ್ಟೆ. ನಾನು ಮೊದ್ಲು ನಾಲ್ಕು ಬಾಳೆಹಣ್ಣು ತಿಂದ್ನಾ. ಆಮೇಲೆ ಉಳಿದಿದ್ದೆಲ್ಲಾ ತಿಂದದ್ದೆ ಬಂತು ನೋಡ್ರಿ.....' ಅಂದ.

'ಅಲೆ ಇವ್ನ ಅದುಕ್ಕೇನಾತು....' ಕೇಳಿದೆ ಆಶ್ಚರ್ಯದಿಂದ.

'ಅಯ್ಯೋ ಬಾಳೆಹಣ್ಣು ಜಾರಲ್ವೇನ್ರೀ..... ಮೊದ್ಲು ಬಾಳೆಹಣ್ಣು ತಿಂದು ಆಮೇಲೆ ಬಿಸ್ಕತ್ತು ತಿಂದಿದ್ದಕ್ಕೆ ಎಲ್ಲಾ ಸರ್ರಂತ ಕೆಳಕ್ಕೆ ಜಾರ್ಬಿಟ್ಟೆದೆಪ....' ಅವನ ಮಾತು, ಹೇಳಿದ ಧಾಟಿಗೆ ನಗು ತಡೆಯಲಿಲ್ಲ.

'ಥೂ ಕೋತಿ ಇದಕ್ಕೇನು ಕಮ್ಮಿಯಿಲ್ಲ.' ಅಂದು ನಗ್ತಿದ್ದೆ 'ಸ್ಸಾರಿ...' ಅಂದು 'ಎಲ್ಲಿರುವೆ ಮನವ ಕಾಡುವ ರೂಪಸಿಯೇ.....?' ಹಾಡಿನ ಧಾಟಿಯಲ್ಲೇ ನಾನೆಲ್ಲಿದೀನಿ ಅಂತ ಕೇಳಿದ.

'ಲೇ ಕೋತಿ ಅಲ್ಲಿ ಅಕ್ಕಪಕ್ಕ ಯಾರು ಇಲ್ಲ ತಾನೆ ಈಗ ಹೊರಟೆ ಕಾಲೇಜಿನಿಂದ. ಇನ್ನರ್ಧ ಗಂಟೆ ಬಿಟ್ಟು ಬಾ ಮನೆಗೆ ಆಯ್ತಾ....' ಅಂದೆ.

'ತೆರೆದಿದೆ ಮನೆ ಓ ಬಾ ಅತಿಥಿ....' ಬೇರೆ ಹಾಡು ಶುರು ಮಾಡಿದ.

'ಹೇ ಮಂಗ ಇಡು ಫೋನು.....' ಅಂತನೇ ಸ್ವಲ್ಪ ದೂರ ಹಾಗೆ ನಡೆದು ಆಟೋ ಕರೆದು.

'ಎಸ್.ಎಸ್.ಲೇಔಟ್ ಬರ್ತೀರಾ...?' ಕೇಳ್ದೆ.

'ಉಹೂಂ ಬರಲ್ಲ....' ಅಂದ ಹಾಡು ನಿಲ್ಲಿಸಿ.

'ಕಪಿ ಸ್ವಲ್ಪ ಸುಮ್ನಿರು....' ಅಂದು ಮತ್ತೆ ಕೇಳಿದೆ ಡ್ರೈವರ್‌ಗೆ.

'ಉಹೂಂ ಬರಲ್ಲ ಅಂತ ಹೇಳ್ಲಿಲ್ವಾ...' ಅವನ್ದೇ ದನಿ ಹೆಂಗಸಿನ ದಾಟಿಯಲ್ಲಿ.

ಡ್ರೈವರ್ ನಕ್ತಾ ಇದ್ದದ್ದು ನೋಡಿ ಯಾಕೋ ಅನುಮಾನ ಬಂದು ತಲೆಯೆತ್ತಿದರೆ ಅವರ ಪಕ್ಕದಲ್ಲೇ ಇನ್ನೊಂದು ಬದೀಲಿ ಬೈಕ್ ಮೇಲೆ ಕೂತಿದ್ದ ಅತ್ತ ಕಡೆಯಿಂದ ಆಟೋದೊಳಕ್ಕೆ ಮುಖ ತೂರಿಸಿ,

ಹಣೆ ಚಚ್ಕೊಂಡು 'ಸ್ಸಾರಿ ನಿಮ್ಮನ್ನ ಸುಮ್ನೆ ನಿಲ್ಲಿಸ್ದೆ..' ಅಂತ ಡ್ರೈವರ್‌ಗೆ ಹೇಳಿ ಅವನತ್ತ ಹೊರಟೆ.

'ಲಕ್ಷಣವಾಗಿ ಬರ್ತೀನಿ ಕಾಯ್ರಿ ಅಂತ ಹೇಳಿದ್ರೆ ಆಗ್ತಿರ್ಲಿಲ್ವೇನೋ.....' ಹುಸಿಮುನಿಸಿನಿಂದ ಅಂದ ಬೈಕ್ ಹತ್ತಿದೆ.

'ಲಕ್ಷಣವಾಗಿ ಹೇಳಿದ್ರೆ ಈ ಖುಷಿ ಸಿಗ್ತಿತ್ತೇನೋ......' ನನ್ನೆ ಅನುಕರಿಸಿ ಹೇಳಿ

'ನಾನೀಗ ಎಲ್ಲಿಗೊರ್ಬಿನ್ ಹೇಳ್ರಿ ನೋಡನ....' ಅಂದ ಅವ್ನು.

'ನಮ್ಮನೆಗೆ.....' ಅಂದೆ.

'ಅಲ್ಲಿಂದ....' ಅಂದ.

'ನಿಮ್ಮನೆಗೆ' ಅಂದೆ.

'ಹೂಂನಪ ಗೊತ್ತಾತು ನಿಮ್ಮನ್ ಬಿಟ್ಟಂಗೆ ಹೋಗ್ತಿನ್ ಬಿಡ್ರೀ ತಿಂಡಿ ಕಾಫಿ ಅಂತ ಕುಂದ್ರಲ್ಲ ನಮ್ಮನಿಗೇ ಹೋಗ್ತೀನಿ...' ಅಂತ ಶುರು ಹಚ್ಕಂಡ ಕೊರಕೊರ.

'ಆತು ಸರ್ ಗೊತ್ತಾತು ತಮ್ಮದಿನ್ನು ತಿಂಡಿ ಕಾಫಿ ಆಗಿಲ್ಲ ಅಂತ ಗೊತ್ತಾತು. ಈಗ ತಾವು ವಿಷಯಕ್ಕೆ ಬಂದು ಎಲ್ಲಿಗೆ ತೊಲಗ್ತೀರಿ ನೇರವಾಗಿ ಹೇಳ್ಬಿಟ್ರೇ....' ಅಂತ ನಾನು ಮುಖ ಕೆಡಿಸಿಕೊಂಡರೆ ಅವನು

'ಹ್ಹಿ ಹ್ಹಿ ಹ್ಹಿ.....' ಅಂತ ಕಿಸಿಯುತ್ತಾ ಹೊಟ್ಟೆ ಸವರಿಕೊಳ್ಳುತ್ತಾ 'ಅನಿತ ಮನೆಗೆ....' ಅಂದು ಒಮ್ಮೆಲೆ ಗಂಭೀರನಾಗಿ

'ಆ ಹುಡುಗೀನ ಒಮ್ಮೆ ಮಾತಾಡಿಸ್ಬೇಕು ನೋಡ್ಬೇಕು ಅನಿಸ್ತಿದೆಪ ಯಾಕೋ ನಂಗೆ' ಅಂದ.

'ಭಾಳ ಮನಸ್ಸಿಗೆ ಹಚ್ಕಂಡಿಲೆ ನೀನು....' ಅಂತೇನೋ ಹೇಳ್ತಿದ್ದೆ.

'ತಪ್ಪಾ....' ಅಂತ್ಕೇಳ್ದ ಮಧ್ಯಕ್ಕೆ.

'ತಪ್ಪು ಅಂತ ಅಲ್ವೊ ಅನಾವಶ್ಯ ತಲೆ ಕೆಡಿಸ್ಕಂತದಿ ಅನ್ಸಕತ್ತೇತಿ....' ಅಂತ ಮಾತಿಗೆ ಹೇಳಿದ್ರೂ ಅವ್ನು ಹೇಳಿದಾಗಿಂದ ಆ ವಿಷಯ ನನ್ನೂ ಒಳಗೇ ಕೊರಿಯಕೆ ಶುರು ಮಾಡೇತಿ ಅಂತ ಮೆಲ್ಲಗೆ ಮನವರಿಕೆ ಆಗ್ತಿತ್ತು ನಂಗೂ.

'ನಮ್ಗೆ ಕಾಣ್ಸದು, ಕಾಣಸ್ದೆ ಇರದು ಎಲ್ಲನೂ ಅನಾವಶ್ಯ ಅಂತ ನಮ್ ಪಾಡಿಗೆ ನಾವು ಏನೂ ನಾಟಿಸ್ಕಳ್ದೆ ಇದ್ಬಿಟ್ರೆ ಇಲ್ಬಿದ್ದಿರೋ ಕಲ್ಲು ಮಣ್ಣು ಕಸಕಡ್ಡಿಗೂ ನಮ್ಗೂ ಏನ್ ವ್ಯತ್ಯಾಸರಿ. ಹೋಗ್ಲಿ ಹಾಗಾದ್ರೆ ನಮ್ಗೆ ಏನ್ ಅವಶ್ಯನಪ....'

ಮನು ಇಷ್ಟು ಗಂಭೀರವಾಗಿ ಮಾತಾಡ್ಬಹುದು, ಯೋಚಿಸ್ಬಹುದು ಅಂತ ಈ ಒಂದು ವರುಷದ ನಮ್ಮ ಒಡನಾಟದಲ್ಲಿ ಮೊದಲ ಸಲ ಬಂತು ಅನುಭವಕ್ಕೆ. ಈ ಹೊಸ ಮನು ನನ್ ತಪ್ಪಿನ ಅರಿವು ಮಾಡಿಸಿದ ನಂಗೆ.

ಅವನೆಷ್ಟು ಗಂಭೀರವಾಗಿ ಈ ವಿಷಯ ಪ್ರಸ್ತಾಪಿಸ್ತಿದ್ನೋ ಅಷ್ಟೇ ಉಡಾಫೆಯಿಂದ ಅದನ್ನ ನಾ ತಳ್ಳಿ ಹಾಕ್ತಿದ್ದೆ. ಒಪ್ಗಂಡೆ.

'ಹೂಂನ್ಲೆ ನಿನ್ ಮಾತು ನಿಜ. ಅಷ್ಟರಮಟ್ಟಿಗೆ ಅದು ನನ್ನ ಸ್ವಾರ್ಥ ಮತ್ತೆ ಸ್ವಾರ್ಥಮಗ್ನತೆ. ಮತ್ತೆಲ್ಲೊ ನಾನು ತುಂಬಾ ಸ್ವಾಕ್ರಮಿತಳಾಗೀನಿ. ಅದಕ್ಕೆ ನನ್ನ ಹೊರತು ಅನ್ಯ ವಿಷಯ ಏನೇ ಇರ್ಲಿ ಒಂದೋ ಅದು ತುಂಬಾ ಹಗುರವಾಗಿ ಕಾಣ್ತೇತಿ ಇಲ್ಲಾ ಅದು ನಂಗೆ ಲೆಕ್ಕಕ್ಕೆ ಇಲ್ಲ ಅಂತಾಗೇತಿ. ಅದಕ್ಕೆ ಇಷ್ಟು ಉಡಾಫೆ. ಸ್ಸಾರಿಲೇ ನೀ ಹೋಗಿ ಏನಂತ ತಿಳ್ಕಂಡ್ಬಾ. ವಿಷಯ ತಿಳದ್ಮೇಲೆ ವಿಚಾರ ಮಾಡನ' ಅಂದೆ. ಅವ್ನು ಮಾತಾಡ್ಲಿಲ್ಲ.

'ಓ ನನ್ನ ಚೇತನ ಆಗು ನೀ ಅನಿಕೇತನ....' ಅಂತ ಹಾಡಾಕತ್ತಿದ.

ಪಟ್ಟಂತ ತಲೆಗೆ ಒಂದು ಬಿಟ್ಟೆ 'ಯಾಕೋ ಸ್ವಲ್ಪ ಜಾಸ್ತಿ ಆತು....' ಅಂತ.

ತಕ್ಷಣ ಪೂರ ಹಿಂದಕ್ಕೆ ವಾಲುತ್ತ 'ಸಜನರೇ ಜೂಟ್ ಮತ್ ಬೋಲೊ' ಅಂತ ಶುರು ಹಚ್ಕಂಡ.

'ಏಯ್ ಡಿಸ್ಟೆನ್ಸನ ಮೇನ್‌ಟೇನ್ ಮಾಡು ಜನತಪ್ ತಿಳ್ಕಂತರೆ....' ಅಂದೆ ನಾನು.

'ಓಹ್ ಸಾರಿ ಮೇಡಂ....' ಅಂದವನೇ ಸೀದಾ ಮುಂದೆ ಜಾರಿ ಟ್ಯಾಂಕಿನ ಮೇಲೆ ಹೋಗಿ ಕುಂತ. ಈಗ ಜನ ನಿಜವಾಗಲು ನೊಡೋಕೆ ಶುರು ಮಾಡಿದರು. ಮುಂದೆ ಬಗ್ಗಿ ಅವನ ಕಾಲರಿಡಿದು ಹಿಂದಕ್ಕೆಳೆಯುತ್ತ

'ಹಿಂದಕ್ಕೆ ಬಾರೋ ಕಪಿ ಅಸಹ್ಯ ಮಾಡ್ಬೇಡ ಪ್ಲೀಸ್...' ಗೋಗರೆದೆ ನಾನು.

'ಬೇಡಪ್ಪ ಜನ ತಪ್ ತಿಳ್ಕಂತರೆ' ಅಂದ ಮಳ್ಳನಂಗೆ.

'ಆತೋ ತಪ್ಪಾತು ಹಿಂದಕ್ಕೆ ಬಾ...' ಅಂದೆ ಎಳೆಯುತ್ತಾ.

'ಲೋಕವ ಮೂಟೆ ಕಟ್ಟು..... ಯಾತಕೆ ದೂಸರ ಮಾತು.... ಎಲ್ಲಾ ಟೈಮ್ ವೇಸ್ಟ್.....' ಅಂತ ಹಾಡುತ್ತಾ ಹಿಂದಕ್ಕೆ ಬಂದು 'ಈಗ ದೂಸರ ಮಾತಾಡದೆ ನೀವೂ ಬರ್ಬೇಕು ಅನಿತ ಮನೆಗೆ ನನ್ಜತಿಗೆ ಅಷ್ಟೆ' ಅಂದ.

ಈ ಮನು ಹಾಗೇನೆ ತಲೆಗೇನಾದ್ರೂ ಬಂತಂದ್ರೇ ಪಟ್ಟು ಹಿಡಿದು ಮಾಡದೆ ಬಿಡೋನಲ್ಲ. ಅಷ್ಟೇ ಜಾಲಿನೂ ಹೌದು. ಅವನು ಹೋದಲ್ಲೆಲ್ಲಾ ನಗುವಿನ ಬುಗ್ಗೆ ಯಾವಾಗೂ. ಅವನಿದ್ದಲ್ಲೆಲ್ಲಾ ಗದ್ದಲ, ಖುಷಿ, ಸಂಭ್ರಮ ಯಾವತ್ತೂ.

ಸಾಮಾನ್ಯ ನಾವಿಬ್ರೂ ಬೈಕ್ನಲ್ಲಿ ಹೊರಟರೆ ತನಗಿಷ್ಟವಾದ ಸಿನಿಮಾದ್ದೋ ಇಲ್ಲ ನಾಟಕದ್ದೋ ಡೈಲಾಗ್ಸ್ ಹೇಳ್ತಿರ್ತಾನೆ. ಇಲ್ಲಾಂದ್ರೆ ಆಯಾ ಸಿಚುಯೇಷನ್‌ಗೆ ತಕ್ಕನಾಗಿ ಹಾಡ್ತಾ ಇರ್ತಾನೆ, ಅದೂ ಇಲ್ಲ ಅಂದ್ರೆ ದಾರೀಲಿ ಹೋಗೋ ಬರೋರ್ನೆಲ್ಲಾ ಕಾಡೋಕೆ ಶುರು ಮಾಡ್ತಾನೆ. ಇದ್ಯಾವ್ದೂ ಇಲ್ಲಾಂದ್ರೆ ಅವನ ಗರ್ಲ್‌ಫ್ರೆಂಡ್‌ನ ಫೋನಲ್ಲಿ ಬೈತಿರ್ತಾನೆ ಇಲ್ಲ ನನ್ನೊತೆ ಜಗಳ ಆಡ್ತಿರ್ತಾನೆ, ಒಟ್ಟಾರೆ ಸದಾ ಎಂಗೇಜ್ ಆಸಾಮಿ,.

ಹಾಡಂದ್ರೆ ಪ್ರಾಣ. ಸಂಗೀತ ಗೊತ್ತಿಲ್ಲ. ಆದರೆ ಹಾಡುವ ಹಂಬಲಕ್ಕೆ ಕೊರತೆಯಿರ್ಲಿಲ್ಲ. ನನಗೋ ಹಾಡೆಂದರೆ ಹುಚ್ಚು. ಈ ಹುಚ್ಚಿಗೇ ಅವನು ಹುಟ್ಟಿದಂತಿದ್ದ. ನಾಟಕದಿಂದ ಅಂಟಿದ ನಂಟು ಇದಾಗಿದ್ರೂ ನಾವಿಬ್ರೂ ಆಪ್ತರಾದ್ದು ಹಾಡಿನಿಂದಲೇ. ನಮ್ಮ ಮೊದಲ ಪರಿಚಯದ ಸನ್ನಿವೇಶವೇ ತುಂಬಾ ತಮಾಷೆಯಾಗಿತ್ತು. ಅವನ ಬಗ್ಗೆ ಆಗ ಕೇಳಿದ್ದೆ ಅಷ್ಟೆ. ಎಂ.ಟೆಕ್ ಮಾಡಿ ಅದೇ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ರೂ ಸೈತ ನಾಟಕದ ಗೀಳು ಬಿಟ್ಟಿಲ್ಲ. ಒಳ್ಳೆಯ ಆರ್ಗನೈಸರ್. ಕಾಸ್ಟೂಮ್ಸ್‌ನಿಂದ ಹಿಡಿದು ನಟ-ನಟಿಯರನ್ನ ಹೊಂದಿಸುವು ದರಲ್ಲೂ ಒಳ್ಳೆ ನಿಪುಣ ಅಂತ.

ವರುಷದ ಹಿಂದೆ ನಮ್ಮ ನಾಟಕಕ್ಕೆ ತುರ್ತಾಗಿ ಒಬ್ಬ ಹುಡುಗಿ ಬೇಕಿತ್ತು. ನಾಟಕದ ಐದು ಸಣ್ಣ ಸಣ್ಣ ಪಾತ್ರದಲ್ಲಿ ಮಾಡ್ತಿದ್ದಾಕೆ ಏನೋ ಕಾರಣಕ್ಕೆ ಅಸಮಾಧಾನಗೊಂದು ಇನ್ನು ಶೋ ಐದು ದಿನ ಇರೋವಾಗ ಬರಕಾಗಲ್ಲ ಅಂತ ಕೈ ಕೊಟ್ಟು ಬಿಟ್ಟಿದ್ಲು. ಏನು ಬೇಕಾದ್ರೂ ನಾಟಕಕ್ಕೆ ಹೊಂದಿಸ್ಬಹುದು. ಆದ್ರೆ ಒಬ್ಬ ಹುಡುಗಿಯನ್ನ ಪಾತ್ರಕ್ಕೆ ಹೊಂದಿಸುವಷ್ಟರಲ್ಲಿ ಹೆಣ ಬಿದ್ದೋಗಿರತ್ತೆ. ಇಂತಹ ಸಂಕಷ್ಟದ ಸಮಯದಲ್ಲೇ ಮನು ನಂಬರ್ ಅವನ ತಂಡದ ಒಬ್ಬ ಸದಸ್ಯನಿಂದ ಸಿಕ್ಕಿತ್ತು. ಅವತ್ತೇ ರಾತ್ರೆ ಹನ್ನೊಂದಾಗಿದ್ರೂ ಹಿಂದೆ ಮುಂದೆ ನೋಡದೆ ಫೋನ್ ಮಾಡೇಬಿಟ್ಟಿದ್ದೆ ಅವನಿಗೆ.

ತಗೊಂಡ ಸಧ್ಯ! ನಾನ್ಯಾರಂತ ಹೇಳಿದ್ಮೇಲೆ 'ಏನ್ ಮೇಡಂ ಇಷ್ಟೊತ್ನಲ್ಲಿ ಏನ್ವಿಷ್ಯ' ಅಂದ.

'ರೀ ಮನೋಜ್ ನಂಗೆ ಅರ್ಜೆಂಟಾಗಿ ಒಬ್ಬ ಹುಡುಗಿ ಬೇಕ್ರಿ ಈಗ....' ಅಂದಿದ್ದೆ ಒಂದೇ ಆತುರದಲ್ಲಿ.

'ಹಾಂ!' ಅನ್ನೋ ಬೆಚ್ಚಿ ಬಿದ್ದ ಉದ್ಗಾರದೊಂದಿಗೆ

'ಏನು ಮೇಡ ಏನ್ಬೇಕು ಅಂದ್ರೀ....' ಅಂತ ಮತ್ತೆ ಅವ್ನು ಕೇಳಿದಾಗ್ಲೂ ನಾನಷ್ಟೇ ಆತುರದಿಂದ ಮತ್ತೆ ಅದನ್ನೇ ಹೇಳಿದಾಗ ಅವ್ನು ಜೋರಾಗಿ ನಕ್ಕಿದ್ದ. ನಾನು ಪೆಚ್ಚಾಗಿ

'ಯಾಕ್ರಿ ಮನೋಜ್ ತುಂಬಾ ಅರ್ಜೆಂಟಿತ್ತು ರೀ ಪ್ಲೀಸ್' ಅಂದಿದ್ದೇ ಮೆತ್ತಗೆ. ಕಷ್ಟಪಟ್ಟು ನಗು ತಡೆಯುತ್ತಾ

'ಅಲ್ರೀ ಮೇಡಂ ರಾತ್ರಿ ಹನ್ನೊಂದಕ್ಕೆ ಫೋನ್ ಮಾಡಿ ಅರ್ಜೆಂಟ ಹುಡುಗಿ ಬೇಕ್ರಿ ಅಂತ ನನ್ನ ಕೇಳಿದ್ರೆ ಹೆಂಗಪ್ಪ.... ನಿಮ್ಮ ಅಕ್ಕ ಪಕ್ಕ ಯಾರೂ ಇಲ್ಲ ತಾನೇ? ಹೂಂನಪ ಮತ್ತೆ ನನ್ನ ಬಗ್ಗೆ ತಪ್ಪು ತಿಳ್ಕಂತರ್ರೀ....' ಅಂತ ಅವ್ನು ಹೇಳ್ದಾಗಲೇ ನಾನು ಆತುರದಲ್ಲಿ ಏನು ಮಾತಾಡಿದೀನಿ ಅಂತ ಅರಿವಾಗಿದ್ದು.

ಆಮೇಲೆ ನನ್ನಿಂದಾನೂ ನಗು ತಡೆಯೋಕಾಗ್ಲಿಲ್ಲ. ಇಬ್ರೂ ನಕ್ಕು ಸಾಕಾದ್ಮೇಲೆ

ವಿಷಯವನ್ನು ಅವನಿಗೆ ವಿವರಿಸಿದ್ದೆ. ಮರುದಿನ ಬೆಳಿಗ್ಗೆನೆ ಒಬ್ಬ ಹುಡುಗಿಯೊಡನೆ ಹಾಜರು ಅವನು. ಅವತ್ತಿನಿಂದ ಹಾಗೆ ನಮ್ಮ ತಂಡದ ಓರ್ವ ಸದಸ್ಯನೇ ಆಗಿಹೋಗಿದ್ದ.

ದಿನವೂ ಬರ್ತಿದ್ದ ಹಾಗಾಗಿ ನಮ್ಮ ಪ್ರಾಕ್ಟೀಸ್‌ನ್ನು ಮಾನಿಟರ್ ಮಾಡ್ಲಿಕ್ಕೆ ಅವನಿಗೆ ಹೇಳಿದಿವಿ. ತುಂಬಾ ಶಿಸ್ತು ಕಮಕ್‌ಕಿಮಕ್ ಅನ್ನೋಕೆ ಬಿಡ್ತಿರ್‍ಲಿಲ್ಲ ನಮ್ಮನ್ನ. ಹಾಗಾಗಿ ನಾವೂ ಸೀರಿಯಸ್ಸಾಗಿ ಇನ್ವಾಲ್ವ್ ಆಗ್ತಿದ್ವಿ. ನನ್ನ ಮನೆಗೆ ಹತ್ತಿರ ಅವನ ಮನೆ ಆದ್ದರಿಂದ ದಿನವೂ ಮನೆಗೆ ಬಿಡ್ತಿದ್ದ ಅವನ ಬೈಕ್ನಲ್ಲಿ. ಮನೆ ತಲುಪುವ ತನಕ ಹಾಡಿದ್ದೇ ಹಾಡಿದ್ದು ದಾರಿಯುದ್ದಕ್ಕೂ. ಮೊದಮೊದಲು ಒಬ್ಬನೇ ಬರಬರುತ್ತಾ ಅವನ ಜೊತೆಗೆ ನಾನೂ. ಹಾಗೆ ಶುರುವಾಯಿತು ಒಟ್ಟಿಗೆ ಊಟ, ಸುತ್ತಾಟ.

ಅದು ಮುಂದುವರೆದು ಗಟ್ಟಿಗೊಂಡ ಸ್ನೇಹ. ನನಗಿಂತಲೂ ಹದಿನೈದು ವರ್ಷ ಚಿಕ್ಕವನಾದ್ರೂ ಒಂದೇ ಓರಗೆಯವರು ಅನ್ನಿಸುವಷ್ಟು ಚೆನ್ನಾಗಿ ನಮ್ಮ ಫ್ರಿಕ್ವೆನ್ಸಿ ಮ್ಯಾಚ್ ಆಗ್ತಿತ್ತು. ನೋಡೋಕೆ ಒರಟನಂತೆ ಕಂಡರೂ ಹೆಂಗರುಳಿನವ. ಅವನೊಂದಿಗಿರುವಾಗ ನನ್ನ ವಯಸ್ಸು, ಸ್ಥಾನಮಾನ, ಹೆಸರು ಎಲ್ಲ ಮರಿತಿತ್ತು. ನನಗೇನೇ ಸಹಾಯ ಬೇಕಿದ್ದರು ನಾನೆಲ್ಲೇ ಹೋಗ್ಬೇಕಿದ್ದರು ಎಷ್ಟೊತ್ತಿನಲ್ಲಾದರೂ ಅವನು ಸದಾ ಸಿದ್ಧ. ಅವನೊಂದಿಗೆ ಎಷ್ಟೊತ್ತಿನಲ್ಲಾದ್ರೂ, ಎಲ್ಲಿಗೆ ಬೇಕಾದ್ರೂ ಹೋಗುವಷ್ಟು ನಂಬಿಕೆ, ವಿಶ್ವಾಸ, ಧೈರ್ಯ ನನಗೂ ಅವನಲ್ಲಿ.

ಆದರೆ ಈ ಸ್ನೇಹ ಇತರರಿಗೆ ಬಿಸಿ ತುಪ್ಪ. ಬಲು ಕೌತುಕ. ಒಂದು ಮಿತಿಯೊಳಗೆ ಇರುಕಿಸಿಕೊಂಡು ಅದರಾಚೆಗೆ ಯೋಚಿಸದ ಮನಸ್ಸುಗಳು. ನಮಗದರ ಪರಿವೆಯಾಗಲಿ ಅಂಥವರ ನಡೆ ನುಡಿಯ ಕಾಳಜಿಯಾಗಲಿ ಇರ್ಲಿಲ್ಲ. ಅಂತೆಯೇ ನಮ್ಮನ್ನು ಅಣುಕುವ, ಕಾತರದಿಂದ ಕಾಯುವ ಕಣ್ಣುಗಳಿಗೆ ಸದಾ ಸಲ್ಲುವವರು ನಾವು.

ಎಂದಿನಂತೆ ಹಾಡ್ಕೋತ ನಲ್ಕೋತ ಅನಿತಳ ಸಣ್ಣ ಗ್ರಾಮ ಬಟ್ಟಲಕಟ್ಟೆನ ನಾವು ತಲುಪಿದಾಗ ಮಧ್ಯಾಹ್ನ ಒಂದೂವರೆ. ಅದೊಂದು ಕುಗ್ರಾಮ. ಸಣ್ಣ ತಿಪ್ಪೆಗುಂಡಿಯಂತೆ ಇತ್ತು. ಪ್ರಾರಂಭಕ್ಕೆ ಮತ್ತೆ ನಡು ಊರಿನಲಿ ಒಂದ್ನಾಕು ದೊಡ್ಡ ಹೆಂಚಿನ ಮನೆ ಇದ್ದುವಷ್ಟೇ. ಗೋಪಾಲ್ ಕೊಟ್ಟಿದ್ದ ವಿಳಾಸ ಹಿಡಿದು ಅನಿತ ಮನೆ ಹುಡ್ಕಂಡು ಹೊರಟ್ವಿ.

ಚರಂಡಿನೇ ಇರದ ಕಾರಣ ಕಾಲ್ಕಾಲಲ್ಲೇ ಕೊಚ್ಚೆ ರಾಡಿ. ಅದರಲ್ಲಿ ಬಿದ್ದು ಉಲ್ಡಾಡ್ತಿದ್ದ ವಿವಿಧ ಸೈಜಿನ ಹಂದಿಗಳು. ಅವುಗಳ ಪಕ್ಕಕ್ಕೆ ಕುಂತು ಕೈಯಲ್ಲಿ ರೊಟ್ಟಿ ಚೂರು ಹಿಡಿದ ಮಕ್ಕಳು. ನಗ್ಗಿನಗ್ಗಿ ಹೋಗಿ ಅಲ್ಲಿನ ಜನಜೀವನದ ಪ್ರತೀಕವೋ ಎಂಬಂತಿದ್ದ ಹರಕಲು ಮುರುಕಲು ಆಕಾರ ವಿಕಾರಗೊಂಡಿದ್ದ ಸಿಲುವಾರದ ತಟ್ಟೆಯಲ್ಲಿ ಆರಿ ಕುಳ್ಳಾಗಿ ಸೆಟಗಂಡಿದ್ದ ರಾಗಿ ಮುದ್ದೆಯ ಗುಕ್ಕುಗಳೊಂದಿಗೆ ಆಡ್ಕಂಡು ಕುಂತಿದ್ದ ಚಡ್ಡಿಯಿಲ್ಲದ ಕೆದರಿದ ತಲೆಯ ಸಿಂಬಳಬುರುಕ ಮಕ್ಕಳು. ಕೇಕೆ ಹಾಕ್ತಿದ್ವು.

ಅವರನ್ನೆಲ್ಲಾ ಸೂಪರ್ವೈಸ್ ಮಾಡ್ತಿದ್ದ ಚೂರು ದೊಡ್ಡ ಮಕ್ಕಳು ನಮ್ಮನ್ನ ನೋಡಿದವರೆ ಸಜ್ಜಾದಂತೆ ಎದ್ದು ಕಾದು ನಿಂತರು. ಅವರಲ್ಲೆ ದೊಡ್ಡವಳೊಬ್ಬಳನ್ನು ಕರೆದು

'ಇಲ್ಲಿ ಅನಿತ ಅಂತ....' ಅಂತಿದ್ದೆ ಅಷ್ಟರಲ್ಲಿ

'ಅಗೋ ಆ ನೆರ್ಕಪಕ್ಕದಗಿರ ಗುಡ್ಲು....' ಅಂದಳಾಕೆ.

ಒಂದು ನಾಲ್ಕು ಮಂದಿ ಕಾಲುಚಾಚಿ ಮಲಗುವಷ್ಟು ಜಾಗವಿತ್ತು ಒಳಗಡೆ ಅಷ್ಟೆ. ಹೊಗೆ ಸುತ್ತಿಕೊಂಡಂತೆ ಒಳಗೆಲ್ಲಾ ಘಾಟು. ಹೊರಗೆ ಪಕ್ಕಕ್ಕೆ ನಾಕು ಕೋಲು ನೆಟ್ಟು ದುಪಡಿ ಕಟ್ಟಿ ಟೆಂಟಿನಂಗೆ ಮಾಡಿಕಂಡಿದ್ದರು. ಗೋಡೆಯ ಪಕ್ಕಕ್ಕೆ ಅತ್ತ ಕಡಿಗೆ ಮುಖ ಮಾಡಿ ಮುದುಕನೊಬ್ಬ ಮುದುರಿ ಮಲಗಿದ್ದ. ಪಕ್ಕದಲ್ಲೇ ಅರೆಪ್ರಜ್ಞಾವಸ್ಥೆಯಲ್ಲಿ ಮೈಮೇಲಿನ ಬಟ್ಟೆ ಅಸ್ತವ್ಯಸ್ತಗೊಂಡಿದ್ದರೂ ಎಚ್ಚರವಿಲ್ಲದಂತೆ ಕುಂತು ಏನೋ ಬಡಬಡಾಯಿಸ್ತಿದ್ದ ಮುದುಕಿ. ಆಕೇನ ನೋಡಿದ್ದೇ

'ಓ ಅಜ್ಜಿ ಆಗ್ಲೆ ದೇವ್ರಾಗ್ಯಳರೀ....' ಅಂದ ಮನು.

ಇನ್ನೊಂದು ಮೂಲೇಲಿ ಹತ್ತು ಹನ್ನೆರಡು ವರ್ಷದ ಹುಡುಗನೊಬ್ಬ ಗೋಣಿ ತಟ್ಟಿನ ಮೇಲೆ ದುಪಡಿಯೊಳಗೆ ಕವಚಿ ಮಲಗಿದ್ದ ಕಣ್ಣು ಪಿಳಿಪಿಳಿ ಬಿಟ್ಕಂಡು. ಇನ್ಯಾರೂ ಕಾಣ್ಲಿಲ್ಲ ಅಲ್ಲಿ. ನಮ್ಮನ್ನೆ ನೋಡ್ತಿದ್ದ ಆ ಹುಡುಗ ಕಡೆಗೂ ಬಾಯ್ಬಿಟ್ಟು ಕೇಳಿದ

'ಯಾರ್ಬೇಕ್ರೀ....' ಅಂತ.

'ಅನಿತ ಇಲ್ಲೇನಪ್ಪ...' ಕೇಳಿದ ಮನು.

'ಬೆಳಿಗ್ಗೆ ವೋದಕಿ ಇನ್ನ ಬಂದಿಲ್ರಿ...' ಅಂದ ಹುಡುಗ.

'ಇವರ್‍ಯಾರು....?' ಅಂತ ಆ ಮುದುಕ ಮುದುಕಿನ ತೋರಿಸಿ ಕೇಳಿದೆ ನಾನು.

'ನಮ್ಮಜ್ಜ ನಮ್ಮಜ್ಜಿ....' ಅಂದ.

'ಹುಷಾರಿಲ್ಲವಾ ಅವ್ರಿಗೆ....?' ಕೇಳಿದೆ ನಾನು ಮುದುಕನತ್ತ ಕೈ ಮಾಡಿ.

'ಅವ್ನಿಗೇನಾಗೆತಿ ಧಾಡಿ ಕುಡ್ದು ಬಿದ್ದನಂಗೆ....' ಅಂತ ಅವ್ನು ಮಲಗಿದ್ದಲ್ಲಿಂದ ಮಿಸುಗದೆ ಹೇಳಿದ.

'ಎದ್ದು ಕುತ್ಗಳ ಏನ್ ಮಕ್ಕಂಡೆ ಮಾತಾಡ್ತಿ....' ಅಂದು ಮನು

'ಅಮ್ಮ ಎಷ್ಟೊತ್ತಿಗ್ಬರ್ತರೆ....?' ಅಂತ ಕೇಳಿದ.

'ಒಮ್ಮೆಟಿಗೆ ರಾತ್ರಿಕೆ.....' ಮಲ್ಕಂಡೇ ಹೇಳ್ದ ಅವ್ನು ಮತ್ತೆ.

'ಅಪ್ಪ...' ಅಂತ ಕೇಳಿದ್ರೇ

'ಗೊತ್ತಿಲ್ಲ....' ಅಂದ. ಮನು ಮುಖ ನೋಡಿದೆ. ಚೂರು ರೇಗಿತ್ತು ಅವನಿಗೆ.

'ಹೌದೋ ನಿನಿಗೇನಾಗೆತಿ....? ಏನ್ ಖಾಯ್ಲೆ....?' ಅಂತ ಕೇಳ್ದ.

ಅದಕ್ಕೂ ಅವನು ಮಾತಾಡ್ಲಿಲ್ಲ. ಆದರೆ ಮೈಮೇಲಿನ ಹೊದಿಕೆಯನ್ನ ಸರಕ್ಕನೆ ಸರಿಸಿದ. ನಾವಿಬ್ರೂ ಹೌಹಾರಿ ನಿಂತುಬಿಟ್ವಿ. ಮೊಣಕಾಲಿನವರೆಗೆ ಎರಡೂ ಕಾಲುಗಳನ್ನ ಕತ್ತರಿಸಿ ತೆಗೆದಿದ್ದರು.

'ಅಕ್ಸಿಡೆಂಟ್ನಗೆ ವೋದ್ವು ಅಂಕಲ್ ಎರಡು ಕಾಲು....' ಅಂದ ಆ ಹುಡುಗ ಯಾವದೇ ಏರಿಳಿತ ಇಲ್ಲದೆ.

ಮನು ಅಲ್ಲೆ ಕುಂತುಬಿಟ್ಟ ಅವನ ಪಕ್ಕದಲ್ಲೆ ಕಾಲು ಮೆಲ್ಲನೆ ನೇವರಿಸುತ್ತ, ಕೊರಳು ಕಟ್ಟಿ ಮಾತುಗಳು ಮೂಕವಾದ್ವು, ಅವನ ಕೈಯಲ್ಲಿ ಒಂದಷ್ಟು ದುಡ್ಡು ಇಟ್ಟು ತಿರುಗಿ ಬಂದುಬಿಟ್ವಿ ಇಬ್ರೂ.

ಮರುದಿನ ಹನ್ನೆರಡರ ನಂತರ ಅನಿತಾ ಮತ್ತು ಗೋಪಾಲ್ ಕರ್ಕಂಡು ಮನೆಗೇ

ಬಂದ್ಬಿಟ್ಳು ಮನು. ಎತ್ತರಕ್ಕೆ ಸ್ವಲ್ಪ ಕಪ್ಪೇ ಎನ್ನಿಸುವ ಚೂಟಿಗಣ್ಣಿನ, ಎರಡು ಜಡೆಯ, ಕಡ್ಡಿ ಎನಿಸುವಷ್ಟು ತೆಳ್ಳಗಿನ ದೇಹ ಅನಿತಾಳದ್ದು. ಬಿಗಿದ ಮುಖ ಅವಳಿಗೆ ಮೆಚ್ಯೂರ್ಡ್ ಕಳೆ ಕೊಟ್ಟಿತ್ತು. ನಮ್ಮನ್ನ ಪರಿಚಯಿಸಿದ ಗೋಪಾಲ್

'ನೋಡಿ ಮೇಡಂ ನೆರೆ ಅಂದ್ರೆ ಅಕ್ಕ ಪಕ್ಕ ಸುತ್ತ ಮುತ್ತ ಅಂತನೂ ಆಗತ್ತೆ. ನಾನ್ ಬರ್‍ದಿರದೆ ಸರಿ ಅಂತಳೆ ಇವ್ಳು...' ಅಂದ್ರು.

ಕಾತರದ ನೋಟ ನನ್ನತ್ತ ಎಸೆದು ಕಾಯುತ್ತಿದ್ದಳು. ಆ ಹುಡುಗಿ ನನ್ನ ಉತ್ತರಕ್ಕೆ.

'ಹೌದು, ಅವ್ಳು ಹೇಳೋದೂ ಸರೀನೆ ಇದೆ' ಅಂದು ನೆಮ್ಮದಿಗೊಂಡ ಅವಳ ಭಾವ ಗಮನಿಸುತ್ತಾ 'ಬಾ ಇಲ್ಲಿ ಕುತ್ಕೋ' ಅಂತ ಪಕ್ಕದಲ್ಲಿ ಕೂರಿಸ್ಕಂಡು 'ನಿನ್ನೆ ನಿಮ್ಮನೆಗೆ ಬಂದಿದ್ವಿ...' ಅಂದೆ.

'ಹೂಂ ಮಿಸ್ ಯೇಳ್ದ ನನ್ ತಮ್ಮ....' ಅಂದು ಸುಮ್ನಾದ್ಲು.

ನಾನೇ ಮಾತಾಡಿದೆ 'ಅಪ್ಪ ಏನ್ಮಾಡ್ತಾರೆ...?' ಅಂತ ಕೇಳಿದೆ.

'ಅಮ್ಮ ಮನಿ ಕೆಲ್ಸ ಮಾಡ್ತಾರೆ ಮಿಸ್. ಇಲ್ಲಿಗೆ ಬರ್‍ತಾರೆ ದಿನಾಲು. ನಾಲಕ್ಮನಿ ಮಾಡ್ತಾರೆ. ಒಂದೂವರೆ ಸಾವ್ರ ಸಿಗ್ತತೆ. ಅಜ್ಜ, ಅಜ್ಜಿ ಇದ್ದಾರೆ. ಅವ್ರ ಖರ್ಚಿಗೆ ಅವ್ರೆ ನೋಡ್ಕಂತರೆ. ಅಜ್ಜಿ ಸೊಪ್ಮಾರ್‍ತಾಳೆ. ಅಜ್ಜ ಹಣ್ಣು ಮಾರ್‍ತನೆ. ಅವ್ರು ದುಡ್ಡಿದ್ದು ದಿನಾಲು ಅವ್ರ ಪಾಕೆಟ್ಗೆ, ಉರಿದ ಮೀನು, ಮೊಟ್ಟೆಗೆ ಆಕತಿ. ನಾವು ಒಟ್ಟು ಆರು ಜನ ಮಿಸ್ ಮಕ್ಳು'

ಅಂತ ತನ್ನ ಮನೆ ಡೀಟೆಲ್ಸ್‌ನ ಬಡಬಡಾಂತ ಹೇಳಿದ್ಲಾಕೆ, ತನ್ನಪ್ಪನೊಬ್ಬನ ಹೊರತು. ಮತ್ತೆ ಅವನ ಬಗ್ಗೆ ಕೇಳೋಕೆ ಬಾಯ್ಬರ್‍ಲಿಲ್ಲ ನನಗೆ. ಪ್ರತಿ ಮನೆಗಳಲ್ಲೂ ಈಗ ಹೆಣ್ಮಕ್ಕಳು ದುಡೀತಾ ಇದ್ದರೂ ಕೆಲವೆಡೆ ಅದೇ ಪ್ರಧಾನ ಆಗಿರೋದು ಸಾಮಾನ್ಯವಾಗಿದ್ದರು, ಇವತ್ತೂ ಗಂಡಿನ ದುಡಿಮೆ, ಅವನ ಕೆಲಸಕ್ಕೇ ಮೊದಲ ಆದ್ಯತೆ ನೀಡುವ ರೂಢಿಗೆ ನಾವೂ ಎಷ್ಟರಮಟ್ಟಿಗೆ ಬದ್ಧರಾಗಿದ್ದೇವಲ್ಲಾ ಎನಿಸಿ ಪೆಚ್ಚೆನಿಸಿತು ಅವಳು ಉತ್ತರಿಸಿದ ರೀತಿಗೆ.

ಅದನ್ನ ಮರೆಮಾಚಲು 'ಹೋಗ್ಲಿ ಬಿಡು ಇಂಥ ಕಷ್ಟದಲ್ಲೂ ನಿನ್ನ ಓದಿಸ್ತಿದಾಳಲ್ಲ ನಿಮ್ಮಮ್ಮ ತುಂಬಾ ಖುಷಿ ಆಯ್ತು' ಅಂದೆ.

'ಉಹೂಂ ನಾನೋದ್ತಿದೀನಿ ನಂದೇ ಸಂಪಾದ್ನೆಲಿ...' ಅಂದಳಾಕೆ.

ಅದುವರೆಗೂ ಇರದ ಸೆಡವು ಇದ್ದಕ್ಕಿದ್ದಂಗೆ ಕಾಣಿಸಿತ್ತು ಅವಳ ಮಾತಲ್ಲಿ. ನಾನು ಅದನ್ನ ಗಮನಿಸದವಳಂತೆ ಅದೇ ಧಾಟಿಯಲ್ಲಿ

'ಓ ವೆರಿಗುಡ್ ವೆರಿಗುಡ್' ಅಂದು 'ಏನ್ಮಾಡ್ತಿ....' ಅಂತ ಕೇಳ್ದೆ. ತಟ್ಟನೆ ಹೇಳಿದಳು 'ವ್ಯಾಪಾರ' ಅಂತ.

ನಾನು ನಕ್ಕೇ 'ಗೊತ್ತಾಯ್ತು ಬಿಡು ಅಜ್ಜಿ ಸೊಪ್ಪು ಮಾರ್‍ತಾರೆ, ಅಜ್ಜ ಹಣ್ಣು ಮಾರ್‍ತಾರೆ, ನೀನೇನು ಮಾರ್‍ತಿ...?

'ಮೈಯ್ಯಿ...'

ತುಂಬಾ ನಿರ್ಲಿಪ್ತವಾಗಿ, ಅಷ್ಟೇ ಸಲೀಸಾಗಿ, ಬಹಳ ಸಹಜವಾಗಿ, ತಣ್ಣಗೆ ಬಂದ ಉತ್ತರ ನನ್ನ ಎತ್ತಿ ಕುಕ್ಕಿ ಬಿಸಾಡಿತು. ಇದ್ದಂತೆ ಇದ್ದಲ್ಲೇ ಹಾಗೇ ಸ್ಟಿಲ್ಲಾದೆ. ಬಾಯಿನ ತೇವ ಆರಿ ಹೋದಂತಾಗಿ ಗಂಟಲು ಒಣಗಿ ಉಸಿರು ಸಿಕ್ಕಿಕೊಂಡ ಅನುಭವ. ಕಣ್ಣು ಬಾಯಿಬಿಟ್ಟು

ಸುಮ್ಮನೇ ಕೂತುಬಿಟ್ಟೆ. ನಮ್ಮಿಬ್ಬರನ್ನೇ ಅಲ್ಲಿ ಬಿಟ್ಟು ನಮ್ಮ ಮಾತುಗಳನ್ನ ಆಲಿಸುತ್ತಾ ಒಳಗಿನ ಕೋಣೆಯಲ್ಲಿ ಕೂತಿದ್ದ ಗೋಪಾಲ್ ಮತ್ತು ಮನು ಇಬ್ರೂ ಒಂದೇಟಿಗೆ ಓಡಿ ಬಂದು ಅಲ್ಲಾಡದೆ ನಿಂತುಬಿಟ್ಟರು ಅವಳ ಹಿಂದೆ ಹಾಗೆ.

ಒಂದು ಚೂರೂ ಅಳುಕು, ಭಯ, ಯಾವ ಭಾವೋದ್ವೇಗವೂ ಇಲ್ಲದ ಅವಳ ಇರುವು ನನ್ನೊಳಗೆ ಚಳಿ ಹುಟ್ಟಿಸತೊಡಗಿತು. ನನ್ನ ಸ್ಥಿತಿ ಅರ್ಥವಾಯಿತೋ ಎಂಬಂತೆ ಅವಳೇ ಮಾತಾಡಿದಳು.

'ನಮ್ಮನಿ ಹತ್ರ ಇರೋ ಶಾಲೆನಗೆ ನಮ್ಮಮ್ಮನ್ಕೂಡ ಮನಿ ಕೆಲ್ಸ ಮಾಡ್ಕಂತನೆ ಎಳ್ನೆ ಕ್ಲಾಸ್‌ವರ್ಗೂ ವೋದ್ದೆ ಮಿಸ್. ಅಮ್ಯಕ್ನಂಗ ಮನಿ ಕೆಲ್ಸ ಅಂದ್ರೆ ಆಗ್ಬರ್ದಂಗಾತು. ನಮ್ಮವ್ವಗೆ ನಾನ್ಮುಂದಕ್ಕೆ ವೋದದು ಆಗ್ಬರ್ಲಿಲ್ಲ. ಆಕಿಗೆ ನನ್ನ ವರಗ್ಕಳ್ಸದೆ ಇಷ್ಟಿರ್ಲಿಲ್ಲ. ಆಕಿಗೆ ಯದ್ರಿಕಿ. ದನಕ್ಬಡ್ದಂಗೆ ಬಡಿತಿದ್ಲು ದಿನಾಲು ಮನಿ ಕೆಲ್ಸಕ್ಕೆ ಬಾ ಅಂತ. ನಾನೋಗ್ತಿದ್ದಿಲ್ಲ. ಒಂದ್ವರ್ಷ ಹಂಗೇ ಮನ್ಯಾಗೆ ಸುಮ್ನೆ ಕುಂತೇ ಕಳ್ದೆ. ಉಪವಾಸ ಕೆಡವಿದ್ಲು. ವಡದ್ಲು ಯಾವುದಕ್ಕೂ ಜಗ್ಗಲಿಲ್ಲ ನಾನು. ನೀನು ಸಾಯ್ಬುಡದ್ರೂ ಮನಿಕೆಲ್ಸ ಮಾಡಲ್ಲ. ನಾನು ವೋದ್ಬೆಕು ಅಂತ ನಂದೂ ವಂದೇ ಹಟ.

ಇದನ್ನೆಲ್ಲಾ ನೋಡ್ತಾನೆ ಇತ್ತು ನಾಗರಾಜಪ್ಪ ಅಂತ ನಮ್ಮೂರ್ನಗೈತೆ ಒಬ್ಬಾತ. ಬರ್ತಿ ದುಡ್ಡದವೆ ಮಿಸ್. ಬಡ್ಡಿ ಕೊಡ್ತತೆ ಯಲ್ರಿಗೂ. ನಮ್ಮವ್ವಗೂ ಕೊಟ್ಟತೆ. ಅವ್ನತಕೆ ವಮ್ಮೆ ಸಾಲ ಮಾಡುದ್ರೆ ಅದು ಸಾಯಮಟ ತೀರಂಗಿಲ್ಲ. ಕೊಟ್ಕೊಟ್ಟಂಗೂ ಬಡ್ಡಿ ಬೆಳಿತನೇ ಇರ್ತತಿ. ಅವ್ನೇಣ್ತಿಗೆ ಯಂತದೋ ಖಾಯ್ಲೆ. ಅವಕ್ಕ ಯಾವಾಗ್ನೋಡ್ಲಿ ಹಾಸ್ಗೆಗೆ ಬಿದ್ಕಂಡಿರ್ತತೆ. ಅವಕ್ಕನ್ನ ನಾನೋಗಿ ದಿನಾಲು ನೋಡ್ಕಂಡ್ರೆ ದುಡ್ಡೂ ಕೊಟ್ಟು, ಬಡ್ಡೀನು ಬಿಡ್ತೀನಿ ಅಂತ ನಮ್ಮವ್ವಗೆ ಆಸೆ ಹುಟ್ಟುಸ್ತು.

ಅದೇ ವತ್ನಗೆ ನನ್ನ ತಮ್ಮಗೆ ಆಕ್ಸಿಡೆಂಟಾಗಿ ಕಾಲೇ ಮುರೀತು. ನಾನು ಅವ್ನ ಮನಿ ಸೇರ್ದೆ. ಮೊದ್ಲು ಬರೀ ಅವಕ್ಕನ್ನ ನೋಡ್ಕಬೇಕಿತ್ತು. ಅದುನ್ನೇ ಮಾಡತಿದ್ದೆ. ಒಂದಿನ ನಾನೇ ಕೇಳ್ದೆ ಮಿಸ್. ನೀವೇನು ಕೆಲಸ ಯೇಳಿದ್ರೂ ಮಾಡ್ತೀನಿ ನನ್ನ ಶಾಲೆಗೆ ಕಳಿಸ್ರಿ ಅಂತ..'

'ಏನಂದ....' ನಾನು ಕಾತರದಿಂದ ಕೇಳಿದೆ ಮಧ್ಯಕ್ಕೆ ತಡೆದು.

'ಅವತ್ತೇನೂ ಹೇಳ್ಲಿಲ್ಲ. ಎರಡ್ದಿನ ಬಿಟ್ಟು ನಾನು ಕರ್ದಂಗೆಲ್ಲಾ ಬಂದು ನನ್ಜತೆ ಮಕ್ಕಂತೀಯಾ ಶಾಲೆಗೆ ಸೇರಿಸ್ತೀನಿ ಅಂತ ಕೇಳ್ತು.'

ನಾನು ಥಟ್ಟನೆ 'ನೀನೇನಂದೇ?' ಅಂತ ಕೇಳಿದೆ. ನನಗೆ ಗೊತ್ತಾಗುವಷ್ಟು ನನ್ನ ದನಿ ನಡುಗ್ತಿತ್ತು.

'ಹೂಂ ಅಂದೆ. ಆ ಅವಕಾಶ ಬಿಟ್ರೆ ನಂಗ್ಮತ್ತೆ ವೋದಕೆ ಛಾನ್ಸೆ ಇರ್ಲಿಲ್ವಲ್ಲ ಮಿಸ್'. ಅವಳ ಉತ್ತರ ಕೇಳಿದ್ದೆ ಮನು ಕುರ್ಚಿಯಲ್ಲಿ ಕುಸಿದು ಕೂತ.

'ಅಮ್ಮಾ....?' ಕೇಳಿದೆ ನಾನು ಕಷ್ಟಪಟ್ಟು ಸಾವರಿಸಿಕೊಂಡು.

'ಏನ್ಮಾಡ್ತಳೆ ಮಿಸ್ ಆಕಿ ಪಾಪ. ಅವ್ನ ತರೋ ದುಡ್ಡು ನಮ್ ಅರೆವಟ್ಟೆಗೂ ಸಾಲ್ದು. ಜತೀಗೆ ಆಸ್ಪತ್ರೆ ಖರ್ಚು ಬ್ಯಾರೆ. ಈವಪ್ಪ ಒಂದೀಟು ಕೈ ಬಿಚ್ಚಿ ಕೊಡ್ತಿತ್ತ ಅಂಗೂ ಯಿಂಗೂ. ಅದಕ್ಕೆ ಕಂಡೂ ಕಾಣ್ದಾಳಂಗೆ ಇದ್ಬಿಟ್ಲು..'

ತಡೀಲಾರದೆ ಮನು ಎದ್ದು ಬಂದು ನನ್ನ ಪಕ್ಕಕ್ಕೆ ಕೂತು 'ನೀನೆ ದೊಡ್ಡವಳಾ...? ಹೌದು ನಿನ್ನ ಹೊರಗ್ಕಳ್ಸಕೆ ನಿಮ್ಮಮ್ಮಂಗೆ ಯಾಕೆದ್ರಿಕೆ....?' ಅಂತ ಕೇಳಿದ.

'ಇಲ್ಲ. ಅಕ್ಕ ಒಬ್ಳಿದ್ಲು ಸರ್. ಅವಳಿಂದನೆ ನಮ್ಮಮ್ಮ ನಮ್ನ ವರಗ್ಕಳ್ಸಕೆ ಯದರ್ತಿದ್ಲು.' ಅಂದಳು.

'ಈಗೆಲ್ಲಿದಳೆ..? ಯಾಕೆ ಏನಾತು...?' ಕುತೂಹಲದಿಂದ ಕೇಳಿದ ಮನು.

'ಇಲ್ಲಾ ಸರ್ ಅವ್ಳೆಲ್ಲಿದಳೋ ಗೊತ್ತಿಲ್ಲ. ಸುನೀತ ಅವ್ಳ ಹೆಸರು. ನಮ್ಮವ್ನಂಗೆ ಕೆಂಪಗೆ ನೋಡಕೆ ಚೆನ್ನಾಗಿದ್ಲು ಸರ್. ನಾಕೈದು ವರ್ಷದ್ಕೆಳಗೆ ಆದ್ಕತೆ ಸರ್ ಇದು. ನಮ್ ಓಣಿನಗೊಬ್ಳು ಹೆಂಗ್ಸಿದ್ಲು. ಅವ್ಳ ಜತಿಗೆ ಭತ್ತದ ಮಿಲ್ಲಿಗೋಗ್ತಿದ್ಲು ಸುನೀತ. ಒಂದ್ತಿಂಗ್ಳಾಗಿ ತಟೆ. ನಮ್ ಸುನೀತನು, ಆ ಹೆಂಗ್ಸು ಇಬ್ರೂ ಎತ್ಲಾಗೋ ವೋಗ್ಬಿಟ್ರು ವಂದಿನ. ಏಟುಡ್ಕಿದ್ರೂ ಸಿಗ್ಲಿಲ್ಲ. ಪೋಲೀಸ್ ಕಂಪ್ಲೇಂಟೂ ಕೊಟ್ಲು ಅಮ್ಮ. ಒಂದೆಂಟು ತಿಂಗ್ಳಾಗಿತ್ತೇನೋ ವಂದಿನ ರೇಲ್ವೆಹಳಿತಾಗೆ ಅಮ್ಮನಿಗೆ ಕಾಣಿಸ್ಕಂಡ್ಲಂತೆ.. ಅಮ್ಮ ಈ ಕಡಿಯಿಂದ ದಾಟಿ ಆ ಕಡಿಗೆ ವೊಗತ್ಗೆ ಮರೆ ಆಗ್ಬಿಟ್ಲಂತೆ. ಸರೋತ್ತಿನ್ತನ್ಕ ವುಡುಕ್ಯಾಡಿ ಬಂದ್ಲು ಅಮ್ಮ ಅವತ್ತು. ಅಕೀದು ಪತ್ತೇನೆ ಇಲ್ಲಂತ್ ಸರ್. ಅದಾಗಿ ಮೂರ್ತಿಂಗ್ಳಿಗೆ ನಮ್ ಓಣಿಯರೊಬ್ರು ಬಂದು ನಿಮ್ಮ ಮಗ್ಳು ಯಳೇಮಗಿನಕ್ಕೆಂಡು ಅಂಡರ್ಬ್ರಿಡ್ಜತ್ರ ಫುಟ್‌ಪಾತ್ನಗೆ ಬಿಕ್ಸೆ ಬೇಡ್ತಿದ್ಲು ಬೆಳಿಗ್ಗೆ ಅಂತ ಯೇಳಿದ್ರು. ಎದ್ದೋ ಬಿದ್ದೋ ಅಂತ ಮನಿಮಂದ್ಯಲ್ಲಾ ವೋಡಿದ್ವಿ. ನಾವೊಗವತ್ಗೆ ಅಲ್ಯಾರೂ ಇರ್ಲಿಲ್ಲ. ಅದೇ ಕೊನಿ ಸರ್ ಆಮ್ಯಾಲಿಂದ ಆಕಿ ಸುದ್ದೀನೇ ಇಲ್ಲ. ಅದಕ್ಕೆ ಅವಾಗಿಂದ ನಮ್ಮಮ್ಮಗೆ ನಮ್ಮೂ ವರಗೆ ಕಳ್ಸಕೆದ್ರಿಕಿ...'

ಒಳಗಿಂದೆಲ್ಲಾ ಖಾಲಿ ಆದಂತೆ ಅನಿತಾ ಸುಮ್ನೆ ಕೂತ್ಬಿಟ್ಟಳು ಅಷ್ಟು ಹೇಳಿ. ನನಗೇನಾದ್ರೂ ಬಿಸಿ ಬೇಕನಿಸಿ ಹೋಗಿ ಟೀ ಮಾಡಿ ತಂದೆ. ಕುಡಿದು ಮುಖ ಕಿವುಚಿದ ಮನು. ಯಾಕೆ ಅನ್ನುವಂತೆ ಅವನತ್ತ ನೋಡಿದೆ. ಯಾಕೋ ಬಾಯೆಲ್ಲಾ ಕಹಿ ಅಂದ. ಇಷ್ಟು ಗಂಭೀರವಾಗಿ ಅವ್ನಿದ್ದದ್ದು ಮೊದಲ ಬಾರಿಗೆ ನೋಡ್ತಿದ್ದೆ ನಾನು.

ಅದುವರೆಗೂ ಸುಮ್ಮನಿದ್ದ ಗೋಪಾಲ್ 'ಎಷ್ಟು ದಿವಸಂತ ಹೀಗೆ ಇರ್ತೀಯಮ್ಮಾ' ಅಂತ ಕೇಳಿದ್ರು.

'ಗೊತ್ತಿಲ್ಲ ಸರ್' ಅಂದ್ಲು ತಲೆ ತಿರುವುತ್ತಾ.

'ಹೌದು ನಾಳೆ ಏನಾದ್ರೂ ಹೆಚ್ಚುಕಮ್ಮಿ ಆದ್ರೆ...? ಅವ್ನಿಂದೇನಾದ್ರೂ ತೊಂದ್ರೆಗಿಂದ್ರೆ ಆದ್ರೆ ಏನ್ಮಾಡ್ತೀ...?' ಗೋಪಾಲ್ ಮತ್ತೆ ಕೇಳಿದ್ರು.

'ತೊಂದ್ರೆ ಯಾಕ್ಮಾಡ್ತತೆ ಸರ್ ಸುಮ್ ಸುಮ್ನೆ..? ನಾನೇನು ಮೋಸ ಮಾಡಲ್ವಲ್ಲಾ...? ಮತ್ ನನಿಗೇನು ಯಚ್ಚುಕಮ್ಮಿ ಆಗತ್ತೇ ಸರ್. ಆತ್ನೆ ಯಚ್ಚುಕಮ್ಮಿ ಆಗ್ಬೇಕಟೆ. ಆಗ್ಲೇ ಐವತ್ತೊರ್ಷ ಮ್ಯಾಲಾಗೈತೆ. ಇನ್ನೆಷ್ಟು ದಿನ ಬದುಕೀತು. ವಂದ್ವೇಳೆ ಬದುಕಿದ್ರೂ ನನ್ನೇನು ಮಾಡಂಗೈತೆ. ನಾನೇನು ಆತ ಕಟ್ಕಂಡಿರ ಯೆಣ್ತಿ ಅಲ್ವಲ್ಲಾ ಕಟ್ಟಾಕಕೆ'

ಅಂತ ಒಳ್ಳೆ ಜಬರದಸ್ತಿನಿಂದಲೇ ಅನಿತ ಹೇಳಿದಾಗ ಅವಳ ಮನೋಭಾವ, ಅವಳ ಧೈರ್ಯ ನನಗೊಂಥರ ಗಾಬರಿ ಹುಟ್ಟಿಸಿದವು ಯಾಕೋ.

'ಅದೇನೋ ಸರಿ ಬಿಡು ಆಯ್ತು. ಈ ವಿಷ್ಯ ಯಾರ್ಗೂ ಗೊತ್ತಿಲ್ವಾ...?' ಮನು ಕೇಳ್ದ.

'ಇಲ್ಲ ಅಂತ ನಾವಂದ್ಕಂಡಿದೀವಿ ಸರ್ ಯಾರಿಗೊತ್ತು...?' ಅಂದ್ಲಾಕೆ ಅದೇ ತಣ್ಣನೆ ದನಿಯಲ್ಲಿ.

ಯಾರಾದ್ರೂ ಎಂಥವರಾದ್ರೂ ಒಮ್ಮೆ ಮೈ ಕೊಡವಿ ಗಾಬರಿಗೊಳ್ಳುವಂಥ ಅಸಹ್ಯಿಸಿ ಕೊಳ್ಳುವಂಥ ಸಂಗತಿಯನ್ನು ಆಕೆ ಅರಗಿಸಿಕೊಂಡಿರುವ ರೀತಿಯೇ ಒಂದು ವಿಸ್ಮಯ. ಏನನ್ನಾದರೂ ಮಾಡಿಸಿ, ಎಲ್ಲಾನೂ ಕಲಿಸಿ ಯಾವುದನ್ನ ಬೇಕಾದ್ರೂ ಅರಗಿಸಿಕೊಳ್ಳು ವಂಥ ಗುಣ ಈ ಬಡತನಕ್ಕಲ್ಲದೆ ಬೇರೆಲ್ಲಿದ್ದೀತು ಅಂದುಕೊಂಡೆ ನಿಟ್ಟುಸಿರಿಟ್ಟು.

'ಅದೇನೋ ಸರಿ ನಾಳೆ ನಿನ್ನ ಯಾರು ಮದ್ವೆ ಆಗ್ತಾರೆ ಹೀಗಾದ್ರೆ..?' ಮನು ಹೇಳಿದ ಅವನ ದನಿಯಲ್ಲಿ ನಿಜಕ್ಕೂ ಕಳಕಳಿಯಿತ್ತು.

'ಮದ್ವೆ ಆಗದೊಂದೇ ಉದ್ದೇಶ ಏನ್ಸಾರ್ ಜೀವ್ನಕ್ಕೆ....?' ಅವನಿಗೇ ಮರುಪ್ರಶ್ನೆ ಹಾಕಿದಳು ಅನಿತ. ಮನು ಅಂತ ಮನುನೇ ತಡವರಿಸಿದ ಮಾತಿಗೆ.

'ಮದ್ವೆ ಆಗಕೇ ಅಂತ ನಾನು ಶುದ್ಧವಾಗಿದ್ದು, ಮನೆಕೆಲ್ಸ ಮಾಡ್ಕಂಡು, ಒಂದು ಇನ್ನೂರ್ಗೋ ಮುನ್ನೂರ್ಗೋ ಕತ್ತೆ ಚಾಕರಿ ಮಾಡ್ಕಂಡಿದ್ರೆ ನಂದೂ ನಮ್ಮಮ್ಮನ ಕಥೇನೇ ಆಗ್ತೈತಿ ಸರ್. ಕೊನಿಗೆ ಯಾವನನ ಒಬ್ಬ ಕೂಲಿನೋ ಹಮಾಲಿನೋ ಕುಡುಕನೋ ಜೂಜುಕೋರನೋ ನನ್ನ ಗಂಡ ಆಗ್ತಾನೆ. ಒಂದೈದಾರು ಮಕ್ಳೂ ಆಗ್ತವೆ. ಅಷ್ಟಕ್ಕೆ ನಾನುಟ್ಟಿದ್ದು ಸಾರ್ಥಕಾತು ಅಂತ ಪಡಬಾರ್ದು ಪಾಡ್ಪಟ್ಟು ಜೀವ್ನಯಿಡೀ ನರಕದಾಗೆ ಕೊಳೆಯಕೆ ನನಗಿಷ್ಟ ಇಲ್ಲ ಸರ್. ನಾನೋದ್ತೀನಿ ಸರ್. ಅಷ್ಟಕ್ಕೂ ನಾನು ಈಗ ಮಾಡ್ತಿರದ್ನ ಮದ್ವೆಯಾದ್ಮೇಲೂ ಮಾಡದಲ್ವಾ ಸರ್ ಏನು ವ್ಯತ್ಯಾಸ...?'

ಅಂದು ನಮ್ಮೊಳಗೊಂದು ಸಮರವನ್ನೇ ಸಾರಿ ತಾನು ಮಾತ್ರ ಶಾಂತವಾಗಿ ಕೂತು ಬಿಟ್ಟಳಾಕೆ.

ಮದುವೆ ಮತ್ತು ಅದಕ್ಕೆ ಬೇಕಾದ ಹೊಂದಾಣಿಕೆಯನ್ನೇ ಗುರಿಯಾಗಿಟ್ಕಂಡು ಹೆಣ್ಣು ಜನ್ಮ ತಾಳಿದ ಕ್ಷಣದಿಂದ ಅದಕ್ಕೇ ತಕ್ಕನಾದ ನಡೆನುಡಿ, ಓದುಬರಹ, ಸಂಸ್ಕಾರದಿಂದ ಆಕೆನ ಕಡೆದು ಕೆತ್ತುವ ಒಪ್ಪಿತ ರೂಢಿತ ವ್ಯವಸ್ಥೆಗೆ ಎದುರಾಗಿ ನಿಂತಿದ್ದಳಾಕೆ. ಈ ವಯಸ್ಸಿಗೇ ಇವಳಲ್ಲಿ ಈ ಗಟ್ಟಿತನ ಒಟ್ಟಾಗಿ, ಮೈಗೂಡಿಕೊಳ್ಳುವ ನಿಟ್ಟಿನಲ್ಲಿ ಈಕೆ ಒಳಗೊಂಡಿರ ಬಹುದಾದ ಸಂಘರ್ಷ ನಡೆಸಿರಬಹುದಾದ ಹೋರಾಟ ಕಲ್ಪನೆಗೂ ನಿಲುಕದ್ದು.

ಹೌದು, ದಿನಬೆಳಗಾದರೆ ಬಡವರಿಗೆ ಉಚಿತ ಶಿಕ್ಷಣ, ಎಲ್ಲರಿಗೂ ಶಿಕ್ಷಣ ಕಡ್ಡಾಯ ಅಂತ ಸಂಬಂಧಪಟ್ಟವರೆಲ್ಲ ಬಡ್ಕಂತನೆ ಇರ್ತರೆ. ಅವರುಗಳಿಗೆ ಇಂಥವರೇಕೆ ನಿಲುಕುವುದಿಲ್ಲ. ಸಹಜವಾಗಿ ಸಿಗಬೇಕಾದ್ದನ್ನ ಪಡೆಯೋಕೆ ಎಳೆಯ ಜೀವವೊಂದು ಹೀಗೆ ನಲುಗಿ ವಿಲವಿಲ ಒದ್ದಾಡುವ ಪರಿಸ್ಥಿತಿಗೆ ಏನು ಹೊಣೆ? ಯಾರು ಹೊಣೆ? ಯೋಚಿಸುತ್ತಲೇ ಮನಸೊಂದು ನಿರ್ಧಾರಕ್ಕೆ ಬರುತ್ತಿತ್ತು. ಹೇಳಬೇಕೆನ್ನುವಷ್ಟರಲ್ಲಿ ಮನು ನನ್ನತ್ತ ಬಾಗಿ ಕಿವಿಯೊಳಗೆ.

'ನಮ್ಮ ಅನುಕಂಪ ಉಪದೇಶ ಯಾವ್ದುಕ್ಕೂ ಅವಕಾಶನೇ ಇಲ್ದಂಗೆ ಇದೆಯಲ್ಲಾ ಇವ್ಳ ಮಾತುಕತೆ..... ಸ್ವಲ್ಪನಾದ್ರೂ ಗೊಂದಲ ಗಲಿಬಿಲಿ ಇದ್ದಿದ್ರೂ ನಾಲ್ಕು ಮಾತು ಹೇಳ್ಬಹುದಿತ್ತು. ಹೋಗ್ಲಿ ಸ್ವಲ್ಪ ಅಳುಕು ಭಯ.... ಉಹೂಂ ಅದೂ ಇಲ್ಲ. ಪ್ರಶ್ನೇನು ಹಾಕಿ ಉತ್ತರನೂ ಅವಳೇ ಹೇಳ್ತಿದ್ದಾಳೆ..' ಅಂತ ಪಿಸುಗುಟ್ಟಿದ.

'ಮನು ಅವ್ಳು ಪ್ರಜ್ಞೆಯಿಟ್ಕಂಡೇ ಎಲ್ಲಾ ಮಾಡ್ತಿದಾಳೆ ಪ್ರಜ್ಞೆ ಕಳ್ಕಂಡಲ್ಲ. ಮತ್ತೆ ಯಾಕ್ಮಾಡ್ತಿದಳೆ, ಆಕಿಗೇನ್ ಬೇಕು ಅದರ ಸ್ಪಷ್ಟ ಅರಿವೂ ಇದೆ ಎಚ್ಚರಿಕೇನೂ ಇದೆ. ಅದಕ್ಕೆ ಅಲ್ಲಿ ಯಾವ ಕನ್‌ಫ್ಯೂಷನ್ನು ಇಲ್ಲ ಕನ್‌ಫೆಷನ್ನೂ ಇಲ್ಲ...' ಅಂದು.

'ನನ್ಜೊತೆ ಬಂದು ಇರ್ತಿಯಾ ನೀನು' ಅಂತ ಕೇಳ್ದೆ ಅನಿತನ್ನ..

'ಏನಂದ್ರಿ ಮಿಸ್...! ನಿಜವಾಗ್ಲೂ....! ನಿಜವಾಗ್ಲೂ ಇಟ್ಗಂತೀರ ಮಿಸ್..' ಕಣ್ಣರಳಿಸಿ ಎದ್ದು ಓಡಿ ಬಂದು ನನ್ನ ಕೈ ಹಿಡಿದು ಸಣ್ಣ ಹುಡುಗಿಯಂತೆ ಮುದ್ದಾಗಿ ಕೇಳಿದಳಾಕೆ.

ಈಗ ಬೇರೆಯೇ ಅನಿತನ್ನ ನೋಡುತ್ತಿದ್ದೆ ನಾನು. ಒಮ್ಮೆಲೆ ಕಣ್ಣಲ್ಲಿ ಆ ಎಳೆತನ..! ಜೀವಸಂಚಾರವಾದಂತೆ ದೇಹದಲ್ಲಿ ಲವಲವಿಕೆ. ಮಾತಲ್ಲಿ ಮುಗ್ಧತೆ,

'ಮಿಸ್, ಕವಿತ ಅಂತ ಇನ್ನೊಬ್ಳು ತಂಗಿಯಿದಳೆ. ತುಂಬಾ ಚೂಟಿ ಮಿಸ್. ನನಗಿಂತಲೂ ಜಾಣೆ. ನೋಡಕೂ ತುಂಬಾ ಚೆನ್ನಾಗಿದ್ದಾಳೆ. ಬೆಳ್ಳಗಿದ್ದಾಳೆ. ತುಂಬಾ ಒಳ್ಳೆವ್ಳು ಮಿಸ್ ನೀವೆಂಗೇಳ್ತೀರೋ ಹಂಗ್ಕೇಳ್ತಾಳೆ. ಮಿಸ್ ಅವ್ಳನಾ....'

ಅಂದು ಮಾತು ನಿಲ್ಲಿಸಿ ನನ್ನ ಮುಖ ನೋಡಿದಳು. ಅದುವರೆಗೂ ಕಾಣದ ದೈನ್ಯತೆ ಇತ್ತು ಆ ನೋಟದಲ್ಲಿ. ಮಾತು ಅಷ್ಟೇ ಮೆದು. ಅವಳ ಇಂಗಿತ ನಾನರಿತೆ. ಅವಳ ಬಗ್ಗೆ ಒಮ್ಮೆಲೇ ಎಲ್ಲಿಲ್ಲದ ಅಕ್ಕರೆ, ಗೌರವ ಉಕ್ಕಿ ಬಂದವು ನನ್ನಲ್ಲಿ.

'ಅಮ್ಮನತ್ರ ಮಾತಾಡು ನೀನ್ಯಾವಾಗ ಬೇಕಾದ್ರೂ ಕರ್ಕಂಡು ಬಾ...' ಅಂದೆ.

'ನೋ ನೋ ನೋ....' ಅಂತ ಮನು ಮಧ್ಯೆ ಪ್ರವೇಶಿಸಿದ.

'ಅಪ್ಪ, ಅಮ್ಮ ಹಳ್ಳೀಲಿ ಇಬ್ರೆ ಇರ್ತಾರೆ. ಅಪ್ಪ ತೋಟಕ್ಕೋದ್ರೆ ಅಮ್ಮ ಒಬ್ಳೆ. ಅಮ್ಮನ್ಜತೆ ಕವಿತ ಇರ್ತಾಳೆ. ಮನೆಯದುರ್ಗೆ ಶಾಲೆನೂ ಇದೆ. ಅಲ್ಲೇ ಕಲೀತಾಳೆ. ಡನ್ನಾ...' ಅಂದ ಹೆಬ್ಬೆಟ್ಟೆತ್ತಿ.

'ಓ ಡನಾಡನ್' ಅಂತ ಜೋರಾಗಿ ಚಪ್ಪಾಳೆ ತಟ್ಟುತ್ತಾ 'ಏನನಿತಾ..?' ಅಂತ ಅವಳ ಕಡೆ ತಿರುಗಿದೆ.

ಅವಳು ಓಡಿಬಂದು ಸಣ್ಣ ಮಗುವಂತೆ ನನಗೆ ತೆಕ್ಕೆ ಬಿದ್ದಳು.

'ಮತ್ತೆ ನೀನು....?' ಅಂದೆ.

'ಇಲ್ಲ ಮಿಸ್ ನಂದೇನ್ ತಲಿ ಕೆಡಿಸ್ಕಾಬ್ಯಾಡ್ರಿ ನಾನ್ ಮನಿ ಬಿಟ್ ಇರಕೆ ಬರಂಗಿಲ್ಲ ಮಿಸ್. ನೀವೆ ನೋಡಿರಲ್ಲ ನಮ್ಮನಿ ಪರಿಸ್ಥಿತಿ. ಮತ್ ನಾಗರಾಜಪ್ಪನ ಯೇಣ್ತೀನೂ ನಾನೆ ನೋಡ್ಬೇಕು. ಮಿಸ್ ನೀವು, ಸರ್ರು ನನ್ ಜತಿಗೆ ಇರ್ತಿರಲ್ಲ ಮಿಸ್....?'

ಅಂತ ಸಣ್ಣ ಮಗುವಂತೆ ನನ್ನ ಕೊರಳು ತಬ್ಬಿ ಮುದ್ದಾಗಿ ಆಕೆ ಕೇಳಿದಾಗ ಉಕ್ಕಿ ಬಂದ ಅಳುವನ್ನು ಕಷ್ಟಪಟ್ಟು ತಡೆದು ಮಾತಾಡದೆ ಬಿಗಿಯಾಗಿ ಅವಳನ್ನ ನನ್ನೆದೆಗವಚಿಕೊಂಡು ಮನುವಿನತ್ತ ನೋಡಿ

'ಹ್ಯಾಟ್ಸ್ ಆಫ್' ಅಂದೆ ಸನ್ನೆಯಲ್ಲೇ.

ಅವನು ಕಣ್ಣಂಚಲಿ ಜಿನುಗಿದ ನೀರು ಒರೆಸುತ್ತ ನಗುತ್ತ 'ಗ್ರೀನ್ ಪಾರ್ಕ್...' ಅಂತ ಪಿಸುಗುಟ್ಟಿದ.

✦ ✦

ಆಶ್ರಿತರು

ಬಹಳ ಶಾಂತವಾಗಿ, ಸಾವಧಾನದಿಂದ ಒಂದೇ ಗತಿಯಲ್ಲಿ ಚಲಿಸುತ್ತಿತ್ತು. ಆದಿತ್ಯರನ್ನು ಹೊತ್ತ ಆ ಕಾರು! ಏರಿಳಿತ ಚೂರೂ ಇರಲಿಲ್ಲ. ಈ ಹಿಂದೊಮ್ಮೆ ಆದಿತ್ಯ ಅವರು ಹಳ್ಳಿಯಿಂದ ಬಂದ ಮರುದಿನ ಹಾಗೇ ಸುಮ್ಮನೇ ಒಂದು ಸುತ್ತು ಊರು ಸುತ್ತಲು ಎಂದು ಹೀಗೆ ಇದೇ ಕಾರಲ್ಲಿ ಹೋದ ದಿನ ಹೀಗಿರಲಿಲ್ಲ. ಆಗ ಎಷ್ಟೊಂದು ಅಸಹನೆ, ಅಸಡ್ಡೆ, ಅಸಮಾಧಾನ ಪ್ರತಿ ತಿರುವಿನಲ್ಲೂ. ಜೊತೆಗೆ ಮೊಬೈಲ್ ಭರಾಟೆ, ಒದರು ದನಿಯಲ್ಲಿ ಸಂಭಾಷಣೆ, ಅದರೊಟ್ಟಿಗೆ ಎಫ್ ಎಮ್‌ನಲ್ಲಿ ಬರುವ ಅರ್ಥವಾಗದ, ಬರೀ ಶಬ್ದ ಮಾಡುವ ಆರ್ಭಟದ ಸಂಗೀತ! ಆದಿತ್ಯ ಮೆದುಳೆಲ್ಲಾ ಕಲಸಿ ಹೋಗಿತ್ತಂದು.



ತನಗೀ ಗದ್ದಲ ಆಗುತ್ತಿಲ್ಲ ಎಂದು ತಿಳಿಸುವ ಪ್ರಯತ್ನ ಮಾಡಿದ ಮೇಲಂತೂ ಅದು ಮತ್ತಷ್ಟು ಇನ್ನಷ್ಟು ಗಟ್ಟಿಗೊಳ್ಳುತ್ತಾ, ಅಧಿಕ ವಾಗುತ್ತಾ ಸಾಗಿದಾಗ ಅವರು ಅದಕ್ಕೆ ಹೊಂದಿಕೊಳ್ಳುವ ಪ್ರಯತ್ನದತ್ತ ಗಮನ ಹರಿಸಿದ್ದರು.

ಅದೇ ವಾಸ್ತವ ಎಂದು ಒಪ್ಪಿಕೊಂಡ ಅವರನ್ನು ಇವತ್ತಿನ ಶಾಂತತೆ, ನಿಶ್ಯಬ್ಧ ಗಾಢ ಚಿಂತೆಯಲ್ಲಿ ಮುಳುಗಿಸಿತ್ತು. ಮೈಯಲ್ಲಿ ತ್ರಾಣವಿರದ ಕಾರಣ ಮಾತು ಹೊರಡುತ್ತಿರಲಿಲ್ಲ. ಆದರೆ ಮನಸ್ಸು ಸುಮ್ಮನಿರದಾಯಿತು. ಅಧೈರ್ಯವೊಂದು ಜೀವನದಲ್ಲಿ ಮೊದಲ ಬಾರಿಗೆ ಆದಿತ್ಯರನ್ನು ಮುಟ್ಟಿ ಮುಟ್ಟಿ ನೋಡುತ್ತಿತ್ತು. ಕಷ್ಟಪಟ್ಟು ಕಣ್ಣಗಲಿಸಿ ಯಾರು ಕಾರನ್ನು ಓಡಿಸುತ್ತಿದ್ದಾರೆಂದು ನೋಡುವ ಪ್ರಯತ್ನ ಮಾಡಿದರು. ಅಸ್ಪಷ್ಟವಾಗಿ ಕಾಣಿಸಿದರೂ ಅವನಾರೆಂಬುದು ಸ್ಪಷ್ಟವಾಗಿ ಇನ್ನಿಲ್ಲದ ಚಡಪಡಿಕೆ, ತಳಮಳ..... ಅಲ್ಲಿದ್ದ ನಿಶ್ಯಬ್ದ ಗಾಢ ವಿಷಾದವನ್ನು ಪ್ರಕಟಿಸುತ್ತಿರುವಂತಿತ್ತು. ಮೈಯೊಮ್ಮೆ ಅದುರಿ, ಹಾಗೇ ಪ್ರಜ್ಞೆ ತಪ್ಪಿದರು.

ಆದಿತ್ಯರನ್ನು ಇಷ್ಟೊಂದು ಅಧೀರಗೊಳಿಸಿದವ ಬೇರಾರು ಅಲ್ಲ. ಅವರ ಮೊಮ್ಮಗ ವೀರು. ಬಿಬಿಎಂ ಮುಗಿಸಿದ್ದ ಅವನು ಓದು ಮುಂದುವರಿಸುವ ಇಚ್ಛೆ ಇರದೆ, ನೌಕರಿ ಮಾಡುವ ಮನಸ್ಸೂ ಇಲ್ಲದೇ, ಅಪ್ಪ ಮಾಡಿಟ್ಟ ಹಣದ ಸದುಪಯೋಗ ಮಾಡಿಕೊಳ್ಳುತ್ತಿದ್ದ. ತನ್ನ ಸಮಾನ ಮನಸ್ಸಿನ ಗೆಳೆಯ ಗೆಳತಿಯರೊಟ್ಟಿಗೆ ಅವನ ಭಾಷೆಯಲ್ಲಿಯೇ ಹೇಳುವುದಾದರೆ ಚಿಂದಿ ಉಡಾಯಿಸುತ್ತಿದ್ದ! ತುಂಬಾ ಅನುಭವಸ್ಥ. ಎಲ್ಲಾ ಸುಖಭೋಗಗಳ ವಿಷಯದಲ್ಲಿ.

ಯಾರ, ಯಾವುದರ ಪರಿವೆಯೂ ಇಲ್ಲದೇ ಜೀವನವನ್ನು ಎಂಜಾಯ್‌ಮೆಂಟ್ ಎಂದುಕೊಂಡು ಏನೇ ಮಾಡುವುದಿದ್ದರೂ ವಿದೇಶದಲ್ಲಿಯೇ ಎಂದು ಭಾವಿಸಿದ್ದ ನವ ಯುವಕ. ವೈಪರೀತ್ಯವೆಂದರೆ ಅವನ 24ನೇ ವಯಸ್ಸಿನಲ್ಲಿ ಇದೇ ಮೊದಲ ಬಾರಿಗೆ ತನ್ನ ತಾತನನ್ನು ನೋಡುತ್ತಿದ್ದುದು. ತಂದೆ ಮಲ್ಲೇಶನ ಅಪ್ಪ ಆದಿತ್ಯ. ಆದರೆ ಅವನ ಪಾಲಿಗೆ ಹಳ್ಳಿಯಲ್ಲಿ ಹೊಲ ಹೊಡೆಯುತ್ತಿದ್ದ 'ಸಿಲ್ಲಿ ಓಲ್ಡ್ ಮ್ಯಾನ್!'

ಮರುದಿನ ಮುಂಜಾನೆ ಆದಿತ್ಯರಿಗೆ ಪ್ರಜ್ಞೆ ಮರಳಿತು. ದೊಡ್ಡ ಡಾರ್ಮೆಂಟರಿಯೊಂದರ ನಡುವಿನ ಮಂಚದ ಮೇಲೆ ಮಲಗಿದ್ದರವರು. ಸುತ್ತಲೂ ಅವರದೇ ರೀತಿಯಲ್ಲಿ ಇರುವ ಗಂಡಸರು. ಅಳು, ನಗು, ನರಳಾಟ. ಆದರೆ ಅವರಿಗದರ ಅರಿವಿರಲಿಲ್ಲ. ಕೋಣೆಯ ಸೀಲಿಂಗ್‌ನಲ್ಲೇ ನೋಟ ನೆಟ್ಟು ಬಿದ್ದುಕೊಂಡಿದ್ದ ಆದಿತ್ಯ ತಮ್ಮ ಸುತ್ತಲಿನ ಗೊಂದಲ, ಗಲಿಬಿಲಿ, ಗದ್ದಲ ಗಮನಿಸದವರಂತೆ ತೋರುತ್ತಿದ್ದರು. ಹೊಸಬರು ಒಡನೆ ನೋಡಿದರೆ ಎಲ್ಲಾ ಕಳೆದುಕೊಂಡು ಗಾಢ ನಿಶ್ಚಿಂತೆಯಲ್ಲಿರುವ ಭಿಕಾರಿಯಂತೆ ಕಾಣುತ್ತಿದ್ದರು.

ಆದರೆ ವಿಷಯ ಅದಲ್ಲ. ಅವರು ಆಘಾತಗೊಂಡಿದ್ದರು. ಮೈ-ಮನಸ್ಸುಗಳೆರಡೂ ಗಾಯಗೊಂಡು ಘಾಸಿಗೊಂಡಿದ್ದವು. ತಳಬುಡವಿಲ್ಲದ ಪ್ರಪಾತದಲ್ಲಿ ಜೋಲುತ್ತಿರುವಂತೆ. ಒಮ್ಮೆ ಕಣ್ಣುಗಳು ಸರಿದವೋ ಒಡನೇ ತಿರುಗುತ್ತಿರುವ ಪಂಕದ ರೆಕ್ಕೆಗಳು ಅವರನ್ನು ಹಿಡಿದವು. ಅವುಗಳ ಸುತ್ತುವಿಕೆ ಅವರನ್ನು ವಾಸ್ತವಕ್ಕೆ, ಸರೀಕರ ಸಂಬಂಧಿಕರ ಲೋಕಕ್ಕೆಳೆದು ತಂದಿತ್ತು. ಚಿತ್ತದಾಳದಿಂದ ಝೇಂಕರಿಸುತ್ತಾ ದುಮ್ಮಿಕ್ಕಿದವು ನೆನಪಿನ ಪಾತ್ರಗಳು...

ಕಟ್ಟುಮಸ್ತಾಗಿ ಸದಾ ಲಾಠಿ ಹಿಡಿದು ಠಳಾಯಿಸುತ್ತಿದ್ದವರನ್ನು ಹೆಮ್ಮೆಯಿಂದ ನೋಡಿ ಶಹಬ್ಬಾಷ್ ಎನ್ನುತ್ತಿದ್ದ ಹತ್ತಿರದವರೆಲ್ಲರ ಕಣ್ಣುಗಳು, ಅವರು ಕಲಿಸುತ್ತಿದ ಪಾಠಶಾಲೆ, ಊರಿನವರೆಲ್ಲಾ ತೋರುತ್ತಿದ್ದ ಗೌರವ, ತನ್ನ ಬಾಳಸಂಗಾತಿಯಾಗಿ ಬಂದ ಮುದ್ದು ಮೆದು ರತ್ನ... ಧರೆಯ ಮೇಲಿನ ದೈವಗಳನ್ನೆಲ್ಲಾ ಪೂಜಿಸಿ, ಪ್ರಾರ್ಥಿಸಿ, ಬಗೆ ಬಗೆದು ಬೇಡಿ ಪಡೆದ ಏಕೈಕ ಕಂದನನ್ನ ಎದೆಗೊತ್ತಿಕೊಂಡ ರತ್ನ..

ಹಠಾತ್ತನೇ ಕೂಗಿದರು 'ರತ್ನಾ.... ರತ್ನಾ....' ಎಂದು. ಒಡನೆ ಪುನರ್ವಸತಿ ಕೇಂದ್ರದ ಸಿಬ್ಬಂದಿ ಮಮತಾ ಓಡೋಡಿ ಬಂದು

'ತಾತಾ..... ಏನಾಯ್ತು.....? ಸಮಾಧಾನ ಮಾಡಿಕೊಳ್ಳಿ. ಏನಾದ್ರೂ ಬೇಕಾ?' ಎಂದು ಕೇಳಿ ಅರ್ಧ ಲೋಟ ಹಣ್ಣಿನ ರಸ ಕುಡಿಸಿದರು.

ಸ್ವಲ್ಪ ಚೇತರಿಕೆ ಕಂಡಿತು. ಸತತವಾಗಿ ನಾಲ್ಕು ದಿನ ಅವರಿಗೆ ಗ್ಲೂಕೋಸ್ ಏರಿಸಿ, ಮೈಮೇಲಿನ ಗಾಯಗಳಿಗೆಲ್ಲಾ ಪಟ್ಟಿ ಹಾಕಿ ಉಪಚಾರ ಮಾಡಿದ ಮೇಲೆಯೇ ಪ್ರಜ್ಞೆ ಮರುಕಳಿಸಿದ್ದು. ಆದರೆ ಮತ್ತೆ ಮತ್ತೆ ಪ್ರಜ್ಞೆ ತಪ್ಪುತ್ತಿದ್ದರಾದ್ದರಿಂದ ಅವರನ್ನು ಯಾರೂ ಇದುವರೆಗೂ ಮಾತನಾಡಿಸಿರಲಿಲ್ಲ.

ಇಂದು ಎಂದಿಗಿಂತಲೂ ವಾಸಿ. ಅದನ್ನು ಗಮನಿಸಿ ಅಲ್ಲಿನ ಸ್ವೀಕೃತ ಅಧಿಕಾರಿ ರಮಾ ಒಂದು ಪುಸ್ತಕ ಪೆನ್ನು ಹಿಡಿದು ಬಂದು, ಅವರ ಪಕ್ಕ ಕುಳಿತುಕೊಂಡು ಅವರನ್ನು ಒಮ್ಮೆ ದೀರ್ಘವಾಗಿ ನೋಡಿದಳು.

ಅವತ್ತು ಆಗ ತಾನೇ ಎಂದಿನ ಡ್ಯೂಟಿ ಮುಗಿಸಿ, ವಿಚಾರಣೆ ಮಾಡಿ, ಹೆಂಗಸರನ್ನು ಅವರ ಡಾರ್ಮೆಂಟರಿಗೆ, ಗಂಡಸರನ್ನು ಅವರ ಡಾರ್ಮೆಂಟರಿಗೆ ಕಳಿಸಿ, ಚಾರ್ಜ್‌ಶೀಟ್ ರೆಡಿ ಮಾಡಿ ಏಳುವವಳಿದ್ದಳು. ಆದಿತ್ಯನಿದ್ದ ಕಾರು ಪುನರ್ವಸತಿ ಕೇಂದ್ರದೆದುರು ಬಂದು ನಿಂತಿತ್ತು. ಸುಮಾರು 24–25ರ ಯುವಕನೊಬ್ಬ ಬಟ್ಟೆಗಳಿದ್ದ ಒಂದು ಕವರ್ ಹಿಡಿದು ಬಂದು ಪೊಲೀಸರಿಂದ ಎಂದು ಹೇಳಿ ಲೆಟರ್ ಕೊಟ್ಟು ತನ್ನೊಡನಿರುವ ವೃದ್ಧರನ್ನು ಪುನರ್ವಸತಿ ಕೇಂದ್ರಕ್ಕೆ ಸೇರಿಸಿಕೊಳ್ಳಬೇಕು ಎಂದಿದ್ದ.

ಅರೆ ಪ್ರಜ್ಞಾವಸ್ಥೆಯಲ್ಲಿದ್ದು, ಬಟ್ಟೆಯಲ್ಲಾ ಮಾಸಿ, ಹೊಲಸು ಮೆತ್ತುಕೊಂಡು, ಕೂದಲೆಲ್ಲಾ ಕೆದರಿ, ಗಬ್ಬು ನಾರುತ್ತಿದ್ದ ಈ ಮುದುಕರನ್ನು ಆ ಹುಡಗನೊಡನೆ ಬಂದ ಮತ್ತೊಬ್ಬ ಗಂಡಸು ಮೆಲ್ಲನೆ ಎತ್ತಿಕೊಂಡು ಬಂದು ಒಳಗೆ ಮಲಗಿಸಿದ್ದ. ರಮಾ ಕೇಳಿದ್ದಳು ಆ ಹುಡುಗನನ್ನು

'ಎಲ್ಲಿ ಸಿಕ್ಕರು?'

'ನಮ್ಮನೆ ಹತ್ತಿರ ಮೋರಿಯ ಬಳಿ ಭಿಕ್ಷೆ ಬೇಡುತ್ತಿದ್ದರು. ಇಂದು ಬೆಳಿಗ್ಗೆ ಅಲ್ಲಿಯೇ ಪ್ರಜ್ಞೆ ತಪ್ಪಿ ಬಿದ್ದಿದ್ದರು.' ಹುಡುಗನೆಂದ.

'ಪೊಲೀಸ್ ಯಾಕೆ ಬರಲಿಲ್ಲ? ಅವರಿಲ್ಲದೇ ಸೇರಿಕೊಳ್ಳುವಂತಿಲ್ಲ' ಅನ್ನುವ ಹೊತ್ತಿಗೆ ಅಧೀಕ್ಷಕರ ಫೋನ್,

ಇನ್ನೇನು ಕೇಳುವ ಪ್ರಶ್ನೆಯೇ ಇರಲಿಲ್ಲ. ರಮಾಳ ಕೈಗೆ ಕವರ್ ಕೊಟ್ಟು ಹೊರಟು ಹೋಗಿದ್ದ ಅವನು. ಆ ಮುದುಕರನ್ನು ಪೂರಾ ಸ್ವಚ್ಛಗೊಳಿಸಿ ನೀಟ್ ಮಾಡಿ,

ರೆಡಿಗೊಳಿಸಿದಾಗ ರಮಾಗೆ ಇವರು ಖಂಡಿತಾ ಭಿಕಾರಿಯಾಗಿರಲಾರರು ಎನಿಸಿತ್ತು. ಆದರೆ ಬಟ್ಟೆಯ ಕವರಿನಲ್ಲಿಟ್ಟಿದ್ದ ಚಿಲ್ಲರೆಯ ಗಂಟು ಅನುಮಾನಾಸ್ಪದವಾಗಿತ್ತು.

'ರತ್ನಾ....' ಮತ್ತೆ ಆದಿತ್ಯ ಕರೆದಾಗ ರಮಾ.

'ಸರ್, ನೀವು ಬೇಗ ಹುಷಾರಾಗ್ಬೇಕು. ಹೊಟ್ಟೆಗೇನಾದರೂ ತಗೊಳ್ಳಿ ಮೊದಲು' ಅಂದು ಮಮತಾಳಿಗೆ ಸನ್ನೆ ಮಾಡಿದಳು.

'ನಿಮಗೊಂದಿಷ್ಟು ಪ್ರಶ್ನೆಗಳಿವೆ ಸಾರ್ ದಯವಿಟ್ಟು ಉತ್ತರಿಸಿ' ಎಂದು.

'ನಿಮ್ಮ ಊರು ಯಾವುದು?' ಎಂದು ಕೇಳಿದಳು.

'ಮದ್ದಿಕೆರೆ....' ಎಂಬ ಉತ್ತರ ಬಂತು ಪ್ರಪಾತದಿಂದ ಬಂದಂತೆ.

'ನಿಮ್ಮೋರು ಇಲ್ಲಿ ಯಾರಾದರೂ ಇದ್ದಾರಾ ಸಾರ್?' ಮತ್ತೆ ಮೌನ. ರಮಾ ಅದನ್ನೇ ಪುನಃ ಕೇಳಿದಳು.

'ಎಲ್ಲಾ ಅವತ್ತೇ ಸತ್ತೋದ್ರಲ್ಲಮ್ಮಾ' ಉದ್ವೇಗವಿಲ್ಲದ ಆಳದ ಮಾತು.

ಆದಿತ್ಯರ ಕೈ ಮೆಲ್ಲನೆ ಅದುಮಿದಳು ರಮಾ.

'ನನ್ನ ರೆಕಾರ್ಡ್‌ಗೆ ಸತ್ಯಾಂಶಗಳು ಬೇಕು ಸಾರ್' ಕೊಂಚ ಮೌನದ ನಂತರ ಬಂತು ಮಾತು

'ಅವತ್ತು ಡ್ರೈವ್ ಮಾಡ್ಕೊಂಡು ನನ್ನ ಕರ್ಕೊಂಡು ಬಂದ್‌ನಲ್ಲಾ ಅವನು ನನ್ನ ಮೊಮ್ಮಗ. ನನ್ನ ಒಬ್ಬನೇ ಮಗನ ಒಬ್ಬನೇ ಮಗ...!

ಮಾತು ಅಲ್ಲಿಗೇ ಮುಗಿಯಿತು. ಅವರು ಮತ್ತೆ ಕಣ್ಣು ಮುಚ್ಚಿದರು. ಮಮತಾ ತಂದ ಅನ್ನ ಸಾರು ಎಷ್ಟೇ ಪ್ರಯತ್ನಿಸಿದರೂ ತಿನ್ನಿಸಲಾಗಲಿಲ್ಲ.

ಮುಚ್ಚಿದ್ದ ಕಣ್ಣೊಳಗಿನ ತೆರೆ ಪಕ್ಕನೆ ಸರಿದಿತ್ತು. ಚಿತ್ರಗಳು ಸಾಲು ಸಾಲಾಗಿ ನುಗ್ಗಿ ಬಂದವು. ಹೈಸ್ಕೂಲ್ ಮೇಷ್ಟ್ರಾಗಿದ್ದರೂ ಯಾವುದಕ್ಕೂ ಕೊರತೆ ಇರಲಿಲ್ಲ. ಒಬ್ಬನೇ ಮಗ ಮಲ್ಲೇಶನ್ನ ತಮ್ಮ ಕೈ ಮೀರಿ ಹೆಚ್ಚಿದ್ದನ್ನೇ ಒದಗಿಸಿ ಬೆಳೆಸಿದ್ದರು. ರತ್ನಳಾದರೂ ಕರುಳ ಕುಡಿ ಜೀವಕ್ಕು ಅಧಿಕ ಎಂದು ಕಣ್ಣಿಗೊತ್ತಿಕೊಂಡು ಕಾಯುತ್ತಿದ್ದಳು. ಆದಿತ್ಯ ಬಾಯಿಬಿಟ್ಟು ಹೇಳದಿದ್ದರೂ, ತೋರಿಸಿಕೊಳ್ಳದಿದ್ದರೂ, ಕಂದನಲ್ಲೇ ತನ್ನ ಜೀವ ಮಿಡುಕುತ್ತಿದೆ ಎಂದು ಭಾವಿಸಿದ್ದ ಜೀವ. ಮಗನಿಗೆ ಇನಿತು ಪೆಟ್ಟಾದರೂ, ಆರೋಗ್ಯದಲ್ಲಿ ವ್ಯತ್ಯಾಸವಾದರೂ, ಭೂಮಿ ಆಕಾಶ ಒಂದು ಮಾಡುತ್ತಿದ್ದರು.

ಅದೇನು ವಿಚಿತ್ರವೋ ಅಂತಹ ಗಳಿಗೆಯಲ್ಲಿ ಗಂಡಾಗುತ್ತಿದ್ದಳು ರತ್ನ. ಅಧೈರ್ಯದಿಂದ ತತ್ತರಿಸುವ ಗಂಡನನ್ನು, ಮಗುವನ್ನು ಒಬ್ಬಳೇ ಸಂಭಾಳಿಸುತ್ತಿದ್ದ ಗಟ್ಟಿಗಿತ್ತಿ. ಹೈಸ್ಕೂಲ್ ವಿದ್ಯಾಭ್ಯಾಸ ತಮ್ಮ ಜೊತೆಯಲ್ಲಿ ಇದ್ದುಕೊಂಡು ಅಮ್ಮನ ಸೆರಗಲ್ಲೇ ಅವಿತುಕೊಂಡು ಮುಗಿಸಿದ್ದ ಮಲ್ಲೇಶ. ಆದರೆ ಪಿಯುಸಿಗೆ ಹಾಸ್ಟೆಲ್ ಸೇರಲೇಬೇಕಿತ್ತು. ಮೊದಮೊದಲು ರಂಪ ಮಾಡಿದ ರತ್ನಾ ಮಗನ ಶ್ರೇಯಸ್ಸನ್ನ ನೆನೆನೆನೆದು ಗಟ್ಟಿಗೊಂಡಳು. ರಜೆಗೆ ಬಂದಾಗೊಮ್ಮೆ ಅಮ್ಮನ ಬೆಚ್ಚಗಿನ ಮಡಿಲಲ್ಲಿ ಮುಖ ಹುದುಗಿಸಿ ಕರಗಿ ಹೋಗುತ್ತಿದ್ದ ಮಲ್ಲೇಶ. ಆದರದು ಒಮ್ಮೆಲೆ ಕೊನೆಗೊಂಡಿತ್ತು.

'ಹೇಗೆ....? ಹೇಗೆ...? ಹೇಗೆ...?' ಯೋಚಿಸಿದರು. ಯಾವುದೋ ಒಂದು ಹೆಸರು,

ಯಾರೋ ಒಬ್ಬ ಮನುಷ್ಯ–ಮಗನನ್ನು ನಮ್ಮಿಂದ ದೂರಕ್ಕೊಯ್ದಿದ್ದ. ಯಾರವನು? ಯೋಚಿಸಿದರು, ಏನವನ ಹೆಸರು? ಮಗನನ್ನು ನಾವು ಕಳಕೊಂಡದ್ದು ಎಲ್ಲಿ? ಯಾರು ಕದ್ದೊಯ್ದರು? ಯಾರು"? ಯೋಚಿಸುತ್ತಲೇ ಎಲ್ಲಿಂದಲೋ ಹರಿದು ಬರುತ್ತಿದ್ದ ಹಾಡಿನತ್ತ ಹೋಯಿತು ಗಮನ. 'ಸಾಗರ ಹುಣ್ಣಿಮೆ ಕಂಡು ಉಕ್ಕುವ ರೀತಿ..' ಹಾಂ... ಪಕ್ಕನೆ ನೆನಪಾಯಿತು.

ಹೌದು, ಸಾಗರ್..... ಸಾಗರ್ ಸರ್ಜೂಕರ್! ಮಲ್ಲೇಶನ ಮೇಷ್ಟ್ರು. ಪ್ರೊ. ಸಾಗರ್ ಸರ್ಜೂಕರ್ ಅದೇನೋ ಮಲ್ಲೇಶನ ಸರಳ ಸ್ವಭಾವ, ಒಳ್ಳೆಯತನ, ಜಾಣ್ಮೆ ಆ ಮನುಷ್ಯನನ್ನು ಗಾಢವಾಗಿ ತಟ್ಟಿ ಅವನನ್ನು ತುಂಬಾ ಹಚ್ಚಿಕೊಂಡುಬಿಟ್ಟಿದ್ದರು. ಮಲ್ಲೇಶನಿಗೂ ಅವರೆಂದರೆ ಎಲ್ಲಿಲ್ಲದ ಭಯಭಕ್ತಿ. ಹೆಚ್ಚಿನ ಪಾಠ ಹೇಳುವ ನೆಪದಲ್ಲಿ ಮಲ್ಲೇಶನ ಊಟ ತಿಂಡಿ ನಿದ್ರೆ ಎಲ್ಲಾ ಅಲ್ಲೇ ಆಗಿಹೋಗುತ್ತಿತ್ತು. ಗುರುಶಿಷ್ಯರ ಈ ಸಂಬಂಧವನ್ನು ಅಪ್ಪಿತಪ್ಪಿಯೂ ಸಂಶಯಿಸಿದವರಲ್ಲ ತಾವು ಗಂಡಹೆಂಡತಿ.

ಆದರೆ ಪೀಕಲಾಟಕ್ಕಿಟ್ಟುಕೊಂಡಿದ್ದು ಆನಂತರ. ತಾವು ನಿವೃತ್ತಿ ಹೊಂದಿ ಮುಂಬೈಗೆ ಹಿಂದಿರುಗಿ ಹೋಗುವಾಗ ಸಾಗರ್ ಸರ್ಜೂಕರ್

'ನಿಮ್ಮ ಮಗನ ಭವಿಷ್ಯ ನನಗೆ ಬಿಡಿ. ಅವನಿಲ್ಲೇ ಇದ್ದರೆ ಅವನ ಭವಿಷ್ಯ ಖಂಡಿತ ಹಾಳಾಗುತ್ತದೆ. ಅವನಿಗೆ ಹೆಚ್ಚಿನ ವ್ಯಾಸಂಗ ಅದೂ ಅತ್ಯುನ್ನತವಾದ ವ್ಯಾಸಂಗದ ಅನುವು ಮಾಡಿಕೊಡುತ್ತೇನೆ ಅದು ನನ್ನ ಜವಾಬ್ದಾರಿ..'

ಎಂಬ ಭರವಸೆಯೊಂದಿಗೆ ಭಗೀರಥ ಪ್ರಯತ್ನ ಮಾಡಿ ರತ್ನಾಳನ್ನು ಹೂಂ ಅನ್ನಿಸಿ, ತಮ್ಮೊಂದಿಗೆ ಮಲ್ಲೇಶನನ್ನೂ ಕರೆದೊಯ್ದಿದ್ದರು. ಇವರಿಂದ ಒಂದು ನಯಾ ಪೈಸವನ್ನೂ ತೆಗೆದುಕೊಳ್ಳದೆ, ನಯವಾಗಿಯೇ ತಿರಸ್ಕರಿಸಿ, ಮಲ್ಲೇಶನ ಸಂಪೂರ್ಣ ಹೊಣೆ ಹೊತ್ತ ಸಾಗರ್ ಸರ್ಜೂಕರ್, ಅವನನ್ನು ಮರಳಿ ಊರಿಗೆ ಬರಲು ಬಿಡಲೇ ಇಲ್ಲ. ಇವರನ್ನೂ ಅಲ್ಲಿಗೆ ಕರೆಯಲಿಲ್ಲ.

ಅತ್ತಲಿಂದ ಬಂದದ್ದು ಮೂರೇ ಪತ್ರ. ಒಂದು ಮಲ್ಲೇಶನಿಗೆ ಕೆಲಸ ಸಿಕ್ಕಿದಾಗ, ಎರಡು ಅವನು ಸಾಗರ್ ಸರ್ಜೂಕರ್ ಅವರ ಮಗಳನ್ನು ಪ್ರೀತಿಸಿ ಮದುವೆಯಾದದ್ದು, ಮತ್ತೊಂದು ಅವರಿಗೊಬ್ಬ ಮಗ ಹುಟ್ಟಿದ್ದು. ದೀರ್ಘಕಾಲದ ಮಗನ ಅಗಲಿಕೆಯ ನೋವಿಗೆ, ಹೆತ್ತೊಡಲ ಸಂಕಟಕ್ಕೆ ಹನಿಯಷ್ಟೂ ಶಮನ ನೀಡದಾದವು ಅವು. ಬದಲಿಗೆ ಮಗನ ಚಿರ ಅಗಲಿಕೆಯ ಸತ್ಯವನ್ನು ಬಿತ್ತಿದ್ದವು. ಆದರೆ, ಮಗನ ನಾಮಕರಣಕ್ಕೆ ಬನ್ನಿ ಅಂತ ಮಲ್ಲೇಶನೇ ಖುದ್ದು ಫೋನ್ ಮಾಡಿ ಕರೆದಾಗ ಜೀವಶವದಂತೆ ಬದುಕುತ್ತಿದ್ದ ರತ್ನಾಳಲ್ಲಿ ಮತ್ತೆ ಜೀವ ಉಕ್ಕಿ, ಕಣ್ಣುಗಳಲ್ಲಿ ಬೆಳಕೊಂದು ಮೂಡಿ, ತುಟಿಯಲ್ಲಿ ನಗುವೊಂದು ಫಳಕ್ಕನೆ ಹೊಳೆದದ್ದು ಕಂಡಿದ್ದರು ಆದಿತ್ಯ.

'ತಾತ.... ತಾತ' ಎಂದು ಯಾರೋ ಅಲುಗಿಸಿದ್ದು, ಆದಿತ್ಯನನ್ನು ಮರಳಿ ಇಹಲೋಕಕ್ಕೆ ಎಳೆತಂತು. ಬಲವಂತದಿಂದ ಇನ್ನಷ್ಟು ಹಣ್ಣಿನ ರಸ ಕುಡಿಸಿ, ಮುಖ ಒರೆಸಿದರು. ತುಂಬಾ ನಿತ್ರಾಣನಾಗಿದ್ದಕ್ಕೋ, ಮೈತುಂಬಾ ಬಿದ್ದಿದ್ದ ಪೆಟ್ಟುಗಳ ನೋವಿಗೋ,

ಆದಿತ್ಯರಿಗೆ ಎಲ್ಲವೂ ಮಸುಕು ಮಸುಕಾಗುತ್ತಿತ್ತು. ತನ್ನ ಸುತ್ತಲೂ ಗಂಡಸರು, ಹೆಂಗಸರು ನಿಂತಿರುವುದು.. ತನ್ನನ್ನೇ ಗಮನಿಸುತ್ತಿರುವುದು ಅವನಿಗೆ ಬೇರೇನನ್ನೋ ನೆನಪಿಸಿದವು..

ಹೀಗೆ ಗುಂಪಾಗಿ ಅಲ್ಲಲ್ಲಿ ಜನ ನಿಂತು ನಕ್ಕು ಸಂಭ್ರಮಿಸುತ್ತಿದ್ದರಲ್ಲ. ಎಲ್ಲಿ? ಹೌದು ಎಲ್ಲಿ? ಮತ್ತೆ ಬಿಗಿಯಾಗಿ ಕಣ್ಮುಚ್ಚಿದರು. ಆ ಗುಂಪನ್ನು ಎಲ್ಲವನ್ನೂ ಮರೆತು ತನ್ನೊಳಗೇ ಲೀನವಾದರು. ಸ್ಪಷ್ಟವಾಗಿ ಯೋಚಿಸಿದರು. ಹೌದು ಅಂದು ಅಲ್ಲಿ ನಡೆದದ್ದೇನು? ಗುಂಪು ಯಾಕಿತ್ತು? ಹಾಂ., ಹೊಳೆಯಿತು ನಾಮಕರಣ... ಮೊಮ್ಮಗನ ನಾಮಕರಣ!

ಅಷ್ಟು ಉದ್ದದ ಪ್ರಯಾಣದ ಅಯಾಸ, ದಣಿವು ಮಗನ ಮುಖ ನೋಡಿದೊಡನೆ ಓಡಿಹೋಗಿತ್ತು. ಅವನು ಮಾತ್ರ ಹಿಂದಿನಂತೆ ಅಮ್ಮನ ಮಡಿಲಿಗೆ ಹಾತೊರೆಯಲಿಲ್ಲ. ಅಪ್ಪನ ಭುಜಕ್ಕೂ ಒರಗಲಿಲ್ಲ. ಔಪಚಾರಿಕ ಮಾತು ನಾಲ್ಕೇ ನಾಲ್ಕು. ಮುಖದಲ್ಲಾದರೂ ಈವರೆಗಿನ ಅಗಲಿಕೆಯ ಬೇಸರ, ಬೇಗುದಿಯಾಗಲೀ; ಎಷ್ಟೋ ಕಾಲದ ನಂತರ ಭೇಟಿಯಾಗುತ್ತಿರುವ ಸಂಭ್ರಮ. ಸಡಗರವಾಗಲಿ ಊಹೂಂ.....

ಸೊಸೆ ಕಾಲು ಮುಟ್ಟಿದ ಶಾಸ್ತ್ರ ಮಾಡಿದ್ದಳು. ಪಾಪು ಅಳ್ತಾನೆ ಎಂದು ಕೈಗೂ ಕೊಡಲಿಲ್ಲ. ಹೌದು, ಬಲವಂತದಿಂದ ಪಾಪೂನ ಎತ್ತಿಕೊಳ್ಳಲು ಹೋದ ರತ್ನಾಳನ್ನು ಗಂಡ-ಹೆಂಡತಿ ಇಬ್ಬರೂ ತಡೆದು 'ಪ್ಲೀಸ್ ಬಿಡಿ ಮ.... ಅಳಸ್ಬೇಡಿ' ಎಂದಿದ್ದರು. ಎತ್ತಿ ಆಡಿಸಲು ಹೋದ ಕೈಗಳು ಹಾಗೆಯೇ ಕುಸಿದು ಬಿದ್ದಿದ್ದವು ಕೆಳಕ್ಕೆ. ಮರುದಿನ ನಾಮಕರಣದ ಕಾರ್ಯಕ್ರಮದಲ್ಲಿಯೂ ಯಾರಿಗೂ ಅಪ್ಪ-ಅಮ್ಮ ಎಂದು ತಮ್ಮನ್ನು ಪರಿಚಯಿಸಲೇ ಇಲ್ಲ. ಒಡಲನ್ನು ಬಗೆದು ಹಾಕಿದಂತಹ, ಹೃದಯ ಘಾಸಿಗೊಂಡ ಮಾಸದ ಹಸಿ ಅನುಭವ!

ರತ್ನ ಚೂರು ಚೂರಾಗಿದ್ದಳು ಅಷ್ಟು ಮಾತ್ರ ಖಚಿತ. ಅವಳಿಗೆ ಸ್ಥಳ ಬದಲಾವಣೆಯಾದರೆ ಸುಧಾರಿಸಬಹುದೆಂದು ಭಾವಿಸಿ ಕೆಲಸಕ್ಕೆ ರಾಜಿನಾಮೆ ಇತ್ತು ರತ್ನಾಳೊಡನೆ ಹಳ್ಳಿಯ ತೋಟ ಸೇರಿದ್ದರು. ಮಗುವಿನಂತೆ ಆರೈಕೆ ಮಾಡಿದ್ದರು. ಮಗನ ಕಮ್ಮಿ ಅವಳಿಗೆ ತಾಗದಿರಲೆಂದು ಸದಾ ಹತ್ತಿರವೇ ಇದ್ದು ಓಲೈಸಿದ್ದರು, ಉಣ್ಣಿಸಿದ್ದರು. ತಮ್ಮ ಮಡಿಲಲ್ಲೇ ಆಕೆಯನ್ನು ಮಲಗಿಸಿಕೊಳ್ಳುತ್ತಿದ್ದರು. ಅವಳದೊಂದು ನಗುವಿಗಾಗಿ ಕಾತರಿಸಿ ಕಾಯುತ್ತಿದರು. ಪ್ರೀತಿಯಿಂದ ಹಣೆ ನೇವರಿಸಿ ಹೇಳುತ್ತಿದ್ದರು

'ರತ್ನ, ನಮ್ಮೊಂದಿಗಿಲ್ಲದ ಅವನನ್ನು ನೀನು ಇಲ್ಲಿ ಹುಡುಕುತ್ತಾ ಆ ಹುಡುಕಾಟದಲ್ಲಿ ಕಳೆದುಹೋಗುತ್ತಾ ಒಂಟಿಯಾಗುತ್ತಿದ್ದಿ.. ನಿನ್ನ ಜೊತೆಗೆ ಇರುವ, ನಿನಗಾಗಿಯೇ ಬದುಕುತ್ತಿರುವ ನನ್ನನ್ನೂ ಒಂಟಿ ಮಾಡುತ್ತಿದ್ದಿ.. ನೋಡು, ಇನ್ನು ಜೀವನಪೂರ್ತಿ ನಾವಿಬ್ಬರೇ ನಮಗೆ, ನಮ್ಮ ಬದುಕನ್ನ ಬದುಕೋಣ ನಾವು. ಇನ್ನು ಮೇಲೆ ಯಾರ ಹಂಗೂ ಬೇಡ. ಬಿಟ್ಟಾಕು ಅವನನ್ನು....'

ಇಲ್ಲ, ಏನೂ ಅರ್ಥವಾಗದ ಅಥವಾ ಅರ್ಥ ಮಾಡಿಕೊಳ್ಳದ ಸ್ಥಿತಿ ತಲುಪಿದ್ದಾಳೆ. ಎಲ್ಲಾ ಭಾವನೆಗಳು ತೀರಿದ್ದವು. ಅಂತೆಯೇ ಅವಳೂ ಕೂಡ ಒಂದು ಮುಂಜಾನೆ.....!

ರತ್ನ ಹೇಗೆ ತನ್ನ ಹಾದಿ ತಾನು ಆಯ್ದುಕೊಂಡು, ನನಗಾಗಿ ರವಷ್ಟೂ ಮರುಗದೆ, ತನ್ನ ಪಾಡಿಗೆ ತಾನು ಹೊರಟು ಹೋಗಿದ್ದಳು ಹಾಗೆಯೇ ತಾವೂ ತೋಟಕ್ಕೆ

ಅಂಟಿಕೊಂಡುಬಿಟ್ಟರು. ಇನ್ನೆಂದೂ ಒಂಟಿ ಎಂದು ಕೊರಗಬಾರದೆಂದು ತೀರ್ಮಾನಿಸಿದ್ದರು. ಎಲ್ಲಾ ಕಾರ್ಯಕ್ರಮಗಳು ಮುಗಿದ ಮೇಲೆ ಎರಡೇ ಸಾಲು ಮುಂಬೈಗೆ ಬರೆದಿದ್ದರು.

'ರತ್ನ ಇನ್ನಿಲ್ಲ. ಇಂತಿ, ನಮಸ್ಕಾರಗಳು'.

ಅವರು ಹೊರಟು ಬರುತ್ತೇವೆ ಎಂದಾಗ 'ಇಲ್ಲಿ ಏನೂ ಕೆಲಸವಿಲ್ಲ, ಬರುವ ಅಗತ್ಯವಿಲ್ಲ..' ಅಂದು ತಮ್ಮನ್ನೇ ತೋಟಕ್ಕೆ ಅರ್ಪಿಸಿಕೊಂಡರು. ಅದರಲ್ಲಿಯೇ ಜೀವನವಿಟ್ಟು ಅದನ್ನು ಸಾಕಾರಗೊಳಿಸಿ ತೂಗಿಸಿಕೊಳ್ಳುವ ಶಕ್ತಿ ಇತ್ತು. ಅವರಿಗೂ ತೋಟಕ್ಕೂ ಅವಿನಾಭಾವ ಸಂಬಂಧ ಬೆಳೆದು ಅಲ್ಲಿ ತೆಗೆದ ಬೆಳೆಗಳು ಉಸಿರಾಗಿ ಜೀವನ ಪಥ ತೋರಿಸಿದ್ದವು. ಅವರು ನಿರಾಳವಾಗಿ ನಿಸೂರವಾಗಿದ್ದ ಕಾಲ ಅದು. ತಮಗೆಷ್ಟು ಬೇಕೊ ಅಷ್ಟನ್ನೇ ಇಟ್ಟುಕೊಂಡು ಉಳಿದಿದ್ದನ್ನು ಹಂಚುತ್ತಿದ್ದರು ಇಲ್ಲದವರಿಗೆ.

ಮತ್ತೆ ಮರೆವೆ.. ಕೆಲ ಕಾಲ ಸ್ತಬ್ಧ.. ಹಿಂದೆಯೇ ಏನೋ ಕಳೆದುಕೊಂಡ ಚಡಪಡಿಕೆ, ತಳಮಳ..

ಮತ್ತೆ ಕನವರಿಕೆ., ಏನದು? ಏನೋ ಕಳೆದುಕೊಂಡೆ? ಹೇಗೆ? ಯಾರು ಕಸಿದಿದ್ದು? ಎಲ್ಲಿ? ಯಾವಾಗ? ನನ್ನ ಪಾಡಿಗೆ ನಾನಿದ್ದೆನಲ್ಲಾ.... ಇಲ್ಲಿಗೇಕೆ ಬಂದೆ? ಇವರಾರು? ಯಾರೋ ಬಂದರಲ್ಲಾ ದೋಚಲು? ಅವರನ್ನು ಒಳಬಿಟ್ಟವರು ಯಾರು?

ಬರಿಯ ಪ್ರಶ್ನೆಗಳು, ಉತ್ತರಗಳಿಲ್ಲ! ಜೋರಾಗಿ ಅಳಬೇಕೆನಿಸುತ್ತಿತ್ತು. ಕಣ್ಣಲ್ಲಿ ನೀರೇ ಇಲ್ಲ. ಹೌದೂ ತಮಗೇನೊ ಬೇಕೆನಿಸುತ್ತಿದೆ. ಏನದು?

'ಸರ್ ಸಾರ್' ರಮಾ ಮಾತನಾಡಿಸುತ್ತಿದ್ದಳು. ಪಕ್ಕನೆ ಕಣ್ತೆರೆದರು.

'ತುಂಬಾ ಬಡಬಡಾಯಿಸ್ತಿದೀರಿ... ಇವತ್ತಾದ್ರೂ ಒಂಚೂರು ಊಟ ಮಾಡಿ.'

ಊಟ ಎಂದೊಡನೆ ಅಬ್ಬಳಿಕೆ ಬಂದು ತಲೆ ಕೊಡವಿ ಬಿಟ್ಟರು. ರಮಾ ಮತ್ತೆ ಬಲವಂತಪಡಿಸಲಿಲ್ಲ. ಇವರ ಮಂಚದ ಎದುರಿಗೇ ದೊಡ್ಡ ಕಿಟಕಿ ತೆರೆದಿತ್ತು. ಕಣ್ಣುಗಳು ಅತ್ತ ಚಲಿಸಿ, ದೃಷ್ಟಿಸಲು ಪ್ರಯತ್ನಿಸಿದಾಗ ಹೊರಗಿನ ಬೆಳಕು ರಪ್ಪನೆ ಹೊಡೆಯಿತು. ಅದರ ಹೊಡೆತ ಮತ್ತೆ ವಾಸ್ತವಕ್ಕೆ, ಹೆಣ್ಣು ಗಂಡುಗಳ ಲೋಕಕ್ಕೆ ಅವರನ್ನು ಎಳೆದು ತಂದಿತು.

ನಿಶ್ಚಿಂತ ಎಂದು ಬೀಗುತ್ತಿದ್ದುದೇ ಅಪರಾಧವೋ ಏನೋ ಇದ್ದಕ್ಕಿದ್ದಂತೆ ಮಲ್ಲೇಶ, ರೇಖ ತೋಟಕ್ಕೆ ಬಂದುಬಿಟ್ಟಿದ್ದರು ಒಂದು ದಿನ! ಜೀವನದಲ್ಲಿ ಸಂತೃಪ್ತಿ ಕಂಡಿದ್ದ ತಮಗೂ ಆ ಕ್ಷಣ ನಿಜಕ್ಕೂ ಏನೂ ಅನ್ನಿಸಿರಲಿಲ್ಲ. ಅವರಿಂದ ಯಾವ ನಿರೀಕ್ಷೆಯೂ ಇರಲಿಲ್ಲ. ಕಾರಣ ಸಿಟ್ಟೂ ಬರಲಿಲ್ಲ. ಆದರೆ ಅವರೊಂದಿಗೆ ಮಾತನಾಡುವ ಮನಸ್ಸಿರಲಿಲ್ಲ. ವಿಷಯವಂತೂ ಮೊದಲೇ ಇರಲಿಲ್ಲ. ಬಂದವರು ಹಾಗೆಯೇ ಹಿಂದಿರುಗಿದರು.

ಆದರೆ ಬಿಡಲಿಲ್ಲ ಅವರು. ಮತ್ತೆ ಮತ್ತೆ ಬರತೊಡಗಿದಾಗ. ನನ್ನ ಸುತ್ತಲಿನವರೂ ನಾನೇ ತಪ್ಪು ಮಾಡುತ್ತಿದ್ದೇನೆ ಎಂದು ಭಾವಿಸುವಂತಾಯಿತು. ಅವರಾದರೂ ಏನೂ ಆಗಿಲ್ಲವೆಂಬಂತೆ ಸಹಜವಾಗಿಯೇ ವರ್ತಿಸುತ್ತಿದ್ದರು. ಪ್ರಾರಂಭದಲ್ಲಿ ಮಲ್ಲೇಶನಲ್ಲಿ ಅಳುಕು ಕಂಡಿತು. ಆದರೆ ಬರುಬರುತ್ತಾ ಸರಿಹೋದಂತಿತ್ತು. ತೋಟವೆಲ್ಲಾ ಅಡ್ಡಾಡಿ ಆನಂದ ಪಡುತ್ತಿದ್ದರು. ಸೊಸೆಯಂತು ತೋಟದ ಬಗ್ಗೆ ಇನ್ನಿಲ್ಲದ ಆಸಕ್ತಿ, ಅಕ್ಕರೆ ವ್ಯಕ್ತಪಡಿಸುತ್ತಿದ್ದು

ತಾವು ತಡೆಯದಾದರು. ಕರಗಿ ಹೋದರು. ತೋಟ ತಮ್ಮ ದೌರ್ಬಲ್ಯ. ಅದನ್ನ ಯಾರಾದರು ಪ್ರಶಂಸಿದರೆ, ಅದರ ಕುರಿತು ಕಿಂಚಿತ್ತು ಆಸಕ್ತಿ ಆಸ್ಥೆ ತೋರಿದರೂ ತಾವು ಮೈಮರೆತು ಹೋಗುತ್ತಿದ್ದರು. ಅವರಿಬ್ಬರಿಗೆ ತಮ್ಮೊಡನೆ ಉಳಿದುಕೊಳ್ಳಲು ತುಸು ಕಷ್ಟವೇ ಆಗುತ್ತಿತ್ತು. ಒಲೆಯಲ್ಲಿ ತಮ್ಮ ಅಡುಗೆ, ಒಂದೇ ಒಂದು ಹಾಸಿಗೆ, ತಮಗೊಬ್ಬರಿಗೆ ಎಷ್ಟು ಬೇಕೋ, ಏನನು ಬೇಕೋ ಅಷ್ಟೇ ಇತ್ತು. ಅದಕ್ಕಿಂತ ಒಂದನಿಯೂ ಹೆಚ್ಚಿರಲಿಲ್ಲ.

ಅವರೊಡನೆ ಅವರ ಸ್ನೇಹಿತರೂ ಬರತೊಡಗಿದಾಗ ಜೊತೆಯಲ್ಲಿಯೆ ಮನೆಗೆ ಬೇಕಾದ ಸಾಮಾನುಗಳು ಅವರೊಡನೆ ಇಲ್ಲಿಗೆ ಬರತೊಡಗಿದವು. ಕುರ್ಚಿ, ಮಂಚ, ಪಾತ್ರೆಗಳು, ಪಂಕ ಹೀಗೆ ಪಟ್ಟಿ ಬೆಳೆಯುತ್ತಾ ಹೋಯಿತು. ಬರುವ ಜನ ಮತ್ತು ಸಾಮಾನು ಹೆಚ್ಚಿದಂತೆಲ್ಲಾ ಮನೆ ಚಿಕ್ಕದಾಗತೊಡಗಿತು. ಮಲ್ಲೇಶನ ಹತ್ತಿರದ ಗೆಳೆಯ ಎಂದುಕೊಂಡು ಸುನೀಲ್ ಎಂಬುವನು ಒಬ್ಬ ಬಂದ. ಇವರ ಕೆಲಸವನ್ನ, ತೋಟವನ್ನ ಹಾಡಿ ಹೊಗಳಿದ. ಇವರಿಗೆ ಹತ್ತಿರದವನಾಗಿಬಿಟ್ಟ. ಮಲ್ಲೇಶನಿಗಿಂತಲೂ ಒಂದು ಕೈ ಮಿಗಿಲು ಎಂಬಂತೆ. ಪ್ರತಿಯೊಂದು ಕೆಲಸದಲ್ಲೂ ಇವರಿಗೆ ಸಾತ್ ನೀಡುತ್ತಿದ್ದ. ಹಾಗಿರುತ್ತ ಅವನೊಂದು ಸಲಹೆ ಇತ್ತ. ಈ ಮನೆಯನ್ನು ವಿಸ್ತರಿಸಬಾರದೇಕೆ ಎಂದು. ಎಲ್ಲರಿಗೂ ಹೌದೆನಿಸಿತ್ತು.

ಅವನೇ ಮನೆಯ ಪ್ಲಾನಿಂಗ್ ಜವಾಬ್ದಾರಿ ಹೊತ್ತಾಗ ಮಲ್ಲೇಶ ಹಣ ತಾನು ಕೊಡುವುದಾಗಿ ಹೇಳಿದ್ದ. ಆದರೆ ತಾವು ಸುತರಾಂ ಒಪ್ಪಿರಲಿಲ್ಲ. ಮನೆ ಕಟ್ಟಿಸುವಷ್ಟು ಹಣ ತಮ್ಮ ಬಳಿ ಇರದಿದ್ದರೂ ಅವನ ಬಳಿ ಹಣ ತೆಗೆದುಕೊಳ್ಳುವುದು ಅವರಿಗೆ ಸುತರಾಂ ಇಷ್ಟವಿರಲಿಲ್ಲ. ಆಗಲೂ ಸುನೀಲನೇ ಮತ್ತೊಂದು ಉಪಾಯ ಸೂಚಿಸಿದ್ದ. ತೋಟದ ಮೇಲೆ ಸಾಲ ತೆಗೆಯುವ ವಿಷಯ. ಬ್ಯಾಂಕಿನಲ್ಲಿ ಗೆಳೆಯರಿರುವುದರಿಂದ ಅದು ಸುಲಭವೂ ಎಂದಿದ್ದ. ನಡು ನಡುವೆ ತಮ್ಮ ಸಲಹೆಯನ್ನೂ ಕೇಳುತ್ತ ಮನೆಯ ಪ್ಲಾನೊಂದನ್ನು ತಾವೇ ತಯಾರಿಸಿಬಿಟ್ಟಿದ್ದರು ಸುನೀಲ, ರೇಖಾ ಮತ್ತು ಮಲ್ಲೇಶ್. ಇಷ್ಟಾದ ಮೇಲೆ ಸಾಲಕ್ಕೆ ತೋಟದ ಡಾಕ್ಯುಮೆಂಟ್ಸ್ ಬ್ಯಾಂಕಿಗೆ ಕೊಡಬೇಕು ಎಂದು ಆದಿತ್ಯರನ್ನು ಕರೆದುಕೊಂಡು ಮರುದಿನವೆ ಬೆಂಗಳೂರಿಗೆ ಪಯಣಿಸಿದ್ದರು ಎಲ್ಲರೂ.

ಎರಡು ದಿನ ಬೆಂಗಳೂರು ಸುತ್ತಾಡಿಸಿ ಮರುದಿನವೇ ಸುನೀಲ್ ಬ್ಯಾಂಕಿಗೆಂದು ಡಾಕ್ಯುಮೆಂಟ್ಸ್ ಒಯ್ದಿದ್ದ. ಮಲ್ಲೇಶ್ ಮತ್ತು ರೇಖಾ ಪಾಸ್‌ಪೋರ್ಟ್‌ನ ಎರಡು ದಿನದ ಕೆಲಸವೆಂದು ಮುಂಬೈಗೆ ತೆರಳಿದರು. ಎರಡು ದಿನಕ್ಕಾಗುವಷ್ಟು ಅಡುಗೆ ಇದೆ ಎಂದಿದ್ದಳು ರೇಖಾ. ಜೊತೆಯಲ್ಲಿದ್ದ ಮೊಮ್ಮಗ ತಮ್ಮನ್ನು ಕ್ಯಾರೇ ಎಂದಿರಲಿಲ್ಲ. ಕೋಣೆಯೊಳಗೇ ಇರುತ್ತಿದ್ದನವ ಹೊರಗೆಲ್ಲೂ ತಲೆ ಹಾಕಲಿಲ್ಲ. ಮಾತನಾಡಿಸುವ ಪ್ರಯತ್ನ ಇವರೂ ಮಾಡಲಿಲ್ಲ ಅವನ ರೀತಿನೀತಿ ನೋಡಿ.

ಒಂದೆರಡು ದಿನಗಳಲ್ಲೇ ಯಾಕೋ ಪಿಚ್ಚೆನಿಸಿತ್ತು ಆದಿತ್ಯರಿಗೆ. ತಾವು ಬರಬಾರದಿತ್ತು ಅನಿಸತೊಡಗಿತ್ತು. ಏನೋ ಮಾಡಲು ಹೋಗಿ ಏನೋ ಆಯಿತೇನೋ ಎಂದು ಮೊದಲ ಬಾರಿ ದಿಗಿಲಾಗಿತ್ತು. ಮೊಮ್ಮಗನಿಗೆ ತಿಳಿಸಿ ಊರಿಗೆ ಹೋಗಿ ಬಿಡೋಣ ಎಂದು ಬಾಗಿಲು ಬಡಿದರೆ ಸಪ್ಪಳವೇ ಇಲ್ಲ. ಅಡ್ಡಾಡಿ ಬರೋಣವೆಂದು ಹೊರ ಹೋಗಲು ಪ್ರಯತ್ನಿಸಿದರೆ ಹೊರಗಿಂದ ಲಾಕ್ ಆಗಿತ್ತು. ಜತೆಗಿದ್ದ ಮೊಮ್ಮಗ ಅದಾವ ಮಾಯದಲ್ಲೋ ಕಾಣೆಯಾಗಿದ್ದ.

ಏನೊ ಎಡವಟ್ಟಾಯಿತು ಎಂದು ಆದಿತ್ಯರಿಗೆ ತಿಳಿಯುವಷ್ಟರಲ್ಲಿ ಅವರ ಮೊಬೈಲೂ ಕಾಣೆಯಾಗಿತ್ತು. ಊಟವಿರಲಿಲ್ಲ. ಕುಡಿಯಲೂ, ಬಳಸಲೂ ಹನಿ ನೀರಿಲ್ಲ. ಬರೀ ಪರದಾಟ. ಸಮಯ, ದಿನ, ದಿನಾಂಕ ಏನೊಂದೂ ತಿಳಿಯದಾಗಿತ್ತು. ಎರಡು ದಿನ ಉರಿದ ಬಲ್ಬುಗಳು ನಂತರ ಆರಿಹೋಗಿದ್ದವು. ಗಾಡಾಂಧಕಾರ. ಇಡೀ ಮನೆ ಸ್ವಲ್ಪ ದಿನಗಳಲ್ಲಿ ಗಬ್ಬು ನಾರತೊಡಗಿತು. ಮಾಡಿದ ಹೊಲಸನ್ನು ತೊಳೆಯುವಂತಿಲ್ಲ, ಮಾಡದೆಯು ಇರುವಂತಿಲ್ಲ. ತಮಗೇ ಸಹ್ಯವಾಗದಷ್ಟು ಅಸಹ್ಯ....! ವಾಂತಿಯೂ ಆಗತೊಡಗಿತ್ತು. ಪೂರಾ ನಿತ್ರಾಣ. ಅವರಿಗೀಗ ನಿಚ್ಚಳವಾಗಿತ್ತು. ಯಾವುದೋ ಸಂಚಿಗೆ ಬಲಿಯಾಗಿದ್ದರು!

ರೋಷವುಕ್ಕಿ ಬಂದು 'ಹೇ....' ಎಂದು ಏಳಲು ಹೋದರು. ಆಗಲಿಲ್ಲ. ಕಾಲು ಮಿಸುಗಿಸಲೇ ಆಗುತ್ತಿಲ್ಲ. ಮೈಯೆಲ್ಲಾ ಜರ್ಜರಿತ ನೋವು. ಜೋರಾಗಿ ಕೂಗಿಕೊಂಡರು.

'ಬಿಡು.... ನನ್ನ ಬಿಟ್ಟುಬಿಡು ನನ್ನ ಕಾಲುಗಳನ್ನು ಕಟ್ಟಬೇಡ. ಬಿಡು ನನ್ನ'

ಕೈಯೆತ್ತಿ ಮುಗಿದರೂ ಎಲ್ಲರಿಗೂ. ಎದ್ದು ಓಡಲು ಪ್ರಯತ್ನಿಸಿದಾಗ ಅಲ್ಲಿನ ಸಿಬ್ಬಂದಿ, ರಮಾ, ಮಮತಾ ಎಲ್ಲರೂ ಓಡಿ ಬಂದರು. ಅವರನ್ನು ಹಿಡಿದು, ಮಲಗಿಸಿ, ಸಮಾಧಾನ ಪಡಿಸುವ ಹೊತ್ತಿಗೆ ಸಾಕು ಸಾಕಾಯ್ತು. ಅವರ ಆವೇಗ, ಉದ್ವೇಗವೆಲ್ಲಾ ಒಂದು ತಹಬದಿಗೆ ಬಂದಾಗ ರಮಾ ಮೆಲ್ಲನೆ ಹೇಳಿದಳು.

'ಸರ್, ನಿಮ್ಮ ಕಾಲು ಮುರಿದಿದೆ. ನೀವು ಸಧ್ಯ ಎದ್ದು ಓಡಾಡುವುದು ಕಷ್ಟ. ಎಲ್ಲಿ ಬಿದ್ದಿರಿ? ಏನಾಯ್ತು? ನಿಮ್ಮ ಮೈಯೆಲ್ಲಾ ಪೆಟ್ಟಾಗಿದೆ? ಯಾರೋ ನಿಮ್ಮ ಮೇಲ ಬಲವಾಗಿಯೇ ಹಲ್ಲೆ ನಡೆಸಿದ್ದಾರೆ..'

ಆದಿತ್ಯರಿಗೆ ಏನೂ ಆ ಕ್ಷಣಕ್ಕೆ ನೆನಪಾಗಲೊಲ್ಲದು. ಹೌದು ಏನೋ ಆಯ್ತು ಆ ದಿನ. ಅವರು ನೆನಪಿನಾಳಕ್ಕೆ ಇಳಿಯುವ ಹೊತ್ತಿಗೆ ಸರಿಯಾಗಿ ಅವರಿಗೆ ನಿದ್ದೆ ಬರಿಸಲು ಇಂಜೆಕ್ಷನ್ ಕೊಟ್ಟರು. ನೆನಪುಗಳ ಸಿಕ್ಕುಗಳನ್ನು ಬಿಡಿಸುತ್ತ ಬಿಡಿಸುತ್ತ ಹಾಗೆಯೇ ನಿದ್ದೆ ಹೋಗಿದ್ದರು ಆದಿತ್ಯ.

ಮುಸ್ಸಂಜೆ ಹೊತ್ತಿಗೆ ಸಂಜೆ ರೌಂಡ್ಸ್‌ಗೆ ರಮಾ ಬಂದಾಗಲೂ ಮಲಗಿಯೇ ಇದ್ದರು. ಕರಂಟಿರಲಿಲ್ಲ. ಕತ್ತಲು ಆಗ ತಾನೇ ಆವರಿಸಿಕೊಳ್ಳುತ್ತಿತ್ತು. ನೋಡೋಣವೆಂದು ಆದಿತ್ಯರನ್ನು ಮೆಲ್ಲಗೆ ಅಲುಗಿಸಿದಳು. ಮೂರ್ನಾಲ್ಕು ಬಾರಿಯ ನಂತರ ಮೆಲ್ಲನೆ ಕಣ್ತೆರೆದರು.

ಏನೂ ಕಾಣಲೊಲ್ಲದು ಕತ್ತಲು. ಹೌದು ಬರೀ ಕತ್ತಲು. ಮಿಸುಕಾಡಲು ದೇಹದಲ್ಲಿ ತ್ರಾಣವಿರಲಿಲ್ಲ. ವಾಸನೆ, ನೋವು, ದುಃಖ ಏನೂ ತಿಳಿಯದಂತಹ ಸ್ಥಿತಿ ತಲುಪಿದ್ದರು. ಇದ್ದಕ್ಕಿದ್ದಂತೆ ಯಾರೋ ಎತ್ತಿ ಹಿಡಿದಂತಾಗಿತ್ತು. ಕತ್ತಲಲ್ಲಿ ಏನೂ ಗೊತ್ತಾಗುತ್ತಿರಲಿಲ್ಲ. ಎತ್ತಿ ಎತ್ತಿ ಮತ್ತೆ ಕೆಳಕ್ಕೆ ನೂಕುತ್ತಿದ್ದರು. ಯಾವುದರಿಂದಲೋ ತಿಳಿಯದು. ಆದರೆ ಮೈಮೇಲೆ ಬೀಳುತ್ತಿತ್ತು ಪೆಟ್ಟು, ಕಾಲುಗಳನ್ನು ಹಿಡಿದು ಎಳೆದೊಯ್ಯುತ್ತಿದ್ದರು. ಎಲ್ಲಿಗೆಂದು ತಿಳಿಯದು. ಆದರೆ ಒಮ್ಮೆಲೇ ದಡದಡನೆ ಉರುಳುರುಳಿ ಬೀಳುತ್ತಿದ್ದರು. ಎಷ್ಟು ಪ್ರಯತ್ನಪಟ್ಟರೂ ಎದ್ದು ಓಡಬೇಕೆಂದು ಆಗಲೇ ಇಲ್ಲ. ಮತ್ತೆ ಮತ್ತೆ ಬೀಳುತ್ತಿದ್ದರು. ಮತ್ತೆ ಏಳಲೇ ಆಗದಾದಾಗ, ಸತ್ತು ಹೋದೆ ಅನ್ನಿಸುತ್ತಿದ್ದಾಗ ತಕ್ಷಣ ಕೈಯೊಂದು ತಡವಿತ್ತು..

ಹೌದು, ರತ್ನಳದ್ದು! ಅಳುತ್ತಿದ್ದಳು ಅವಳು. ಮಾತೂ ಆಡುತ್ತಿದ್ದಳು. 'ನನಗೆ ಸಾರಿ

ಸಾರಿ ಹೇಳಿದವ. ನೀನು ಹೇಗೆ ಈ ಮೋಹದ ಉರುಳಲ್ಲಿ ಸಿಕ್ಕಿಬಿದ್ದೆ ಆದಿತ್ಯ?' ರೋದಿಸುತ್ತಿದ್ದಳು ರತ್ನ.

'ವ್ಯಾಮೋಹವಲ್ಲ ರತ್ನ, ಪ್ರೀತಿ. ನನ್ನವರು ಎಂಬ ಕಳ್ಳಬಳ್ಳಿನ ಪ್ರೀತಿ. ಯಾರಿಗೆ ಬೇಡ ಹೇಳು? ಎದೆಯ ಹಸಿವಲ್ಲವೆ ಪ್ರೀತಿ? ಆದರೆ ಇದು ಇಷ್ಟೊಂದು ಕಲಬೆರಕೆ ಆಗಿ, ವಿಕೃತವಾಗಿದೆ ಅಂತ ಗೊತ್ತಾಗಲಿಲ್ಲ ಕಣೇ..' ಮುಂದೆ ಏನೂ ಹೇಳಲಾಗಲೇ ಇಲ್ಲ.

ರತ್ನಾಳ ಅಳು ಜೋರಾಗುತ್ತಿತ್ತು. ತಡೆಯದಾಗದಷ್ಟು, ಕರುಳ ಕಿತ್ತು ಬರುವಂತೆ

'ರತ್ನಾ ಸಾಕು ಮಾಡು..' ಎಂದು ಕೂಗಿ ಕಣ್ಣೀರಿಡುತ್ತಾ ಪೂರಾ ಎಚ್ಚರಗೊಂಡರು.

ನಿಜಕ್ಕೂ ಮಹಿಳೆಯೊಬ್ಬರು ಅವರ ಮಂಚದ ಎದುರೇ ನಿಂತು ಅಳುತ್ತಿದ್ದರು ಬಿಕ್ಕಿ ಬಿಕ್ಕಿ.

'ಇಲ್ಲ, ನಾನಿಲ್ಲಿ ಇರೊಲ್ಲ. ನನ್ನನ್ನು ಮನೆಗೆ ಕರೆದೊಯ್ಯಿ. ನಾನು ನಿನ್ನ ತಾಯಿ ಕಣೋ ಶತ್ರುವಲ್ಲ' ಅನ್ನುತ್ತಿದ್ದರು.

ಆಕೆ ಎದುರು ಓರ್ವ ಪೊಲೀಸ್ ನಿಂತಿದ್ದ. ಬಹುಶಃ ಅವನೇ ಇರಬೇಕು ಮಗ. ರಮಾ, ಮಮತಾ, ಉಳಿದ ಸಿಬ್ಬಂದಿ ಅಸಹಾಯಕರಾಗಿ ನೋಡುತ್ತಿದ್ದರು.

'ಏಯ್ ನನ್ನ ಮನೆಯಲ್ಲಿ ನಿನಗೆ ಜಾಗವಿಲ್ಲ. ಇಲ್ಲಿ ಬಿದ್ದಿರು ಮುಚ್ಕೊಂಡು. ನಾನು ಆಗಾಗ ಬಂದು ಹೋಗ್ತಿರ್ತೀನಿ.'

'ನೀನು ಎಷ್ಟು ಸಲ ಕರ್ಕಂಡು ಬಂದ್ರೂ ನಾನು ಹಿಂಗೆ ಮತ್ತೆ ಮತ್ತೆ ಓಡಿ ಬರ್ತೀನಿ. ಇಲ್ಲಂತು ಇರಲ್ಲ. ನಿನ್ನ ಮನೆ ಎಲ್ಲೈತೋ ಮನೆ ಹಾಳ! ಅದು ನನ್ನ ಮನೆ. ನನ್ನ ಗಂಡನ ಮನೆ.'

ಆಕೆ ಕೂಗಿ ಹೇಳಿ ಮುಗಿಸುವಷ್ಟರಲ್ಲಿ ಮಗ ಎತ್ತಿ ಅವರ ಕೆನ್ನೆಗೆ ಬಾರಿಸಿದ್ದ. ಆಕೆ ಉರುಳುತ್ತಾ ಹೋಗಿ ಅಷ್ಟು ದೂರಕ್ಕೆ ಬಿದ್ದರು.

ಯಾವುದೆ ನಿನ್ ಮನೆ..? ಎಲ್ಲೈತೆ ನಿನ್ ಮನೆ? ಮುಚ್ಕಂಡ್ ಬಿದ್ದಿರು..' ಅವನು ಒದರಾಡುತ್ತಿದ್ದ.

ಆದಿತ್ಯರ ಮೈಯೊಮ್ಮೆ ರೋಷಾವೇಶದಿಂದ ಕಂಪಿಸಿತು. ಇದ್ದಕ್ಕಿದ್ದಂತೆ ಅವರ ಮೈಯೊಳಗೆ ಏನೋ ಸಂಚರಿಸಿದಂತಾಗಿ ಮಂಚದ ಪಕ್ಕದಲ್ಲಿ ಮೇಜಿನ ಮೇಲಿದ್ದ ಗಾಜಿನ ಲೋಟವನ್ನೆತ್ತಿ ಅವನತ್ತ ಶಕ್ತಿ ಮೀರಿ ಬೀಸಿದರು. ಹಿಂದೆಯೆ ಪೇಪರ್‌ಗಳ ಮೇಲಿದ್ದ ಪೇಟರ್ ವೈಟನ್ನು ಎತ್ತಿ ಒಗೆದರು ಅವನತ್ತ. ಗುರಿ ತಪ್ಪಲಿಲ್ಲ. ಅವನ ಹಣೆಯೊಡೆದು ರಕ್ತ ಸುರಿಯಿತು. ಹಠಾತ್ತನೆ ಆದ ದಾಳಿಗೆ ತತ್ತರಿಸಿದ ಅವನು. ಎಲ್ಲರೂ ಬೆಚ್ಚಿಬಿದ್ದರು. ಆದಿತ್ಯರ ಆವೇಶ ಇಡೀ ಕೋಣೆ ಆವರಿಸುತ್ತಿತ್ತು. ಒಡನೆ ಎಚ್ಚೆತ್ತ ಮಗ ಅಮ್ಮನತ್ತ ಧಾವಿಸಿ 'ಬಾ ಹೋಗೋಣ. ಕೊಡು ಲಗೇಜು' ಎಂದವರನ್ನು ಎಳೆದುಕೊಂಡು, ಬ್ಯಾಗೆತ್ತಿಕೊಂಡು ಹೊರಟ. ಆದರೆ ಆಕೆ ಅವನ ಕೈ ಬಿಡಿಸಿಕೊಂಡು, ಅವನ ಕೈಯಿಂದ ಬ್ಯಾಗ್ ಕಿತ್ತುಕೊಂಡು ಓಡಿ ಬಂದವರೇ ಹೋಗಿ ರಮಾಳ ಹಿಂದೆ ನಿಂತುಕೊಂಡರು.

'ಹೋಗು ನಾ ಬರಲ್ಲ' ಅಂದುಬಿಟ್ಟರು.

ಮಂಚಕ್ಕೊರಗಿ ಅರ್ಧ ಕೂತು ಕಣ್ಮುಚ್ಚಿದ್ದರು ಆದಿತ್ಯ. ನಿನ್ನೆಯ ಆ ಘಟನೆಯ ನಂತರ ಬಹಳ ಶಾಂತವಾಗಿದ್ದರು. ಅವರ ಮುಖದಲ್ಲಿ ಗೆಲುವು, ಸಮಾಧಾನ! ಕನವರಿಕೆ ನರಳಾಟ

ಗೊಣಗಾಟ–ಉಹೂಂ.... ಎಂಥದ್ದೂ ಇಲ್ಲ. ಬೆಳಿಗ್ಗೆ ಒಂದು ಲೋಟ ಟೀ ಕುಡಿದವರು ಹೀಗೆಯೇ ಕಣ್ಮುಚ್ಚಿ ಕುಳಿತಿದ್ದರು. ಇನ್ನು ಎಷ್ಟೊತ್ತು ಹಾಗೇ ಇರುತ್ತಿದ್ದರೋ..

ಯಾರೋ ಮೆಲ್ಲನೆ ಭುಜ ಹಿಡಿದು ಅಲುಗಿಸಿದಂತಾಯ್ತು. ಪಕ್ಕನೆ ಕಣ್ತೆರದರು. ಹಾಗೇ ಕಣ್ಣು ಬಿಟ್ಟು ಕೂತರು. ನಿನ್ನೆ ಮಗನಿಂದ ಪೆಟ್ಟು ತಿಂದ ಮಹಿಳೆ! ಉಪ್ಪಿಟ್ಟಿದ್ದ ತಟ್ಟೆಯಿಡಿದು ಅವರ ಮುಂದೆ ನಿಂತಿದ್ದರು! ಮಾತು ಹೊರಡಲಿಲ್ಲ. ಸುಮ್ಮನೇ ನೋಡಿದರು. ತಮ್ಮ ಕೈಲಿದ್ದ ಉಪ್ಪಿಟ್ಟಿನ ತಟ್ಟೆಯನ್ನು ಮೆಲ್ಲನೆ ಅವರ ಕೈಯೊಳಕ್ಕೆ ಸರಿಸಿದರು. ಅವರಿಗರಿವಲ್ಲದೆ ಆದಿತ್ಯರ ಕೈಗಳು ಆ ತಟ್ಟೆಯನ್ನು ಬಿಗಿಯಾಗಿ ಹಿಡಿದುಕೊಂಡವು. ಉಹೂಂ ಅಬ್ಬಳಿಕೆ, ವಾಕರಿಕೆ ಏನೂ ಇಲ್ಲ. ಅವರಿಗೆ ಹಸಿವಾಗತೊಡಗಿತ್ತು..

✦ ✦

ಸುಯೋಧನ ಪ್ರಕಾಶನದ ಪ್ರಕಟಣೆಗಳು

ನತಾಲಿ (ಕಿರುಕಾದಂಬರಿಗಳು) ಎ. ಚಿದಾನಂದಗೌಡ
ಕನ್ನಡಿಯನ್ನು ನೋಡಲಾರೆ (ಕಥಾಸಂಕಲನ) ಸುಧಾ ಚಿದಾನಂದಗೌಡ
ನಂದಭೂಪತಿ ಜಾನಪದ (ಕಿಂಗ್ ಲಿಯರ್) ಗೋಪಾಲ ವಾಜಪೇಯಿ
ಧರ್ಮಪುರಿಯ ಶ್ವೇತವೃತ್ತ (ಬ್ರೆಕ್ಟ್ ನಾಟಕ) ಗೋಪಾಲ ವಾಜಪೇಯಿ
ಸರ್ಕಾರಿ ಲೆಕ್ಕದಲ್ಲಿ ಸತ್ತಾಕಿ (ಏಳು ನಾಟಕಗಳ ಸಂಗ್ರಹ) ಎ.ಚಿದಾನಂದಗೌಡ
ಪರಿಷ್ಕೃತೆ (ಶೇಕ್ಸ್‌ಪಿಯರ್ ಅಧ್ಯಯನ) ಸುಧಾ ಚಿದಾನಂದಗೌಡ.
ಬಯಲಧ್ಯಾನ (ಕವನ ಸಂಕಲನ) ಸುಧಾ ಚಿದಾನಂದಗೌಡ.
ರೊಟ್ಟಿಹಳ್ಳಿ ಪಂಚಾಯ್ತಿ (ಕಥಾಸಂಕಲನ) ಎ. ಚಿದಾನಂದಗೌಡ
ಗಿರಿಗಾನ (ಸಮಗ್ರ ಕಾವ್ಯ) ಉ.ಷಾ. ಬಸವಣ್ಣೆಪ್ಪ.
ಪ್ರಿಯಸಖೀ ಪಾತರಗಿತ್ತಿ (ಪ್ರಬಂಧ ಸಂಕಲನ) ಸುಧಾ ಚಿದಾನಂದಗೌಡ

ಕೊಡಗಿನ ಗೌರಮ್ಮ, ಸರಸ್ವತಿಬಾಯಿ ರಾಜವಾಡೆ, ರಾಜಲಕ್ಷ್ಮಿ ಎನ್. ರಾವ್, ತ್ರಿವೇಣಿ, ವೀಣಾ ಶಾಂತೇಶ್ವರ, ವೈದೇಹಿ, ಸಾರಾ ಅಬೂಬಕ್ಕರ್, ಭಾಗೀರಥಿ ಹೆಗಡೆ, ಬಾನು ಮುಷ್ತಾಕ್, ನೇಮಿಚಂದ್ರ, ಉಮಾ ರಾವ್, ಮಿತ್ರಾ ವೆಂಕಟ್ರಾಜ್, ಎಚ್. ನಾಗವೇಣಿ, ದು.ಸರಸ್ವತಿ, ಸುನಂದಾ ಕಡಮೆ, ಸುಮಂಗಲಾ, ವಿನಯ ಇವರೆಲ್ಲ ಕನ್ನಡ ಕಥಾಲೋಕವನ್ನು ವಿಸ್ತರಿಸಿರುವ ಗಟ್ಟಿ ಕಥೆಗಾರ್ತಿಯರು. ಈ ಸಾಲಿನಲ್ಲಿ ನಾನು ಬಿ.ಟಿ. ಜಾಹ್ನವಿಯವರನ್ನು ಅವರ 'ಕಳ್ಳು ಬಳ್ಳಿ', ದೂಪ್ದಳ್ಳಿ ಸೆಕ್ಸಿ ದುರುಗ', 'ಅವ್ವಯ್ಯನ ಹಂಡೇವು' ಮುಂತಾದ ವಿಭಿನ್ನ ಛಾಪು-ಚಹರೆಗಳುಳ್ಳ ಕಥೆಗಳ ಕಾರಣದಿಂದಾಗಿ ಮುಂಚೂಣಿಯಲ್ಲಿ ಇಡಬಯಸುವೆ. ಎಲೆಮರೆಯ ದೋರುಗಾಯಿಯಂತಿರುವ, ಬೂದಿ ಮುಚ್ಚಿದ ಕೆಂಡದಂತಿರುವ ಜಾಹ್ನವಿಯವರ ಕಥೆಗಳು ಸಾಕಷ್ಟು ಚರ್ಚೆಗೆ ಒಳಗಾಗಿಲ್ಲ ಎಂಬ ಕೊರಗು ಇದ್ದೇ ಇದೆ. ತಮ್ಮ ನಿರಾಸಕ್ತಿ, ಔದಾಸೀನ್ಯ, ಸಂಕೋಚಗಳನ್ನು ಮೀರಿದ್ದೇ ಅದರೆ ಅವರು ಇನ್ನಷ್ಟು ಸಾರ್ಥಕ ಕಥೆಗಳನ್ನು ಬರೆಯಬಲ್ಲರು. ಬರೆಯುವರೆ? ಕಾದು ನೋಡಬೇಕಿದೆ.

–ಸವಿತಾ ನಾಗಭೂಷಣ,
ಶಿವಮೊಗ್ಗ

ಇಂದು ನಾವು ಆಧುನಿಕತೆ, ಅಭಿವೃದ್ಧಿ, ವ್ಯಕ್ತಿಸ್ವಾತಂತ್ರ್ಯ ಇತ್ಯಾದಿಗಳ ಬಗ್ಗೆ ಎಷ್ಟೆಲ್ಲ ಮಾತಾಡುತ್ತಿದ್ದರೂ ಮಹಿಳೆ ಆಕೆ ಸುಶಿಕ್ಷಿತಳಾಗಿರಲಿ, ಅಶಿಕ್ಷಿತಳಾಗಿರಲಿ, ಹಳ್ಳಿಯವಳಾಗಿರಲಿ, ನಗರದವಳಾಗಿರಲಿ, ಕುಟುಂಬಸ್ತೆಯಾಗಿರಲಿ, ಏಕಾಕಿಯಾಗಿರಲಿ–ಎಲ್ಲಾ ವಯೋಮಾನಗಳಲ್ಲಿ ಎಲ್ಲಾ ಸಂದರ್ಭಗಳಲ್ಲಿ ಶೋಷಿತಳಾಗುತ್ತಿದ್ದಾಳೆ. ತನ್ನವರಿಂದ, ಪರರಿಂದ, ಸಮಾಜದಿಂದ, ಪರಿಸ್ಥಿತಿಯಿಂದ, ಇದನ್ನು ಪ್ರಾಮಾಣಿಕತೆಯಿಂದ, ಶುದ್ಧಕಾಳಜಿಯಿಂದ ಅಷ್ಟೆ ಕಲಾತ್ಮಕವಾಗಿ, ಅಭಿವ್ಯಕ್ತಿಸುವುದೇ ಜಾಹ್ನವಿಯ ವೈಶಿಷ್ಟ್ಯ. ಈಕೆ ನಿಸ್ಸಂಶಯವಾಗಿ ನಮ್ಮ ಮುಖ್ಯ ಲೇಖಕಿಯರಲ್ಲೊಬ್ಬರು.

ವೀಣಾ ಶಾಂತೇಶ್ವರ್

ಜಾಹ್ನವಿ ಕಥೆಗಳಲ್ಲಿ ತಾನು ಕಂಡದ್ದನ್ನು ಮಾತ್ರ ಜೀವಂತ ಭಾಷೆಯಲ್ಲಿ ಹೇಳುವ ಕಾತರವಿದೆ ಮಧ್ಯಮ ವರ್ಗದ ತೆಳುವಾದ ವಸ್ತುವನ್ನು ಆರಿಸಿಕೊಂಡಾಗಲೂ, ದಲಿತರ ಅನುಭವವನ್ನು ನಿರೂಪಿಸುವಾಗಲೂ ಜಾಹ್ನವಿ ದಟ್ಟವಾಗಿ, ತೀವ್ರವಾಗಿ ಬರೆಯುತ್ತಾರೆ. ಬದುಕಿನ ವಿಚಿತ್ರಗಳನ್ನು ಕಂಡು ಎದುರಿಸುವ ಜೊತೆಗೇ ಕಂಡದ್ದನ್ನು ಅದರೆಲ್ಲಾ ಸೊಗಡು ಮತ್ತು ಮುಗ್ಧತೆಯೊಂದಿಗೆ ಹೇಳುವ ಪ್ರತಿಭೆಯನ್ನು ಈ ಹೆಣ್ಣುಮಗಳಲ್ಲಿ ಕಾಣುತ್ತೇವೆ. ಸಾಹಿತಿಗೆ ಬೇಕಾದ ವಸ್ತುನಿಷ್ಠೆ ಮತ್ತು ಮಮತೆ ಇವರಲ್ಲಿ ಉದ್ದಕ್ಕೂ ಕಾಣುವ ವಿಶಿಷ್ಟ ಗುಣ.

– ಪಿ. ಲಂಕೇಶ್

ಬಿ.ಟಿ.ಜಾಹ್ನವಿ ಅವರ ಈ ಸಂಗ್ರಹದ ಕತೆಗಳನ್ನು ಬಿಡಿಬಿಡಿಯಾಗಿ ನೋಡಬಾರದು. ಇವೆಲ್ಲ ಹೆಣ್ಣಿನ ಕೊನೆಯಿರದ ನೋವಿನ, ಅಖಂಡ ಯಾತನೆಯ ಮುಲುಕುಗಳು; ಅಸಾಹಯಕಳ ನಿರಂತರ ನಿಟ್ಟುಸಿರುಗಳು. ಒಂದು ಕ್ರೂರ ವ್ಯವಸ್ಥೆಯ ಅಡಿಯಲ್ಲಿ ಸಿಕ್ಕ ಹೆಣ್ಣಿನ ಮೇಲೆ ನಡೆಯುವ ಅತ್ಯಂತ ಅಮಾನುಷ ದೌರ್ಜನ್ಯ, ತಣ್ಣಗಿನ ಕ್ರೌರ್ಯ ಇಲ್ಲಿನ ಒಂದೊಂದೂ ಕತೆಯಲ್ಲಿಯೂ ತೆರೆಯುತ್ತ ಹೋಗುತ್ತವೆ. ಬೆಚ್ಚಿಬೀಳಿಸುವ ನೋಟಗಳು, ಮುಖವಾಡ ಕಿತ್ತೆಸೆದು ಅಸಲೀ ರೂಪದಲ್ಲಿ ತೋರಿಸುವ ಮುಖಗಳು, ಮೈ ನಡುಗಿಸುವ ಕಠೋರ, ನಿಷ್ಠುರ ಸತ್ಯಗಳು. ಪುರಾಣ, ಇತಿಹಾಸಗಳನ್ನು ದಾಟಿ ಬಂದರೂ ಹೆಣ್ಣಿನ ಪಾಲಿಗೆ ಇನ್ನೂ ಭೀಕರವಾಗಿಯೇ ಇರುವ ವರ್ತಮಾನ; ಅರಮನೆ, ಕೋಟೆ, ವಾಡೆಗಳು ಕಣ್ಮರೆಯಾದರೂ, ಆಧುನಿಕ ವ್ಯವಸ್ಥೆಯಲ್ಲಿಯೇ ನಿರ್ಮಿಸಿದ ಅಗೋಚರ 'ಅರಮನೆ'ಗಳಲ್ಲಿ ಇನ್ನೂ ಬಂಧಿಯಾಗಿರುವ ಹೆಣ್ಣು ರೆಕ್ಕೆ ಪುಕ್ಕಗಳನ್ನು ಕಳೆದುಕೊಂಡವಳೇ. ಈ ವಸ್ತುಸ್ಥಿತಿಯನ್ನು ಅತ್ಯಂತ ದಿಟ್ಟತನದಿಂದ, ಸ್ಪಷ್ಟ ಬೆಳಕಿನಲ್ಲಿ ನೋಡಬಲ್ಲ ಜಾಹ್ನವಿ ಮುಖಕ್ಕೆ ರಾಚುವಂತೆ ಸತ್ಯವನ್ನು ಹೇಳಬಲ್ಲರು. ಬಣ್ಣಕಟ್ಟಿದ ಮಾತುಗಳು, ನವಿರು ನಿರೂಪಣೆ ಇತ್ಯಾದಿ ಕಥಾ ಪ್ರಪಂಚದ ಗೊತ್ತಿರುವ ಜಾಡನ್ನು ನಿರಾಕರಿಸುವ ಜಾಹ್ನವಿ, ಈಗಾಗಲೇ ಚಾಲ್ತಿಯಲ್ಲಿ ಇರುವ ಗ್ರಹಿಕೆಗಳನ್ನೂ ತಿರಸ್ಕರಿಸುತ್ತಾರೆ. 'ಮೌಲ್ಯ'ಗಳೆಂದು ಒಂದು ಸಮಾಜ ಪರಿಭಾವಿಸುವ ಪೊಳ್ಳುಗಳನ್ನು ಒಡೆಯಬಲ್ಲ, ಅದರಾಳಕ್ಕಿಳಿದು ನಿಜವೆಂಬುದು ಏನೆಂಬುದನ್ನು ಕೆದಕಬಲ್ಲ ಧೈರ್ಯವಂತೆ ಜಾಹ್ನವಿ.

– ಜಿ ಪಿ ಬಸವರಾಜು

ತನ್ನೊಳಗೊಬ್ಬ ತಂಟೆಕೋರ ಹುಡುಗನನ್ನು ಜತೆಗೆ ಒಂದು ಉಕ್ಕಿಬಂದ ನಗುವನ್ನು ಅಡಗಿಸಿಟ್ಟುಕೊಂಡಿರುವಂತೆ ಭಾಸವಾಗುವ ಬಿ.ಟಿ. ಜಾಹ್ನವಿಗೆ ಸಾಹಿತ್ಯದಂತೆ ಸಂಗೀತ/ ನಾಟಕವೂ ಭಾವಪರಿಷ್ಕಾರದ ಒಂದು ಮಾಧ್ಯಮ. ಮನುಷ್ಯನ ಅಂತಃಸತ್ವವನ್ನು ಒರೆಗೆ ಹಚ್ಚುವ ಕ್ಷಣಗಳಲ್ಲಿ ಇವರ ಕಥನ ಕುತೂಹಲವಿದೆ. ಜೀವನವೆಂಬ ದೈನಿಕ ಧಾರಾವಾಹಿಯಲ್ಲಿ ವಾಡಿಕೆಯಂತೆ ಪಾತ್ರ ನಿರ್ವಹಿಸುವ ವ್ಯಕ್ತಿಗಳ ಪಾಡನ್ನು ತೀವ್ರವಾಗಿ ಪರೀಕ್ಷೆಗೆ ಒಡ್ಡುವಂತ ಪ್ರಸಂಗಗಳನ್ನು ಅಂತಃಕರಣದ ಕಣ್ಣುಗಳಿಂದ ನೋಡಲು ಯತ್ನಿಸಿದಾಗೆಲ್ಲ ಇವರ ಕಥನ ಹಸಿಕಸುವಿನಿಂದ ಸ್ಪಂದಿಸತೊಡಗುತ್ತದೆ.

– ಜಯಂತ್ ಕಾಯ್ಕಣಿ



ಸುಯೋಧನ ಪ್ರಕಾಶನ
ಹಗರಿಬೊಮ್ಮನಹಳ್ಳಿ 583212, ಬಳ್ಳಾರಿ